ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಧನುಂಜಯ ಸಿ.

ಮಾರ್ಗದರ್ಶಕರು
ಡಾ. ಸಿ. ಎಸ್. ವಾಸುದೇವನ್
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೧೮

ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಧನುಂಜಯ ಸಿ.

ಮಾರ್ಗದರ್ಶಕರು

ಡಾ. ಸಿ. ಎಸ್. ವಾಸುದೇವನ್

ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೮

ಸಂಶೋಧಕರ ಪ್ರಮಾಣ ಪತ್ರ

"ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ" ಎಂಬ ಈ ಮಹಾಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ** ಪ್ರಾಧ್ಯಾಪಕರಾದ **ಡಾ. ಸಿ. ಎಸ್. ವಾಸುದೇವನ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ದಿನಾಂಕ : 12.09.2018.
ಸ್ಥಳ : ವಿದ್ಯಾರಣ್ಯ

(ಧನುಂಜಯ ಸಿ.)
ಪಿಹೆಚ್.ಡಿ ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಧನುಂಜಯ ಸಿ. ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ"** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ** ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

C. S. Vasudevan 12-09.2018

ದಿನಾಂಕ : 12.09.2018

ಸ್ಥಳ : ವಿದ್ಯಾರಣ್ಯ

(ಡಾ. ಸಿ. ಎಸ್. ವಾಸುದೇವನ್)
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬



ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ

೧.೧. ಅಧ್ಯಯನದ ಸಮೀಕ್ಷೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ವಿಧಾನ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ

೧ ಪ್ರಸ್ತಾವನೆ

ಭೂಮಿಯು ಉಗಮವಾದ ಮೇಲೆ ಸಸ್ಯ ಮತ್ತು ಪ್ರಾಣಿ ವರ್ಗಗಳು ಉಗಮವಾದವು. ಕಾಲಕ್ರಮೇಣ ಈ ಪ್ರಾಣಿಗಳಲ್ಲಿ ಕೆಲವು ಅಭಿವೃದ್ಧಿ ಹೊಂದಿದರೆ ಇನ್ನೂ ಕೆಲವು ವಾತಾವರಣದ ಪ್ರಭಾವದಿಂದ ನಾಶವಾದವು. ಅಭಿವೃದ್ಧಿ ಹೊಂದಿದ ಪ್ರಾಣಿಗಳಲ್ಲಿ ಮಾನವನು ಅತ್ಯಂತ ಪ್ರಮುಖನಾಗಿದ್ದು ಇವನು ಭೂಮಿಯ ಮೇಲೆ ಕಾಣಿಸಿಕೊಂಡಂದಿನಿಂದ ಇತರೆ ಪ್ರಾಣಿಗಳು ಇವನ ಬಳಕೆಗೆ ಒಳಗಾಗಿರುವುದನ್ನು ತಿಳಿಯಲಾಗಿದೆ. ಶಿಲಾಯುಗ ಹಂತಗಳಲ್ಲಿ ಪ್ರಾಣಿಗಳನ್ನು ಪಳಗಿಸಿ ತನ್ನ ಸಾಕುಪ್ರಾಣಿಗಳನ್ನಾಗಿ ಮಾನವನು ಮಾಡಿಕೊಂಡಿರುವುದರ ಜೊತೆಗೆ ಪ್ರಾಣಿಗಳ ಬೇಟೆ ಹಾಗೂ ಪಶುಪಾಲನೆಯಿಂದ ಜೀವನ ನಡೆಸುತ್ತಿದ್ದನು. ದನ. ಕುರಿ, ಮೇಕೆ ಮತ್ತು ನಾಯಿಗಳು ಶಿಲಾಯುಗ ಮಾನವರ ಪ್ರಮುಖ ಸಾಕುಪ್ರಾಣಿಗಳಾಗಿದ್ದವು. ನಂತರದ ಕಾಲಾವಧಿಯಲ್ಲಿ ಪ್ರಾಣಿಗಳ ಪಾಲನೆ ಮುಂದುವರೆದು ಕೃಷಿಯಲ್ಲಿ ಬಳಸಿರುವುದು ಸ್ಪಷ್ಟವಾಗುತ್ತದೆ. ಶಿಲಾಯುಗ ಮಾನವರು ಗವಿ, ಕಲ್ಲಾಸರೆ ಮತ್ತು ಬಂಡೆಗಳ ಮೇಲೆ ಹಲವು ಪ್ರಾಣಿಗಳ ರೇಖಾಚಿತ್ರಗಳನ್ನು ಬಿಡಿಸಿರುವುದು ಕಂಡುಬರುತ್ತದೆ.[೧] ಇದರಿಂದ ಆ ಕಾಲದ ಪಶುಪಾಲನೆ, ಬೇಟೆ ಮತ್ತು ಸಂಸ್ಕೃತಿಯನ್ನು ತಿಳಿಯುವುದರ ಜೊತೆಗೆ ಶಿಲಾಯುಗದ ರೇಖಾಚಿತ್ರಗಳು ಅವರ ಕಲೆಯಾಗಿ ಮಹತ್ವ ಪಡೆದುಕೊಂಡಿರುವುದು ತಿಳಿಯುತ್ತದೆ.

ಸಿಂಧೂ-ಸರಸ್ವತಿ ನಾಗರೀಕತೆಯ ಕಾಲದಲ್ಲೂ ಪ್ರಾಣಿಗಳು ಬೇಟೆ ವಸ್ತುವಾಗಿ, ಸಾಕುಪ್ರಾಣಿಗಳಾಗಿ ಕೃಷಿ ಮತ್ತು ಪಶುಪಾಲನೆಯಲ್ಲಿ ಪ್ರಮುಖವಾಗಿ ಬಳಕೆಯಲ್ಲಿದ್ದವು. ಈ ನಾಗರೀಕತೆಯ ನೆಲೆಗಳಲ್ಲಿ ಪ್ರಾಣಿಚಿತ್ರಗಳನ್ನು ಒಳಗೊಂಡ ಮುದ್ರೆಗಳು ಮತ್ತು ಸಾಕಷ್ಟು ಪ್ರಾಣಿಗೊಂಬೆಗಳು ದೊರೆತಿರುವುದರಿಂದ ಈ ನಾಗರೀಕತೆಯ ಜನರು ಪ್ರಾಣಿಪ್ರಿಯರಾಗಿದ್ದಿರಬಹುದೆಂದು ಊಹಿಸಬಹುದು. ಎಮ್ಮೆ, ಕುರಿ, ಮೇಕೆ, ಹಂದಿ, ಒಂಟೆ, ಕುದುರೆ, ಆನೆ, ನಾಯಿ, ಬೆಕ್ಕು, ಕತ್ತೆ ಮುಂತಾದವು ಇಲ್ಲಿಯ ಜನರ ಸಾಕು ಪ್ರಾಣಿಗಳಾಗಿದ್ದವು.[೨] ಇಲ್ಲಿನ ಕೆಲವು ನೆಲೆಗಳಲ್ಲಿ ಸ್ತ್ರೀ ಮತ್ತು ಪುರುಷರ ಗೊಂಬೆಗಳ ಜೊತೆಗೆ ಹಲವು ಪ್ರಾಣಿಗಳ ಗೊಂಬೆಗಳು ಸಹ ಕಂಡುಬಂದಿದ್ದು ಇವು ಬಹುಶಃ ಮಕ್ಕಳ ಆಟದ ಸಾಮಗ್ರಿಗಳಾಗಿರಬಹುದು. ಈ ರೀತಿಯ ಚಿತ್ರಕಲೆ ಮತ್ತು ಮುದ್ರೆಗಳೇ ಮುಂದೆ ಶಿಲ್ಪಕಲೆಗೆ ಪ್ರೇರಕವಾಯಿತೆಂದು ಹೇಳಬಹುದು.

ಮೊದಲು ರೇಖಾಚಿತ್ರಗಳಿಂದ ತನ್ನ ಸಂವೇದನೆಗಳನ್ನು ವ್ಯಕ್ತಪಡಿಸುತ್ತಿದ್ದ ಮಾನವನು ಕಾಲಕ್ರಮೇಣ ಶಿಲ್ಪ ರಚನೆಯನ್ನು ಕಂಡುಕೊಂಡನೆಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಭಾರತೀಯ ಇತಿಹಾಸದಲ್ಲಿ ಶಿಲ್ಪಗಳು ದೊರೆಯುವುದು ಸಿಂಧೂ ನಾಗರೀಕತೆಯ ಕಾಲಘಟ್ಟದಿಂದಲೇ ಎನ್ನಬಹುದು.

ವಿಶ್ವ ಕಲಾಪರಂಪರೆಯಲ್ಲಿ ಭಾರತೀಯ ಶಿಲ್ಪಕಲೆಗೆ ವಿಶಿಷ್ಟ ಸ್ಥಾನವಿದ್ದು ನಮ್ಮ ಸಂಸ್ಕೃತಿಯ ಪ್ರತಿರೂಪವಾಗಿದೆ. ಒಂದು ಕಾಲದಲ್ಲಿ ನಿಸರ್ಗವನ್ನು ಮತ್ತು ಅದರ ಶಕ್ತಿಯನ್ನು ನಿರಾಕಾರದಲ್ಲಿ ಪೂಜಿಸುತ್ತಿದ್ದ ಮಾನವನು ತನ್ನಲ್ಲಿರುವ ಕಲೆಯನ್ನು ಬಳಸಿ ಅದಕ್ಕೊಂದು ಆಕಾರವನ್ನು ನೀಡಿ, ದೈವ ಸ್ವರೂಪದ ಅರ್ಥ ಕಲ್ಪಿಸಿ ಅದನ್ನು ಪೂಜಿಸತೊಡಗಿದನು. ಈ ರೀತಿಯಾಗಿ ಶಿಲ್ಪಕಲೆಯು ವಿಕಾಸವಾಯಿತೆಂದು ಹೇಳಬಹುದು. ಸಾಮಾನ್ಯವಾಗಿ ಮಾನವನ ಕಲ್ಪನೆಯ ಅಭಿವ್ಯಕ್ತತೆಯನ್ನು ಒಂದು ಮಾಧ್ಯಮದ ಮೂಲಕ ವ್ಯಕ್ತಪಡಿಸುವ ಕಲೆಗೆ ಶಿಲ್ಪವೆಂದು ಕರೆಯಲಾಗುತ್ತದೆ. ಶಿಲ್ಪ ಎನ್ನುವ ಸಂಸ್ಕೃತ ಪದವು 'ಶೀಲ ಸಮಾಧೌ' ಎನ್ನುವ ಧಾತುವಿನಿಂದ ಬಂದಿದ್ದು, ೬೪ ಕಲೆಗಳಲ್ಲಿ ಶಿಲ್ಪಕಲೆಯು ಒಂದು ಎಂದು ಗುರುತಿಸಲಾಗಿದೆ ಹಾಗೂ ಶಿಲ್ಪೋಪನಿಷತ್ತಿನಲ್ಲಿ ಬರುವ 'ಮನಸಾಯತ್ ಸೃಜ್ಯತೆ ವಿಶ್ವ ಕೃತಸ್ತತ್ ಸರ್ವ ಶಿಲ್ಪಮೇವ ಭವತಿ' ಎಂಬ ಶ್ಲೋಕವು ಬ್ರಹ್ಮನು ತನ್ನ ಮನಸ್ಸಿನಿಂದ ಮಾಡಿದುದೆಲ್ಲ ಶಿಲ್ಪವೇ ಎಂದು ಉಲ್ಲೇಖಿಸುತ್ತದೆ.[೧] ಇದರಂತೆ ವೇದದ ದೃಷ್ಟಿಯಲ್ಲಿ ಶಿಲ್ಪವು ಪ್ರಾರಂಭವಾದುದೇ ವಿಶ್ವಸೃಷ್ಟಿಯಿಂದ. ಸೃಷ್ಟಿಯನ್ನೇ ವೇದವು 'ಶಿಲ್ಪ' ಎಂದು ಹೇಳುತ್ತದೆ.[೨]

"ಶಿಲ್ಪಂ ಹಿ ಪರಮ ಪೂಜ್ಯಂ ಸರ್ವದರ್ಶನ ಲಕ್ಷಣಮ್
ಸರ್ವ ಪ್ರಮಾನ ರೂಪಾಯ ಸಾಕಾರ ತತ್ವಮೇವ ಚ."[೩]

ಶಿಲ್ಪವು ಪರಮ ಪೂಜ್ಯವಾದುದು. ಶಿಲ್ಪದಲ್ಲಿ ಸಕಲ ದರ್ಶನದ ಲಕ್ಷಣಗಳಿವೆ. ಆದ್ದರಿಂದ ಎಲ್ಲಾ ದರ್ಶನಗಳಿಂದಲೂ ಪೂಜ್ಯತೆಯನ್ನು ಪಡೆದು ಸಾರ್ವಕಾಲಿಕ ಪ್ರಮಾಣ ರೂಪಿಯಾಗಿ ಶಿಲ್ಪವು ಶೋಭಾಯಮಾನವಾಗಿದೆ. ಅಷ್ಟು ಮಾತ್ರವಲ್ಲ ಎಲ್ಲಾ ದರ್ಶನಗಳ ಸಾಕಾರ ಸ್ವರೂಪವಾಗಿ ಶಿಲ್ಪವು ತೇಜೋವಂತವಾಗಿದೆ ಎಂಬುದು ಈ ಮೇಲಿನ ಪದ್ಯ ಸಾಲುಗಳ ಅರ್ಥವಾಗಿದ್ದು ಶಿಲ್ಪಗಳ ಮಹತ್ವವನ್ನು ತಿಳಿಸುತ್ತದೆ.

ಭಾರತದ ಉದ್ದಗಲಕ್ಕೂ ಇರುವ ಸಾವಿರಾರು ಮಹತ್ವದ ಐತಿಹಾಸಿಕ ನಿರ್ಮಿತಿಗಳಲ್ಲಿ ಲೌಕಿಕ ಮತ್ತು ಅಲೌಕಿಕ ಶಿಲ್ಪಗಳನ್ನು ಕಾಣಬಹುದು. ಇವುಗಳ ಜೊತೆಯಲ್ಲಿ ಹಲವು ಪ್ರಾಣಿಗಳ ಶಿಲ್ಪಗಳನ್ನು ವಿಪುಲವಾಗಿ ಬಳಸಿಕೊಂಡಿದ್ದಾರೆ. ದೈವಭಕ್ತಿಗೆ ಹೆಸರಾದ ನಮ್ಮ ದೇಶದಲ್ಲಿ ಧಾರ್ಮಿಕ ಸ್ಮಾರಕಗಳೇ ಅಧಿಕವಾಗಿದ್ದು ದೇವರ ಶಿಲ್ಪಗಳೇ ಹೆಚ್ಚು ಕಂಡುಬರುತ್ತವೆ. ಇಂತಹ ಶಿಲ್ಪಗಳು ಧಾರ್ಮಿಕ ನೆಲೆಗಟ್ಟಿನ ಮೇಲೆ ರಚಿತವಾದಂತಹವುಗಳಾಗಿದ್ದು ಇವುಗಳ ಉಗಮ ಮತ್ತು ವಿಕಾಸಕ್ಕೆ ಧರ್ಮ ಕಾರಣವೆಂದು ಹೇಳಬಹುದು. ಧರ್ಮದ ಅಮೂರ್ತ ಕಲ್ಪನೆಗಳಿಗೆ ಮೂರ್ತಿಶಿಲ್ಪವು ಸಾಕಾರ ರೂಪವನ್ನು ನೀಡಿ ಸಂಪೂರ್ಣತೆಯನ್ನು ಒದಗಿಸುತ್ತವೆ. ಇಂತಹ ಧಾರ್ಮಿಕ ಮತ್ತು ಧಾರ್ಮಿಕೇತರ ಶಿಲ್ಪಗಳಲ್ಲಿ ಹಾಗೂ ದೇವಾಲಯದ ಅಲಂಕಾರದಲ್ಲಿ ಪ್ರಾಣಿಗಳು ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ.

ಸಿಂಧೂ ನಾಗರೀಕತೆಯ ಕಾಲಾವಧಿಯಲ್ಲಿ ಶಿಲ್ಪಗಳು ಮರ, ಶಿಲೆ, ಲೋಹ ಹಾಗೂ ಸುಡಾವೆ

ಮಣ್ಣಿನಿಂದ ರಚಿತಗೊಂಡಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಗಡ್ಡಧಾರಿ ವ್ಯಕ್ತಿಯ ಪ್ರತಿಮೆ, ಗೂಳಿಯ ಪ್ರತಿಮೆಗಳು, ಕಂಚಿನ ನರ್ತಕಿಯ ಶಿಲ್ಪ ಮತ್ತು ಮುದ್ರೆಯಲ್ಲಿ ದೊರೆತ ಪಶುಪತಿಯ ಸುತ್ತಲೂ ಪ್ರಾಣಿಗಳು ಸುತ್ತುವರೆದಿರುವ ಶಿಲ್ಪ ಹಾಗೂ ಇನ್ನೂ ಹಲವು ಸುಡಾವೆ ಮಣ್ಣಿನ ಪ್ರಾಣಿ ಗೊಂಬೆಗಳು ಇತ್ಯಾದಿ. ಇವೆಲ್ಲವೂ ಇಂದಿಗೂ ಅಧ್ಯಯನ ಚರ್ಚೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿವೆ. ಇನ್ನು ಚಾರಿತ್ರಿಕ ಯುಗಕ್ಕೆ ಬಂದರೆ ಭಾರತವನ್ನು ಆಳಿದ ಹಲವು ಅರಸು ಮನೆತನಗಳು ಶಿಲ್ಪಕಲೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವುಗಳಲ್ಲಿ ಅತ್ಯಂತ ಪ್ರಾಚೀನ ಶಿಲ್ಪಗಳು ಮೌರ್ಯರ ಕಾಲದವು. ಇವರು ಕಲೆಗೆ ಪ್ರಾಮುಖ್ಯತೆ ನೀಡಿದ್ದರೆಂಬುದು ಇವರ ಕಾಲದಲ್ಲಿ ರಚಿತಗೊಂಡ ಹಾಗೂ ಇಂದಿಗೂ ನೋಡಲು ಲಭ್ಯವಿರುವ ಶಿಲ್ಪಾವಶೇಷಗಳೇ ಸಾಕ್ಷಿಯಾಗಿವೆ. ಪ್ರಮುಖವಾಗಿ ಸಾರನಾಥದ ನಾಲ್ಕು ಸಿಂಹಗಳ ಸ್ತಂಭವು ಇಂದು ನಮ್ಮ ರಾಷ್ಟ್ರೀಯ ಲಾಛನವಾಗಿ ಗುರುತಿಸಲ್ಪಡುತ್ತಿರುವುದು ಇವರ ಕಲೆಗೆ ಸಂದ ಗೌರವ ಎಂದರೆ ಅತಿಶಯೋಕ್ತಿ ಎನಿಸದು. ಹಾಗೆಯೇ ಇಲ್ಲಿನ ಸ್ತಂಭಗಳಲ್ಲಿ ವೃಷಭ, ಆನೆ, ಕುದುರೆ, ಸಿಂಹ ಮುಂತಾದ ಶಿಲ್ಪಗಳು ಪ್ರಮುಖವಾಗಿ ಕಂಡುಬರುತ್ತವೆ. ಇವರ ನಂತರ ಬಂದಂತಹ ಕುಷಾಣರು ಗಾಂಧಾರ ಮತ್ತು ಮಥುರಾ ಕಲೆಯನ್ನು ಪರಿಚಯಿಸಿ ಕಲೆಯ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸಿದರು. ಮುಂದೆ ಗುಪ್ತರ ಕಾಲವನ್ನು ಶಿಲ್ಪಕಲೆಯ ಸುವರ್ಣಯುಗವೆಂದು ಕರೆಯಲಾಯಿತು. ಏಕೆಂದರೆ ಗುಪ್ತ ವಂಶದ ಅರಸರುಗಳು ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ, ಆಡಳಿತ, ವಿಜ್ಞಾನ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸಿದ್ದರು. ಅದರಲ್ಲೂ ಇವರು ಕಲೆಗೆ ನೀಡಿದ ಪ್ರೋತ್ಸಾಹ ಗಮನಾರ್ಹವಾದುದು.

ದಕ್ಷಿಣ ಭಾರತದಲ್ಲಿ ಶಾತವಾಹನರು, ವೇಂಗಿಯ ಚಲುಕ್ಯರು, ಪಲ್ಲವರು, ಪಾಂಡ್ಯರು ಮತ್ತು ಚೋಳರು ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಕ್ಷೇತ್ರಕ್ಕೆ ಬೃಹತ್ ಕೊಡುಗೆಗಳನ್ನು ನೀಡಿರುವರು. ಮುಖ್ಯವಾಗಿ ತಮಿಳುನಾಡಿನ ಬೃಹತ್ ದೇವಾಲಯಗಳು ವಿಶೇಷಗಳಾಗಿದ್ದು, ಆಳವಾದ ಕೆತ್ತನೆಯಿಂದ ಕೂಡಿದ ಆಕರ್ಷಕ ಶಿಲ್ಪಗಳು ಅಲ್ಲಿ ಕಂಡುಬರುತ್ತವೆ. ಇನ್ನೂ ಕರ್ನಾಟಕದ ಚಾರಿತ್ರಿಕ ಅವಧಿಯಲ್ಲಿ ಗಂಗ, ಕದಂಬ, ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಲುಕ್ಯ, ಹೊಯ್ಸಳರು ಹಾಗೂ ವಿಜಯನಗರದ ಅರಸರು ಆಳ್ವಿಕೆ ನಡೆಸಿ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವುದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ. ಮುಖ್ಯವಾಗಿ ಬಾದಾಮಿ ಚಲುಕ್ಯರು ಮತ್ತು ರಾಷ್ಟ್ರಕೂಟರು ತಮ್ಮ ಗುಹಾಲಯಗಳ ರಚನೆ ಮತ್ತು ಬೃಹತ್ ಗಾತ್ರದ ಜಗತ್ಪ್ರಸಿದ್ಧ ಶಿಲ್ಪಗಳನ್ನು ಕೆತ್ತಿರುವುದಕ್ಕೆ ಹೆಸರುವಾಸಿಯಾಗಿದ್ದಾರೆ. ಅದೇ ರೀತಿ ಹೊಯ್ಸಳರು ಅತಿ ಸೂಕ್ಷ್ಮವಾದ ಮತ್ತು ಅಲಂಕೃತ ಶಿಲ್ಪಗಳ ಕೆತ್ತನೆಗಳಿಂದ ಪ್ರಸಿದ್ಧಿ ಪಡೆದಿದ್ದರು.

ಕರ್ನಾಟಕದಲ್ಲಿ ಹೊಯ್ಸಳರ ನಂತರದ ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದ ಇತಿಹಾಸದಲ್ಲಿ ಸು. ೩ ಶತಮಾನಗಳಿಗೂ ಹೆಚ್ಚು ಕಾಲ ಆಳ್ವಿಕೆ ನಡೆಸಿ ಹಿಂದೂಧರ್ಮ ಮತ್ತು ಸಂಸ್ಕೃತಿಯನ್ನು ಪೋಷಿಸಿದ ವಿಶಾಲ ಸಾಮ್ರಾಜ್ಯ. ಸಂಗಮ ವಂಶದ ಸಹೋದರರಾದ ಹರಿಹರ ಬುಕ್ಕರು ಕ್ರಿ.ಶ. ೧೩೩೬ರಲ್ಲಿ ಈ ಸಾಮ್ರಾಜ್ಯವನ್ನು ಸ್ಥಾಪಿಸಿದರು. ದಖ್ಖನಿನ ರಾಜಕೀಯ ಅನೈಕ್ಯತೆಯನ್ನು ಹೋಗಲಾಡಿಸಿದ ವಿಜಯನಗರ ಸಾಮ್ರಾಜ್ಯ ಹಿಂದೂ ಧರ್ಮದ ರಕ್ಷಣಾ ಕೋಟೆಯಂತೆ ಕಾರ್ಯ

ನಿರ್ವಹಿಸಿತು. ಈ ಸಾಮ್ರಾಜ್ಯವನ್ನು ಸಂಗಮ (ಕ್ರಿ.ಶ.೧೩೩೬–೧೪೮೫), ಸಾಳುವ (ಕ್ರಿ.ಶ.೧೪೮೫–೧೫೦೩), ತುಳುವ (ಕ್ರಿ.ಶ.೧೫೦೩–೧೫೫೫), ಹಾಗೂ ಅರವೀಡು ವಂಶ (ಕ್ರಿ.ಶ.೧೫೫೫–೧೬೪೬) ಎಂಬ ನಾಲ್ಕು ರಾಜವಂಶಗಳು ಆನೆಗೊಂದಿ, ಹಂಪಿ ಮತ್ತು ಪೆನುಕೊಂಡೆಗಳನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ಮಾಡಿದರು. ಪ್ರಸ್ತುತ ಅಧ್ಯಯನದ ವಿಷಯವು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಪ್ರಸಿದ್ಧಿ ಪಡೆದಿದ್ದ ಹಂಪಿ ಮತ್ತು ಅದರ ಸುತ್ತಮುತ್ತಲಿನ ಪರಿಸರಕ್ಕೆ ಸಂಬಂದಿಸಿದ್ದುದಾಗಿದೆ. ವಿಜಯನಗರ ಅರಸರು ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತನ್ನದೇ ಆದ ಮಹತ್ವವನ್ನು ಪಡೆದು ಬೆಳವಣಿಗೆ ಕಂಡಿರುವುದನ್ನು ಕಾಣಬಹುದು. ಇವುಗಳ ಜೊತೆಗೆ ಈ ಸಾಮ್ರಾಜ್ಯವು ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗೂ ವಿಶೇಷ ಸ್ಥಾನಮಾನ ನೀಡಿದ್ದರು ಎಂಬುದನ್ನು ಇಂದಿಗೂ ಹಂಪಿಯಲ್ಲಿ ಕಂಡುಬರುವ ಹಲವು ದೇವಾಲಯಗಳು ಮತ್ತು ಸ್ಮಾರಕಗಳಿಂದ ತಿಳಿಯುತ್ತದೆ.

ಮೊದಲ ರಾಜಮನೆತನವಾದ ಸಂಗಮರ ಕಾಲದಿಂದಲೇ ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು ರಚನೆಯಾದುದು ಶಾಸನಗಳಿಂದ ತಿಳಿದುಬರುತ್ತದೆ. ಹಂಪಿ ಪರಿಸರದಲ್ಲಿ ಇಮ್ಮಡಿ ಹರಿಹರನ ಕಾಲದಲ್ಲಿ ಹಲವು ದೇವಾಲಯಗಳ ನಿರ್ಮಾಣ ಮತ್ತು ಮೂರ್ತಿಶಿಲ್ಪಗಳ ಪ್ರತಿಷ್ಠಾಪನೆಯಾದುದು ಇವನ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೩೭೯ರ ಶಾಸನವು[೬] ಶ್ರೀ ನಲಾನುಚಕ್ರವರ್ತಿ ಅಯ್ಯ ಎನ್ನುವವನು ಪಂಪಾತೀರದಲ್ಲಿ ನರಸಿಂಹ ದೇವರ ಮಂಟಪವನ್ನು, ಕ್ರಿ.ಶ. ೧೩೮೬ರ ಶಾಸನವು[೭] ಹರಿಹರನ ಮಂತ್ರಿ ಬೈಚಪನ ಮಗ ಇರುಗಪನು ವಿಜಯನಗರದಲ್ಲಿ ಕುಂತುನಾಥ ಜಿನಾಲಯವನ್ನು ನಿರ್ಮಿಸಿದನೆಂದು ಉಲ್ಲೇಖಿಸುತ್ತವೆ. ಹರಿಹರನ ನಂತರ ಬಂದಂತಹ ೧ನೇ ದೇವರಾಯ ಮತ್ತು ೨ನೇ ದೇವರಾಯರ ಕಾಲದಲ್ಲೂ ಈ ಕಾರ್ಯ ಮುಂದುವರೆಯಿತು. ೧ನೇ ದೇವರಾಯನ ಕಾಲದ ಕ್ರಿ.ಶ. ೧೪೧೦ರ ಶಾಸನವು[೮] ಅವನ ಮಂತ್ರಿ ಲಕ್ಷ್ಮೀಧರನು ಮಹಾಶಕ್ತಿ ಹೇರಂಭನನ್ನು ಪ್ರತಿಷ್ಠಾಪಿಸಿದನೆಂದು ಹಾಗೂ ಕ್ರಿ.ಶ. ೧೪೨೬ರ ಶಾಸನವು[೯] ದೇವರಾಯನು ಪಾನ್‌ಸುಪಾರಿ ಬೀದಿಯಲ್ಲಿ ಪಾರ್ಶ್ವನಾಥ ಜಿನಾಲಯವನ್ನು ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ. ಹಂಪಿಯ ಹಜಾರರಾಮ ದೇವಾಲಯುವನ್ನು ೧ನೇ ದೇವರಾಯನ ಕಾಲದಲ್ಲಿ ಕಟ್ಟಲ್ಪಟ್ಟಿರಬೇಕೆಂದು ವಿದ್ವಾಂಸರು ಅಭಿಪ್ರಾಯಿಸುತ್ತಾರೆ.[೧೦] ೨ನೇ ದೇವರಾಯನ ಕಾಲದಲ್ಲಿ ಕ್ರಿ.ಶ. ೧೪೩೯ರ ಶಾಸನವು[೧೧] ಅಹಮದ್‌ಖಾನನು ಧರ್ಮಶಾಲೆಯನ್ನು ಕಟ್ಟಿಸಿದುದನ್ನು ಮತ್ತು ಕ್ರಿ.ಶ. ೧೪೫೫ರ ಶಾಸನವು[೧೨] ರಾಯಪಣ್ಣ ಎಂಬುವವನು ಸೌಮ್ಯ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿದ ಉಲ್ಲೇಖವನ್ನು ತಿಳಿಸುತ್ತದೆ.

ತುಳುವ ರಾಜ ಮನೆತನದ ಪ್ರಸಿದ್ಧ ಅರಸನಾದ ಕೃಷ್ಣದೇವರಾಯನ ಕ್ರಿ.ಶ. ೧೫೧೦ರ ಶಾಸನವು[೧೩] ಅವನ ಪಟ್ಟಾಭಿಷೇಕದ ಸಂದರ್ಭದಲ್ಲಿ ವಿರೂಪಾಕ್ಷ ದೇವಾಲಯದ ರಂಗಮಂಟಪ, ಅದರ ಮುಂದಿನ ಗೋಪುರವನ್ನು ಕಟ್ಟಿಸಿದುದು ಮತ್ತು ಹಿರಿಯ ಗೋಪುರವನ್ನು ಜೀರ್ಣೋದ್ಧಾರ ಮಾಡಿಸಿದುದನ್ನು ಉಲ್ಲೇಖಿಸುತ್ತದೆ. ಕ್ರಿ.ಶ. ೧೫೧೩ರ ಶಾಸನವು[೧೪] ಉದಯಗಿರಿಯಿಂದ ತಂದಿದ್ದ ಶ್ರೀ ಬಾಲಕೃಷ್ಣ ದೇವರ ವಿಗ್ರಹವನ್ನು ಪ್ರತಿಷ್ಠೆ ಮಾಡಿದುದನ್ನು ಹಾಗೂ ಕ್ರಿ.ಶ. ೧೫೨೮ರ ಶಾಸನವು[೧೫] ಕೃಷ್ಣಾಪುರದಲ್ಲಿ ಲಕ್ಷ್ಮೀನರಸಿಂಹ ದೇವರನ್ನು ಪ್ರತಿಷ್ಠಾಪನೆ ಮಾಡಿದುದನ್ನು ಉಲ್ಲೇಖಿಸುತ್ತದೆ. ನಂತರ ಆಳ್ವಿಕೆಗೆ ಬಂದ

ಅಚ್ಯುತರಾಯನ ಕಾಲದ ಕ್ರಿ.ಶ. ೧೫೩೪ರ ಶಾಸನವು[೧೬] ತಿರುಮಲರಾಜನ ಒಡೆಯನು ತುಂಗಭದ್ರಾ ತೀರದಲ್ಲಿ ಶ್ರೀತಿರುವೇಂಗಳನಾಥ ದೇವರ ಪ್ರತಿಷ್ಠೆ ಮಾಡಿಸಿದ್ದನ್ನು ಮತ್ತು ಕ್ರಿ.ಶ. ೧೫೪೦ರ ಶಾಸನವು[೧೭] ತಿಮ್ಮರಾಯನು ಪೆನುಕೊಂಡ ಬಾಗಿಲ ಬಳಿ ರಘುನಾಥ ದೇವರನ್ನು ಪ್ರತಿಷ್ಠೆ ಮಾಡಿಸಿದುದನ್ನು ಉಲ್ಲೇಖಿಸುತ್ತದೆ. ನಂತರ ಮುಂದೆ ಬಂದಂತಹ ರಾಜರುಗಳು ಸಹ ಇದೇ ಕಾರ್ಯವನ್ನು ಮುಂದುವರೆಸಿರುವ ಕುರಿತು ಹಂಪಿಯ ಹಲವು ಶಾಸನಗಳಿಂದ ದೃಢಪಡುತ್ತದೆ.

ಹಂಪಿ ಪರಿಸರದಲ್ಲಿ ವಿಜಯನಗರ ಅರಸರು ವಾಸ್ತುಶಿಲ್ಪದಂತೆಯೇ ಶಿಲ್ಪಕಲೆಗೂ ಆದ್ಯತೆ ನೀಡಿದ್ದು, ಅಂದಿನ ಕಲಾವಿದರು ಮತ್ತು ಶಿಲ್ಪಿಗಳು ತಮ್ಮ ಬೃಹದ್ಭವ್ಯತೆಯನ್ನು ಮೆರೆದಿದ್ದಾರೆ. ಇವರ ಬಹುತೇಕ ಶಿಲ್ಪಗಳು ಕಣಶಿಲೆ ಮತ್ತು ಗಾರೆಯ ಮಾಧ್ಯಮದವುಗಳಾಗಿವೆ. ಇಲ್ಲಿನ ಧಾರ್ಮಿಕ ಮತ್ತು ಲೌಕಿಕ ಸ್ಮಾರಕಗಳ ಕಂಬ, ಭಿತ್ತಿ, ಗೋಪುರಗಳಲ್ಲಿ ವಿವಿಧ ಪಂಥಕ್ಕೆ ಸೇರಿದ ಶಿಲ್ಪಗಳು ಕಾಣಸಿಗುತ್ತವೆ. ಹಂಪಿಯಲ್ಲಿ ಇತರೆ ಶಿಲ್ಪಗಳ ಜೊತೆಗೆ ಬೃಹತ್ ನಂದಿ, ಆಂಜನೇಯ, ಲಕ್ಷ್ಮೀನರಸಿಂಹ ಶಿಲ್ಪಗಳನ್ನು ಕಂಡರಿಸಲಾಗಿದೆ. ಏಕಶಿಲೆಯ ಲಕ್ಷ್ಮೀನರಸಿಂಹ ವಿಗ್ರಹವು ನಾಶಗೊಂಡಿದ್ದರೂ ಅದರ ವಿಶಾಲ ವೃಕ್ಷಸ್ಥಳ, ದೊಡ್ಡ ಕಣ್ಣುಗಳಿಂದ ಕೂಡಿದ್ದು ತನ್ನ ಸೌಂದರ್ಯವನ್ನು ಹೊರಸೂಸುತ್ತಲೇ ಇದೆ. ನರಸಿಂಹನ ತಲೆಯ ಮೇಲೆ ಪ್ರಭಾವಳಿಯಂತೆ ಏಳು ಹೆಡೆಯ ಆದಿಶೇಷವಿರುವುದು ಗಮನಾರ್ಹ. ಹಂಪಿಯ ತುಂಗಭದ್ರಾ ನದಿ ದಂಡೆಯ ಮೇಲಿನ ಬಂಡೆಯೊಂದರ ಮೇಲೆ ಕೆತ್ತಲಾಗಿರುವ ಇದರ ಪ್ರತಿರೂಪವೊಂದು ಈ ಶಿಲ್ಪದ ಅಂದಿನ ಭವ್ಯತೆಯನ್ನು ಊಹಿಸಲು ಸಹಾಯಕವಾಗಿದೆ. ವಿಜಯನಗರ ಶಿಲ್ಪಿಗಳು ಹಂಪಿಯ ಸ್ಮಾರಕಗಳ ಕಂಬಗಳಲ್ಲಿ ದೇವತೆಗಳ ಶಿಲ್ಪಗಳ ಜೊತೆಗೆ ರಾಮಾಯಣ, ಮಹಾಭಾರತ, ಭಾಗವತ ಮತ್ತು ಶೈವ–ವೈಷ್ಣವ ಪರಂಪರೆಯ ಪೌರಾಣಿಕ ಕಥೆಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಹಂಪಿಯ ಸ್ಮಾರಕಗಳಲ್ಲಿ ಲೌಕಿಕ ಶಿಲ್ಪಗಳು ಸಾಕಷ್ಟು ಕಂಡುಬಂದಿದ್ದು, ಅವುಗಳಲ್ಲಿ ಮುಖ್ಯವಾಗಿ ಮಹಾನವಮಿ ದಿಬ್ಬದಲ್ಲಿನ ಸಂಗೀತಗಾರರು, ನೃತ್ಯಗಾರರು, ಕೋಲಾಟಗಾರರ ಶಿಲ್ಪಗಳ ಜೊತೆಗೆ ಪ್ರಾಣಿಗಳ ಬೇಟೆ ಶಿಲ್ಪಗಳು, ಪಳಗಿಸುವ ಶಿಲ್ಪಗಳು, ಮೆರವಣಿಗೆಯ ಶಿಲ್ಪಗಳನ್ನು ಹಾಗೂ ಹಜಾರರಾಮ ದೇವಾಲಯದ ಪ್ರಾಕಾರ ಗೋಡೆಯ ಮೇಲೆ ಆನೆ, ಕುದುರೆ, ಒಂಟೆ ಮತ್ತು ಇತರೆ ಸೈನಿಕ ಶಿಲ್ಪಗಳನ್ನು, ವಿವಿಧ ರೀತಿಯ ಪ್ರಾಣಿ–ಪಕ್ಷಿ ಶಿಲ್ಪಗಳನ್ನು ಮತ್ತು ಕೆಲವು ಕಾಲ್ಪನಿಕ ಶಿಲ್ಪಗಳನ್ನು ಬಹು ಸುಂದರವಾಗಿ ಬಿಡಿಸಲಾಗಿದೆ. ವಿಜಯನಗರದ ಅರಸರು ಶಿಲ್ಪಕಲೆಯ ಜೊತೆಗೆ ಚಿತ್ರಕಲೆಗೂ ಪ್ರೋತ್ಸಾಹ ನೀಡಿರುವುದು ಹಂಪಿ, ಆನೆಗೊಂದಿ, ಲೇಪಾಕ್ಷಿ ಮುಂತಾದ ಸ್ಥಳಗಳಲ್ಲಿರುವ ವರ್ಣಚಿತ್ರಗಳಿಂದ ತಿಳಿಯಬಹುದು. ಇಂತಹವುಗಳಲ್ಲಿ ಗಿರಿಜಾಕಲ್ಯಾಣ, ತ್ರಿಪುರಸಂಹಾರ, ಮನ್ಮಥ ವಿಜಯ ಇತರೆ ಚಿತ್ರಗಳ ಜೊತೆಗೆ ಅಷ್ಟದಿಕ್ಪಾಲಕರ, ದಶಾವತಾರಗಳ ಹಾಗೂ ವಿವಿಧ ಪ್ರಾಣಿ–ಪಕ್ಷಿಗಳು ಮತ್ತು ಕಾಲ್ಪನಿಕ ಚಿತ್ರಗಳು ಪ್ರಮುಖವಾಗಿವೆ.

ವಿಜಯನಗರ ಕಾಲದ ಹಂಪಿಯ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಕಣ್ಣಿಗೆ ಕಟ್ಟುವಂತೆ ತಿಳಿಸುವಲ್ಲಿ ಅಲ್ಲಿನ ಶಿಲ್ಪಗಳು ಬಹುಮುಖ್ಯ ಆಕರಗಳಾಗಿವೆ. ಇಂತಹ ಶಿಲ್ಪಗಳ ಕುರಿತು ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಿವೆ. ಆದರೆ ದೇವಾಲಯಗಳಲ್ಲಿನ ಪ್ರಾಣಿಶಿಲ್ಪಗಳ ಸಮಗ್ರ ವಿವರಣೆ ನೀಡುವ ಗ್ರಂಥಗಳಿಲ್ಲ ಎನ್ನಬಹುದು. ಕೆಲವು ಬಿಡಿ ಅಧ್ಯಯನಗಳು ನಡೆದಿದ್ದರೂ ಅವು ಲೇಖನಗಳ ರೂಪದಲ್ಲಿ, ನಿಯತಕಾಲಿಕೆಗಳು ಮತ್ತು ಸಂಪಾದಿತ ಕೃತಿಗಳಲ್ಲಿ ಪ್ರಕಟವಾಗಿವೆ.

ಆದ್ದರಿಂದ ಪ್ರಥಮ ಆದ್ಯತೆಯಾಗಿ ಪ್ರಾಣಿ ಶಿಲ್ಪಗಳ ಸಮಗ್ರ ವಿವರಣೆ ನೀಡುವ ಉದ್ದೇಶದಿಂದ 'ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ' ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನವನ್ನು ಕೈಗೊಳ್ಳುವುದರ ಮೂಲಕ ಇಂತಹ ಒಂದು ಪ್ರಯತ್ನ ಮಾಡಲಾಗಿದೆ.

೧.೧ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ವಿಶ್ವಪರಂಪರೆ ತಾಣವಾದ ಹಂಪಿಯ ಕುರಿತು ಈಗಾಗಲೆ ಅನೇಕ ವಿದ್ವಾಂಸರು ಮತ್ತು ಸಂಶೋಧಕರು ಸಾಕಷ್ಟು ಕೆಲಸ ಮಾಡಿದ್ದು, ಹೊಸ ಹೊಸ ವಿಚಾರಗಳನ್ನು ಹಂಪಿಯ ಚರಿತ್ರೆಗೆ ಸೇರಿಸುತ್ತಾ ಬಂದಿರುವುದನ್ನು ನಾವು ಕಾಣಬಹುದು. ಹಂಪಿಯು ಇಂದು ಒಂದು ಪ್ರಸಿದ್ಧ ಪ್ರವಾಸಿ ತಾಣ. ಈ ಹಿನ್ನೆಲೆಯಲ್ಲಿ ಇಲ್ಲಿಗೆ ಭೇಟಿ ನೀಡಿದ ಹಲವು ವಿದ್ವಾಂಸರಲ್ಲಿ ದೇಶಿಯ ಮತ್ತು ವಿದೇಶಿಯರು ಪ್ರಮುಖವಾಗಿದ್ದು, ಇವರು ಇಲ್ಲಿಯ ಪ್ರಾಚೀನತೆ, ಸಾಮ್ರಾಜ್ಯದ ಉಗಮ, ಸ್ಥಳೀಯ ಆಡಳಿತ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ, ದೇವಾಲಯಗಳು ಹಾಗೂ ಶಿಲ್ಪಗಳು ಹೀಗೆ ಹಲವು ವಿಷಯಗಳ ಕುರಿತು ಅಧ್ಯಯನ ಮಾಡಿ ಅವರ ಅಭಿಪ್ರಾಯಗಳನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಹಂಪಿಯಲ್ಲಿನ ಶಿಲ್ಪಗಳ ಕುರಿತು ಕೆಲವು ಅಧ್ಯಯನಗಳು ನಡೆದಿವೆ. ಅವುಗಳೆಂದರೆ ಕೆ.ಎಂ.ಸುರೇಶ ಅವರ *Sculptural Art of Hampi* (2003) ಮತ್ತು *Vijayanagara Sculptures at Hampi* (2011) ಈ ಎರಡು ಕೃತಿಗಳು ಹಂಪಿಯಲ್ಲಿನ ಶಿಲ್ಪಗಳ ಕುರಿತದ್ದಾಗಿವೆ. ೨೦೧೧ರಲ್ಲಿ ಪ್ರಕಟವಾದ ಕೃತಿಯು *Sculptural Art of Hampi* (2003) ಪುಸ್ತಕದ ಪರಿಷ್ಕೃತ ಆವೃತ್ತಿಯಾಗಿದೆ. ಇದರಲ್ಲಿ ಹಂಪಿ ಪರಿಸರದ ಕೆಲವೇ ಹಳ್ಳಿಗಳ ದೇವಾಲಯಗಳಲ್ಲಿನ ಶೈವ, ವೈಷ್ಣವ ಮತ್ತು ಪರಿವಾರ ದೇವತೆಗಳ ಶಿಲ್ಪಗಳನ್ನು ವಿವರಿಸಲಾಗಿದೆ. ಹೀಗೆ ಹಂಪಿಯ ಶಿಲ್ಪಗಳನ್ನು ಕುರಿತಾದ ಈ ಕೃತಿಯು ನನ್ನ ಅಧ್ಯಯನಕ್ಕೆ ಮಹತ್ವದ ಆಕರವಾಗಿದ್ದು ಇದರಲ್ಲಿ ಹಂಪಿ ಪರಿಸರದ ಶಿಲ್ಪಕಲೆಯಲ್ಲಿ ಪ್ರಾಣಿಗಳ ಧಾರ್ಮಿಕ, ಧಾರ್ಮಿಕೇತರ ಮತ್ತು ಕಾಲ್ಪನಿಕ ಶಿಲ್ಪಗಳಿದ್ದು ಅವುಗಳ ಮಾಹಿತಿ ಕೊರತೆಯಿದೆ. ಹಾಗಾಗಿ ಪ್ರಸ್ತುತ ಅಧ್ಯಯನದಲ್ಲಿ ಹಂಪಿ ಪರಿಸರದ ೨೯ ಹಳ್ಳಿಗಳ ವ್ಯಾಪ್ತಿಯಲ್ಲಿನ ಎಲ್ಲಾ ಪ್ರಾಣಿಗಳ ಶಿಲ್ಪಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಹಂಪಿ ಪರಿಸರದ ಶಿಲ್ಪಗಳ ಕುರಿತಾದ ಮತ್ತೊಂದು ಕೃತಿಯೆಂದರೆ ಅನಿಲಾ ವರ್ಗೀಸ್ ಅವರ *Religious Traditions at Vijayanagara* (1995) ಕೃತಿಯಲ್ಲಿ ಹಂಪಿ ಪರಿಸರದಲ್ಲಿನ ಧಾರ್ಮಿಕ ಶಿಲ್ಪಗಳನ್ನು ವಿವರಿಸಿರುವರು. ಹಾಗಾಗಿ ಈ ಕೃತಿಯು ನನ್ನ ಅಧ್ಯಯನ ವಿಷಯಕ್ಕೆ ಪೂರಕವಾಗಿದ್ದರೂ ಹಂಪಿಯ ಶಿಲ್ಪಗಳಲ್ಲಿನ ಪ್ರಾಣಿಗಳ ಧಾರ್ಮಿಕ ಮತ್ತು ಧಾರ್ಮಿಕೇತರ ಶಿಲ್ಪಗಳ ಬಗ್ಗೆ ಮಾಹಿತಿಯಿಲ್ಲ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಪ್ರಾಣಿಶಿಲ್ಪಗಳ ಬಗ್ಗೆ ಮಾಹಿತಿಯನ್ನು ಒದಗಿಸಲಾಗಿದೆ.

ಹಂಪಿಯಲ್ಲಿನ ಶಿಲ್ಪಗಳನ್ನು ಕುರಿತಾದ ಇನ್ನೊಂದು ಪ್ರಮುಖ ಕೃತಿಯೆಂದರೆ ಅನ್ನಾ ಎಲ್. ಡಲ್ಲಾಪಿಕೊಲಾ ಹಾಗೂ ಅನಿಲಾ ವರ್ಗೀಸ್ ಅವರ *Sculpture at Vijayanagara: Iconography and Style* (1998). ಈ ಕೃತಿಯಲ್ಲಿಯೂ ಲೇಖಕರು ಹಂಪಿ ಪರಿಸರದಲ್ಲಿನ ಧಾರ್ಮಿಕ ಮತ್ತು ಲೌಕಿಕ ಶಿಲ್ಪಗಳ ಕುರಿತು ಸಂಕ್ಷಿಪ್ತ ವಿವರಗಳನ್ನು ವಿವರಿಸಲಾಗಿದೆ. ಆದರೂ ಹಂಪಿಯ ಶಿಲ್ಪಗಳ ಕುರಿತು ಇರುವ ಕೆಲವೇ ಅಧ್ಯಯನಗಳಲ್ಲಿ ಇದೂ ಒಂದಾಗಿದ್ದರಿಂದ ನನ್ನ ಅಧ್ಯಯನಕ್ಕೆ ಪೂರಕವಾದುದ್ದಾಗಿದೆ.

ಹಾಗೆಯೇ ಆರ್. ಎಸ್. ಸಾಲೆತೊರೆ ಅವರ *Vijayanagara Art* (1982) ಎಂಬ ಕೃತಿಯು ವಿಜಯನಗರದ ಧರ್ಮ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಅವುಗಳ ಆಭರಣ, ಆಯುಧಗಳು ಮುಂತಾದವುಗಳನ್ನು ಒಳಗೊಂಡ ಕೃತಿಯಾಗಿದೆ. ಇದು ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿ ಹೊಂದಿರುವುದರಿಂದ ಹಂಪಿ ಪರಿಸರದ ಕೆಲವು ಶಿಲ್ಪಗಳನ್ನು ಮಾತ್ರ ವಿವರಿಸಲಾಗಿದೆ. ಅದರಲ್ಲಿ ಪ್ರಾಣಿಶಿಲ್ಪಗಳ ಸಮಗ್ರ ಮಾಹಿತಿ ಇರುವುದಿಲ್ಲ. ಕೆ.ಎಂ.ಸುರೇಶ್ ಅವರ *Temples of Hampi* (2003) ಕೃತಿಯು ಹಂಪಿ ಪರಿಸರದ ದೇವಾಲಯಗಳನ್ನು ಕುರಿತದ್ದಾಗಿದ್ದು ಇದರಲ್ಲಿ ಹಂಪಿಯಲ್ಲಿನ ವಿಜಯನಗರ ಪೂರ್ವ ಮತ್ತು ವಿಜಯನಗರ ಕಾಲದ ದೇವಾಲಯಗಳ ವಾಸ್ತುಶಿಲ್ಪವನ್ನು ಮಾತ್ರ ವಿವರಿಸಿದ್ದಾರೆ. ಆದರೆ ಹಂಪಿಯ ಶಿಲ್ಪಗಳು ಅದರಲ್ಲೂ ಪ್ರಾಣಿ ಶಿಲ್ಪಗಳ ಬಗ್ಗೆ ಮಾಹಿತಿ ಅಥವಾ ವಿವರಣೆ ನೀಡಿರುವುದಿಲ್ಲ. ಎಸ್.ಎನ್. ಶಿವರುದ್ರಸ್ವಾಮಿ ಅವರ *Vijayanagara Temples in Karnataka* (1996) ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿರುವ ವಿಜಯನಗರ ಕಾಲದ ದೇವಾಲಯಗಳ ವಾಸ್ತು ಲಕ್ಷಣಗಳನ್ನು ಮತ್ತು ಶಿಲ್ಪಗಳನ್ನು ವಿವರಿಸಲಾಗಿದೆ. ಇದರಲ್ಲಿ ಶೈವ, ವೈಷ್ಣವ ಮತ್ತು ಲೌಕಿಕ ಶಿಲ್ಪಗಳನ್ನು ಅಧ್ಯಯನ ಮಾಡಿದ್ದು ವಿವಿಧ ರೀತಿಯ ಪ್ರಾಣಿ ಶಿಲ್ಪಗಳ ಸಾಮಾನ್ಯವಾದ ಮಾಹಿತಿಯನ್ನು ಈ ಕೃತಿಯಲ್ಲಿ ನೀಡಲಾಗಿದೆ. ಈ ಕೃತಿಯು ಕರ್ನಾಟಕದ ಸಮಗ್ರ ವ್ಯಾಪ್ತಿಯನ್ನು ಹೊಂದಿರುವುದರಿಂದ ಹಂಪಿ ಪರಿಸರದ ಶಿಲ್ಪಗಳಲ್ಲಿನ ಪ್ರಾಣಿ ಶಿಲ್ಪಗಳ ಬಗ್ಗೆ ಹೆಚ್ಚಿನ ಮಾಹಿತಿಯ ಕೊರತೆಯಿದ್ದು ಅದನ್ನು ನೀಗಿಸುವ ಪ್ರಯತ್ನ ಈ ಅಧ್ಯಯನದ್ದಾಗಿದೆ.

ಅನ್ನಾ ಎಲ್. ಡಲ್ಲಾಪಿಕೊಲಾ, ಜಾನ್ ಎಂ. ಫ್ರಿಟ್ಜ್, ಜಾರ್ಜ್ ಮಿಷೆಲ್ ಮತ್ತು ಎಸ್. ರಾಜಶೇಖರ್ ಅವರ *The Ramachandra Temple at Vijayanagara* (1992) ಎಂಬ ಕೃತಿಯು ಹಂಪಿಯಲ್ಲಿನ ಹಜಾರರಾಮ ದೇವಾಲಯಕ್ಕೆ ಸಂಬಂಧಿಸಿದ ಕೃತಿಯಾಗಿದ್ದು ಶಿಲ್ಪಗಳ ಅಧ್ಯಯನಕ್ಕೆ ಪೂರಕ ಆಕರವಾಗಿದೆ. ಲೇಖಕರು ಈ ಕೃತಿಯಲ್ಲಿ ದೇವಾಲಯದ ವಾಸ್ತುಶಿಲ್ಪ, ಶಿಲ್ಪಗಳು ಹಾಗೂ ಅಲ್ಲಿನ ಶಾಸನಗಳನ್ನು ವಿವರಿಸಿದ್ದಾರೆ. ಈ ಕೃತಿಯಲ್ಲಿ ಧಾರ್ಮಿಕ ಮತ್ತು ಲೌಕಿಕ ಶಿಲ್ಪಗಳನ್ನು ವಿವರಿಸಿದ್ದು, ದೇವಾಲಯದ ಕಂಬ, ಭಿತ್ತಿ ಮತ್ತು ಪ್ರಾಕಾರ ಗೋಡೆಯಲ್ಲಿನ ಪ್ರಾಣಿ ಶಿಲ್ಪಗಳನ್ನು ತಿಳಿಸಿದ್ದು ಅವುಗಳ ಸಮಗ್ರ ಅಧ್ಯಯನ ಮಾಡಿಲ್ಲ. ಈ ಹಿನ್ನೆಲೆಯಲ್ಲಿ ದೇವಾಲಯದ ಪ್ರಾಣಿ ಶಿಲ್ಪಗಳ ಸಮಗ್ರ ಮಾಹಿತಿ ಈ ಅಧ್ಯಯನದಲ್ಲಿ ನೀಡಲಾಗಿದೆ.

ಅನ್ನಾ ಎಲ್. ಡಲ್ಲಾಪಿಕೊಲಾ ಅವರ *The Great Platform at Vijayanagara: Architecture and Sculpture* (2010) ಎಂಬ ಕೃತಿಯು ಮಹಾನವಮಿ ದಿಬ್ಬದ ಕುರಿತದ್ದಾಗಿದ್ದು ದಿಬ್ಬದ ವಾಸ್ತುಶೈಲಿ, ಶಿಲ್ಪಗಳನ್ನು ವಿವರಿಸುವುದರ ಜೊತೆಗೆ ಎಲ್ಲಾ ಶಿಲ್ಪಗಳನ್ನು ವ್ಯವಸ್ಥಿತವಾಗಿ ದಾಖಲೀಕರಣ ಮಾಡಲಾಗಿದೆ. ಆದರೆ ಇಲ್ಲಿನ ಎಲ್ಲಾ ರೀತಿಯ ಪ್ರಾಣಿಗಳ ಬೇಟೆ ಶಿಲ್ಪಗಳು ಮತ್ತು ಇತರೆ ಪ್ರಾಣಿ ಶಿಲ್ಪಗಳನ್ನು ಕೆಲವು ಸಾಹಿತ್ಯ ಗ್ರಂಥಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿರುವುದಿಲ್ಲ. ಹಾಗಾಗಿ ಪ್ರಸ್ತುತ ದಿಬ್ಬದಲ್ಲಿನ ಎಲ್ಲಾ ಪ್ರಾಣಿ ಶಿಲ್ಪಗಳನ್ನು ಗಮನಿಸಿ ಸಾಹಿತ್ಯ ಗ್ರಂಥಗಳ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಹಾಗೂ ಇಲ್ಲಿನ ಎಲ್ಲಾ ಪ್ರಾಣಿ ಶಿಲ್ಪಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಅನಿಲಾ ವರ್ಗೀಸ್ ಅವರ *Archaeology Art and Religion New Perspectives on Vijayanagara* (2001) ಎಂಬ

ಕೃತಿಯು ಹಂಪಿ ಪರಿಸರದ ವಿವಿಧ ಆಯಾಮಗಳನ್ನು ಕುರಿತು ವಿವರಿಸುವ ಕೆಲವು ಲೇಖನಗಳ ಸಂಗ್ರಹವಾಗಿದೆ. ಹಾಗೂ ಎಸ್. ಎನ್ ಶಿವರುದ್ರಸ್ವಾಮಿ ಅವರ *Timmapura Agrahara (A Cultural Study of Vijayanagara Hampi Temple Complex)* ಈ ಕೃತಿಯುಲ್ಲಿ ತಿಮ್ಮಲಾಪುರದ ದೇವಾಲಯದಲ್ಲಿನ ಶಿಲ್ಪಗಳ ಕುರಿತ ಮಾಹಿತಿಗಳು ನನ್ನ ಅಧ್ಯಯನಕ್ಕೆ ಪೂರಕವಾಗಿವೆ.

ಹಂಪಿ ಪರಿಸರದ ಕುರಿತ ಅಧ್ಯಯನಗಳಿಗೆ ಬಹು ಉಪಯುಕ್ತ ಮಾಹಿತಿಯನ್ನು ನೀಡುವ ಆಕರಗಳೆಂದರೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಇಲಾಖೆಯಿಂದ ಪ್ರಕಟವಾದ *Vijayanagara Progress of Research* ವರದಿಗಳು. ಎಂ.ಎಸ್. ನಾಗರಾಜರಾವ್ ಅವರ 1979-83, 1983-84ರ ಮೊದಲೆರಡು ಸಂಪುಟಗಳು ಹಾಗೂ ಡಿ.ವಿ. ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ್ ಅವರ 1984-87, 1987-88, 1988-91ರ ಮೂರು ವರದಿಗಳು ಹಾಗೂ ಸಿ.ಎಸ್. ವಾಸುದೇವನ್ ಅವರ *Report on the Excavation at Hampi* 1991-2010ರ ವರದಿಗಳು ನನ್ನ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ನೀಡುತ್ತವೆ. ಅಂದರೆ ಹಂಪಿ ಪರಿಸರದ ಉತ್ಖನನದಲ್ಲಿ ಕಂಡುಬಂದಿರುವ ಹಲವು ಅವಶೇಷಗಳ ಜೊತೆಗೆ ಪ್ರಾಣಿಗಳ ಪ್ರಾಚ್ಯಾವಶೇಷಗಳು ಸಹ ಬೆಳಕಿಗೆ ಬಂದಿದ್ದು ಅವುಗಳನ್ನು ನನ್ನ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಈ ಮೇಲಿನ ಎಲ್ಲವೂ ನನ್ನ ಅಧ್ಯಯನಕ್ಕೆ ಪೂರಕವಾದ ಹಂಪಿಯ ಕುರಿತ ಆಂಗ್ಲಭಾಷೆಯ ಕೃತಿಗಳಾಗಿವೆ. ಹಂಪಿಯ ಶಿಲ್ಪಗಳ ಕುರಿತ ಹಲವು ಕನ್ನಡದ ಕೃತಿಗಳಿದ್ದು ಅವುಗಳಲ್ಲಿ ಕೆಲವು ಪೂರಕವಾದ ಕೃತಿಗಳೆಂದರೆ ಚೆಲುವರಾಜು ಅವರ 'ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು' (೨೦೦೨) ಎಂಬ ಕೃತಿಯಲ್ಲಿ ವಿಜಯನಗರ ಕಾಲದಲ್ಲಿ ಪ್ರದರ್ಶಿಸುತ್ತಿದ್ದ ಕೆಲವು ಜನಪದ ಕಲೆಗಳನ್ನು ಹಂಪಿಯ ಶಿಲ್ಪಗಳಲ್ಲಿ ಗುರುತಿಸಿದ್ದು ಜನಪದರ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡಲಾಗಿದೆ. ಇಂತಹ ಜನಪದ ಶಿಲ್ಪಗಳಲ್ಲಿ ಕೆಲವು ಪ್ರಾಣಿಗಳು ಬಳಕೆಯಾಗಿದ್ದು ಅವುಗಳ ಮಹತ್ವವನ್ನು ಅರಿಯಬಹುದು. ಆದರೆ ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಗಳನ್ನು ವಿವಿಧ ದೃಷ್ಟಿಕೋನದಿಂದ ಅಧ್ಯಯನ ಮಾಡುವ ಸಲುವಾಗಿ ಈ ವಿಷಯವನ್ನು ಆಯ್ದುಕೊಳ್ಳಲಾಗಿದೆ.

ಎಸ್. ವೈ. ಸೋಮಶೇಖರ್ ಅವರ 'ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ' (೨೦೦೯) ಎಂಬ ಕೃತಿಯಲ್ಲಿ ವಿಜಯನಗರ ಕಾಲದ ಯುದ್ಧತಂತ್ರಗಳು ಮತ್ತು ಸಿದ್ಧತೆ ಹಾಗೂ ವಿವಿಧ ಸೇನಾಪಡೆಗಳಲ್ಲಿ ಮುಖ್ಯವಾದ ಅಶ್ವದಳ, ಗಜದಳಗಳ ಮಹತ್ವವನ್ನು ವಿವರಿಸಿದ್ದು ಈ ಮಾಹಿತಿಯು ನನ್ನ ಅಧ್ಯಯನಕ್ಕೆ ಪೂರಕವಾಗಿದೆ. ಡಿ. ಹನುಮಂತರಾವ್ ಅವರ *Lepaksi Temple: A Cultural and Architectural Study* (2004) ಎಂಬ ಕೃತಿಯು ಲೇಪಾಕ್ಷಿಯ ವೀರಭದ್ರ ದೇವಾಲಯದ ವಾಸ್ತು, ಶಿಲ್ಪಕಲೆ ಮತ್ತು ಚಿತ್ರಕಲೆಯನ್ನು ಕುರಿತದ್ದಾಗಿದ್ದು ಅಲ್ಲಿನ ಬೃಹತ್ ನಂದಿ, ನಾಗಲಿಂಗ ಮತ್ತು ಅಲ್ಲಿನ ಕಂಬಗಳಲ್ಲಿನ ಶಿಲ್ಪಗಳನ್ನು ವಿವರಿಸಲಾಗಿದೆ. ಹಾಗಾಗಿ ಈ ಕೃತಿಯು ನನ್ನ ಅಧ್ಯಯನ ವಿಷಯಕ್ಕೆ ಪೂರಕವಾಗಿದ್ದು ತೌಲನಿಕ ಅಧ್ಯಯನ ಮಾಡಲು ಸಹಕಾರಿಯಾಗಿದೆ.

ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ (ಸಂ) ಅವರ 'ವಿಜಯನಗರ (ಹಂಪಿಯ) ಶಾಸನಗಳು' ಹಾಗೂ ದೇವರಕೊಂಡಾರೆಡ್ಡಿ (ಸಂ) ಅವರ 'ಹಂಪಿ ಸಂಪುಟ– ಕಲೆ,

ಕ್ರೀಡೆ ಮತ್ತು ಕೌಶಲ' ಎಂಬ ಗ್ರಂಥಗಳಲ್ಲಿನ ಕೆಲವು ಲೇಖನಗಳು ನನ್ನ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತವೆ. 'ವಿಜಯನಗರ ಅಧ್ಯಯನ' ಸಂಪುಟಗಳಲ್ಲಿ ಹಂಪಿ ಪರಿಸರದ ಶಿಲ್ಪಗಳ ಕುರಿತು ಮತ್ತು ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಲೇಖನಗಳು ಪ್ರಕಟವಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಸಿ.ಎಸ್. ವಾಸುದೇವನ್ ಅವರ 'ಹಂಪಿ ಪರಿಸರದ ಮತ್ಸ್ಯಾವತಾರ ಶಿಲ್ಪಗಳು', 'ಹಂಪಿ ಪರಿಸರದ ಕೂರ್ಮಾವತಾರ ಶಿಲ್ಪಗಳು', 'ಹಂಪಿ ಪರಿಸರದ ವರಾಹ ಶಿಲ್ಪಗಳು' ಹಾಗೂ ಟಿ.ಎಂ. ಮಂಜುನಾಥಯ್ಯನವರ 'ವಿಜಯನಗರಪಟ್ಟಣದಲ್ಲಿಯ ಆನೆಯ ಸಾಲೆ', ವಿರೂಪಾಕ್ಷ ಪೂಜಾರಹಳ್ಳಿಯವರ 'ವಿಜಯನಗರ ಕಾಲದ ಬೇಟೆ ಹಬ್ಬ', 'ವಿಜಯನಗರ ಕಾಲದ ವಾಸ್ತುಶಿಲ್ಪದಲ್ಲಿ ಬೇಟೆ ಚಿತ್ರಣ', 'ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ', ಹಾಗೂ ಶಶಿಕಲಾ ರಾ ಇಂಜನಿ ಅವರ 'ಹಂಪಿಯ ಮಹಾನವಮಿ ದಿಬ್ಬದ ಬೇಟೆಗಾರ್ತಿಯರ ಶಿಲ್ಪಗಳು', ಎಚ್. ತಿಪ್ಪೇಸ್ವಾಮಿ ಅವರ 'ವಿಜಯನಗರ ಕೋಟೆಯಲ್ಲಿನ ಕೆಲವು ವಿಶಿಷ್ಟ ಶಿಲ್ಪಗಳು', ಚಿನ್ನಸ್ವಾಮಿ ಸೋಸಲೆಯವರ 'ವಿಜಯನಗರ ಕಾಲದ ಶಿಲ್ಪಕಲೆ ಮತ್ತು ಚಿತ್ರಕಲೆ: ಸಾಂಸ್ಕೃತಿಕ ನೋಟ' ಎಂಬ ಲೇಖನಗಳು ಪ್ರಮುಖವಾಗಿದ್ದು, ಹೀಗೆ ಹಂಪಿ ಪರಿಸರದ ವಿವಿಧ ವಿಷಯಗಳಿಗೆ ಸಂಬಂಧಿಸಿದ ಇನ್ನೂ ಹಲವಾರು ಲೇಖನಗಳು ನನ್ನ ಅಧ್ಯಯನ ವಿಷಯಕ್ಕೆ ಪೂರಕವಾಗಿದ್ದು ಅಂತಹವುಗಳನ್ನು ಬಳಸಿಕೊಳ್ಳಲಾಗಿದೆ.

ದೇವರಾಜ ಸರ್ಕಾರ್ ಹಾ.ಬ., ಮಧ್ಯಸ್ಥ ಎನ್.ಎ, ಷಣ್ಮುಖಮ್ಮ ಎಚ್.ಎಚ್ (ಸಂ), ಅವರ 'ಪ್ರಾಣಿ–ಪಕ್ಷಿ ಸಂಪುಟ' (೨೦೦೬), ಎಚ್.ಎಸ್. ಶ್ರೀಮತಿ (ಸಂ) ಅವರ 'ಜೀವಜಗತ್ತು', ಕೃಷ್ಣಾನಂದ ಕಾಮತ್ ಅವರ 'ಪ್ರಾಣಿ ಪರಿಸರ' (೧೯೭೯), ಕಮಲ ವಿ. ಅವರ 'ಜೀವ ವರ್ಗೀಕರಣ' (೨೦೦೩), ಕತ್ರೆ ಶಕುಂತಲ ಮತ್ತು ರಾಜಾಸಾಬ್ ಎ.ಎಚ್. (ಸಂ) ಅವರ 'ಜೀವಶಾಸ್ತ್ರ' (೧೯೯೫), ಬಾಲಕೃಷ್ಣ ಟಿ.ಎ ಅವರ 'ಪ್ರಾಣಿಶಾಸ್ತ್ರ' (೧೯೯೯), ಸುಮಂಗಳ ಎಸ್. ಮುಮ್ಮಿಗಟ್ಟಿ ಅವರ 'ಪ್ರಾಣಿಗಳು' (೨೦೧೦), ಸುರೇಶ್ ವಿ. ಕುಲಕರ್ಣಿ ಅವರ 'ಸಸ್ತನಿಗಳು', ಹರೀಶ್ ಆರ್.ಭಟ್ ಮತ್ತು ಪ್ರಮೋದ್ ಸುಬ್ಬಾರಾವ್ (ಸಂ) ಅವರ 'ಪಕ್ಷಿ ಪ್ರಪಂಚ', ಹಾಗೆಯೇ ಡೆವಿಡ್ ಬರ್ನಿ ಅವರ *Animal Encyclopedia* (2003), ರಾಬರ್ಟ್ ಡಬ್ಲ್ಯೂ. ಹೆಗ್ನರ್ ಅವರ *Invertebrate Zoology* ಈ ಎಲ್ಲಾ ಗ್ರಂಥಗಳು ಪ್ರಾಣಿಗಳ ಹುಟ್ಟು, ವಿಕಾಸ, ವರ್ಗೀಕರಣ, ಗಣ, ಕುಟುಂಬ, ಅವುಗಳ ವೈಜ್ಞಾನಿಕ ಹೆಸರು ಮುಂತಾದ ವಿಷಯಗಳನ್ನು ಒಳಗೊಂಡಿರುವುದರಿಂದ ಇವು ನನ್ನ ಅಧ್ಯಯನಕ್ಕೆ ಪೂರಕವಾಗಿವೆ.

೧.೨ ಅಧ್ಯಯನದ ಉದ್ದೇಶ

ಹಂಪಿಯು ಪೌರಾಣಿಕ ನೆಲೆಯಾಗಿ, ಪ್ರಾಗಿತಿಹಾಸ ಕಾಲದ ಜನವಸತಿ ನೆಲೆಯಾಗಿದ್ದು, ವಿಜಯನಗರ ಕಾಲದಲ್ಲಿ ಪ್ರಮುಖ ಕಲಾಕೇಂದ್ರವಾಗಿ ವಾಸ್ತು ಮತ್ತು ಶಿಲ್ಪಕಲೆಯಲ್ಲಿ ಭವ್ಯತೆ ಮೆರೆದಿರುವ ಸ್ಥಳವಾಗಿದೆ. ಹಾಗಾಗಿಯೇ ಇದು ವಿಶ್ವಪರಂಪರೆ ಪಟ್ಟಿಯಲ್ಲಿ ಸ್ಥಾನ ಗಳಿಸಿದೆ. ವಿಜಯನಗರದ ಅರಸರು ಧರ್ಮ ಸಮನ್ವಯತೆಯನ್ನು ಕಾಪಾಡಿ ಇಲ್ಲಿ ಸಾವಿರಾರು ದೇವಾಲಯ, ಮಂಟಪಗಳನ್ನು ನಿರ್ಮಿಸಿದ್ದು ಅವುಗಳಲ್ಲಿ ವಿವಿಧ ರೀತಿಯ ಶಿಲ್ಪ ಸಂಪತ್ತನ್ನೇ ಕಂಡರಿಸಲಾಗಿದೆ.

ಪ್ರಸ್ತುತ ಅಧ್ಯಯನವು ಹಂಪಿ ಪರಿಸರದ ಪ್ರಾಣಿ ಶಿಲ್ಪಗಳ ಕುರಿತ ಅಧ್ಯಯನವಾಗಿದ್ದು, ಶಿಲ್ಪಗಳ ಬಗ್ಗೆ ಇದುವರೆಗೆ ನಡೆದಿರುವ ಎಲ್ಲಾ ಅಧ್ಯಯನಗಳ ಒಟ್ಟಾರೆ ಸಮೀಕ್ಷೆಯಿಂದ ಈ ಅಧ್ಯಯನಗಳು

ಒಂದಲ್ಲಾ ಒಂದು ಮಿತಿಯಿಂದ ಕೂಡಿವೆ. ಮತ್ತು ಹೆಚ್ಚಿನ ಅಧ್ಯಯನಗಳಲ್ಲಿ ಧಾರ್ಮಿಕ ಶಿಲ್ಪಗಳನ್ನು ಹೆಚ್ಚಾಗಿ ವಿವರಿಸಿದ್ದು ಲೌಕಿಕ ಶಿಲ್ಪಗಳಲ್ಲಿನ ಪ್ರಾಣಿ ಶಿಲ್ಪಗಳನ್ನು ಕಡೆಗಣಿಸಿರುವುದು ಸ್ಪಷ್ಟವಾಗುತ್ತದೆ. ಅಲ್ಲದೇ ಪ್ರತ್ಯೇಕವಾಗಿ ಪ್ರಾಣಿ ಶಿಲ್ಪಗಳ ಅಧ್ಯಯನ ಮತ್ತು ಶಿಲ್ಪಗಳಲ್ಲಿನ ಪ್ರಾಣಿಗಳ ತಳಿಗಳನ್ನು ಗುರುತಿಸುವ ಕೆಲಸ ನಡೆದೇ ಇಲ್ಲವೆಂದು ಹೇಳಬಹುದು. ಆದ್ದರಿಂದಾಗಿ ಹಂಪಿ ಪರಿಸರದ ಪ್ರಾಣಿ ಶಿಲ್ಪಗಳನ್ನು ಕುರಿತು ವಿವಿಧ ಆಯಾಮಗಳಲ್ಲಿ ಸಮಗ್ರ ಅಧ್ಯಯನ ಮಾಡುವುದು ಮತ್ತು ಶಿಲ್ಪಗಳಲ್ಲಿನ ಪ್ರಾಣಿಗಳ ದೇಹ ಲಕ್ಷಣಗಳ ಆಧಾರದ ಮೇಲೆ ಅವುಗಳ ತಳಿಗಳನ್ನು ಗುರುತಿಸುವ ಹಿನ್ನೆಲೆಯಲ್ಲಿ ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಪ್ರಸ್ತುತ ವಿಷಯವನ್ನು ಅಧ್ಯಯನ ಮಾಡಲು ಹಲವು ಶಾಸನಗಳು ಮತ್ತು ಸಾಹಿತ್ಯಿಕ ಆಕರಗಳು ಸಹಾಯಕವಾಗಿವೆ. ಈ ಆಕರಗಳ ಆಧಾರದ ಮೇಲೆ ಪ್ರಾಣಿಸಂಕುಲವನ್ನು ಕುರಿತಾದ ಹೊಸ ಸಂಗತಿಗಳನ್ನು ಬೆಳಕಿಗೆ ತರುವ ಪ್ರಯತ್ನ ಈ ಅಧ್ಯಯನದ್ದಾಗಿದೆ. ಹಂಪಿ ಪರಿಸರದ ಸ್ಮಾರಕಗಳಲ್ಲಿ ಲೌಕಿಕ ಮತ್ತು ಅಲೌಕಿಕ ಶಿಲ್ಪಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕಂಡರಿಸಲ್ಪಟ್ಟಿದೆ. ಇವುಗಳ ಜೊತೆಯಲ್ಲಿ ಪ್ರಾಣಿ ಶಿಲ್ಪಗಳನ್ನು ಎಷ್ಟರ ಮಟ್ಟಿಗೆ ಕೆತ್ತಲಾಗಿದೆ. ಮತ್ತು ಅವುಗಳ ಸ್ಥಳ ನಿರ್ದೇಶನ, ಸಾಂಕೇತಿಕತೆ, ಶೈಲಿ, ಲಕ್ಷಣ ಮತ್ತು ಸ್ವರೂಪಗಳನ್ನು ವಿವರಿಸುವುದು ಅಲ್ಲದೆ ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಾರಿಗೆ ವ್ಯವಸ್ಥೆ, ಸರಕು ಸಾಗಾಣಿಕೆ, ಕೃಷಿ ಮತ್ತು ಯುದ್ಧದ ಸಂದರ್ಭದಲ್ಲಿ ಪ್ರಾಣಿಗಳು ಯಾವ ರೀತಿ ಬಳಕೆಯಾಗುತ್ತಿದ್ದವು ಎಂಬುದನ್ನು ಮತ್ತು ಸಾಮ್ರಾಜ್ಯದ ಲಾಂಛನಗಳಾಗಿ, ದೇವರ ವಾಹನಗಳಾಗಿ, ವಿನೋದದ ವಸ್ತುಗಳಾಗಿ ಹಾಗೂ ದುಷ್ಟಮರ್ದಕ ಶಿಷ್ಟಪರಿಪಾಲಕ ಶಿಲ್ಪಗಳ ರೂಪಕಗಳಾಗಿ ಕೆಲವು ಪ್ರಾಣಿಗಳು ಬಳಕೆಯಾಗಿದ್ದು ಅವುಗಳ ಮಹತ್ವ ಏನೆಂಬುದನ್ನು ತಿಳಿಸುವ ಉದ್ದೇಶವು ಈ ಅಧ್ಯಯನದ್ದಾಗಿದೆ.

ಜೊತೆಗೆ ಹಂಪಿ ಪರಿಸರದ ಶಿಲ್ಪಗಳಲ್ಲಿನ ಪ್ರಾಣಿಗಳ ಆಕಾರ ಮತ್ತು ದೇಹ ಲಕ್ಷಣಗಳ ಆಧಾರದ ಮೇಲೆ ಆ ಪ್ರಾಣಿಗಳ ವರ್ಗ, ಕುಟುಂಬ ಮತ್ತು ತಳಿಗಳನ್ನು ಗುರುತಿಸುವುದು ಈ ಅಧ್ಯಯನದ ಬಹು ಮುಖ್ಯ ಉದ್ದೇಶವಾಗಿದೆ. ಹಾಗೆಯೇ ಹಂಪಿ ಪರಿಸರದ ಕೆಲವು ಸ್ಮಾರಕಗಳಿಗೂ ಮತ್ತು ಪ್ರಾಣಿಗಳಿಗೂ ಇರುವ ಸಂಬಂಧವನ್ನು ವಿಶ್ಲೇಷಿಸುವುದು. ಅದೇ ರೀತಿ ಹಂಪಿಯ ಉತ್ಖನನಗಳಲ್ಲಿ ಕಂಡುಬಂದಿರುವ ಕೆಲವು ಪ್ರಾಣಿಗಳ ಅವಶೇಷಗಳ ಅಧ್ಯಯನದಿಂದ ಅವು ಯಾವ ಪ್ರಾಣಿ, ಅದರ ವರ್ಗ ಮತ್ತು ಅದರ ವಿಶೇಷತೆ ಏನೆಂಬ ಮುಂತಾದ ವಿಷಯಗಳನ್ನು ತಿಳಿಸುವುದು ಮತ್ತು ಹಂಪಿ ಪರಿಸರದ ಉತ್ಖನನಗಳಲ್ಲಿ ಕಂಡುಬಂದಿರುವ ಹಲವು ಪ್ರಾಣಿ ಅವಶೇಷಗಳಲ್ಲಿ ಬಹುತೇಕ ಸಾಕು ಪ್ರಾಣಿಗಳ ಅವಶೇಷಗಳಾಗಿದ್ದರಿಂದ ಈ ಪರಿಸರದಲ್ಲಿ ಪಶುಪಾಲಕ ವರ್ಗದವರು ಹೆಚ್ಚಾಗಿದ್ದರು ಎಂಬುದನ್ನು ತಿಳಿಸುವುದು ಈ ಅಧ್ಯಯನದ ಮತ್ತೊಂದು ಪ್ರಮುಖ ಉದ್ದೇಶವಾಗಿದೆ. ಹಂಪಿ ಪರಿಸರದಲ್ಲಿ ದೇಶಿಯ ಪ್ರಾಣಿಗಳ ಜೊತೆಗೆ ಹಲವು ವಿದೇಶಿ ಪ್ರಾಣಿಶಿಲ್ಪಗಳು ಕಂಡುಬಂದಿದ್ದು ಅವುಗಳನ್ನು ಗುರುತಿಸಲಾಗುವುದು. ಹಂಪಿ ಪರಿಸರದಲ್ಲಿ ನಡೆಯುತ್ತಿದ್ದ ಮಹೋತ್ಸವಗಳಲ್ಲಿ ಪ್ರಾಣಿಗಳ ಮೆರವಣಿಗೆಯ ದೃಶ್ಯಗಳು ಮನೋಹರವಾಗಿದ್ದು ಅವುಗಳ ಪಾತ್ರ ಮತ್ತು ಮಹತ್ವವನ್ನು ಪ್ರಸ್ತುತ ಅಧ್ಯಯನದಲ್ಲಿ ತಿಳಿಯಪಡಿಸುವುದಾಗಿದೆ. ಹಂಪಿ ಪರಿಸರದಲ್ಲಿನ ಶಿಲ್ಪಗಳ ಕುರಿತು ಕೆಲವು ಅಧ್ಯಯನಗಳು

ನಡೆದಿವೆಯಾದರೂ ಪ್ರಾಣಿ ಶಿಲ್ಪಗಳ ಸಮಗ್ರ ಅಧ್ಯಯನಗಳು ಇದುವರೆಗೂ ನಡೆಯದಿರುವುದೂ ಸಹ ಈ ಅಧ್ಯಾಯವನ್ನು ಕೈಗೊಳ್ಳಲು ಮುಖ್ಯ ಉದ್ದೇಶವಾಯಿತು.

೧.೩ ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಅಧ್ಯಯನ ಮಾಡಬೇಕಾದರೆ ವ್ಯಾಪ್ತಿ ತುಂಬಾ ಮುಖ್ಯವಾದುದು. ಪ್ರಸ್ತುತ ಅಧ್ಯಯನವನ್ನು ಸಹ ಒಂದು ನಿರ್ದಿಷ್ಟ ಭೌಗೋಳಿಕ ಹಾಗೂ ವಿಷಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಪ್ರಸ್ತುತ ಅಧ್ಯಯನದ ಭೌಗೋಳಿಕ ವ್ಯಾಪ್ತಿಯನ್ನು ಹಂಪಿ ಪರಿಸರ ಎಂದು ಸೂಚಿಸಲಾಗಿದೆ. ಅಂದರೆ ಹಂಪಿ ವಿಶ್ವಪರಂಪರೆ ತಾಣವೆಂದು ಘೋಷಿಸಿರುವ ೨೪೨.೯೧ ಚ. ಕಿಲೋಮೀಟರ್ ಪ್ರದೇಶವು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿದೆ. ಈ ನಿರ್ದಿಷ್ಟ ಪ್ರದೇಶವು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹಂಪಿ, ಕಮಲಾಪುರ, ಕಡ್ಡಿರಾಂಪುರ, ಮಲಪನಗುಡಿ, ಕೊಂಡನಾಯಕನಹಳ್ಳಿ, ನಾಗೇನಹಳ್ಳಿ, ಕಾಳಘಟ್ಟ, ಗುಡಿಓಬಳಾಪುರ, ಡಣಾಪುರ, ಸಿಂಗನಾಥನಹಳ್ಳಿ, ಕೃಷ್ಣಾಪುರ, ನಿಂಬಾಪುರ, ವೆಂಕಟಾಪುರ ಮತ್ತು ಬುಕ್ಕಸಾಗರ ಈ ೧೪ ಗ್ರಾಮಗಳು ಹಾಗೂ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ, ಚಿಕ್ಕರಾಂಪುರ, ವಿರುಪಾಪುರಗಡ್ಡೆ, ಹನುಮನಹಳ್ಳಿ, ಸಣಾಪುರ, ತಿರುಮಲಾಪುರ, ರಂಗಾಪುರ, ಅಂಜನಹಳ್ಳಿ, ಕೃಷ್ಣಾಪುರ, ಲಕ್ಷ್ಮೀಪುರ, ಮಲ್ಲಾಪುರ, ರಾಂಪುರ, ಸಿಂಗನಗೊಂಡ, ರಾಮದುರ್ಗ ಮತ್ತು ಬಸವನದುರ್ಗ, ಈ ಗ್ರಾಮಗಳು ಸೇರಿ ಒಟ್ಟು ೨೯ ಹಳ್ಳಿಗಳನ್ನು ಒಳಗೊಂಡಿದುದಾಗಿದೆ.

ಈ ಗ್ರಾಮಗಳಲ್ಲದೇ ಈ ಪರಿಸರದಲ್ಲಿನ ಹೊಸಪೇಟೆ ತಾಲೂಕಿಗೆ ಸೇರುವ ಅನಂತಶಯನಗುಡಿ, ಜಂಬುನಾಥೇಶ್ವರ ದೇವಾಲಯ, ತಿಮ್ಮಲಾಪುರದ ದೇವಾಲಯಗಳು (ಮರಿಯಮ್ಮನಹಳ್ಳಿಯ ಸಮೀಪ) ಹಾಗೂ ಹಂಪಿಯಲ್ಲಿನ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆಯ ವಸ್ತುಸಂಗ್ರಹಾಲಯ ಮತ್ತು ಕಮಲಾಪುರದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವಸ್ತುಸಂಗ್ರಹಾಲಯಗಳಲ್ಲಿರುವ ಪ್ರಾಣಿ ಶಿಲ್ಪಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಹಾಗೆಯೇ ಈ ಅಧ್ಯಯನಕ್ಕೆ ಕಾಲ ಮತ್ತು ಮಾಧ್ಯಮದ ಹಿನ್ನೆಲೆಯಲ್ಲಿಯೂ ಕೆಲವೊಂದು ಮಿತಿಗಳನ್ನು ಹಾಕಿಕೊಳ್ಳಲಾಗಿದೆ. ಇತಿಹಾಸ ಆರಂಭ ಕಾಲದಿಂದಲೂ ವಿಜಯನಗರ ಕಾಲದವರೆಗಿನ ಶಿಲೆ, ಲೋಹ ಮತ್ತು ಗಾರೆಯ ಮಾಧ್ಯಮಗಳನ್ನು ಬಳಸಿ, ಕೆತ್ತಲ್ಪಟ್ಟಿರುವ ಹಲವು ಪ್ರಾಣಿ ಶಿಲ್ಪಗಳನ್ನು ಬಳಸಿ-ಕೊಳ್ಳಲಾಗಿದ್ದರೂ ಹಂಪಿ ಪರಿಸರದ ದೇವಾಲಯಗಳಲ್ಲಿ ಶಿಲೆಯಿಂದ ರಚಿತವಾದ ಶಿಲ್ಪಗಳಿಗೆ ಹೆಚ್ಚು ಆದ್ಯತೆಯನ್ನು ಕೊಡಲಾಗಿದೆ.

೧.೪ ಅಧ್ಯಯನದ ವಿಧಾನ

ಯಾವುದೇ ಒಂದು ಸಂಶೋಧನ ಪ್ರಬಂದವನ್ನು ರಚಿಸುವಲ್ಲಿ ಪೂರ್ವಯೋಜಿತ ಅಧ್ಯಯನ ಕ್ರಮವನ್ನು ಅನುಸರಿಸುವುದು ಅತಿ ಮುಖ್ಯ ಇದು ಆ ಅಧ್ಯಯನವನ್ನು ವ್ಯವಸ್ಥಿತವಾಗಿ ಮತ್ತು ಸುಸೂತ್ರವಾಗಿ ಕಟ್ಟಿಕೊಡಲು ಸಹಾಯವಾಗುತ್ತದೆ. ಸಂಶೋಧನ ಪ್ರಬಂಧಕ್ಕೆ ಪ್ರಥಮ ಹಾಗೂ ಅಂತಿಮ ರೂಪವನ್ನು ಈ ಅಧ್ಯಯನ ಕ್ರಮವೇ ನೀಡುತ್ತದೆ ಎಂದು ಹೇಳಬಹುದು. ಪ್ರಸ್ತುತ ಅಧ್ಯಯನವು ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ ಎಂಬ ಶೀರ್ಷಿಕೆಯನ್ನು ಹೊಂದಿದ್ದು ಈ ಮುಂದಿನ ಅಧ್ಯಯನ ಕ್ರಮವನ್ನು ಅನುಸರಿಸಲಾಗಿದೆ.

ಮೊದಲಿಗೆ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಗ್ರಂಥಸೂಚಿಯನ್ನು ತಯಾರಿಸಿ ಆಕಾರಾದಿಯಾಗಿ ಜೋಡಿಸಿಕೊಳ್ಳಲಾಯಿತು. ಪ್ರಸ್ತುತ ಅಧ್ಯಯನ ವಿಷಯಕ್ಕೆ ಹಂಪಿ ಪರಿಸರದ ಕ್ಷೇತ್ರಕಾರ್ಯದಲ್ಲಿ ದೊರೆಯುವ ಶಿಲ್ಪಗಳೇ ಪ್ರಾಥಮಿಕ ಆಕರಗಳಾಗಿದ್ದು, ವ್ಯವಸ್ಥಿತವಾದ ಪೂರ್ವಯೋಜಿತ ವಿಧಾನವನ್ನು ಅನುಸರಿಸಿ ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು. ಇಲ್ಲಿ ಅನುಸರಿಸಿದ ವಿಧಾನವೆಂದರೆ ಹಂಪಿಯಲ್ಲಿರುವ ಪ್ರಮುಖ ಸ್ಮಾರಕಗಳ ತಲನಕ್ಷೆ ಸಂಗ್ರಹಿಸಿ ಹಾಗೂ ಅಗತ್ಯವಿದ್ದಲ್ಲಿ ತಯಾರಿಸಿಕೊಂಡು ಒಂದು ಸ್ಮಾರಕದಲ್ಲಿ ಕ್ರಮವಾಗಿ ಅಧಿಷ್ಠಾನ, ಭಿತ್ತಿ, ಕಪೋತ ಮತ್ತು ಶಿಖರದಲ್ಲಿನ ಶಿಲ್ಪಗಳನ್ನು ದಿಕ್ಕುಗಳ ಪ್ರಕಾರ ಛಾಯಾಚಿತ್ರ ತೆಗೆದುಕೊಳ್ಳಲಾಯಿತು. ದೇವಾಲಯಗಳ ನವರಂಗ, ಮುಖಮಂಟಪ, ಕಲ್ಯಾಣಮಂಟಪ, ಸಂಗೀತ ಮಂಟಪ, ಉತ್ಸವ ಮಂಟಪ, ಪ್ರಾಕಾರ ಮಂಟಪ ಮುಂತಾದವುಗಳಲ್ಲಿರುವ ಕಂಬಗಳಿಗೆ ಪೂರ್ವದಿಂದ ಪಶ್ಚಿಮಕ್ಕೆ ಬರುವಂತೆ ಸಂಖ್ಯೆಗಳನ್ನು ನೀಡಿ, ಕಂಬದ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕಿನ ಭಾಗಗಳನ್ನು ಸುತ್ತಿ ಅಂದರೆ ಗಡಿಯಾರದ ಮುಳ್ಳು ತಿರುಗುವ ಮಾದರಿಯನ್ನು ಅಳವಡಿಸಿ ಅಲ್ಲಿನ ಎಲ್ಲಾ ಪ್ರಾಣಿಶಿಲ್ಪಗಳ ಛಾಯಾಚಿತ್ರ ಮಾಡಿಕೊಂಡು ಸಂಗ್ರಹಿಸಿಕೊಳ್ಳಲಾಯಿತು. ನಂತರ ಸಂಗ್ರಹಿಸಿದ ಛಾಯಾಚಿತ್ರಗಳನ್ನು ವಿಷಯಕ್ಕೆ ಅನುಗುಣವಾಗಿ ಗಣಕಯಂತ್ರದ ಸಹಾಯದಿಂದ ವಿಂಗಡಿಸಿ ಒಂದೆಡೆ ಕ್ರೋಢೀಕರಿಸಿಕೊಂಡು ಅವುಗಳ ವಿವರಗಳನ್ನು ಈ ಅಧ್ಯಯನದಲ್ಲಿ ನೀಡಲಾಗಿದೆ. ಈ ವಿಧಾನಗಳನ್ನು ಅನುಸರಿಸುವ ಮೂಲಕ ಶಿಲ್ಪಗಳ ನಿಖರವಾದ ಸ್ಥಳ ನಿರ್ದೇಶನದ ಮಾಹಿತಿ ನೀಡಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. ಇದರ ಜೊತೆಗೆ ಅಗತ್ಯವಾದ ಆನುಷಂಗಿಕ ಆಕರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೧.೫ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ಒಟ್ಟು ಆರು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದು, ಅದರ ಸ್ವರೂಪ ಈ ಕೆಳಗಿನಂತಿದೆ.

ಮೊದಲನೆಯ ಅಧ್ಯಾಯವು ಪ್ರಸ್ತಾವನೆಯಾಗಿದ್ದು ಅಧ್ಯಯನದ ಉದ್ದೇಶ, ವ್ಯಾಪ್ತಿ, ಇದುವರೆಗಿನ ಅಧ್ಯಯನಗಳ ಸಮೀಕ್ಷೆ ಮತ್ತು ಅಧ್ಯಯನ ವಿಧಾನವನ್ನು ಒಳಗೊಂಡಿದೆ. ಈ ಅಧ್ಯಾಯದಲ್ಲಿ ಶಿಲ್ಪದ ಅರ್ಥ, ಶಿಲ್ಪಗಳ ಪ್ರಾಚೀನತೆ, ಮಾಧ್ಯಮ ಮತ್ತು ಶಿಲ್ಪಗಳ ಬಗ್ಗೆ ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯ ವಿವರಣೆಗಳನ್ನು ತಿಳಿಸಲಾಗಿದೆ.

ಎರಡನೆಯ ಅಧ್ಯಾಯವು ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯಾಗಿದ್ದು ಇದರಲ್ಲಿ ಹಂಪಿ ಪರಿಸರದ ಭೌಗೋಳಿಕತೆ, ಪ್ರಾಗಿತಿಹಾಸ, ಪೌರಾಣಿಕ ಹಿನ್ನೆಲೆ ಮತ್ತು ವಿಜಯನಗರ ಸಾಮ್ರಾಜ್ಯದ ಚಾರಿತ್ರಿಕ ಹಿನ್ನೆಲೆ ಹಾಗೂ ಶಿಲ್ಪಗಳ ಚಾರಿತ್ರಿಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯವು ಪ್ರಾಣಿಗಳ ಪರಿಚಯದ ಕುರಿತಾಗಿದ್ದು, ಇದರಲ್ಲಿ ಪ್ರಾಣಿಗಳ ಉಗಮ, ವಿಕಾಸವನ್ನು ತಿಳಿಸುವುದರ ಜೊತೆಗೆ ಒಟ್ಟಾರೆ ಪ್ರಾಣಿ ಸಾಮ್ರಾಜ್ಯವನ್ನು ಅಕಶೇರುಕಗಳು (ಬೆನ್ನೆಲುಬು ಇಲ್ಲದಿರುವ) ಮತ್ತು ಕಶೇರುಕಗಳು (ಬೆನ್ನೆಲುಬು ಇರುವ) ಎಂದು ಎರಡು ವರ್ಗಗಳಾಗಿ ವಿಂಗಡಿಸಿ

ಅಧ್ಯಯನ ಮಾಡಲಾಗಿದೆ. ಅಕಶೇರುಕಗಳಲ್ಲಿ ಮತ್ತೇ ಕುಟುಕು ಕಣವಂತಗಳು, ಚಪ್ಪಟೆ ಹುಳುಗಳು, ದುಂಡು ಹುಳುಗಳು, ವಲಯವಂತಗಳು, ಸಂಧಿಪದಿಗಳು, ಮೃದ್ವಂಗಿಗಳು ಮತ್ತು ಕಂಟಕಚರ್ಮಿಗಳು ಎಂಬುದಾಗಿ ಹಾಗೂ ಕಶೇರುಕಗಳಲ್ಲಿ ಮೀನುಗಳು, ಉಭಯವಾಸಿಗಳು, ಸರಿಸೃಪಗಳು, ಪಕ್ಷಿಗಳು ಮತ್ತು ಸಸ್ತನಿಗಳು ಎಂಬುದಾಗಿ ವರ್ಗೀಕರಿಸಲಾಗಿದ್ದು ಇವುಗಳಲ್ಲಿ ಬರುವ ಎಲ್ಲಾ ಪ್ರಾಣಿ ಪಕ್ಷಿಗಳ ವರ್ಗ, ಕುಟುಂಬ, ಜಾತಿ (ತಳಿ), ಅವುಗಳ ವೈಜ್ಞಾನಿಕ ಹೆಸರು, ಸಾಮಾನ್ಯ ಹೆಸರು ಮತ್ತು ಅವುಗಳ ಗುಣಲಕ್ಷಣಗಳ ಸಂಕ್ಷಿಪ್ತ ವಿವರಗಳನ್ನು ಈ ಅಧ್ಯಾಯವು ಒಳಗೊಂಡಿದೆ.

ಹಂಪಿ ಪರಿಸರದ ಪ್ರಾಣಿ ಶಿಲ್ಪಗಳ ವಿಶ್ಲೇಷಣೆ ಎಂಬುದು ಪ್ರಸ್ತುತ ಅಧ್ಯಯನದ **ನಾಲ್ಕನೆಯ** ಮತ್ತು ಪ್ರಮುಖ **ಅಧ್ಯಾಯವಾಗಿದೆ**. ಇದು ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಿದ್ದು ಹಂಪಿ ಪರಿಸರದ ಸ್ಮಾರಕಗಳಲ್ಲಿನ ಒಟ್ಟಾರೆ ಶಿಲ್ಪಗಳನ್ನು ಅಂದರೆ ಧಾರ್ಮಿಕ ಶಿಲ್ಪಗಳಲ್ಲಿ ಪ್ರಾಣಿ ಶಿಲ್ಪಗಳು, ಧಾರ್ಮಿಕೇತರ ಶಿಲ್ಪಗಳಲ್ಲಿ ಪ್ರಾಣಿ ಶಿಲ್ಪಗಳು ಹಾಗೂ ಪ್ರಾಣಿಗಳ ಬಿಡಿ ಶಿಲ್ಪಗಳು ಎಂದು ವಿಂಗಡಿಸಿ ಅವುಗಳ ಪಾತ್ರ, ಮಹತ್ವವನ್ನು ತಿಳಿಸಲಾಗಿದೆ. ಜೊತೆಗೆ ಶಿಲ್ಪಗಳಲ್ಲಿನ ಪ್ರಾಣಿಗಳ ದೇಹ ಲಕ್ಷಣಗಳ ಆಧಾರದ ಮೇಲೆ ಅವುಗಳ ತಳಿಗಳನ್ನು ಗುರುತಿಸಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಕಾಲ್ಪನಿಕ ಪ್ರಾಣಿಶಿಲ್ಪಗಳು ಎಂಬುದು **ಐದನೆಯ ಅಧ್ಯಾಯವಾಗಿದ್ದು**, ಇದರಲ್ಲಿ ಹಂಪಿ ಪರಿಸರದ ಸ್ಮಾರಕಗಳಲ್ಲಿ ಕಂಡುಬರುವ ಹಲವು ಕಾಲ್ಪನಿಕ ಶಿಲ್ಪಗಳನ್ನು ವಿವರಿಸಲಾಗಿದೆ. ಹಾಗೆಯೇ ದೇವಾಲಯಗಳಲ್ಲಿ ಈ ಶಿಲ್ಪಗಳ ರಚನೆಯ ಉದ್ದೇಶ, ಸ್ಥಳ ನಿರ್ದೇಶನ ಮುಂತಾದ ವಿವರಣೆಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

ಆರನೆಯ ಅಧ್ಯಾಯ ಸಮಾರೋಪವಾಗಿದ್ದು ಇದು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳ ಸಂಕ್ಷೇಪ್ತ ರೂಪವಾಗಿದೆ. ಕೊನೆಯಲ್ಲಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಅನುಬಂಧದಲ್ಲಿ ಗ್ರಂಥಋಣ, ಜೀವ ವರ್ಗೀಕರಣ ಕೊಷ್ಟಕಗಳು ಮತ್ತು ನಕ್ಷೆಗಳನ್ನು ನೀಡಲಾಗಿದೆ.

ಕೊನೆ ಟಿಪ್ಪಣಿಗಳು

೦೧. ಕನ್ನಡ ವಿಷಯ ವಿಶ್ವಕೋಶ, "ಇತಿಹಾಸ ಮತ್ತು ಪುರಾತತ್ವ", ೨೦೦೯, ಪು. ೧೦೧೨-೧೨೨೪.

೦೨. ಇರ್ಫಾನ್ ಹಬೀಬ್., ೨೦೧೧, "ಸಿಂಧೂ ನಾಗರೀಕತೆ", ಪು. ೯೫-೯೭.

೦೩. ರಾಮಚಂದ್ರರಾವ್ ಎಸ್. ಕೆ., ೧೯೯೪, "ಸಂಪ್ರದಾಯ ಶಿಲ್ಪಕಲೆ", ತಿಪ್ಪೇಸ್ವಾಮಿ ಪಿ.ಆರ್. (ಸಂ), ಶಿಲ್ಪಕಲಾ ಪ್ರಪಂಚ, ಪು. ೩೫.

೦೪. ಜ್ಞಾನಾನಂದ ಜಿ., ೧೯೯೭, "ಶ್ರೀಕಾಶ್ಯಪ ಶಿಲ್ಪಶಾಸ್ತ್ರಂ" (ಉತ್ತರಾರ್ಧ), ಪು. Xiii.

೦೫. ಜ್ಞಾನಾನಂದ ಜಿ., ೨೦೦೨, "ಶಿಲ್ಪಾದರ್ಶ", ಸಂ.೨, ಪು. ೧.

೦೬. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೩, "ಹಂಪಿಯ ಶಾಸನಗಳು", ಶಾ.ಸಂ.೧೪೫.

೦೭. ಅದೇ, ಶಾ.ಸಂ. ೩೫೦.

೦೮. ಅದೇ, ಶಾ.ಸಂ. ೬೯.

೦೯. ಅದೇ, ಶಾ.ಸಂ. ೩೨೭.

೧೦. ಅದೇ, ಪು. xxxvii-xxxviii.

೧೧. ಅದೇ, ಶಾ.ಸಂ. ೩೧೧.

೧೨. ಅದೇ, ಶಾ.ಸಂ. ೩೯೮.

೧೩. ಅದೇ, ಶಾ.ಸಂ. ೩೪.

೧೪. ಅದೇ, ಶಾ.ಸಂ. ೭೩.

೧೫. ಅದೇ, ಶಾ.ಸಂ. ೮೧.

೧೬. ಅದೇ, ಶಾ.ಸಂ. ೧೩೨.

೧೭. ಅದೇ, ಶಾ.ಸಂ. ೩೨೬.

ಅಧ್ಯಾಯ : ಎರಡು

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ



ಅಧ್ಯಾಯ

೨ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಯಾವುದೇ ಒಂದು ಪ್ರದೇಶದ ಚರಿತ್ರೆ ಅಥವಾ ಬೆಳವಣಿಗೆಯು ಹೆಚ್ಚು ಅವಲಂಬಿತವಾಗಿರುವುದು ಅಲ್ಲಿನ ಭೌಗೋಳಿಕ ಪರಿಸರದ ಮೇಲೆಯೇ ಎಂಬುದು ತಿಳಿದಿರುವ ವಿಷಯವಾಗಿದೆ. ಒಂದು ಪ್ರದೇಶದ ಅಭಿವೃದ್ಧಿ ಅಥವಾ ವಿಕಸನದಲ್ಲಿ ಭೌಗೋಳಿಕ ಅಂಶಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಬೆಟ್ಟುಗುಡ್ಡ, ನದಿ, ತೊರೆ, ಕಣಿವೆ, ತೀರ ಪ್ರದೇಶ, ಸಸ್ಯ ಮತ್ತು ಪ್ರಾಣಿಸಂಪತ್ತು, ಮಣ್ಣು ಹಾಗೂ ಖನಿಜ ಸಂಪನ್ಮೂಲಗಳು ಈ ನಿಟ್ಟಿನಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಆದಿ ಕಾಲದಿಂದಲೂ ಮಾನವ ನದಿ, ಹಳ್ಳ-ಕೊಳ್ಳ, ಬೆಟ್ಟಗುಡ್ಡ ಮುಂತಾದ ಪ್ರಾಕೃತಿಕ ಸಂಪನ್ಮೂಲಗಳು ಹೇರಳವಾಗಿ ದೊರೆಯುವ ಪ್ರದೇಶದಲ್ಲಿ ವಾಸಿಸಿ ವಿಕಾಸ ಹೊಂದಿರುವುದು ತಿಳಿದುಬಂದಿದೆ. ಒಂದು ಪ್ರದೇಶದ ಸಂಸ್ಕೃತಿಯ ಬೆಳವಣಿಗೆಗೆ ಮತ್ತು ರಕ್ಷಣೆಗೆ ಅಲ್ಲಿನ ಭೌಗೋಳಿಕ ವಾತಾವರಣವು ಪ್ರಮುಖ ಪಾತ್ರವಹಿಸುತ್ತದೆ. ಪ್ರಸ್ತುತ ಅಧ್ಯಯನ ವಿಷಯದ ಕ್ಷೇತ್ರವು ತುಂಗಭದ್ರಾ ನದಿದಂಡೆಯ ಮೇಲೆ ಜನ್ಮ ತಳೆದು ಉತ್ತುಂಗ ಮಟ್ಟವನ್ನೇರಿ, ಕೊನೆಗೆ ಅವನತಿಯ ದಾರಿಹಿಡಿದ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ರಾಜಧಾನಿ ಹಂಪಿಯ ಪರಿಸರವನ್ನು ಕುರಿತದ್ದಾಗಿದೆ. ಆದ್ದರಿಂದ ಈ ಪರಿಸರದ ಭೌಗೋಳಿಕ ವಾತಾವರಣವನ್ನು ತಿಳಿಯುವುದು ಅವಶ್ಯಕವಾಗಿದೆ.

೨.೧. ಭೌಗೋಳಿಕ ಹಿನ್ನೆಲೆ

ಹಂಪಿ ಪರಿಸರವು ಪ್ರಸ್ತುತ ಅಧ್ಯಯನದ ಆಯ್ಕೆಯ ಪ್ರದೇಶವಾಗಿದ್ದು, ಆಡಳಿತಾತ್ಮಕವಾಗಿ ಎರಡು ಪ್ರತ್ಯೇಕ ಜಿಲ್ಲೆ (ಕೊಪ್ಪಳ ಮತ್ತು ಬಳ್ಳಾರಿ)ಗಳಿಗೆ ಸೇರುತ್ತದೆ. ಈ ಎರಡು ಜಿಲ್ಲೆಗಳನ್ನು ತುಂಗಭದ್ರಾ ನದಿ ಪ್ರತ್ಯೇಕಿಸಿದ್ದು, ಗಡಿಯಾಗಿ ಪ್ರಾಮುಖ್ಯತೆಯನ್ನು ಹೊಂದಿದೆ. ಆದರೆ ಭೌಗೋಳಿಕವಾಗಿ ಈ ಪ್ರದೇಶಗಳು ಏಕ ಪ್ರಕಾರವಾಗಿವೆ. ವಿಶ್ವ ಪರಂಪರಾ ಪ್ರದೇಶವಾದ ಹಂಪಿಯು ಭೌಗೋಳಿಕ, ಪ್ರಾಗಿತಿಹಾಸ, ಪೌರಾಣಿಕ ಹಾಗೂ ಚಾರಿತ್ರಿಕವಾಗಿ ಪ್ರಸಿದ್ಧಿಯನ್ನು ಪಡೆದ ಒಂದು ಪ್ರಮುಖ ಪ್ರವಾಸಿ ಕೇಂದ್ರ. ಈ ಭೂಭಾಗವು ಸಮುದ್ರ ಮಟ್ಟದಿಂದ (*MSL*) ೨೩೫೯ ಅಡಿ ಎತ್ತರದಲ್ಲಿದೆ.[೧] ಈ ಪ್ರದೇಶವು ಬೆಟ್ಟಗುಡ್ಡಗಳು, ಫಲವತ್ತಾದ ನೆಲ, ಸಮೃದ್ಧ ಜಲ, ವೈವಿಧ್ಯ ವೃಕ್ಷರಾಶಿ ಹಾಗೂ ಪ್ರಾಣಿಸಂಪತ್ತಿನಿಂದ ಕೂಡಿದ ಆಯಕಟ್ಟಿನ

ಪ್ರದೇಶವಾಗಿ ಸಾಮ್ರಾಜ್ಯಕ್ಕೆ ಬೇಕಾದ ರಕ್ಷಣೆಯ ಭೌಗೋಳಿಕ ನೆಲೆಗಳನ್ನು ಒದಗಿಸಿತೋ ಹಾಗೆಯೇ ಅನೇಕ ಜೀವಸಂಕುಲಗಳಿಗೆ ತಕ್ಕದಾದ ವಾತಾವರಣವನ್ನು ನೀಡಿದೆ.[೨]

ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿಗೆ ಸೇರಿದ ಹಂಪಿಯು ೧೫.೩೩° ಉತ್ತರ ಅಕ್ಷಾಂಶ ಮತ್ತು ೭೬.೪೬° ಪೂರ್ವ ರೇಖಾಂಶಗಳ ನಡುವೆ ಇದೆ.[೩] ಇದರ ಪೂರ್ವಕ್ಕೆ ಬಳ್ಳಾರಿ ಜಿಲ್ಲೆ, ಪಶ್ಚಿಮಕ್ಕೆ ದಾವಣಗೆರೆ, ಗದಗ, ದಕ್ಷಿಣಕ್ಕೆ ಚಿತ್ರದುರ್ಗ, ಉತ್ತರಕ್ಕೆ ಕೊಪ್ಪಳ ಜಿಲ್ಲೆಗಳು ಗಡಿಗಳಾಗಿವೆ.[೪] ಹಂಪಿ ಪರಿಸರದ ೨೯ ಹಳ್ಳಿಗಳನ್ನು ಯುನೆಸ್ಕೊ ಹಂಪಿ ವಿಶ್ವ ಪರಂಪರೆ ತಾಣವೆಂದು ಘೋಷಿಸಿದ್ದು ೨೪೨.೯೧ ಚ. ಕಿಲೋಮೀಟರ್ ಪ್ರದೇಶವನ್ನು ಪ್ರಸ್ತುತ ಅಧ್ಯಯನದ ವಿಷಯಕ್ಕೆ ಒಳಪಡಿಸಲಾಗಿದೆ.[೫]

ಬೆಟ್ಟಗುಡ್ಡಗಳು: ಹಂಪಿ ಪ್ರದೇಶವು ಬಹುಮಟ್ಟಿಗೆ ಬೆಟ್ಟಗುಡ್ಡಗಳಿಂದ ಆವೃತ್ತವಾಗಿದ್ದು ದುರ್ಗಮ ಪ್ರದೇಶವಾಗಿದೆ. ಪ್ರಾಚೀನ ಕಾಲದಿಂದಲೂ ಹಿಂದೂ ಸಂಸ್ಕೃತಿಯಲ್ಲಿ 'ಸಪ್ತ' ಸಂಖ್ಯೆಗೆ ವಿಶಿಷ್ಟ ಸ್ಥಾನ ನೀಡಲಾಗಿದೆ. ಈ ಸಪ್ತದ ಸ್ವರೂಪವನ್ನು ಇಲ್ಲೇಕೆ ಪ್ರಸ್ಥಾಪಿಸಲಾಯಿತೆಂದರೆ ಹಂಪಿ ಪ್ರದೇಶದಲ್ಲಿ ಹೇಮಕೂಟ, ಸುಗ್ರೀವ, ಜಾಂಬವಂತ, ಋಷ್ಯಶೃಂಗ, ಅಂಜನೀ, ಮಾಲ್ಯವಂತ, ಮಾತಂಗ ಎಂಬ ಸಪ್ತ ಪರ್ವತಗಳು ಪವಿತ್ರ ಸ್ಥಾನ ಪಡೆದಿರುವುದನ್ನು ಇಂದಿಗೂ ಕಾಣಬಹುದಾಗಿದೆ.[೬] ಇವುಗಳಲ್ಲದೆ ಸೋಮಪರ್ವತ, ವಾಣಿಭದ್ರೇಶ್ವರ ಪರ್ವತ, ಮೊಸಳಯ್ಯನ ಗುಡ್ಡಗಳು ಇಲ್ಲಿ ಕಂಡುಬರುತ್ತವೆ.

ಬೃಹದಾಕಾರದ ದೊಡ್ಡ ದೊಡ್ಡ ಬಂಡೆಗಳಿಂದ ಕೂಡಿದ ಇಲ್ಲಿನ ಬೆಟ್ಟದ ಸಾಲುಗಳು ಮತ್ತು ಕಣಿವೆಗಳು ಪ್ರಾಕೃತಿಕ ಕೋಟೆಗಳಂತಿದ್ದು ಈ ಪ್ರದೇಶದ ರಕ್ಷಣೆಗೆ ಮತ್ತು ಬೆಳವಣಿಗೆ ಹಿನ್ನೆಲೆಯಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಬೆಟ್ಟ ಸಾಲುಗಳು ಪ್ರಧಾನವಾಗಿ ಕಣಶಿಲೆಯ ರಚನೆಗಳಾಗಿವೆ. ಅಲ್ಲಲ್ಲಿ ಕಪ್ಪುಶಿಲೆಯ ಶ್ರೇಣಿಗಳನ್ನು (ಟ್ರಾಪ್ ಶಿಲೆಗಳ ಉಬ್ಬು) ಕಾಣಬಹುದು.[೭]

ಮಣ್ಣು, ಶಿಲೆ, ಖನಿಜ, ಸಸ್ಯಗಳು: ಹಂಪಿ ಪರಿಸರದ ಬೆಟ್ಟಗುಡ್ಡಗಳ ಮಧ್ಯೆ ಅಲ್ಲಲ್ಲಿ ಫಲವತ್ತಾದ ಮತ್ತು ಕೃಷಿಗೆ ಯೋಗ್ಯವಾದ ಕಪ್ಪು (ಎರೆ) ಮಣ್ಣಿನ ಭೂಮಿಯಿದೆ. ಕೆಂಪು ಮರಳುಮಿಶ್ರಿತ ಕೆಂಪು ಭೂಮಿಯೂ ಸಹ ಅಲ್ಲಲ್ಲಿ ಕಂಡುಬರುತ್ತದೆ. ತುಂಗಭದ್ರಾ ನದಿಯ ತೀರಪ್ರದೇಶದಲ್ಲಿ ಮರಳುಮಿಶ್ರಿತ ಕೆಂಪು ಜೇಡಿ (ಕೆಸರು ಮಣ್ಣು) ಮಣ್ಣನ್ನು ಕಾಣಬಹುದು.[೮] ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಕ್ರಿಸ್ಟಸ್, ಲೈನ್‌ಸಿಸ್ಟ್ (ಸ್ಪಟಿಕಾತ್ಮಕ ಪದರು ಶಿಲೆ) ಎಪಿಡಿಯೋರಾಯಿಟ್ಟ ಗ್ರಾನೈಟ್ (ಜಂಬಿಟ್ಟಿಗೆ) ಮತ್ತು ಶಿಲಾಪದರುಗಳಿಂದ ಕೂಡಿದ್ದು ಅಲ್ಲಲ್ಲಿ ಡೈಕ್‌ಶಿಲೆ ಕಂಡುಬರುತ್ತದೆ.[೯] ಹಂಪಿಯ ಹತ್ತಿರ ಉತ್ತಮ ಮತ್ತು ಮಧ್ಯಮ ಗುಣಮಟ್ಟದ ಬೂದಿಬಣ್ಣದ ಕಣ ಶಿಲೆಗಳು (*Grey Granites*) ಹಾಗೂ ಆನೆಗುಂದಿ ಸಮೀಪದಲ್ಲಿ ಕೋರಂಡಂ ರೂಬಿ ಶಿಲೆಗಳು ದೊರೆಯುತ್ತವೆ. ಹಾಗೆಯೇ ಹಂಪಿ ಪ್ರದೇಶದ ರಾಮದುರ್ಗ ಪ್ರಸ್ಥಭೂಮಿಯಲ್ಲಿರುವ ಸ್ಥಳೀಯ ಶಿಲೆಗಳಲ್ಲಿ ಸುರಮ ಅಂದರೆ ಆಂಟಿಮನಿ (*Antimony*) ಸಲ್ಫೈಡ್ ಅದುರಿನ ಕಣಗಳು ಚೆಲ್ಲಿದಂತಿರುವುದಾಗಿ ವರದಿಯಾಗಿದೆ. ಈ ಪ್ರದೇಶದಲ್ಲಿನ ಶಿಲೆ, ನಿಕ್ಷೇಪಗಳು ಪ್ರಪಂಚದಲ್ಲಿಯೇ ಅತ್ಯುತ್ತಮ ವಾದಂತವುಗಳಾಗಿವೆ.[೧೦] ಈ ಪ್ರದೇಶದ ಬೆಟ್ಟಗುಡ್ಡಗಳಲ್ಲಿನ ಕಲ್ಲು ಬಂಡೆಗಳು ಇಟ್ಟಿಗೆಗಳನ್ನು ಜೋಡಿಸಿದಂತಿದ್ದು ನೋಡಲು ಆಕರ್ಷಣೀಯವಾಗಿ ಕಂಡುಬರುತ್ತವೆ.

ಹಂಪಿ ಪ್ರದೇಶವು ಹೆಚ್ಚು ಕಲ್ಲು ಬಂಡೆಗಳ ಬೆಟ್ಟಗಳಿಂದ ಕೂಡಿದ್ದು ಸಸ್ಯಗಳು ದಟ್ಟವಾಗಿಲ್ಲ. ಈ ಪ್ರದೇಶದಲ್ಲಿ ಕೆಲವು ಕಾಯ್ದಿಟ್ಟ ಅರಣ್ಯಗಳಿದ್ದು ಜಾಲರಿ, ಹೊನ್ನೆ, ಮತ್ತಿ, ಅಳಲೆ, ಬಾಗಿ, ಮರಡಿ, ಬೇವು, ಜಾಲಿ, ಕಕ್ಕೆ, ಹುಣಸೆ, ಸೀತಾಫಲ ಮತ್ತಿತರ ಕುರುಚಲು ಜಾತಿಗೆ ಸೇರಿದ ಅನೇಕ ಬಗೆಯ ಗಿಡ-ಮರಗಳನ್ನು ಕಾಣಬಹುದು.

ನದಿ ಮತ್ತು ಕೆರೆಗಳು: ಕೃಷ್ಣಾನದಿಯ ಉಪನದಿಯಾದ ತುಂಗಭದ್ರಾ ನದಿಯು ಹಂಪಿ ಪ್ರದೇಶದ ಏಕೈಕ ಪ್ರಧಾನ ನದಿಯಾಗಿದ್ದು ಇಲ್ಲಿನ ಜನರ ಜೀವನಾಡಿಯಾಗಿದೆ. ಪಶ್ಚಿಮಘಟ್ಟದ ವರಾಹ ಪರ್ವತದ ಗಂಗಾ ಮೂಲದಲ್ಲಿ ಹುಟ್ಟುವ ಈ ನದಿಯು ತುಂಗ ಮತ್ತು ಭದ್ರಾ ಎಂಬೆರೆಡು ಶಾಖೆಗಳ ಸಂಗಮವಾಗಿದ್ದು ಸಮುದ್ರ ಮಟ್ಟದಿಂದ ೧,೭೧೦ ಅಡಿ ಎತ್ತರದಲ್ಲಿ ಹರಿಯುತ್ತದೆ. ಪಶ್ಚಿಮದಿಂದ ಈಶಾನ್ಯದೆಡೆಗೆ ಹರಿಯುವ ಈ ನದಿಯನ್ನು ಪವಿತ್ರ ನದಿಯೆಂದು ಪರಿಗಣಿಸಲಾಗಿದೆ. ತುಂಗಭದ್ರಾ ನದಿಗೆ ಪಂಪಾನದಿ ಎಂಬ ಇನ್ನೊಂದು ಹೆಸರಿದೆ. ಪಂಪಾ ಮಹಾತ್ಮೆಯಲ್ಲಿ ಇದನ್ನು ಸಪ್ತಕೋಟಿ ತೀರ್ಥಗಳ ಸಂಗಮವೆಂದು ಹಾಗೂ ಕಾಶಿ ಗಂಗೆಗೆ ಸಮಾನವಾದುದು ಎಂದು ಹೇಳಿದೆ. ಇದಕ್ಕೆ ಪೂರಕವಾಗಿ ಕಲ್ಯಾಣದ ಚಲುಕ್ಯರ ದೊರೆ ಆರನೇ ವಿಕ್ರಮಾದಿತ್ಯನ ಹುಲಿಗಿ ಶಾಸನವು ತುಂಗಭದ್ರಾ ನದಿಯನ್ನು "ದಕ್ಷಿಣ ಭಾರತದ ಗಂಗಾ" ಎಂಬುದಾಗಿ ಉಲ್ಲೇಖಿಸುತ್ತದೆ.[೧೧] ಸದಾ ಹರಿಯುವ ಈ ನದಿಯ ಪರಿಸರವು ಬಹು ಹಿಂದೆಯೇ ಮಾನವನನ್ನು ತನ್ನತ್ತ ಆಕರ್ಷಿಸಿದ್ದು, ಪ್ರಾಗಿತಿಹಾಸ ಕಾಲದಿಂದ ಪ್ರಸ್ತುತದವರೆಗಿನ ಮಾನವನ ನಾಗರೀಕತೆ ಬೆಳವಣಿಗೆಗೆ ಮಹತ್ತರವಾದ ಕೊಡುಗೆ ನೀಡಿದೆ. ವಿಜಯನಗರ ಸಾಮ್ರಾಜ್ಯದ ಮೇಲೆ ಉತ್ತರದ ಕಡೆಯಿಂದ ಬರುವ ಶತ್ರು ದಾಳಿಗಳನ್ನು ತಡೆಗಟ್ಟುವಲ್ಲಿ ರಕ್ಷಣಾಗೋಡೆಯಂತೆ ಈ ನದಿ ಕಾರ್ಯನಿರ್ವಹಿಸಿದೆ ಎಂದೇ ಹೇಳಬಹುದು.

ಹಂಪಿ ಪ್ರದೇಶದಲ್ಲಿ ಅನೇಕ ನೈಸರ್ಗಿಕ ಮತ್ತು ಕೃತಕ ಕೆರೆಗಳನ್ನು ಕಾಣಬಹುದು. ಅವುಗಳಲ್ಲಿ ಕಮಲಾಪುರ, ಅಳ್ಳಿಕೆರೆ, ಸಣಾಪುರ, ರಾಮದುರ್ಗ ಮತ್ತು ಗುಂಡ್ಲುಕೆರೆಗಳು ಪ್ರಮುಖವಾಗಿವೆ. ಇವುಗಳ ನೀರನ್ನು ಬಳಸಿಕೊಂಡು ಭತ್ತ, ಗೋಧಿ, ಜೋಳ, ಗೋವಿನ ಜೋಳ, ರಾಗಿ, ತೊಗರಿ, ಕಡಲೆ ಮುಂತಾದ ಧಾನ್ಯ ಬೆಳೆಗಳು ಹಾಗೂ ಕಬ್ಬು, ಹತ್ತಿ, ಬಾಳೆ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ.[೧೨]

ಪ್ರಾಣಿಸಂಪತ್ತು: ಪ್ರಾಣಿಗಳಲ್ಲಿ ಮುಖ್ಯವಾಗಿ ಬ್ಲಾಕ್‌ಬಕ್ ಜಿಂಕೆಯ ಸಣ್ಣ ಸಣ್ಣ ಹಿಂಡುಗಳು ಹಿಂದೆ ಕಂಡು ಬರುತ್ತಿದ್ದವಾದರೂ ಈಗ ವಿರಳವಾಗಿವೆ. ಅಭದ್ರತೆ ಮತ್ತು ಬೇಟೆಯಿಂದ ಚುಕ್ಕೆ ಜಿಂಕೆಗಳು ಮತ್ತು ನಿಲ್‌ಗಾಯ್‌ಗಳು ಮತ್ತು ಹುಲಿಗಳು ಈ ಪ್ರದೇಶದಲ್ಲಿ ಪೂರ್ಣವಾಗಿ ನಶಿಸಿಹೋಗಿವೆ.[೧೩]

ಹಂಪಿ ಪರಿಸರ ಮೂಲತಃ ಗುಡ್ಡಗಾಡು ಪ್ರದೇಶವಾಗಿರುವುದರಿಂದ ಹೆಚ್ಚು ನೈಸರ್ಗಿಕ ಗುಹೆಗಳನ್ನು ಕಾಣಬಹುದು. ಸದ್ಯ ಗುಹೆಗಳು ಕಾಡುಪ್ರಾಣಿಗಳ ವಾಸದ ನೆಲೆಗಳಾಗಿದ್ದು ಕರಡಿ, ಚಿರತೆ, ನರಿ, ತೋಳ, ಕಪ್ಪು-ಕೆಂಪು ಮುಖದ ಮಂಗಗಳು, ಮೊಲ, ಚಿಗರಿ, ಮುಳ್ಳುಹಂದಿ, ಕಾಡುಹಂದಿ, ಮುಂತಾದ ಕಾಡು ಪ್ರಾಣಿಗಳು ಮತ್ತು ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಕೋಳಿ ಮುಂತಾದ ಸಾಕುಪ್ರಾಣಿಗಳು ಇಲ್ಲಿ ಕಂಡುಬರುತ್ತವೆ. ಹಾವುಗಳಲ್ಲಿ ಹೆಬ್ಬಾವು, ನಾಗರಹಾವು ಮತ್ತು ಕೆರೆಹಾವು ಪ್ರಮುಖವಾಗಿವೆ. ಪಕ್ಷಿಗಳಲ್ಲಿ ನವಿಲುಗಳು, ಹಸಿರು ಗಿಳಿಗಳು, ಗುಬ್ಬಿ, ಕಾಗೆಗಳು ಸಾಮಾನ್ಯವಾಗಿವೆ. ನದಿ ತೀರದಲ್ಲಿ

ಕಾಡುಕೋಳಿ ಕಂಡುಬರುತ್ತವೆ. ಹಂಪಿ ಪರಿಸರದ ಭೌಗೋಳಿಕ ಅಂಶಗಳು ಬೇರೆ ಬೇರೆ ದೇಶದ ಪಕ್ಷಿಗಳನ್ನು ತನ್ನತ್ತಾ ಸೆಳೆಯುತ್ತಿರುವುದನ್ನು ಪ್ರಸ್ತುತ ದಿನಗಳಲ್ಲಿ ನಾವು ನೋಡಬಹುದು.

ಹವಾಮಾನ: ಹಂಪಿ ಪ್ರದೇಶವು ಸಮುದ್ರ ಸಪಾಟಿಯಿಂದ ಎತ್ತರದಲ್ಲಿರುವುದರಿಂದಲೂ ಹಾಗೂ ಪರ್ಜನ್ಯಛಾಯಾ ಪ್ರದೇಶದಲ್ಲಿರುವುದರಿಂದಲೂ ಇಲ್ಲಿಯ ಹವಾಮಾನವು ಸಾಮಾನ್ಯವಾಗಿ ತಂಪಾಗಿರದೆ ಒಣಹವೆ, ಬಿಸಿಲು ಮತ್ತು ಸೆಕೆಯಿಂದ ಕೂಡಿರುತ್ತದೆ. ಬೇಸಿಗೆಯಲ್ಲಿ ಅತಿ ಉಷ್ಣ ಹಾಗೂ ಚಳಿಗಾಲದಲ್ಲಿ ಅತಿ ಚಳಿ ಇಲ್ಲಿಯ ವೈಶಿಷ್ಟ್ಯ. ಮಳೆ ಮಾತ್ರ ವಿರಳವಾಗಿರುತ್ತದೆ. ಇಲ್ಲಿಯ ವಾಡಿಕೆಯ ಮಳೆ ಪ್ರಮಾಣ ೫೪೯ ಮೀ.ಮೀ. ವಾಸ್ತವಿಕ ಸರಾಸರಿ ಮಳೆ ೫೭೪.೯ ಮಿ.ಮೀ. ದಾಖಲಾಗಿದೆ.[೧೪] ಈ ಎಲ್ಲಾ ಭೌಗೋಳಿಕ ಅಂಶಗಳು ಈ ಪರಿಸರದಲ್ಲಿ ಆದಿ ಕಾಲದಿಂದಲೂ ಜೀವಸಂಕುಲಗಳನ್ನು ತನ್ನತ್ತಾ ಸೆಳೆದಿದ್ದು ಅವುಗಳ ವಿಕಾಸ ಮತ್ತು ಬೆಳವಣಿಗೆಗಳಲ್ಲಿ ಪ್ರಮುಖ ಪಾತ್ರವಹಿಸಿವೆ ಎಂದು ಹೇಳಬಹುದು.

೨.೨. ಪ್ರಾಗಿತಿಹಾಸ

ಕರ್ನಾಟಕದಲ್ಲಿ ಆದಿ ಹಳೆಶಿಲಾಯುಗ ಕಾಲದಿಂದಲೂ ಮಾನವನ ಚಟುವಟಿಕೆಗಳನ್ನು ಗುರುತಿಸಲಾಗಿದೆ. ಅದರಲ್ಲಿ ವಿಪುಲ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿರುವ ಹಂಪಿ ಪ್ರದೇಶವು ಪ್ರಾಚೀನ ಕಾಲದಿಂದಲೂ ಮಾನವನ ಚಟುವಟಿಕೆಗಳ ಕೇಂದ್ರವಾಗಿದೆ. ಅವನ ನಿರಂತರ ಬದುಕಿನ ಅವಶೇಷಗಳು ನಮ್ಮ ಮುಂದಿವೆ.

ಹಂಪಿ ಪರಿಸರದಲ್ಲಿರುವ ಕಮಲಾಪುರ ಕೆರೆಗೆ ದಕ್ಷಿಣದ ಕಡೆಯಿಂದ ಹರಿದು ಉತ್ತರಕ್ಕಿರುವ ಈ ಕೆರೆಗೆ ಹರಿದುಬರುವ ಹಳ್ಳದ ಪ್ರದೇಶದಲ್ಲಿ ಹಳೇ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಕಂಡುಬಂದಿರುವುದು ತಿಳಿದುಬರುತ್ತದೆ.[೧೫] ಹಂಪಿಯ ಹದಿನಾಲ್ಕು ನಿವೇಶನಗಳಲ್ಲಿ ಚಕ್ಕೆಕಲ್ಲಿನ ಆಯುಧಗಳು ಕಂಡುಬಂದಿದ್ದು, ಅವುಗಳಲ್ಲಿ ಕೊರೆಯುವ ಆಯುಧ, ಹರೆಯುವ ಆಯುಧ ಮತ್ತು ಸಣ್ಣ ಉರುಟುಕಲ್ಲಿನ ಆಯುಧಗಳು ಮುಖ್ಯವಾಗಿವೆ.[೧೬] ಈ ನೆಲೆಗಳಲ್ಲಿ ಕೆಲವು ಪ್ರಾಗಿತಿಹಾಸಿಕ ನೆಲೆಗಳಾಗಿದ್ದು ಮತ್ತೆ ಕೆಲವು ವಿಜಯನಗರ ಕಾಲದ ನೆಲೆಗಳಾಗಿವೆ. ಬಹುಶಃ ವಿಜಯನಗರ ಕಾಲದಲ್ಲಿ ಪಟ್ಟಣದ ಬೆಳವಣಿಗೆಯಿಂದಾಗಿ ಇಂತಹ ಅನೇಕ ಪ್ರಾಗಿತಿಹಾಸಿಕ ನೆಲೆಗಳ ಸ್ತರಗಳು ಹಾಳಾಗಿರಬಹುದು.

ಹಂಪಿಯ ಸುತ್ತಮುತ್ತ ಸೂಕ್ಷ್ಮ ಶಿಲಾಯುಧಗಳು ಕಂಡುಬಂದಿವೆ. ಮುಖ್ಯವಾಗಿ ಶೃಂಗಾರದ ಹೆಬ್ಬಾಗಿಲಿನ ಹತ್ತಿರದ ಬೆಟ್ಟದ ತಪ್ಪಲಿನಲ್ಲಿ ಹಾಗೂ ವಿಠಲ ದೇವಾಲಯದ ಸಮೀಪವಿರುವ ಮೊಸಳಯ್ಯನ ಗುಡ್ಡದಲ್ಲಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ.[೧೭] ಈ ಕಾಲದ ಆಯುಧಗಳು ಗಾತ್ರದಲ್ಲಿ ಸೂಕ್ಷವಾಗಿಯೂ, ಹರಿತವಾಗಿಯೂ ಇದ್ದು ಅದನ್ನು ಬಳಸಿಕೊಂಡು ಮಾನವನು ಮೀನುಗಾರಿಕೆ ಮತ್ತು ಬೇಟೆಯನ್ನು ಪ್ರಮುಖ ವೃತ್ತಿಯಾಗಿ ಮಾಡಿಕೊಂಡಿದ್ದನು.

ಹಂಪಿಯ ಮೊಸಳಯ್ಯನ ಗುಡ್ಡ, ಮತಂಗಪರ್ವತ, ಚಕ್ರತೀರ್ಥದ ಸಮೀಪ ಮತ್ತು ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿರುವ ಬಂಡೆಗಳ ಮೇಲೆ ಹಾಗೂ ಕಮಲಾಪುರ, ನಾಗೇನಹಳ್ಳಿ, ಬುಕ್ಕಸಾಗರ, ವೆಂಕಟಾಪುರ, ಆನೆಗುಂದಿ, ಚಿಕ್ಕರಾಂಪುರ, ಅಂಜನಹಳ್ಳಿ, ತಿರುಮಲಾಪುರ, ಡಣಾಪುರ, ರಾಮದುರ್ಗ

ಮುಂತಾದ ಹಂಪಿ ಪರಿಸರದ ಗ್ರಾಮಗಳಲ್ಲಿ ನವಶಿಲಾಯುಗದ ಮಾನವನು ಬಿಡಿಸಿರುವ ವರ್ಣಚಿತ್ರಗಳು ಕಂಡುಬರುತ್ತವೆ.[೧೮] ಹಾಗಾಗಿ ಈ ಪರಿಸರವು ನವಶಿಲಾಯುಗದ ಕಾಲದಲ್ಲಿಯೇ ಜನನಿಬಿಡ ಪ್ರದೇಶವಾಗಿದ್ದುದಲ್ಲದೆ ಮಾನವನ ಚಟುವಟಿಕೆಗಳ ಕೇಂದ್ರವಾಗಿ ವಿಕಾಸ ಹೊಂದುತ್ತಿತ್ತೆಂದು ವ್ಯಕ್ತವಾಗುತ್ತದೆ. ನವಶಿಲಾಯುಗದ ಚಿತ್ರಗಳನ್ನು ಕೆಂಪುಬಣ್ಣದಿಂದ ಬರೆಯಲಾಗಿದ್ದು ಹೆಚ್ಚಾಗಿ ಗೂಳಿ, ಜಿಂಕೆ ಮತ್ತು ಇತರೆ ಪ್ರಾಣಿಗಳನ್ನೇ ಬಿಡಿಸಿರುವುದು ಕಂಡುಬರುತ್ತದೆ. ಹಾಗಾಗಿ ಈ ಪ್ರದೇಶದಲ್ಲಿ ಶಿಲಾಯುಗದ ಜನತೆಯ ಮುಖ್ಯ ಕಸುಬು ಪಶುಪಾಲನೆಯಾಗಿತ್ತು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇದಕ್ಕೆ ಪುಷ್ಟಿನೀಡುವಂತೆ ಪಶುಪಾಲನೆಯ ದೃಶ್ಯಗಳನ್ನು ಪ್ರಾಗಿತಿಹಾಸ ಕಾಲದ ಚಿತ್ರಕಲೆಯಲ್ಲಿ ಗುರುತಿಸಬಹುದು. ಚಿಕ್ಕರಾಂಪುರದ ೧ನೇ ಕಲ್ಲಾಸರೆಯಲ್ಲಿ ಎತ್ತು ಮತ್ತಿತರ ಸಾಕು ಪ್ರಾಣಿಗಳನ್ನು ಹೊಡೆದುಕೊಂಡು ಹೊರಟ ವ್ಯಕ್ತಿಯ ಚಿತ್ರವಿದೆ. ಪಶುಗಳ ಗುಂಪಿನಲ್ಲಿ ನಾಯಿಯಿದ್ದು, ವ್ಯಕ್ತಿಯ ಕೈಯಲ್ಲಿ ಉದ್ದವಾದ ಭರ್ಜಿಯಿದೆ. ಅದೇ ರೀತಿ ಇದೇ ಪರಿಸರದಲ್ಲಿ ಬರುವ ಹಿರೇಬೆಣಕಲ್‌ನಲ್ಲಿ ಹತ್ತು ಪಶುಗಳನ್ನು ಹೊಡೆದುಕೊಂಡು ಹೊರಟ ವ್ಯಕ್ತಿಯ ಚಿತ್ರವಿದೆ. ಅವನ ಕೈಯಲ್ಲಿ ಕೋಲು ಬಿಲ್ಲು ಬಾಣ ಹಾಗೂ ಸೊಂಟದಲ್ಲಿ ಕತ್ತಿಗಳಿವೆ.[೧೯] ಇದರಿಂದ ಪಶುಪಾಲಕರು ತಮ್ಮ ಪಶುಗಳನ್ನು ಕ್ರೂರ ಪ್ರಾಣಿಗಳಿಂದ ರಕ್ಷಿಸಲು ಬಿಲ್ಲು ಬಾಣ, ಖಡ್ಗಗಳನ್ನು ತಮ್ಮ ಜೊತೆ ಇಟ್ಟುಕೊಳ್ಳುತ್ತಿದ್ದರೆಂದು ತಿಳಿಯಬಹುದು. ಇಷ್ಟೇ ಅಲ್ಲದೆ ಹೊಸಪೇಟೆ ತಾಲೂಕಿನ ನಿಂಬಾಪುರದ ಸಮೀಪ ಕಂಡುಬಂದಿರುವ ಬೂದಿದಿಬ್ಬವು ನವಶಿಲಾಯುಗ ಸಂಸ್ಕೃತಿಯ ಮತ್ತೊಂದು ಪ್ರಮುಖ ಅವಶೇಷ. ಇದನ್ನು ಸ್ಥಳೀಯರು ವಾಲಿದಿಬ್ಬವೆಂದು ಕರೆಯುತ್ತಾರೆ. ಇವುಗಳ ರಚನೆ ಕುರಿತಂತೆ ಮೊದಮೊದಲು ಅನೇಕ ಅಭಿಪ್ರಾಯಗಳಿದ್ದವು. ಆದರೆ ಉತ್ಖನನಗಳಿಂದ ಮತ್ತು ವಿಶ್ಲೇಷಣೆಗಳಿಂದ ಈ ದಿಬ್ಬಗಳು ದನದ ಸಗಣಿ ಸುಡುವಿಕೆಯಿಂದಾಗಿವೆ[೨೦] ಎಂದು ತಿಳಿದುಬಂದಿದೆ.

ಹಂಪಿ ಪರಿಸರದಲ್ಲಿ ನವಶಿಲಾಯುಗದ ಜೊತೆಯಲ್ಲಿ ಬೃಹತ್ ಶಿಲಾಯುಗ ಅಥವಾ ಕಬ್ಬಿಣಯುಗದ ಅವಶೇಷಗಳು ಸಹ ಕಂಡುಬಂದಿದ್ದು, ಕೊಂಡನಾಯಕನಹಳ್ಳಿ ಸಮೀಪ ಬೃಹತ್ ಶಿಲಾಗೋರಿಗಳನ್ನು ಕಾಣಬಹುದು. ನವ ಶಿಲಾಯುಗದ ನೆಲೆಗಳು ದೊರೆತಿರುವ ಹಂಪಿ ಪ್ರದೇಶದಲ್ಲಿ ಆ ನಂತರ ಕಬ್ಬಿಣಯುಗದ ಸಂಸ್ಕೃತಿ ಬೆಳೆದುಬಂದಿರುವ ಸಾಧ್ಯತೆಯಿದೆ. ಇದಕ್ಕೆ ಆಧಾರವೆಂಬಂತೆ ಮೊಸಳಯ್ಯನ ಗುಡ್ಡದಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ಮಡಿಕೆ ಚೂರುಗಳು ಕಂಡುಬರುತ್ತವೆ.[೨೧] ಬಹುಶಃ ವಿಜಯನಗರ ಪಟ್ಟಣದ ಬೃಹತ್ ಬೆಳವಣಿಗೆಯಿಂದಾಗಿ ಇತರೆ ನೆಲೆಗಳು ಮತ್ತು ಅವಶೇಷುಗಳು ಹಾಳಾಗಿರಬಹುದು. ಜೊತೆಗೆ ಹಂಪಿಯ ಭವ್ಯ ಇತಿಹಾಸವನ್ನು ತಿಳಿಸಲು ಲಭ್ಯವಿರುವ ಸಾಕಷ್ಟು ಸ್ಮಾರಕಗಳು, ಶಿಲ್ಪಗಳು, ಶಾಸನಗಳು, ಪ್ರವಾಸಿ ಬರಹಗಳು ಇನ್ನೂ ಹಲವು ಆಕರಗಳ ಮುಂದೆ ಹಂಪಿಯ ಪ್ರಾಗಿತಿಹಾಸವನ್ನು ತಿಳಿಸುವ ಅವಶೇಷಗಳು ಕಣ್ಮರೆಯಾಗಿ ಕಾಲದ ತುಳಿತಕ್ಕೆ ಒಳಗಾಗಿವೆ. ಆದರೂ ಕೆಲವೊಮ್ಮೆ ಸಂಶೋಧನೆಗಳಿಂದ ಮತ್ತು ಇಲ್ಲಿಯವರೆಗೂ ದೊರೆತ ಕೆಲವು ಪುರಾತತ್ವ ಅವಶೇಶಗಳಿಂದ ಹಂಪಿಯ ಪ್ರಾಂತವು ಶಿಲಾಯುಗದ ಮಾನವನ ಚಟುವಟಿಕೆಗಳ ಮತ್ತು ಸಂಸ್ಕೃತಿಯ ಕೇಂದ್ರವಾಗಿತ್ತು ಎಂಬುದು ತಿಳಿದುಬರುತ್ತದೆ.

೨.೩ ಪೌರಾಣಿಕ ಹಿನ್ನೆಲೆ

ಪ್ರಾಚೀನ ಜನವಸತಿಯ ನೆಲೆಯಾಗಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಧಾರ್ಮಿಕ ಕೇಂದ್ರವಾಗಿ, ಪ್ರವಾಸಿ ಕೇಂದ್ರವಾಗಿರುವ ಹಂಪಿಯು ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ಪೌರಾಣಿಕ

ಐತಿಹ್ಯಗಳ ಆವರಣದಲ್ಲಿ ಪುಣ್ಯಸ್ಥಳ, ಪವಿತ್ರಕ್ಷೇತ್ರವೆಂಬ ಗೌರವವನ್ನು ಪಡೆದುಕೊಂಡಿದೆ. ಪರಂಪರಾಗತ ಸ್ಥಳೀಯ ನಂಬಿಕೆಯಿಂದ ರಾಮಾಯಣದಲ್ಲಿ ವರ್ಣಿಸಲಾದ ವಾನರಾಧಿರಾಜನಾದ ವಾಲಿಯು ಇಂದಿನ ಹಂಪಿ ಪರಿಸರದ ಕಿಷ್ಕಿಂದೆ ಪ್ರದೇಶದಲ್ಲಿ ವಾಸಿಸುತ್ತಿದ್ದರು[೨೨] ಎಂದು ಹೇಳಲಾಗಿದೆ. ಹಾಗೆಯೇ ಮಹಾಕಾವ್ಯಗಳಲ್ಲಿ ಹೇಳಿರುವ ಹೇಮಕೂಟ, ಮಾಲ್ಯವಂತ, ಮಾತಂಗ, ಋಷ್ಯಮೂಕ ಮತ್ತು ಕಿಷ್ಕಿಂದೆ ಎಂಬ ಐದು ಪರ್ವತಗಳು ಹಾಗೂ ಪಂಪಾಸರೋವರ, ಶಬರಿ ಆಶ್ರಮ ಆಂಜನೇಯನ ಜನ್ಮಸ್ಥಳ ಮೊದಲಾದವು ಈ ಪ್ರದೇಶದಲ್ಲಿವೆ. ಪುರಾಣಗಳಲ್ಲಿ ಹಂಪಿಯನ್ನು ಪಂಪಾಕ್ಷೇತ್ರವೆಂದು ಕರೆಯಲಾಗಿದೆ. ಬ್ರಹ್ಮನ ಮಾನಸಪುತ್ರಿಯಾದ ಪಂಪಾ ಶಿವನಲ್ಲಿ ಅನುರಕ್ತಳಾಗಿ ಅವನನ್ನೇ ವರಿಸಲು ನಿರ್ಧರಿಸಿ ಹಂಪಿಯಲ್ಲಿ ತಪಸ್ಸನ್ನಾಚರಿಸಿದಳು. ಅವಳ ಭಕ್ತಿಯ ತಪಸ್ಸಿಗೆ ಮೆಚ್ಚಿದ ಶಿವ ಅವಳನ್ನು ಸ್ವೀಕರಿಸಿ ಪಂಪಾಪತಿಯಾಗಿಯೂ, ಪಂಪಾ ವಿರೂಪಾಕ್ಷನಾಗಿಯೂ ಈ ಊರಲ್ಲಿ ನೆಲೆಸಿದ.[೨೩] ಪಂಪೆಯು ತಪ್ಪಸ್ಸು ಮಾಡಿದ ಸರೋವರವನ್ನು ಪಂಪಾ ಸರೋವರವೆಂದು ವರಿಸಿದ ಸ್ಥಳ ಹೇಮಕೂಟವೆಂದು ಖ್ಯಾತಿಯಾಗಲಿ ಎಂದು ವರವನ್ನಿತ್ತನೆಂದು ತಿಳಿದುಬರುತ್ತದೆ. ಅಂದಿನಿಂದ ಈ ಸ್ಥಳಕ್ಕೆ ಪಂಪಾ, ಪಂಪಾಪತಿ, ಪಂಪಾಕ್ಷೇತ್ರ, ಪಂಪಾಸರೋವರ, ಪಂಪಾಪುರ ಎಂಬ ಹೆಸರುಗಳಿಂದ ಕರೆಯಲ್ಪಟ್ಟಿದ್ದು, ಕಾಲಾನಂತರ ಪಂಪಾಕ್ಷೇತ್ರವು ಹಂಪಿಯಾಯಿತು ಎನ್ನಲಾಗಿದೆ. ಆದರೆ ವಾಸುದೇವ ಬಡಿಗೇರ ಅವರು ಪುರಾಣಗಳ ಉಲ್ಲೇಖದಂತೆ ಹಂಪಿಯಲ್ಲಿ ಮೊದಲು ಕಾಣಿಸಿಕೊಂಡಿರುವುದು ಪಂಪಾಂಬಿಕೆ ಎಂಬ ಸ್ತ್ರೀದೇವತೆ. ಆದ್ದರಿಂದ ಇದು ಶಕ್ತಿ ಕೇಂದ್ರವಾಗಿರಬೇಕು. ಕ್ರಮೇಣ ಈ ದೇವತೆಯೊಂದಿಗೆ ಪುರುಷ ದೇವರನ್ನು ಸೇರಿಸುವ ಪ್ರಯತ್ನ ನಡೆದುದು ಅವಳ ತಪಸ್ಸಿನ ಮೂಲಕ ಗೋಚರಿಸುತ್ತದೆ. ಪುರುಷ ದೇವರ ಸೇರ್ಪಡೆಯಿಂದಾಗಿ ಇದು ಶೈವಕ್ಷೇತ್ರವಾಗಿ ಪರಿವರ್ತನೆ ಪಡೆಯುತ್ತ ಸಾಗಿತು. ಇದು ಪೂರ್ಣರೂಪ ಪಡೆದುಕೊಂಡಿದ್ದು ೧೧ನೆಯ ಶತಮಾನದ ನಂತರ ಅದಕ್ಕಿಂತ ಪೂರ್ವದಲ್ಲಿ ವಿರೂಪಾಕ್ಷನ ಹೆಸರು ಶಾಸನಗಳಲ್ಲಿ ಕಾಣಸಿಗುವುದಿಲ್ಲ ಎಂದಿದ್ದಾರೆ.[೨೪] ಈ ಮೇಲಿನ ಅಭಿಪ್ರಾಯಗಳನ್ನು ಗಮನಿಸಿದಾಗ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೆ ಮೊದಲೇ ಹಂಪಿ ಪುಣ್ಯಕ್ಷೇತ್ರವಾಗಿ ಪ್ರಾಮುಖ್ಯತೆಯನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ.

ಪಂಪಾ ಎಂಬುದು ತುಂಗಭದ್ರೆಯ ಮತ್ತೊಂದು ಹೆಸರು. ಇದನ್ನು ಪಂಪಾತೀರ್ಥವೆಂದು ಕರೆಯುತ್ತಾರೆ. ಹಂಪಿಯು ದಕ್ಷಿಣದ ಕಾಶಿ ಎಂತಲೂ ಕರೆಸಿಕೊಂಡಿದ್ದು ಇದು ಅಂದು ಕಾಶಿಯಷ್ಟೇ ಪವಿತ್ರವಾಗಿ ಪ್ರಸಿದ್ಧತೆಯನ್ನು ಪಡೆದಿತ್ತು. ಜೊತೆಗೆ ರಾಮಾಯಣದಲ್ಲಿ ಬರುವ ಮಾಲ್ಯವಂತ ಪರ್ವತದ ಹಿನ್ನೆಲೆ, ಹನುಮಂತನ ನೆಲೆಯಾದ ಅಂಜನಾದ್ರಿ ಪರ್ವತ, ವಾಲಿಸುಗ್ರೀವರ ನಾಡು ಕಿಷ್ಕಿಂದೆ, ವಾಲಿಸುಗ್ರೀವರ ಕುರುಹುಗಳಾದ ಗುಹೆಗಳು, ಸೀತಾಸೆರಗು, ಶಬರಿಗುಹೆ, ಪಂಪಾಸರೋವರಗಳು ಈ ಪ್ರದೇಶದಲ್ಲಿ ಪ್ರಸಿದ್ಧವಾಗಿವೆ. ಜೊತೆಗೆ ರಾಮನು ಈ ಪ್ರದೇಶಕ್ಕೆ ಆಗಮಿಸಿ ವಾಲಿಯನ್ನು ಸಂಹರಿಸಿದನೆಂಬ ನಂಬಿಕೆಯೂ ಇದೆ. ಒಟ್ಟಾರೆಯಾಗಿ ರಾಮಾಯಣ ಕಾಲದಲ್ಲಿ ಹಂಪಿಯು ಪ್ರಸಿದ್ಧ ಕ್ಷೇತ್ರವಾಗಿತ್ತೆಂದು ಗುರುತಿಸಲ್ಪಡುತ್ತದೆ. ಹೀಗೆ ಪಂಪಾಕ್ಷೇತ್ರ ಕುರಿತಂತೆ ಪುರಾಣಗಳಲ್ಲಿ ಅನೇಕ ಸಂಗತಿಗಳು ತಿಳಿದುಬರುತ್ತವೆ.

೨.೪. ಚಾರಿತ್ರಿಕ ಹಿನ್ನೆಲೆ

ಹಂಪಿಯು ಭೌಗೋಳಿಕವಾಗಿ ಪ್ರಾಗಿತಿಹಾಸಿಕವಾಗಿ ಮತ್ತು ಪೌರಾಣಿಕವಾಗಿ ಹೇಗೆ ಪವಿತ್ರ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿತ್ತೋ, ಹಾಗೆಯೇ ಚಾರಿತ್ರಿಕವಾಗಿಯೂ ಮಹತ್ವದ ಪಾತ್ರವನ್ನು ಹೊಂದಿ

ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಹಂಪಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಮೃದ್ಧವಾಗಿ ಬೆಳೆದ ವಿಜಯನಗರ ಸಾಮ್ರಾಜ್ಯದ ಚರಿತ್ರೆಯು ಕ್ರಿ.ಶ. ೧೩೩೬ರಲ್ಲಿ ಆರಂಭವಾದರೂ ಈ ಪ್ರದೇಶ ಕ್ರಿ.ಶ. ೧-೨ನೇ ಶತಮಾನಗಳಲ್ಲಿ ಬೌದ್ಧರ ನೆಲೆಯಾಗಿತ್ತೆಂದು ತಿಳಿದುಬರುತ್ತದೆ. ೧೯೭೫-೭೬ರ ಸಾಲಿನಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯವರು ಹಂಪಿಯ ಪ್ರದೇಶದಲ್ಲಿ ಉತ್ಖನನವನ್ನು ಕೈಗೊಂಡ ಸಂದರ್ಭದಲ್ಲಿ ಕ್ರಿ.ಶ. ೧-೨ನೇ ಶತಮಾನಕ್ಕೆ ಸೇರಿದ ಬ್ರಾಹ್ಮಿಲಿಪಿಯ ಶಿಲಾಶಾಸನವು ಕಂಡುಬಂದಿದೆ. ಈ ಶಾಸನವು ಒಡೆದ ಒಂದು ಭಾಗವಾಗಿದ್ದು ಇದರಲ್ಲಿ ತರಸ ಪುತಸ ದಾನಮ್[೨೫] ಎಂದು ಬರೆಯಲಾಗಿದೆ. ಅಲ್ಲದೆ ಬುದ್ಧನ ಜಾತಕ ಕಥೆಗಳನ್ನೊಳಗೊಂಡ ಐದು ಫಲಕಗಳು ಕಂಡುಬಂದಿದ್ದು ಸನ್ನತಿಯ ಬೌದ್ಧಾವಶೇಷುಗಳ ಮಾದರಿಯನ್ನು ಹೋಲುತ್ತವೆ. ಹಾಗಾಗಿ ಹಂಪಿಯ ಪೂರ್ವ ಚರಿತ್ರೆಯನ್ನು ತಿಳಿಸುವ ಪ್ರಮುಖ ಆಕರಗಳಾಗಿ ಇವು ಶೋಧನೆಯಾಗಿವೆ. ಇದರಿಂದ ಹಂಪಿಯು ಶಾತವಾಹನರ ಮತ್ತು ನಂತರದ ಕಾಲದಲ್ಲಿ ಬೌದ್ಧಧರ್ಮದ ಒಂದು ಕೇಂದ್ರವಾಗಿತ್ತೆಂದು ಊಹಿಸಬಹುದು.

ಹಂಪಿ ಪ್ರದೇಶದಲ್ಲಿ ಗಾಂಧಾರ ಶೈಲಿಯ ಬಿಳಿಯ ಜೇಡಿಮಣ್ಣಿನ ಗೊಂಬೆಗಳು ದೊರೆತಿದ್ದು ಅವುಗಳ ಕಾಲ ಕ್ರಿ.ಶ. ೨ನೇ ಶತಮಾನವೆಂದು ಅ.ಸುಂದರ ಅವರು ತಿಳಿಸುತ್ತಾರೆ.[೨೬] ಹೀಗೆ ಚಟುವಟಿಕೆಗಳ ಆಳ್ವಿಕೆಯಲ್ಲಿ ಈ ಪ್ರದೇಶವು ಬೌದ್ಧಧರ್ಮದ ಪ್ರಮುಖ ಕೇಂದ್ರವಾಗಿದ್ದು ಜೊತೆಗೆ ವ್ಯಾಪಾರ-ವಾಣಿಜ್ಯವನ್ನು ಹೊಂದಿದ್ದು, ಆರ್ಥಿಕವಾಗಿ ಸಮೃದ್ಧಿ ಹೊಂದಿತ್ತೆಂದು ತಿಳಿಯುತ್ತದೆ. ಈ ಪ್ರದೇಶವು ಗಾಂಧಾರ ಪ್ರದೇಶದ ಜೊತೆ ಹೊಂದಿದ್ದ ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧ ಗಮನಾರ್ಹವಾದುದು. ನಂತರದ ಕಾಲದಲ್ಲಿ ಹಂಪಿಯು ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಲುಕ್ಯ, ನೊಳಂಬರು, ಸಿಂಧರು, ಹೊಯ್ಸಳರು, ಹೊಸಮಲೆದುರ್ಗ, ಕುಮ್ಮಟದುರ್ಗದ ಅರಸರು ಹಾಗೂ ವಿಜಯನಗರ ಅರಸರು ಇವೇ ಮೊದಲಾದ ರಾಜವಂಶಿಯರ ಆಳ್ವಿಕೆಗೆ ಒಳಪಟ್ಟಿತ್ತು.

ಬಾದಾಮಿ ಚಲುಕ್ಯ : ಬಾದಾಮಿಯ ಚಲುಕ್ಯ ದೊರೆ ವಿನಯಾದಿತ್ಯನ ಕಾಲದ ಕ್ರಿ.ಶ. ೬೮೯ರ ಸಂಸ್ಕೃತ ಭಾಷೆಯಲ್ಲಿನ ಒಂದು ತಾಮ್ರಶಾಸನವು ಹಂಪಿಯನ್ನು ಪಂಪಾತೀರ್ಥ ಎಂದು ಕರೆದಿದ್ದು ಹಂಪಿಯ ಉಲ್ಲೇಖವಿದೆ.[೨೭] ಇದು ಶಾಸನದ ಉಲ್ಲೇಖವಾದರೆ ಇನ್ನು ವಾಸ್ತುಶಿಲ್ಪದೆಡೆಗೆ ಗಮನ ಹರಿಸಿದಾಗ ಹೇಮಕೂಟದಲ್ಲಿರುವ ದೇವಾಲಯಗಳ ಸಮೂಹದಲ್ಲಿ ಕೆಲವು ವಿಜಯನಗರ ಪೂರ್ವಕಾಲದ್ದಾಗಿವೆಯೆಂದು ಗುರುತಿಸಲಾಗಿದೆ. ಇದರಲ್ಲಿಯ ಒಂದು ದೇವಾಲಯ ಬಾದಾಮಿ ಚಲುಕ್ಯರದ್ದೆಂದು ದೇವರಕೊಂಡಾರೆಡ್ಡಿಯವರು ಗುರುತಿಸಿದ್ದಾರೆ. ಹೇಮಕೂಟ ದೇವಾಲಯ ಸಮೂಹದ ವಾಯವ್ಯದ ಇಳಿಜಾರಿನಲ್ಲಿ ಈಗಿನ ವಿರೂಪಾಕ್ಷ ದೇವಾಲಯದ ದಕ್ಷಿಣ ಪ್ರದೇಶದ್ವಾರಕ್ಕೂ ತ್ರಿಕೂಟ ದೇವಾಲಯಕ್ಕೂ ಮಧ್ಯೆ ಒಂದು ದೇವಾಲಯವಿದೆ. ಇದರ ರಚನೆ, ಬಳಸಿರುವ ಮಾಧ್ಯಮ, ಅಧಿಷ್ಠಾನ ಮಾದರಿ, ದೇವಾಲಯ ರೀತಿ, ಎತ್ತರ ಮುಂತಾದ ವಿವರಗಳಿಂದ ಈ ದೇವಾಲಯವನ್ನು ಬಾದಾಮಿ ಚಲುಕ್ಯರ ಕಾಲಕ್ಕೆ ಸೇರಿಸಬಹುದುದ್ದಾಗಿದೆಯೆಂದು ವಿದ್ವಾಂಸರ ಅಭಿಪ್ರಾಯವಾಗಿದೆ.[೨೮] ಹಾಗೂ ಬಾದಾಮಿ ಚಲುಕ್ಯರು ಕ್ರಿ.ಶ. ೭೫೩ರವರೆಗೂ ಈ ಪ್ರದೇಶವನ್ನು ಆಳಿರುತ್ತಾರೆಂದು ತಿಳಿದುಬಂದಿದ್ದು ಈ ಪ್ರದೇಶ ಬಾದಾಮಿ ಚಲುಕ್ಯರ ಆಳ್ವಿಕೆ ಒಳಪಟ್ಟಿತ್ತು ಎಂಬುದು ಸ್ಪಷ್ಟವಾದ ವಿಚಾರವಾಗಿದೆ.

ರಾಷ್ಟ್ರಕೂಟರು: ರಾಷ್ಟ್ರಕೂಟರ ಕಾಲದಲ್ಲಿ ಹಂಪಿಯಲ್ಲಿ ಅನೇಕ ದೇವಾಲಯಗಳು ನಿರ್ಮಾಣಗೊಂಡು ಆ ಕಾಲಕ್ಕಾಗಲೇ ಹಂಪಿಯು ಪ್ರಮುಖ ಧಾರ್ಮಿಕ ಕ್ಷೇತ್ರವಾಗಿತ್ತೆಂದು ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಆದರೆ ಇವರ ಕಾಲಕ್ಕೆ ಸಂಬಂಧಿಸಿದಂತೆ ಯಾವುದೇ ಉಲ್ಲೇಖಿತ ಶಾಸನಗಳು ಕಂಡುಬಂದಿಲ್ಲ. ವಿರೂಪಾಕ್ಷ ದೇವಾಲಯದ ಉತ್ತರಕ್ಕಿರುವ ಕನಕಗಿರಿ ಗೋಪುರ ಮುಂಭಾಗದಲ್ಲಿ ಪೂರ್ವಾಭಿಮುಖವಾಗಿ ನಿರ್ಮಿಸಲ್ಪಟ್ಟ ಸಣ್ಣ ಸಣ್ಣ ದೇವಾಲಯಗಳು ಕಂಡುಬರುತ್ತವೆ. ಅದರಲ್ಲಿ ಎರಡು ದೇವಾಲಯಗಳು ಉಳಿದವುಗಳಿಗಿಂತ ಪ್ರಾಚೀನವಾಗಿದ್ದು ರಾಷ್ಟ್ರಕೂಟರ ಕಾಲಕ್ಕೆ ಸೇರಿದವುಗಳಾಗಿವೆ. ಅವು ದುರ್ಗಾ ದೇವಾಲಯ ಮತ್ತು ನಾಗನಂದೀಶ್ವರ ದೇವಾಲಯಗಳು. ಇವುಗಳ ರಚನಾ ಶೈಲಿ ಹಾಗೂ ಬಳಸಿದ ಮಾಧ್ಯಮದಿಂದ ಇವುಗಳನ್ನು (೧೦ನೇ ಶತಮಾನ) ರಾಷ್ಟ್ರಕೂಟರ ಕಾಲಕ್ಕೆ ಸೇರಿಸಬಹುದಾಗಿದೆ.[೨೯] ಆದರೆ ಎಂ.ಎಸ್.ಕೃಷ್ಣಮೂರ್ತಿಯವರು ದುರ್ಗಾ ಅಥವಾ ಮಹಿಷಮರ್ಧಿನಿ ದೇವಾಲಯವು ನೊಳಂಬ ಶೈಲಿಯಲ್ಲಿದ್ದು ನೊಳಂಬರ ಅಪರೂಪದ ವಾಸ್ತುಕೃತಿ ಎಂದು ಹೇಳುತ್ತಾರೆ.[೩೦] ಹೀಗೆ ವಾಸ್ತುರಚನೆಯ ಅಂಶಗಳಿಂದ ರಾಷ್ಟ್ರಕೂಟರ ಆಳ್ವಿಕೆ ಹಂಪಿಯಲ್ಲಿತ್ತೆಂದು ಸ್ಪಷ್ಟವಾಗಿ ಗುರುತಿಸಬಹುದು.

ಕಲ್ಯಾಣ ಚಲುಕ್ಯರು: ಕಲ್ಯಾಣ ಚಲುಕ್ಯರ ಆಳ್ವಿಕೆಗೆ ಹಂಪಿ ಒಳಪಟ್ಟಿತ್ತು ಎಂಬುದಕ್ಕೆ ಈ ಪ್ರದೇಶದಲ್ಲಿ ಕೆಲವು ಶಾಸನಗಳು ದೊರೆತಿವೆ. ಅದರಲ್ಲಿ ಕ್ರಿ.ಶ. ೯೮೮ರಲ್ಲಿ ಹೊರಡಿಸಿದ ಕನ್ನಡ ಶಿಲಾಶಾಸನ[೩೧] ಮೊದಲನೆಯದಾಗಿದೆ. ಇದು ಪಂಪಾಸರೋವರ ಹತ್ತಿರ ಲಕ್ಷೀ ದೇವಸ್ಥಾನಕ್ಕೆ ಹತ್ತಿ ಹೋಗುವುದಕ್ಕೆ ಮಾಡಿದ ಮೆಟ್ಟಿಲಿನ ಒಂದು ಕಲ್ಲಿನ ಮೇಲಿದ್ದು, ಶಾಸನದಲ್ಲಿ ಕಲ್ಯಾಣ ಚಲುಕ್ಯ ಆಹವಮಲ್ಲನು ಪ್ರಧಾನಮಂತ್ರಿ ಅಣ್ಣಮಯ್ಯನಿಗೆ ಭೂಮಿ ದಾನ ಮಾಡಿದ ಉಲ್ಲೇಖ ಬರುತ್ತದೆ. ಹೆಚ್ಚಿನ ವಿಷಯಗಳು ಸಿಗದಿದ್ದರೂ ಆ ಸ್ಥಳವನ್ನು ತುಂಗಭದ್ರೆಯ ತೆಂಕಣ ತಡಿಯ ಹಂಪಿಯೆಂದು ನೇರವಾಗಿ ಉಲ್ಲೇಖಿಸಿರುವುದನ್ನು ಗಮನಿಸಬಹುದು.

ಮಹಾನವಮಿ ದಿಬ್ಬ ಪರಿಸರದ ಪ್ರದೇಶದಲ್ಲಿ ನಡೆಸಿದ ಉತ್ಖನನದಲ್ಲಿ ಒಂದು ಕನ್ನಡ ಶಾಸನ ದೊರೆತಿದೆ.[೩೨] ವಿಕ್ರಮಾದಿತ್ಯನ ಕ್ರಿ.ಶ.೧೦೭೬ರ ಹಂಪಿಯ ಶಾಸನವು ಮಹಾಪ್ರಧಾನ ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯನೆಂಬುವನು ಮಠವೊಂದರಲ್ಲಿ ಪುರಾಣ ವ್ಯಾಖ್ಯಾನ ಮಾಡುವ ಉಪಾಧ್ಯಾಯರಿಗೆ ಪ್ರತಿವರ್ಷ ಎಂಬತ್ತು ಲೊಕ್ಕಿಗದ್ಯಾಣದಷ್ಟು ಉತ್ಪನ್ನ ಬರುವ ಭೂಮಿಯನ್ನು ದಾನ ಮಾಡಿದ ಬಗ್ಗೆ ತಿಳಿಸುತ್ತದೆ. ಈ ಶಾಸನಗಳಿಂದ ನಮಗೆ ತಿಳಿಯುವುದೇನೆಂದರೆ ಆ ಹೊತ್ತಿಗಾಗಲೇ ಹಂಪಿಯ ಪ್ರದೇಶದಲ್ಲಿ ದೇವಾಲಯ ಹಾಗೂ ಮಠಗಳು ಅಸ್ತಿತ್ವಕ್ಕೆ ಬಂದಿದ್ದು, ಅವು ವಿದ್ಯಾಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದುದು ವಿದಿತವಾಗುತ್ತದೆ. ಹಾಗೂ ದಂಡನಾಯಕರು, ರಾಜರು, ರಾಜ್ಯಾಧಿಕಾರಿಗಳು ಪಂಪಾಕ್ಷೇತ್ರಕ್ಕೆ ಆಗಾಗ ಬಂದು ವಿರೂಪಾಕ್ಷನ ದರ್ಶನ ಪಡೆಯುತ್ತಿದ್ದುದನ್ನು ಇದು ಸೂಚಿಸುತ್ತದೆ.

ನೊಳಂಬರು: ಹಂಪಿ ಪರಿಸರದಲ್ಲಿ ನೊಳಂಬರ ಕಾಲದ ಶಾಸನಗಳು ದೊರೆತಿದ್ದು ಮುಖ್ಯವಾಗಿ ಕ್ರಿ.ಶ.೧೦೧೪ರ ಗೋಣಹಾಳಿನ ಶಾಸನವು[೩೩] ಇರಿವ ನೊಳಂಬಾದಿ ರಾಜನು ಕಂಪಿಲಿ ನೆಲೆಯಿಂದ ಈ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಈತನ ರಾಣಿಯಾದ ಮಬ್ಬರಸಿಯು ಪಂಪಾಕ್ಷೇತ್ರದ

(ಹಂಪಿಯ) ಮಹಾಕಾಲ ದೇವರಿಗೆ ಕೆಲವು ತೆರಿಗೆಗಳನ್ನು ದತ್ತಿ ಬಿಡುತ್ತಾಳೆ ಎಂಬುದಾಗಿ ತಿಳಿಸುತ್ತದೆ. ಹಾಗೆಯೇ ನೊಳಂಬರ ಮತ್ತೊಂದು ಶಾಸನವೆಂದರೇ ಕ್ರಿ.ಶ.೧೦೧೮ರ ಬಾಗಳೀ ಶಾಸನ.[೩೪] ಈ ಶಾಸನದಲ್ಲಿ ಚಲುಕ್ಯರ ದೊರೆ ಜಗದೇಕಮಲ್ಲ ಜಯಸಿಂಹದೇವನ ಸಾಮಂತನಾದ ನೊಳಂಬಪಲ್ಲವ ಪೆರ್ಮಾನಡಿಯು ತುಂಗಭದ್ರೆ ತೀರದ ಕಂಪುಲಿ ಬೀಡಿನಿಂದ ಈ ಪ್ರದೇಶವನ್ನಾಳಿದನೆಂದು ತಿಳಿದುಬರುತ್ತದೆ. ಈ ಶಾಸನಗಳ ಪ್ರಕಾರ ಹಂಪಿ ಪ್ರದೇಶವು ನೊಳಂಬವಾಡಿ ೩೨ ಸಾವಿರ ಪ್ರಾಂತ್ಯಕ್ಕೆ ಸೇರಿತ್ತೆಂಬುದು ತಿಳಿದುಬರುತ್ತದೆ.

ಸಿಂಧರು: ನಾಲ್ಕನೆಯ ಸೋಮೇಶ್ವರನು ಕಲ್ಯಾಣ ಚಲುಕ್ಯರ ರಾಜನಾಗಿದ್ದಾಗ ಈತನ ಸಾಮಂತನಾಗಿ ಸಿಂದರ ರಾಜಮಲ್ಲನು ಕುರುಗೋಡನ್ನು ಕೇಂದ್ರವಾಗಿರಿಸಿಕೊಂಡು ಈ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದನು. ಹಂಪಿಯ ಕ್ರಿ.ಶ.೧೧೯೯ರ ಶಾಸನವು[೩೫] ಕುರುಗೋಡಿನ ಇಮ್ಮಡಿ ರಾಚಮಲ್ಲನ ಮಗನಾದ ವೀರಕಲಿದೇವರಸನನ್ನು ಹಾಗೆಯೇ ವಿರೂಪಾಕ್ಷತೀರ್ಥ ರಕ್ಷಣೆಗಾಗಿ ಮತಂಗಪರ್ವತವನ್ನು ಆಳುತ್ತಿದ್ದ ಸಾಮಂತನಾದ ಮಾದೆಯನಾಯಕನನ್ನು ಉಲ್ಲೇಖಿಸುತ್ತದೆ. ಇವರ ನಂತರ ತುಂಗಭದ್ರಾ ಪ್ರದೇಶವನ್ನು ಹತೋಟಿಯಲ್ಲಿಟ್ಟುಕೊಳ್ಳುವಲ್ಲಿ ಹೊಯ್ಸಳರು ಯಶಸ್ವಿಯಾದರು.

ಹೊಯ್ಸಳರು: ವಿರೂಪಾಕ್ಷ ದೇವಸ್ಥಾನದ ಉತ್ತರದ್ವಾರದ ಬಳಿಯಿರುವ ಕ್ರಿ.ಶ. ೧೨೩೭ರ ಶಾಸನ[೩೬] ಹೊಯ್ಸಳ ಸೋಮೇಶ್ವರನು ವಿರೂಪಾಕ್ಷ ದೇವರಿಗೆ ಮತ್ತು ಅಲ್ಲಿಯ ಸತ್ರದ ಬ್ರಾಹ್ಮಣರ ಭೋಜನಕ್ಕೆ ಹಣ ಮತ್ತು ಚಿಕ್ಕಗರಜೆ ಎಂಬ ಗ್ರಾಮವನ್ನು ದಾನ ನೀಡಿದ ಬಗ್ಗೆ ಉಲ್ಲೇಖಿಸುತ್ತದೆ. ಇದರಿಂದ ಹಂಪಿಯ ಪ್ರದೇಶ ಹದಿಮೂರನೇ ಶತಮಾನದಲ್ಲಿ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದುದು ಸ್ಪಷ್ಟವಾಗುತ್ತದೆ.

ಹೊಸಮಲೆದುರ್ಗದ ಅರಸರು: ವಿಜಯನಗರ ಅರಸರ ಪೂರ್ವದಲ್ಲಿ ಹೊಸಮಲೆದುರ್ಗದ ಅರಸರು ಸಂಡೂರ ಬಳಿಯ ಹೊಸಮಲೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಆರಂಭಿಸುತ್ತಾರೆ. ಮೂರನೇ ಬಲ್ಲಾಳನ ದಾಳಿಗಳಿಂದ ರಾಜಧಾನಿಯನ್ನು ಮುಂದೆ ಪ್ರಾಕೃತಿಕ ರಕ್ಷಣೆಯ ಗಿರಿದುರ್ಗವಾದ ಕುಮ್ಮಟದುರ್ಗಕ್ಕೆ ಸ್ಥಳಾಂತರಿಸುತ್ತಾರೆ. ಇವರಲ್ಲಿ ಕಂಪಿಲನು ಪ್ರಬಲ ಅರಸ. ಕ್ರಿ.ಶ. ೧೩೨೭ರಲ್ಲಿ ದೆಹಲಿಯ ಮಹಮ್ಮದ್ ಬಿನ್ ತೊಘಲಕನ ಸೈನ್ಯ ಕುಮ್ಮಟದ ಮೇಲೆ ದಾಳಿ ಮಾಡಿತು. ಈ ದಾಳಿಯಲ್ಲಿ ಕಂಪಿಲದೇವ ಹಾಗೂ ಅವನ ಮಗನಾದ ಕುಮಾರರಾಮ ಮರಣ ಹೊಂದಿದರು[೩೭] ಕುಮಾರರಾಮನು ತನ್ನ ಶೌರ್ಯ ಮತ್ತು ಆದರ್ಶ ಗುಣಗಳಿಂದ ದೈವತ್ವದ ಸ್ಥಾನ ಪಡೆದಿರುವನೆಂದು ಕನ್ನಡದ ಸಾಂಗತ್ಯ ಸಾಹಿತ್ಯದಿಂದ ತಿಳಿದುಬರುತ್ತದೆ. ಕಂಪಿಲನು ತನ್ನ ತಂದೆ, ತಾಯಿ ಮತ್ತು ಪೆರುಡಿನಾಯಕ ಎಂಬ ಬಂಧುವಿನ ಹೆಸರಿನಲ್ಲಿ ಹಂಪಿಯ ಹೇಮಕೂಟದಲ್ಲಿ ತ್ರಿಕೂಟಾಚಲ ಶಿವ ದೇವಾಲಯವೊಂದನ್ನು ಕಟ್ಟಿಸಿರುತ್ತಾನೆ ಎಂಬುದಾಗಿ ತಿಳಿದುಬರುತ್ತದೆ. ಈ ಕಾರಣಗಳಿಂದ ಈ ಪ್ರದೇಶವು ಇವರ ಆಳ್ವಿಕೆಗೆ ನೇರವಾಗಿ ಒಳಪಟ್ಟಿತ್ತೆಂದು ಸ್ಪಷ್ಟವಾಗುತ್ತದೆ.

ವಿಜಯನಗರದ ಅರಸರು: ಕ್ರಿ.ಶ. ೧೩೨೭ರಲ್ಲಿ ಕುಮ್ಮಟದುರ್ಗವು ತನ್ನ ಅಸ್ತಿತ್ವವನ್ನು ಕಳೆದುಕೊಂಡ ಮೇಲೆ ಬಲ್ಲಾಳನು ಹಂಪಿಯ ಪ್ರದೇಶದ ಕಡೆ ಹೆಚ್ಚು ಆಸಕ್ತಿ ವಹಿಸುತ್ತಾನೆ. ಉತ್ತರ ಕಡೆಯಿಂದ ಉಂಟಾಗುತ್ತಿದ್ದ ಮುಸ್ಲಿಮರ ದಾಳಿಗಳನ್ನು ಎದುರಿಸಲು ಸಂಗಮ ಸಹೋದರರು ಸಮರ್ಥರೆಂದು



ತಿಳಿದು ಪೂರ್ಣ ಸ್ವಾತಂತ್ರ್ಯ ನೀಡಿ ಪ್ರೋತ್ಸಾಹಿಸುತ್ತಾನೆ. ಈ ಹಿನ್ನೆಲೆಯಲ್ಲಿ ರಾಜ್ಯದ ಉತ್ತರ ಭಾಗಗಳ ರಕ್ಷಣೆಗಾಗಿ ಹಂಪಿಯಲ್ಲಿ ಹೊಸ ಪಟ್ಟಣವನ್ನು ನಿರ್ಮಿಸಿ ತನ್ನ ಮೂರನೆಯ ರಾಜಧಾನಿಯನ್ನಾಗಿ ಮಾಡಿಕೊಂಡಿರುವುದು ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ.[೩೮]

ಕ್ರಿ.ಶ. ೧೩೩೬ ರಿಂದ ಮುಮ್ಮಡಿ ವೀರ ಬಲ್ಲಾಳನ ಮಹಾಮಂಡಲೇಶ್ವರನಾಗಿ ಹಂಪಿಯ ಹೊಸಪಟ್ಟಣದಿಂದ ಹೊಯ್ಸಳ ರಾಜ್ಯದ ಉತ್ತರ ಭಾಗಗಳನ್ನು ಆಳಿದನು. ಕ್ರಿ.ಶ. ೧೩೪೨ರಲ್ಲಿ ಮುಮ್ಮಡಿ ವೀರಬಲ್ಲಾಳ ಮತ್ತು ಕ್ರಿ.ಶ. ೧೩೪೬ರಲ್ಲಿ ಇವನ ಮಗ ಹಾಗೂ ಹೊಯ್ಸಳ ವಂಶದ ಕೊನೆಯ ರಾಜನಾಗಿದ್ದ ನಾಲ್ಕನೆಯ ಬಲ್ಲಾಳನು ಮರಣ ಹೊಂದುತ್ತಾರೆ. ಇಲ್ಲಿಗೆ ಹೊಯ್ಸಳರ ಆಳ್ವಿಕೆಯು ಈ ಪ್ರದೇಶ ಸೇರಿದಂತೆ ಕೊನೆಗೊಳ್ಳುತ್ತದೆ. ಮುಂದೆ ಸಂಗಮ ಸಹೋದರರು ಈ ಪ್ರದೇಶದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿ ಸ್ವಾತಂತ್ರವಾಗಿ ಆಳ್ವಿಕೆ ನಡೆಸುತ್ತಾರೆ.

ವಿಜಯನಗರ ಸಾಮ್ರಾಜ್ಯವು ತುಂಗಭದ್ರಾ ತೀರದ ಹಂಪಿ ಕ್ಷೇತ್ರದಲ್ಲಿ ಕ್ರಿ.ಶ. ೧೩೩೬ರಲ್ಲಿ ಹರಿಹರ–ಬುಕ್ಕರಿಂದ ಗುರು ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಅಸ್ಥಿತ್ವಕ್ಕೆ ಬಂದಿತು. ವೈಭವದ ಪ್ರತೀಕವಾಗಿ ರಾಜ್ಯಭಾರ ನಡೆಸಿದ ವಿಜಯನಗರ ಸಾಮ್ರಾಜ್ಯದಲ್ಲಿ ಕ್ರಿ.ಶ. ೧೩೩೬ ರಿಂದ ೧೫೬೫ರ ವರೆಗೆ ಕ್ರಮವಾಗಿ ಸಂಗಮ, ಸಾಳುವ, ತುಳುವ ಅರವೀಡು ಸಂತತಿಗಳು ಆಳ್ವಿಕೆ ನಡೆಸಿದವು. ಇವರ ರಾಜಲಾಂಛನವು ಪ್ರಾರಂಭದಲ್ಲಿ ಗಂಡಬೇರುಂಡ ಪಕ್ಷಿಯಾಗಿದ್ದು ನಂತರ ವರಾಹವನ್ನು ರಾಜ ಲಾಂಛನವನ್ನಾಗಿ ಮಾಡಿಕೊಂಡಿದ್ದು ಕ್ರಮವಾಗಿ ಆನೆಗುಂದಿ, ಹಂಪಿ ಮತ್ತು ಪೆನುಕೊಂಡಗಳು ಇವರ ರಾಜಧಾನಿಗಳಾಗಿ ವಿಜೃಂಭಿಸಿದವು.

ಕರ್ನಾಟಕದ ಎಲ್ಲಾ ಸಾಮ್ರಾಜ್ಯಗಳು ಸಾಮಾನ್ಯವಾಗಿ ತನ್ನ ರಾಜಲಾಂಛನಗಳನ್ನಾಗಿ ಪ್ರಾಣಿ ಪಕ್ಷಿಗಳ ಚಿಹ್ನೆಗಳನ್ನು ಇಟ್ಟುಕೊಂಡಿರುವರು. ಅದರಂತೆಯೇ ವಿಜಯನಗರ ಸಾಮ್ರಾಜ್ಯವು ಸಹ ಗಂಡಭೇರುಂಡ ನಂತರ ವರಾಹ ಲಾಂಛನವನ್ನು ಹೊಂದಿದ್ದರು. ಇದರಿಂದ ಪ್ರಾಣಿ–ಪಕ್ಷಿಗಳಿಗೆ ರಾಜರು ಎಷ್ಟು ಮಹತ್ವ ನೀಡುತ್ತಿದ್ದರೆಂದು ತಿಳಿದುಬರುತ್ತದೆ.

ಸಂಗಮ ವಂಶ (ಕ್ರಿ.ಶ. ೧೩೩೬–೧೪೮೫)


ಹರಿಹರನು ಸಂಗಮನ ಹಿರಿಯ ಮಗನಾಗಿದ್ದು ಸಂಗಮ ವಂಶದ ಸಂಸ್ಥಾಪಕ. ಈತನ ತಂದೆ ಸಂಗಮ ಆದ್ದರಿಂದ ಈ ವಂಶಕ್ಕೆ ಸಂಗಮ ಮನೆತನವೆಂಬ ಹೆಸರು ಬಂದಿದೆ. ಹರಿಹರನು ಕ್ರಿ.ಶ. ೧೩೩೬ ರಿಂದ ೧೩೫೬ರ ವರೆಗೆ ಅಂದರೆ ಎರಡು ದಶಕಗಳ ಕಾಲ ರಾಜ್ಯಭಾರ ಮಾಡಿದನು. ಹರಿಹರನು ಸಮರ್ಥ ಸೇನಾನಿ ಹಾಗೂ ಆಡಳಿತಗಾರನಾಗಿದ್ದು, ದೂರದೃಷ್ಟಿವುಳ್ಳವನಾಗಿದ್ದನು. ಹದಿನಾಲ್ಕನೆಯ ಶತಮಾನದ ಇಕ್ಕಟ್ಟಿನ ರಾಜಕೀಯ ಸನ್ನಿವೇಶದಲ್ಲಿ ಸ್ವತಂತ್ರ ಹಾಗೂ ಸಮರ್ಥವಾದ ರಾಜ್ಯ ನಿರ್ಮಾಣವು ಈತನ ದಕ್ಷತೆಗೆ ಸಾಕ್ಷಿಯಾಗಿದೆ. ಇವನ ನಂತರ ಬುಕ್ಕರಾಯ ವಿಜಯನಗರ ಸಾಮ್ರಾಜ್ಯದ ರಾಜನಾಗಿ ಕ್ರಿ.ಶ. ೧೩೫೬–೧೩೭೭ರವರೆಗೆ ಆಳ್ವಿಕೆ ನಡೆಸಿ ರಾಜ್ಯವನ್ನು ವಿಸ್ತರಿಸಿ ಬಲಪಡಿಸಿದನು. ಬುಕ್ಕನನ್ನು ಶೌರ್ಯದಲ್ಲಿ ಅರ್ಜುನನೆಂದು ಕೊಪ್ಪಳದ ೨೫ನೇ ಶಾಸನ ಕೊಂಡಾಡಿದೆ.[೩೯] ಬುಕ್ಕನು ಹಂಪಿಯ ಸುತ್ತಲೂ ಭದ್ರವಾದ ಕೋಟೆಯನ್ನು ಕಟ್ಟಿಸಿ ಪ್ರಜೆಗಳ ವಾಸಕ್ಕೆ ಹೆಚ್ಚು ಅನುಕೂಲಗಳನ್ನು

ಕಲ್ಪಿಸಿದ. ವ್ಯವಸಾಯ ವ್ಯಾಪಾರಗಳಿಗೆ ಉತ್ತೇಜನ ನೀಡಿದ. ಇವನ ಕಾಲಾವಧಿಯಲ್ಲಿ ವಿಜಯನಗರವು ಚೀನಾ ಹಾಗೂ ಸಿಂಹಳದ ನಡುವೆ ವಾಣಿಜ್ಯ ಸಂಬಂಧಗಳಿದುದು ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಪ್ರಾರಂಭದ ಸಂಘಟನೆಯಲ್ಲಿ ಅಪಾರವಾಗಿ ಶ್ರಮಿಸಿದ ಒಂದನೇ ಬುಕ್ಕನ ಧಾರ್ಮಿಕ ನೀತಿಗಳು ಆದರ್ಶಪ್ರಾಯವಾಗಿದ್ದು ಕ್ರಿ.ಶ. ೧೩೭೭ರಲ್ಲಿ ಮೃತನಾದನು.[೪೦] ಇವನ ನಂತರ ೨ನೇ ಹರಿಹರನು ಕ್ರಿ.ಶ. ೧೩೭೭ ರಿಂದ ೧೪೦೪ರವರೆಗೆ ತಂದೆಯ ಉತ್ತರಾಧಿಕಾರಿಯಾಗಿ ಆಡಳಿತ ವಹಿಸಿಕೊಂಡನು. ಈತನ ಆಳ್ವಿಕೆಯ ಬಹುಕಾಲ ಶಾಂತಿಯಿಂದ ಕೂಡಿತ್ತು. ಇವನು ಸಾಮ್ರಾಜ್ಯವನ್ನು ಉತ್ತರದ ಕೃಷ್ಣ ನದಿಯವರೆಗೆ ವಿಸ್ತರಿಸಿ ರಾಜ್ಯದ ಆರ್ಥಿಕಾಭಿವೃದ್ಧಿಗಾಗಿ ಹಲವು ನೀರಾವರಿ ಯೋಜನೆಗಳನ್ನು ಕೈಗೊಂಡು ನದಿಯಿಂದ ಕಾಲುವೆಗಳನ್ನು ಮಾಡಿಸಿದನು. ವ್ಯಾಪಾರ ವಾಣಿಜ್ಯಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತನು. ಹಂಪಿಯ ಶಾಸನಗಳು ಇವನನ್ನು ಶ್ರೀ ಮಹಾರಾಜಾಧಿರಾಜ, ರಾಜಪರಮೇಶ್ವರ, ವೀರಪ್ರತಾಪ ಎಂಬುದಾಗಿ ಹೊಗಳಿವೆ[೪೧] ಕ್ರಿ.ಶ.೧೪೦೪ ರಲ್ಲಿ ಹರಿಹರನು ತೀರಿಕೊಂಡ ಮೇಲೆ ಸಿಂಹಾಸನಕ್ಕಾಗಿ ಮಕ್ಕಳಲ್ಲಿ ವಿವಾದ ಉಂಟಾಯಿತು. ಅಂತಿಮವಾಗಿ ಕ್ರಿ.ಶ.೧೪೦೬ರಲ್ಲಿ ಒಂದನೆಯ ದೇವರಾಯ ಅಧಿಕಾರ ವಹಿಸುತ್ತಾನೆ.

೨ನೇ ಹರಿಹರನ ನಂತರ ಒಂದನೆಯ ದೇವರಾಯ ಪಟ್ಟಕ್ಕೆ ಬರುತ್ತಾನೆ. ಇವನು ಕ್ರಿ.ಶ. ೧೪೦೬-೧೪೨೨ರ ವರೆಗೆ ಆಳ್ವಿಕೆ ನಡೆಸಿದನು. ಒಂದನೆಯ ದೇವರಾಯ ಉತ್ತಮ ಸೈನ್ಯ ನಿರ್ಮಾತೃವಾಗಿದ್ದು ಸೈನಿಕ ಹುದ್ದೆಗಳಿಗೆ ಯೋಗ್ಯರಾದವರನ್ನು ಭರ್ತಿಮಾಡಿ ಸೈನ್ಯದ ದಕ್ಷತೆಯನ್ನು ಹೆಚ್ಚಿಸಿದ. ಮೊದಲ ಬಾರಿಗೆ ತನ್ನ ಸೇವೆಯಲ್ಲಿ ಟರ್ಕಿ ಬಿಲ್ಲುಗಾರರನ್ನು ನೇಮಕ ಮಾಡಿಕೊಳ್ಳುತ್ತಾನೆ.[೪೨] ಜೊತೆಗೆ ಅರೇಬಿಯಾ ಮತ್ತು ಪರ್ಶಿಯಾದಿಂದ ಉತ್ತಮ ಕುದುರೆಗಳನ್ನು ತರಿಸಿಕೊಳ್ಳುತ್ತಾನೆ. ಹಾಗೆಯೇ ಸಾಮ್ರಾಜ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ಇವನಿಗೆ ಅಪಾರ ಅನುಭವವಿತ್ತು. ನಗರವನ್ನು ಅಭಿವೃದ್ಧಿಪಡಿಸಿ ರಾಜಧಾನಿಯನ್ನು ಬಲಪಡಿಸಲು ಹೊಸದಾಗಿ ಕೋಟೆಕೋತ್ತಲಗಳನ್ನು ನಿರ್ಮಿಸಿದನು. ಮತ್ತು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ತುಂಗಭದ್ರಾ ನದಿಗೆ ದೊಡ್ಡದಾದ ಆಣೆ ಒಂದನ್ನು ಕಟ್ಟಿಸಿ, ನದಿಯಿಂದ ನಗರದವರೆಗೆ ಸುಮಾರು ೧೫ ಮೈಲಿ ಉದ್ದದ ಕಲ್ಲಿನ ಕಾಲುವೆಯನ್ನು ನಿರ್ಮಿಸಿದನು. ಈ ನೀರನ್ನು ನಗರಕ್ಕೆ ಮತ್ತು ವ್ಯವಸಾಯಕ್ಕೆ ಪೂರ್ಣವಾಗಿ ಬಳಸಲಾಯಿತು. ಈ ನೀರಾವರಿ ಕೆಲಸಗಳು ಇಡೀ ಭಾರತದಲ್ಲೇ ಆ ಕಾಲಕ್ಕೆ ಮಹತ್ವದ ನಿರ್ಮಾಣಗಳೆಂದು ಸಿವೆಲ್ ತಿಳಿಸುತ್ತಾನೆ. ಈತನ ಕಾಲಾವಧಿಯಲ್ಲಿ ಅನೇಕ ವಿದೇಶಿ ಪ್ರವಾಸಿಗರು ವಿಜಯನಗರಕ್ಕೆ ಭೇಟಿ ನೀಡಿರುತ್ತಾರೆ. ಕ್ರಿ.ಶ.೧೪೧೦ರ ಶಾಸನ[೪೩] ದೇವರಾಯನ ವಂಶಾವಳಿಯ ಜೊತೆಗೆ ಅವನ ಕಾಲದಲ್ಲಿ ಸಮಾಜೋದ್ಧಾರ ಕಾರ್ಯಗಳಾದ ಕೆರೆ, ಬಾವಿ, ಹಾಗೂ ದೇವಾಲಯಗಳ ನಿರ್ಮಾಣದ ಬಗ್ಗೆ ತಿಳಿಸುತ್ತದೆ.

ಒಂದನೆಯ ದೇವರಾಯನು ಕ್ರಿ.ಶ. ೧೪೨೨ರಲ್ಲಿ ಮರಣ ಹೊಂದುತ್ತಾನೆ. ಇವನ ನಂತರ ಕಿರಿಯ ಮಗ ರಾಮಚಂದ್ರನು ಅಧಿಕಾರಕ್ಕೆ ಬರುತ್ತಾನೆ. ಈತನು ಸ್ವಲ್ಪ ಕಾಲ ಆಳಿ ವೀರವಿಜಯರಾಯನಿಗೆ ಸಿಂಹಾಸನ ವಹಿಸುತ್ತಾನೆ. ಈತನನ್ನು ವಿಜಯಭೂಪತಿ ಮತ್ತು ವಿಜಯಬುಕ್ಕ ಎಂದು ಸಹ ಕರೆಯಲಾಗುತ್ತದೆ. ದುರ್ಬಲನಾದ ಇವನು ಕ್ರಿ.ಶ. ೧೪೨೨ ರಿಂದ ೧೪೨೪ರ ವರೆಗೆ ರಾಜ್ಯವಾಳಿದನು. ಇವನ ನಂತರ ಕ್ರಿ.ಶ. ೧೪೨೪ರಲ್ಲಿ ಎರಡನೇ ದೇವರಾಯ ವಿಜಯನಗರದ ಎಲ್ಲಾ ಆಡಳಿತವನ್ನು

ಸಂಗಮ ಅರಸರ ವಂಶಾವಳಿ



(ಕೃಪೆ: ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ)



ವಹಿಸಿಕೊಳ್ಳುತ್ತಾನೆ. ಇವನನ್ನು ಪ್ರೌಢದೇವರಾಯ, ಪ್ರತಾಪ ದೇವರಾಯ ಮತ್ತು ಅಭಿನವ ವೀರ ದೇವರಾಯ ಎಂಬ ಹೆಸರುಗಳಿಂದ ಕರೆಯುತ್ತಿದ್ದರು. ಗಜಬೇಂಟೆಕಾರ ಎಂಬುದು ಈತನ ವಿಶಿಷ್ಟ ಬಿರುದಾಗಿತ್ತು. ಈತನ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯವು ಶಾಂತಿ, ಸಮೃದ್ಧ, ಸಾಮಾಜಿಕ ಸುಧಾರಣೆ, ಕೃಷಿ ಬೆಳವಣಿಗೆ, ಆಂತರಿಕ ವ್ಯಾಪಾರ ಹಾಗೂ ವಿದೇಶಗಳೊಂದಿಗಿನ ವ್ಯಾಪಾರದ ಸುಧಾರಣೆಗಳಿಂದಾಗಿ ಸಾಮ್ರಾಜ್ಯವು ಉತ್ತುಂಗ ಶಿಖರಕ್ಕೇರಿತು. ಇವನ ಕಾಲದಲ್ಲಿ ಹಲವು ಸಾಹಿತ್ಯ ಕೃತಿಗಳು ರಚನೆಗೊಂಡಿದುದು ಅವನ ಸಾಹಿತ್ಯ ಅಭಿರುಚಿಯನ್ನು ತಿಳಿಸುತ್ತವೆ. ಈತನು ವೀರಶೈವ ಧರ್ಮವನ್ನು ಬಹಳವಾಗಿ ಪ್ರೋತ್ಸಾಹಿಸಿದನಾದರೂ ಅನ್ಯ ಧರ್ಮಗಳಲ್ಲಿಯೂ ಸಹಾನುಭೂತಿ-ಯುಳ್ಳವನಾಗಿದ್ದನು. ಕ್ರಿ.ಶ.೧೪೨೬ ಮತ್ತು ೧೪೩೯ ಈ ಶಾಸನಗಳಿಂದ ಪ್ರೌಢದೇವರಾಯನು ಸರ್ವಧರ್ಮ ಸಹಿಷ್ಣುವೆಂದು ತಿಳಿಯುತ್ತದೆ.[೪೪] ಜೊತೆಗೆ ಇವನ ಕಾಲದಲ್ಲಿ ಅನೇಕ ನಾಣ್ಯಗಳು ಅಸ್ಥಿತ್ವದಲ್ಲಿದ್ದು, ಅವುಗಳು ಆನೆ, ಗರುಡ ಮುಂತಾದ ಪ್ರಾಣಿಗಳ ಚಿಹ್ನೆಗಳನ್ನು ಹೊಂದಿವೆ. ಈತನಿಗೆ ಆನೆಗಳೆಂದರೆ ವಿಶೇಷ ಆಕರ್ಷಣೆ, ಆನೆ ಬೇಟೆಯಲ್ಲಿ ಆಸಕ್ತನಾದ ಆತ ಗಜಬೇಂಟೆಕಾರ ಎಂಬ ಬಿರುದನ್ನು ಧರಿಸಿದ್ದ. ಅಬ್ದುಲ್ ರಜಾಕ್‌ನ ಪ್ರಕಾರ ಇಮ್ಮಡಿ ದೇವರಾಯನು ಒಂದು ಸಾವಿರಕ್ಕೂ ಅಧಿಕ ಆನೆಗಳನ್ನು ಹೊಂದಿದ್ದ. ಈ ಅಂಶಗಳಿಂದಾಗಿ ಇಮ್ಮಡಿ ದೇವರಾಯನ ನಾಣ್ಯಗಳ ಮೇಲ್ಮುಖದಲ್ಲಿ ಆನೆ ಚಿನ್ಹೆ ಇದೆಯೆಂದು ನರಸಿಂಹಮೂರ್ತಿಯವರು ಅಭಿಪ್ರಾಯಪಟ್ಟಿರುತ್ತಾರೆ.[೪೫] ಈ ಎಲ್ಲಾ ಅಂಶಗಳಿಂದ ಇಮ್ಮಡಿ ದೇವರಾಯ ಪ್ರಾಣಿಗಳಿಗೆ ವಿಶೇಷ ಸ್ಥಾನಮಾನ ನೀಡಿದ್ದ ಎಂಬುದು ತಿಳಿದುಬರುತ್ತದೆ.

ಇಮ್ಮಡಿ ದೇವರಾಯನ ನಂತರ ಅವನ ಮಗ ಮಲ್ಲಿಕಾರ್ಜುನ ಅಧಿಕಾರಕ್ಕೆ ಬರುತ್ತಾನೆ. ಇವನು ಕ್ರಿ.ಶ. ೧೪೪೬ರಿಂದ ೧೪೬೫ರವರೆಗೆ ರಾಜ್ಯಭಾರ ಮಾಡಿದ ಆದರೆ ಇವನು ಅಸಮರ್ಥ ನಾಗಿದ್ದರಿಂದ ತನ್ನ ಅಧಿಕಾರವನ್ನು ಕಳೆದುಕೊಂಡನು.

ಮಲ್ಲಿಕಾರ್ಜುನನು ಅಧಿಕಾರ ಸ್ಥಾನಮಾನಗಳನ್ನು ಕಳೆದುಕೊಂಡ ಮೇಲೆ ಪ್ರತಾಪದೇವನ ಮಗನಾದ ಮೂರನೇಯ ವಿರೂಪಾಕ್ಷನು ಸಿಂಹಾಸನವೇರುತ್ತಾನೆ. ಆದರೆ ಇವನೂ ಸಹ ಅವ್ಯವಸ್ಥಿತ ಆಡಳಿತವನ್ನು ಹತೋಟಿಗೆ ತರುವಲ್ಲಿ ವಿಫಲನಾಗುತ್ತಾನೆ. ವಿಜಯನಗರದ ಪ್ರಮುಖ ವ್ಯಾಪಾರ ಬಂದರು ಆಗಿದ್ದ ಗೋವವನ್ನು ಮಹಮದ್ ಗವಾನ್ ವಶಪಡಿಸಿಕೊಂಡಿದ್ದರಿಂದ ವಿಜಯನಗರದ ವ್ಯಾಪಾರ ವ್ಯವಹಾರಗಳಿಗೆ ಅಘಾತ ಉಂಟಾಯಿತು. ಇದರಿಂದ ಸೈನ್ಯಕ್ಕೆ ಬರಬೇಕಾದ ವಿದೇಶಿ ಕುದುರೆಗಳು ಬಾರದೇ ಸೈನ್ಯದ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುವಂತಾಯಿತು. ಈ ನಡುವೆ ಅತ್ಯಂತ ಕಷ್ಟಕರವಾದ ಪರಿಸ್ಥಿತಿಯಲ್ಲಿ ಸಾಳುವ ನರಸಿಂಹನೆಂಬ ಅಧಿಕಾರಿಯು ಮಧ್ಯಪ್ರವೇಶಿಸಿ ಸಾಮ್ರಾಜ್ಯದ ಘನತೆ, ಗೌರವಗಳ ಕಾಪಾಡಲು ಮುಂದಾಗುತ್ತಾನೆ. ತನ್ನ ಕಾರ್ಯದಲ್ಲಿ ಯಶಸ್ಸುಗಳಿಸಿದ ನರಸಿಂಹನು ದಿನೇ ದಿನೇ ಬಲಗೊಂಡು ಕ್ರಿ.ಶ. ೧೪೮೫ರ ವೇಳೆಗೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಾನೆ. ವಿರೂಪಾಕ್ಷನು ಹೆಸರಿಗೆ ಮಾತ್ರ ರಾಜನಾಗಿದ್ದು, ಇವನ ನಂತರ ಕಿರಿಯ ಸಹೋದರ ಪ್ರೌಢರಾಯನು ಸಿಂಹಾಸನವೇರುತ್ತಾನೆ. ಈತನು ಸಹ ರಾಜ್ಯವಾಳಲು ಅಸಮರ್ಥನಾಗಿದ್ದರಿಂದ ಸಾಳುವ ನರಸಿಂಹನು ತನ್ನ ಸೈನ್ಯದ ಜೊತೆ ರಾಜಧಾನಿಯನ್ನು ಪ್ರವೇಶಿಸಿ ಎಲ್ಲಾ ಅಧಿಕಾರಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ. ಇಲ್ಲಿಗೆ ಸಂಗಮ ವಂಶದ ಆಳ್ವಿಕೆ ಕೊನೆಗೊಳ್ಳುತ್ತದೆ.[೪೬]



ಸಾಳುವ ವಂಶ (ಕ್ರಿ.ಶ. ೧೪೮೫-೧೫೦೫)

ಸಾಳುವ ಅರಸರ ವಂಶಾವಳಿ

ಗುಂಡ

↓

ನರಸಿಂಹ

(ಕ್ರಿ.ಶ.೧೪೮೫-೯೧)

↓

↓	↓
ತಿಮ್ಮ	ನರಸಿಂಹ II
	(ಕ್ರಿ.ಶ.೧೪೯೧-೧೫೦೫)

(ಕೃಪೆ: ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ)

ಒಂದನೇ ನರಸಿಂಹನಿಂದ ವಿಜಯನಗರದ ಎರಡನೆಯ ವಂಶವಾದ ಸಾಳುವರ ಆಳ್ವಿಕೆಯು ಆರಂಭಗೊಂಡಿತು. ಈತನ ತಂದೆ ಸಾಳುವ ಗುಂಡ ಇವನು ಕ್ರಿ.ಶ. ೧೪೮೫ ರಿಂದ ೧೪೯೧ರ ವರೆಗೆ ರಾಜ್ಯವಾಳಿದ್ದು ಆಡಳಿತದಲ್ಲಿ ನಿಪುಣನಾಗಿದ್ದನು. ಇವನು ಚಂದ್ರಗಿರಿಯ ಮಹಾಮಂಡಳೇಶ್ವರ–ನಾಗಿದ್ದು ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ರಾಜ್ಯದ ಹಿತಕ್ಕಾಗಿ ಪದವಿಯನ್ನು ಬಲವಂತವಾಗಿ ಪಡೆಯಬೇಕಾಯಿತು. ರಾಜಧಾನಿ ಸಮೀಪ ಬಂದಿದ ಶತ್ರುಗಳ ಸೈನ್ಯವನ್ನು ಓಡಿಸಿ, ಹಲವು ಸುಧಾರಣೆಗಳನ್ನು ತಂದನು. ಕ್ರಿ.ಶ. ೧೪೭೧ರ ವೇಳೆಗೆ ದಕ್ಷಿಣದ ಪ್ರಾಂತಗಳಲ್ಲಿ ವಿಜಯನಗರದ ಪರಮಾಧಿಕಾರವನ್ನು ಪುನರ್ ಪ್ರತಿಷ್ಠಾಪಿಸಿದನು. ಈತನ ಕಾಲದಲ್ಲಿ ಕುದುರೆಯ ವ್ಯಾಪಾರಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಓರ್ಮಜ, ಏಡನ ಮುಂತಾದ ಸೀಮೆಗಳಿಂದ ಪರಕೀಯ ವರ್ತಕರ ಮುಖಾಂತರವಾಗಿ ಕುದುರೆಗಳನ್ನು ತರಿಸಿ ಬೇಡಿದಷ್ಟು ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದನು. ಇದರಿಂದ ಇವನು ತನ್ನ ಆಡಳಿತ ಅವಧಿಯಲ್ಲಿ ಕುದುರೆಗೆ ಅಥವಾ ಅಶ್ವದಳಕ್ಕೆ ಹೆಚ್ಚಿನ ಮಹತ್ವ ನೀಡಿದ್ದನೆಂಬುದು ತಿಳಿದುಬರುತ್ತದೆ. ಜೊತೆಗೆ ನರಸಿಂಹನು ಸ್ವತಃ ವಿದ್ಯಾವಂತನಾಗಿದ್ದು ರಾಮಾಭ್ಯುದಯಂ ಎಂಬ ಸಂಸ್ಕೃತ ಕಾವ್ಯವನ್ನು ರಚಿಸಿದನು. ಇವನ ಆಸ್ಥಾನದಲ್ಲಿ ಅನೇಕ ಕವಿಗಳಿಗೆ ಆಶ್ರಯ ನೀಡಿರುವುದು ಅವನ ಸಾಹಿತ್ಯದ ಅಭಿರುಚಿಯನ್ನು ತಿಳಿಸುತ್ತದೆ. ನರಸಿಂಹನ ಮರಣದ ನಂತರ ವಿಜಯನಗರವನ್ನಾಳಿದ ಸಾಳುವ ಮನೆತನ ಕೊನೆಗೊಂಡು ತುಳುವ ಮನೆತನದ ಆಳ್ವಿಕೆ ಆರಂಭವಾಗುತ್ತದೆ.

ತುಳುವ ವಂಶ (ಕ್ರಿ.ಶ.೧೫೦೫-೧೫೭೦)

ತುಳುವ ಅರಸರ ವಂಶಾವಳಿ

ತಿಮ್ಮ

↓

ಈಶ್ವರ ನಾಯಕ

↓

↓

ನರಸನಾಯಕ

↓

ವೀರನರಸಿಂಹ	ಕೃಷ್ಣದೇವರಾಯ	ಅಚ್ಯುತರಾಯ	ರಂಗ
(ಕ್ರಿ.ಶ.೧೫೦೫–೦೯)	(ಕ್ರಿ.ಶ.೧೫೦೯–೨೯)	(ಕ್ರಿ.ಶ.೧೫೨೯–೪೨)	↓
	↓ ತಿರುಮಲ	↓ ವೆಂಕಟಾದ್ರಿ	ಸದಾಶಿವ
	(ಕ್ರಿ.ಶ.೧೫೪೨–೭೦)		

(ಕೃಪೆ: ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ)

ತುಳುವ ವಂಶ ಯಾದವ ಮೂಲದ್ದೆಂದು ಹಾಗೂ ಈ ವಂಶದ ಮೂಲಪುರುಷ ಈಶ್ವರನಾಯಕ ಎಂದು ತಿಳಿದುಬರುತ್ತದೆ. ಈತನ ಮಗನೇ ನರಸನಾಯಕ ಇವನು ಸರ್ವಾಧಿಕಾರಿಯಾಗಿ ಆಳ್ವಿಕೆ ನಡೆಸಿದ. ಇವನಿಗೆ ಗಜಪತಿರಾಯೇಭ ಗಂಡಭೇರುಂಡ, ದೃಪ್ತರಾಣ್ ಮೃಗಶಾರ್ದೂಲ ಮುಂತಾದ ಬಿರುದುಗಳಿದ್ದವು.[೬೭] ಇವನ ನಂತರ ಬಂದವನು ವೀರನರಸಿಂಹ ಈತನು ಕ್ರಿ.ಶ. ೧೫೦೫–೧೫೦೯ರ ವರೆಗೆ ವಿಜಯನಗರದ ರಾಜನಾಗಿ ಆಡಳಿತ ನಡೆಸಿದನು. ಹಂಪಿಯ ಕ್ರಿ.ಶ. ೧೫೦೫ರ ಶಾಸನವು[೬೮] ವೀರನರಸಿಂಹನ ಆಳ್ವಿಕೆಯನ್ನು ತಿಳಿಸುತ್ತದೆ. ಇವನು ಪೋರ್ಚುಗೀಸರ ಸ್ನೇಹ ಸಂಪಾದಿಸಿ ಉತ್ತಮವಾದ ಅಶ್ವಗಳನ್ನು ಅವರಿಂದ ಖರೀದಿಸಿದ ಹಾಗೂ ಸೈನಿಕರಿಗೆ ಯುದ್ಧಕಲೆಯಲ್ಲಿ ಹೆಚ್ಚಿನ ತರಬೇತಿ ನೀಡಿದನು.[೬೯]

ವೀರನರಸಿಂಹನು ಕ್ರಿ.ಶ. ೧೫೦೯ರಲ್ಲಿ ಮರಣ ಹೊಂದಿದ್ದರಿಂದ ಈತನ ಮಲಸಹೋದರ ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವೇರುತ್ತಾನೆ. ವಿಜಯನಗರ ಅರಸರಲ್ಲಿ ಅತ್ಯಂತ ಶ್ರೇಷ್ಠನೂ ಮತ್ತು ಭಾರತದ ಇತಿಹಾಸದಲ್ಲಿ ಪ್ರಸಿದ್ಧನಾದವನು ಆದ ಈತನು ಕ್ರಿ.ಶ. ೧೫೦೯ ರಿಂದ ೧೫೨೯ರ ವರೆಗೆ ಮಾತ್ರ ಆಳ್ವಿಕೆ ಮಾಡಿದರೂ ಸಾಮ್ರಾಜ್ಯದ ಕೀರ್ತಿಯನ್ನು ಉತ್ತುಂಗ ಶಿಖರಕ್ಕೇರಿಸಿದನು. ಈ ಮೊದಲು ಕೃಷ್ಣದೇವರಾಯನು ಕ್ರಿ.ಶ. ೧೫೦೯ರ ಆಗಸ್ಟ್ ೮ರ ಕೃಷ್ಣ ಜಯಂತಿಯಂದು ಸಿಂಹಾಸನವೇರಿದನೆಂದು ತಿಳಿಯಲಾಗಿತ್ತು. ಆದರೆ ಇತ್ತೀಚೆಗೆ ಬೆಳಕಿಗೆ ಬಂದ ಸಿಂಗನಾಯಕನಹಳ್ಳಿ ಶಾಸನವು ಕ್ರಿ.ಶ. ೧೫೧೦ ಜನವರಿ ೨೪ರಲ್ಲಿ ಪಟ್ಟಾಭಿಷೇಕವಾಯಿತ್ತೆಂದು ತಿಳಿಸುತ್ತದೆ.[೭೦] ಕೃಷ್ಣದೇವ–ರಾಯನು ಮೊದಲಿಗೆ ಸೈನ್ಯವನ್ನು ಬಲಗೊಳಿಸಿ ಪ್ರಬಲ ಸಾಮ್ರಾಜ್ಯ ಕಟ್ಟಲು ಮುಂದಾಗುತ್ತಾನೆ. ಸಾಮ್ರಾಜ್ಯದೆಲ್ಲೆಡೆ ಕೆಲವು ತೆರಿಗೆಗಳನ್ನು ಮನ್ನ ಮಾಡಿ ಜನರ ವಿಶ್ವಾಸ ಗಳಿಸಿದ. ಹೊಸ ಭೂಮಿಗಳನ್ನು ವ್ಯವಸಾಯಕ್ಕೆ ಒಳಪಡಿಸಿ ರಾಜ್ಯಾದಾಯವನ್ನು ಹೆಚ್ಚಿಸಿದ. ನಂತರ ತನ್ನ ಸೈನಿಕ ಚಟುವಟಿಕೆಗಳ ಮೂಲಕ ಶತ್ರುನಿಗ್ರಹ ಕಾರ್ಯಗಳನ್ನು ಕೈಗೊಂಡನು ಇದರಲ್ಲಿ ಮುಖ್ಯವಾಗಿ ಉಮ್ಮತ್ತೂರು, ಉದಯಗಿರಿ, ಕಂಡುಕೂರು, ವಿನುಕೊಂಡ, ನಾಗಾರ್ಜುನಕೊಂಡ ಕೋಟೆಗಳು ವಿಜಯನಗರದ ವಶವಾದವು. ಅನಂತರ ವಿಜಯವಾಡ, ನಲಗೊಂಡ, ವಾರಂಗಲ್ ಮುಂದುವರೆದು ತೆಲಂಗಾಣ ಮತ್ತು ಕರಾವಳಿಯ ಪ್ರದೇಶಗಳನ್ನು ಸಾಧಿಸಿಕೊಂಡು ನಂತರ ಸಿಂಹಾಚಲದೆಡೆಗೆ ಸಾಗಿ, ಅಲ್ಲಿನ ಕೋಟೆಗಳನ್ನು ವಶಪಡಿಸಿಕೊಂಡು ಪೊಟ್ನೂರಿನಲ್ಲಿ ವಿಜಯಸ್ತಂಭವನ್ನು ನೆಡುತ್ತಾನೆ. ಈ ಹಿಂದೆ ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನದಿಂದಾಗಿ ಬಿಜಾಪುರ ಮತ್ತು ವಿಜಯನಗರದ

ನಡುವೆ ಹಲವಾರು ಯುದ್ಧಗಳು ನಡೆದು ಅಂತಿಮವಾಗಿ ರಾಯನು ಕೋಟೆಯನ್ನು ವಶಪಡಿಸಿ-ಕೊಂಡನು. ನಂತರ ರಾಯನು ಗುಲ್ಬರ್ಗಕ್ಕೆ ದಾಳಿ ಮಾಡಿ ಮಂತ್ರಿ ಅಮೀರ್‌ಖರೀದನನ್ನು ಸೋಲಿಸಿ ಬಂಧನದಲ್ಲಿದ್ದ ಎರಡನೆಯ ಮಹಮ್ಮದನ ಮೂರು ಮಕ್ಕಳನ್ನು ಸೆರೆಯಿಂದ ಬಿಡಿಸಿ ಹಿರಿಯ ಮಗನನ್ನು ಸುಲ್ತಾನನ್ನಾಗಿ ಸಿಂಹಾಸನದಲ್ಲಿ ಕೂರಿಸಿದನು. ಇದರಿಂದ ರಾಯನು ಯುವನರಾಜ್ಯ-ಸ್ಥಾಪನಾಚಾರ್ಯ ಎಂಬ ಬಿರುದನ್ನು ಧರಿಸಿದನು. ಈ ನಡುವೆ ಶ್ರೀಲಂಕಾದ ವಿಜಯಬಾಹು ಸಿಂಹಾಸನ ಕಳೆದುಕೊಂಡಾಗ ರಾಯನು ಮಧ್ಯಪ್ರವೇಶಿಸಿ ದಂಗೆಗಳನ್ನು ಕೊನೆಗಾಣಿಸಿ ಆತನ ಮಗನಾಗ ಭುವನೈಕ ಬಾಹು ಸಿಂಹಾಹನವೇರುವಂತೆ ಮಾಡುತ್ತಾನೆ. ಇದರಿಂದ ಕೃಷ್ಣದೇವರಾಯನ ಕೀರ್ತಿ, ಪ್ರಭಾವ ನೆರೆಯ ಸಿಂಹಳದಲ್ಲೂ ವ್ಯಾಪಿಸಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಕೃಷ್ಣದೇವರಾಯನ ಇಬ್ಬರು ಪ್ರಮುಖ ರಾಣಿಯರೆಂದರೆ ಚಿನ್ನಾದೇವಿ ಮತ್ತು ತಿರುಮಲಾದೇವಿ. ಇಬ್ಬರು ಗಂಡು ಮಕ್ಕಳಲ್ಲಿ ಹಿರಿಯ ಮಗ ತಿರುಮಲ ತನ್ನ ಆರನೇಯ ವಯಸ್ಸಿನಲ್ಲಿ ತೀರಿಕೊಳ್ಳುತ್ತಾನೆ. ಮತ್ತೊಂದು ೧೮ ತಿಂಗಳ ಗಂಡು ಮಗು. ಜೊತೆಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಹೆಸರು ತಿರುಮಲಾಂಬ ಮತ್ತು ವೆಂಗಲಾಂಬ ಇವರಿಬ್ಬರು ಕ್ರಮವಾಗಿ ಅರವೀಡು ಮನೆತನದ ರಾಮರಾಯನನ್ನು ಮತ್ತು ಆತನ ಸಹೋದರ ತಿರುಮಲನನ್ನು ಮದುವೆಯಾಗಿದ್ದರು. ಇದರಿಂದಾಗಿ ರಾಮರಾಯನು ಅಳಿಯ ರಾಮರಾಯನೆಂದೇ ಪ್ರಸಿದ್ಧನಾಗಿದ್ದಾನೆ.

ಈತನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ಪೋರ್ಚುಗೀಸ್‌ನ ಪ್ರವಾಸಿಗಳಾದ ಬಾರ್ಬೊಸ್ ಮತ್ತು ಡೊಮಿಂಗೋ ಪಾಯಸ್‌ರು ಕೃಷ್ಣದೇವರಾಯನನ್ನು ಕುರಿತು ಹಾಗೆಯೇ ಇಲ್ಲಿನ ಕೋಟೆ, ಅರಮನೆ, ಬಜಾರುಗಳು ಮುಂತಾದವುಗಳ ಕುರಿತು ವರ್ಣನೆ ಮಾಡಿದ್ದು ಅವರ ಬರಹಗಳು ಅಮೂಲ್ಯವಾಗಿವೆ[೫೧]. ಈತನು ಕನ್ನಡ, ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ವಿದ್ವಾಂಸನಾಗಿದ್ದು "ಅಮುಕ್ತಮಾಲ್ಯದಾ" ಎಂಬ ಸಾಹಿತ್ಯ ಕೃತಿಯನ್ನು ರಚಿಸಿದನು. ಆಸ್ಥಾನದಲ್ಲಿ ಎಂಟು ಜನ ಪ್ರಸಿದ್ಧ ವಿದ್ವಾಂಸರಿದ್ದರು. ಕುಮಾರವ್ಯಾಸನಿಂದ ಅಪೂರ್ಣಗೊಂಡಿದ್ದ ಕುಮಾರವ್ಯಾಸ ಭಾರತ ಕೃತಿಯನ್ನು ಕೃಷ್ಣದೇವರಾಯನ ಇಚ್ಚೆಯಂತೆ ಕನ್ನಡದ ಕವಿ ತಿಮ್ಮಣ್ಣನು ಪೂರ್ಣಗೊಳಿಸಿದನು. ಈ ಹಿನ್ನೆಲೆಯಲ್ಲಿ ಇದನ್ನು ಕರ್ನಾಟ ಕೃಷ್ಣರಾಯ ಭಾರತ ಕಥಾಮಂಜರಿ ಎಂಬ ಹೆಸರಿನಿಂದ ಕರೆಯಲಾಯಿತು.[೫೨] ಈ ಕಾಲದಲ್ಲಿ ಪ್ರಸಿದ್ಧ ಯತಿಗಳಾದ ವ್ಯಾಸತೀರ್ಥರು ಮತ್ತು ಅವರ ಶಿಷ್ಯರಾದ ಪುರಂದರದಾಸರು ಇದ್ದು ವೈಷ್ಣವ ಭಕ್ತಿಪಂಥಕ್ಕೆ ಉದಾರವಾದ ಸಹಾಯ ಮಾಡಿರುವುದು ತಿಳಿದುಬರುತ್ತದೆ. ಹಾಗೆಯೇ ಈತನ ಶಾಸನಗಳಿಂದಲೂ ಹಲವು ವಿಚಾರಗಳನ್ನು ತಿಳಿಯಬಹುದು. ಕೃಷ್ಣದೇವರಾಯನ ಕಾಲದ ಕನ್ನಡ ಮತ್ತು ಸಂಸ್ಕೃತ ಶಾಸನಗಳು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ದೊರೆತ್ತಿದ್ದು, ಕರ್ನಾಟಕದಲ್ಲೇ ೨೮೯ ಶಾಸನಗಳು ದೊರೆತಿವೆ.[೫೩] ಹಂಪಿಯಲ್ಲಿ ಈತನಿಗೆ ಸಂಬಂಧಿಸಿದ ೨೦ ಶಾಸನಗಳು ಕಂಡುಬಂದಿವೆ.[೫೪] ಅದರಲ್ಲಿ ಕ್ರಿ.ಶ.೧೫೧೦ರ ಶಾಸನ ಈತನನ್ನು ಉಲ್ಲೇಖಿಸುವ ಹಂಪಿಯ ಮೊದಲ ಶಾಸನವಾಗಿದ್ದು ರಾಜರ ವಂಶಾವಳಿಯ ಜೊತೆಗೆ ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ದಿನ ವಿರೂಪಾಕ್ಷ ದೇವಾಲಯದ ರಂಗಮಂಟಪ ಮತ್ತು ಗೋಪುರವನ್ನು ಕಟ್ಟಿಸಿದ ಬಗ್ಗೆ ಹಾಗೂ ಚಿನ್ನದ ಆಭರಣಗಳು ಮತ್ತು ಪೂಜಾಸಾಮಗ್ರಿಗಳನ್ನು ದೇವರ ಸೇವೆಗೆ ನೀಡಿದ್ದನ್ನು

ಈ ಶಾಸನ ತಿಳಿಸುತ್ತದೆ. ಹಾಗೆಯೇ ಕ್ರಿ.ಶ.೧೫೧೩ರ ಶಾಸನವು ಕೃಷ್ಣ ದೇವಾಲಯವನ್ನು ಕಟ್ಟಿಸಿ ಉದಯಗಿರಿಯಿಂದ ತಂದ ಕೃಷ್ಣ ದೇವರನ್ನು ಅದರಲ್ಲಿ ಪ್ರತಿಷ್ಠಾಪಿಸಿದನೆಂದು ತಿಳಿಸುತ್ತದೆ. ಹಾಗೆಯೇ ಕೃಷ್ಣಾಪುರದಲ್ಲಿ ಪ್ರಸಿದ್ಧ ಲಕ್ಷ್ಮೀನರಸಿಂಹನ ಅಖಂಡ ಶಿಲಾವಿಗ್ರಹವು ಈತನ ಕಾಲದಲ್ಲಿ ಪ್ರತಿಷ್ಠೆಗೊಂಡಿತ್ತೆಂದು ಹಂಪಿಯ ಶಾಸನಗಳಿಂದ ತಿಳಿದುಬರುತ್ತದೆ. ಜೊತೆಗೆ ರಾಯನು ವ್ಯವಸಾಯಕ್ಕೆ ಹೆಚ್ಚಿನ ಗಮನಕೊಟ್ಟು ಕೆರೆಕಟ್ಟೆಗಳನ್ನು, ನಾಲೆಗಳನ್ನು ನಿರ್ಮಿಸಿದನು. ತನ್ನ ತಾಯಿಯ ಹೆಸರಿನಲ್ಲಿ ನಾಗಲಾಪುರ (ನಾಗೇನಹಳ್ಳಿ)ವನ್ನು, ದೇವಾಲಯವನ್ನು ಕೆರೆಯನ್ನು ಮತ್ತು ಹೆಂಡತಿಯ ನೆನಪಿಗಾಗಿ ತಿರುಮಲದೇವಿಯರ ಪಟ್ಟಣವನ್ನು (ಇಂದಿನ ಹೊಸಪೇಟೆ) ನಿರ್ಮಿಸಿದನೆಂದು ತಿಳಿದುಬರುತ್ತದೆ. ಕೃಷ್ಣದೇವರಾಯನ ಕಾಲದಲ್ಲಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ವಿಶೇಷ ಆದ್ಯತೆ ದೊರೆತಿತ್ತು ಎಂಬುದಕ್ಕೆ ಇಂದು ಹಂಪಿಯಲ್ಲಿರುವ ಹಲವು ಸ್ಮಾರಕಗಳು, ದೇವಾಲಯಗಳೇ ಜೀವಂತ ಸಾಕ್ಷಿಗಳಾಗಿವೆ. ಇಂತಹ ಸ್ಮಾರಕ ಅಥವಾ ದೇವಾಲಯಗಳಲ್ಲಿ ಹಲವು ರೀತಿಯ ಶಿಲ್ಪಸಂಪತ್ತನ್ನು ಕಂಡರಿಸಿರುವುದು ಗಮನಾರ್ಹ. ಹೀಗೆ ಕೃಷ್ಣದೇವರಾಯನು ಸಮರ್ಥ ದೊರೆಯಾಗಿ, ಆಡಳಿತಗಾರನಾಗಿ ಸೇನಾನಿಯಾಗಿ, ವಿದ್ವಾಂಸನಾಗಿ ಮತ್ತು ಕಲಾರಸಿಕನಾಗಿ ಬಹುಮುಖ ಪ್ರತಿಭೆ ಹೊಂದಿದ್ದನು. ಇವನು ಜನರಲ್ಲಿ ಶಾಂತಿ ನೆಮ್ಮದಿಗಳು ನೆಲೆಸುವಂತೆ ಮಾಡಿದ್ದಲ್ಲದೆ ರಾಜಧಾನಿಯ ಸೌಂಧರ್ಯವನ್ನು ಹೆಚ್ಚಿಸಿದನು. ಇವನ ಆಳ್ವಿಕೆಯ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಅಭಿವೃದ್ಧಿಯ ಉತ್ತುಂಗಕ್ಕೇರಿತು.


ಕ್ರಿ.ಶ. ೧೫೨೯ರಲ್ಲಿ ಕೃಷ್ಣದೇವರಾಯನು ಮರಣ ಹೊಂದಿದ. ಇವನ ನಂತರ ಪಟ್ಟಕ್ಕೆ ಬಂದ ಅಚ್ಯುತರಾಯನು ದಾಯಾದಿಗಳ ವಿರೋಧವನ್ನು ಎದುರಿಸಬೇಕಾಯಿತು. ಈ ಅಂತಃ ಕಲಹಗಳ ಸಮಯದಲ್ಲಿ ಬಿಜಾಪುರದ ಇಸ್ಮಾಯಿಲ್ ಎರಡು ಬಾರಿ ದಾಳಿಮಾಡಿದನು. ಮೊದಲನೆಯ ದಾಳಿಯಲ್ಲಿ ರಾಯಚೂರು, ಮುದಗಲ್ ಕೋಟೆಗಳು ಅವನ ವಶವಾದವು. ಎರಡನೆಯ ಬಾರಿ ನಾಗಲಾಪುರವನ್ನು ಲೂಟಿ ಮಾಡಿದನೆಂದು ತಿಳಿದುಬರುತ್ತದೆ. ಆದರೆ ಅಚ್ಯುತರಾಯನು ಸುಲ್ತಾನನ್ನು ಸೋಲಿಸಿ ಕಳೆದುಹೋದ ಪ್ರದೇಶಗಳನ್ನು ಮತ್ತೆ ಗಳಿಸಿದನು. ಇದೇ ಸಮಯದಲ್ಲಿ ಗಜಪತಿ ಹಾಗೂ ಗೋಲ್ಕೊಂಡದ ಸುಲ್ತಾನ ಕುತುಬ್ ಷಾ ದಂಗೆಯೆದ್ದರು. ಇವರುಗಳನ್ನು ಸೋಲಿಸಿ ವಿಜಯವಾಡವನ್ನು ವಶಕ್ಕೆ ತೆಗೆದುಕೊಳ್ಳುತ್ತಾನೆ. ಹೀಗೆ ಅಚ್ಯುತರಾಯ ತನ್ನ ಜೀವನದುದ್ದಕ್ಕೂ ಹೋರಾಟವನ್ನು ನಡೆಸಿದ. ಈತನು ಧಾರ್ಮಿಕ ಕಾರ್ಯಗಳಿಗೆ ಯಥೇಚ್ಛವಾಗಿ ದಾನ ನೀಡಿರುವುದು ಹಂಪಿಯ ಶಾಸನಗಳಿಂದ ತಿಳಿದುಬರುತ್ತದೆ. ಅದರಲ್ಲಿ ಕ್ರಿ.ಶ. ೧೫೩೯ರ ಶಾಸನದಲ್ಲಿ ಅಚ್ಯುತದೇವರಾಯನು ಬ್ರಾಹ್ಮಣರಿಗೆ 'ಆನಂದನಿಧಿ' ಎಂಬ ದಾನವನ್ನು ನೀಡಿದ್ದರ ಕುರಿತು ಉಲ್ಲೇಖಿಸುತ್ತದೆ.[೫೫] ಈತನು ವೈಷ್ಣವ ಮತದ ಆರಾಧಕನಾಗಿದುದು ತಿಳಿದುಬರುತ್ತದೆ. ಹಾಗೆಯೇ ಕಂಚಿಯಲ್ಲಿ ತುಲಾಭಾರವನ್ನು ಮಾಡಿಕೊಂಡು ೧,೦೦೦ ಗೋವುಗಳನ್ನು ದಾನ ಮಾಡಿದನೆಂದು ತಿಳಿದುಬರುತ್ತದೆ.[೫೬]

ಕ್ರಿ.ಶ. ೧೫೪೨ರಲ್ಲಿ ಅಚ್ಯುತರಾಯ ಮರಣ ಹೊಂದಿದ ಮೇಲೆ ಆತನ ಮಗ ಬಾಲಕನಾದ ಒಂದನೆಯ ವೆಂಕಟ ಅಧಿಕಾರ ವಹಿಸಿದನು. ಇವನು ಚಿಕ್ಕ ವಯಸ್ಸಿನವನಾಗಿದ್ದರಿಂದ ಸೋದರಮಾವ ಸಲಕರಾಜ ತಿರುಮಲನು ವೆಂಕಟನ ಪರವಾಗಿ ರಾಜ್ಯಾಡಳಿತ ಮಾಡಿದನು. ಅಧಿಕಾರ ಆಸೆಯಿಂದ ತಿರುಮಲನು ಒಂದನೆಯ ವೆಂಕಟನನ್ನು ಮತ್ತು ಕುಟುಂಬದವರನ್ನು ಕೊಲೆ ಮಾಡಿಸಿದನು. ನಂತರ

ರಾಮರಾಯನು ಸದಾಶಿವನ ಹೆಸರಲ್ಲಿ ರಾಜ್ಯವನ್ನು ಆಕ್ರಮಿಸಿ ಯುದ್ಧದಲ್ಲಿ ತಿರುಮಲನನ್ನು ಕೊಂದನೆಂದು ತಿಳಿದುಬರುತ್ತದೆ. ಸದಾಶಿವರಾಯನ ಹೆಸರಿನಲ್ಲಿ ರಾಮರಾಯ ಕ್ರಿ.ಶ.೧೫೪೩ ರಿಂದ ಕ್ರಿ.ಶ.೧೫೫೦ರ ವರೆಗೆ ಸುಮಾರು ಎಂಟು ವರ್ಷಗಳ ಕಾಲ ರಾಜಪ್ರತಿನಿಧಿಯಾಗಿ ಆಡಳಿತ ನಿರ್ವಹಿಸಿದನು. ಈ ವೇಳೆಗೆ ಸದಾಶಿವನು ಪ್ರಾಬಲ್ಯಕ್ಕೆ ಬಂದು ಸ್ವತಂತ್ರವಾಗಿ ರಾಜ್ಯಾಡಳಿತ ನಿರ್ವಹಿಸಲು ಬಯಸಿದನು. ಈ ವರ್ತನೆಯನ್ನು ರಾಮರಾಯನು ಸಹಿಸದೆ ಸದಾಶಿವನನ್ನು ಬಂಧನದಲ್ಲಿಟ್ಟನು. ಇಲ್ಲಿಗೆ ತುಳುವ ವಂಶದ ಆಳ್ವಿಕೆಯು ಕೊನೆಗೊಂಡು ಅರವೀಡು ವಂಶದ ಆಳ್ವಕೆ ಪ್ರಾರಂಭಗೊಂಡಿತು.

ಅರವೀಡು ವಂಶ (ಕ್ರಿ.ಶ. ೧೫೫೫–೧೬೪೬)

ಅರವೀಡು ಅರಸರ ವಂಶಾವಳಿ



(ಕೃಪೆ : ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ)

ರಾಮರಾಯನು ಅರವೀಡು ವಂಶದಲ್ಲೇ ಪ್ರಖ್ಯಾತ ಅರಸನಾಗಿದ್ದನು. ಇವನು ಕರ್ನೂಲು ಜಿಲ್ಲೆಯ ಅರವೀಡು ಎಂಬ ಗ್ರಾಮದಿಂದ ಬಂದಿದ್ದು, ತಮ್ಮ ಊರಿನ ಹೆಸರನ್ನೇ ವಂಶಕ್ಕೂ ಬಳಸಿದರು. ಕೃಷ್ಣದೇವರಾಯನ ಅಳಿಯನಾದ ಈತನು ಅಳಿಯ ರಾಮರಾಯನೆಂದು ಪ್ರಸಿದ್ಧನಾದ. ಇವನು ಕ್ರಿ.ಶ. ೧೫೫೧ ರಿಂದ ಎಲ್ಲಾ ಅಧಿಕಾರಗಳನ್ನು ಹೊಂದಿ ಬಿರುದು ಬಾವಲಿಗಳನ್ನು ಧರಿಸಿ ಮುಂದಿನ ೧೫ ವರ್ಷಗಳ ಕಾಲ ವಿಜಯನಗರ ಸಾಮ್ರಾಜ್ಯವನ್ನು ಆಳಿದ. ಆದರೂ ಶಾಸನಗಳು ಸದಾಶಿವನ ಹೆಸರಿನಲ್ಲಿ ಹೊರಡಿಸಲ್ಪಡುತ್ತಿದ್ದವು. ರಾಮರಾಯನು ವೀರ, ಒಳಸಂಚಿನ ರಾಜಕೀಯದಲ್ಲಿ ಪರಿಣಿತನಾಗಿದ್ದರೂ

ಸಾಕಷ್ಟು ದೂರದೃಷ್ಟಿಯಿರಲಿಲ್ಲ. ಫೆರಿಸ್ತಾನ ಬರಹಗಳು ಮತ್ತು ಕೆಲವು ಶಾಸನಗಳು ಅವನ ಯುದ್ಧ ಸಾಮರ್ಥ್ಯವನ್ನು ಕೊಂಡಾಡಿವೆ. ಈತನ ಕಾಲದಲ್ಲಿ ಅನೇಕ ಮುಸ್ಲಿಂಮರನ್ನು ಸೈನ್ಯದ ಉನ್ನತ ಹುದ್ದೆಗಳಿಗೆ ನೇಮಿಸಿದ. ಮುಸ್ಲಿಂ ರಾಜ್ಯಗಳ ನಡುವೆ ಕಲಹವನ್ನುಂಟು ಮಾಡಿ ಅದರ ಲಾಭವನ್ನು ಪಡೆಯಲು ಮುಂದಾದನು.

ಕ್ರಿ.ಶ. ೧೫೪೩ರಲ್ಲಿ ಅಹಮದ್‌ನಗರ ಮತ್ತು ಗೋಲ್ಕೊಂಡದ ಸುಲ್ತಾನರೊಡನೆ ಬಿಜಾಪುರದ ಮೇಲೆ ಹಾಗೂ ದಕ್ಷಿಣದ ತಿರುವಡಿ ಮೇಲೆ ಹಾಗೆಯೇ ಕ್ರಿ.ಶ. ೧೫೪೮-೫೦ರಲ್ಲಿ ಚಂದ್ರಗುತ್ತಿ ನಾಯಕರ ಮೇಲೆ ಯುದ್ಧ ಹೂಡಿದಂತೆ ತಿಳಿದುಬರುತ್ತದೆ. ಅಲ್ಲದೆ ರಾಮರಾಯನು ಕೃಷ್ಣದೇವರಾಯನ ನಂತರ ಶತ್ರುಗಳ ವಶವಾಗಿದ್ದ ಅನೇಕ ಕೋಟೆಗಳನ್ನು ಪುನಃ ವಶಪಡಿಸಿಕೊಂಡನು. ಅಲ್ಲದೆ ಕೃಷ್ಣೆಯನ್ನು ದಾಟಿ ಕೊವಿಲ್ಕೊಂಡ, ಕಲ್ಯಾಣ ಘನಪುರ, ಪಾಂಗಲ್, ಯಾದಗಿರಿ ಮುಂತಾದ ಪ್ರಮುಖ ಕೋಟೆಗಳನ್ನು ಹಿಡಿದು ಸಾಮ್ರಾಜ್ಯವನ್ನು ವಿಸ್ತರಿಸಿದ. ಇವನ ಆಕ್ರಮಣ ನೀತಿ ಹೊಸದಾಗಿತ್ತು. ಇಂತಹ ನೀತಿ ಶತ್ರುಗಳ ಕಣ್ಣು ತೆರೆಯಿಸಿತು. ಶತ್ರು ಸುಲ್ತಾನರುಗಳಾದ ಅಹಮದ್‌ನಗರ, ಬಿಜಾಪುರ, ಬೀದರ್ ಮತ್ತು ಗೋಲ್ಕೊಂಡ ಅರಸರು ತಮ್ಮ ನಿಜ ಪರಿಸ್ಥಿತಿಯನ್ನು ಅರಿತು ಒಗ್ಗೂಡಿ ಕ್ರಿ.ಶ.೧೫೬೪ ಡಿಸೆಂಬರ್ ೨೪ರಂದು ನಾಲ್ಕು ಶಾಹಿ ರಾಜ್ಯಗಳ ಸೈನ್ಯ ದಕ್ಷಿಣಾಭಿಮುಖವಾಗಿ ಹೊರಟು ಕೃಷ್ಣಾನದಿಯ ಉತ್ತರ ತೀರದ ತಾಳಿಕೋಟೆ ಸಮೀಪದ ರಕ್ಕಸಗಿ-ತಂಗಡಗಿ ಎಂಬ ಎರಡು ಗ್ರಾಮಗಳ ನಡುವಿನ ಬಯಲಿನಲ್ಲಿ ವಿಜಯನಗರ ಸೈನ್ಯವನ್ನು ಎದುರಿಸಿತು. ಕ್ರಿ.ಶ. ೧೫೬೫ ಜನವರಿ ೨೩ರಂದು ನಡೆದ ಭೀಕರ ಕದನದಲ್ಲಿ ರಾಮರಾಯನ ಇಬ್ಬರು ಮಹಮ್ಮದೀಯ ಸೇನಾದಿಪತಿಗಳು ಒಮ್ಮೆಲೆ ಪಕ್ಷಾಂತರ ಮಾಡಿ ಶತ್ರುಗಳ ಶಿಬಿರ ಸೇರಿಕೊಂಡರು. ಇದು ಯುದ್ದದ ಸ್ವರೂಪವನ್ನೇ ಬದಲಿಸಿ ರಾಮರಾಯನು ಶತ್ರುಗಳಿಂದ ಕೊಲಲ್ಪಟ್ಟನು. ಈ ಯುದ್ಧದ ನಂತರ ವಿಜಯನಗರ ಸಾಮ್ರಾಜ್ಯವು ಈ ಪ್ರದೇಶದಿಂದ ಕಣ್ಮರೆಯಾಗುವುದರ ಜೊತೆಗೆ ಹಾಳುಹಂಪಿ ಎನಿಸಿಕೊಂಡಿತು. ಈ ಆಕ್ರಮಣಗಳಿಂದ ಬೇಸತ್ತ ತಿರುಮಲನು ವಿಜಯನಗರವನ್ನು ಸಂಪೂರ್ಣ ತ್ಯಜಿಸಿ ರಾಜಧಾನಿಯನ್ನು ಪೆನುಕೊಂಡೆಗೆ ಬದಲಾಯಿಸಿದನು.

ತಿರುಮಲನ ನಂತರ ಇಮ್ಮಡಿ ಶ್ರೀರಂಗರಾಯ, ಒಂದನೇ ವೆಂಕಟಪತಿರಾಯರು ಆಳ್ವಿಕೆ ಮುಂದುವರೆಸಿದರು. ವೆಂಕಟಪತಿಯ ಅನಂತರ ಅಧಿಕಾರಕ್ಕಾಗಿ ಅಂತಃಕಲಹಗಳು ನಡೆದವು. ಆದರೂ ವೆಂಕಟಪತಿ ನಂತರ ಬಂದಂತಹ ಎಲ್ಲಾ ಅರಸರು ಅಸಮರ್ಥರಾಗಿದ್ದರಿಂದ ವಿಜಯನಗರ ಸಾಮ್ರಾಜ್ಯವನ್ನು ಬೆಳೆಸಲಾಗಲಿಲ್ಲ. ಕ್ರಿ.ಶ.೧೬೮೧ರಲ್ಲಿ ಶ್ರೀರಂಗನ ಮರಣದೊಂದಿಗೆ ವಿಜಯನಗರ ಸಾಮ್ರಾಜ್ಯ ಕೊನೆಯಾಯಿತು. ಹೀಗೆ ದಕ್ಷಿಣ ಭಾರತದಲ್ಲಿ ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ಆಳ್ವಿಕೆ ನಡೆಸಿ ವಿಶ್ವಮಟ್ಟದಲ್ಲಿ ಪ್ರಸಿದ್ಧವಾಗಿದ್ದ ಸಾಮ್ರಾಜ್ಯವೊಂದು ಅವನತಿ ಹೊಂದಿತು.

೨.೫ ಪ್ರಾಣಿಶಿಲ್ಪಗಳ ಚಾರಿತ್ರಿಕ ಹಿನ್ನೆಲೆ

ಭಾರತ ಮತ್ತು ಕರ್ನಾಟಕವನ್ನು ಒಳಗೊಂಡಂತೆ ಪ್ರಾಗಿತಿಹಾಸ ಕಾಲದಲ್ಲಿ ಪ್ರಾಣಿಶಿಲ್ಪಗಳು ಕಂಡುಬರದಿದ್ದರೂ, ಅವುಗಳಿಗೆ ಸಂಬಂಧಿಸಿದಂತೆ ವರ್ಣಚಿತ್ರಗಳು ಹೆಚ್ಚಾಗಿ ಕಂಡುಬಂದಿರುತ್ತವೆ. ಆದರೆ ಚಾರಿತ್ರಿಕವಾಗಿ ನಮಗೆ ಶಿಲ್ಪಗಳು ದೊರೆಯುವುದು ಸಿಂಧೂ-ಸರಸ್ವತಿ ನಾಗರೀಕತೆಯ ಕಾಲಾವಧಿಯಲ್ಲಿ



ಈ ನಾಗರೀಕತೆಯ ಹಲವು ನೆಲೆಗಳನ್ನು ಉತ್ಖನನ ಮಾಡಿದ್ದು, ಪ್ರಾಣಿಗಳಿಗೆ ಸಂಬಂಧಿಸಿದಂತೆ ಹಲವು ಅವಶೇಷಗಳು ಬೆಳಕಿಗೆ ಬಂದಿವೆ. ಈ ರೀತಿ ಬೆಳಕಿಗೆ ಬಂದ ಅವಶೇಷಗಳಲ್ಲಿ ಪ್ರಾಣಿ ಚಿತ್ರಗಳನ್ನು ಒಳಗೊಂಡ ಮುದ್ರೆಗಳು ಪ್ರಮುಖವಾಗಿವೆ. ಈ ಮುದ್ರೆಗಳ ಮೇಲೆ ಕೊರೆದು ಬಿಡಿಸಿದ ಪ್ರಾಣಿಗಳು ಇಂತಿವೆ.[೩೭] ಧ್ವಜಸ್ತಂಭದಂತ ನಿಲುಂಗಬಾಕಾರದ ಮುಂದೆ ನಿಂತ ಏಕಶೃಂಗಿ, ಚಿಕ್ಕ ಕೊಂಬುಗಳುಳ್ಳ ಹೋರಿ, ಎಮ್ಮೆ, ಹೀಣಿಯುಳ್ಳ ಗೂಳಿ, ಹುಲಿ, ಕೋರೆದಂತದ ಆನೆ, ಮೀನನ್ನು ತಿನ್ನುತ್ತಿರುವ ಮೊಸಳೆ, ಜಿಂಕೆ, ಅಳಿಲು ಇತ್ಯಾದಿ ಕೆಲವು ಪೌರಾಣಿಕ ದೃಶ್ಯವನ್ನು ಹೋಲುವ ಪ್ರಾಣಿ ಹಾಗೂ ಸಸ್ಯ ಗುಂಪಿನ ಚಿತ್ರಗಳನ್ನು ಸಹ ಕೊರೆಯಲಾಗಿದೆ. ಹರಪ್ಪ ನಾಗರೀಕತೆಯ ಜನರಿಗೆ ಕಲೆಯ ಬಗ್ಗೆ ತಿಳಿದಿದ್ದು, ಲೋಹ ಮತ್ತು ಕಲ್ಲಿನ ಶಿಲ್ಪಗಳು ಕಂಡುಬಂದಿರುತ್ತವೆ. ಈ ಸಂದರ್ಭದಲ್ಲಿ ಹರಪ್ಪ ನೆಲೆಯ ಸ್ತ್ರೀ ಪುರುಷ ಹಾಗೂ ಪ್ರಾಣಿಗಳ ಗೊಂಬೆಗಳನ್ನು ಈ ಕಾಲದ ಮಾದರಿ ಗೊಂಬೆಗಳೆಂದೇ ಪರಿಗಣಿಸಬಹುದು. ಇಲ್ಲಿ ಪುರುಷ ವರ್ಗ ಮತ್ತು ಸ್ತ್ರೀವರ್ಗದ ಗೊಂಬೆಗಳು ಪ್ರಮುಖವಾಗಿ ದೊರೆತಿವೆ. ಇದೇ ರೀತಿ ವಿಭಿನ್ನ ವರ್ಗದ ಪ್ರಾಣಿ ಗೊಂಬೆಗಳನ್ನು ಮಣ್ಣು, ಫಯಾನ್ಸ್ ಹಾಗೂ ಶಿಲೆಗಳಲ್ಲಿ ತಯಾರಿಸಲಾಗಿದೆ. ಇವುಗಳಲ್ಲಿ ಕೆಲವು ಪ್ರಾಣಿಗಳು ಜಲಚರ ಮತ್ತು ಪಕ್ಷಿಗಳು ಆಗಿವೆ. ಉದಾ: ಗಿಳಿ, ಗುಬ್ಬಿ, ಪಾರಿವಾಳ, ಹದ್ದು, ಕೋಳಿ, ಬಾತುಕೋಳಿ, ನವಿಲು, ಹೆಬ್ಬಾತು, ಟಗರು, ಅಳಿಲು, ಜೋಲು ಕಿವಿಯುಳ್ಳ ನಾಯಿ, ಮೀನು, ಆಮೆ, ಮೊಸಳೆ, ಹಾವು, ಮುಂಗಸಿ, ಮೊಲ, ಕೋತಿ, ಮೊಲವನ್ನು ಕಚ್ಚಿಹಿಡಿದ ಬೇಟೆನಾಯಿ, ಬೆಕ್ಕು, ಹೀಣಿಯುಳ್ಳ ಗೂಳಿ, ಖಡ್ಗಮೃಗ, ಆನೆ, ಹುಲಿ ಇತ್ಯಾದಿ ಪ್ರಾಣಿಗಳ ಗೊಂಬೆಗಳು ಪ್ರಮುಖವಾಗಿ ಕಂಡುಬಂದಿವೆ. ಈ ಕಾಲದಲ್ಲಿ ತಯಾರಿಸಿದ ದನಕರುಗಳ ಗೊಂಬೆಗಳು ಮಕ್ಕಳ ಆಟಿಕೆಯ ವಸ್ತುಗಳಾಗಿರಬಹುದು. ಆದರೆ ಪಶುಗಳಲ್ಲಿ ವಿಶೇಷವಾಗಿ ಬ್ರಾಹ್ಮೀಣಿ ಗೂಳಿಗಳನ್ನು ಹೋಲುವ ಗೊಂಬೆಗಳು ಇದಕ್ಕೆ ಹೊರತಾಗಿರಬಹುದೆಂದು ಕೆಲ ವಿದ್ವಾಂಸರ ಅನಿಸಿಕೆ. ಇಂಥ ಶಕ್ತಿಶಾಲಿ ಗೂಳಿಗಳ ಮಾದರಿ ಗೊಂಬೆಗಳು ಹರಪ್ಪ, ಮೆಹೆಂಜೋದಾರೋ, ಕಾಲಿಬಂಗಾನ್ ಹಾಗೂ ಲೋಥಾಲ್‌ನಲ್ಲಿ ದೊರಕಿವೆ. ಇಂಥ ಗೂಳಿಗಳ ದೇಹ ರಚನೆಯನ್ನು ಕಲಾಕಾರನೂ ವಿಶೇಷ ಚತುರತೆಯಿಂದ ತಯಾರಿಸಿದ್ದಾನೆ. ಅದರ ಬಲಿಷ್ಠತೆ, ಗಂಭೀರ ನಿಲುವು, ಎದ್ದುಕಾಣುವ ಹಿಣಿಲು ಹಾಗೂ ದಷ್ಟ–ಪುಷ್ಟವಾದ ಅಂಗಸೌಷ್ಟವ ಜೀವಂತ ಕಳೆ ಮೆಚ್ಚುವಂತದ್ದಾಗಿದ್ದು ಕಲಾಕಾರನ ನೈಪುಣ್ಯತೆಯನ್ನು ಕಾಣಬಹುದು.

ಭಿಂಬೇಟ್ಕದ ಪ್ರಾಗಿತಿಹಾಸಿಕ ವರ್ಣಚಿತ್ರಗಳಲ್ಲಿ ಇತರೆ ಚಿತ್ರಗಳ ಜೊತೆಗೆ ವನ್ಯಮೃಗಗಳ ಚಿತ್ರಗಳು ವಿಪುಲವಾಗಿವೆ. ವಿವಿಧ ಪ್ರಕಾರದ ಜಿಂಕೆಗಳು, ಹುಲಿ, ಕಾಡೆಮ್ಮೆ, ಆನೆ, ಖಡ್ಗಮೃಗ, ಕಾಡುಹಂದಿ, ಸಾರಂಗ, ನೀಲಗಾಯ್ ಮುಂತಾದ ಪ್ರಾಣಿಗಳನ್ನು ಅತ್ಯಂತ ಸುಂದರವಾಗಿ ಬಿಡಿಸಲಾಗಿದೆ. ಇವುಗಳನ್ನು ಏಕಾಂಗಿಯಾಗಿ ಇಲ್ಲವೇ ಗುಂಪಿನಲ್ಲಿ ಇರುವಂತೆ ತೋರಿಸಲಾಗಿದೆ. ಈ ಪ್ರಾಣಿಗಳನ್ನು ಚಿತ್ರಕಾರ ವಿವಿಧ ಭಂಗಿಗಳಲ್ಲಿ ಅಂದರೆ ಕೆಲ ಪ್ರಾಣಿಗಳು ಹುಲ್ಲು ಮೇಯುತ್ತಿರುವಂತೆ, ಕೆಲವನ್ನು ನಿಂತಂತೆ, ಮತ್ತೆ ಕೆಲವನ್ನು ಚಲಿಸುವ ಅಥವಾ ಓಡುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ಇಂತಹ ಚಿತ್ರಗಳು ಕೆಲವೊಂದೆಡೆ ಪುಟ್ಟದಾಗಿದ್ದರೆ ಇನ್ನೊಂದೆಡೆ ಪ್ರಾಣಿಗಳ ಸಜೀವ ಆಕಾರದಷ್ಟು ದೊಡ್ಡದಾಗಿದ್ದು ನೋಡಲು ದಷ್ಟಪುಷ್ಟವಾಗಿ ಜೀವಂತ ಚಿತ್ರಗಳಂತೆ ತೋರುತ್ತವೆ. ಹಾಗೂ ಭೀಂಬೇಟ್ಕದ ಉತ್ಖನನದಲ್ಲಿ ಇತರೆ ಅವಶೇಷಗಳ ಜೊತೆ ಪ್ರಾಣಿಗಳ ಅವಶೇಷಗಳಾದ ಜಿಂಕೆಕೊಂಬುಗಳು ಮತ್ತು ಪ್ರಾಣಿಗಳ ಎಲುಬುಗಳಿಂದ ತಯಾರಿಸಿದ ಮೊನೆಗಳು ಕಂಡುಬಂದಿರುತ್ತವೆ.[೩೮]

ಪ್ರಸಿದ್ಧಿ ಪಡೆದ ಕಂಚಿನ ಅಥವಾ ಕಲ್ಲಿನ ಶಿಲ್ಪಗಳು ಹರಪ್ಪಾ ಮತ್ತು ಮೆಹೆಂಜೋದಾರೋದಲ್ಲಿ ವರದಿಯಾಗಿವೆ. ಮುಖ್ಯವಾಗಿ ಲೋಥಾಲ್‌ನಲ್ಲಿ ತಾಮ್ರದಿಂದ ತಯಾರಿಸಿದ ನಾಯಿ ಹಾಗೂ ಪಕ್ಷಿಯ ಮೂರ್ತಿಗಳು ದೊರೆತ್ತಿದ್ದು ಗಮನಾರ್ಹವಾಗಿವೆ.[೫೯] ಕಾಲಿಬಂಗಾನ್‌ನಲ್ಲಿ ಕಂಚಿನ ಗೂಳಿಗಳು ವರದಿಯಾಗಿದ್ದು ತಮ್ಮ ಶೈಲಿ ಹಾಗೂ ಕಲೆಯಿಂದ ವಿಶಿಷ್ಟವಾಗಿವೆ. ಇದೇ ರೀತಿಯಾಗಿ ಕೇಶಸೂಜಿಯ ಮೇಲೆ ಕೆತ್ತಿದ ಒಂದನೊಂದು ಆಲಂಗಿಸಿದ ಮೂರು ಮಂಗಗಳ ಸಂಯೋಜನೆ ನೈಜತೆಯಿಂದ ಕೂಡಿದೆ. ಹಾಗೆಯೇ ಸ್ಟಿಯಟೈಟ್‌ನಲ್ಲಿ ತಯಾರಿಸಿದ ಜೋಲು ಕಿವಿಯ ಬೇಟೆ ನಾಯಿ, ಎರಡು ಟಗರುಗಳು ಮತ್ತು ತನ್ನ ಎರಡೂ ಮುಂಗಾಲುಗಳಲ್ಲಿ ತಿನ್ನುವ ಪದಾರ್ಥವನ್ನು ಹಿಡಿದುಕೊಂಡು ಬೆನ್ನಿನುದ್ದಕ್ಕೂ ಬಾಲವನ್ನೆತ್ತರಿಸಿಕೊಂಡು ಕುಳಿತಿರುವ ಅಳಿಲಿನ ಶಿಲ್ಪಗಳು ನೋಡುವವರ ಮನಸೂರೆಗೈಯುತ್ತವೆ.[೬೦]

ಮೆಹೆಂಜೋದಾರೋದಲ್ಲಿ ಸಿಕ್ಕಿದ ಪೀಠದ ಮೇಲೆ ಮಲಗಿ ಹಿಂದಕ್ಕೆ ಬಾಗಿದ ಕೊಂಬುಗಳುಳ್ಳ ಕಾಡುಮೇಕೆ, ಟಗರು, ಇತ್ಯಾದಿ ಪ್ರಾಣಿಗಳ ಶಿಲ್ಪಗಳು ಅತಿ ಚಿಕ್ಕದಾಗಿವೆ. ಆದರೆ ಇವೆಲ್ಲದರಕ್ಕಿಂತ ಮಲಗಿದ ಒಂದು ಟಗರಿನ ಶಿಲ್ಪದ ನೈಜತೆ ಪ್ರಶಂಸನೀಯ. ತನ್ನ ನಾಲ್ಕು ಕಾಲುಗಳನ್ನು ಮಡಚಿ ಮಲಗಿದ ಈ ಸಹಜ ಲಕ್ಷಣಗಳನ್ನು ಕಲಾಕಾರನು ಸ್ಪಷ್ಟ ರೀತಿಯಲ್ಲಿ ಎತ್ತಿ ತೋರಿಸಿದ್ದಾನೆ. ಈ ಲಕ್ಷಣಗಳು ಟಿಬೆಟ್, ಬಲೂಚಿಸ್ತಾನ ಹಾಗೂ ಇರಾನ್ ಪ್ರದೇಶದಲ್ಲಿರುವ ಉರಿಯಲ್ ಎಂಬ ತಳಿಯ ಟಗರನ್ನು ಹೋಲುತ್ತವೆ.[೬೧]

ಸಿಂಧೂ ನಾಗರೀಕತೆಯ ಕಾಲದ ಕಲಾ ಅವಶೇಷಗಳ ಪ್ರಸರಣ ಹಾಗೂ ವ್ಯಾಪ್ತಿಯನ್ನು ಕಂಡಾಗ ಕಲೆ ಒಂದು ಪ್ರಬಲ ಕೇಂದ್ರದ ಮಾರ್ಗದರ್ಶನದಡಿಯಲ್ಲಿ, ಈ ಸಂಸ್ಕೃತಿಯ ಭೌಗೋಳಿಕ ವ್ಯಾಪ್ತಿಯಲ್ಲಿ ಬೆಳೆಯದೇ ವಿವಿಧ ಪ್ರದೇಶಗಳ ಭೌಗೋಳಿಕ ಪರಿಸ್ಥಿತಿಗನುಗುಣವಾಗಿ ವಿವಿಧ ರೂಪವನ್ನು ಪಡೆದು ಬೆಳೆದು ಬಂದಿತ್ತೆನ್ನಬಹುದು. ಉದಾ: ಧೋಲಾವೀರದಿಂದ ವರದಿಯಾದ ಗೋಧಿಕಾ ಅಥವಾ ಉಡದ ಶಿಲ್ಪಗಳು ಮೆಹೆಂಜೋದಾರೋ ಅಥವಾ ಹರಪ್ಪಾದಲ್ಲಿ ಇದುವರೆಗೆ ವರದಿಯಾಗಿಲ್ಲ. ಈ ಪ್ರಾಣಿಯನ್ನು ಕುರಿತಾಗಿ ಆ ಕಾಲದಲ್ಲಿಯೂ ಕಚ್ಛ್ ಪ್ರಾಂತ್ಯದಲ್ಲಿ ಧಾರ್ಮಿಕ ನಂಬಿಕೆಗಳು ಇದ್ದಿರಬಹುದು. ಏಕೆಂದರೆ ಐತಿಹಾಸಿಕ ಕಾಲದ ಸಂಪ್ರದಾಯದಂತೆ ಗುಜರಾತ್ ಭಾಗದಲ್ಲಿ ಉಡ ಪಾರ್ವತಿ ದೇವಿಯ ವಾಹನ.[೬೨] ಹೀಗೆ ಸಿಂಧೂ ಸಂಸ್ಕೃತಿ ತನ್ನದೇ ಆದ ವೈಶಿಷ್ಟ್ಯಪೂರ್ಣ ಕಲೆಯನ್ನು ಬೆಳೆಸಿಕೊಂಡು ಬಂದಿದೆ. ಪ್ರೌಢ ಸಿಂಧೂ ಸಂಸ್ಕೃತಿಯ ಶಿಲ್ಪ ಸಂಪ್ರದಾಯ ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರಬಹುದೇ ಎಂಬ ಪ್ರಶ್ನೆಗೆ ಬಿಡಿ ಶಿಲ್ಪಗಳಂತೆ ದೊರೆತ ಪುರೋಹಿತ–ರಾಜ, ಪಶುಪತಿ–ಶಿವ, ನಟರಾಜ ಇತ್ಯಾದಿ ಯೋಗಶಾಸ್ತ್ರದ ಜೊತೆಗೆ ಧಾರ್ಮಿಕ ಭಾವನೆಗಳನ್ನು ಒಳಗೂಡಿಸಿಕೊಂಡು ದೈವತ್ವವನ್ನು ಪ್ರತಿಬಿಂಬಿಸುವ ಕುರುಹುಗಳಾಗಿವೆಯೆಂದು ಕೆಲ ವಿದ್ವಾಂಸರ ಅಭಿಪ್ರಾಯ. ಇಂತಹ ವಿಚಾರಕ್ಕೆ ಈ ಕಾಲದ ಪ್ರಾಣಿಶಿಲ್ಪಗಳೂ ಹೊರತಾಗಿರಲು ಸಾಧ್ಯವಿಲ್ಲ.

ಪ್ರೌಢ ಹರಪ್ಪ ಕಾಲದಲ್ಲಿದ್ದ ಸಾಕುಪ್ರಾಣಿಗಳ ಹಾಗೂ ವನ್ಯಮೃಗಗಳ ಮೂಳೆಗಳು ಉತ್ಖನನದಿಂದ ಹೇರಳವಾಗಿ ಪ್ರಾಪ್ತವಾಗಿದ್ದು, ಅವುಗಳ ಅಧ್ಯಯನದಿಂದ ಜಾನುವಾರು ಎಮ್ಮೆ, ಕುರಿ, ಮೇಕೆ, ಹಂದಿ, ಒಂಟೆ, ಕುದುರೆ, ಆನೆ, ನಾಯಿ, ಬೆಕ್ಕು, ಕತ್ತೆ ಮುಂತಾದ ಪ್ರಾಣಿಗಳನ್ನು ಗುರುತಿಸಲಾಗಿದೆ. ಪ್ರೌಢ ಹರಪ್ಪ ಕಾಲದಲ್ಲಿ ಕುದುರೆಯ ಅಸ್ತಿತ್ವವನ್ನು ಕೆಲವು ವಿದ್ವಾಂಸರು ಪ್ರಶ್ನಿಸಿದ್ದಾರೆ. ಈ ಪ್ರಾಣಿಯ ಅವಶೇಷಗಳ

ಸಂಶೋಧನೆಯಿಂದ ಕುದುರೆ ಇರಲಿಲ್ಲ ಎಂಬ ವಾದ ನಿರಾಧಾರವೆಂದು ಸಾಬೀತಾಗಿದೆ. ಹರಪ್ಪ, ಮಹೆಂಜೋದಾರೋ, ಲೋಥಾಲ್, ಸುರಕೋಟಡ, ಕಾಲಿಬಂಗಾನ್ ಹಾಗೂ ಕುಂತಾಸಿ ನೆಲೆಗಳಲ್ಲಿಯ ಪ್ರಾಣಿಗಳ ಅಸ್ಥಿಅವಶೇಷಗಳಲ್ಲಿ ಕುದುರೆಗಳ ಮೂಳೆಗಳನ್ನು ನಿಸ್ಸಂಶಯವಾಗಿ ಗುರುತಿಸಲಾಗಿದೆ. ಅಲ್ಲದೆ ಈ ಸಂದರ್ಭದಲ್ಲಿ ಲೋಥಾಲ್ ಮತ್ತು ಚಾನ್ಹುದಾರೊ ನೆಲೆಗಳಿಂದ ವರದಿ ಮಾಡಿದ ಸುಟ್ಟ ಮಣ್ಣಿನ ಕುದುರೆಯ ಗೊಂಬೆಗಳನ್ನು ಸ್ಮರಿಸಬಹುದು. ದೈಮಾಬಾದ್‌ನಲ್ಲಿ ಜೋಡಿ ಗೂಳಿಗಳ ಓಟದ ಗೊಂಬೆಗಳು ಜೊತೆಗೆ ಆನೆಯ ಗೊಂಬೆಗಳು ಹಾಗೆಯೇ ಕುಂತಾಸಿಯಲ್ಲಿ ಒಂದೇ ಡುಬ್ಬವುಳ್ಳ ಒಂಟೆಯ ಅಸ್ಥಿ ಅವಶೇಷಗಳು ಸಿಕ್ಕಿವೆ. ಸಾಕುಪ್ರಾಣಿಗಳಲ್ಲದೆ ಕಾಡುಕುರಿ, ಮೇಕೆ, ಕತ್ತೆ ಹಂದಿಗಳ ಅಸ್ಥಿ ಅವಶೇಷಗಳು ಈ ಕಾಲದ ಸ್ತರಗಳಿಂದ ವರದಿಯಾಗಿದೆ. ಅಲ್ಲದೆ ವಿಭಿನ್ನ ಜಾತಿಯ ಜಿಂಕೆಗಳನ್ನು ಬೇಟೆಯಾಡುತ್ತಿದ್ದು, ಮೀನು, ಆಮೆ ಹಾಗೂ ದನಗಳ ಮಾಂಸವೂ ಭೋಜ್ಯ ಪದಾರ್ಥಗಳಾಗಿದ್ದವು. ಮೃದ್ವಂಗಿಯಂಥ ಜೀವಿಗಳನ್ನು ಆಹಾರವಾಗಿ ಈ ಕಾಲದ ಜನರು ಸೇವಿಸುತ್ತಿದ್ದರೆಂಬುದಾಗಿ ತಿಳಿದುಬರುತ್ತದೆ.[೬೩]

ಸಿಂಧೂ ನಾಗರೀಕತೆಯಿಂದ ಮೌರ್ಯರ ಕಾಲದವರೆಗೆ ಯಾವುದೇ ರೀತಿಯ ಶಿಲ್ಪಗಳು ಕಂಡುಬಂದಿಲ್ಲ. ನಂತರದ ಮಹಾಜನಪದಗಳ ಕಾಲದಲ್ಲಿ ಚಿತ್ರಿತ ಫಲಕಗಳಲ್ಲಿ ಶಿಲ್ಪಗಳನ್ನು ಕಾಣಬಹುದಾದರೂ ಅವು ಸ್ಪಷ್ಟವಾಗಿಲ್ಲ. ನಂತರ ಮೌರ್ಯರ ಪ್ರಧಾನ ವಾಸ್ತುಕೃತಿಗಳೆಂದರೆ ಸ್ತಂಭಗಳು. ಅದರಲ್ಲಿ ಅಶೋಕನ ಕಾಲದ ಸ್ತಂಭಗಳ ಮೇಲಿನ ಪ್ರಾಣಿಗಳು ಬಹುಮುಖ್ಯವಾದ ಶಿಲ್ಪದ ಉಳಿಕೆಗಳಾಗಿವೆ. ಇಂತಹ ಶಿಲ್ಪಗಳಲ್ಲಿ ರಾಂಪೂರ್ವ, ಬಸರ್‌ಬಖೀರ, ಲೌರಿಯಾ, ನಂದನಗಡದ ಸ್ತಂಬಗಳಲ್ಲಿನ ಸಿಂಹದ ಶಿಲ್ಪಗಳು, ರಾಂಪೂರ್ವದ ಗೂಳಿ ಶಿಲ್ಪ, ಸಂಕೀಸದ ಆನೆ ಮತ್ತು ಗೂಳಿ ಶಿಲ್ಪಗಳು ಆಕರ್ಷಕವಾಗಿವೆ. ಸಾರನಾಥದ ಪೀಠದಲ್ಲಿ ನಾಲ್ಕು ದಿಕ್ಕಿಗೂ ನಾಲ್ಕು ಚಕ್ರಗಳು ಮತ್ತು ಪ್ರತಿ ಎರಡು ಚಕ್ರಗಳ ಮಧ್ಯೆ ಒಂದೊಂದರಂತೆ ಆನೆ. ವೃಷಭ, ಕುದುರೆ, ಸಿಂಹ ಈ ನಾಲ್ಕು ಪ್ರಾಣಿಗಳನ್ನು ಕೆತ್ತಲಾಗಿದೆ. ಈ ಪೀಠದ ಮೇಲ್ಭಾಗದಲ್ಲಿ ಒಂದೊಂದು ಸಿಂಹದಂತೆ ನಾಲ್ಕು ದಿಕ್ಕುಗಳಿಗೂ ಮುಖ ಮಾಡಿ, ಬಾಯಿ ತೆರೆದಿರುವ ನಾಲ್ಕು ಸಿಂಹಗಳು ಬೆನ್ನಿಗೆ ಬೆನ್ನುಕೊಟ್ಟು ನಿಂತಂತೆ ಬಿಡಿಸಲಾಗಿದೆ. ಈ ಶಿಲ್ಪಗಳನ್ನು ಕೂಲಂಕಶವಾಗಿ ಗಮನಿಸಿದಾಗ ಅವುಗಳ ದಷ್ಟಪುಷ್ಟತೆ, ಅಂಗಾಂಗಗಳನ್ನು ಸೂಕ್ಷ್ಮವಾಗಿ ನೋಡಿ ಶಿಲ್ಪಗಳನ್ನು ಉತ್ತಮವಾಗಿ ಕೆತ್ತಿರುವುದು ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ.[೬೪] ಕರ್ನಾಟಕ ಪ್ರಾಚೀನ ನಾಣ್ಯಗಳಾದ ಮೌರ್ಯರ ಮುದ್ರಾಂಕಿತ ನಾಣ್ಯಗಳಲ್ಲಿಯೂ ಸಹ ಆನೆ, ವೃಷಭ, ನವಿಲು, ಜಿಂಕೆ, ಮುಂತಾದ ಪ್ರಾಣಿಗಳು ಜೊತೆಗೆ ಬೆಟ್ಟಗುಡ್ಡಗಳು ಹಾಗೂ ಮರಗಳ ಚಿನ್ಹೆಗಳಿರುವುದನ್ನು ಕಾಣಬಹುದು.[೬೫]

ಮೌರ್ಯರ ನಂತರ ಅಧಿಕಾರಕ್ಕೆ ಬಂದ ಶುಂಗರು ಸಹ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಆದ್ಯತೆ ನೀಡಿದ್ದು ಸಾಂಚಿ ಸ್ತೂಪದ ತೋರಣದ್ವಾರದ ಪಟ್ಟಿಕೆಗಳಲ್ಲಿ ಕುಬ್ಜರ ಶಿಲ್ಪಗಳ ಜೊತೆಯಲ್ಲಿ ಸಿಂಹ ಮತ್ತು ಆನೆಗಳ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ.[೬೬] ನಂತರ ಕುಶಾನರ ಕಾಲ ಭಾರತೀಯ ವಾಸ್ತುಶಿಲ್ಪದ ಚರಿತ್ರೆಯಲ್ಲಿ ಮಹತ್ತರವಾದುದು. ಇವರ ಕಾಲದಲ್ಲಿ ಮಥುರ ಮತ್ತು ಗಾಂಧಾರ ರೀತಿಯ ಶಿಲ್ಪಗಳು ಬಳಕೆಗೆ ಬಂದವು. ಮಥುರ ಶಿಲ್ಪ ಸ್ವಲ್ಪ ಮಟ್ಟಿಗೆ ಗಾಂಧಾರ ಶಿಲ್ಪದ ಪ್ರಭಾವಕ್ಕೆ ಒಳಗಾದಂತೆ ಕಾಣುತ್ತದೆ. ಸಿಂಹದೊಡನೆ ಹರ್ಕ್ಯೂಲಿಸ್ ಹೋರಾಡುವ ಶಿಲ್ಪ ಇದಕ್ಕೊಂದು ನಿದರ್ಶನ. ಹಾಗೆಯೇ ಕುಶಾನರ ನಾಣ್ಯಗಳಲ್ಲಿಯೂ ಸಹ ಪ್ರಾಣಿಗಳನ್ನು ಚಿತ್ರಿಸಿರುವುದು ತಿಳಿದುಬರುತ್ತದೆ. ಅಂತಹ ಒಂದು



ನಾಣ್ಯದ ಮುಮ್ಮುಖದಲ್ಲಿ ವೃಷಭ ಮತ್ತು ಹಿಮ್ಮುಖದಲ್ಲಿ ಎರಡು ಡುಬ್ಬವಿರುವ ಒಂಟೆಗಳನ್ನು ಚಿತ್ರಿಸಲಾಗಿದೆ.[೬೭] ಅದೇ ರೀತಿ ವಿಮಾ ಕಡ್‌ಫೀಸಸ್‌ನ ನಾಣ್ಯದ ಒಂದು ಮುಖದಲ್ಲಿ ಗ್ರೀಕ್ ಬರವಣಿಗೆಯಿದ್ದು, ಹಿಮ್ಮುಖದಲ್ಲಿ ನಂದಿ ಸಹಿತ ತ್ರಿಶೂಲ ಹಿಡಿದ ಶಿವನ ಚಿತ್ರ[೬೮] ಆನೆ ಸವಾರಿ ಮಾಡುತ್ತಿರುವ ಚಿತ್ರಗಳು ಇವನ ಕಾಲದ ನಾಣ್ಯಗಳಲ್ಲಿ ಸಾಮಾನ್ಯವಾಗಿ ಕಾಣಬಹುದು.

ನಂತರ ಗುಪ್ತರ ಕಾಲದಲ್ಲಿ ಹಲವು ದೇವಾಲಯಗಳು ನಿರ್ಮಾಣವಾಗಿ ಅವುಗಳಲ್ಲಿ ಶಿಲ್ಪಶೈಲಿಯ ಲಕ್ಷಣಗಳು ಸಾರೂಪ್ಯವಾಗಿರುವುದು ವಿಶೇಷವಾಗಿದೆ. ಗುಪ್ತರ ಶೈಲಿಯ ಮೊದಲ ಕಾಲನಿರ್ಣಿತ ಶಿಲ್ಪ ಉದಾಹರಣೆಗಳು ವಿದಿಶಾ ಮತ್ತು ಅದರ ಸಮೀಪದಲ್ಲಿರುವ ಉದಯಗಿರಿಯ ಗುಹಾಲಯಗಳಲ್ಲಿವೆ. ವಾಸ್ತು ದೃಷ್ಟಿಯಿಂದಲ್ಲದಿದ್ದರೂ ಶಿಲ್ಪಕಲಾ ದೃಷ್ಟಿಯಿಂದ ಇವು ಮಹತ್ವದ್ದಾಗಿವೆ. ಉದಯಗಿರಿ ಗುಹೆಗಳ ಶಿಲ್ಪಗಳಲ್ಲಿ ಭೂವರಾಹ ಶಿಲ್ಪ ಉಲ್ಲೇಖನೀಯವಾಗಿದೆ. ಈ ಉಬ್ಬುಶಿಲ್ಪ ವರಾಹ ರೂಪದ ವಿಷ್ಣುವಿನ ಅತ್ಯಂತ ಪ್ರಾಚೀನ ಶಿಲ್ಪದ ಉದಾಹರಣೆಯಾಗಿದೆ.[೬೯] ಮನುಷ್ಯ ಶರೀರದಿಂದೊಡಗೂಡಿರುವ ವರಾಹ ಮುಖದ ವಿಷ್ಣು ತನ್ನ ಬಲಕೋರೆಯಿಂದ ಸ್ತ್ರೀರೂಪದ ಭೂದೇವಿಯನ್ನು ರಸಾತಲದಿಂದ ಎತ್ತಿಹಿಡಿದಿರುವ ದೃಶ್ಯ ಅತ್ಯದ್ಭುತವಾಗಿದೆ. ನಂತರ ನಾಲ್ಕನೇ ಗುಹೆಯಲ್ಲಿ ಮಹಿಷಾಮರ್ಧಿನಿಯ ಶಿಲ್ಪವಿದ್ದು ವಿಶೇಷವಾಗಿದೆ. ಅಲ್ಲಿನ ಒಂದು ಶಿಲ್ಪಫಲಕದಲ್ಲಿ ಗಜೇಂದ್ರಮೋಕ್ಷ ಕಥೆಯನ್ನು ಚಿತ್ರಿಸಿದ್ದು, ಇದರಲ್ಲಿ ಗಜರಾಜನ (ಆನೆ) ಕಾಲನ್ನು ಹಿಡಿದಿರುವ ಪ್ರಾಣಿ ಮೊಸಳೆಯಾಗಿರದೆ ಹೆಬ್ಬಾವಾಗಿರುವುದು ಕುತೂಹಲಕಾರಿಯಾಗಿದೆ. ಹೀಗೆ ಗುಪ್ತರ ಕಾಲದ ಶಿಲಾ ಶಿಲ್ಪಗಳಲ್ಲಿ ಹಿಂದೂ, ಜೈನ ಮತ್ತು ಬೌದ್ಧ ಶಿಲ್ಪಗಳಿಗೆ ಮೊದಲ ಆದ್ಯತೆ ನೀಡಿದ್ದು ನಂತರದಲ್ಲಿ ಆಗಮ, ಪುರಾಣಕ್ಕೆ ಸಂಬಂಧಿಸಿದ ಶಿಲ್ಪಗಳು ಈ ಕಾಲದಲ್ಲಿ ರಚನೆಯಾಗಿರುವುದು ತಿಳಿದುಬರುತ್ತದೆ. ಹಾಗಾಗಿ ಗುಪ್ತರ ಕಾಲದ ದೇವಾಲಯಗಳಿಗಿಂತ ಶಿಲಾಶಿಲ್ಪಗಳು ಹೆಚ್ಚು ಸಂಖ್ಯೆಯಲ್ಲಿ ಉಳಿದುಕೊಂಡಿದ್ದು, ಇವರ ಕಾಲದಲ್ಲಿ ಭಾರತೀಯ ಶಿಲ್ಪಕಲೆ ಪ್ರಸಿದ್ಧಿಯ ಪರಾಕಾಷ್ಠೆ ತಲುಪಿರುವುದು ತಿಳಿದುಬರುತ್ತದೆ.

ಗುಪ್ತರ ಕಾಲದ ಹಲವು ನೆಲೆಗಳ ಉತ್ಖನನದಲ್ಲಿ ಸುಡಾವೆ ಮಣ್ಣೂರ್ತಿಗಳು ದೊರೆತಿದ್ದು, ಅದರಲ್ಲಿ ಪ್ರಮುಖವಾಗಿ ಒಂಬತ್ತು ಅಶ್ವಪಾಲಕರು ಮೂವರು ಮಾವುತರು ಹಾಗೂ ಅನೇಕ ಸ್ತ್ರೀಪುರುಷರ ಮಣ್ಣೂರ್ತಿಗಳು ದೊರೆತಿವೆ. ಅಲ್ಲದೆ ಗಂಗಾ ನದಿ ಬಯಲಿನ ಅನೇಕ ನೆಲೆಗಳಲ್ಲಿ ಆನೆ, ಕುದುರೆ, ನಾಯಿ ಜಿಂಕೆ, ಕೋತಿ, ವ್ಯಾಳ, ಒಂಟೆ, ಇಲಿ, ಕುರಿ, ಕರಡಿ, ಸಿಂಹ, ಎಮ್ಮೆ, ಆಮೆ, ಘೇಂಡಾಮೃಗ, ನೀರ್ಗುದುರೆ, ಮೊಸಳೆ, ಚಿರತೆ, ಹಂದಿ ಮುಂತಾದ ಪ್ರಾಣಿಗಳ ಸುಡಾವೆ ಮಣ್ಣೂರ್ತಿಗಳು ಗುಪ್ತರ ಕಾಲದ ನೆಲೆಗಳಲ್ಲಿ ದೊರೆತಿವೆ.[೭೦] ಬಹುಶಃ ಇವೆಲ್ಲವೂ ಮಕ್ಕಳ ಆಟಿಕೆಗಳಾಗಿದ್ದಿರಬಹುದು. ಹಾಗೆಯೇ ಇವರ ಕಾಲದ ನಾಣ್ಯಗಳಲ್ಲೂ ಸಹ ಪ್ರಾಣಿಗಳನ್ನು ಮುದ್ರಿಸಿರುವುದು ಅವುಗಳ ಮಹತ್ವವನ್ನು ಬಿಂಬಿಸುತ್ತವೆ. ಸಮುದ್ರಗುಪ್ತನು ಗುಪ್ತರಲ್ಲಿ ಅತ್ಯಂತ ಪ್ರಸಿದ್ಧ ದೊರೆ. ಇವನು ಅನೇಕ ನಾಣ್ಯಗಳನ್ನು ಮುದ್ರಿಸಿದ್ದು ಪ್ರಮುಖವಾಗಿ ಅಶ್ವಮೇಧಯಾಗದ ಕುರಿತ ನಾಣ್ಯ, ಹುಲಿಯನ್ನು ಕೊಲ್ಲುತ್ತಿರುವ ನಾಣ್ಯಗಳನ್ನು ಮುದ್ರಿಸಿದ. ಇವನ ನಾಣ್ಯಗಳು ಜನಸಾಮಾನ್ಯರ ಬಗ್ಗೆ ಮಾಹಿತಿ ನೀಡದಿದ್ದರು ಅಂದಿನ ರಾಜನ ಬಗ್ಗೆ ಬೆಳಕು ಚೆಲ್ಲುತ್ತವೆ. ಮುಖ್ಯವಾಗಿ ನಾಣ್ಯಗಳಲ್ಲಿನ ಪ್ರಾಣಿಚಿತ್ರಗಳಿಂದ ಆ ಕಾಲದಲ್ಲಿ ಪ್ರಾಣಿಗಳ ಮಹತ್ವನ್ನು ವಿವರಿಸುವಲ್ಲಿ ಈ ನಾಣ್ಯಗಳು ಪ್ರಮುಖ ಆಕರಗಳಾಗಿವೆ. ಒಂದು ನಾಣ್ಯದಲ್ಲಿ ಚಂದ್ರಗುಪ್ತನು

ಸಿಂಹವೊಂದನ್ನು ಬಾಣದಿಂದ ಕೊಲ್ಲುತ್ತಿರುವ ಸನ್ನಿವೇಶವನ್ನು ಕಾಣಬಹುದು. ನಂತರದ ಕುಮಾರಗುಪ್ತನ ಕಾರ್ತಿಕೇಯ ಚಿತ್ರದ ನಾಣ್ಯದಲ್ಲಿ ಆನೆ ಸವಾರನು ಖಡ್ಗಮೃಗವನ್ನು ವಧಿಸುತ್ತಿರುವ ಚಿತ್ರದ ನಾಣ್ಯಗಳನ್ನು ಮುದ್ರಿಸಿರುವುದು ಕಂಡುಬರುತ್ತದೆ.[೬]

ನಂತರದ ಶಾತವಾಹನ ರಾಜರು ಮಹಾಯಾನ ಬೌದ್ಧಧರ್ಮವನ್ನು ಪ್ರೋತ್ಸಾಹಿಸಿ ಚೈತ್ಯ, ವಿಹಾರ, ಸ್ತೂಪಗಳನ್ನು ಕಟ್ಟಿಸಿದರು. ಇಲ್ಲಿಯ ಅಮರಾವತಿ ಸ್ತೂಪದ ಶಿಲ್ಪಗಳು ಪ್ರಪಂಚ ವಿಖ್ಯಾತವಾಗಿವೆ. ಬುದ್ಧನ ಜಾತಕ ಕಥೆಗಳಿಂದಲೂ ಜೀವಿತ ವೃತ್ತಾಂತಗಳಿಂದಲೂ ವಿವರಗಳನ್ನು ಆಯ್ದುಕೊಂಡು ಶಿಲ್ಪಿಗಳು ಇಲ್ಲಿ ರಮಣೀಯವಾದ ಶಿಲ್ಪಗಳನ್ನು ಕಡೆದಿದ್ದಾರೆ. ಇಂತಹ ಶಿಲ್ಪಗಳ ಜೊತೆಯಲ್ಲಿಯೇ ಪ್ರಾಣಿಶಿಲ್ಪಗಳನ್ನು ಸಹಜವಾಗಿ ಬಿಡಿಸಿರುವುದು ಇಲ್ಲಿಯ ಶಿಲ್ಪದ ಪ್ರಮುಖ ವೈಶಿಷ್ಟ್ಯವೆಂದೇ ಹೇಳಬಹುದು. ಸನ್ನತಿಯಲ್ಲಿ ದೊರೆತ ಸ್ಮರಣ ಫಲಕಗಳಲ್ಲಿ ಎತ್ತಿನಗಾಡಿಯ ಮುಂದೆ ವಿಶ್ರಮಿಸುತ್ತಿರುವ ಎತ್ತುಗಳನ್ನು ಕೆತ್ತಲಾಗಿರುತ್ತದೆ. ಇದು ಪ್ರಯಾಣದ ಅಂತ್ಯ ಅಥವಾ ಮರಣವನ್ನು ಸೂಚಿಸುತ್ತದೆ. ಮತ್ತೊಂದರಲ್ಲಿ ಸೇವಕ ಜೀನನ್ನು ಹಿಡಿದಿದ್ದು ಸವಾರನಿಲ್ಲದ ಕುದುರೆಯ ಚಿತ್ರಣವಿದೆ. ಇದು ಸವಾರನ ಮರಣವನ್ನು ಸೂಚಿಸುತ್ತದೆಂದು ತಿಳಿದುಬರುತ್ತದೆ.[೭] ಕನಗನಹಳ್ಳಿಯ ಸ್ತೂಪದ ಕಟಾಂಜನವನ್ನು ದೊಡ್ಡ ದೊಡ್ಡ ಆಯತಾಕಾರದ ಕಲ್ಲುಗಳಿಂದ ತಯಾರಿಸಲಾಗಿದ್ದು ಹೊರಮೈಯಲ್ಲಿ ಗಂಟೆ ಹಾಗೂ ದೀರ್ಘವೃತ್ತಾಕೃತಿಗಳ ಸಾಲುಗಳ ನಡುವೆ ಸಹಜ ಹಾಗೂ ಪೌರಾಣಿಕ ರೀತಿಯ ವಿವಿಧ ಭಂಗಿಗಳಲ್ಲಿರುವ ಗೂಳಿ, ಆನೆ, ಟಗರು, ಕುದುರೆ, ಕೋಣ, ಸಿಂಹ ಒಂಟೆ ಮುಂತಾದ ಪ್ರಾಣಿಗಳ ಶಿಲ್ಪಗಳು ಇವೆ. ಪೌರಾಣಿಕ ರೀತಿಯ ಪ್ರಾಣಿಗಳಿಗೆ ಗಿಳಿಮೂಗು ಮತ್ತು ರೆಕ್ಕೆಗಳನ್ನು ಮೂಡಿಸಿದೆ. ನವರಸವುಕ್ಕಿಸುವಂತಹ ಮುಖಭಾವ. ಅದಕ್ಕೊಪ್ಪುವ ವಿಶಿಷ್ಟ ಭಂಗಿಗಳ ಪ್ರಾಣಿ ಶಿಲ್ಪಗಳು ಕಂಡುಬರುತ್ತವೆ. ಹಾಗೂ ವೇದಿಕೆಯ ಫಲಕಗಳಲ್ಲಿ ಹಲವು ಶಿಲ್ಪಗಳ ಜೊತೆಯಲ್ಲಿ ೩ ರಿಂದ ೯ ಹೆಡೆಗಳಿರುವ ಸುಂದರ ನಾಗಮುಚಲಿಂದ ಮುಂತಾದ ಉಬ್ಬುಶಿಲ್ಪಗಳಿವೆ. ಇವುಗಳಲ್ಲಿ ಪಶ್ಚಿಮ ದ್ವಾರಕ್ಕೆ ಎದುರಾಗಿ ಆಯಕ ವೇದಿಕೆಗೆ ಜೋಡಿಸಿರುವ ಒಂಬತ್ತು ಹೆಡೆಗಳ ನಾಗರಾಜ ಮುಚಲಿಂದನ ಶಿಲ್ಪ ಅತ್ಯಂತ ಕಲಾತ್ಮಕವಾದದ್ದು. ಈ ರೀತಿಯ ಪ್ರಾಣಿ ಶಿಲ್ಪಗಳು ಸನ್ನತಿಯ ಕಲಾವಿದರ ಅಪೂರ್ವ ನೈಪುಣ್ಯಕ್ಕೆ ಸಾಕ್ಷಿ ಎನಿಸಿವೆ. ಶಾತವಾಹನರ ಕಾಲದಲ್ಲಿ ಶಿಲೆ ಮತ್ತು ಮಣ್ಣಿನ ಶಿಲ್ಪಗಳು ಹೆಚ್ಚು ದೊರೆತಿದ್ದು, ಲೋಹದ ಶಿಲ್ಪಗಳು ಕಂಡುಬಂದಿರುವುದು ಅತಿ ವಿರಳ. ಅಂತಹದರಲ್ಲಿ ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಸಮೀಪದ ಗಂಜಿಗಟ್ಟೆನ ಗ್ರಾಮದಲ್ಲಿ ಕರುವಿಗೆ ಹಾಲುಣಿಸುತ್ತಿರುವ ಹಸುವಿನ ಅಪರೂಪದ ಕಂಚಿನ ಶಿಲ್ಪ ದೊರೆತಿದೆ.[೩] ಈ ಶಿಲ್ಪದ ಶೈಲಿಯ ದೃಷ್ಟಿಯಿಂದ ಇದನ್ನು ಕ್ರಿಶ. ೧–೨ನೆಯ ಶತಮಾನಕ್ಕೆ ಸೇರಿಸಬಹುದು.

ಶಾತವಾಹನರ ನಂತರ ಪ್ರಮುಖ ರಾಜಮನೆತನವಾಗಿ ಕರ್ನಾಟಕದಲ್ಲಿ ಬನವಾಸಿ ಕದಂಬರು ಆಳ್ವಿಕೆ ನಡೆಸಿದರು. ಇವರು ಸಿಂಹವನ್ನು ರಾಜ್ಯಲಾಂಛನ ಮಾಡಿಕೊಂಡಿದ್ದರು. ಇವರ ಕಾಲಾವಧಿಯಲ್ಲಿ ಹಲವು ದೇವಾಲಯಗಳು ನಿರ್ಮಾಣವಾಗಿದ್ದು, ಶಿಲ್ಪಗಳಿಗೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆಯ ಜಂಬೆಹಳ್ಳಿಯಲ್ಲಿ ಈ ಕಾಲದ ಮಹಿಷಮರ್ಧಿನಿಯ ಶಿಲ್ಪವೊಂದು ದೊರಕಿದೆ. ಈ ದೇವಾಲಯದ ಮುಂದಿರುವ ಶಾಸನವೊಂದರಿಂದ ಈ ಗುಡಿ ಮೂಲತಃ ಕದಂಬ ಶಾಂತಿವರ್ಮನು ಕಟ್ಟಿಸಿದನೆಂದು ತಿಳಿಯುತ್ತದೆ. ಹಾಗೂ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಅಷ್ಟದಿಕ್ಪಾಲಕರು, ನಾಗ, ಗಿಳಿಗಳು ಮತ್ತು ಸಿಂಹಗಳ ಶಿಲ್ಪಗಳನ್ನು ಕಾಣಬಹುದು.

ಚಲುಕ್ಯರು ತಮ್ಮ ರಾಜಧಾನಿ ಬಾದಾಮಿಯಲ್ಲಿ ಮತ್ತು ಅದರ ಸಮೀಪದ ಮಹಾಕೂಟ, ಪಟ್ಟದಕಲ್ಲು, ಐಹೊಳೆ, ಮಹಾನಂದಿ ಇನ್ನು ಮುಂತಾದ ಕಡೆ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಈ ದೇವಾಲಯಗಳಲ್ಲಿ ಅಂದಿನ ಕಾಲದ ವಿಪುಲ ಶಿಲ್ಪಸಂಪತ್ತನ್ನೇ ನಾವು ಕಾಣಬಹುದು. ಬಾದಾಮಿಯ ಗುಹಾಲಯಗಳಲ್ಲಿ ಐದು ಹೆಡೆಯ ನಾಗ, ನಂದಿ, ವರಾಹ, ಗರುಡನ ಬೃಹತ್ ಶಿಲ್ಪ, ಮಹಿಷಾಮರ್ಧಿನಿ, ಮುಂತಾದ ಪ್ರಾಣಿಗಳಿಗೆ ಸಂಬಂಧಿಸಿದ ಶಿಲ್ಪಗಳ ಜೊತೆಗೆ ಹಲವು ಪೌರಾಣಿಕ, ಕಥಾನಿರೂಪಕ ಶಿಲ್ಪಗಳು ಸಹ ಕಂಡುಬರುತ್ತವೆ. ಹಾಗೆಯೇ ಚಲುಕ್ಯರ ದೇವಾಲಯಗಳಲ್ಲಿ ಗೋವರ್ಧನಧಾರಿ ಕೃಷ್ಣನ ಉಬ್ಬುಶಿಲ್ಪ, ನರಸಿಂಹನು ಹಿರಣ್ಯಕಶ್ಯಪನನ್ನು ಸಂಹಾರ ಮಾಡುತ್ತಿರುವ ಶಿಲ್ಪಗಳು ಬಹುಮುಖ್ಯವಾಗಿವೆ. ಐಹೊಳೆಯ ದುರ್ಗಾ ದೇವಾಲಯದಲ್ಲಿ ವೃಷಭವಾಹನ ಶಿವ ಮುಂತಾದ ಧಾರ್ಮಿಕ ಶಿಲ್ಪಗಳಿವೆ. ಜೊತೆಗೆ ಈ ದೇವಾಲಯದಲ್ಲಿ ಹಂಸಗಳನ್ನು ಸಾಲಾಗಿ ಕೆತ್ತಲಾಗಿದ್ದು, ಇವುಗಳಲ್ಲಿ ಹಂಸಗಳು ಮತ್ತು ಆಮೆಯ ಕುರಿತಾದ ಪಂಚತಂತ್ರ ಕಥೆಯನ್ನು ತಿಳಿಸುವ ಮೂರು ಶಿಲ್ಪಗಳು ಕಂಡುಬರುತ್ತವೆ. ಇನ್ನೂ ಚಲುಕ್ಯರ ಹಲವು ದೇವಾಲಯಗಳಲ್ಲಿ ಕೀಲನುಚ್ಚಿದ ಕಪಿ, ಟಿಟಿಭ ಮತ್ತು ಸಮುದ್ರ, ಮೊಸಳೆ ಮತ್ತು ಕಪಿ. ಬ್ರಾಹ್ಮಿಣಿಯು ಮುಂಗುಸಿಯನ್ನು ಕೊಂದದ್ದು, ಬಾರಂಢ ಪಕ್ಷಿಗಳ ಪಂಚತಂತ್ರ ಕಥೆಗಳನ್ನು ನಿರೂಪಿಸುವ ಶಿಲ್ಪಗಳನ್ನು ಕಾಣಬಹುದು.[೨೯] ಈ ಶಿಲ್ಪಗಳು ಕರ್ನಾಟಕದ ಅತ್ಯಂತ ಪ್ರಾಚೀನ ಪಂಚತಂತ್ರ ಕಥೆಗಳ ನಿರೂಪಣಾತ್ಮಕ ಶಿಲ್ಪಗಳೆಂಬುದು ಗಮನಾರ್ಹ. ಹಾಗೆಯೇ ವೈಷ್ಣವ ಶಿಲ್ಪಗಳಲ್ಲಿ ಗಜೇಂದ್ರಮೋಕ್ಷ ಹಾಗೂ ತ್ರಿವಿಕ್ರಮ ಶಿಲ್ಪಗಳು ಉಲ್ಲೇಖನೀಯ. ಗರುಡನ ಮೇಲೆ ಕುಳಿತ ವಿಷ್ಣು ಪ್ರಯೋಗಿಸಿದ ಚಕ್ರದೊಂದಿಗೆ ಧಾವಿಸಿ ಗಜೇಂದ್ರನನ್ನು ಗ್ರಾಹದ (ಮೊಸಳೆ) ಹಿಡಿತದಿಂದ ಮುಕ್ತಗೊಳಿಸುತ್ತಿರುವ ದೃಶ್ಯ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇಗುಲಗಳ ಉತ್ತರ ಮುಖಮಂಟಪದ ಕಂಬಗಳ ಮೇಲಿವೆ. ಇಲ್ಲಿ ಗ್ರಾಹವನ್ನು ಆಮೆಯಾಗಿ ಚಿತ್ರಿಸಿರುವುದು ವೈಶಿಷ್ಟ್ಯ.[೩೦] ಜೊತೆಗೆ ವಿಷ್ಣುವಿನ ದಶಾವತಾರಗಳಿಗೆ ಸಂಬಂಧಿಸಿದಂತಹ ಶಿಲ್ಪಗಳು ಸಹ ಹೇರಳವಾಗಿ ನಿರ್ಮಿತವಾಗಿವೆ.

ತಲಕಾಡಿನ ಗಂಗರು ಕರ್ನಾಟಕವನ್ನು ದೀರ್ಘಕಾಲ ಆಳ್ವಿಕೆ ಮಾಡಿದ್ದು, ಶಿಲ್ಪಕಲೆಗೆ ಹೆಚ್ಚಿನ ಕೊಡುಗೆಯನ್ನು ನೀಡಿದ್ದಾರೆ. ಇವರು ಜೈನಧರ್ಮದ ಅನುಯಾಯಿಗಳಾಗಿದ್ದು ಇತರೆ ಧರ್ಮಗಳಿಗೂ ಸಮಾನ ಪ್ರಾತಿನಿಧ್ಯ ನೀಡಿ ಅನೇಕ ದೇವಾಲಯಗಳನ್ನು ಕಟ್ಟಿಸಿ ಹಲವು ಶಿಲ್ಪಗಳನ್ನು ಹಾಕಿಸಿದರು.

ಒಂದನೆಯ ಶಿವಮಾರನ ಕಾಲದಿಂದ ಶಿಲೆ ಹಾಗೂ ಇಟ್ಟಿಗೆ ನಿರ್ಮಿತ ದೇವಾಲಯಗಳು ದೊರೆಯುತ್ತವೆ. ಇವನ ನಂತರ ರಾಜ್ಯವಾಳಿದ ಶ್ರೀಪುರುಷನ ಕಾಲದಿಂದ ದೇವಾಲಯಗಳು ಹೆಚ್ಚಿಗೆ ಸಿಗುತ್ತವೆ. ಗಂಗರ ಕಾಲದ ಶಿಲ್ಪಗಳು ಒಂದನೆಯ ಶಿವಮಾರನ ಕಾಲದಿಂದ ಕಾಣಬರುತ್ತವೆಯಾದರೂ ಅವುಗಳ ಸಂಖ್ಯೆ ತೀರ ಕಡಿಮೆ. ಗಂಗರ ವಾಸ್ತು ಹಾಗೂ ಮೂರ್ತಿಶಿಲ್ಪ ಚಲುಕ್ಯ, ಪಲ್ಲವ, ರಾಷ್ಟ್ರಕೂಟರ ಶಿಲ್ಪಗಳಿಂದ ಸ್ವಲ್ಪಮಟ್ಟಿಗೆ ಪ್ರಭಾವಿತವಾಗಿವೆ. ಇವರ ಕಾಲದಲ್ಲಿ ನಂದಿ, ಮಹಿಷಾಮರ್ಧಿನಿ, ಶಿಲ್ಪಗಳು ಎಲ್ಲಾ ಕಡೆ ಹೇರಳವಾಗಿ ದೊರೆಯುತ್ತವೆ. ಗಂಗರ ಕಾಲದ ವಿಗ್ರಹಗಳಲ್ಲಿ ಶಿವಲಿಂಗ, ವಿಷ್ಣು, ದುರ್ಗಾ ಮಹಿಷಮರ್ಧಿನಿ, ಸೂರ್ಯ, ಗಣಪತಿ, ನಂದಿ, ಉಮಾಮಾಹೇಶ್ವರ, ಸಪ್ತಮಾತೃಕೆ ಶಿಲ್ಪಗಳು, ಜೈನಮೂರ್ತಿ ಶಿಲ್ಪಗಳು ಮುಖ್ಯವಾದವು. ಕುಣಿಗಲ್ ಮತ್ತು ಇತರೆ ಒಂದೆರಡು ಸ್ಥಳಗಳಲ್ಲಿ ಜಿಂಕೆ ಮತ್ತು ಸಿಂಹದ ಶಿಲ್ಪಗಳು ಇವರ ಕಾಲಾವಧಿಯಲ್ಲಿ ಕಂಡುಬಂದಿರುವುದು ತಿಳಿದುಬರುತ್ತದೆ.

ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಗುಹಾವಾಸ್ತು ಹಾಗೂ ನಿರ್ಮಿತ ವಾಸ್ತು ದೇವಾಲಯಗಳು ಅನೇಕ ಸಂಖ್ಯೆಯಲ್ಲಿ ನಿರ್ಮಾಣಗೊಂಡವು. ಅವರ ಮುಖ್ಯ ದೇವಾಲಯಗಳು ಎಲ್ಲೋರದಲ್ಲಿ ಕಂಡುಬರುತ್ತದೆ. ಎಲ್ಲೋರದ ದಶಾವತಾರ ಗುಹಾಲಯದ ಗೋಡೆಗಳಲ್ಲಿನ ಅರ್ಧಗಂಬಗಳಲ್ಲಿ ಅಂಧಕಾಸುರನನ್ನು ವಧಿಸುತ್ತಿರುವ ಶಿವ, ಪಗಡೆಯಾಟದಲ್ಲಿ ನಿರತ ಶಿವ–ಪಾರ್ವತಿಯರು ತ್ರಿವಿಕ್ರಮ, ಅರ್ಧನಾರೀಶ್ವರ, ವರಾಹ, ನಟರಾಜ ಮತ್ತು ಹಿರಣ್ಯಕಶ್ಯಪನನ್ನು ಸಂಹರಿಸುತ್ತಿರುವ ನರಸಿಂಹನ ಶಿಲ್ಪಗಳು ಶ್ರೇಷ್ಠಮಟ್ಟದಾಗಿವೆ. ಹಾಗೆಯೇ ಕೈಲಾಸನಾಥ ದೇವಾಲಯ ಎರಡು ಅಂತಸ್ತುಗಳನ್ನು ಹೊಂದಿದ್ದು, ಕೆಳ ಅಂತಸ್ತಿನ ತಳಭಾಗದಲ್ಲಿ ಭಾರೀ ಆನೆಗಳನ್ನು ಕೆತ್ತಲಾಗಿದೆ. ಇಡೀ ದೇವಾಲಯವನ್ನು ಈ ಆನೆಗಳು ಹೊತ್ತಿರುವಂತೆ ಕಾಣಿಸುತ್ತದೆ. ಜೊತೆಗೆ ಕೆಳ ಅಂತಸ್ಥಿನ ಶಿಲ್ಪಗಳಲ್ಲಿ ಗಜಾಸುರ ಸಂಹಾರ ಶಿವ, ನರಸಿಂಹ, ತ್ರಿಪುರ ಸಂಹಾರ ಶಿವ, ಕೈಲಾಸಪರ್ವತವನ್ನು ಎತ್ತಲು ಪ್ರಯತ್ನಿಸುತ್ತಿರುವ ರಾವಣ ಮುಂತಾದವು ಮುಖ್ಯವಾಗಿವೆ. ಹಾಗೆಯೇ ಕರ್ನಾಟದಲ್ಲಿ ರಾಷ್ಟ್ರಕೂಟರ ದೇವಾಲಯಗಳಾದ ಕುಕನೂರಿನ ನವಲಿಂಗೇಶ್ವರ, ಮುಧೋಳದ ಕರಿಸಿದ್ದೇಶ್ವರ ಸಿರಿವಾಳದ ಕದಂಬೇಶ್ವರ ಮತ್ತು ಈಶ್ವರ ದೇವಾಲಯಗಳಲ್ಲಿ ನೈತಿಕ ಮೌಲ್ಯವನ್ನು ಸಾರುವ ಪಂಚತಂತ್ರ ಶಿಲ್ಪಗಳು ಕಂಡುಬರುತ್ತವೆ.[೬೬] ಅಂತಹವುಗಳಲ್ಲಿ ಸಿಂಹವನ್ನು ಕೊಂದ ಮೊಲ, ಹಂಸಗಳು ಮತ್ತು ಆಮೆ, ಕಪಿ ಮತ್ತು ಪಕ್ಷಿಯ ಗೂಡು, ಅತಿಲೋಭಿಯಾದ ನರಿ, ಮೊಸಳೆ ಮತ್ತು ಕಪಿ, ಟಗರುಗಳ ಹೋರಾಟದಲ್ಲಿ ನರಿ, ಬ್ರಾಹ್ಮಣ ಏಡಿ ಮತ್ತು ಕಾಗೆ, ಕೃಷ್ಣಸರ್ಪವನ್ನು ಕೊಂದ ಕಾಗೆ, ಆನೆಯನ್ನು ತಿಂದ ನರಿ, ಸೋಮಶರ್ಮನ ತಂದೆಯ ಕಥೆ, ನಾರಾಯಣಭಟ್ಟನ ಕಥೆ ಸಹಿತ ಅನೇಕ ಕಥೆಗಳು ಈ ಮೇಲಿನ ಸ್ಮಾರಕಗಳಿವೆ. ರಾಷ್ಟ್ರಕೂಟರ ಕಾಲದಲ್ಲಿ ಪಂಚತಂತ್ರದ ಶಿಲ್ಪಗಳೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಇವರು ಈ ಕಥೆಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದರೆಂದು ತಿಳಿದುಬರುತ್ತದೆ.

ರಾಷ್ಟ್ರಕೂಟರ ನಂತರ ಕರ್ನಾಟಕದಲ್ಲಿ ಕಲ್ಯಾಣ ಚಲುಕ್ಯರ ಆಳ್ವಿಕೆ ಪ್ರಾರಂಭವಾಗುತ್ತದೆ. ಇವರ ಅವಧಿಯು ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ದೃಷ್ಟಿಯಿಂದ ಮಹತ್ವದ ಕಾಲಘಟ್ಟವಾಗಿದೆ. ಇವರು ದೇವಾಲಯ ನಿರ್ಮಾಣ ಮತ್ತು ಶಿಲ್ಪಕಲೆಗೆ ಬಳಸಿದ ಕಪ್ಪು ಬಳಪದ ಕಲ್ಲು ಶಿಲ್ಪಗಳ ಕೆತ್ತನೆಗೆ ಹೊಸ ಆಯಾಮವನ್ನು ನೀಡಿತು. ಹಾಗಾಗಿ ಇವರ ಶಿಲ್ಪಗಳಲ್ಲಿ ಸೂಕ್ಷ್ಮ ಕೆತ್ತನೆ ಮತ್ತು ಅಲಂಕರಣಗಳು ಹೆಚ್ಚಾದವು. ಈ ಕಾಲದ ದೇವಾಲಯದ ಲಲಾಟಗಳಲ್ಲಿ ಇತರೆ ಶಿಲ್ಪಗಳ ಜೊತೆಗೆ ತೀರ್ಥಂಕರರ ಬದಿಗಳಲ್ಲಿ ಆನೆಗಳನ್ನು ಬಿಡಿಸಿರುವ ಶಿಲ್ಪಗಳು ಸಾಮಾನ್ಯವಾಗಿ ಕಂಡುಬರುತ್ತವೆ. ದ್ವಾರ ಶಾಖೆಗಳಲ್ಲಿ ಪುಷ್ಪಾಲಂಕಾರ, ಲತಾಸುರಳಿ, ನೃತ್ಯಗಾರರ ಶಿಲ್ಪಗಳಲ್ಲಿ ಜೊತೆಯಲ್ಲಿ ಸಿಂಹ ಇತರೆ ಪ್ರಾಣಿಶಿಲ್ಪಗಳನ್ನು ಕೆತ್ತಲಾಗಿದೆ. ಕೆಲವೊಮ್ಮೆ ಸುರಳಿಗಳಲ್ಲಿ ಆನೆ ಮತ್ತು ನವಿಲುಗಳ ಶಿಲ್ಪಗಳನ್ನು ಕಾಣಬಹುದು. ಹಾಗೆಯೇ ದೇವಕೋಷ್ಠಕಗಳಲ್ಲಿ ಗಣೇಶ, ಮಹಿಷಮರ್ಧಿನಿ, ಭೈರವ, ಕಾರ್ತಿಕೇಯ ಶಿಲ್ಪಗಳಿರುವುದು ಮತ್ತು ನಂದಿ ಶಿಲ್ಪಗಳನ್ನು ಸಾಮಾನ್ಯವಾಗಿ ಕಾಣಬಹುದು. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು, ನರಸಿಂಹಮೂರ್ತಿ ಶಿಲ್ಪಗಳನ್ನು ಕಂಡರಿಸಲಾಗಿದೆ. ಕಂಬಗಳಲ್ಲಿ ಆನೆ, ಹಂಸ, ವರಾಹ, ಪದ್ಮ ಇತ್ಯಾದಿ ಉಬ್ಬುಶಿಲ್ಪಗಳಿರುತ್ತವೆ. ಕಪೋತದಲ್ಲಿ ವಿವಿಧ ರೀತಿಯ ಪಕ್ಷಿಗಳ ಸಾಲು ಶಿಲ್ಪಗಳನ್ನು ಕಾಣಬಹುದು. ಇನ್ನು ವೈಷ್ಣವ ದೇವಾಲಯಗಳಾಗಿದ್ದರೆ ಸಾಮಾನ್ಯವಾಗಿ ಭೂವರಾಹ, ನರಸಿಂಹ ಶಿಲ್ಪಗಳನ್ನು ತೋರಿಸಲಾಗಿರುತ್ತದೆ. ಕೆಲವೊಮ್ಮೆ ಆನೆಗಳನ್ನು

ಎದುರು ಬದುರಾಗಿ ನಿಂತಿರುವುದನ್ನು ಚಿತ್ರಿಸಲಾಗಿದೆ. ಚಲುಕ್ಯರ ಕಾಲದಲ್ಲೂ ಸಹ ಪಂಚತಂತ್ರ ಕಥೆಗಳಿಗೆ ಸಂಬಂಧಿಸಿದ ಕೆಲವು ಶಿಲ್ಪಗಳನ್ನು ಹಾಕಿಸಿದ್ದಾರೆ.

ಹೊಯ್ಸಳರು ೧೧ನೇ ಶತಮಾನದಲ್ಲಿ ತಮ್ಮ ಸ್ವತಂತ್ರ ಆಳ್ವಿಕೆಯನ್ನು ಪ್ರಾರಂಭಿಸುವ ಸಮಯಕ್ಕಾಗಲೇ ಕರ್ನಾಟಕದಲ್ಲಿ ವಾಸ್ತು-ಶಿಲ್ಪಕಲೆ ಸಾಕಷ್ಟು ಪ್ರವರ್ಧಮಾನವಾಗಿ ಬೆಳೆದಿತ್ತು. ಈ ಕಾಲಕ್ಕಾಗಲೇ ಕಲ್ಯಾಣ ಚಲುಕ್ಯ ಶಿಲ್ಪಿಗಳು ಮರಳುಗಲ್ಲು ಮತ್ತು ಕಣಶಿಲೆಯ ಬಳಕೆಯನ್ನು ಬಿಟ್ಟು ಮೃದುತರ ಬಳಪದ ಕಲ್ಲನ್ನು ದೇವಾಲಯ ನಿರ್ಮಾಣಕ್ಕೆ ಬಳಸಿದರು. ಈ ಬದಲಾವಣೆಯಿಂದ ಹೊಯ್ಸಳ ವಾಸ್ತುಶೈಲಿ ಮತ್ತು ಶಿಲ್ಪಶೈಲಿಗಳು ಇನ್ನೂ ಹೆಚ್ಚು ವಿನ್ಯಾಸಗಳಿಂದ ಅಲಂಕರಣೆಗಳಿಂದ, ಸುಂದರ-ಸೂಕ್ಷ್ಮ ಕೆತ್ತನೆಗಳಿಂದ ಮತ್ತು ಹೊಸ-ಹೊಸ ಅವಿಷ್ಕಾರಗಳಿಂದಾಗಿ ಶ್ರೀಮಂತವಾದ ಮತ್ತು ವೈಭವೋಪ್ರೇತವಾದ ಶೈಲಿಯಾಗಿ ಕಂಗೊಳಿಸಿತು. ಹೊಯ್ಸಳ ಪ್ರಗತಿಯನ್ನು ಶಿಲ್ಪಿಗಳು ತಮ್ಮ ವಾಸ್ತುಶಿಲ್ಪಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಲಯಬದ್ಧ, ನಿರರ್ಗಳ ಕಾವ್ಯಶೈಲಿ, ಬಳ್ಳಿ ಸುರಳಿ, ಹಂಸ-ವ್ಯಾಳ ಮಾಲೆಗಳ ರೂಪದಲ್ಲಿ ಪ್ರಕಟಗೊಂಡವು. ಶಿಲ್ಪಿಗಳ ಪರಸ್ಪರ ಪೈಪೋಟಿಗಳಿಂದ ಒಂದಕ್ಕಿಂತ ಒಂದು ಸುಂದರ ದೇವಾಲಯಗಳು ಶಿಲ್ಪಗಳು, ವಿನ್ಯಾಸಗಳು, ರಚನೆಗಳು ವಿವಿಧ ಪ್ರಯೋಗಗಳಿಗೆ ಎಡೆ ಮಾಡಿತು. ವಾಸ್ತುಶಿಲ್ಪ ಕ್ಷೇತ್ರದಲ್ಲಿ ಪ್ರಗತಿ ಪರತೆಗಳು ಮೂಡಿಬಂದು ಹೊಯ್ಸಳ ಶೈಲಿಯೆಂದು ಪ್ರತ್ಯೇಕಿಸಬಹುದಾದ ಶೈಲಿಯೊಂದರ ಉದಯವಾಯಿತು. ಇಂತಹ ಅಗಣಿತ ಹೊಸತನಗಳಿಂದ ಕೂಡಿದ ಕಲಾಪ್ರಕಾರದಲ್ಲಿ ಹೊಯ್ಸಳ ಶಿಲ್ಪಿಗಳು ನೂರಾರು ದೇವಾಲಯಗಳನ್ನು, ಸಹಸ್ರಾರು ಶಿಲ್ಪಗಳನ್ನು ನಿರ್ಮಿಸಿದ್ದಾರೆ.

ಹೊಯ್ಸಳರ ದೇವಾಲಯಗಳ ಅಧಿಷ್ಠಾನದ ಪಟ್ಟಿಕೆಗಳ ಅಲಂಕರಣಗಳಲ್ಲಿ ಅತ್ಯಂತ ಕೆಳಗಿನ ಪಟ್ಟಿಕೆಯಲ್ಲಿ ಆನೆಯ ಸಾಲಿನ ಶಿಲ್ಪದ ಪಟ್ಟಿ ಅದರ ಮೇಲೆ ಕುದುರೆ ಸಾಲಿನ ಪಟ್ಟಿ, ಅದರ ಮೇಲೆ ಪೌರಾಣಿಕ ಕಥಾನಕ ಶಿಲ್ಪಗಳ ಸಾಲಿನ ಪಟ್ಟಿಗಳನ್ನು ಕ್ರಮವಾಗಿ ಕಾಣಬಹದು. ಅಧಿಷ್ಠಾನದ ಎತ್ತರವನ್ನು ಏರಿಳಿಸಲು ಇವುಗಳ ಮಧ್ಯ ಲತಾಪಟ್ಟಿಕೆ, ವ್ಯಾಳಪಟ್ಟಿಕೆ ಹಂಸ ಪಟ್ಟಿಕೆಗಳನ್ನು ಅವಶ್ಯಕತೆಗೆ ತಕ್ಕಂತೆ ಬಳಸುತ್ತಿದ್ದರು. ಪೌರಾಣಿಕ ಶಿಲ್ಪ ಪಟ್ಟಿಕೆ ದೃಶ್ಯ ಮಾಧ್ಯಮದ ಮೂಲಕ ಸಮಾಜದ ಸಮಸ್ತ ಜನರಿಗೂ ರಾಮಾಯಣ, ಮಹಾಭಾರತ, ಭಾಗವತಪುರಾಣ, ಪಂಚತಂತ್ರ, ದಶಾವತಾರ ಮುಂತಾದ ವಿಷಯಗಳ ಬಗ್ಗೆ ಜ್ಞಾನ ನೀಡುತ್ತಿತ್ತು. ಹೀಗೆ ಹೊಯ್ಸಳ ಶಿಲ್ಪಿಗಳು ಸಹ ಸಮಾಜ ಶಿಕ್ಷಣದಲ್ಲಿ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆಂದು ಹೇಳಬಹುದು. ಅಧಿಷ್ಠಾನ ಪಟ್ಟಿಕೆಗಳು ಶಿಕ್ಷಣವನ್ನಲ್ಲದೆ ಜನರಿಗೆ ಮನರಂಜನೆಯನ್ನು ನೀಡುತ್ತಿದ್ದ ಮಹತ್ವದ ಶಿಲ್ಪಕೋಶವೆಂದರೆ ತಪ್ಪಾಗಲಾರದು. ಆನೆಯ ಪಟ್ಟಿಕೆಯಲ್ಲಿ ಸಾಲಾಗಿ ಆನೆಗಳನ್ನು ಕೆತ್ತಿದ್ದು ಆನೆಯ ಸಹಜವಾದ ಲೀಲಾ ವಿನೋದಗಳು, ಭಾವ-ಭಂಗಿಗಳು, ಭಯಂಕರ ಕಾಳಗಗಳು, ಆಟ-ಪಾಠಗಳು, ದೇಹ ಸೌಷ್ಟವ, ಆನೆಗಳ ಬಳಕೆ ಉಪಯೋಗ ಅವುಗಳಿಗೆ ಮಾಡುವ ಅಲಂಕಾರ, ಹಾಕುವ ವಸ್ತ್ರಾಭರಣಗಳು, ಅವುಗಳ ಸವಾರಿ ಹೀಗೆ ಅನೇಕಾನೇಕ ವಿಷಯಗಳು ಈ ಪಟ್ಟಿಕೆಯಲ್ಲಿರುತ್ತವೆ. ಈ ಪಟ್ಟಿಕೆಯನ್ನು ನೋಡಿದರೆ ಸಾಕು ಆನೆಗಳ ಬಗ್ಗೆ ಎಲ್ಲಾ ವಿಷಯಗಳು ದೊರೆಯುತ್ತವೆ ಎನ್ನುವಷ್ಟರ ಮಟ್ಟಿಗೆ ಈ ಪಟ್ಟಿಕೆಗಳು ಶೈಕ್ಷಣಿಕವಾಗಿವೆ. ಅಂತೆಯೇ ಕುದುರೆ, ಕುದುರೆ ಸವಾರರ ಪಟ್ಟಿ, ಇಲ್ಲೂ ಕುದುರೆಗಳ ಬಗ್ಗೆ ಸರ್ವ ರೀತಿಯ ವಿಷಯಗಳೂ ಕಾಣಬರುತ್ತವೆ. ನಂತರ ಕಪೋತ ಅಡ್ಡಪಟ್ಟಿಕೆಗಳಲ್ಲಿ ವಿವಿಧ ರೀತಿಯ ಪಕ್ಷಿಗಳು ಮುಂತಾದ ಅಲಂಕರಣೆಯನ್ನು ಹೊಂದಿರುತ್ತದೆ.

ಸುಕನಾಸಿಯ ಇಳಿಜಾರು ಬೆನ್ನಿನ ಮೇಲೆ ಹೊಯ್ಸಳ ಲಾಂಛನವಾದ ಹುಲಿಯನ್ನು ಕೊಲ್ಲುತ್ತಿರುವ ಸಳನ ಶಿಲ್ಪವು ಕಂಡುಬರುತ್ತದೆ. ಹೊಯ್ಸಳ ಕಾಲದ ಶಿಲ್ಪಗಳಲ್ಲಿ ಬೇಟೆಯ ಶಿಲ್ಪಗಳು ಆಕರ್ಷಕವಾಗಿದ್ದು ಜಿಂಕೆಗಳ ಬೇಟೆ ಪ್ರಮುಖವಾಗಿದುದು ತಿಳಿದುಬರುತ್ತದೆ.

ಹೊಯ್ಸಳ ಕಲಾಸಂಪ್ರದಾಯದ ಪರಿಪೂರ್ಣತೆಯನ್ನು, ವೈಶಿಷ್ಟ್ಯವನ್ನು ಅತ್ಯಂತ ಪರಿಣಾಮ-ಕಾರಿಯಾಗಿ ಅವರ ಶಿಲ್ಪಗಳು ಪ್ರತಿಬಿಂಬಿಸುತ್ತವೆ. ದೇವಾಲಯದ ವಿವಿಧ ಭಾಗಗಳಲ್ಲಿ ಕಾಣುವ ಶಿಲ್ಪಗಳು ಅವುಗಳ ಸೌಂದರ್ಯಕ್ಕೆ ನಿಲುವಿಗೆ, ಲಾಲಿತ್ಯಕ್ಕೆ, ವೈಭವಕ್ಕೆ, ಒನಪು ವಯ್ಯಾರಗಳಿಗೆ, ಸೂಕ್ಷ್ಮಾತಿಸೂಕ್ಷ್ಮ ಕೆತ್ತನೆಗಳಿಗೆ ಮತ್ತು ವೈವಿಧ್ಯತೆಗಳಿಗೆ ಹೆಸರುವಾಸಿಯಾಗಿವೆ. ಈ ಕಾರಣಗಳಿಂದಾಗಿ ಹೊಯ್ಸಳ ಶಿಲ್ಪಗಳು ಭಾರತೀಯ ಶಿಲ್ಪಕಲಾ ಪರಂಪರೆಯಲ್ಲಿ ವಿಶಿಷ್ಟವಾದ ಹಾಗೂ ಪ್ರತ್ಯೇಕವಾದ ಸ್ಥಾನ ಪಡೆದಿದೆ.

ಚಲುಕ್ಯರು ಮತ್ತು ಹೊಯ್ಸಳರ ಕಾಲಾವಧಿಯ ಶಿಲ್ಪಗಳ ಪರಂಪರೆಯನ್ನೇ ವಿಜಯನಗರದ ಅರಸರು ಮುಂದುವರೆಸಿದರಾದರೂ ಸ್ಥಳೀಯವಾಗಿ ದೊರೆಯುತ್ತಿದ್ದ ಒರಟು ಗುಣವುಳ್ಳ ಕಣಶಿಲೆಯನ್ನು ಶಿಲ್ಪಗಳ ಕೆತ್ತನೆಗೆ ಬಳಸಿದರು. ಈ ಶಿಲೆಯಲ್ಲಿ ಶಿಲ್ಪಗಳನ್ನು ಕೆತ್ತುವುದು ಕಷ್ಟವಾದುದರಿಂದ ಈ ಕಾಲದ ಶಿಲ್ಪಗಳಲ್ಲಿ ಅಲಂಕರಣೆ, ಸೌಂದರ್ಯ, ಸೂಕ್ಷ್ಮ ಕೆತ್ತನೆಗಳು ಕಡಿಮೆಯಾಯಿತು. ಆದರೂ ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸ್ಥಾಪನೆಯೊಂದಿಗೆ ದಕ್ಷಿಣ ಭಾರತದ ಶಿಲ್ಪಕಲೆಯಲ್ಲಿ ಮತ್ತೆ ಹೊಸ ಪರಂಪರೆ ಪ್ರಾರಂಭವಾಯಿತು ಎಂದೇ ಹೇಳಬಹುದು. ಶಿಲ್ಪಗಳ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯದ ಕಾಲ ಮಹತ್ವದ್ದಾಗಿದ್ದು, ವಿವಿಧ ವಿಷಯಗಳ ವೈವಿಧ್ಯಮಯ ಶಿಲ್ಪಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೆತ್ತಿರುವುದನ್ನು ಕಾಣಬಹುದು. ಹಾಗೂ ವಿಜಯನಗರವನ್ನಾಳಿದ ಅರಸರು ಶಿಲ್ಪ-ವಾಸ್ತುಗಳ ಜೊತೆಗೆ ವರ್ಣಚಿತ್ರ ಮುಂತಾದ ಕಲಾಪ್ರಕಾರಗಳಿಗೆ ಅಮಿತ ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ. ಇಲ್ಲಿ ಹೆಚ್ಚಾಗಿ ಆನೆ ಮತ್ತು ಕುದುರೆಗಳನ್ನು ಪಳಗಿಸುವ, ಸಾಕುವ ವಿಧಾನಗಳ ಶಿಲ್ಪಗಳು, ಧಾರ್ಮಿಕ ಶಿಲ್ಪಗಳು, ಜಾನಪದ ಶಿಲ್ಪಗಳು, ಬೇಟೆ ಶಿಲ್ಪಗಳು ಹೀಗೆ ಅಂದಿನ ಸಾಮಾಜಿಕ ಜೀವನವನ್ನು ಪ್ರತಿನಿಧಿಸುವ ಹಲವು ಬಗೆಯ ಶಿಲ್ಪಗಳು ಹಂಪಿ ಪರಿಸರದಲ್ಲಿ ವಿಪುಲವಾಗಿ ಕಂಡುಬರುತ್ತವೆ. ಅವುಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಕೊನೆ ಟಿಪ್ಪಣಿಗಳು

೦೧. ಶರಣಬಸಪ್ಪ ಕೋಲ್ಕಾರ., ೨೦೧೦, "ಶಿಲಾಯುಗದ ಗವಿಚಿತ್ರಗಳು", ಪು. ೪೩

೦೨. ಮೊಗಳ್ಳಿ ಗಣೇಶ್., ೨೦೧೦, "ಹಂಪಿ ಜೀವಜಾಲ ಜಾನಪದ", ಪುಟ. ೨೯

೦೩. *https://en.wikipedia.org>wiki>Hampi*

೦೪. ಮಹದೇವ ಸಿ, ಸುಬ್ಬಣ್ಣರೈ ಎ. ಮತ್ತು ಮಾಧವ ಪೆರಾಜೆ., ೨೦೦೨, "ಹೊಸಪೇಟೆ ತಾಲೂಕು ದರ್ಶನ", ಪು. ೫

೦೫. *Comprehensive Conservation Plan.*, 2011, Archaeological Survey of India, Kamalapur, pp. 2-4.

೦೬. ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, "ಸಾಮ್ರಾಜ್ಯ ಮತ್ತು ಸಂಸ್ಥಾನ", ಪು. ೨೯

೦೭. ಶರಣಬಸಪ್ಪ ಕೋಲ್ಕಾರ., ಪೂರ್ವೋಕ್ತ, ಪು. ೪೪

೦೮. ಅದೇ, ಪು. ೪೫

೦೯. ಶ್ರೀನಿವಾಸ ಎಲ್., "ಹಂಪಿ ಪರಿಸರದ ಆದಿ ಮಾನವನ ನೆಲೆಗಳು", ಪು. ೮

೧೦. ಶರಣಬಸಪ್ಪ ಕೋಲ್ಕಾರ., ಪೂರ್ವೋಕ್ತ, ಪು. ೪೫

೧೧. Krishnashastri.H. (Ed)., *Hydrabad Archaeological Series-5,* p. 12

೧೨. ಶ್ರೀನಿವಾಸ ಎಲ್., ಪೂರ್ವೋಕ್ತ, ಪು. ೧೩–೧೪

೧೩. ಶರಣಬಸಪ್ಪ ಕೋಲ್ಕಾರ., ಪೂರ್ವೋಕ್ತ, ಪು. ೪೬

೧೪. ಅದೇ,

೧೫. ಮಹದೇವ ಸಿ, ಸುಬ್ಬಣ್ಣರೈ ಎ. ಮತ್ತು ಮಾಧವ ಪೆರಾಜೆ., ಪೂರ್ವೋಕ್ತ, ಪು. ೬

೧೬. Devaraj D.V and Channabasappa S. Patil (Ed)., 1991, *Vijayanagara Progress of Research 1987-88,* p. 85

೧೭. ಮಹದೇವ ಸಿ, ಸುಬ್ಬಣ್ಣ ರೈ.ಎ. ಮತ್ತು ಮಾಧವ ಫೆರಾಜೆ., ೨೦೦೨, ಪೂರ್ವೋಕ್ತ, ಪು.೭

೧೮. ಶ್ರೀನಿವಾಸ ಎಲ್., ಪೂರ್ವೋಕ್ತ ಪು. ೯೭–೧೪೯

೧೯. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪು. ೧೭೪

೨೦. ಮಹದೇವ ಸಿ, ಸುಬ್ಬಣ್ಣ ರೈ. ಎ, ಮತ್ತು ಮಾಧವ ಪೆರಾಜೆ., ೨೦೦೨, ಪೂರ್ವೋಕ್ತ, ಪು.೮

೨೧. ಅದೇ, ಪು. ೧೦

೨೨. ಕುಮಾರ್ ಜೆ., ೨೦೧೨, "ನೂರೊಂದು ವಿರಕ್ತರು ಮತ್ತು ಹಂಪಿ ಪರಿಸರ" ಮಂಟಪಮಾಲೆ– ೨೭೯, ಪು. ೧೭

೨೩. ಗಾದೆಪ್ಪ., "ಪಂಪಾಕ್ಷೇತ್ರ", ಮಂಟಪಮಾಲೆ – ೨೮೩

೨೪. ವಾಸುದೇವ ಬಡಿಗೇರ.(ಲೇ), "ಪ್ರಾಚೀನ ಹಂಪಿ", ಪು. ೬

೨೫. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ೨೦೦೯, ಪು. ೧೧೨೫

೨೬. ಸುಂದರ. ಅ., ೧೯೮೯, "ಹಂಪಿಯಲ್ಲಿ ದೊರತಿರುವ ಎರಡನೆಯ ಶತಮಾನದ ಎರಡು ಅಪೂರ್ವ ಬಿಳಿಯ ಜೇಡಿಮಣ್ಣಿನ ಗೊಂಬೆಗಳು", ಇತಿಹಾಸ ದರ್ಶನ, ಸಂ.೪, ಪು. ೨೯

೨೭. ಮಲ್ಲಾಪುರ ಬಿ.ವ್ಹಿ., ೨೦೧೦, "ವಿಜಯನಗರ ಸಾಮ್ರಾಜ್ಯ ಸ್ಥಾಪನಾ ಪೂರ್ವದ ಹಂಪಿ," ವಿಜಯನಗರ ಅಧ್ಯಯನ, ಸಂ.೧೫, ಪು. ೧೩

೨೮. ದೇವರಕೊಂಡಾರೆಡ್ಡಿ., "ಹಂಪಿಯಲ್ಲಿ ಬಾದಾಮಿ ಚಲುಕ್ಯರ ಕಾಲದ ದೇವಾಲಯ," ವಿಜಯನಗರ ಅಧ್ಯಯನ, ಸಂ.೧, ಪು. ೩೮–೪೧

೨೯. Channabasappa S. Patil., 1991, *Pre-Vijayanagara Temple at Hampi,* Vijayanagara Progress of Research 1987-88, pp. 113-119

೩೦. ಕೃಷ್ಣಮೂರ್ತಿ ಎಂ. ಎಸ್., "ಹಂಪಿಯ ವಿರೂಪಾಕ್ಷ ಸಂಕೀರ್ಣದ ಮಹಿಷಮರ್ಧಿನಿ ದೇವಾಲಯ," ವಿಜಯನಗರ ಅಧ್ಯಯನ, ಸಂ-೧, ಪು. ೪೨-೪೮

೩೧. ಮಲ್ಲಾಪುರ ಬಿ. ವ್ಹಿ., ಪೂರ್ವೋಕ್ತ, ಪು. ೧೪

೩೨. *Indian Archaeology 1975-76, - A Review,* pp. 62

೩೩. *South Indian Inscriptions,* Vol. 9, Part-1, No.79

೩೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೧, ಬಳ್ಳಾರಿ ಜಿಲ್ಲೆ, ಶಾ.ಸ. ೯೭

೩೫. *South Indian Inscriptions,* Vol. 6, No.260

೩೬. *Ibid,* Vol. 5, No. 221

೩೭. ಮಹದೇವ ಸಿ., ೨೦೦೯, "ಕುಮ್ಮಟದುರ್ಗದ ಅರಸರು," ಪು. ೨೩

೩೮. Desai P. B. and Other., 1982, *"A History of Karnataka",* p. 329

೩೯. ಮಹದೇವ ಸಿ, ಸುಬ್ಬಣ್ಣ ರೈ. ಎ. ಮತ್ತು ಮಾಧವ ಪೆರಾಜೆ., ಪೂರ್ವೋಕ್ತ, ಪು. ೩೬

೪೦. ದೇಸಾಯಿ ಪಿ.ಬಿ., ೨೦೦೮, "ವಿಜಯನಗರ ಸಾಮ್ರಾಜ್ಯ" ಪು. ೩೦-೩೧

೪೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೩, "ಹಂಪಿ ಶಾಸನಗಳು" ಶಾ. ಸಂ. ೧೪೫, ೩೫೦

೪೨. ಮಹದೇವ ಸಿ, ಸುಬ್ಬಣ್ಣರೈ ಎ. ಮತ್ತು ಮಾಧವ ಪೆರಾಜೆ., ಪೂರ್ವೋಕ್ತ, ಪು. ೪೦

೪೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೩, "ಹಂಪಿ ಶಾಸನಗಳು", ಶಾ. ಸಂ. ៦೯

೪೪. ಅದೇ, ಶಾ. ಸಂ. ೩೨೭, ೩೧೧

೪೫. ನಾಗರಾಜು ಎಚ್. ಎಂ., ೧೯೯೯, "ವಿಜಯನಗರದ ಇಮ್ಮಡಿ ದೇವರಾಯ", ಪು. ೧೭೨

೪೬. ರಂಗಸ್ವಾಮಯ್ಯ ಜಿ.ಆರ್., "ಕರ್ನಾಟಕದ ಸಂಕ್ಷಿಪ್ತ ಚರಿತ್ರೆ," ಪು. ೨೧೪, ೨೧೫

೪೭. ದೇಸಾಯಿ ಪಿ.ಬಿ., ೨೦೦೮, ಪೂವೋಕ್ತ, ಪು. ೭೨

೪೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩, "ಹಂಪಿ ಶಾಸನಗಳು," ಶಾ.ಸಂ. ೨೨೮

೪೯. ಕನ್ನಡ ವಿಷಯ ವಿಶ್ವಕೋಶ, ೨೦೦೯, ಇತಿಹಾಸ ಮತ್ತು ಪುರಾತತ್ವ, ಪು. ೯೬೩

೫೦. ಪರಮಶಿವಮೂರ್ತಿ ಡಿ.ವಿ (ಸಂ.)., ೨೦೧೦, "ಕೃಷ್ಣದೇವರಾಯನ ಶಾಸನಗಳು", ಸಂ.೧, ಪು. ೨೦

೫೧. ವಿವೇಕ ರೈ. ಬಿ. ಎ (ಸಂ.)., ೨೦೦೫, "ಪ್ರವಾಸಿ ಕಂಡ ವಿಜಯನಗರ", ಪು. ೬೨

೫೨. ಕನ್ನಡ ವಿಷಯ ವಿಶ್ವಕೋಶ, ೨೦೦೯, ಇತಿಹಾಸ ಮತ್ತು ಪುರಾತತ್ವ, ಪು. ೯೬೮ ಹಾಗೂ ರಂ. ಶ್ರೀ. ಮುಗಳಿ., ೨೦೦೯, ಕನ್ನಡ ಸಾಹಿತ್ಯ ಚರಿತ್ರೆ, ಪು. ೨೨೩

೫೩. ಪರಮಶಿವಮೂರ್ತಿ ಡಿ.ವಿ. (ಸಂ.)., ಪೂರ್ವೋಕ್ತ, ಪು. ೧೬

೫೪. ಕಲಬುರ್ಗಿ ಎಂ.ಎಂ., ಕೃಷ್ಣದೇವರಾಯನ ಹಂಪಿ ಶಾಸನಗಳು, ಮುರಿಗೆಪ್ಪ ಎ (ಪ್ರಸಂ.)., ೨೦೦೮, "ಕೃಷ್ಣದೇವರಾಯನ ಆಯ್ದಲೇಖನ ಸಂಪುಟ," ಪು. ೧೬೧

೫೫. ರಮೇಶನಾಯಕ., ೨೦೦೩, "ಆನಂದನಿಧಿ ದಾನ", ವಿಜಯನಗರ ಅಧ್ಯಯನ ಸಂ. ೮, ಪು. ೧೪೦

೫೬. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ೨೦೦೯, ಪು. ೧೨

೫೭. ಅದೇ, ಪು. ೧೦೮೩

೫೮. ಅದೇ, ಪು. ೭೪೭

೫೯. ರಾವ್ ಎಸ್. ಆರ್. ಗುರುರಾಜಾಚಾರ್ (ಅನು)., "ಲೋಥಾಲ್ ಮತ್ತು ಸಿಂಧೂ ನಾಗರೀಕತೆ" ಪು. ೮೬

೬೦. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ೨೦೦೯, ಪು. ೧೦೮೭

೬೧. ಅದೇ.

೬೨. ಅದೇ, ಪು. ೧೦೮೮

೬೩. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ೨೦೦೯, ಪು. ೫೧೧

೬೪. ಮರಿಶಾಮಾಚಾರ್ ಎನ್., ೨೦೦೦, "ಭಾರತೀಯ ಶಿಲ್ಪಕಲೆ", ಪು. ೧೯

೬೫. Gupta P.L., *Coins,* pp. 8-22

೬೬. ಕನ್ನಡ ವಿಷಯ ವಿಶ್ವಕೋಶ, ೨೦೦೯, ಇತಿಹಾಸ ಮತ್ತು ಪುರಾತತ್ವ, ಪು. ೧೦೬

೬೭. Gupta P.L., *Op cit,* p. 531

೬೮. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ೨೦೦೯, ಪು. ೫೩೧

೬೯. ಅದೇ, ಪು. ೩೩೪

೭೦. Pratibha Prakasha., 1985, *Terracotta Animal Figures in Ganga-Yamuna Valley,* pp. 130-145

೭೧. ಗುಪ್ತಾ, ಫಿ.ಎಲ್., ಪೂರ್ವೋಕ್ತ, ಪು. ೭೧

೭೨. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ೨೦೦೯, ಪು. ೧೦೫೮

೭೩. ಸುಂದರ ಅ. (ಸಂ)., "ಕರ್ನಾಟಕ ಚರಿತ್ರೆ" ಸಂ.೧, ಪು. ೪೨೨

೭೪. ಚನ್ನಬಸಪ್ಪ ಎಸ್. ಪಾಟೀಲ., ೧೯೯೪, "ಕರ್ನಾಟಕ ಶಿಲ್ಪಗಳಲ್ಲಿ ಪಂಚತಂತ್ರ", ಪು. ೯-೧೦

೭೫. ಕರ್ನಾಟಕ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ೨೦೦೯, ಪು. ೩೯೦

೭೬. ಚನ್ನಬಸಪ್ಪ ಎಸ್. ಪಾಟೀಲ., ಪೂರ್ವೋಕ್ತ, ಪು. ೧೧

❑❑❑

ಅಧ್ಯಾಯ : ಮೂರು

ಪ್ರಾಣಿಗಳ ಪರಿಚಯ



ಅಧ್ಯಾಯ

೩ ಪ್ರಾಣಿಗಳ ಪರಿಚಯ

೩.೧ ಪೀಠಿಕೆ

ಭೂಮಿಯ ಹುಟ್ಟಿನಷ್ಟೇ ಭೂಮಿಯ ಮೇಲೆ ಜೀವ ಕಾಣಿಸಿಕೊಂಡ ವಿಷಯವೂ ಇಂದಿಗೂ ಒಂದು ನಿಗೂಢ ವಿಷಯವಾಗಿ ಉಳಿದಿವೆ. ಜೀವ ಭೂಮಿಯ ಮೇಲೆ ಕಾಣಿಸಿಕೊಂಡು ವಿಕಸನಗೊಂಡಿತೇ ಅಥವಾ ಬೇರೊಂದು ಗ್ರಹದಿಂದ ಭೂಮಿಗೆ ವಲಸೆ ಬಂದು ವಿಕಸಿಸಿತೆ ಎಂಬ ವಿಷಯ ಇನ್ನು ಇತ್ಯರ್ಥವಾಗದೇ ಉಳಿದಿರುವ ಪ್ರಶ್ನೆ. ಜೀವ ಭೂಮಿಯ ಮೇಲೆ ಕಾಣಿಸಿಕೊಂಡಿತ ಎನ್ನುವುದಾದರೆ ಎಲ್ಲಿ, ಯಾವಾಗ, ಹೇಗೆ ಕಾಣಿಸಿಕೊಂಡಿತು ಎನ್ನುವುದು ಇನ್ನೂ ನಿರ್ಧಾರವಾಗದೆ ಜಿಜ್ಞಾಸೆಯಾಗಿಯೇ ಉಳಿದಿದೆ. ಆದರೆ ಬಹಳವಾಗಿ ಒಪ್ಪಿಕೊಂಡು ಬಹುಪಾಲು ವಿಜ್ಞಾನಿಗಳ ಮನ್ನಣೆ ಪಡೆದ ಸಿದ್ಧಾಂತವೆಂದರೆ ಭೂಮಿಯ ಆಯುಷ್ಯದ ಒಂದು ಅಜ್ಞಾತ, ಅನಿಶ್ಚಿತ ಕಾಲದಲ್ಲಿ ಅಂದಿಗಾಗಲೇ ಅಸ್ಥಿತ್ವದಲ್ಲಿದ್ದ ಆದಿ ಕಡಲುಗಳಲ್ಲಿ ಜೀವ ಕಾಣಿಸಿಕೊಂಡಿತು. ಅಂದು ಕಾಣಿಸಿಕೊಂಡ ಆ ಆದಿಜೀವ ಅನಿರ್ದಿಷ್ಟ ರೂಪದ ರಾಸಾಯನಿಕ ಸಂಯುಕ್ತವಾಗಿರಬಹುದು. ಈ ಸಂಯುಕ್ತ ವಸ್ತುವಿನಲ್ಲಿ ಜೀವ ಲಕ್ಷಣಗಳು ಕಾಣಿಸಿಕೊಂಡು ಆದಿ ಜೀವ ವಸ್ತುವಾಗಿ ರೂಪುಗೊಂಡಿರಬಹುದು. ಅದೇ ಜೀವದ್ರವ್ಯ (*Protoplasm*). ಭೂಮಿಯ ಮೇಲೆ ಜೀವ ಕಾಣಿಸಿಕೊಂಡು ಸುಮಾರು ಎರಡು ಮೂರು ಬಿಲಿಯನ್ (೨೦೦-೩೦೦ ಕೋಟಿ) ವರ್ಷಗಳಾಗಿರಬಹುದೆಂಬುದು ತಜ್ಞರ ಅಂದಾಜು.

ಅಂದು ಕಾಣಿಸಿಕೊಂಡ ಆ ಜೀವದ್ರವ್ಯವು ಇಂದಿಗೂ ಬದುಕುಳಿದಿರುವ ಅದಿಮ ಪ್ರಾಚೀನ ಜೀವಿ ಅಮೀಬಾದಂತಿರದ್ದಿರಬಹುದು. ಅಥವಾ ಇಂದಿನ ಪರಿಶೀಲನೆಯ ಪ್ರಕಾರ ಅಮೀಬಾದಂತಹ ಪ್ರಾಚೀನ ಜೀವಿಗಳಿಗಿಂತಲೂ ಆದಿಮ ಎಂದು ಪರಿಗಣಿಸಲ್ಪಟ್ಟಿರುವ ಬ್ಯಾಕ್ಟೀರಿಯಾ, ವೈರಸ್‌ಗಳಂತಹ ಸೂಕ್ಷ್ಮಾತಿಸೂಕ್ಷ್ಮ ರಚನೆಯಾಗಿದ್ದಿರಬಹುದು. ಈ ಆದಿಮ ಜೀವದ್ರವ್ಯವು ಕ್ರಮೇಣ ಕೋಶದ್ರವ್ಯ (*Cytoplasm*), ಕೋಶಬೀಜ (*Nucleus*) ಮತ್ತು ತನ್ನ ಸುತ್ತ ಕೋಶಪಟಲ ಜೀವಕೋಶ (*Cell*)ವಾಗಿ ಪರಿವರ್ತನೆಗೊಂಡಿರಬಹುದು. ಜೀವಕೋಶ ಅಂತರ್ಗತ ವಸ್ತುಗಳಾದ ಕೋಶಬೀಜ ಮತ್ತು ಕೋಶದ್ರವ್ಯಗಳನ್ನು ಸುತ್ತುವರಿದು ಕೋಶಪಟಲವು ಅವುಗಳನ್ನು ಸಮಗ್ರವಾಗಿ ಹಿಡಿದಿಟ್ಟು ಹೊರ

ಪ್ರಭಾವಗಳಿಂದ ರಕ್ಷಿಸುವ ರಚನೆಯಾಯಿತು. ಕೋಶದ್ರವ್ಯವು ಜೀವಿಯ ವಿವಿಧ ಚಟುವಟಿಕೆಗಳಿಗೆ ಸ್ಥಳಾವಕಾಶ ಒದಗಿಸುವ ವೇದಿಕೆಯಾಗಿ ವರ್ತಿಸಿರಬಹುದು. ಜೀವಕೋಶದ ವಿವಿಧ ಜೀವ ಚಟುವಟಿಕೆಗಳನ್ನು ನಿರ್ವಹಿಸುವ, ಸಂಘಟಿಸುವ, ನಿರ್ದೇಶಿಸುವ ರಚನೆಯಾಗಿ ಕೋಶಬೀಜವು ರೂಪುಗೊಂಡಿರಬಹುದು. ಈ ರೀತಿ ರೂಪುಗೊಂಡ ಜೀವದ್ರವ್ಯವೇ ಜೀವಕೋಶವಾಗಿ ಪರಿವರ್ತನೆಗೊಂಡಿರಬಹುದು. ಅಂದಿನ ಅವುಗಳ ಜೀವನ ಇಂದಿನಂತೆಯೆ ಆಹಾರ ಸೇವನೆ, ಪಚನ ಸಂಚಯನ, ಸಂಚಲನೆ, ಸಂತಾನೋತ್ಪತ್ತಿಯಂತಹ ಜೀವ ಚಟುವಟಿಕೆಗಳನ್ನು ಒಳಗೊಂಡಿರಬಹುದು. ಇಂದಿಗೂ ಈ ಎಲ್ಲಾ ಜೀವ ಚಟುವಟಿಕೆಗಳನ್ನು ನಡೆಸುವ ಏಕಕೋಶ ಜೀವಿಗಳಾದ ಅಮಿಬಾ (*Amoeba),* ಯುಗ್ಲೀನಾ *(Euglina)*, ಪ್ಯಾರಾಮೀಸಿಯಂ (*Paramisium)*, ಕ್ಲಾಮಿಡೊಮೊನಸ್ (*Chlamydomonas)* ಗಳಂತಹ ಜೀವಿಗಳು ಬದುಕಿವೆ. ಈ ಜೀವಿಗಳ ರಚನೆಯಲ್ಲಿ ಅದೇ ಪ್ರಾಚೀನ ರಚನೆ, ಆದಿಮ ಜೀವ ಚಟುವಟಿಕೆಗಳನ್ನು ಇಂದೂ ಕಾಣಬಹುದು.

ಕಾಲಕ್ರಮದಲ್ಲಿ ಒಂದೇ ಜೀವಕೋಶ ಜೀವನ ನಿರ್ವಹಣೆಯ ಈ ಎಲ್ಲಾ ಜಟಿಲ ಚಟುವಟಿಕೆಗಳನ್ನು ನಡೆಸುವುದಕ್ಕಿಂತ ಅವುಗಳನ್ನು ಹಂಚಿಕೊಂಡು ಸುಲಭವಾಗಿ ಹಾಗೂ ಸಮರ್ಥವಾಗಿ ನಿರ್ವಹಿಸಬಹುದಾದ ಬಹುಕೋಶ, ಬಹುಕೋಶ ಪದರ, ಬಹು ಅಂಗಾಂಶ, ಬಹು ಅಂಗಮಂಡಲ ಜೀವಿಗಳು ಉದ್ಭವಿಸಿರಬಹುದು. ಹೀಗೆ ಊಹಿಸಲು ಅನೇಕ ಸಾಕ್ಷ್ಯಾಧಾರಗಳೂ ಇವೆ.

ಭೂಮಿಯು ಅಸ್ತಿತ್ವಕ್ಕೆ ಬಂದು ಸೌರವ್ಯೂಹದ ಒಂದು ಅವಿಭಾಜ್ಯ ಭಾಗವಾದಂದಿನಿಂದ ನಿರಂತರವಾಗಿ ಬದಲಾಗುತ್ತ ಬಂದಿದೆ. ಭೌತಿಕ ರಾಸಾಯನಿಕ ಮತ್ತು ಅಂತರಿಕ್ಷೀಯ ಭೂಬಾಹ್ಯ ಪ್ರಭಾವಗಳು, ಭೂಕಂಪ, ಅಗ್ನಿಪರ್ವತಗಳಂತಹ ಭೂ ಆಂತರಿಕ ಚಟುವಟಿಕೆಗಳು ಸೂರ್ಯನ ಸುತ್ತಲ ಪರಿಭ್ರಮಣೆಗಳಿಂದ ಉಂಟಾಗುವ ಋತುಮಾನೀಯ ವಾಯುಗುಣಗಳಂತಹ ಬದಲಾವಣೆಗಳಿಂದಾಗಿ ಭೂಮಿಯ ಮೇಲ್ಮೈ ರಚನೆ, ಪರಿಸರ, ಹವಾಮಾನ ಪರಿಸ್ಥಿತಿಗಳು ಕಾಲದಿಂದ ಕಾಲಕ್ಕೆ ಬದಲಾಗಿವೆ. ಬದಲಾಗುತ್ತ ಬಂದಿವೆ. ಬದಲಾಗುತ್ತಿವೆ. ಪ್ರಾಚೀನ ಪರಿಸರ ವಿಜ್ಞಾನ (*Paleo ecology)* ಇದನ್ನು ಪರಿಚಯ ಮಾಡಿಕೊಡುತ್ತದೆ. ಬದಲಾಗುತ್ತಿದ್ದ ಪರಿಸರ ಪರಿಸ್ಥಿತಿಗಳಿಗೆ ಅನುಗುಣವಾಗಿ ಹೊಂದಿಕೊಳ್ಳುವ ಪ್ರಯತ್ನದಲ್ಲಿ ಜೀವಿಗಳ ಸ್ವತಃ ಬದಲಾಗಿ ಹೊಸ ರಚನೆಗಳನ್ನು ಬೆಳೆಸಿಕೊಂಡು, ಹೊಸ ಶಾರೀರ ಕ್ರಿಯಾಕ್ರಮಗಳನ್ನು ರೂಢಿಸಿಕೊಂಡು ಭಿನ್ನ ವಿಭಿನ್ನ ರೀತಿಯ ಜೀವಿಗಳು ಕಾಣಿಸಿಕೊಂಡಿವೆ. ಬದಲಾಗದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲಾರದವು ಅಳಿದು ಕಣ್ಮರೆಯಾಗಿವೆ. ಆದರೆ ಸುದೈವದಿಂದ ತಾವು ಬದುಕಿದ್ದ ಸುಳಿವು ನೀಡುವ ಪಳಯುಳಿಕೆಗಳನ್ನು ಉಳಿಸಿ ಕಣ್ಮರೆಯಾಗಿವೆ. ಪಳಯುಳಿಕೆ ಅಭ್ಯಾಸ ಈ ಬದಲಾವಣೆಗಳ ಪರಂಪರೆ, ಬದಲಾದ ಜೀವಿಗಳ ಏಳಿಗೆ, ಅಭಿವೃದ್ಧಿಗಳ ಪರಿಚಯ ಮಾಡಿಕೊಡುತ್ತದೆ.[೧]

ಆದಿಯಲ್ಲಿ ಜೀವದ್ರವ್ಯ ರೂಪದಲ್ಲಿ ಕಾಣಿಸಿಕೊಂಡ ಜೀವ ಕಾಲಾಂತರದಲ್ಲಿ ಜೀವಕೋಶವಾಗಿ, ಬಹು ಜೀವಕೋಶ ಜೀವಿಗಳಾಗಿ ವಿವಿಧ ರೀತಿಯ ಜೀವಿಗಳ ಉದ್ಭವಕ್ಕೆ ಕಾರಣವಾಗಿರುವುದು ತಿಳಿದುಬರುತ್ತದೆ. ಈ ರೀತಿಯ ಬದಲಾವಣೆಗಳ ಪರಂಪರೆಯಲ್ಲಿ ಅನುವಂಶೀಯತೆ, ಜೀವವಿಕಾಸದಂತಹ ಕಾರ್ಯಕಾರಣ ವಿಶೇಷಗಳು ಮಹತ್ವದ ಪಾತ್ರವಹಿಸಿ, ಭೂ ಪರಿಸರ ಗರ್ಭದಿಂದ ಹೊಸ ಜೀವಿಗಳ ಹುಟ್ಟಿಗೆ ಸೂಲಗಿತ್ತಿಯಾಗಿ, ಅನಂತರ ದಾದಿಯಾಗಿ ಪೋಷಿಸಿದ ಈ ಜೀವಿಗಳು ಇಂದಿನ ಜೀವಕೋಟಿಗೆ ಕಾರಣವಾಗಿವೆ.[೨]

ಪ್ರಾಣಿಗಳ ವಿಕಾಸ: ಗಿಡ, ಬೀಜ ಇವೆರೆಡರಲ್ಲಿ ಮೊದಲು ಯಾವುದು ಅಸ್ಥಿತ್ವದಲ್ಲಿ ಬಂದಿತು ಎಂಬುದು ಬಿಡಿಸಲಾಗದ ಸಮಸ್ಯೆಯಾದರಿಂದ ಮಾನವನು ಪೃಥ್ವಿಯ ಮೇಲೆ ಹೇಗೆ ಬಂದ ಎಂಬುದಕ್ಕೆ ಬೇರೆ ಬೇರೆ ಧರ್ಮಗ್ರಂಥಗಳಲ್ಲಿ ಬೇರೆ ಬೇರೆ ವ್ಯಾಖ್ಯೆ ಕೊಟ್ಟಿದ್ದಾರೆ. ಬೈಬಲ್‌ನಲ್ಲಿ ದೇವರು ತನ್ನ ಪ್ರತಿಕೃತಿಯಾಗಿ ಆದಮ್ ಮತ್ತು ಈವ್‌ರನ್ನು ನಿರ್ಮಿಸಿ, ಅವರು ನಿಷೇಧಿತ ಹಣ್ಣನ್ನು ತಿನ್ನುವಂತೆ ಆಗಿ ಮಾನವ ಕೋಟಿ ಅವರ ಸಂತಾನವಾಗಿ ಪರಿಣಮಿಸಿತು ಎಂದು ಹೇಳಿದೆ. ಅಂದರೆ ಮಾನವನಿಗೆ ಬುದ್ಧಿಪೂರ್ವಕವಾಗಿಯೇ ಜನ್ಮಕೊಟ್ಟು, ಆತನ ಸೌಲಭ್ಯಕ್ಕಾಗಿ ಉಳಿದ ಸಕಲ ಪ್ರಾಣಿ-ಸಸ್ಯಗಳನ್ನು ದೇವರೇ ನಿರ್ಮಿಸಿದನೆಂದು ತಿಳಿಸುತ್ತದೆ. ಹಾಗೆಯೇ ಖುರಾನ್‌ನಲ್ಲಿ ಪುರುಷ ವರ್ಗಕ್ಕೆ ಪ್ರಾಧಾನ್ಯತೆ ಕೊಟ್ಟು, ಸ್ತ್ರೀ ಮತ್ತು ಉಳಿದ ಜೀವಕೋಟಿಯನ್ನು ಈ ವರ್ಗದ ಸುಃಖ ಜೀವನಕ್ಕೆ ನಿರ್ಮಾಣ ಮಾಡಲಾಗಿದೆ ಎಂಬುದಾಗಿ ತಿಳಿದುಬರುತ್ತದೆ. ಅದೇ ರೀತಿ ಭಾರತದ ವೇದ ಪುರಾಣಗಳಲ್ಲಿ ಮಾನವನ ಉತ್ಪತ್ತಿಯ ಬಗ್ಗೆ ಒಮ್ಮತವೇನೂ ಇಲ್ಲ. ಆದರೆ ಪ್ರತಿಯೊಂದು ಪ್ರಾಣಿಗುಂಪಿಗೆ ಒಬ್ಬೊಬ್ಬ ಪಿತಾಮಹನನ್ನು ಗುರುತಿಸಲಾಗಿದೆ.[೩] ಯಮ ಮತ್ತು ಯಾಮಿನಿಯರ ಸಂತಾನವೇ ಮಾನವರು ಎಂದು ಹೇಳಲಾಗಿದೆ. ಇದರಂತೆ ಕಾಡುಮೃಗಗಳ ಜನಕರೇ ಬೇರೆ, ಸಸ್ಯವರ್ಗ ನಿರ್ಮಿತವಾದ ವಿಧಾನವೇ ಬೇರೆ, ಮತ್ಸ್ಯವರ್ಗ ನಿರ್ಮಿತವಾದ ವಿಧಾನವೇ ಬೇರೆ. ಅಂದರೆ ಇಂದಿನ ಜೀವಕೋಟಿ ದೇವರ ಮಾಯಾವಿದ್ಯೆಯಿಂದ ಒಮ್ಮೆಲೆ ನಿರ್ಮಾಣವಾಗದೆ ವಿವಿಧ ಯುಗಗಳಲ್ಲಿ ಬೇರೆ ಬೇರೆ ಮೂಲವಂಶದಿಂದ ಭೂಮಿಯಲ್ಲಿ ರೂಪಗೊಂಡಿದೆ ಎಂದಂತಾಯಿತು.[೪]

ತೀರ ಪುರಾತನವೆಂದು ತಿಳಿಯಲಾದ ಏಕ-ಜೀವ-ಕಣ ಪ್ರಾಣಿಗಳು ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿವೆ. ಅವುಗಳಲ್ಲಿಯೇ ದೊಡ್ಡದಾದ ಅಮೀಬಾ ಒಂದು ಬಿಂದುವಿನ ಗಾತ್ರದ್ದು, ಅವಕ್ಕೆ ಕಣ್ಣು ಕಾಲು, ಕೈ ಎಂದು ಭೇದವಿಲ್ಲದಂತೆ ಲಿಂಗಭೇದವೂ ಇಲ್ಲ. ಹರಟೆಯಲ್ಲಿ ತೊಡಗಿದಾಗ ಹೆಣ್ಣಾದರೆ, ವೈರಿಯೊಡನೆ ಕಾದಾಟದಲ್ಲಿ ತೊಡಗಿದಾಗ ಗಂಡಾಗುತ್ತವೆ.[೫] ಅವು ದೊಡ್ಡದಾಗಿ ಬೆಳೆದು ಚಟುವಟಿಕೆಗೆ ತೊಂದರೆಯಾದಾಗ ಎರಡು ಭಾಗವಾಗಿ ಜೋಡಿಮರಿ ಅಮೀಬಿಯಾಗಿಬಿಡುತ್ತವೆ.

ವಿಕಾಸದ ಎರಡನೇ ಘಟ್ಟದಲ್ಲಿ ತಾಯಿಯಿಂದ ಉತ್ಪನ್ನವಾದ ಮರಿ ತನ್ನದೇ ಬೇರೊಂದು ಸಂಸಾರ ಹೂಡುವುದಕ್ಕಿಂತ ತಾಯಿಯೊಡನೆ ಸಹಜೀವನ ಪ್ರಾರಂಭಿಸಿ ಸಂಘಟನೆ ಮಾಡಿಕೊಂಡು ವಾಸಿಸಲು ಪ್ರಾರಂಭಿಸಿತು. ಇಂಥ ಸಂಘಗಳಿಗೆ ಆಹಾರ ಸಂಶೋಧನೆಗಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಿದಾಡಲು ಅಸಾಧ್ಯವಾದ ಮಾತಾದ್ದರಿಂದ ತಾವು ಜೀವಿಸುವ ನೀರಿನಲ್ಲಿ ಸಿಗುವ ಆಹಾರವನ್ನೇ ತಿಂದು ತೇಗಿದವು. ಕಡಲಿನಲ್ಲಿ ಜೀವಿಸುವ ಸ್ಪಂಜ್ ಈ ಜಾತಿಗೆ ಸೇರಿದ್ದು, ಸಂಘ ಜೀವಕ್ಕೆ ದುಂಬಾಲು ಬಿದ್ದು ಇದ್ದಲ್ಲಿಯೇ ಇದ್ದು ಬೇಸರಪಟ್ಟ ಪ್ರಾಣಿಗಳು ಬಹು ಜೀವಕಣ ಪ್ರಾಣಿಗಳಾಗಿ ಪರಿವರ್ತನೆ ಹೊಂದಿದವು. ಇಂತ ಜೀವವರ್ಗ ಸ್ವೇಚ್ಛಾಚಾರಿಯಾಗಿ ತಿರುಗಬಲ್ಲವು. ಇಲ್ಲವೇ ಒಂದೆಡೆ ಸ್ಥಾಯಿಯಾಗಿರಬಲ್ಲವು. ಹೈಡ್ರಾ (*Hydra*), ಈ ವರ್ಗದ ಒಳ್ಳೆಯ ಉದಾಹರಣೆ. ಈ ಜೀವಿಗಳು ಉರಿಬಿಸಿಲು ಮಳೆ-ಗಾಳಿ ಆರ್ದ್ರತೆ ಮುಂತಾದ ವಾತಾವರಣದ ಆಗುಹೋಗುಗಳಿಗೆ ಹೊಂದಿ-ಕೊಳ್ಳುವುದರಲ್ಲಿ ಅಪಾರ ಕಷ್ಟನಷ್ಟ ಅನುಭವಿಸಿದ್ದರಿಂದ ಪ್ರಾಣಿವಿಕಾಸದ ಮುಂದಿನ ಹಂತ ಬೇರೆಯ ಹಾದಿಯನ್ನೇ ಹಿಡಿಯಿತು. ಹೊರ ಜಗತ್ತಿನ ತೊಂದರೆಗಳಿಂದ ಸಂರಕ್ಷಣೆ ಪಡೆಯಲು ಈ ಪ್ರಾಣಿಗಳು

ಭೂಗರ್ಭದಲ್ಲಿ ನಿಶ್ಚಯಿಸಿದ್ದರಿಂದ ಅವು ಉದ್ದ ಹುಳದ ಆಕೃತಿ ತಳೆದು ಒಂದು ರೂಪ ಪಡೆದವು. ಭೂಮಿಯನ್ನು ಅಗೆದು ಮಾಡಿದ ಕೊಳವೆಗಳನ್ನು ತಮ್ಮ ಗೂಡುಗಳನ್ನಾಗಿ ಬಳಸಿದ್ದರಿಂದ ಅದಕ್ಕೆ ಬೇಕಾಗುವ ಕಣ್ಣು, ಸ್ಪರ್ಶೇಂದ್ರಿಯಗಳು ಬೆಳೆದವು. ಆಹಾರವನ್ನು ಒಂದು ತುದಿಯಿಂದ ಸ್ವೀಕರಿಸಿ ಇನ್ನೊಂದು ತುದಿಯಿಂದ ಮಲವನ್ನು ವಿಸರ್ಜಿಸಲು ತಲೆಯುಳ್ಳ ಶಿರೋಭಾಗ ಗುದದ್ವಾರ ಇರುವ ಬಾಲದಿಂದ ಬೇರೆಯಾಯಿತು. ಮಳೆಗಾಲದಲ್ಲಿ ಕಾಣಬರುವ ಎರೆಹುಳು ಇದಕ್ಕೆ ಒಳ್ಳೆ ಉದಾಹರಣೆ.[೬]

ಮುಂದಿನ ವಿಕಾಸದ ಹಂತದಲ್ಲಿ ಕೆಲ ಪ್ರಾಣಿಗಳು ಉಷ್ಣತೆಯಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಮೈತುಂಬ ಜಿಗಟು ಪದಾರ್ಥ ಧರಿಸಿದವು. ಅಲ್ಲದೇ ವೈರಿಗಳಿಂದ ಸಂರಕ್ಷಿಸಿಕೊಳ್ಳಲು ಸಿಂಪುಗಳನ್ನು ಬಳಸಿದವು. ಗಟ್ಟಿ ಸಿಂಪುನೊಳಗಿರುವ ಅದರ ದೇಹ ಮಾತ್ರ ತೀರಮೃದು ಶಂಖದ ಹುಳ ಒಳ್ಳೆಯ ಉದಾಹರಣೆ. ಮೈಯೆಲ್ಲ ಸಿಂಬಳ ಹೊತ್ತು ತಿರುಗುವುದು ಒಗ್ಗಲಿಲ್ಲವೆಂದು ತೋರುತ್ತದೆ. ನಂತರದ ಘಟ್ಟದಲ್ಲಿ ಅವು ಷಟ್‌ಪಾದಿ ಕೀಟಗಳಾಗಿ, ನಂತರ ಕಡಲವಾಸಿ ನಕ್ಷತ್ರ ಮೀನುಗಳಾಗಿ ರೂಪ ತಳೆದವು. ಅಂತೆಯೇ ಮುಂದಿನ ವಿಕಾಸದಲ್ಲಿ ಪ್ರಾಣಿಗಳು ತಮ್ಮೊಡನೆಯೇ ಬೆಳೆಯುವ ಅಂತರ್‌ಕವಚ ತಳೆದವು. ಇವುಗಳಿಗೆ ಬೆನ್ನು-ಹುರಿಯ ಪ್ರಾಣಿಗಳೆಂದು ಕರೆಯಲಾಯಿತು. ಮೊದಲಿನಲ್ಲಿ ಬೆನ್ನುಹುರಿ ಕೋಲಿನಂತೆ ಇದ್ದು ಚಲನವಲನಗಳಿಗೆ ಆತಂಕವಾಗುತ್ತಿದ್ದುದರಿಂದ ಮೀನುಗಳಲ್ಲಿ ಅವು ಎಲುಬು ಜೋಡಣೆಯಿಂದ ತಯಾರಾದವು. ಇವುಗಳಿಗೆ ಹೊಂದಿಸಿದ ಎರಡು ಜೋಡಿ ಹುಟ್ಟುಗಳಿಂದ ನೀರಿನಲ್ಲಿ ಲೀಲಾಜಾಲವಾಗಿ ಓಡಾಡುವಂತಾಯಿತು. ನೀರಿನಲ್ಲಿ ಪ್ರಾಣ ವಾಯುವಿನ ಪ್ರಮಾಣ ಕಡಿಮೆಯಿರುವುದರಿಂದಲೋ ಅಥವಾ ಕ್ರಿಯಾತ್ಮಕ ಜೀವನ ನಡೆಸಲೆಂದೋ ಪ್ರಾಣಿಗಳು ಭೂಮಿಯ ಮೇಲೆ ಜೀವಿಸುವ ಯತ್ನ ಮಾಡಲಾರಂಭಿಸಿದವು. ಆದರೆ ಜಲರಹಿತ ಜೀವನವನ್ನು ನಡೆಸಲು ಸಾಧ್ಯವಾಗದೇ ಕಪ್ಪೆಯಂತಹವು ಭೂ-ಜಲ ಪ್ರಾಣಿಗಳಾದವು. ತಮ್ಮ ಹೆಚ್ಚಿನ ಜೀವನವನ್ನು ನೆಲದ ಮೇಲೆ ಕಳೆದರೂ ಸಂತಾನೋತ್ಪತ್ತಿಗಾಗಿ ಮಾತ್ರ ತಿರುಗಿ ಜಲದ ಆಶ್ರಯವನ್ನೇ ಪಡೆಯಬೇಕಾಯಿತು.

ಪ್ರಥಮ ಬಾರಿಗೆ ನೀರನ್ನು ಸಂಪೂರ್ಣವಾಗಿ ತ್ಯಜಿಸಿ ಬೆನ್ನಲುಬುವಿನ ಭೂ ಪ್ರಾಣಿಯಾಗಿ ಜೀವನ ನಡೆಸಿದ ಶ್ರೇಯಸ್ಸು ಉಡ, ಓತಿಕಾಟದ ಗುಂಪಿಗೆ ಹೋಗುತ್ತದೆ.[೭] ಅವು ತಮ್ಮ ಚತುಷ್ಪಾದಗಳಿಂದ ದೇಹವನ್ನು ಭೂಮಿಯಿಂದ ಮೇಲಕ್ಕೆತ್ತಿ ವೇಗವಾಗಿ ಓಡಲು ಕಲಿತವು. ನಂತರದಲ್ಲಿ ಬಿಸಿರಕ್ತದ ಹಕ್ಕಿಗಳು ವಿಕಾಸ ಹೊಂದಿ ನೆಲದ ಮೇಲೆ ವಾಸಿಸಲು ಪ್ರಾರಂಭ ಮಾಡಿ ಸಸ್ತನಿಗಳಾದವು. ಈ ಗುಂಪು ಕ್ರಮೇಣ ಬುದ್ಧಿ ಚಾತುರ್ಯಗಳಿಗೆ ಹೆಸರುವಾಸಿಯಾಗಿ ಸಂಘಜೀವನ ನಡೆಸಿ ಪ್ರಾಣಿ ಜಗತ್ತಿನಲ್ಲಿಯೇ ಯಶಸ್ವಿ ವರ್ಗವೆಂದು ಹೆಸರುವಾಸಿಯಾಗಿವೆ. ಮಾನವರೂ ಸಹ ಇದೇ ಗುಂಪಿಗೆ ಸೇರಿದವರಾಗಿದ್ದಾರೆ.

ಸಸ್ತನಿಗಳು ಮೊಟ್ಟೆ ಇಡುವ ಬದಲಾಗಿ ಮರಿ ಅಥವಾ ಮಗುವಿಗೆ ಜನ್ಮಕೊಟ್ಟು ತಮ್ಮ ಹಾಲಿನ ಮೇಲೆ ಲಾಲನೆ ಪಾಲನೆ ಮಾಡಿ ಬೆಳೆಸುತ್ತವೆ. ಕಾಂಗರೂ ಅರೆ ಬೆಳವಣಿಗೆಯಾದ ಮರಿಗೆ ಜನ್ಮ ಕೊಡುವುದರಿಂದ ಮುಂದೆ ತನ್ನ ಚರ್ಮ ಚೀಲದಲ್ಲಿಯೇ ಸೇರಿಸಿ ಅದರ ಪೋಷಣೆ ಮಾಡುತ್ತದೆ. ಕಣ್‌ಕಪ್ಪಡಿ ಹಕ್ಕಿಯಂತೆ ಹಾರಾಡಿದರೂ ಅದಕ್ಕೆ ರೆಕ್ಕೆಯಿಲ್ಲ. ಬೊಟ್ಟುಗಳ ನಡುವೆ ಇದ್ದ ಪೊರೆಯಿಂದ ಅದು ಹಾರಾಡುತ್ತದೆ. ಅವು ಸಹ ಮೊಲೆಯುಣಿಸುವ ಪ್ರಾಣಿವರ್ಗಕ್ಕೆ ಸೇರಿವೆ. ಇಲಿ, ಮೊಲ, ಬೆಕ್ಕು,

ಹುಲಿ, ಕರಡಿ, ಆನೆ ಇವುಗಳೆಲ್ಲ ವಿಕಾಸದ ಹಿನ್ನೆಲೆಯಲ್ಲಿ ಮಾನವನ ಹತ್ತಿರದ ಸಂಬಂಧಿಗಳಾಗಿವೆ. ಗೊರಿಲ್ಲಾ ಚಿಂಪಾಂಜಿಗಳಂತೂ ರಕ್ತಸಂಬಂಧಿಗಳಿದ್ದಂತೆ. ಅಷ್ಟೇ ಏಕೆ? ಕಡಲಿನಲ್ಲಿ ಜೀವಿಸುವ ತಿಮಿಂಗಲ, ನೀರುನಾಯಿ, ಡಾಲ್ಫಿನ್‌ಗಳೂ ನಮ್ಮ ಹತ್ತಿರದ ಜೀವಿಗಳಾಗಿವೆ. ಹೀಗೆ ಪ್ರಾಣಿಗಳ ವಿಕಾಸವನ್ನು ಈ ಮೇಲಿನಂತೆ ವಿವಿಧ ಸ್ತರಗಳಲ್ಲಿ ತಿಳಿಯಲಾಗಿದೆ.

ಈ ವಿಕಾಸದ ತಳಹದಿಯ ಮೇಲೆ ಪ್ರಾಣಿಜಗತ್ತನ್ನು ವಿವಿಧ ಜಾತಿ, ಉಪಜಾತಿ, ಗುಂಪು ವಾಸಿಸುವ ಸ್ಥಳ, ದೇಹರಚನೆ, ಆಹಾರ, ಸಂತಾನೋತ್ಪತ್ತಿ ಕ್ರಮ ಮುಂತಾದ ಗುಣಗಳಿಗೆ ಅನುಗುಣವಾಗಿ ಈ ಕೆಳಗಿನಂತೆ ವರ್ಗೀಕರಿಸಲಾಗಿದೆ.

* ವರ್ಗೀಕರಣ (*Classifications*)

ಪ್ರಾಣಿ ಸಾಮ್ರಾಜ್ಯ	
ಅಕಶೇರುಕಗಳು (*Invertebrates*)	**ಕಶೇರುಕಗಳು (*Vertebrates*)**
ಪ್ರೋಟೋಜೋವಾ (*Protozoa*)	ಮೀನುಗಳು (*Fishes*)
ಕುಟುಕು ಕಣವಂತಗಳು (*Coelenterata*)	ಉಭಯವಾಸಿಗಳು (*Amphibia*)
ಚಪ್ಪಟೆ ಹುಳುಗಳು (*Platyhelminthes*)	ಸರೀಸೃಪಗಳು (*Reptilia*)
ದುಂಡು ಹುಳುಗಳು (*Nematoda*)	ಪಕ್ಷಿಗಳು (*Aves*)
ವಲಯವಂತಗಳು (*Annelida*)	ಸಸ್ತನಿಗಳು (*Mammalia*)[೮]
ಸಂಧೀ ಪದಿಗಳು (*Anthropoda*)	
ಮೃದ್ವಂಗಿಗಳು (*Mollusca*)	
ಕಂಟಕ ಚರ್ಮಿಗಳು (*Echinodermata*)	

ಪ್ರಾಣಿ ಜಗತ್ತು ಅಪಾರ ವೈವಿಧ್ಯದ ಆಗರ. ಅತ್ಯಂತ ಸರಳವಾದ ಪ್ರಾಣಿಜೀವಿ ಎಂದು ಗುರುತಿಸಲ್ಪಡುವ ಅಮೀಬಾದಿಂದ ಹಿಡಿದು ಅತ್ಯಂತ ಸಂಕೀರ್ಣ ಪ್ರಾಣಿಜೀವಿಯಾದ ಮಾನವನವರೆಗೆ ಲಕ್ಷೋಪಲಕ್ಷ ವೈವಿಧ್ಯಮಯ ಪ್ರಾಣಿಗಳಿವೆ. ಇದುವರೆಗೆ ಸಾವಿರಾರು ಪ್ರಾಣಿ ಪ್ರಭೇಧಗಳನ್ನು ಗುರುತಿಸಲಾಗಿದೆ. ಇನ್ನೂ ಅನೇಕಾನೇಕ ಪ್ರಾಣಿಗಳನ್ನು ಗುರುತಿಸಲಾಗಿಲ್ಲ. ವಿವಿಧ ಬಗೆಯ ಪ್ರಾಣಿಗಳಿಗೆ ಸಂಬಂಧಿಸಿದ ವಿಷಯಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವುದಕ್ಕೆ ಪ್ರಪ್ರಥಮ ಅವಶ್ಯಕತೆ ಎಂದರೆ ಪ್ರಾಣಿಗಳ ವರ್ಗೀಕರಣ. ವಿವಿಧ ಪ್ರಾಣಿಗಳ ಬಾಹ್ಯರೂಪ ರಚನೆ, ಆಂತರಿಕ ರಚನೆ, ಬೆಳವಣಿಗೆಯ ರೀತಿ, ಅವುಗಳ ನಡುವೆ ಕಂಡುಬರುವ ಸಮರೂಪತೆ ಮತ್ತು ವ್ಯತ್ಯಾಸದ ಆಧಾರದ ಮೇಲೆ ಪ್ರಾಣಿಗಳನ್ನು ವಿಂಗಡಿಸಲಾಗುತ್ತದೆ. ಈ ಒಂದು ಕ್ರಮಕ್ಕೆ ವರ್ಗೀಕರಣ (*Classification*) ಎಂದು ಕರೆಯುತ್ತಾರೆ.[೯]

ಅನಾದಿ ಕಾಲದಿಂದಲೂ ಪ್ರಾಣಿಗಳ ವರ್ಗೀಕರಣ ಬಳಕೆಯಲ್ಲಿತ್ತು ಎಂಬುದಕ್ಕೆ ನಮಗೆ ವೇದ

ಉಪನಿಷತ್ತುಗಳಲ್ಲಿ ಉಲ್ಲೇಖ ಕಂಡುಬರುತ್ತದೆ.[೧೦] ಪ್ರಾಚೀನ ಭಾರತದ ಅನೇಕ ಗ್ರಂಥಗಳಲ್ಲಿ ಪ್ರಾಣಿಗಳನ್ನು ಅವುಗಳ ಉಪಯುಕ್ತತೆ ಅನುಪಯುಕ್ತತೆಗಳ ಆಧಾರದ ಮೇಲೆ ವರ್ಗೀಕರಿಸಿರುವುದು ನಮಗೆ ತಿಳಿದುಬರುತ್ತದೆ. ಮುಂದೆ ಅರಿಸ್ಟಾಟಲ್ ಮುಂತಾದ ತತ್ವಜ್ಞಾನಿಗಳು ಪ್ರಾಣಿಗಳನ್ನು ಅನೇಕ ಆಧಾರಗಳ ಮೇಲೆ ವರ್ಗೀಕರಿಸಿರುವುದನ್ನು ನೋಡಬಹುದು. ಆದರೆ ವೈಜ್ಞಾನಿಕ ಆಧಾರದ ಮೇಲೆ ಪ್ರಾಣಿಗಳನ್ನು ವರ್ಗೀಕರಿಸುವ ಪ್ರಯತ್ನ ಮಾಡಿದವನು ಸ್ವೀಡನ್ ದೇಶದ 'ಕರೋಲಸ್ ಲಿನ್ನೇಯಸ್'[೧೧] ಎಂಬ ವಿಜ್ಞಾನಿ. ಮೂಲತಃ ಸಸ್ಯಶಾಸ್ತ್ರಜ್ಞನಾಗಿದ್ದರೂ ಆತ ಬಾಹ್ಯ ರೂಪರಚನೆಗಳ ಆಧಾರದ ಮೇಲೆ ಪ್ರಾಣಿಗಳನ್ನು ವರ್ಗೀಕರಿಸುವ ಪ್ರಯತ್ನ ಮಾಡಿದನು. ಪ್ರಾಣಿಗಳ ವರ್ಗೀಕರಣಕ್ಕೆ ಇವನ ಕೊಡುಗೆ ಅಪಾರ.

ಪ್ರಾಣಿ ವರ್ಗೀಕರಣದ ಈಗಿನ ಪದ್ಧತಿಯಲ್ಲಿ ಪ್ರಮುಖವಾಗಿ ಹಲವು ಶ್ರೇಣಿಕೃತ ಅಂತಸ್ತುಗಳನ್ನೊಳಗೊಂಡ ಘಟಕಗಳನ್ನು ಗುರುತಿಸಬಹುದು. ಈ ಘಟಕಗಳಿಗೆ ವರ್ಗೀಕರಣದ ಮಜಲುಗಳು (*Taxonomic rank*) ಎಂದು ಹೆಸರು. ಪ್ರಾಣಿ ವರ್ಗೀಕರಣದ ಅತ್ಯಂತ ಮೇಲಿನ ಮಜಲಿಗೆ ಸಾಮ್ರಾಜ್ಯ (*Kingdom)* ಎಂದು, ಇದರ ನಂತರದ ಮಜಲಿಗೆ ವಂಶ (*Phylum*) ಎಂದು, ಪ್ರತಿಯೊಂದು ವಂಶದಲ್ಲಿಯೂ ವರ್ಗಗಳು (*Categaries)* ಎಂಬ ಕೆಳ ಮಜಲುಗಳು ಇರುತ್ತವೆ. ಪ್ರತಿಯೊಂದು ವರ್ಗದಲ್ಲಿ ಸೇರಿಸಲಾಗಿರುವ ಪ್ರಾಣಿಗಳು ತಮ್ಮ ವಂಶಕ್ಕೆ ನಿರ್ದಿಷ್ಟವಾಗಿರುವ ಎಲ್ಲಾ ಗುಣಲಕ್ಷಣಗಳನ್ನು ಹೊಂದಿದ್ದರೂ ತಮ್ಮದೇ ಆದ ಕೆಲವು ವಿಶಿಷ್ಟ ಗುಣಲಕ್ಷಣಗಳಿಂದಾಗಿ ಅದೇ ವಂಶದ ಇತರ ವರ್ಗಗಳ ಪ್ರಾಣಿಗಳಿಗಿಂತ ಭಿನ್ನವಾಗಿರುತ್ತವೆ. ವರ್ಗಗಳ ನಂತರದ ಮಜಲು ಗಣ (*Order*). ಗಣಗಳನ್ನು ಕುಟುಂಬಗಳು (*Families*) ಎಂಬ ಮಜಲುಗಳಾಗಿ ವರ್ಗೀಕರಿಸಲಾಗುತ್ತದೆ. ಕುಟುಂಬಗಳನ್ನು ಮುಂದೆ ಜಾತಿ (*Geneta*)ಗಳಾಗಿ ವರ್ಗೀಕರಿಸಲಾಗುತ್ತದೆ. ಒಂದೊಂದು ಜಾತಿಯಲ್ಲಿಯೂ ಅನೇಕ ಪ್ರಬೇಧ (*Species)*ಗಳಿರುತ್ತವೆ. ಪ್ರಾಣಿಗಳೂ ಸೇರಿದಂತೆ ಎಲ್ಲಾ ಜೀವಿಗಳ ವರ್ಗೀಕರಣದಲ್ಲಿನ ಅತ್ಯಂತ ಕೆಳಗಿನ ಮಜಲು ಪ್ರಭೇದ. ಸಾಮಾನ್ಯವಾಗಿ ಪ್ರಭೇದ ಎಂದರೆ ಗುಣಲಕ್ಷಣಗಳಲ್ಲಿ ಒಂದನ್ನೊಂದು ಹೋಲುವ ಜೀವಿಗಳ ಗುಂಪು. ಉದಾಹರಣೆಗೆ ಪ್ರಪಂಚದ ಎಲ್ಲಾ ಮಾನವರು ಹೋಮೋಸೆಫಿಯನ್ಸ್ (*Homosepience)* ಎಂಬ ಒಂದೇ ಪ್ರಭೇದದ ಅಡಿಯಲ್ಲಿ ಗುರುತಿಸಲ್ಪಡುತ್ತಾರೆ. ಕಪ್ಪೆಗಳಲ್ಲಿ ಹಲವಾರು ಪ್ರಭೇದಗಳಿವೆ. ಹಾವುಗಳಲ್ಲಿ ನೂರಾರು ಪ್ರಭೇದಗಳಿವೆ.[೧೨] ಕೀಟಗಳಂತೂ ಲೆಕ್ಕಕ್ಕೆ ಸಿಕ್ಕದಷ್ಟು ಪ್ರಭೇದಗಳಲ್ಲಿ ಹಂಚಿಹೋಗಿವೆ.

ಒಟ್ಟಾರೆ ಪ್ರಾಣಿ ಸಾಮ್ರಾಜ್ಯವನ್ನು ಮುಖ್ಯವಾಗಿ ಅಕಶೇರುಕಗಳು ಮತ್ತು ಕಶೇರುಕಗಳು ಎಂಬುದಾಗಿ ವಿಂಗಡಿಸಿದ್ದು, ಈ ಕೆಳಗಿನಂತೆ ವಿವರಿಸಲಾಗಿದೆ.

೩.೨ ಅಕಶೇರುಕಗಳು (*Invertebrate*)

ನಮ್ಮ ಬೆನ್ನ ಮೇಲೆ ಒಮ್ಮೆ ಕೈಯಾಡಿಸಿಕೊಂಡರೆ ಗಟ್ಟಿಯಾದ ಬೆನ್ನುಮೂಳೆ ನಮ್ಮ ಅನುಭವಕ್ಕೆ ಬರುತ್ತದೆ. ಇಂತಹದೇ ಬೆನ್ನಲುಬು ನಾಯಿ, ಬೆಕ್ಕು, ಹಸು ಮುಂತಾದ ಪ್ರಾಣಿಗಳ ಬೆನ್ನ ಮೇಲೆ ಇರುವುದನ್ನು ನಾವು ಗಮನಿಸಬಹುದು. ಇಂತಹ ಬೆನ್ನುಮೂಳೆ ಇರುವ ಪ್ರಾಣಿಗಳನ್ನು ಕಶೇರುಕಗಳು ಎಂದು, ಬೆನ್ನುಮೂಳೆ ಇಲ್ಲದ ಪ್ರಾಣಿಗಳನ್ನು ಅಕಶೇರುಕಗಳೆಂದು ಕರೆಯುತ್ತಾರೆ.

ಕಶೇರುಕಗಳು ಕಣ್ಣಿಗೆ ಕಂಡುಬಂದು ಅವುಗಳ ಅಧ್ಯಯನ ಸುಲಭ ಸಾಧ್ಯ. ಆದರೆ ವಿಕಾಸದ ದೃಷ್ಟಿಯಿಂದ ನೋಡಿದಾಗ ಪ್ರಾಣಿ ಸಾಮ್ರಾಜ್ಯದ ಶಿಸ್ತುಬದ್ಧ ಅಧ್ಯಯನಕ್ಕಾಗಿ ಅಕಶೇರುಕಗಳ ಅಧ್ಯಯನವನ್ನು ಮೊದಲು ಮಾಡುವುದು ಅವಶ್ಯಕ. ಇದರಿಂದ ಪ್ರಾಣಿಗಳ ಶರೀರ ರಚನೆ, ಆಹಾರಕ್ರಮ ಹಾಗೂ ಜೈವಿಕ ಚಟುವಟಿಕೆಗಳು ಸರಳತೆಯಿಂದ ಸಂಕೀರ್ಣದತ್ತ ವಿಕಾಸವಾದವು ಎನ್ನುವುದು ತಿಳಿದುಬರುತ್ತದೆ.

ಅಕಶೇರುಕಗಳಲ್ಲಿ ಏಕಕೋಶಿಯ ಮತ್ತು ಬಹುಕೋಶಿಯ ಪ್ರಾಣಿಗಳು ಎಂಬುದಾಗಿ ವರ್ಗೀಕರಿಸಲಾಗಿದೆ.

ಏಕಕೋಶಿಯ ಪ್ರಾಣಿಗಳು (*Protozoa*):

ಎಲ್ಲಾ ಏಕಕೋಶಿಯ ಪ್ರಾಣಿಗಳನ್ನು ಪ್ರೋಟೋಜೋವ (*Protozoa*) ವಂಶಕ್ಕೆ ಸೇರಿಸಲಾಗಿದೆ. ದೇಹದಲ್ಲಿ ಒಂದೇ ಒಂದು ಜೀವಕೋಶವನ್ನು ಹೊಂದಿರುವ ಈ ಪ್ರಾಣಿಗಳು ಅತ್ಯಂತ ಸೂಕ್ಷ್ಮಗಾತ್ರದವಾಗಿದ್ದು, ಬರಿಗಣ್ಣಿನಿಂದ ನೋಡಲು ಸಾಧ್ಯವಿಲ್ಲ. ಹಾಗಾಗಿ ಸೂಕ್ಷ್ಮದರ್ಶಕದ ಮೊರೆ ಹೋಗಬೇಕಾಗುತ್ತದೆ.[೧೩] ಈ ಪ್ರೋಟೋಜೋವ ವಂಶದಲ್ಲಿ ಸುಮಾರು ೨೦,೦೦೦ಕ್ಕೂ ಹೆಚ್ಚು ಪ್ರಭೇದಗಳಿವೆ.[೧೪] ಬಹುತೇಕ ಏಕಕೋಶಿಯ ಜೀವಿಗಳು ನೀರಿನಲ್ಲಿ ವಾಸಿಸುತ್ತವೆ. ಇತರ ಪ್ರಾಣಿಗಳ ದೇಹದಲ್ಲಿ ಪರೋಪ ಜೀವಿಗಳಾಗಿಯೂ ವಾಸಿಸುತ್ತವೆ. ಹಲವು ಪರೋಪಜೀವಿಗಳು ತಮ್ಮ ಅತಿಥೇಯ ಪ್ರಾಣಿಯಲ್ಲಿ ವಿವಿಧ ರೀತಿಯ ಕಾಯಿಲೆಗಳನ್ನು ಉಂಟುಮಾಡಬಲ್ಲವು. ಮನುಷ್ಯರಲ್ಲಿ ಮಲೇರಿಯಾ ರೋಗಕ್ಕೆ ಕಾರಣವಾಗುವುದು ಪ್ಲಾಸ್ಮೋಡಿಯಂ (*Plasmodium*) ಎಂಬ ಏಕಕೋಶಜೀವಿ. ಅದೇ ರೀತಿ ನಮ್ಮ ಸಣ್ಣಕರುಳಿನಲ್ಲಿ ಎಂಟಮೀಬ ಎಂಬ ಏಕಕೋಶ ಜೀವಿ ವಾಸಿಸುತ್ತದೆ. ಇದು ಆಮಶಂಕೆ ರೋಗಕ್ಕೆ ಕಾರಣವಾಗುತ್ತದೆ.[೧೫]

ಬಹುಕೋಶಿಯ ಪ್ರಾಣಿಗಳು (*Metazoa*):

ಒಂದೇ ಜೀವಕೋಶವನ್ನುಳ್ಳ ಆದಿಮ ಪ್ರಾಣಿಗಳನ್ನು ಬಿಟ್ಟರೆ ಉಳಿದೆಲ್ಲಾ ಪ್ರಾಣಿಗಳನ್ನು ಮೆಟಜೊವ (*Metazoa*) ಎಂಬ ವಂಶಕ್ಕೆ ಸೇರಿಸಲಾಗಿದೆ. ಒಂದಕ್ಕಿಂತ ಹೆಚ್ಚು ಜೀವಕೋಶಗಳನ್ನು ಹೊಂದಿರುವ ಈ ಪ್ರಾಣಿಗಳಲ್ಲಿ ವಿವಿಧ ರೀತಿಯ ಜೀವಕೋಶಗಳು ವಿವಿಧ ಜೈವಿಕ ಚಟುವಟಿಕೆಗಳನ್ನು ಹಂಚಿಕೊಂಡಿರುತ್ತವೆ. ಗಾತ್ರದಲ್ಲಿ, ಆಕಾರದಲ್ಲಿ, ರಚನೆಯಲ್ಲಿ, ನಡವಳಿಕೆಗಳಲ್ಲಿ ಅಪಾರ ವೈವಿಧ್ಯತೆಯನ್ನು ತೋರಿಸುವ ಬಹುಕೋಶೀಯ ಪ್ರಾಣಿಗಳನ್ನು ಪ್ರಮುಖವಾಗಿ ಈ ಕೆಳಗಿನ ವಂಶಗಳಲ್ಲಿ ಗುರುತಿಸಲಾಗುತ್ತದೆ.

ಸ್ಪಂಜು ಪ್ರಾಣಿಗಳು (*Porifera*):

ಸ್ಪಂಜುಗಳು ಎಂದು ಕರೆಯುವ ಈ ಪ್ರಾಣಿಗಳು ರಚನೆಯಲ್ಲಿ ಅತ್ಯಂತ ಸರಳವಾಗಿದ್ದು ಪೊರಿಫೆರ[೧೬] ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯಲಾಗುತ್ತದೆ. ಬಹುತೇಕ ಸಮುದ್ರದ ನೀರಿನಲ್ಲಿ ವಾಸಿಸುವ ಇವು ಕೇವಲ ಜೀವಕೋಶ ಮಟ್ಟದ ರಚನೆಯನ್ನು ತೋರಿಸುತ್ತವೆ. ಯಾವುದೇ ಅಂಗಾಂಶಗಳಾಗಲೀ ಅಂಗವ್ಯವಸ್ಥೆಗಳಾಗಲೀ ಇಲ್ಲಿ ಕಂಡುಬರುವುದಿಲ್ಲ. ಈ ಪ್ರಾಣಿಗಳ ದೇಹದ ಮೇಲೆ ಹಲವಾರು ಸೂಕ್ಷ್ಮ ರಂಧ್ರಗಳಿದ್ದು, ಅವುಗಳ ಮೂಲಕ ನೀರು ದೇಹವನ್ನು ಸೇರಿ, ಪ್ರವಹಿಸಿ ನಂತರ ಹೊರಗೆ ಹೋಗುತ್ತವೆ.

ಈ ನೀರಿನ ಮೂಲಕ ಆಹಾರ ಮತ್ತು ಆಮ್ಲಜನಕ ದೇಹವನ್ನು ಪ್ರವೇಶಿಸುತ್ತದೆ. ಈ ಸ್ವಂಜು ಪ್ರಾಣಿಗಳಲ್ಲಿ ಸುಮಾರು ೫೧೫೦ಕ್ಕೂ ಹೆಚ್ಚು ಪ್ರಭೇದಗಳಿವೆ. ಅಕಶೇರುಕಗಳಲ್ಲಿ ಪ್ರೋಟೋಜೋವದ ನಂತರ ಇವು ಎರಡನೆಯ ಸ್ಥಾನದಲ್ಲಿವೆ.[೧೬] ೧೭೬೫ರಷ್ಟು ಹಿಂದೆಯೇ ಈ ಜೀವಿಗಳನ್ನು ಪ್ರಾಣಿಗಳು ಎಂದು ಗುರುತಿಸಲಾಗಿತ್ತು.[೧೭]

ಕುಟುಕು ಕಣವಂತಗಳು (*Coelenterata*):

ಈ ವಂಶದ ಬಹುತೇಕ ಪ್ರಾಣಿಗಳು ಸಮುದ್ರದಲ್ಲಿ ವಾಸಿಸುತ್ತವೆ. ಈ ಪ್ರಾಣಿಗಳ ದೇಹವು ತ್ರಿಜ್ಯಸಮ್ಮಿತಿಯನ್ನು ತೋರುತ್ತದೆ. ಅಂದರೆ ದೇಹದ ವಿವಿಧ ಭಾಗಗಳು ಅಕ್ಷವೊಂದರ ಸುತ್ತಲೂ ಜೋಡಣೆಗೊಂಡಿರುತ್ತವೆ. ಈ ಜೀವಿಗಳು ಒಂದು ರೀತಿಯ ನಂಜಿನ ವಸ್ತುವನ್ನು ಹೊಂದಿದ್ದು ನೀಳವಾದ ಮುಳ್ಳೊಂದರ ಮೂಲಕ ನಂಜನ್ನು ಇನ್ನೊಂದು ಪ್ರಾಣಿಯ ದೇಹಕ್ಕೆ ವರ್ಗಾಹಿಸಬಲ್ಲವು. ಇದರಿಂದಾಗಿ ಈ ಜೀವಕೋಶಗಳಿಗೆ ಕುಟುಕು ಕಣಗಳು ಎಂಬ ಹೆಸರು ಬಂದಿದೆ.

ಹೈಡ್ರಾ (*Hydra*), ಒಬೀಲಿಯಾ (*Obilia*), ಫೈಸೇಲಿಯಾ (*Paiselia*), ಲೋಳೆ ಮೀನುಗಳು (*Slime Fishes*), ಮತ್ತು ಸೀ ಅನಿಮೋನ್ (*See Animeon*), ಇನ್ನೂ ಮುಂತಾದವು ಈ ವಂಶಕ್ಕೆ ಸೇರುವ ಕೆಲವು ಪ್ರಮುಖ ಉದಾಹರಣೆಗಳು.[೧೮] ಇವುಗಳು ಅಂಗಾಂಶ ರಚನೆಯನ್ನು ತೋರಿಸುತ್ತಿದ್ದು ಈ ವಿಷಯದಲ್ಲಿ ಸ್ಪಂಜು ಪ್ರಾಣಿಗಳಿಗಿಂತ ಭಿನ್ನವಾಗಿವೆ. ಇವುಗಳ ದೇಹದಲ್ಲಿ ಆಹಾರವನ್ನು ಜೀರ್ಣಿಸಲು ಒಂದು ಪ್ರತ್ಯೇಕ ಕೊಳವೆಯಾಕಾರದ ರಚನೆಯಿದೆ. ಈ ಕುಟುಕು ಕಣಗಳು ದೇಹದ ರಕ್ಷಣಾ ವ್ಯವಸ್ಥೆಯಂತೆ ಕಾರ್ಯನಿರ್ವಹಿಸುತ್ತದೆ. ಈ ಕುಟುಕು ಕಣಗಳ ವೈಜ್ಞಾನಿಕ ಹೆಸರು ಸಿಲೆಂಟರೇಟಾ (*Coelenterata*),[೧೯] ಈ ವಂಶದ ಕೆಲವು ಪ್ರಾಣಿಗಳು ತಮ್ಮ ಸುತ್ತಲೂ ಒಂದು ರೀತಿಯ ಕಂಕಾಲವನ್ನು ಸೃಷ್ಟಿಸಿಕೊಳ್ಳುತ್ತವೆ. ಇದಕ್ಕೆ ಹವಳ ಎಂದು ಕರೆಯಲಾಗುತ್ತದೆ. ಈ ವಂಶದಲ್ಲಿ ಸುಮಾರು ೯೦೦೦ಕ್ಕೂ ಹೆಚ್ಚು ಪ್ರಭೇದಗಳನ್ನು ಗುರುತಿಸಲಾಗಿದೆ.[೨೦]

ಚಪ್ಪಟೆ ಹುಳುಗಳು (*Platyhelminthes*):

ಪ್ಲಾಟಿ ಹೆಲ್ಮೆಂಥಿಸ್ ಎನ್ನುವ ಗ್ರೀಸ್ ಪದದ ಅರ್ಥ ಚಪ್ಪಟೆ ಹುಳುಗಳು ಎಂದು. ಇವುಗಳ ದೇಹ ಎರಡು ಪದರಗಳಿಂದಾಗಿದ್ದು ಚಪ್ಪಟೆಯಾಗಿವೆ. ಈ ಜೀವಿಗಳಲ್ಲಿ ಅಂಗಾಂಶದಿಂದ ಮುಂದುವರಿದ ಅಂಗವ್ಯವಸ್ಥೆಯನ್ನು ನೋಡಬಹುದು. ಜೀರ್ಣಾಂಗ, ಶ್ವಾಸಕಾಂಗ ಹಾಗೂ ವಿಸರ್ಜನಾಂಗ ವ್ಯವಸ್ಥೆ ಇವುಗಳಿಗೆ ಇದೆ. ಇವು ಮನುಷ್ಯ ಹಾಗೂ ಇತರೆ ಕಶೇರುಕಗಳ ದೇಹದಲ್ಲಿ ವಾಸಿಸುತ್ತವೆ.[೨೧] ಕಾರಲುಹುಳು ಎಂಬ ಈ ವಂಶದ ಪ್ರಾಣಿ ಕುರಿಗಳ ಪಿತ್ತಜನಕಾಂಗದಲ್ಲಿ ವಾಸಿಸುತ್ತದೆ. ಶಿಸ್ಟೋಸೋಮ (*Hemorrhage*),ಎಂಬ ಚಪ್ಪಟೆಹುಳು ಮನುಷ್ಯರ ರಕ್ತದಲ್ಲಿ ವಾಸಿಸುತ್ತದೆ. ಲಾಡಿಹುಳು ಮನುಷ್ಯರ ಸಣ್ಣ ಕರುಳಿನಲ್ಲಿ ವಾಸಿಸುವ ಒಂದು ಪರೋಪಜೀವಿ. ಈ ವಂಶದಲ್ಲಿ ಸುಮಾರು ೧೨,೦೦೦ಕ್ಕೂ ಹೆಚ್ಚು ಪ್ರಭೇದಗಳಿವೆ.[೨೨]

ದುಂಡು ಹುಳುಗಳು (*Nematode*):

ಸಾಮಾನ್ಯವಾಗಿ ಪರೋಪಜೀವಿಗಳಾದ ಇವು ಏಕಲಿಂಗಿಗಳಾಗಿದ್ದು, ಅಸ್ಕಿ ಹೆಲ್ಮೆಂಥಿಸ್ (*Askey*

helmahties),[೨೪] ಎಂಬುದು ಇವುಗಳ ವೈಜ್ಞಾನಿಕ ಹೆಸರು. ಇವುಗಳ ದೇಹ ದುಂಡಾಗಿರುವುದರಿಂದ ಇವನ್ನು ದುಂಡು ಹುಳುಗಳು ಎಂದು ಕರೆಯುತ್ತಾರೆ. ಇವುಗಳಿಗೆ ಶ್ವಾಸಕಾಂಗ ಹಾಗೂ ರಕ್ತಪರಿಚಲನಾಂಗಗಳು ಇಲ್ಲ. ಹೆಣ್ಣು ಹುಳು ಆಕಾರದಲ್ಲಿ ಗಂಡು ಹುಳುವಿಗಿಂತ ದೊಡ್ಡದಾಗಿರುತ್ತದೆ. ಈ ವಂಶದ ಪ್ರಾಣಿಗಳು ನೀಳವಾದ, ಕೊಳವೆಯಾಕಾರದ ದೇಹವನ್ನು ಹೊಂದಿದ್ದು ದೇಹದ ಎರಡೂ ತುದಿಗಳು ಮಾತ್ರ ಚೂಪಾಗಿರುತ್ತವೆ. ದುಂಡು ಹುಳಗಳ ಅನೇಕ ಪ್ರಭೇದಗಳು ಮಾನವ ದೇಹದಲ್ಲಿ ವಿವಿಧ ಅಂಗವ್ಯವಸ್ಥೆಗಳಲ್ಲಿ ಪರೋಪ ಜೀವಿಗಳಾಗಿವೆ. ಮಕ್ಕಳಲ್ಲಿ ಸಣ್ಣ ಕರುಳಿನಲ್ಲಿ ವಾಸಿಸುವ ಜಂತುಹುಳು ಈ ವಂಶದ ಒಂದು ಅತೀ ಸಾಮಾನ್ಯ ಉದಾಹರಣೆ. ಅದೇ ರೀತಿ ಕೊಕ್ಕೆಹುಳು, ಆನೆಕಾಲು ರೋಗವನ್ನು ಉಂಟುಮಾಡುವ ಫೈಲೇರಿಯಾ (*Fileria),*ಹುಳು, ಟ್ರೆಕಿನೆಲ್ಲಾ (*Trekinella),*ಇವು ಇತರ ಉದಾಹರಣೆಗಳು. ಈ ವಂಶದಲ್ಲಿ ಸುಮಾರು ೧೫,೦೦೦ಕ್ಕೂ ಹೆಚ್ಚು ಪ್ರಭೇದಗಳನ್ನು ಗುರುತಿಸಲಾಗಿದೆ.[೨೫]

ವಲಯವಂತಗಳು (*Annelida*):

ಈ ವಂಶದ ಪ್ರಾಣಿಗಳಲ್ಲಿ ದೇಹವು ನೀಳವಾಗಿದ್ದು, ಅದು ಸಣ್ಣ ಸಣ್ಣ ವಲಯಗಳಾಗಿ ವಿಂಗಡಿಸಲ್ಪಟ್ಟಿದೆ. ಈ ವಲಯವಂತಗಳನ್ನು ಅನೆಲಿಡಾ (*Annelida),*[೨೬] ಎಂಬ ವೈಜ್ಞಾನಿಕ ಹೆಸರಿನಿಂದ ಕರೆಯಲಾಗುತ್ತದೆ. ಇವು ಮಣ್ಣು, ಸಿಹಿನೀರು ಮತ್ತು ಸಾಗರದ ನೀರಿನಲ್ಲಿರುತ್ತವೆ. ಇವು ನೀರಿನಲ್ಲಿ ಉಗಮವಾಗಿ ವಿಕಾಸವಾಗಿದ್ದರೂ ನಂತರ ನೆಲದ ಮೇಲೂ ಯಶಸ್ವಿಯಾಗಿ ವಾಸಿಸಲು ಪ್ರಾರಂಭಿಸಿದವು. ಇವು ದೇಹದಲ್ಲಿ ಮೊಟ್ಟಮೊದಲ ಬಾರಿಗೆ ರಕ್ತ ಪರಿಚಲನಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಪ್ರಾಣಿಗಳಾಗಿವೆ.[೨೭] ರೈತನ ಗೆಳೆಯ ಎಂದು ಹೆಸರಾಗಿರುವ ಎರೆಹುಳು ಈ ವಂಶದ ಅತ್ಯಂತ ಪರಿಚಿತ ಪ್ರಾಣಿಯಾಗಿದೆ. ಜಿಗಣೆ ಮತ್ತು ನೀರಿಸ್ ಇತರ ಸಾಮಾನ್ಯ ಉದಾಹರಣೆಗಳು. ವಲಯವಂತಗಳಲ್ಲಿ ೧೨,೦೦೦ಕ್ಕೂ ಹೆಚ್ಚು ಪ್ರಭೇದಗಳಿರಬಹುದೆಂದು ಅಂದಾಜು ಮಾಡಲಾಗಿದೆ.[೨೮]

ಸಂಧಿಪದಿಗಳು (*Arthropods)*:

ಪ್ರಾಣಿ ಪ್ರಪಂಚದ ಶೇ.೭೫ರಷ್ಟು ಜೀವಿಗಳು ಸಂಧಿಪದಿಗಳಾಗಿವೆ. ಇವನ್ನು ಅಕಶೇರುಕಗಳ ಪ್ರಮುಖ ವಂಶ ಎಂದು ಪರಿಗಣಿಸಲಾಗಿದೆ. ಸಾಮಾನ್ಯವಾಗಿ ಸಂಧಿಯುಳ್ಳ ವಿವಿಧ ಚಲನಾಂಗಗಳನ್ನು ಹೊಂದಿರುವುದರಿಂದ ಈ ವಂಶಕ್ಕೆ ಸಂಧಿಪದಿಗಳು ಎಂಬ ಹೆಸರು ಬಂದಿದೆ. ಇದು ಪ್ರಾಣಿಯ ಚರ್ಮದ ಕೋಶಗಳು ಸ್ರವಿಸುವ ಪ್ರೋಟೀನ್(ಕೈಟಿನ್)ನಿಂದ ರೂಪುಗೊಂಡಿದ್ದು ದೇಹಕ್ಕೆ ಗಟ್ಟಿಯಾದ ಹೊರಕವಚವಿದೆ. ಜೀವಿ ಬೆಳೆದಂತೆ ಆಗಾಗ್ಗೆ ಹೊರಕವಚ ಬಿದ್ದುಹೋಗಿ ಹೊಸ ಕವಚ ಬೆಳೆಯುತ್ತದೆ.[೨೯]

ಪ್ರಪಂಚದ ಎಲ್ಲಾ ಭಾಗಗಳಲ್ಲಿ ಸಮುದ್ರದ ಆಳದಿಂದ ಬೆಟ್ಟದ ತುದಿಯವರೆಗೂ ಉಷ್ಣವಲಯದಿಂದ ಸಮಶೀತೋಷ್ಣ ವಲಯದವರೆಗೂ ಎಲ್ಲಾ ಬಗೆಯ ಆವಾಸಗಳಲ್ಲಿ ಇವುಗಳನ್ನು ಕಾಣಬಹುದು. ಕೆಲವು ಮಿ.ಮೀ ನಿಂದ ೧೨ ಅಡಿಗಳವರೆಗೂ ಗಾತ್ರದಲ್ಲಿ ವೈವಿಧ್ಯತೆಯನ್ನು ಈ ಜೀವಿಗಳಲ್ಲಿ ಕಾಣಬಹುದು. ಸುಮಾರು ೯ ಲಕ್ಷಕ್ಕೂ ಹೆಚ್ಚು ಪ್ರಭೇದಗಳಿರುವ ಈ ವಂಶದ ಪ್ರಾಣಿಗಳನ್ನು ಈ ಕೆಳಗಿನ ಪ್ರಮುಖ ವರ್ಗಗಳಲ್ಲಿ ಗುರುತಿಸಲಾಗುತ್ತದೆ.

- ಸ್ಕೋಲೋಪೇಂಡ್ರ(*Scholopendra*),ಜ್ಯೂಲಸ್ ಮುಂತಾದ ಸಂಧಿಪದಿಗಳಲ್ಲಿ ಹಲವಾರು ಜತೆ ಕಾಲುಗಳಿರುತ್ತವೆ. ಇವುಗಳನ್ನು ಸಾಮಾನ್ಯವಾಗಿ ಜರಿ (*Centipid*) ಎಂದು ಕರೆಯಲಾಗುತ್ತದೆ.[೨೦] ಇವುಗಳು ಕೈರೋಪೋಡಾ (*Keropoda*)[೨೧] ಉಪವರ್ಗಕ್ಕೆ ಸೇರುತ್ತವೆ. ಸುಮಾರು ೩೦೦೦ ಪ್ರಭೇದಗಳಿರುವ ಇವು ಭೂವಾಸಿಗಳು. ಇವುಗಳಿಗೆ ವಿಷದ ಕೊಂಡಿಗಳಿವೆ. ಇತರ ಚಿಕ್ಕ ಚಿಕ್ಕ ಸಂಧಿಪದಿಗಳನ್ನು ವಿಷದ ಕೊಂಡಿಯಿಂದ ಘಾಸಿಗೊಳಿಸಿ ಹಿಡಿಯುತ್ತವೆ. ಮತ್ತೊಂದು ಅಡಿಕೆಹುಳು (ಸಹಸ್ರಪದಿ) ಇವುಗಳ ದೇಹದಿಂದ ಹೊರಹೊಮ್ಮುವ ಕೆಟ್ಟಘಾಟು ವಾಸನೆ ಇವುಗಳಿಗೆ ವೈರಿಗಳಿಂದ ರಕ್ಷಣೆ ಒದಗಿಸುತ್ತದೆ. ಇವು ಸಹ ಭೂವಾಸಿಗಳಾಗಿದ್ದು, ಸುಮಾರು ೮೦೦೦ ಪ್ರಭೇದಗಳನ್ನು ಈ ವರ್ಗದಲ್ಲಿ ಗುರುತಿಸಬಹುದು. ಇವು ಮಿರಿಯೋಪೋಡ[೨೨](*Myriapoda*) ಎಂಬ ವರ್ಗಕ್ಕೆ ಸೇರಿದ್ದು, ಡಿಪ್ಲೋಪ್ಲೋಡಾ (*Diplopoda*) ಎಂಬ ಉಪವರ್ಗದಲ್ಲಿ ಕಂಡು ಬರುತ್ತವೆ.

- ಜೇಡ, ಚೇಳು, ಚಿಗಟ ಮುಂತಾದ ಸಂಧಿಪದಿಗಳಲ್ಲಿ ನಾಲ್ಕು ಜೊತೆ ಕಾಲುಗಳಿರುತ್ತವೆ. ಇವು ಭೂವಾಸಿಗಳಾಗಿದ್ದು ಆರಾಕ್ನಿಡ[೨೩](*Arachnida*) ಎಂಬ ವರ್ಗಕ್ಕೆ ಸೇರುತ್ತವೆ.

- ಏಡಿಗಳು, ಸೀಗಡಿಗಳು, ನಳ್ಳಿಗಳು ಮುಂತಾದ ಸಂಧಿಪದಿಗಳಲ್ಲಿ ಐದು ಜೊತೆ ಕಾಲುಗಳಿರುತ್ತವೆ. ದೇಹವನ್ನು ಕೈಟಿನ್‌ನಿಂದಾದ ಗಡುಸು ಕವಚವೊಂದು ಸುತ್ತುವರೆದಿರುವುದರಿಂದ ಈ ಸಂಧಿಪದಿಗಳನ್ನು ಕಠಿಣಚರ್ಮಿಗಳು ಎಂದು ಕರೆಯಲಾಗುತ್ತದೆ.[೨೪] ಈ ಸಂಧಿಪದಿಗಳು ಸಮುದ್ರದ ನೀರಿನಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ನೀರಿನಲ್ಲಿ ವಾಸಿಸುವುದರಿಂದ ಇವು ಕಿವಿರುಗಳಿಂದ ಉಸಿರಾಡುತ್ತವೆ. ಇವುಗಳಲ್ಲಿ ಒಂದು ಜೊತೆ ಕುಡಿಮೀಸೆ (*Antenna*) ಒಂದು ಜೊತೆ ಕೆಳದವಡೆ ಕಂಡುಬರುತ್ತವೆ. ಇವೆರಡೂ ಅಂಗಗಳು ಈ ಜೀವಿಗಳಿಗೆ ಆಹಾರ ಸಂಗ್ರಹಣೆಗೆ ನೆರವಾಗುತ್ತವೆ.[೨೫] ಈ ಸಂಧಿಪಧಿಗಳು ಕ್ರಸ್ಟೇಸಿಯಾ (*Crustacea*)[೨೬] ಎಂಬ ವರ್ಗಕ್ಕೆ ಸೇರಿದ್ದು, ಸುಮಾರು ೪೦,೦೦೦ ಪ್ರಭೇದಗಳಿವೆ.

- ಚಿಟ್ಟೆ, ರೇಷ್ಮೆಹುಳು, ನೊಣ, ತಿಗಣೆ, ಕಣಜ, ಜೇನು ಮುಂತಾದ ಸಂಧಿಪದಿಗಳಲ್ಲಿ ಮೂರು ಜೊತೆ ಕಾಲುಗಳಿರುತ್ತವೆ. ಕೀಟಗಳು ಎಂದು ಕರೆಯಲ್ಪಡುವ ಈ ಗುಂಪಿನ ಬಹುತೇಕ ಉದಾಹರಣೆಗಳಲ್ಲಿ ಹಾರುವ ಸಲುವಾಗಿ ರೆಕ್ಕೆಗಳಿರುತ್ತವೆ. ಕೀಟಗಳು ಸಂಧಿಪದಿಗಳ ವಂಶದ ಅತ್ಯಂತ ದೊಡ್ಡಗುಂಪು. ಇವುಗಳಲ್ಲಿ ರಕ್ತಹೀರುವ ಸೊಳ್ಳೆಗಳು, ಮಕರಂದ, ಹಣ್ಣಿನ ರಸ, ಗಿಡಗಳ ರಸ ಸೇವಿಸುವ ಕೀಟಗಳೂ ಇವೆ. ಇವು ಇನ್‌ಸೆಕ್ಟ್[೨೭] (*Insecta*) ವರ್ಗಕ್ಕೆ ಸೇರಿದ್ದು, ಸುಮಾರು ೮ ಲಕ್ಷಕ್ಕೂ ಹೆಚ್ಚು ಪ್ರಭೇದಗಳನ್ನು ಗುರುತಿಸಲಾಗಿದೆ.

ಮೃದ್ವಂಗಿಗಳು (*Mollusca*):

ಅಕಶೇರುಕಗಳಲ್ಲಿರುವ ಎರಡನೆಯ ದೊಡ್ಡ ವಂಶವೇ ಮೃದ್ವಂಗಿಗಳು.[೨೮] ಹೆಸರೇ ಸೂಚಿಸುವ ಹಾಗೆ ಈ ಪ್ರಾಣಿಗಳ ದೇಹವು ಬಹಳ ಮೃದುವಾಗಿವೆ. ಮೃದ್ವಂಗಿಗಳು ಮಲೂಸ್ಕಾ (*Mollusea*) ಎಂಬ ವಂಶಕ್ಕೆ ಸೇರಿವೆ.[೨೯] ಈ ವಂಶದ ಪ್ರಾಣಿಗಳು ಮಾನವನಿಗೆ ಬಹಳ ಹಿಂದಿನ ಕಾಲದಿಂದಲೂ ತಿಳಿದುಬಂದಿದೆ. ಮಾರ್ಟಿನ್ ಲಿಸ್ಟರ್ (*Martin Lister*) ಎಂಬ ವಿಜ್ಞಾನಿ ಅನೇಕ ರೀತಿಯ ಮೃದ್ವಂಗಿಗಳ ಚಿಪ್ಪನ್ನು ೧೬೯೭ರಲ್ಲಿಯೇ ವರ್ಣಿಸಿದ್ದಾನೆ. ಕೆಲವು ಶಿರೋಪಾದಿಗಳನ್ನು ಅರಿಸ್ಟಾಟಲ್‌ನ ಕಾಲದಲ್ಲಿಯೇ

ವಿವರಿಸಲಾಗಿದೆ[೯೦] ಎಂಬ ವಿಷಯ ತಿಳಿದುಬರುತ್ತದೆ. ಈ ಮೃದ್ವಂಗಿಗಳ ಮೃದು ದೇಹವು ಸಾಮಾನ್ಯವಾಗಿ ಕ್ಯಾಲ್ಸಿಯಂ ಲವಣದಿಂದ ಮಾಡಲ್ಪಟ್ಟಿರುವ ಚಿಪ್ಪಿನಿಂದ ರಕ್ಷಿತವಾಗಿರುತ್ತದೆ. ಈ ಚಿಪ್ಪು ಒಂದು ಎರಡು ಅಥವಾ ಹಲವು ಫಲಕಗಳಿಂದ ಕೂಡಿದ್ದು, ಸುರುಳಿಯಾಕಾರ, ಶಂಖಾಕಾರ ಇತ್ಯಾದಿ ಹಲವು ಆಕಾರಗಳಲ್ಲಿ ಕಂಡುಬರುತ್ತವೆ. ಕೆಲವು ಉದಾಹರಣೆಗಳಲ್ಲಿ ಚಿಪ್ಪು ದೇಹದ ಒಳಗೆ ಇದ್ದರೆ ಅಕ್ಟೋಪಸ್‌ನಂತಹ ಉದಾಹರಣೆಗಳಲ್ಲಿ ಚಿಪ್ಪು ಇರುವುದಿಲ್ಲ.

ಬಸವನಹುಳು, ಶಂಖಗಳು, ಕವಡೆ, ಕಪ್ಪೆಚಿಪ್ಪು, ಕಟಲ್‌ಮೀನು, ಆಕ್ಟೋಪಸ್ ಇವು ಮೃದ್ವಂಗಿಗಳ ಸಾಮಾನ್ಯ ಉದಾಹರಣೆಗಳು. ಸುಮಾರು ೧,೨೦,೦೦೦ ಪ್ರಭೇದಗಳಿದ್ದು, ಸಂಖ್ಯೆಯ ದೃಷ್ಟಿಯಿಂದ ಮೃದ್ವಂಗಿಗಳದ್ದು ಎರಡನೇ ಅತಿದೊಡ್ಡ ಪ್ರಾಣಿವಂಶ. ಬೆನ್ನುಹುರಿಯಿಲ್ಲದ ಪ್ರಾಣಿಗಳಲ್ಲಿ ಆಕ್ಟೋಪಸ್ ಅತ್ಯಂತ ಬಾರಿ ಗಾತ್ರದ ಪ್ರಾಣಿ. ತನ್ನ ಶಿರಭಾಗದಲ್ಲಿ ಎಂಟು ನೀಳವಾದ ಬಾಹುಗಳನ್ನು ಹೊಂದಿರುವುದರಿಂದ ಈ ಹೆಸರು ಬಂದಿದೆ (ಆಕ್ಟೋಪಸ್=ಅಷ್ಟಪಾದಿ)[೯೧] ದೊಡ್ಡ ಆಕ್ಟೋಪಸ್ ಒಂದು ತನ್ನ ಬಾಹುಗಳಿಂದ ಒಬ್ಬ ಮನುಷ್ಯನನ್ನು ಸೆರೆಹಿಡಿಯಬಲ್ಲದು.

ಕಂಟಕ ಚರ್ಮಿಗಳು (*Echinodermata*):

ಹೊರಮೈ ಮೇಲೆ ಮುಳ್ಳುಗಳಿರುವುದರಿಂದ ಇದನ್ನು ಕಂಟಕ ಚರ್ಮಿಗಳು ಎಂದು ಕರೆಯುತ್ತಾರೆ.[೯೨] ಸಂಪೂರ್ಣ ಕಡಲವಾಸಿಗಳಾದ ವೈವಿಧ್ಯಮಯ ಪ್ರಾಣಿಗಳನ್ನು ಒಳಗೊಂಡಿರುವ ಈ ವಂಶವು ಹಲವು ವಿಷಯಗಳಲ್ಲಿ ವಿಶಿಷ್ಟವಾಗಿದೆ. ಎಲ್ಲವೂ ಸ್ವತಂತ್ರ ಜೀವಿಗಳಾಗಿದ್ದು ತಮ್ಮ ದೇಹದ ಮೇಲ್ಮೈಯಲ್ಲಿ ಸಹಸ್ರಾರು ಮುಳ್ಳುಗಳನ್ನು ಹೊಂದಿರುತ್ತವೆ. ಸಮುದ್ರದ ನೀರು ದೇಹವನ್ನು ಒಳಹೊಕ್ಕು ಹೊರಬರುವ ಒಂದು ವಿಶಿಷ್ಟ ಜಲಪರಿಚಲನಾ ವ್ಯವಸ್ಥೆ ಈ ಪ್ರಾಣಿಗಳಲ್ಲಿ ಕಂಡುಬರುತ್ತದೆ.[೯೩] ವಿಶಿಷ್ಟವಾದ ಆಕಾರ, ಗಾತ್ರ ಹಾಗೂ ಬಣ್ಣಗಳಲ್ಲಿ ಕಡಲ ತಡಿಯಲ್ಲಿ ಕಂಡುಬರುವ ಈ ಪ್ರಾಣಿಗಳಲ್ಲಿ ಪ್ರಮುಖವಾದುದೆಂದರೆ ಪೆಡಸು ನಕ್ಷತ್ರಗಳು, ನಕ್ಷತ್ರ ಮೀನು, ಸಮುದ್ರಸೌತೆ, ಕಡಲಕುಡಿಕೆ, ಸಮುದ್ರಲಿಲಿ ಇತ್ಯಾದಿ.[೯೪] ಸುಮಾರು ೬೦೦೦ಕ್ಕೂ ಹೆಚ್ಚು ಪ್ರಭೇದಗಳನ್ನು ಈ ವಂಶದಲ್ಲಿ ಗುರುತಿಸಲಾಗಿದೆ.

ಕಂಟಕಚರ್ಮಿಗಳ ವಂಶವನ್ನು ಅವುಗಳ ಜೀವನ ಶೈಲಿಯ ಆಧಾರದ ಮೇಲೆ ಆಸ್ಟರಾಯಿಡಿಯಾ –*Asteroidea* (ನಕ್ಷತ್ರ ಮೀನು), ಓಫಿರುಯಿಡಿಯಾ–*Ophiuroidea* (ಪೆಡಸು ಮೀನು), ಎಕಿನೊಯಿಡಿಯಾ – *Echinodea* (ಕಡಲಪೋರ), ಹೋಲೋಥ್ಯೈಡಿಯ – *Holothuroidea* (ಸಮುದ್ರ ಸೌತೆ) ಮತ್ತು ಕ್ರಿನೊಯಿಡೆ – *Crinoidea* (ಸಮುದ್ರ ಲಿಲಿ)[೯೫] ಎಂದು ಐದು ವರ್ಗಗಳಾಗಿ ವಿಭಾಗಿಸಲಾಗಿದೆ.

೩.೩ ಕಶೇರುಕಗಳು (*Vertebrates*):

ನಾವು ಈಗಾಗಲೇ ನೋಡಿರುವಂತೆ ಅಕಶೇರುಕಗಳಿಂದ ವಿಕಾಸವಾದ, ವಿಕಾಸದ ಹಾದಿಯಲ್ಲಿ ಹೆಚ್ಚು ಮುಂದುವರಿದ ವಿಶೇಷ ಗುಣಲಕ್ಷಣಗಳುಳ್ಳ ಪ್ರಾಣಿಗಳನ್ನು ಕಶೇರುಕಗಳು ಎಂದು ವರ್ಗೀಕರಿಸಲಾಗಿದೆ. ಅಂದರೆ ಪ್ರಾಣಿಗಳ ಬೆನ್ನಿನ ಭಾಗದಲ್ಲಿ ನೋಟೋಕಾರ್ಡ್ ಎಂಬ ಘನವಾದ ರಚನೆಯಿದೆ. ಹಾಗಾಗಿ ಬೆನ್ನುಹುರಿಯುಳ್ಳ ಪ್ರಾಣಿಗಳನ್ನು ಕಶೇರುಕಗಳೆಂದು ಕರೆಯಲಾಗುತ್ತದೆ.[೯೬]

ಕಶೇರುಕಗಳ ವರ್ಗೀಕರಣ

ಕಶೇರುಕಗಳನ್ನು ಮುಖ್ಯವಾಗಿ ಐದು ವರ್ಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

೧. ಮೀನುಗಳು (*Fishes*)

೨. ಉಭಯವಾಸಿಗಳು (*Amphibia*)

೩. ಸರೀಸೃಪಗಳು (*Reptiles*)

೪. ಪಕ್ಷಿಗಳು (*Aves*)

೫. ಸಸ್ತನಿಗಳು[೪೭] (*Mammals*)

೧. ಮೀನುಗಳು: ಸಂಪೂರ್ಣ ಜಲವಾಸಿಗಳಾದ ಈ ಮೀನುಗಳನ್ನು ಸಾಗರದ ಮೀನುಗಳು ಮತ್ತು ಸಿಹಿ ನೀರಿನ ಮೀನುಗಳು ಎಂಬುದಾಗಿ ವಿಂಗಡಿಸಿ ನೋಡಬಹುದು. ಇವು ಶಿತರಕ್ತ ಪ್ರಾಣಿಗಳಾಗಿದ್ದು ದೇಹದ ತಾಪಮಾನ ಹೊರಗಿನ ತಾಪಮಾನಕ್ಕೆ ಅನುಗುಣವಾಗಿ ಬದಲಾಗುತ್ತಾ ಹೋಗುತ್ತದೆ. ದೇಹರಚನೆಯು ನೀರಿನಲ್ಲಿ ವಾಸಿಸಲು ಅನುಕೂಲವಾಗುವಂತೆ ಹಲವು ಮಾರ್ಪಾಟುಗಳನ್ನು ಹೊಂದಿರುತ್ತವೆ. ನೀರಿನಲ್ಲಿ ಈಜಾಡಲು ಮತ್ತು ದೇಹದ ಸಮತೋಲನವನ್ನು ಕಾಪಾಡಲು ಈಜುರೆಕ್ಕೆಗಳು ಇರುತ್ತವೆ. ಕಿವಿರುಗಳು ಉಸಿರಾಟದ ಅಂಗಗಳಾಗಿದ್ದು ದೇಹದ ಮೇಲೆ ಹುರುಪೆಗಳಿಂದ ಕೂಡಿದ ಕವಚ ಇರುತ್ತದೆ. ಸನ್ನಿವೇಶಕ್ಕೆ ಸ್ವಭಾವಕ್ಕೆ ಮತ್ತು ಜೀವನಕ್ರಮಕ್ಕೆ ತಕ್ಕಂತೆ ಮೀನಿನ ಆಕಾರದಲ್ಲಿ ಮತ್ತು ಬಣ್ಣಗಳಲ್ಲಿ ಅವು ವೈವಿಧ್ಯಮಯವಾಗಿರುತ್ತವೆ.

ಸುಮಾರು ೨೦,೦೦೦ ಪ್ರಭೇದಗಳಲ್ಲಿ ಹಂಚಿಹೋಗಿರುವ ಮೀನುಗಳ ಗುಂಪನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು.

೧. ಇಲ್ಯಾಸ್ಮೋಬ್ರಾಂಕಿಯಾ (*Ilyasmabronicia*): ಅಂದರೆ ಗಟ್ಟಿಯಾದ ಮೂಳೆಗಳಿಗೆ ಬದಲಾಗಿ ಮದ್ವಸ್ಥಿಯಿಂದಾದ ಕಂಕಾಲವುಳ್ಳ ಮೀನುಗಳು.

೨. ಟೇಲಿಯೋಸ್ಟೋಮೈ (*Teliostomai*): ಗಟ್ಟಿಯಾದ ಎಲುಬುಳ್ಳ ಮೂಳೆ ಮೀನುಗಳು ಎಂಬ ಎರಡು ಉಪವರ್ಗಗಳಲ್ಲಿ ಗುರುತಿಸಲಾಗಿದೆ.

ಮೀನುಗಳ ವರ್ಗೀಕರಣ, ಶಾಸ್ತ್ರೀಯನಾಮ, ಸಾಮಾನ್ಯ ಹೆಸರು, ಕನ್ನಡದ ಹೆಸರು ಮುಂತಾದ ಅಂಶಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರವಾಗಿ ನೀಡಲಾಗಿದೆ.

ಮೀನುಗಳ ವರ್ಗೀಕರಣ ಕೋಷ್ಟಕ

ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಕನ್ನಡದ ಹೆಸರು	ಗಮನಾರ್ಹ ಅಂಶಗಳು
ಗಣ : ಕ್ಲೂಪಿಯಿಫಾರ್ಮಿಸ್ (*Clupeiformes*) **ಕುಟುಂಬ** : ಕ್ಲೂಪಿಯಿಡೆ (*Clupeidae*) (ಸಾರ್ಡಿನ್, ಶಾಡ್ ಮೀನುಗಳು)			
೦೧. ಹಿಲ್ಸ ಇಲಿಷ (*Hilsa ilisha*)	ಪಾಲಾಸ	ಪಾಟಿಯ	ರುಚಿಯಾದ ಮಾಂಸಕ್ಕೆ ಹೆಸರುವಾಸಿ
ಗಣ: ಸಿಪ್ರಿನಿಫಾರ್ಮಿಸ್ (*Cypriniformes*) **ಕುಟುಂಬ**: ಸಿಪ್ರಿನಿಡೆ (*Cyprinidae*) (ಕಾರ್ಪ್‌ಗಳು)			
೦೨. ಪುಂಟಿಯಸ್‌ಫಿಲಮೆಂಟೋಸಸ್ (*Puntius filamentosus*)	ಕಸ್ಮ	ಗೊಗ್ಗರಕೆ	ಕೃಷಿ ಯೋಗ್ಯ, ಮಧ್ಯಮಗಾತ್ರ-ದಿಂದ ಮುಂಗಾರಿನಲ್ಲಿ ಮೊಟ್ಟೆ ಇಡುತ್ತದೆ.
೦೩. ಪುಂ. ಕರ್ನಾಟಕಸ್ (*Puntius karnatacus*) ೦೪. ಪುಂ. ಫೇಸಿಯೇಟಸ್ (*Puntius fasciatus*)	ಕರ್ನಾಟಕದ ಕಾರ್ಪು	ಕೊರಚಮೀನು ಗೆಂಡೆ ಮೀನು, ದೊಡ್ಡ ಮೀನು, ಗುಡ್‌ಪಕ್ಕೆ ಮೀನು ಮಚ್ಚಾಲು ಮೀನು	ಕೃಷಿ ಯೋಗ್ಯ, ಮಧ್ಯಮಗಾತ್ರ-ದಿಂದ ಮುಂಗಾರಿನಲ್ಲಿ ಮೊಟ್ಟೆ ಇಡುತ್ತದೆ.
೦೫. ಲ್ಯಾಬಿ ನಿಗ್ರೆಸ್ಸೆನ್ಸ್ (*Labeo nigrescens*)		ಕುರಿಮೀನು	ಮಧ್ಯಮ ಗಾತ್ರ, ಕೃಷಿ ಯೋಗ್ಯ
೦೬. ಟೋರ್ ಖುದ್ರಿ (*Tor khudree*)	ಹಳದಿ ಮಶೀರ್	ಬಿಳಿ ಮೀನು	ದೊಡ್ಡ ಗಾತ್ರ, ಕೃಷಿ ಯೋಗ್ಯ
೦೭. ಸೆರ್ರಿನಸ್ ಮೃಗಾಲ (*Serrinas mrigala*)	ಮಿಗ್ರಾಲ	ಮಿಗ್ರಾಲ ಮೀನು	ದೊಡ್ಡಗಾತ್ರ ಕೃಷಿಯೋಗ್ಯ
೦೮. ಕಾಟ್ಲಕಾಟ್ಲ (*Katla katla*)	ಕಾಟ್ಲ	ಕಾಟ್ಲಮೀನು ದೊಡ್ಡಗೆಂಡೆ ಮೀನು	ದೊಡ್ಡಗಾತ್ರ(೧೮ ಕೆ.ಜಿ) ಕೃಷಿ ಯೋಗ್ಯ ಮೀನು
ಗಣ : ಸಿಲೂರಿಫಾರ್ಮಿಸ್ (*Siluriformes*) (ಕ್ಯಾಟ್ ಫಿಶ್) **ಕುಟುಂಬ** : ಸೈಲೂರಿಡೆ (*Siluridae*) (ಹಾಳೆ ಮೀನು)			
೦೯. ಓಂಪಾಕ್ ಬೈಮ್ಯಾಕುಲೇಟಸ್ (*Ompok Baimaculetus*)	ಬೆಣ್ಣೆ ಕ್ಯಾಟಫಿಶ್	ಗುಳ್ಳೆ ಮೀನು	ಮುಂಗಾರಿನಲ್ಲಿ ಮೊಟ್ಟೆ ಇಡುವ ಸಣ್ಣ ಮೀನು.

ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಕನ್ನಡದ ಹೆಸರು	ಗಮನಾರ್ಹ ಅಂಶಗಳು
ಗಣ : ಪರ್ಸಿಫಾರ್ಮಿಸ್ *(Parciformes)* **ಕುಟುಂಬ : ನಾಂಡಿಡೆ** *(Nandidae)* (ಮಣ್ಣು ಮೀಟುಗ)			
೧೦. ನಂದುಸ್ ನಂದುಸ್ *(Nandus Nandus)*		ಚಿಕ್ಕಟಿಕೆ ಮೀನು	ಇತರೆ ಮೀನುಗಳನ್ನು ತಿನ್ನುತ್ತದೆ. ಜೀವನದ ಆಸೆ ಹೆಚ್ಚು
ಕುಟುಂಬ : ಸಿಕ್ಲಿಡೆ *(Siklidae)*			
೧೧. ಎಟ್ರೊಪ್ಲಸ್ ಮ್ಯಾಕುಲೇಟಸ್ *(Etroplus Maculetus)*	ಚುಕ್ಕೆ ಎಟ್ರೊಪ್ಲಸ್ ಕಿತ್ತಳೆ ಕಾಮಿಡೀ	ಮಟಕ್	ತಿನ್ನಬಹುದಾದ ಒಳ್ಳೆಯ ಮೀನು ಸಿಹಿ ನೀರಿಗೆ ಬಹು ಸುಲಭವಾಗಿ ಹೊಂದಿಕೊಳ್ಳುತ್ತದೆ.
೧೨. ಎ. ಸೂರಟೆನ್ನಿಸ್ *(Etroplus Suratennis)*	ಪಟ್ಟಿ ಎಟ್ರೋಪ್ಲಸ್ ಮುತ್ತು ಕಲೆ	ಕಗಲಾಸಿ, ಕಲೆದಿಯ ಕಲ್ಸೆ, ಈರಿ ಮೀನು, ಎಟ್ರೋಪ್ಲಸ್ ಮೀನು	
೧೩. ಎ. ಕೆನೆರೆನ್ಸಿಕ್ *(Etroplus Canerensic)*			
ಗಣ : ಲೋಫಿಫಾರ್ಮಿಸ್ *(Loffiformes)* **ಕುಟುಂಬ : ಆಂಟಿನ್ನೇರಿಡೆ** *(Antinneridae)* (ಗಾಳದ ಮೀನು)			
೧೪. ಆಂಟನ್ನೇರಿಯಸ್ ಕಮ್ಮನ್ ಸೋನಿ *(Antannerius cammursoni)*	ಕಪ್ಪುಗಾಳ ಮೀನು		ವಿಕಾರದ ದೇಹ
ಗಣ : ಟೆಟ್ರೋಡಾಂಟಿಫಾರ್ಮಿಸ್ *(Tetrodontiformes)* **ಕುಟುಂಬ : ಟೆಟ್ರೋಡಾಂಟಿಡೆ** *(Tetrodontidae)* (ಗಾಳದ ಮೀನು)			
೧೫. ಟೆಟ್ರೋಡಾನ್ ಕುಲ್‌ಕುಟಿಯಾ *(Tetrodon kulkutia)*	ಉಂಡೆ ಮೀನು	ಗೋಳ ಮೀನು	ಬೃಹತ್ ಗಾತ್ರದ ಮೀನು ಪ್ರತಿ ದವಡೆಯಲ್ಲಿಯೂ ಎರಡು ದೊಡ್ಡ ಫಲಕಗಳಿರುವ ಮೀನುಗಳು.

೨. ಉಭಯವಾಸಿಗಳು (*Amphibians*)

೩೫೦ ದಶಲಕ್ಷ ವರ್ಷಗಳ ಹಿಂದೆ ಹೇರಳವಾಗಿದ್ದ ಪ್ರಾಣಿಗಳೆಂದರೆ ಮೀನುಗಳು. ಅವುಗಳಲ್ಲಿ ಕೆಲವು ತಮಗಿದ್ದ ಗಾಳಿಯ ಚೀಲಗಳು ಹಾಗೂ ಭಾರವಾದ ಈಜುರೆಕ್ಕೆಗಳ ಸಹಾಯದಿಂದ ತೇವಾಂಶಭರಿತ ಭೂಮಿಯ ಮೇಲೆ ವಾಸಿಸಲು ಪ್ರಾರಂಭಿಸಿದವು. ಇವೇ ಪ್ರಥಮ ಉಭಯವಾಸಿಗಳು ಮತ್ತು ಎಲ್ಲಾ

ಭೂವಾಸಿ ಕಶೇರುಕಗಳ ಉದ್ಭವಕ್ಕೆ ವಿಕಾಸಕ್ಕೆ ನಾಂದಿ ಹಾಡಿದವು. ಇವು ಪ್ರಪ್ರಥಮ ಭೂವಾಸಿ ಕಶೇರುಕಗಳೆಂದು ಪ್ರಸಿದ್ಧಿಗೆ ಕಾರಣವಾಗಿದ್ದರೂ ಅವು ನಿಜವಾಗಿ ಭೂವಾಸಕ್ಕೆ ಸರಿಯಾಗಿ ಹೊಂದಿಕೊಂಡಿರಲಿಲ್ಲ. ಅವು ತಮ್ಮ ಜೀವಿತದ ಕೆಲವು ಕಾಲವನ್ನು ನೀರಿನಲ್ಲಿಯೂ ಮತ್ತು ಉಳಿದ ಕಾಲವನ್ನು ನೆಲದ ಮೇಲೂ ಹೀಗೆ ಎರಡು ಪರ್ಯಾವರಣಗಳಲ್ಲಿ ಜೀವಿಸುತ್ತಿದ್ದುದರಿಂದ ಇವುಗಳನ್ನು ಉಭಯಚರಿಗಳು ಎಂಬ ಹೆಸರಿನಿಂದ ಕರೆಯಲ್ಪಡಲಾಗಿದೆ.[೨೯] ಆದುದರಿಂದ ಈ ಪ್ರಾಣಿಗಳು ಸಂಪೂರ್ಣ ಜಲವಾಸಿಗಳಾದ ಆದಿಕಶೇರುಕಗಳಿಗೂ ಮತ್ತು ಅನಂತರದ ನೆಲದ ಮೇಲಿನ ಭೂವಾಸಿ ಕಶೇರುಕಗಳಿಗೂ ನಡುವಿನ ಪರಿವರ್ತನೆಯ ಅವಸ್ಥೆಯನ್ನು ಪ್ರತಿನಿಧಿಸುತ್ತವೆ. ಉಭಯಚರಿಗಳ ವರ್ಗೀಕರಣ, ಶಾಸ್ತ್ರೀಯನಾಮ, ಸಾಮಾನ್ಯ ಹೆಸರು ಮತ್ತು ಗಮನಾರ್ಹ ಅಂಶಗಳ ಕೋಷ್ಟಕವನ್ನು ಈ ಕೆಳಗಿನಂತೆ ನೀಡಲಾಗಿದೆ.

ಉಭಯವಾಸಿಗಳ ವರ್ಗೀಕರಣ ಕೋಷ್ಟಕ

ಗಣ : ಅನೂರ *(Anura)* **ಕುಟುಂಬ:** ಬ್ಯೂಪೊನಿಡೆ (ನೆಲಗಪ್ಪೆಗಳು)		
ಶಾಸ್ತ್ರೀಯ ನಾಮ	**ಸಾಮಾನ್ಯ ಹೆಸರು**	**ಗಮನಾರ್ಹ ಅಂಶಗಳು**
೦೧. ಬ್ಯೂಪೊ ಮೆಲನೊಸ್ಟಿಕ್ಟಸ್ *(Beupo Melanostictas)*	ನೆಲಗಪ್ಪೆಗಳು	* ಆಸ್ಟ್ರೇಲಿಯಾ ಖಂಡ ವಿನಹ ಉಳಿದೆಲ್ಲಾ ಖಂಡಗಳಲ್ಲಿಯೂ ಕಂಡು ಬರುತ್ತವೆ. * ಗಾತ್ರ ೩ ರಿಂದ ೪ ಸೆಂ. ಉದ್ದ ೨೫-೪೦ ಗ್ರಾಂ ತೂಕ * ಹುಳುಗಳು, ಶಂಭುಕಗಳು, ಕೀಟಗಳು ಮುಖ್ಯ ಆಹಾರ * ಮಳೆಗಾಲದಲ್ಲಿ ಮೊಟ್ಟೆ ಇಡುತ್ತವೆ. * ನೆಲಗಪ್ಪೆಯನ್ನು ಹಿಡಿದಾಗ ಅವು ಮೂತ್ರ ವಿಸರ್ಜಿಸುವ ಮತ್ತು ದುರ್ಗಂದ ಹೊಲಸು ಸ್ರಾವಿಕೆಯನ್ನು ಮಾಡಿ ತನ್ನನ್ನು ರಕ್ಷಿಸಿಕೊಳ್ಳುವ ಪ್ರವೃತ್ತಿ ತೋರುತ್ತವೆ.
ಕುಟುಂಬ: ರಾನಿಡೆ *(Ranidae)* ಜಿಗಿ ಕಪ್ಪೆ,		
೦೨. ರಾನ ಟೈಗರಿನ *(Rana taigarina)*	ಜಿಗಿ ಕಪ್ಪೆ,	* ಸಿಹಿನೀರು, ಕೆರೆಕಟ್ಟೆ, ಹಳ್ಳಿ-ಕೊಳ್ಳ ಹೊಳೆ, ನದಿಗಳಂತಹ ತೇವಭರಿತ ಪ್ರದೇಶಗಳಲ್ಲಿ ಇವುಗಳ ವಾಸ.[೩೦]

೩. ಸರಿಸೃಪಗಳು (*Reptiles*)

ಜೀವ ವಿಕಾಶದಲ್ಲಿ ಇತ್ತೀಚೆಗಷ್ಟೇ ಕಾಣಿಸಿಕೊಂಡು ಉಳಿದೆಲ್ಲ ಪ್ರಾಣಿಗಳಿಗಿಂತ ಆಧುನಿಕವೂ ಹೆಚ್ಚು ಮುಂದುವರಿದವೂ ಎಂದು ಪರಿಗಣಿಸಲ್ಪಟ್ಟಿರುವ ಪಕ್ಷಿಗಳು ಮತ್ತು ಸಸ್ತನಿಗಳು ಈ ಜಗತ್ತಿನಲ್ಲಿ ಕಾಣಿಸಿಕೊಳ್ಳುವುದಕ್ಕೂ ೨೦೦ ಮಿಲಿಯನ್ ವರ್ಷಗಳ ಹಿಂದೆಯೇ ಸರಿಸೃಪಗಳು ಅಸ್ತಿತ್ವದಲ್ಲಿದ್ದವು.[೫೧] ಇವು ಸಂಪೂರ್ಣವಾಗಿ ನೆಲದ ಮೇಲೆ ವಾಸಿಸಲು ಅಗತ್ಯವಾದ ಪ್ರಮುಖ ಹೊಂದಾಣಿಕೆಗಳನ್ನು ಪಡೆದುಕೊಂಡ ಪ್ರಥಮ ಕಶೇರುಕಗಳು.[೫೨] ಮಿಸೋಜೋಯಿಕ್ ಯುಗದಲ್ಲಿ ಸಕಲ ಭೂಪ್ರದೇಶವನ್ನು ಈ ಸರಿಸೃಪಗಳು ವ್ಯಾಪಿಸಿದ್ದವು. ಕೆಲವು ಸಸ್ಯಾಹಾರಿಗಳಾದರೆ ಮತ್ತೆ ಕೆಲವು ಅತಿ ಕ್ರೂರಿಯಾದ ಮಾಂಸಾಹಾರಿಗಳು. ಸರಿಸೃಪಗಳ ಚರ್ಮದಲ್ಲಿ ಗ್ರಂಥಿಗಳಿಲ್ಲ. ಆದ್ದರಿಂದ ದೇಹವು ಒಣಗಿದಂತೆ ಕಾಣುತ್ತದೆ. ಪ್ರಸಕ್ತ ಕಾಲದಲ್ಲಿ ಬದುಕಿರುವ ಸರಿಸೃಪಗಳನ್ನು ೫ ಗಣಗಳಾಗಿ ವಿಂಗಡಿಸಿ ಗುರುತಿಸಬಹುದಾಗಿದೆ. ಅವುಗಳೆಂದರೆ,

೧. ಕ್ರೊಕೊಡೀಲಿಯ (*Crocodilia*) – ಮೊಸಳೆಗಳು

೨. ಲ್ಯಾಸರ್‌ಟೀಲಿಯ (*Lascartilia*) – ಹಲ್ಲಿಗಳು

೩. ಕೀಲೋನಿಯ (*Kilonia*) – ಆಮೆಗಳು

೪. ಒಫಿಡಿಯ (*Ophidia*) – ಹಾವುಗಳು

೫. ರಿಂಕೊಸಿಫಾಲಿಯ (*Rincosifalia*) – ಟುವಟಾರ – ಇವು ನ್ಯೂಜಿಲ್ಯಾಂಡ್ ವಿನಃ ಪ್ರಪಂಚದ ಉಳಿದೆಲ್ಲೂ ದೊರಕುವುದಿಲ್ಲ.

ಈ ಸರಿಸೃಪಗಳ ವರ್ಗೀಕರಣ, ಶಾಸ್ತ್ರೀಯನಾಮ, ಸಾಮಾನ್ಯ ಹೆಸರು ಮತ್ತು ಗಮನಾರ್ಹ ಅಂಶಗಳನ್ನು ಈ ಕೆಳಗಿನ ಕೊಷ್ಟಕದಲ್ಲಿ ನೀಡಲಾಗಿದೆ.

ಸರಿಸೃಪಗಳ ವರ್ಗೀಕರಣ ಕೋಷ್ಟಕ

ಗಣ: ಕ್ರೊಕೊಡೀಲಿಯ (*Crocodilia*) ಕುಟುಂಬ: ಕ್ರೊಕೊಡೀಲಿಡೆ (*Crocodilidae*)		
ಶಾಸ್ತ್ರೀಯ ನಾಮ	**ಸಾಮಾನ್ಯ ಹೆಸರು**	**ಗಮನಾರ್ಹ ಅಂಶಗಳು**
೦೧. ಕ್ರೊಕೊಡೈಲಸ್ ಪಾಲುಸ್ಟ್ರಿಸ್ (*Crocodailus Palustis*)	ಮಗ್ಗರ್, ಜೌಗು ಮೊಸಳೆ, ಗರಿಯಾಲ, ಆಲಿಗೇಟರ್ ಮೊಸಳೆ[೫೩]	* ನದಿ, ಕೆರೆ, ಇತರೆ ನೀರಿನ ಜಲಾಶಯಗಳು ಇದರ ವಾಸಸ್ಥಾನ. * ನಾಲ್ಕು ಮೀ. ಉದ್ದ, ೧.೬ ಮೀ. ದಪ್ಪ ಮತ್ತು ಸುತ್ತಳತೆಯಿದ್ದು ಸುಮಾರು ೨೦೦ ಕೆ.ಜಿ. ತೂಕವಿರುತ್ತದೆ.

ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
		* ಎಲ್ಲಾ ಜಲಚರಿ ಪ್ರಾಣಿಗಳನ್ನು ಬೇಟೆ-ಯಾಡುತ್ತವೆ. ಹೆಚ್ಚಾಗಿ ಮತ್ಸ್ಯಾಹಾರಿ. * ಒಂದು ಸಾರಿಗೆ ೩–೪೦ ಮೊಟ್ಟೆಗಳನ್ನು ಇಡುತ್ತದೆ. * ೬೦ ದಿನಗಳ ಕಾವಿನ ನಂತರ ಮರಿಗಳು ಹೊರಬರುತ್ತವೆ.
ಗಣ: ಲ್ಯಾಸ್ಕರ್‌ಟೀಲಿಯ *(Lascartilia)* ಕಲ್ಲು ಹಲ್ಲಿ **ಕುಟುಂಬ:** ಗೆಕ್ಕೋನಿಡೆ *(Gecconidae)* ಗೌಳಿ, ಹಲ್ಲಿ		
೦೨. ಹೆಮಿಡ್ಯಾಕ್ಟೆಲಸ್ ಬ್ರೂಕಿ *(Hemidyactailas Brooki)*		* ಮನುಷ್ಯ ವಸತಿಗಳ ಪಕ್ಕದಲ್ಲಿ ವಾಸ. * ಸುಮಾರು ೧೦ ಸೆಂ.ಮೀ. ಉದ್ದ * ಎಪ್ರಿಲ್–ಆಗಸ್ಟ್ ತಿಂಗಳಲ್ಲಿ ಸಂತಾನೋತ್ಪತ್ತಿ. * ಬಂಡೆಗಳ ನಡುವೆ ವಾಸ * ಗುಡ್ಡಗಳಲ್ಲಿ ವಾಸ
ಗಣ: ಕಿಲೋನಿಯ *(Chelonia)* ಆಮೆಗಳು **ಕುಟುಂಬ:** ಕಿಲೋನಿಡೆ *(Chelonidae)*		
೦೩. ಕಿಲೋನಿಯ ಮೈದಾಸ್ *(Chelonia mydas)*	ಹಸಿರು ಆಮೆ	* ಕರಾವಳಿ ಉದ್ದಕ್ಕೂ ಕಂಡುಬರುತ್ತವೆ. * ಪ್ರಬುದ್ಧ ಆಮೆಯ ಚಿಪ್ಪು ೩.೩ ಅಡಿ ಉದ್ದ ಬೆಳೆಯುತ್ತದೆ. ಸುಮಾರು ೧೫೫ ಕೆ.ಜಿ. ಇರುತ್ತದೆ. * ಇದು ಸಸ್ಯಾಹಾರಿ * ಇದು ವಿಷ್ಣುವಿನ ಅವತಾರವೆಂದು ಕೆಲವು ಹಿಂದುಗಳು ಪೂಜಿಸುತ್ತಾರೆ. ಮತ್ತು ಇದರ ಮಾಂಸ ತಿನ್ನುವುದಿಲ್ಲ.
ಕುಟುಂಬ: ಟೆಸ್ಟುಡಿನಿಡೆ *(Testudinidae)*		
೦೪. ಜಿಯೊಕಿಲೋನ್ ಎಲಿಗನ್ಸ್ *(Giyokilon eligans)*	ಕಾಡು ಆಮೆ / ಭಾರತದ ತಾರಾ ಆಮೆ	* ಒಣನೆಲ, ಹುಲ್ಲು ಕುರುಚಲು ಗಿಡಗಳು ಬೆಳೆಯುವ ಶುಷ್ಕ ಪರಿಸರದಲ್ಲಿ ವಾಸ.

ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
೧೫. ಇಂಡೊಟೆಸ್ಪುಡೋ ಫಾರಸ್ಟೆನಿ *(Indotestudo forestini)*	ಬೆಟ್ಟ ಆಮೆ, ಕಾಡು ಆಮೆ, ಗುಡ್ಡದ ಆಮೆ, ಕಲ್ಲಾಮೆ	* ಇದು ೨೭ ಸೆಂ.ಮೀ.ಉದ್ದ ಇರುತ್ತದೆ. ಹೆಣ್ಣು ಆಮೆಗಳು ಗಂಡು ಆಮೆಗಳಿಗಿಂತ ದೊಡ್ಡವು. * ಸಸ್ಯಾಹಾರ ಮತ್ತು ಮಾಂಸಾಹಾರಗಳೆರಡನ್ನೂ ತಿನ್ನುವ ಸರ್ವ ಭಕ್ಷಕ. * ಈ ಆಮೆಯ ಚಿಪ್ಪು ಕಪ್ಪು ಮತ್ತು ಗುಮ್ಮಟಾಕಾರದವಾಗಿದೆ. * ಒಮ್ಮೆ ೩-೬ ಮೊಟ್ಟೆಗಳನ್ನಿಡುತ್ತವೆ. * ನಿತ್ಯ ಹರಿದ್ವರ್ಣ ಮತ್ತು ಅರೆನಿತ್ಯ ಹರಿದ್ವರ್ಣದ ಕಾಡುಗಳು ಇಲ್ಲಿ ಹರಿಯುವ ನದಿಗಳ ದಂಡೆಯ ಉದ್ದಕ್ಕೂ ಕಲ್ಲು ಪೊಟರೆಗಳಲ್ಲಿ ಕಾಡುಗಳಲ್ಲಿ ವಾಸಿಸುತ್ತವೆ. * ೩೩.೧ ಸೆಂ.ಮೀ. ಉದ್ದ ಬೆಳೆಯುತ್ತದೆ. * ಸಸ್ಯಾಹಾರಿ ಮತ್ತು ತಗ್ಗಿದ ಆಮೆ ಚಿಪ್ಪು * ಒಂದು ಸಾರಿಗೆ ೧-೩ ಮೊಟ್ಟೆಗಳನ್ನು ಇಡುತ್ತದೆ.
ಕುಟುಂಬ: ಬಟಾಗುರಿಡೆ *(Bataguridae)*		
೧೬. ಜಿಯಮಿಡ ಸೆಲ್ವ್ಯಾಟಿಕ *(Giyamida selvatika)*	ಕೊಚ್ಚಿನ್ ಕಾಡು ಬೆತ್ತ ಆಮೆ, ಬಂಡೆ ಆಮೆ, ಬೆಟ್ಟದ ಆಮೆ.	* ಹೆಚ್ಚು ತೇವವಿಲ್ಲದ ಕಾಡುಗಳಲ್ಲಿ ಕಂಡುಬರುತ್ತವೆ. ಸಂಪೂರ್ಣ ನೆಲವಾಸಿ * ೧೩ ಸೆಂ. ಮೀ. ಉದ್ದ ಬೆಳೆಯುತ್ತವೆ. * ಶಂಖದ ಹುಳು, ಕೀಟ, ಎಲೆ, ಮುಂತಾದವು ಇದರ ಆಹಾರ * ಹೆಣ್ಣು ಆಮೆ ಗಂಡಿಗಿಂತ ದೊಡ್ಡದು.
ಗಣ: ಒಫಿಡಿಯ *(Opidia)* ಕುಟುಂಬ: ಇಲಾಫಿಡೆ *(Elaphidae)*		
೧೭. ನಾಜ ನಾಜ *(Naja Naja)*	ನಾಗರ ಹಾವು	* ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಈ ಹಾವು ಕಂಡು ಬರುತ್ತದೆ.

ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
		* ಸುಮಾರು ೩ ರಿಂದ ೪ ಅಡಿ ಉದ್ದ * ಇಲಿ, ಕಪ್ಪೆ, ಓತಿ, ಮೀನು, ಪಕ್ಷಿಯ ಮೊಟ್ಟೆಗಳು ಇದರ ಸ್ವಾಭಾವಿಕ ಆಹಾರ * ಪ್ರಸಿದ್ಧವಾದ ಹೆಡೆ ಇರುವುದು * ವಿಷದ ಹಾವು * ಹಿಂದೂಗಳು ನಾಗರಹಾವನ್ನು ದೇವರೆಂದು
೧೮. ಒಫಿಯೋಫೇಗಸ್ ಹನ್ನ *(Ophiophagus hannah)*	ಕಾಳಿಂಗ ಸರ್ಪ/ ರಾಜನಾಗರ ಹಾವು	* ಕರ್ನಾಟಕದ ಪಶ್ಚಿಮ ಘಟ್ಟಗಳ ದಟ್ಟ ಕಾಡುಗಳಿಗೆ ಸೀಮಿತವಾದ ಹಾವು * ಇದು ಸುಮಾರು ೧೦ ರಿಂದ ೧೮ ಅಡಿಗಳಷ್ಟು ಉದ್ದ. ೧೨ ಕೆ.ಜಿ. ತೂಕ. * ಇತರೆ ಹಾವುಗಳು, ಇಲಿ, ಹೆಗ್ಗಣ, ಮೊಲ, ಉಡ, ಹಲ್ಲಿ, ಪಕ್ಷಿಗಳು, ಮತ್ತು ಪಕ್ಷಿಗಳ ಮೊಟ್ಟೆಗಳು ಇದರ ಆಹಾರ * ಹಾವು ವಾಸಿಸುವ ಪರಿಸರ ಸನ್ನಿವೇಶಗಳಿಗೆ ಅನುಗುಣವಾಗಿ ಇದರ ದೇಹದ ಬಣ್ಣ ಹಸಿರು, ಕಂದು, ಕಪ್ಪು ಮುಂತಾಗಿ ಇರುತ್ತದೆ. * ವಿಷದ ಹಾವುಗಳಲ್ಲಿಯೇ ಅತ್ಯಂತ ವಿಷದ ಹಾವು ಇದು.[೫೪]

೪. ಪಕ್ಷಿಗಳು (*Aves*)

ವಾಯುಮಂಡಲದ ಸಾರ್ವಬೌಮತ್ವ ಪಡೆದಿರುವ ಜೀವಿಗಳಲ್ಲಿ ಪಕ್ಷಿಗಳಿಗೆ ಅಗ್ರಸ್ಥಾನ. ಗರಿಗಳೇ ಪಕ್ಷಿವರ್ಗದ ಮುಖ್ಯ ಲಕ್ಷಣ. ರೆಕ್ಕೆ ಮತ್ತು ಗರಿಗಳ ಸಹಾಯದಿಂದ ಹಾರುವುದು ಹಕ್ಕಿಯ ವಿಶೇಷ ಗುಣ. ಆದರೆ ಕೆಲವು ಹಾರಲಾರದ ಪಕ್ಷಿಗಳೂ ಇವೆ. ಉದಾ. ಉಷ್ಟ್ರಪಕ್ಷಿ, ಪೆಂಗ್ವಿನ್ ಇತ್ಯಾದಿ. ಅಲ್ಲದೆ ಕೆಲವು ಪ್ರಾಣಿಗಳು (ಉದಾ: ಬಾವಲಿ) ಮತ್ತು ಕೀಟಗಳು ಹಾರಬಲ್ಲವು. ಬಾವಲಿಗಳು ಹಕ್ಕಿಗಳಂತೆಯೇ ಹಾರಿದರೂ ಅವುಗಳಿಗೆ ಪಕ್ಷಿಗಳಿರುವಂತೆ ಪುಕ್ಕದ ರೆಕ್ಕೆಗಳಿಲ್ಲ. ದೇಹವು ಇಲಿಯನ್ನು ಹೋಲುತ್ತಿದ್ದು ಮುಂಗೈ ಬೆರಳುಗಳಿಂದ ಪಕ್ಕೆಗೆ ತೆಳುವಾದ ಚರ್ಮದ ಹೊದಿಕೆಯಿದ್ದು ರೆಕ್ಕೆಯಂತೆ ತೆರೆದುಕೊಂಡು ಹಾರಬಲ್ಲವು. ನಮ್ಮಲ್ಲಿ ಕೆಲವರು ಬಾವಲಿಗಳನ್ನು ತಪ್ಪಾಗಿ ಹಕ್ಕಿಗಳೆಂದು ಕರೆಯುವುದಿದೆ. ವಾಸ್ತವವಾಗಿ

ಬಾವಲಿಯ ಸಸ್ತನಿ ವರ್ಗಕ್ಕೆ ಸೇರುತ್ತದೆ. ಹಕ್ಕಿಗಳು 'ಏವ್ಸ್ (*Aves*) ಎಂಬ ವರ್ಗಕ್ಕೆ ಸೇರಿದ ಜೀವಿಗಳು ಈ ಪದ ಲ್ಯಾಟೀನ್ ಪದವಾದ ಏವ್ಸ್ (*Aves*)ನಿಂದ ಉತ್ಪತ್ತಿಯಾಗಿದ್ದು ಇದರ ಅರ್ಥ ಹಕ್ಕಿ ಎಂದಾಗುತ್ತದೆ. ರೆಕ್ಕೆ ಮತ್ತು ಗರಿಗಳ ಹೊದಿಕೆಯೇ ಈ ಗುಂಪಿನ ಜೀವಿಗಳನ್ನು ಪ್ರಾಣಿ ಜಗತ್ತಿನಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆಯುವಂತೆ ಮಾಡಿದೆ. ಪಕ್ಷಿಗಳು ಮತ್ತು ಸಸ್ತನಿಗಳೆರಡಕ್ಕೂ ಸರಿಸೃಪ *(Reptiles)*, ರೆಪ್ಟೈಲ್ಸ್‌ಗಳೇ ಮೂಲ. ಪಕ್ಷಿಗಳು ಉರಗ ಮೂಲದಿಂದ ಹುಟ್ಟಿದವು ಎಂಬುದಕ್ಕೆ ಸುಮಾರು ೧೫೦ ದಶಲಕ್ಷ ವರ್ಷಗಳ ಹಿಂದೆ ಬದುಕಿದ್ದ ಕಾಗೆಯ ಗಾತ್ರ ಪ್ರಾಗ್ಪಕ್ಷಿಯ ಆರ್ಕಿಯಾಪ್ಟೆರಿಕ್ಸ್ ಲಿಥೋಗ್ರಾಫಿಕಾ *(Archieterx litographica)* ಪಳಯುಳಿಕೆಗಳು ಇನ್ನೂ ಹೆಚ್ಚಿನ ಆಧಾರವನ್ನು ಒದಗಿಸುತ್ತವೆ.

ಮೇಲ್ನೋಟಕ್ಕೆ ಉರಗಗಳು ಮತ್ತು ಪಕ್ಷಿಗಳು ಬೇರೆ ಬೇರೆಯಾಗಿ ಕಂಡುಬಂದರೂ ಇವೆರಡರ ನಡುವೆ ಇರುವ ಸಾಮ್ಯತೆಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಮನಗಾಣಬಹುದು. ಹೆಚ್ಚಿನ ಪಕ್ಷಿಗಳ ಕಾಲು ಹಾಗೂ ಕಾಲ್ಬೆರಳುಗಳ ಮೇಲೆ ಉರಗಗಳಿರುವಂತಹ ಹುರುಪೆಗಳಿವೆ. ಕಲ್ಲುಗೌಜಲು, ಹದ್ದು, ಗೂಬೆ ಇತ್ಯಾದಿ ಪಕ್ಷಿಗಳ ಕಾಲುಗಳ ಮೇಲೆ ಪುಕ್ಕಗಳಿರುವುದರಿಂದ ಪುಕ್ಕಗಳು ಮಾರ್ಪಾಡು ಹೊಂದಿದ ಹುರುಪೆಗಳೆಂದೂ, ಒಂದರ ಬದಲು ಇನ್ನೊಂದು ಇರುವುದು ಸಾಧ್ಯವೆಂದೂ ತಿಳಿಯುತ್ತದೆ. ರೂಪದಲ್ಲೂ, ರಚನೆಯಲ್ಲೂ ಉರಗ ಜಾತಿಯ ಮೊಟ್ಟೆಗಳನ್ನೇ ಬಹುಮಟ್ಟಿಗೆ ಹೋಲುವ ಮೊಟ್ಟೆಗಳನ್ನು ಪಕ್ಷಿಗಳು ಇಡುತ್ತವೆ.

ಪಕ್ಷಿಗಳು ನೀರು ಮತ್ತು ನೆಲ ಆವಾಸಗಳಲ್ಲಿ ಕಂಡುಬರುತ್ತವೆ. ದೇಹ ಆಗಸದಲ್ಲಿ ಹಾರಾಡಲು ಸೂಕ್ತವಾಗುವಂತೆ ಮಾರ್ಪಾಟಾಗಿದ್ದು, ಇದರ ಪುಕ್ಕಗಳು ಶರೀರದ ರಕ್ಷಣೆ, ಶರೀರದ ಉಷ್ಣತೆಯನ್ನು ಸರಿತೂಗಿಸಲು ನೀರು ಶರೀರದಿಂದ ನಷ್ಟವಾಗದಂತೆ ನೋಡಿಕೊಳ್ಳುವುದರೊಂದಿಗೆ ಪಕ್ಷಿಗೆ ಆಕರ್ಷಕ ಬಣ್ಣವನ್ನು ಕೊಡುತ್ತವೆ. ಪಕ್ಷಿಗಳಲ್ಲಿ ಮುಂಗಾಲು ರೆಕ್ಕೆಗಳಾಗಿ ಮಾರ್ಪಟ್ಟು ಹಾರಲು ಸಹಾಯಕವಾಗಿದೆ. ಹಿಂಗಾಲುಗಳು ಅವುಗಳು ವಾಸಿಸುವ ಆವಾಸಕ್ಕೆ ಅನುಗುಣವಾಗಿ ಓಡಲು, ನಡೆಯಲು ಅಥವಾ ಈಜಲು ಸಹಾಯಕವಾಗಿದೆ. ಇವು ಲೈಂಗಿಕ ರೀತಿಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ. ಸಾಮಾನ್ಯವಾಗಿ ಕ್ಯಾಲ್ಸಿಯಂ ಕಾರ್ಬೋನೇಟ್ ಚಿಪ್ಪಿನಿಂದ ಆವೃತ್ತವಾದ ಮೊಟ್ಟೆಗಳನ್ನು ಇಡುತ್ತವೆ. ಈ ಪಕ್ಷಿಗಳು ಮಾನವನ ಜೀವನ ಮತ್ತು ವಿಕಾಸದುದ್ದಕ್ಕೂ ಅವಿನಾಭಾವ ಸಂಬಂಧ ವನ್ನಿಟ್ಟುಕೊಂಡಿವೆ. ಕೆಲವೊಂದು ದೇವಾನುದೇವತೆಗಳೊಂದಿಗೆ ಹಕ್ಕಿಗಳು ಸಂಬಂಧ ಬೆಸೆದುಕೊಂಡಿರುವುದು ಗಮನಾರ್ಹ. ಉದಾ: ಷಣ್ಮುಖ, ಕೃಷ್ಣ ಮತ್ತು ಸರಸ್ವತಿಯ ಸಂಬಂಧ ನವಿಲುನೊಂದಿಗೆ, ಬ್ರಹ್ಮ ಮತ್ತು ಸರಸ್ವತಿಯೊಂದಿಗೆ ಹಂಸ, ಶನಿಯೊಂದಿಗೆ ಕಾಗೆ, ಕಾಮಾಕ್ಷಿಯೊಂದಿಗೆ ಗಿಳಿ ಮುಂತಾದವು ಹಾಗೆಯೇ ಸಂದೇಶದ ದ್ಯೋತಕವಾಗಿ, ರಾಜ ಲಾಂಛನವಾಗಿ, ರಾಷ್ಟ್ರ ಪಕ್ಷಿಗಳಾಗಿ, ದೇವತೆಗಳ ವಾಹನಗಳಾಗಿ ಮತ್ತು ನೀತಿ ಬೋಧಿಸುವ ಪಂಚತಂತ್ರ ಕಥೆಗಳಲ್ಲಿ ಪಕ್ಷಿಗಳ ಪಾತ್ರ ಪ್ರಮುಖವಾದುದ್ದಾಗಿದೆ.

ಪಕ್ಷಿಗಳ ವರ್ಗೀಕರಣ

ಪಕ್ಷಿಗಳನ್ನು ಪ್ರಮುಖವಾಗಿ ಎರಡು ಉಪವರ್ಗಗಳಾಗಿ ವಿಂಗಡಿಸಲಾಗಿದೆ.

೧. ಆರ್ಕಿಯಾರ್ನಿಥಿಸ್ (*Archeornithes*): ಈಗಾಗಲೇ ವಿನಾಶಗೊಂಡ ಪುರಾತನ ಪಕ್ಷಿಗಳ ಗುಂಪು. ಈಗ ಪಳಯುಳಿಕೆ ರೂಪದಲ್ಲಿ ಮಾತ್ರ ಲಭ್ಯ

೨. ನಿಯೋರ್ನಿಥಿಸ್ (*Neornithes*): ಇಂದು ನಾವು ಕಾಣುವಂತಹ ಎಲ್ಲಾ ಪಕ್ಷಿಗಳ ಗುಂಪು. ಈ ಉಪವರ್ಗದಲ್ಲಿ ೨೭ ಗಣಗಳು ಮತ್ತು ೧೬೫ ಕುಟುಂಬಗಳಿವೆ. ಇವುಗಳನ್ನು ಪ್ರಮುಖವಾಗಿ ಹಾರಲಾರದ ಪಕ್ಷಿಗಳು ಮತ್ತು ಹಾರುವ ಪಕ್ಷಿಗಳೆಂದು ಗುರ್ತಿಸಬಹುದು.

ಹಾರಲಾರದ ಪಕ್ಷಿಗಳು

ಸಾಮಾನ್ಯವಾಗಿ ದೊಡ್ಡ ಗಾತ್ರದ ಹಕ್ಕಿಗಳು, ನೆಲದ ಮೇಲೆ ಓಡಾಡುವ ಇಲ್ಲವೆ ಈಜುವಂತಹ ಪಕ್ಷಿಗಳಾಗಿವೆ.

ಗಣ ೧ : ಇಂಪೆನ್ನೆ (*Impennae*) : ಹಾರಲಾರದ ಜಾಲಪಾದವಿರುವ ಸಮುದ್ರವಾಸಿ ಪಕ್ಷಿಗಳು, ರೆಕ್ಕೆ ಈಜುರೆಕ್ಕೆಗಳಾಗಿವೆ. ಗರಿಗಳು ಹುರುಪೆಯಂತಿವೆ. ಉದಾ: ಪೆಂಗ್ವಿನ್

ಗಣ ೨ : ಸ್ಟ್ರುತಿಯೋನಿಫಾರ್ಮಿಸ್ (*Struthioniformes*): ವೇಗದ ನಡಿಗೆಯ ದೊಡ್ಡ ಪಕ್ಷಿ, ಬಾರವಾದ ಕಾಲುಗಳು, ಪ್ರತಿ ಕಾಲಿನಲ್ಲೂ ಎರಡು ಬೆರಳುಗಳು, ಬೆತ್ತಲೆಯಾದ ಕುತ್ತಿಗೆ ಮತ್ತು ತಲೆ. ಉದಾ: ಉಷ್ಟ್ರ ಪಕ್ಷಿ

ಗಣ ೩ : ರಿಯಾಫಾರ್ಮಿಸ್ (*Reayaformes*) : ಆಸ್ಟ್ರೇಲಿಯಾದ ವೇಗದ ನಡಿಗೆಯ ಪಕ್ಷಿ. ಬಲಿಷ್ಠವಾದ ಕಾಲು, ಪ್ರತಿಕಾಲಿನಲ್ಲೂ ಮೂರು ಬೆರಳುಗಳು ಮತ್ತು ೧.೫ಮೀ ಎತ್ತರ–ವಿರುತ್ತದೆ. ಉದಾ: ರಿಯಾ

ಗಣ ೪ : ಕ್ಯಾಸುಯಾರಿಫಾರ್ಮಿಸ್ (*Casuariformes*) : ಸಾಮಾನ್ಯವಾಗಿ ಕಾಡಿನಲ್ಲಿ ವಾಸ, ನ್ಯೂಗಿನಿ, ಆಸ್ಟ್ರೇಲಿಯಾ ಮತ್ತು ಸನಿಹದ ಇತರೆ ದ್ವೀಪಗಳಿಗೆ ಸೀಮಿತ. ಗಂಡುಗಳಿಗಿಂತ ಹೆಣ್ಣು ಪಕ್ಷಿಗಳು ತುಸು ದೊಡ್ಡವು. ಸಾಮಾನ್ಯವಾಗಿ ಕಾಲುಗಳಲ್ಲಿ ಮೂರು ಬೆರಳುಗಳಿರುತ್ತವೆ. ಉದಾ. ಕ್ಯಾಸುವಾರಿ ಮತ್ತು ಎಮು.

ಗಣ ೫ : ಅಪ್ಟರಿಫಾರ್ಮಿಸ್ (*Apterygiforues*): ನ್ಯೂಜಿಲ್ಯಾಂಡಿನ ಹಾರಲಾರದ ಪಕ್ಷಿ. ಉಳಿದ ಹಾರಲಾರದ ಪಕ್ಷಿಗಳಿಗೆ ಹೋಲಿಸಿದರೆ ಚಿಕ್ಕವು. ಅತಿ ಚಿಕ್ಕ ರೆಕ್ಕೆಗಳು, ಉದ್ದನೆಯ ನಳಿಗೆಯಂತಹ ಕೊಕ್ಕು. ಕೊಕ್ಕಿನ ತುದಿಯಲ್ಲಿ ಮೂಗಿನ ಹೊಳ್ಳೆ, ಗರಿಗಳು ಕೂದಲಿನಂತಿರುವುದು ಈ ಗುಂಪಿನ ಪ್ರಮುಖ ಲಕ್ಷಣಗಳು. ಉದಾ: ಕಿವಿ.[೫೮]

ಹಾರುವ ಪಕ್ಷಿಗಳು:

ಹಾರುವ ಪಕ್ಷಿಗಳನ್ನು ಸಾಮಾನ್ಯವಾಗಿ ಜಲಪಕ್ಷಿಗಳು, ಹಿಂಸ್ರ ಪಕ್ಷಿಗಳು ಹಾಗೂ ನೆಲಪಕ್ಷಿಗಳಾಗಿ ಪ್ರತ್ಯೇಕಿಸಿದ್ದು.[೫೯] ಸುಮಾರು ೨೦ ಗಣಗಳಲ್ಲಿ ೧೫೪ ಕುಟುಂಬಗಳಿವೆ.

ಗಣ ೧ : ಪೊಡಿಸಿಪೆಡಿಫಾರ್ಮಿಸ್ (*Podici Pediformes*) : ಜಲಚರ ಪಕ್ಷಿಗಳು ಉದಾ: ನೀರು ಬಾತುಕೋಳಿಗಳು.

ಗಣ ೨ : ಗೇವಿಫಾರ್ಮಿಸ್(*Gaviformes*): ಜಲವಾಸಕ್ಕೆ ಅನುಕೂಲವಾದ ರಚನೆಗಳುಳ್ಳ ಪಕ್ಷಿಗಳು ಉದಾ: ಲೂನ್‌ಗಳು ಬಾತುಕೋಳಿ

ಗಣ ೩ : ಪ್ರೊಸೆಲ್ಲಾರಿಫಾರ್ಮಿಸ್ (*Procellariformes*): ದೊಡ್ಡಗಾತ್ರದ ಸಮುದ್ರವಾಸಿ. ಬಹಳ ಕಾಲ ಗಾಳಿಯಲ್ಲಿತೇಲಬಲ್ಲ ಪಕ್ಷಿಗುಂಪು. ಉದಾ: ಅಲ್ಬೆಟ್ರಾಸ್, ಪೆಟ್ರೆಲ್‌ಗಳು (ಕಡಲ ಹಕ್ಕಿ)

ಗಣ ೪ : ಪೆಲಿಕಾನಿಫಾರ್ಮಿಸ್ (*Plecaniformes*): ಮಧ್ಯಮ ಗಾತ್ರದ ಜಲಪಕ್ಷಿಗಳಾಗಿದ್ದು, ಜಾಲಪಾದವಿದೆ. ಉದಾ: ಹೆಜ್ಜಾರ್ಲೆ, ನೀರುಕಾಗೆ, ಹಾವುಹಕ್ಕಿ ಮತ್ತು ಬೂಬಿ.

ಗಣ ೫ : ಸಿಕೋನಿಫಾರ್ಮಿಸ್ (*Ciconiformes*): ಉದ್ದನೆಯ ಕಾಲಿನ ನೀರ್ನಡಿಗೆ ಹಕ್ಕಿಗಳಾಗಿದ್ದು, ಜಾಲಪಾದವಿರುವುದಿಲ್ಲ. ಉದಾ: ಬರ್ಕ, ಕೊಕ್ಕರೆ, ತುಪ್ಪಳ,

ಗಣ ೬ : ಅನ್ಸಾರಿಫಾರ್ಮಿಸ್ (*Anseriformes*): ಬಹುತೇಕ ಸಿಹಿ ನೀರಿನಲ್ಲಿ ವಾಸಿಸುವ ಬಾತುಕೋಳಿಗಳಂತಹ ಹಕ್ಕಿಗಳ ಗುಂಪು ಉದಾ: ಹಂಸ, ಬಾತುಕೋಳಿ, ಇತ್ಯಾದಿಗಳು.

ಗಣ ೭ : ಫಾಲ್ಕೋನಿಫಾರ್ಮಿಸ್ (*Falconiformes*): ಹಿಂಸ್ರಕ ಪಕ್ಷಿಗಳು, ಉದಾ: ಹದ್ದು, ರಣಹದ್ದು, ಗಿಡುಗ, ಇತ್ಯಾದಿಗಳು.

ಗಣ ೮ : ಗ್ಯಾಲಿಫಾರ್ಮಿಸ್ (*Galliformes*): ನೆಲಪಕ್ಷಿಗಳು ಉದಾ: ಕೋಳಿ, ಟರ್ಕಿ, ಗಿನಿ ಹಕ್ಕಿಗಳು.

ಗಣ ೯ : ಗ್ರೂಯಿಫಾರ್ಮಿಸ್ (*Grueiformes*): ಉದ್ದ ಕಾಲಿನ ನೀರ್ನಡಿಗೆ ಹಕ್ಕಿಗಳು. ಉದಾ: ಕೊಕ್ಕರೆ, ಕೆನ್ನವಿಲು ಇತ್ಯಾದಿ.

ಗಣ ೧೦ : ಚರಾಡ್ರಿಫಾರ್ಮಿಸ್ (*Charadriformes*): ಜಕಣಾ ಕಡಲುಗಾಗೆ, ತಿತ್ತಿರಿ, ನೀರುನವಿಲು ಮೊದಲಾದ ವಿಭಿನ್ನ ಪಕ್ಷಿಗಳು.

ಗಣ ೧೧ : ಕೊಲಂಬಿಫಾರ್ಮಿಸ್ (*Columbiformes*) : ಕಾಡುಪಕ್ಷಿಗಳ ಗುಂಪು, ಉದಾ: ಕಪೋತ, ಪಾರಿವಾಳ ಮೊದಲಾದವು.

ಗಣ ೧೨ : ಸಿಟ್ಟಾಸಿಫಾರ್ಮಿಸ್ (*Psittasiformes*): ಗಿಳಿಗಳ ಕುಟುಂಬಕ್ಕೆ ಸೇರಿದ ಪಕ್ಷಿಗಳು

ಗಣ ೧೩ : ಸ್ಟ್ರಿಜಿಫಾರ್ಮಿಸ್ (*Strigiformes*): ಮಾಂಸಾಹಾರಿ, ನಿಶಾಚರಿ ಪಕ್ಷಿಗಳು ಉದಾ: ಗೂಬೆಗಳು

ಗಣ ೧೪: ಕುಕುಲಿಫಾರ್ಮಿಸ್ (*Cuculiformes*): ಉದಾ: ಕೋಗಿಲೆ, ಕೆಂಬೂತ, ಮುಂತಾದವು.

ಗಣ ೧೫: ಕೇಪ್ರಿಮಲ್ಜಿಫಾರ್ಮಿಸ್ (*Caprimulgiformes*): ಉದಾ: ನೆತ್ತಿಂಗ, ಕಪ್ಪೆಬಾಯಿ ಹಕ್ಕಿ ಮೊದಲಾದವುಗಳು

ಗಣ ೧೬ : ಅಪೋಡಿಫಾರ್ಮಿಸ್ (*Apodiformes*): ಉದಾ: ತಾಳೆಗುಬ್ಬಿ, ತೋಕೆ ಮೊದಲಾದ ಚಿಕ್ಕ ಹಕ್ಕಿಗಳ ಗುಂಪು.

ಗಣ ೧೭ : ಟ್ರೋಗೊನಿಫಾರ್ಮಿಸ್ (*Trogoniformes*): ಸುಂದರ ಗರಿಗಳ ಆಕರ್ಷಕ ಪಕ್ಷಿಗಳ ಗುಂಪು: ಉದಾ: ಟ್ರೋಗಾನ್

ಗಣ ೧೮ : ಕೋರಾಸಿಫಾರ್ಮಿಸ್ (*coraciformes*): ಉದಾ: ಮಿಂಚುಳ್ಳಿ ಚಂದ್ರಮಕುಟ, ಜೇನ್ನೋಣಬಾಕ ಮೊದಲಾದ ಚಿಕ್ಕ ಪಕ್ಷಿಗಳ ಗುಂಪು

ಗಣ ೧೯ : ಪಿಸಿಫಾರ್ಮಿಸ್ (*Piciformes*): ಉದಾ: ಮರಕುಟಿಕ, ಕುಟ್ರುಹಕ್ಕಿ ಮೊದಲಾದವುಗಳು.

ಗಣ ೨೦ : ಪ್ಯಾಸರಿಫಾರ್ಮಿಸ್ (*Passariformes*): ಅತ್ಯಂತ ಹೆಚ್ಚು ಪ್ರಭೇದಗಳುಳ್ಳ ಗಣವಿದು. ಉದಾ: ಪಿಕಳಾರ, ಮೈನಾ, ಮಡಿವಾಳ ಹಕ್ಕಿ, ಪಿಟ್ಟಾ ಮೊದಲಾದ ಹಾಡುಹಕ್ಕಿಗಳ ಗುಂಪು.

ಹೀಗೆ ಒಟ್ಟು ೨೦ ಗಣಗಳಲ್ಲಿ ಪಕ್ಷಿ ಸಂಕುಲವನ್ನು ವರ್ಗೀಕರಿಸಿ ಗುರುತಿಸಬಹುದಾಗಿದೆ. ಒಟ್ಟಾರೆ ಹಕ್ಕಿಗಳ ನಡವಳಿಕೆ ಜೀವ ವಿಜ್ಞಾನದ ಅಚ್ಚರಿಗಳಲ್ಲಿ ಒಂದು. ವಲಸೆ ಹೋಗುವ ಪ್ರವೃತ್ತಿ, ಕಾಲ, ಪ್ರಜ್ಞೆ, ಕಾಳಜಿ, ಗೂಡು ನಿರ್ಮಿಸುವುದರಲ್ಲಿ ತೋರುವ ನೈಪುಣ್ಯ, ಮರಿಗಳ ಬಗೆಗಿನ ಸದಾ ತೋರುವ ಜೀವನೋತ್ಸಾಹ ಎಂತಹವರನ್ನು ಬೆರಗುಗೊಳಿಸಬಹುದು. ಜಗತ್ತಿನ ಎಲ್ಲೆಡೆ, ಎಲ್ಲಾ ಆವಾಸಗಳಲ್ಲಿ ಕಂಡುಬರುವ ಹಕ್ಕಿಗಳ ಗುಂಪು ನಿಸರ್ಗದ ಅದ್ಭುತ ಸೃಷ್ಟಿ ಎನ್ನಬಹುದು.

೫. ಸಸ್ತನಿಗಳು (Mammals)

ಪ್ರಾಣಿವರ್ಗದಲ್ಲಿ ಉನ್ನತ ಮಟ್ಟದ ಪ್ರಾಣಿಗಳೆಂದರೆ ತನ್ನ ಮರಿಗಳಿಗೆ ಮೊಲೆಹಾಲು ಉಣಿಸುವ ಪ್ರಾಣಿಗಳು, ಇವುಗಳಿಗೆ ಸಸ್ತನಿ ಅಥವಾ ಸ್ತನಿಗಳು ಎನ್ನುವರು. ಸಸ್ತನಿ ಪ್ರಾಣಿಗಳಲ್ಲಿ ಮಿದುಳು ವಿಕಾಸವಾಗಿದ್ದು, ಅವುಗಳ ಪ್ರಮುಖ ಲಕ್ಷಣಗಳೆಂದರೆ ಮೈಮೇಲೆ ಕೂದಲುಗಳಿವೆ ಮತ್ತು ಸ್ತನಿಗಳನ್ನು ಹೊಂದಿದ್ದು, ಹಾಲನ್ನು ಉತ್ಪತ್ತಿ ಮಾಡಿ ಮರಿಗಳಿಗೆ ಉಣಿಸಿ ಪೋಷಿಸುವವು. ಸಸ್ತನಿ ವರ್ಗದಲ್ಲಿ ಸಾಕಷ್ಟು ವೈವಿಧ್ಯತೆಗಳಿವೆ. ಕೆಲವು ಮೊಟ್ಟೆ ಇಟ್ಟು ಮರಿ ಮಾಡಿದರೆ, ಕೆಲವು ಜೋಗುಳ ಚೀಲವನ್ನು ಹೊಂದಿವೆ. ಇನ್ನೂ ಕೆಲವು ಜರಾಯುಜಗಳು. ಅಂದರೆ ಮರಿಗಳಿಗೆ ಜನ್ಮಕೊಡುವಂತಹವುಗಳಾಗಿವೆ. ಕೆಲವು ಪ್ರಾಣಿಗಳಿಗೆ ನಾಲ್ಕು ಕಾಲುಗಳಿದ್ದರೆ, ಇನ್ನೂ ಕೆಲವು ದ್ವಿಪಾದಗಳು, ಮನುಷ್ಯ ಎರಡು ಕಾಲುಗಳ ಮೇಲೆ ನಿಂತು ನೆಲದ ಮೇಲೆ ನಡೆಯುವ ವಿಚಿತ್ರ ಪ್ರಾಣಿಯಾದರೆ, ಬಾವಲಿ ಹಕ್ಕಿಯಂತೆ ಹಾರಾಡುವುದು. ತಿಮಿಂಗಿಲ ಮೀನಿನಂತೆ ನೀರಿನಲ್ಲಿ ಈಜುವುದು. ಈ ತಿಮಿಂಗಿಲ ಪ್ರಾಣಿ ಪ್ರಪಂಚದಲ್ಲಿಯೇ ಅತ್ಯಂತ

ದೊಡ್ಡದಾದ ಸಸ್ತನಿಯಾಗಿದ್ದು ೨೨ ರಿಂದ ೩೪ ಮೀ. ಉದ್ದ ಮತ್ತು ೮೦ ರಿಂದ ೮೬ ಟನ್ ಭಾರವಾದ ಪ್ರಾಣಿಯಾಗಿದೆ.[೭]

ಭೌಗೋಳಿಕ ವಾತಾವರಣಕ್ಕೆ ಅನುಗುಣವಾಗಿ ಮೈಬಣ್ಣದಲ್ಲಿ ವೈವಿಧ್ಯತೆಯಿದೆ. ಶೀತವಲಯದ ಪ್ರಾಣಿಗಳಲ್ಲಿ ದಟ್ಟವಾದ ಕೂದಲುಗಳಿದ್ದರೆ ಉಷ್ಣವಲಯದ ಪ್ರಾಣಿಗಳಲ್ಲಿ ಮೃದುವಾದ ಇಲ್ಲವೇ ಬಿರುಸಾದ ಕಡಿಮೆ ಕೂದಲುಗಳಿರುತ್ತವೆ. ಕೆಲವು ಋತುಮಾನಕ್ಕೆ ಅನುಗುಣವಾಗಿ ಮೈಬಣ್ಣವನ್ನು ಬದಲಿಸುವವು. ಸಸ್ತನಿಗಳಲ್ಲಿ ಸಸ್ಯಹಾರಿಗಳು, ಮಾಂಸಾಹಾರಿಗಳು ಮತ್ತು ಮಿಶ್ರಾಹಾರಿಗಳಿವೆ. ಆಹಾರಕ್ಕೆ ಅನುಗುಣವಾಗಿ ಹಲ್ಲುಗಳಲ್ಲಿ ವೈವಿಧ್ಯತೆಯಿದೆ. ಆಹಾರಕ್ಕಾಗಿ ಕೆಲವು ಹಗಲಿನಲ್ಲಿ ಓಡಾಡಿದರೆ ಇನ್ನೂ ಕೆಲವು ನಿಶಾಚರಿಗಳು ಅಂದರೆ ರಾತ್ರಿಯಲ್ಲಿ ಓಡಾಡುತ್ತವೆ. ಕೆಲವು ಬಿಲಗಳಲ್ಲಿ, ಗುಹೆಗಳಲ್ಲಿ, ಮರಗಳಲ್ಲಿ, ಮನೆಗಳಲ್ಲಿ, ನೀರಿನಲ್ಲಿ ಹೀಗೆ ವಾಸಗಳಲ್ಲಿ ವೈವಿಧ್ಯತೆಯನ್ನು ಕಾಣಬಹುದು.

ಸಸ್ತನಿಗಳ ವರ್ಗೀಕರಣ

ಸಸ್ತನಿ ವರ್ಗದಲ್ಲಿ ಸುಮಾರು ೪,೦೦೦ ಪ್ರಭೇದಗಳಿವೆ. ಅವುಗಳನ್ನು ಸ್ಥೂಲವಾಗಿ ಮೂರು ಉಪವರ್ಗಗಳಾಗಿ ವರ್ಗೀಕರಿಸಿದೆ.

ಉಪವರ್ಗ ೧ : ಪ್ರೊಟೋತೀರಿಯ *(Monotremes)*

ಇವು ತುಂಬಾ ಆದಿಮ ಸಸ್ತನಿಗಳು ಮತ್ತು ಅಂಡಜಗಳು, ಇಂದು ಕೇವಲ ಎರಡು ಸಸ್ತನಿಗಳು ಮಾತ್ರ ಬದುಕಿವೆ. ಅವು ಎಕಿಡ್ನ ಮತ್ತು ಪ್ಲಾಟಿಪಸ್. ಇವು ಆಸ್ಟ್ರೇಲಿಯಾ ಖಂಡಕ್ಕೆ ಸೀಮಿತವಾಗಿದ್ದು, ಮೊಟ್ಟೆಯಿಡುವ ಸಸ್ತನಿಗಳಾಗಿವೆ.

ಉಪವರ್ಗ ೨ : ಮೇಟತೀರಿಯ *(Marsupialia)*

ಇವು ಜೋಗುಳಿ ಪ್ರಾಣಿಗಳು. ಈ ಉಪವರ್ಗಕ್ಕೆ ಸೇರಿದ ಹೆಣ್ಣಿನ ಉದರ ಭಾಗದಲ್ಲಿ ಮಾರ್ಸುಪಿಯಮ್ (ಜೋಗುಳಿ) ಎನ್ನುವ ಚರ್ಮದ ಚೀಲವಿದೆ. ಇದರಲ್ಲಿ ಅಪೂರ್ಣವಾಗಿ ಬೆಳೆದ ಮರಿಯನ್ನು ಇಟ್ಟುಕೊಂಡು ಹೆಣ್ಣು ರಕ್ಷಿಸಿ, ಪೋಷಿಸಿ ಬೆಳೆಸುತ್ತದೆ. ಉದಾ: ಕಾಂಗರೂ, ಆಪೋಸಮ್, ಮಾರ್ಸುಪಿಯಲ್ ಮೋಲ್, ಇತ್ಯಾದಿಗಳು, ಇವು ಆಸ್ಟ್ರೇಲಿಯಾ ಮತ್ತು ದಕ್ಷಿಣ ಅಮೇರಿಕ ಖಂಡಗಳಿಗೆ ಸೀಮಿತವಾಗಿವೆ.

ಉಪವರ್ಗ ೩ : ಯೂತೀರಿಯಾ *(Placentilia)*

ಇವು ನಿಜವಾದ ಜರಾಯುಜ ಸಸ್ತನಿಗಳು. ಇವುಗಳಲ್ಲಿ ತೊಟ್ಟುಳ್ಳ ಸ್ತನಗಳು ಚೆನ್ನಾಗಿ ಬೆಳೆದಿರುತ್ತವೆ. ಭ್ರೂಣಗಳನ್ನು ಪೂರ್ಣ ಬೆಳವಣಿಗೆಯವರೆಗೂ ಗರ್ಭಕೋಶದಲ್ಲಿ ಉಳಿಸಿಕೊಂಡು ಪ್ಲಾಸೆಂಟ್ ಮೂಲಕ ರಕ್ಷಿಸಿ, ಪೋಷಿಸಿ ಮರಿಗಳನ್ನು ಹಾಕುತ್ತವೆ. ಯೂತೀರಿಯ ಉಪವರ್ಗವನ್ನು ೧೬ ಗಣಗಳಾಗಿ ವರ್ಗೀಕರಿಸಿದ್ದು, ಕುಟುಂಬ ಶಾಸ್ತ್ರೀಯನಾಮ, ಸಾಮಾನ್ಯ ಹೆಸರು ಮತ್ತು ಗಮನಾರ್ಹ ಅಂಶಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಸಸ್ತನಿಗಳ ವರ್ಗೀಕರಣ ಕೋಷ್ಟಕ

ಗಣ: ಫಾಲಿಡೋಟ *(Falidota)* **ಕುಟುಂಬ:** ಮಾನಿಡೆ *(Manidae)*		
ಶಾಸ್ತ್ರೀಯ ನಾಮ	**ಸಾಮಾನ್ಯ ಹೆಸರು**	**ಗಮನಾರ್ಹ ಅಂಶಗಳು**
೦೧. ಮಾನಿಸ್ ಕ್ರ್ಯಾಸಿಕಾಡೇಟ *(Manis krasikadeta)*	ಚಿಪ್ಪು ಹಂದಿ	* ಬಯಲುಸೀಮೆ ಮತ್ತು ಕಣಿವೆಗಳ ಕೆಳಗೆ ವಾಸಿಸುತ್ತವೆ. * ಇರುವೆ ಗೆದ್ದಲು ಇವುಗಳ ಆಹಾರ. * ದೇಹದ ಮೇಲ್ಭಾಗ ಚಿಪ್ಪಿನ ಹೊದಿಕೆ ಇದೆ. * ಇದು ನಿಶಾಚಾರಿಯಾಗಿದ್ದು, ಉದ್ರೇಕ–ಗೊಂಡಾಗ ಬುಸುಗುಟ್ಟುವಂತಹ ಶಬ್ದ ಮಾಡುತ್ತದೆ.
ಗಣ: ಪ್ರೈಮೇಟ್ಸ್ *(Pramaits)* (ಮನುಷ್ಯನೂ ಸೇರಿದಂತೆ ಕಾಡುಪಾಪ ಮಂಗಗಳು, ವಾನರಗಳು) **ಕುಟುಂಬ:** ಸರ್ಕೋಪಿತೆಸಿಡೆ *(Sarcopitesidae)*		
೦೨. ಮಕಾಕ ರೇಡಿಯೇಟ *(Makaka Redieta)*	ಕಪಿ ಅಥವಾ ಬಾನೆಟ್ ಮಣಕ	* ಇದು ದಕ್ಷಿಣ ಭಾರತಕ್ಕೆ ಸೀಮಿತವಾದ ಪ್ರಾಣಿ. * ಮರವಾಸಿಗಳು ಮತ್ತು ಗುಂಪು ಜೀವಿಗಳು * ಹಣ್ಣು ಹಂಪಲು, ಎಲೆ, ಕಾಂಡ, ಹುಳು ಹುಪ್ಪಟೆ, ಜೇಡ, ಹಕ್ಕಿಯ ಮೊಟ್ಟೆಗಳು ಇದರ ಆಹಾರ.
೦೩. ಪ್ರೆಸ್‌ಬೈಟಸ್ ಎನ್‌ಟೆಲ್ಲಸ್ *(Pressbytus Entelus)*	ಸಾಮಾನ್ಯ ಲಾಂಗೂರ್ ಅಥವಾ ಹನುಮಾನ್ ಕಪಿ/ ಮುಸುವ	* ಮರುಭೂಮಿ ಹೊರತುಪಡಿಸಿ ಮಿಕ್ಕೆಲ್ಲ ಕಡೆ ಇವು ಹೇರಳವಾಗಿವೆ * ಸಂಪೂರ್ಣ ಸಸ್ಯಹಾರಿಗಳು * ಕುಳಿತ ಭಂಗಿಯಲ್ಲಿ ೨ ರಿಂದ ೨.೫ ಅಡಿ ಎತ್ತರ ೯–೧೬ ಕೆ.ಜಿ. ತೂಕವಿರುತ್ತವೆ.
ಕುಟುಂಬ: ಹೊಮೊನಿಡೆ *(Homonidae)*		
೦೪. ಪ್ಯಾನ್ ಟ್ರೊಗ್ಲೊಡೈಟ್ಸ್ *(Pyantroglodaaites)*	ಚಿಂಪಾಂಜಿ	* ಉದ್ದವಾದ ಕೈಕಾಲುಗಳನ್ನು ಹೊಂದಿದ್ದು, ಸುಲಭ ಚಲನೆಗೆ ಹೆಸರುವಾಸಿ.

ಗಣ: ಲಗೋಮಾರ್ಫ *(Lagomarfa)* (ಮೊಲಗಳು) ಕುಟುಂಬ: ಲೆಪೊರಿಡೆ *(Leporidae)*		
ಶಾಸ್ತ್ರೀಯ ನಾಮ	**ಸಾಮಾನ್ಯ ಹೆಸರು**	**ಗಮನಾರ್ಹ ಅಂಶಗಳು**
೦೫. ಲೀಪಸ್ ನೈಗ್ರಿಕೋಲಿಸ್ *(Lepus nigricollis)*	ಕಂದು ಮೊಲ/ ಕಪ್ಪು ಕತ್ತಿನ ಕಂದು ಮೊಲ	* ಇವು ಪ್ರಪಂಚಾದ್ಯಂತ ದೊರಕುತ್ತವೆ. * ಇವು ಸಂಘಜೀವಿ. * ೪೦-೫೦ ಸೆಂ.ಮೀ.ಉದ್ದ ೧.೮-೨.೩ ಕೆ.ಜಿ. ತೂಕ. * ಸಂಪೂರ್ಣ ಸಸ್ಯಾಹಾರಿ * ತುಂಬಾ ಚಟುವಟಿಕೆಯ ಪ್ರಾಣಿ.
ಗಣ: ಕಾರ್ನಿವೋರ *(Carnivora)* (ಮಾಂಸಾಹಾರಿಗಳು) ಕುಟುಂಬ: ಅರ್ಸಿಡೆ *(Arsidae)*		
೦೬. ಮೆಲರ್ಸಸ್ ಆರ್ಸಿನಸ್ *(Melarsus arsinas)*	ಕರಡಿ	* ಕರ್ನಾಟಕವೂ ಸೇರಿದಂತೆ ಭಾರತದ ಅರಣ್ಯ ಪ್ರದೇಶದ ಬಂಡೆಕಲ್ಲುಗಳ ಗವಿಗಳಲ್ಲಿ ವಾಸ * ೪ ರಿಂದ ೫ ಅಡಿ ಉದ್ದ. ೩ ಅಡಿ ಎತ್ತರ * ಗೆದ್ದಲು ಹುಳು ಮತ್ತು ಜೇನು ಇದರ ಇಷ್ಟವಾದ ಆಹಾರ. ವಿವಿಧ ರೀತಿಯ ಹಣ್ಣು, ದಾನ್ಯಗಳನ್ನು ತಿನ್ನುತ್ತದೆ. ಕೆಲವೊಮ್ಮೆ ಮಾಂಸವನ್ನು,ಕೀಟಗಳನ್ನು ತಿನ್ನುತ್ತದೆ.
ಕುಟುಂಬ: ಕ್ಯಾನಿಡೆ *(Canidae)*		
೦೭. ಕ್ಯಾನಿಸ್ ಲುಪಸ್ ಪ್ಯಾಮಿಲಿಯಸ್ *(Canis lupus familiries)*	ಮುಧೋಳ ನಾಯಿ	* ನೀಳವಾದ ದೇಹ, ಬೇಟೆಗೆ ಹೆಸರುವಾಸಿ.
ಕುಟುಂಬ: ಕೈನಿಡೆ *(Caienidae)*		
೦೮. ಹರ್ಪೆಸ್ಪಿಸ್ ಎಡ್‌ವರ್ಡ್ಸಿ *(Harpestis Edvardsi)*	ಮುಂಗುಸಿ (ಕೇರಿ)	* ಕರ್ನಾಟಕವು ಸೇರಿದಂತೆ ಭಾರತದ ಎಲ್ಲಾ ಕಡೆ ಕಂಡುಬರುತ್ತವೆ. * ಇವು ೩ ಅಡಿ ಉದ್ದವಿದ್ದು, ಗಂಡುಗಳು ಹೆಣ್ಣಿನವುಗಳಿಗಿಂತ ದೊಡ್ಡವು * ಸರ್ವಭಕ್ಷಕಗಳು, ಇದರ ಮೈಬಣ್ಣ ಬೂದು

ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
೦೯. ಹರ್ಪೆಸ್ಟಿಸ್ ವಿಟ್ಟಿಕೋಲಿಸ್ *(Harpestis vittikolis)*	ಪಟ್ಟೆಕತ್ತಿನ ಮುಂಗುಸಿ	* ದೊಡ್ಡದಾದ ಮುಂಗುಸಿ ಮತ್ತು ಕುತ್ತಿಗೆಯ ಎರಡೂ ಬದಿಗಳಲ್ಲಿ ಕಪ್ಪು ಪಟ್ಟಿಗಳು ಕಿವಿಯ ಹಿಂಭಾಗದಿಂದ ಭುಜದವರೆಗೆ ಹರಡಿವೆ.
ಕುಟುಂಬ: ಫೀಲಿಡೆ *(Filidae)*		
೧೦. ಪ್ಯಾಂಥೆರ ಟೈಗ್ರಿಸ್ *(Panthera taigrees)*	ಹುಲಿ	* ಹುಲಿಯು ಫಿಲಿಡೆ ಕುಟುಂಬದಲ್ಲಿಯೇ ಅತ್ಯಂತ ದೊಡ್ಡ ಗಾತ್ರದ ಪ್ರಾಣಿ. * ಏಷ್ಯಾ ಖಂಡಕ್ಕೆ ಮಾತ್ರ ಸೀಮಿತ. * ಇದರ ಉದ್ದ ೮–೯ ಅಡಿ ೩–೩.೫ ಅಡಿ ಎತ್ತರ * ಇದು ಮಾಂಸಾಹಾರಿ * ಹುಲಿಯ ಭಾರತದ ರಾಷ್ಟ್ರೀಯ ಪ್ರಾಣಿ.
೧೧. ಪ್ಯಾಂಥೆರಾ ಲಿಯೋಪರ್ಸಿಕಾ *(Panthera parsica)*	ಭಾರತದ ಸಿಂಹ	* ಉತ್ತರ ಭಾರತದ ಬಯಲು ಸೀಮೆಗಳಲ್ಲಿ ಕಂಡುಬರುತ್ತವೆ. ಮಾಂಸಹಾರಿ.
ಗಣ : ಪ್ರೊಬಾಸಿಡಿಯ *(Probasidia)* **ಕುಟುಂಬ:** ಎಲಿಫಾನ್‌ಟಿಡೆ *(Elephantidae)*		
೧೨. ಎಲಿಫಾಸ್ ಮ್ಯಾಕ್ಸಿಮಸ್ *(Elephas maximus)*	ಭಾರತದ ಆನೆ	* ಜೀವಂತ ಭೂಚರ ಪ್ರಾಣಿಗಳಲ್ಲಿಯೇ ಇದು ಅತಿ ದೊಡ್ಡದು * ಸುಮಾರು ೯–೧೦ ಅಡಿ ಎತ್ತರ * ಸಂಪೂರ್ಣ ಸಸ್ಯಹಾರಿಯಾಗಿದ್ದು ಸಂಘ ಜೀವಿಗಳಾಗಿವೆ. * ಆನೆಗಳಲ್ಲಿ ಆಫ್ರಿಕಾದ ಆನೆ ಮತ್ತು ಏಷ್ಯಾದ ಆನೆ ಎಂದು ಎರಡು ಪ್ರಭೇದಗಳಿವೆ.
ಗಣ : ಪೆರಿಸ್ಸೊಡ್ಯಾಕ್ಟೈಲ *(Perissodyactaila)* **ಕುಟುಂಬ:** ಈಕ್ವಿಡೆ *(Equidae)*		
೧೩. ಈಕ್ವಸ್ ಅಸಿನಸ್ *(Eques asinas)*	ಕತ್ತೆ	* ಇದು ಮೂಲತಃ ಈಶಾನ್ಯ ಆಫ್ರಿಕಾದ ನಿವಾಸಿ

ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
೧೪. ಈಕ್ವಸ್ ಕೆಬಲಸ್ *(Equues Cabalus)*	ಸಾಕಿದ ಕುದುರೆ	* ಕುದುರೆಗಿಂತ ಚಿಕ್ಕದು ಮತ್ತು ಸಸ್ಯಾಹಾರಿ * ಸರಕು-ಸಾಮಾಗ್ರಿಗಳನ್ನು ಹೊರಲು ಮಾತ್ರ ಬಳಸುತ್ತಾರೆ. ಇದು ಕಷ್ಟ ಸಹಿಷ್ಣು. * ಉತ್ತರ ಮಧ್ಯ ಏಷ್ಯಾದಿಂದ ಬಂದುದ್ದು. * ಇದು ಸಸ್ಯಾಹಾರಿ. * ಹಲವು ವಿಧದಲಿ ಮನುಷ್ಯನಿಗೆ ಉಪಯುಕ್ತವಾದ ಪ್ರಾಣಿ.
ಗಣ : ಆರ್ಟಿಯೊಡ್ಯಾಕ್ಟೈಲ *(Artiodactyla)* ಕುಟುಂಬ: ಬೋವಿಡೆ *(Bovidae)*		
೧೫. ಆಂಟೆಲೋಪ್ ಸರ್ವಿಕ್ಯಾಪ್ರ *(Antelop Sarvicyapra)*	ಕೃಷ್ಣಮೃಗ ಅಥವಾ ಭಾರತದ ಚಿಗರಿ (ಸಾರಂಗ)	* ಭಾರತದ ಎಲ್ಲಾ ಬಯಲು ಪ್ರದೇಶಗಳಲಿ ಕಂಡುಬರುತ್ತದೆ. * ೪–೪.೫ ಅಡಿ ಉದ್ದವಿದ್ದು ಸಸ್ಯಾಹಾರಿ–ಯಾಗಿದೆ. * ಚಿಗರೆಯಲ್ಲಿಯೇ ಇದು ಸುಂದರ ಮತ್ತು ಭಾರತದ ಏಕೈಕ ಪ್ರತಿನಿಧಿ. ಹಾಗೆಯೇ ವೇಗವಾಗಿ ಓಡುವ ಪ್ರಾಣಿ.
೧೬. ಟಿವ್ರಾಸೀರಸ್ ಕ್ವಾರ್ಡಿಕಾರ್ನಿಸ್ *(Tivrasirus cwardikarnis)*	ಚೌಸಿಂಗ ಅಥವಾ ನಾಲ್ಕು ಕೊಂಬಿನ ಚಿಗರಿ	* ವಿಪುಲ ಹುಲ್ಲು ಬೆಳೆದ ಮೈದಾನ, ಏರಿಳಿತದ ಗುಡ್ಡಗಾಡಿನ ಪ್ರದೇಶಗಳು ಇವುಗಳ ವಾಸಸ್ಥಾನ. * ಕೆಂಪು ಕಂದು ಇದರ ಮೈಬಣ್ಣ * ಎರಡು ಜೊತೆ ಕೊಂಬುಗಳಿವೆ. * ಹುಲ್ಲು ಮತ್ತು ಚಿಗುರು ಇವುಗಳ ಆಹಾರ
೧೭. ಗಸೆಲ ಗಸೆಲ ಬೆನ್ನಟ್ಟಿ *(Gazzela Gazzela Bennatti)*	ಚಿಂಕಾರ ಅಥವಾ ಭಾರತದ ಗಸೆಲ	* ಭಾರತದಲ್ಲಿನ ಎತ್ತರವಿಲ್ಲದ ಗುಡ್ಡ ಮತ್ತು ಮೈದಾನಗಳಲ್ಲಿ ಇದರ ವಾಸ. * ಸಸ್ಯಾಹಾರಿಯಾಗಿದ್ದು ನಾಚಿಕೆ ಸ್ವಾಭವದವು * ಅತ್ಯಂತ ವೇಗವಾಗಿ ಓಡಬಲ್ಲ ಕಾಡುಪ್ರಾಣಿ

ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
೧೮. ಬುಬಾಲಸ್ ಬುಬಾಲಸ್ *(Bubalus bubalus)*	ಕಾಡೆಮ್ಮೆ, ಕಾಡುಕೋಣ	* ಭಾರತದ ಪಶ್ಚಿಮ ಘಟ್ಟಗಳ ಕಾಡು ಪ್ರದೇಶದಲ್ಲಿ ವಾಸಿಸುತ್ತವೆ. * ೮–೯ ಅಡಿ ಉದ್ದ, ೬ ಅಡಿ ಎತ್ತರ * ಸಸ್ಯಾಹಾರಿ
೧೯. ಬಾಸ್ ಗೌರಸ್ *(Bas gowras)*	ಕಾಟಿ (ಕಾಡುಕೋಣ) ಅಥವಾ ಗೌರ್	* ಭಾರತದ ವಾಸಿ. ಕರ್ನಾಟಕದಲ್ಲಿ ಕಾಟಿ ಎಂದು ಕರೆಯುತ್ತಾರೆ. * ೧೦–೧೩ ಅಡಿ ಉದ್ದ ೬.೫ ಅಡಿ ಎತ್ತರದ ದೊಡ್ಡಗಾತ್ರದ ಪ್ರಾಣಿ * ಸಸ್ಯಾಹಾರಿ.
ಕುಟುಂಬ: ಕ್ಯಾಮಲಿಡೆ *(Camalidae)*		
೨೦. ಕ್ಯಾಮಲಸ್ ಡ್ರಾಮಿಡೇರಿಯಸ್ *(Camalus dramiderius)*	ಒಂಟೆ	* ಉತ್ತರ ಭಾರತದ ಬಯಲು ಪ್ರದೇಶದಲ್ಲಿ ಕಂಡುಬರುತ್ತದೆ. ಮರುಭೂಮಿಯಲ್ಲಿ ಉತ್ತಮವಾಗಿ ಚಲಿಸುವ ಪ್ರಾಣಿ.
ಕುಟುಂಬ: ಜಿರಾಫಿಡೆ *(Jirafidae)*		
೨೧. ಜಿರಾಫ ಕ್ಯಾಮೆಲೊಪರ್ಡಾಲಿಸ್ *(Jirafa camelopardalis)*	ಜಿರಾಫೆ	* ಉತ್ತರ ಭಾರತದ ಕುರುಚಲು ಕಾಡುಗಳಲ್ಲಿ ಕಂಡುಬರುತ್ತದೆ.
ಕುಟುಂಬ: ಸರ್ವೀಡೆ *(Sarvidae)*		
೨೨. ಆಕ್ಸಿಸ್ ಆಕ್ಸಿಸ್ *(Acxis acxis)*	ಚಿತಾಲ್/ಸಾರಂಗ ಜಿಂಕೆ ಚುಕ್ಕೆ ಜಿಂಕೆ	* ಕಾರ್ನಾಟಕದ ಹುಲ್ಲುಗಾವಲು ಕಾಡುಗಳಲ್ಲಿ ವಾಸ. * ೩–೫ ಅಡಿ ಉದ್ದ ೩ ಅಡಿ ಎತ್ತರ * ಸಸ್ಯಾಹಾರಿ.
೨೩. ಸರ್ವಸ್ ಯೂನಿಕೊಲರ್ *(Sarvas unikolar)*	ಸಾಂಬಾರ್(ಕಡವೆ)	* ಕಾಡುಬೆಟ್ಟಗುಡ್ಡಗಳಲ್ಲಿ ವಾಸ. * ಭಾರತದ ಜಿಂಕೆಗಳಲ್ಲಿ ಇದು ದೊಡ್ಡದು.
೨೪. ಮಂಟಿಯಾಕಸ್ ಮಂಟ್‌ಜ್ಯಾಕೆ *(Mantiyakas mantjake)*	ಬಗಳು ಜಿಂಕೆ ಏಣುಮುಖದ ಜಿಂಕೆ	* ಸಸ್ಯಾಹಾರಿ ಮತ್ತು ಧೈರ್ಯಶಾಲಿಗಳು * ಇವುಗಳ ಕೊಂಬುಗಳನ್ನು ಮನೆಗಳಲ್ಲಿ ಅಲಂಕಾರಕ್ಕಾಗಿ ಇಡುವುದು ಸಾಮಾನ್ಯ.

ಕುಟುಂಬ: ಸೂಯಿಡೆ *(Suiedae)*		
ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
೨೫. ಸಸ್‌ಸ್ಕ್ರಾಫ್ ಕ್ರಿಸ್ಟೇಟಸ್ *(Sascraf cristetus)*	ಕಾಡುಹಂದಿ	* ಭಾರತದ ಎಲ್ಲೆಡೆಯೂ ಕಂಡುಬರುತ್ತದೆ. * ಸರ್ವಭಕ್ಷಕಗಳಾಗಿದ್ದು ಸಂಘಜೀವಿಗಳಾಗಿವೆ.

ಭೂಮಿ ಉಗಮವಾದ ನಂತರ ಜೀವಿಗಳು ಹೇಗೆ ಹುಟ್ಟಿ ಬೆಳೆದು ವಿಕಾಸ ಹೊಂದಿದವು ಮತ್ತು ಕಾಲನಂತರ ಅವುಗಳ ಆಹಾರ, ವಸತಿನೆಲೆ ಮತ್ತು ದೈಹಿಕ ರಚನೆಯಲ್ಲಾದ ಬದಲಾವಣೆಯ ಆಧಾರದ ಮೇಲೆ ಅವುಗಳನ್ನು ಯಾವ ರೀತಿಯಾಗಿ ವರ್ಗೀಕರಿಸಲಾಗಿದೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಇಲ್ಲಿ ಪ್ರಾಣಿಶಿಲ್ಪಗಳಿಗೆ ಸಂಬಂಧಿಸಿದಂತೆ ಅಧ್ಯಯನ ಕೈಗೊಂಡಿರುವುದರಿಂದ ಮೊದಲು ಪ್ರಾಣಿ ಅಥವಾ ಪ್ರಾಣಿಗುಂಪಿನ ಪೂರ್ಣ ವಿವರಗಳನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕ ಮತ್ತು ಈ ವಿವರಗಳು ಇಲ್ಲದಿದ್ದರೆ ನಮ್ಮ ಅಧ್ಯಯನ ಅಥವಾ ಸಂಶೋಧನೆ ಅರ್ಥಪೂರ್ಣವಾಗಿರುವುದಿಲ್ಲವೆಂದೇ ಭಾವಿಸುತ್ತೇನೆ. ಹಾಗಾಗಿ ಈ ಅಧ್ಯಾಯದಲ್ಲಿ ಪ್ರಾಣಿಗಳ ಸಂಪೂರ್ಣ ವಿವರಣೆಯನ್ನು ನೀಡಲಾಗಿದೆ.

ಪ್ರಾಣಿಗಳ ಪರಿಚಯದ ಕುರಿತು ಈಗಾಗಲೇ ಹಲವು ಪುಸ್ತಕಗಳು ಇದ್ದರೂ ಬಿಡಿ ಬಿಡಿಯಾಗಿವೆ. ಅಂದರೆ ಒಂದು ಪುಸ್ತಕದಲ್ಲಿ ಕಶೇರುಕಗಳ ಬಗ್ಗೆ ಮಾಹಿತಿ ಇದ್ದರೇ ಮತ್ತೊಂದರಲ್ಲಿ ಅಕಶೇರುಕಗಳ ಬಗ್ಗೆ ಮಾಹಿತಿಯಿರುತ್ತದೆ. ಈಗಿದ್ದರೂ ಪ್ರಾಣಿಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಮಾಹಿತಿ ದೊರೆಯುವುದಿಲ್ಲ. ಉದಾ: ದೇವರಾಜ ಸರ್ಕಾರ್, ಹಾ.ಬ. ಮಧ್ಯಸ್ಥ ಎನ್.ಎ. ಮತ್ತು ಷಣ್ಮುಖಮ್ಮ, ಎಚ್.ಎಚ್. ರವರ ಪ್ರಾಣಿ–ಪಕ್ಷಿ ಸಂಪುಟ ಎಂಬ ಪುಸ್ತಕದಲ್ಲಿ ಕೇವಲ ಕಶೇರುಕಗಳ ಬಗ್ಗೆ ಮಾತ್ರ ಮಾಹಿತಿ ಸಿಗುತ್ತದೆ. ಆದರೆ ಅಕಶೇರುಕಗಳ ಬಗ್ಗೆ ಮಾಹಿತಿಯಿರುವುದಿಲ್ಲ. ಹಾಗಾಗಿ ಕಶೇರುಕ ಮತ್ತು ಅಕಶೇರುಕಗಳೆರಡರ ಮಾಹಿತಿಯನ್ನು ಈ ಅಧ್ಯಾಯದಲ್ಲಿ ನೀಡಿರುತ್ತೇನೆ.

ಒಟ್ಟಾರೆ ಪ್ರಾಣಿಸಂಕುಲಗಳ ಸಂಪೂರ್ಣ ಮಾಹಿತಿ ಅಂದರೆ ಪ್ರಾಣಿಗಳ ಗಣ, ಕುಟುಂಬ, ಶಾಸ್ತ್ರೀಯನಾಮ, ಸಾಮಾನ್ಯ ಹೆಸರು ಮತ್ತು ಗಮನಾರ್ಹ ಅಂಶಗಳು ಮುಂತಾದವುಗಳನ್ನು ಒಂದು ಹಿಡಿಯಾಗಿ ತಿಳಿಸುವುದು ಈ ಅಧ್ಯಾಯದ ಉದ್ದೇಶವಾಗಿದ್ದು ಅದನ್ನು ಈಡೇರಿಸುವ ಪ್ರಯತ್ನ ಮಾಡಲಾಗಿದೆ.

ಕೊನೆ ಟಿಪ್ಪಣಿಗಳು

೦೧. ದೇವರಾಜ ಸರ್ಕಾರ್. ಹಾ.ಬ, ಮಧ್ಯಸ್ಥ ಎನ್. ಎ, ಷಣ್ಮುಖಮ್ಮ ಎಚ್.ಎಚ್., ೨೦೦೬, ಕರ್ನಾಟಕ ರಾಜ್ಯಕೋಶ–೨, "ಪ್ರಾಣಿ–ಪಕ್ಷಿ ಸಂಪುಟ", ಪು. ೧

೦೨. ಅದೇ, ಪು. ೧

೦೩. ಕೃಷ್ಣಾನಂದ ಕಾಮತ., ೧೯೭೯, "ಪ್ರಾಣಿ ಪರಿಸರ", ಪು. ೧

೦೪. ಅದೇ, ಪು. ೨

೦೫. ಅದೇ, ಪು. ೨

೦೬. ಅದೇ, ಪು. ೪

೦೭. ಅದೇ, ಪು. ೫

೦೮. ಸುಮಂಗಳ ಎಸ್.ಮುಮ್ಮಿಗಟ್ಟಿ, ೨೦೧೦, "ಪ್ರಾಣಿಗಳು", ಪು. ೧೩

೦೯. ಕಮಲ, ವಿ., ೨೦೦೩, "ಜೀವ ವರ್ಗೀಕರಣ", ಪು. ೧೪

೧೦. ಕತ್ರೆ ಶಕುಂತಲ, ರಾಜಾಸಾಬ್ ಎ.ಎಚ್ (ಸಂ.)., ೧೯೯೫, "ಜೀವಶಾಸ್ತ್ರ", ಪು. ೩೫೦

೧೧. ಬಾಲಕೃಷ್ಣ ಟಿ.ಎ., ೧೯೯೯, "ಪ್ರಾಣಿಶಾಸ್ತ್ರ", ಪು. ೧೪

೧೨. David Burnie., 2003, *Animal Encyclopedia,* pp.152-59

೧೩. ದೇವರಾಜ ಸರ್ಕಾರ್ ಹಾ.ಬ. ಮಧ್ಯಸ್ಥ ಎನ್.ಎ. ಷಣ್ಮುಖಮ್ಮ ಎಚ್.ಎಚ್., "ಪೂರ್ವೋಕ್ತ", ಪು. ೨

೧೪. ಸುಮಂಗಳ ಎಸ್. ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೫

೧೫. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೧೫

೧೬. *Invertehrate-wikipedia.https://en.m.wikipedia.org,*

೧೭. Robert.w.hegner., *Invertebrate zoology,* pp. 116-123

೧೮. ಸುಮಂಗಳ ಎಸ್, ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೧೭

೧೯. coelentarata - wikipedia

೨೦. ಸುಮಂಗಳ ಎಸ್. ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೨೦

೨೧. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೨೨

೨೨. ಸುಮಂಗಳ ಎಸ್, ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೨೨

೨೩. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೧೪

೨೪. ಸುಮಂಗಳ ಎಸ್, ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೨೬

೨೫. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೧೫

೨೬. ಸುಮಂಗಳ ಎಸ್, ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೨೬

೨೭. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೧೫

೨೮. ಅದೇ, ಪು. ೧೫

೨೯. ಶ್ರೀಮತಿ ಎಚ್.ಎಸ್. (ಸಂ)., "ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೫ ಜೀವಜಗತ್ತು", ಪು. ೧೩೮

೩೦. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೧೫

೩೧. ಸುಮಂಗಳ ಎಸ್, ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೩೧

೩೨. ಕಮಲ ವಿ., "ಪೂರ್ವೋಕ್ತ", ಪು. ೮೯

೩೩. ಅದೇ, ಪು. ೮೯

೩೪. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೧೫

೩೫. ಸುಮಂಗಳ ಎಸ್. ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೩೦

೩೬. ಕಮಲ ವಿ., "ಪೂರ್ವೋಕ್ತ", ಪು. ೮೯

೩೭. ಕತ್ರೆ ಶಕುಂತಲ, ರಾಜಾಸಾಬ್ ಎ.ಎಚ್ (ಸಂ)., "ಪೂರ್ವೋಕ್ತ", ಪು. ೩೭೮

೩೮. ಶ್ರೀಮತಿ ಎಚ್.ಎಸ್. (ಸಂ.)., "ಪೂರ್ವೋಕ್ತ", ಪು. ೧೩೯

೩೯. ಕಮಲ ವಿ, "ಪೂರ್ವೋಕ್ತ", ಪು. ೯೬

೪೦. ಕತ್ರೆ ಶಕುಂತಲ, ರಾಜಾಸಾಬ್ ಎ.ಎಚ್. (ಸಂ.)., "ಪೂರ್ವೋಕ್ತ", ಪು. ೩೮೧

೪೧. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೧೬

೪೨. ಸುಮಂಗಳ ಎಸ್, ಮುಮ್ಮಿಗಟ್ಟಿ,"ಪೂರ್ವೋಕ್ತ", ಪು. ೩೭

೪೩. ಬಾಲಕೃಷ್ಣ ಟಿ.ಎ., "ಪೂರ್ವೋಕ್ತ", ಪು. ೧೭

೪೪. ಕಮಲ ವಿ, "ಪೂರ್ವೋಕ್ತ", ಪು. ೧೦೦

೪೫. ಕತ್ರೆ ಶಕುಂತಲ, ರಾಜಾಸಾಬ್ ಎ.ಎಚ್ (ಸಂ)., "ಪೂರ್ವೋಕ್ತ", ಪು. ೩೮೬

೪೬. ಸುಮಂಗಳ ಎಸ್. ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೪೦

೪೭. ಸುಮಂಗಳ ಎಸ್. ಮುಮ್ಮಿಗಟ್ಟಿ, "ಪೂರ್ವೋಕ್ತ", ಪು. ೪೧

೪೮. ದೇವರಾಜ ಸರ್ಕಾರ್ ಹಾ.ಬ. ಮಧ್ಯಸ್ಥ ಎನ್.ಎ. ಷಣ್ಮುಖಮ್ಮ ಎಚ್.ಎಚ್., "ಪೂರ್ವೋಕ್ತ", ಪು. ೧೬

೪೯. ಅದೇ, ಪು. ೬೩

೫೦. ಕಮಲ ವಿ., "ಪೂರ್ವೋಕ್ತ", ಪು. ೧೨೮

೫೧. ದೇವರಾಜ ಸರ್ಕಾರ್ ಹಾ.ಬ. ಮಧ್ಯಸ್ಥ ಎನ್.ಎ. ಷಣ್ಮುಖಮ್ಮ ಎಚ್.ಎಚ್., "ಪೂರ್ವೋಕ್ತ," ಪು. ೭೧

೫೨. ಶ್ರೀಮತಿ ಹೆಚ್.ಎಸ್. (ಸಂ.)., ಪೂರ್ವೋಕ್ತ ಪು. ೧೪೪

೫೩. ಕಮಲ ವಿ., "ಪೂರ್ವೋಕ್ತ", ಪು. ೧೪೩

೫೪. ದೇವರಾಜ ಸರ್ಕಾರ್ ಹಾ.ಬ. ಮಧ್ಯಸ್ಥ ಎನ್.ಎ. ಷಣ್ಮುಖಮ್ಮ ಎಚ್.ಎಚ್., "ಪೂರ್ವೋಕ್ತ", ಪು. ೧೧೨

೫೫. ಹರೀಶ್ ಆರ್. ಭಟ್, ಪ್ರಮೋದ ಸುಬ್ಬರಾವ್., "ಪಕ್ಷಿ ಪ್ರಪಂಚ", ಪು. ೧೫

೫೬. ಅದೇ, ಪು. ೧೫

೫೭. ಸುಮಂಗಳ ಎಸ್, ಮುಮ್ಮಿಗಟ್ಟಿ., "ಪೂರ್ವೋಕ್ತ", ಪು. ೫೦

೫೮. ದೇವರಾಜ ಸರ್ಕಾರ್ ಹಾ.ಬ. ಮಧ್ಯಸ್ಥ ಎನ್.ಎ. ಷಣ್ಮುಖಮ್ಮ ಎಚ್.ಎಚ್., "ಪೂರ್ವೋಕ್ತ", ಪು. ೧೧೮

೫೯. ಹರೀಶ್ ಆರ್. ಭಟ್., "ಪೂರ್ವೋಕ್ತ", ಪು. ೧೧

೬೦. ಸುರೇಶ, ವಿ. ಕುಲಕರ್ಣಿ., "ಸಸ್ತನಿಗಳು", ಪು. ೦೧

೬೧. *Sheep - wikipedia, https://en.m.wikipedia.org.*

೬೨. ದೇವರಾಜ ಸರ್ಕಾರ್ ಹಾ.ಬ. ಮಧ್ಯಸ್ಥ ಎನ್.ಎ. ಷಣ್ಮುಖಮ್ಮ ಎಚ್.ಎಚ್, "ಪೂರ್ವೋಕ್ತ", ಪು. ೨೭೩

□□□

ಅಧ್ಯಾಯ : ನಾಲ್ಕು

ಹಂಪಿ ಪರಿಸರದ ಪ್ರಾಣಿಶಿಲ್ಪಗಳ ವಿಶ್ಲೇಷಣೆ

೪.೧. ಧಾರ್ಮಿಕ ಶಿಲ್ಪಗಳಲ್ಲಿ ಪ್ರಾಣಿಗಳು

೪.೨. ಧಾರ್ಮಿಕೇತರ ಶಿಲ್ಪಗಳಲ್ಲಿ ಪ್ರಾಣಿಗಳು

೪.೩. ಬಿಡಿಶಿಲ್ಪಗಳು

ಅಧ್ಯಾಯ

೪ ಹಂಪಿ ಪರಿಸರದ ಪ್ರಾಣಿಶಿಲ್ಪಗಳ ವಿಶ್ಲೇಷಣೆ

ಹಂಪಿ ಪರಿಸರದಲ್ಲಿರುವ ಪ್ರತಿಯೊಂದು ದೇವಾಲಯ ಮಂಟಪ ಮತ್ತು ಇತರೆ ಸ್ಮಾರಕಗಳು ಅಂದಿನ ಕಲೆ ಮತ್ತು ವಾಸ್ತುಶಿಲ್ಪವನ್ನು ತಿಳಿಸಿಕೊಡುತ್ತವೆ. ಮುಖ್ಯವಾಗಿ ಇಲ್ಲಿನ ಶಿಲ್ಪಗಳಲ್ಲಿ ಅಂದಿನ ಧಾರ್ಮಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾರೆ. ಪ್ರಸ್ತುತ ಅಧ್ಯಯನವು ಹಂಪಿ ಪರಿಸರ ಎಂದು ಗುರುತಿಸುವ ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಇಲಾಖೆಯ ೨೯ ಹಳ್ಳಿಗಳನ್ನು ಒಳಗೊಂಡ ವ್ಯಾಪ್ತಿಯಲ್ಲಿ ಕಂಡುಬರುವ ಪ್ರಾಣಿಶಿಲ್ಪಗಳನ್ನು ಕುರಿತು ಕೈಗೊಂಡ ಅಧ್ಯಯನವಾಗಿದೆ. ಹಾಗೆಯೇ ಈ ಅಧ್ಯಯನ ಉದ್ದೇಶದಲ್ಲಿ ತಿಳಿಸಿರುವಂತೆ ಹಂಪಿ ಪರಿಸರದ ಸ್ಮಾರಕಗಳಲ್ಲಿ ಸಾಕಷ್ಟು ಲೌಕಿಕ ಮತ್ತು ಅಲೌಕಿಕ ಶಿಲ್ಪಗಳನ್ನು ಕಂಡರಿಸಿದ್ದು ಅವುಗಳ ಜೊತೆಯಲ್ಲಿ ಪ್ರಾಣಿಸಂಕುಲವನ್ನು ಎಷ್ಟರ ಮಟ್ಟಿಗೆ ಕಂಡರಿಸಲಾಗಿದೆ. ಮತ್ತು ಅವುಗಳ ಸ್ಥಳ ನಿರ್ದೇಶನ, ಸಾಂಕೇತಿಕತೆ, ಶೈಲಿ, ಲಕ್ಷಣ ಸ್ವರೂಪಗಳನ್ನು ವಿವರಿಸುವುದಲ್ಲದೆ ಸಾಂಸ್ಕೃತಿಕವಾಗಿ ಮತ್ತು ಯುದ್ಧದ ಸಂದರ್ಭಗಳಲ್ಲಿ ಪ್ರಾಣಿಗಳು ಯಾವ ರೀತಿ ಬಳಕೆಯಾಗುತ್ತಿದ್ದವು ಎಂಬುದನ್ನು ಮತ್ತು ಶಿಲ್ಪಗಳಲ್ಲಿನ ಪ್ರಾಣಿಗಳ ಲಕ್ಷಣಗಳನ್ನು ಸಾಹಿತ್ಯ ಕೃತಿಗಳಲ್ಲಿನ ವಿವರಣೆಗಳಿಗೆ ಹೋಲಿಸಿ ಶಿಲ್ಪಗಳಲ್ಲಿನ ಪ್ರಾಣಿಗಳ ತಳಿಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಜೊತೆಗೆ ಪ್ರಾಣಿಗಳು ಮತ್ತು ಅವುಗಳ ವಾಸದ ನೆಲೆಯಾದ ಕೆಲವು ಸ್ಮಾರಕಗಳಿಗೂ ಇರುವ ಸಂಬಂಧವನ್ನು ತಿಳಿಸಲಾಗಿದೆ. ಒಟ್ಟಾರೆ ಪುರಾಣದ ಕಥೆಗಳನ್ನು ತಿಳಿಸುವ ಶಿಲ್ಪಗಳಲ್ಲಿ, ಐತಿಹ್ಯ, ಕಥಾನಿರೂಪಕ, ಮನರಂಜನೆ, ದೈವಭಕ್ತ ಶಿಲ್ಪಗಳಲ್ಲಿ ಹಾಗೂ ಇನ್ನೂ ಮುಂತಾದ ಶಿಲ್ಪಗಳಲ್ಲಿ ಪ್ರಾಣಿಗಳ ಪಾತ್ರ ಮತ್ತು ಮಹತ್ವ ಏನೆಂಬುದನ್ನು ಗುರುತಿಸಿ ಅಂದಿನ ಕಾಲದ ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೪.೧. ಧಾರ್ಮಿಕ ಶಿಲ್ಪಗಳಲ್ಲಿ ಪ್ರಾಣಿಶಿಲ್ಪಗಳು

ಹಂಪಿಯು ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದ್ದು, ಈ ಪರಿಸರದಲ್ಲಿ ಧರ್ಮಕ್ಕೆ ಸಂಬಂಧಿಸಿದ ವಿಫುಲ ಶಿಲ್ಪ ಸಂಪತ್ತನ್ನೇ ಕಾಣಬಹುದು. ಅಂತಹ ಶಿಲ್ಪಗಳಲ್ಲಿ ಪ್ರಾಣಿಗಳ ಮಹತ್ವವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

೪.೧.೧. ದಶಾವತಾರ ಶಿಲ್ಪಗಳು

"ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ।

ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥"[೧]

ಎಂಬ ಗೀತೆಯಂತೆ ವಿಷ್ಣುವು ವಿವಿಧ ಕಾಲಘಟ್ಟಗಳಲ್ಲಿ ಹತ್ತು ಅವತಾರಗಳನ್ನು ತಾಳಿದನು. ಅವುಗಳನ್ನು ದಶಾವತಾರಗಳು ಎಂದು ಕರೆಯಲಾಗುತ್ತದೆ. ಈ ಪ್ರಪಂಚಕ್ಕೆ ಅಸುರರಿಂದ ಆಪತ್ತು ಒದಗಿದಾಗ ವಿಷ್ಣುವು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಅವತಾರಗಳನ್ನು ತಾಳಿ ಅಸುರರನ್ನು ನಿಗ್ರಹಿಸಿ ತಪ್ಪು ದಾರಿಯಲ್ಲಿದ್ದವರನ್ನು ಸರಿದಾರಿಗೆ ತಂದನು. ಧರ್ಮವನ್ನು ಸ್ಥಾಪಿಸಲು ಅಥವಾ ರಕ್ಷಿಸಲು ಇಂತಹ ಅವತಾರಗಳನ್ನು ವಿಷ್ಣು ತಾಳಿದನು. ಎಲ್ಲರಿಂದ ಒಪ್ಪಿತ ಮತ್ತು ಲೋಕ ಪ್ರಸಿದ್ಧವಾದ ವಿಷ್ಣುವಿನ ಹತ್ತು ಅವತಾರಗಳು ಇಂತಿವೆ. ಮತ್ಸ್ಯಾವತಾರ (ಮೀನು), ಕೂರ್ಮಾವತಾರ (ಆಮೆ), ವರಹಾವತಾರ (ಹಂದಿ), ನರಸಿಂಹಾವತಾರ (ಮನುಷ್ಯ-ಸಿಂಹ), ವಾಮನಾವತಾರ (ಕುಬ್ಜ), ಪರಶುರಾಮ ಅವತಾರ, ರಾಮಾವತಾರ, ಕೃಷ್ಣಾವತಾರ, ಬುದ್ಧ ಮತ್ತು ಕಲ್ಕಿ ಅವತಾರಗಳು. ಕೆಲವು ಹಿಂದೂ ಸಂಪ್ರದಾಯ ವಾದಿಗಳು ಬುದ್ಧನನ್ನು ವಿಷ್ಣುವಿನ ಅವತಾರ ಅಲ್ಲವೆಂದು ವಾದಿಸಿ ಅವನ ಸ್ಥಳದಲ್ಲಿ ಕೃಷ್ಣನ ಅಣ್ಣನಾದ ಬಲರಾಮನನ್ನು ಉಲ್ಲೇಖಿಸುತ್ತಾರೆ.[೨] ಉದಾಹರಣೆಗೆ ವಿಜಯವಿಠಲ ದೇವಾಲಯದಲ್ಲಿನ ಕಲ್ಯಾಣಮಂಟಪದ ಒಂದು ಕಂಬದಲ್ಲಿ ವಿಷ್ಣುವಿನ ಹತ್ತು ಅವತಾರಗಳ ಶಿಲ್ಪಗಳನ್ನು ಕೆತ್ತಿದ್ದು ಅದರಲ್ಲಿ ಬುದ್ಧನ ಬದಲಿಗೆ ನೇಗಿಲನ್ನು ಹಿಡಿದಿರುವ ಬಲರಾಮನ ಶಿಲ್ಪವಿದ್ದು, ಇದು ಈ ಉಲ್ಲೇಖಕ್ಕೆ ಪುಷ್ಠಿ ನೀಡುತ್ತದೆ.

ರೂಢಿಯಲ್ಲಿ ಪ್ರಚಲಿತವಿರುವ ಈ ಅವತಾರಗಳ ಕ್ರಮಬದ್ಧತೆಯನ್ನು ಜೀವವಿಜ್ಞಾನದ ಜೊತೆ ಈ ರೀತಿಯಾಗಿ ತಳಕು ಹಾಕಿ ನೋಡಬಹುದು. ಪೃಥ್ವಿಯ ಉಗಮದ ನಂತರ ಪ್ರಪಂಚದಲ್ಲಿ ಕೇವಲ ನೀರು ಮಾತ್ರವಿತ್ತು. ನಂತರದಲ್ಲಿ ಏಕಕಣ ಪ್ರಾಣಿಗಳಾದ ಜಲಚರಗಳು ಹುಟ್ಟಿದವು. ಡಾರ್ವಿನನ ಪ್ರಕಾರ ಕೇವಲ ಜಲಚರವಾದ ಮೀನು, ಅನಂತರ ಜಲದಲ್ಲೂ ನೆಲದಲ್ಲೂ ಸಂಚರಿಸುವ ಕೂರ್ಮ ನಂತರ ಕೇವಲ ಭೂಚರವಾದ (ವರಾಹ) ಪ್ರಾಣಿಗಳು, ನಂತರ ಅರ್ಧಮನುಷ್ಯ ಅರ್ಧ ಪ್ರಾಣಿಯಾದ ನರಸಿಂಹ, ಅನಂತರ ಮನುಷ್ಯನ ಆದಿ ಸ್ವರೂಪದ ಗುಜ್ಜಾರಿಯಾದ ವಾಮನ ಹೀಗೆ ಜೀವಕೋಟಿಯು ವಿಕಾಸವಾಗುತ್ತಾ ಈಗಿನ ಮಾನವನಾದ ಎಂಬ ವೈಜ್ಞಾನಿಕ ಸಿದ್ಧಾಂತದ ರೂಪಗಳಾಗಿ ಈ ದಶಾವತಾರಗಳನ್ನು ತಿಳಿಯಬಹುದು.



ದಶಾವತಾರಗಳ ಸಮೂಹ ಶಿಲ್ಪ, ಕೋಟಿಲಿಂಗದ ಸಮೀಪ, ಹಂಪಿ



ದಶಾವತಾರ ಶಿಲ್ಪಗಳಿಗೆ ಸಂಬಂಧಿಸಿದಂತೆ ಹಂಪಿ ಪರಿಸರದಲ್ಲಿ ಬಿಡಿಶಿಲ್ಪಗಳೇ ಹೆಚ್ಚಾಗಿ ಕಂಡುಬರುತ್ತವೆ. ಆದರೆ ಕೋಟಿಲಿಂಗದ ಉತ್ತರ ದಿಕ್ಕು ಮತ್ತು ಗಜಶಾಲೆಯ ಈಶಾನ್ಯ ದಿಕ್ಕಿಗಿರುವ ಬೆಟ್ಟಗಳ ಹುಟ್ಟುಬಂಡೆಯಲ್ಲಿ ವಿಷ್ಣುವಿನ ದಶಾವತಾರ ಶಿಲ್ಪಗಳನ್ನು ಕೆತ್ತಲಾಗಿದೆ. ವಿಠಲ ಮತ್ತು ಪಟ್ಟಾಭಿರಾಮ ದೇವಾಲಯಗಳ ಕಂಬಗಳಲ್ಲಿ ಮೇಲಿನಿಂದ ಕೆಳಕ್ಕೆ, ಅಚ್ಯುತರಾಯ ದೇವಾಲಯದ ಎರಡನೇ ಸುತ್ತಿನ ಪ್ರಕಾರದ ಉತ್ತರದ ದ್ವಾರಬಾಗಿಲಿನ ಪಟ್ಟಿಕೆಯಲ್ಲಿ ಕೆಳಗಿನಿಂದ ಮೇಲಕ್ಕೆ ಕ್ರಮವಾಗಿ ದಶಾವತಾರ ಶಿಲ್ಪಗಳನ್ನು ಬಿಡಿಸಲಾಗಿದೆ. ಇಲ್ಲಿ ಮೂರನೆಯ ಅವತಾರವಾದ ವರಾಹದ ಜಾಗದಲ್ಲಿ ವ್ಯಾಖ್ಯಾನ ವರಾಹವನ್ನು, ಎಂಟನೆಯ ಅವತಾರವಾದ ಕೃಷ್ಣನ ಜಾಗದಲ್ಲಿ ಬಾಲಕೃಷ್ಣ ಭಕಪಕ್ಷಿಯನ್ನು ಸಂಹಾರ ಮಾಡುತ್ತಿರುವ ಚಿತ್ರಣ ತೋರಿಸಿರುವುದು ವಿಶೇಷವಾಗಿದೆ. ಕೃಷ್ಣ ದೇವಾಲಯದ ದ್ವಾರಗೋಪುರದ ಲತಾಸುರಳಿಯಲ್ಲಿಯ ದಶಾವತಾರ ಶಿಲ್ಪಗಳಲ್ಲಿ ಬುದ್ಧನ ಬದಲಿಗೆ ಬಲರಾಮನನ್ನು, ಕಲ್ಕಿ ಅವತಾರದಲ್ಲಿ ಕೇವಲ ಕುದುರೆಯ ಶಿಲ್ಪ ಇರುವುದು ವಿಶೇಷ. ವಿರೂಪಾಕ್ಷ ದೇವಾಲಯದ ಮುಖಮಂಟಪದ ಮೇಲ್ಛಾವಣಿಯಲ್ಲಿ ಗಾರೆಯಿಂದ ಮತ್ತು ವರ್ಣಚಿತ್ರಗಳಲ್ಲಿಯೂ ಸಹ ದಶಾವತಾರದ ಚಿತ್ರಗಳನ್ನು ಮೂಡಿಸಲಾಗಿದೆ. ದಶಾವತಾರ ಬಹುಪಾಲು ಶಿಲ್ಪಗಳು ಅಧಿಕವಾಗಿ ವೈಷ್ಣವ ಧರ್ಮಕ್ಕೆ ಸೇರಿದ ದೇವಾಲಯಗಳಲ್ಲಿಯೂ ಮತ್ತು ಕಡಿಮೆ ಸಂಖ್ಯೆಯಲ್ಲಿ ಇತರೆ ಧರ್ಮಕ್ಕೆ ಸೇರಿದ ದೇವಾಲಯಗಳಲ್ಲಿ ಕಂಡುಬರುತ್ತವೆ.

ಮತ್ಸ್ಯಾವತಾರ

ವಿಷ್ಣುವು ತಾಳಿದ ಅವತಾರಗಳಲ್ಲಿ ಮತ್ಸ್ಯಾವತಾರ (ಮೀನು) ಮೊದಲನೆಯದು. ಹಿಂದೂ ಸಂಸ್ಕೃತಿಯ ಪುರಾಣದಲ್ಲಿನ ಅನೇಕ ಕಥೆಗಳು ಮೀನಿನ ಅವತಾರವನ್ನು ಕುರಿತು ಉಲ್ಲೇಖಿಸುತ್ತವೆ. ಆದ್ದರಿಂದ ವಿಷ್ಣುವಿನ ಮತ್ಸ್ಯಾವತಾರವನ್ನು ಕುರಿತ ಮೂಲ ಚೂಲಗಳು ಮತ್ತು ಅದರ ವಿವರಣೆಗಳು ದೊರೆಯುವುದು ಪುರಾಣದ ಕಥೆಗಳಿಂದ ಮಾತ್ರ. ಅದರಂತೆ ಕಲ್ಪಾವಸಾನದಲ್ಲಿ ಬ್ರಹ್ಮನು ನಿದ್ರಾಪರವಶನಾದಾಗ ನಾಲ್ಕೂ ವೇದಗಳು ಅವನ ಮುಖದಿಂದ ಹೊರಗೆ ಬಂದವು. ಇದೇ ಸಮಯವನ್ನು ಕಾಯುತ್ತಿದ್ದ ಹಯಗ್ರೀವನೆಂಬ ದೈತ್ಯನು ಆ ವೇದಗಳನ್ನು ಅಪಹರಿಸಿ ಸಮುದ್ರದಲ್ಲಿ ಅಡಗಿಕೊಂಡನು. ಲೋಕ ಕ್ಷೇಮಕರವಾದ ಮಾರ್ಗವನ್ನು ಬೋಧಿಸುವ ವೇದಗಳು ಲೋಕ ಕಂಟಕರಿಗೆ ಮಾರ್ಗ ಕಂಟಕವಾಗುತ್ತವೆ ಎಂಬುದನ್ನು ಅರಿತ ಲೋಕರಕ್ಷಕನಾದ ವಿಷ್ಣುವಿಗೆ ಈ ಚೋರ ಶಿಖಾಮಣಿಯನ್ನು ವಧಿಸುವುದು ಅನಿವಾರ್ಯವಾಗಿತ್ತು. ಹಾಗಾಗಿ ಸಮುದ್ರದಲ್ಲಿ ಅಡಗಿದ್ದ ರಾಕ್ಷಸನನ್ನು ಮರ್ದಿಸಲು ಜಲಚರವಾಗುವುದು ಅವಶ್ಯಕವಾಗಿದ್ದರಿಂದ ವಿಷ್ಣು ಮತ್ಸ್ಯಾವತಾರವನ್ನು ತಾಳಬೇಕಾಯಿತು.[೩] ನಂತರದಲ್ಲಿ ಹಯಗ್ರೀವನನ್ನು ಕೊಂದು ಅವನ ಹೊಟ್ಟೆಯಲ್ಲಿದ್ದ ವೇದಗಳನ್ನು ತೆಗೆದು ಬ್ರಹ್ಮನಿಗೆ ಒಪ್ಪಿಸಿದನೆಂದು ತಿಳಿದುಬರುತ್ತದೆ. ಈ ಕಥೆಗೆ ಸಂಬಂಧಿಸಿದಂತೆ ಅಂದರೆ ಮತ್ಸ್ಯಾವತಾರಿಯಾದ ವಿಷ್ಣುವು ಹಯಗ್ರೀವನ ಹೊಟ್ಟೆಯಿಂದ ವೇದಗಳನ್ನು ಹೊರತೆಗೆಯುತ್ತಿರುವ ಸನ್ನಿವೇಶವನ್ನು ವಿವರಿಸುವ ಶಿಲ್ಪವೊಂದು ಆಂಧ್ರಪ್ರದೇಶದ ತಾಡಪತ್ರಿಯಲ್ಲಿನ ವಿಜಯನಗರ ಕಾಲಾವಧಿಯ ಚಿಂತಲ ವೆಂಕಟರಮಣ ದೇವಾಲಯದ ಮುಖಮಂಟಪದ ಕಂಬದಲ್ಲಿ ಕಂಡುಬರುತ್ತದೆ. ಮತ್ಸ್ಯಾವತಾರದ ಹಿನ್ನೆಲೆ, ಉದ್ದೇಶವನ್ನು ತಿಳಿಸುವಂತ ಶಿಲ್ಪ ಇದಾಗಿದ್ದು, ಪ್ರಮುಖ ಮತ್ತು ಅಪರೂಪದ ಶಿಲ್ಪವೆಂದೇ ಹೇಳಬಹುದು. ಆದರೆ ಹಂಪಿ ಪರಿಸರದಲ್ಲಿ ಈ ರೀತಿಯ ಶಿಲ್ಪಗಳು ಹೊರತಾಗಿ ಕೇವಲ ಮತ್ಸ್ಯ ಅವತಾರದ ಶಿಲ್ಪಗಳು ಹೇರಳವಾಗಿ ಕಂಡುಬರುತ್ತವೆ.



ಕಲ್ಲಂಗಡಿ ಬಾರ್ಬ್/ ಗೆಂಡೆ ಮೀನು,
ಗಣ : ಸಿಪ್ರಿನಿಫಾರ್ಮಿಸ್,
ಕುಟುಂಬ : ಸಿಪ್ರಿನಿಡೆ



ಅಚ್ಯುತರಾಯ ದೇವಾಲಯ, ಹಂಪಿ



ಚಿಂತಲ ವೆಂಕಟರಮಣ ದೇವಾಲಯ, ತಾಡಪತ್ರಿ

ಇಲ್ಲಿನ ಮತ್ಸ್ಯಾವತಾರ ಶಿಲ್ಪದಲ್ಲಿನ ಮೀನಿನ ದೇಹ ಲಕ್ಷಣಗಳ ಆಧಾರದ ಮೇಲೆ ಈ ಮೀನು ಸಿಪ್ರಿನಿಫಾರ್ಮಿಸ್ (*Cypriniformes*) ಗಣದ, ಸಿಪ್ರಿನಿಡೆ *(Cyprinidae)* ಕುಟುಂಬಕ್ಕೆ ಸೇರಿದ ಕಲ್ಲಂಗಡಿ ಬಾರ್ಬ್ ಮೀನು ಎಂದು ಗುರುತಿಸಲಾಗಿದೆ. ಪುಂಟಿಯಸ್ ಫೇಸಿಯೇಟಸ್ *(Puntius Fasciatus)* ಎಂಬುದು ಇದರ ವೈಜ್ಞಾನಿಕ ಹೆಸರು.[೪]

ಇನ್ನೊಂದು ಮೂಲದಂತೆ ಸತ್ಯವ್ರತ ಮನುವಿನ ಬಳಿ ಆಶ್ರಯ ಪಡೆದ ಮೀನು ದಿನದಿಂದ ದಿನಕ್ಕೆ ದೊಡ್ಡದಾಗುತ್ತಾ ಬಂದಿತು. ಇದು ಶ್ರೀಮನ್ ನಾರಾಯಣನ ಮಹಿಮೆಯೆಂದು ಮನು ಅರಿತ ಕೂಡಲೇ ಆ ಮೀನು ಜಗತ್ತಿಗೆ ಮುಂದೆ ಒದಗುವ ಮಹಾಪ್ರಳಯದ ಕುರಿತು ಎಚ್ಚರಿಕೆಯನ್ನು ನೀಡಿ ಜಗತ್ತಿನ ಮರುಸೃಷ್ಟಿಗೆ ವಿಷ್ಣುವು ಮತ್ಸ್ಯಾವತಾರವನ್ನು ತಾಳಬೇಕಾಯಿತು ಎಂಬುದಾಗಿ ತಿಳಿದುಬರುತ್ತದೆ. ವೈವಸ್ವತ ಮನುವು ಮೀನಿನ ರೂಪದ ವಿಷ್ಣುವುಗೆ ಮೊದಲು ರಕ್ಷಣೆಯನ್ನು ನೀಡಿದನು. ನಂತರದಲ್ಲಿ ಮೀನು, ಮನು ಮತ್ತು ಸಪ್ತಋಷಿಗಳ ದೋಣಿಯು ಸಮುದ್ರದಲ್ಲಿ ಸಿಲುಕಿಕೊಂಡಾಗ ಆ ದೋಣಿಯನ್ನು ಎಳೆದುಕೊಂಡು ಸುರಕ್ಷಿತವಾಗಿ ದಡ ಸೇರಿಸಿ ಮನುವನ್ನು ಪ್ರಳಯದಿಂದ ರಕ್ಷಣೆ ಮಾಡಿತು.

ಮತ್ಸ್ಯಾವತಾರದ ಕಥೆ ಭಾಗವತ, ಮತ್ಸ್ಯಪುರಾಣ ಮತ್ತು ಮಹಾಭಾರತಗಳಲ್ಲೂ ವಿಸ್ತಾರವಾಗಿ ಬರುತ್ತದೆ. ಶ್ರೀವಿಷ್ಣುವು ಮತ್ಸ್ಯಾವತಾರವನ್ನು ತಾಳಿದನೆಂಬ ಸಾಮಾನ್ಯ ನಂಬಿಕೆಗೆ ವಿರುದ್ಧವಾಗಿ ಪ್ರಜಾಪತಿಯು ಈ ಅವತಾರವನ್ನು ತಾಳಿದನೆಂದು ಮಹಾಭಾರತವು ಉಲ್ಲೇಖಿಸುತ್ತದೆ. ವಿಷ್ಣುವಿನ ಬದಲಾಗಿ ಮತ್ಸ್ಯ ಪ್ರಜಾಪತಿಯ ಅವತಾರವೆಂದು ಪರಿಗಣಿಸಲಾಗಿದ್ದು ಆತನು ಮಹಾಪ್ರಳಯದಿಂದ ಮನುವನ್ನು ರಕ್ಷಿಸುವವನಾಗಿರುವುದರಿಂದ ಆತನನ್ನು ಸೃಷ್ಟಿಕರ್ತ ಎಂದು ಭಾವಿಸಲಾಗಿದೆ.

ವಿಷ್ಣು ಮತ್ಸ್ಯಾವತಾರವನ್ನು ತಾಳಿರುವ ವಿವರಗಳು ಅಗ್ನಿಪುರಾಣದಲ್ಲಿಯೂ ದೊರಕುತ್ತದೆ. ಮತ್ಸ್ಯದ ಹುಟ್ಟಿನ ಕುರಿತಾದ ಕುತೂಹಲಕಾರಿ ಕಥೆಯು ಬೃಹದ್ದೇವತೆಯಲ್ಲಿದೆ. ಅದರಂತೆ ಮಿತ ಮತ್ತು ವರುಣ ಎಂಬ ಇಬ್ಬರು ಆದಿತ್ಯರುಗಳು ಊರ್ವಶಿಯನ್ನು ನೋಡುತ್ತಾರೆ. ಆಕೆಯನ್ನು ನೋಡಿದ ಕೂಡಲೆ ಅವರ ವೀರ್ಯವು ಚಿಮ್ಮಿ ನೆಲ, ನೀರು ಮತ್ತು ಒಂದು ಹೂಜಿಯಲ್ಲಿ ಬೀಳುತ್ತದೆ. ಇದರ

ಫಲಿತವಾಗಿ ವಸಿಷ್ಠನು ಭೂವಿಯಿಂದ, ಅಗಸ್ತ್ಯನು ಹೂಜಿಯಿಂದ ಮತ್ತು ಪ್ರಕಾಶಮಾನವಾದ ಮತ್ಸ್ಯವು ನೀರಿನಿಂದ ಜನಿಸುತ್ತದೆ. ನೀರಿನಿಂದ ಜನಿಸಿದ ಮತ್ಸ್ಯವು ಎಲ್ಲಾ ಜೀವಿಗಳಿಗೆ ಅತ್ಯವಶ್ಯಕವಾದ ನೀರಿನ ರೂಪ ಹಾಗೂ ಫಲವತ್ತತೆಯ ಪ್ರತಿರೂಪವಾಗಿದೆ.[೫] ಈ ರೀತಿಯಾಗಿ ಮತ್ಸ್ಯರೂಪದ ವಿಷ್ಣುವಿಗೆ ನೀರಿನೊಂದಿಗೆ ಇರುವ ನಂಟನ್ನು ಗುರುತಿಸಲು ದಾರಿ ಮಾಡಿಕೊಟ್ಟಿದೆ.

ವಿಷ್ಣುವಿನ ಮೊದಲ ಎರಡು ಅವತಾರಗಳಾದ ಮತ್ಸ್ಯ ಮತ್ತು ಕೂರ್ಮ ಅವತಾರಗಳನ್ನು ಕುರಿತು ಉಲ್ಲೇಖಗಳು ಸಾಹಿತ್ಯದಲ್ಲಿ ಅತ್ಯಲ್ಪವಾಗಿ ದೊರಕುತ್ತವೆ. ವಿಷ್ಣುವು ತಾಳಿದ ಹತ್ತು ಅವತಾರಗಳಿಗೆ ಹೋಲಿಸಿದರೆ ಇವೆರಡು ಅವತಾರಗಳು ಕಿರು ಅವತಾರಗಳಂತೆ ಕಂಡುಬರುತ್ತವೆ. ಮತ್ಸ್ಯಾವತಾರದ ಬಿಡಿ ಶಿಲ್ಪಗಳು ಅತ್ಯಲ್ಪ ಸಂಖ್ಯೆಯಲ್ಲಿ ದೊರಕಿದ್ದು ಅಂತಹ ಕೆಲವು ಶಿಲ್ಪಗಳನ್ನು ಪೂಜಿಸಲಾಗುತ್ತಿದೆ.

ಸಾಮಾನ್ಯವಾಗಿ ವಿಷ್ಣುವಿನ ಮತ್ಸ್ಯಾವತಾರ ಶಿಲ್ಪವನ್ನು ಮೃಗ ರೂಪ ಮತ್ತು ನರಮೃಗ ರೂಪದಲ್ಲಿ ತೋರಲಾಗುತ್ತದೆ. ಇಲ್ಲಿ ಸಂಪೂರ್ಣ ಪ್ರಾಣಿ (ಮೀನು) ಆಗಿದ್ದರೆ ಮೃಗರೂಪವೆಂದು, ಅರ್ಧ ಮನುಷ್ಯ ಮತ್ತು ಅರ್ಧ ಮೃಗ ರೂಪದಲ್ಲಿದ್ದರೆ ಅದು ನರಮೃಗ ರೂಪವೆಂದು ಹೇಳಲಾಗಿರುತ್ತದೆ.[೬] ಅಂದರೆ ದೇಹದ ಕೆಳಗಿನ ಅರ್ಧಭಾಗವು ಮತ್ಸ್ಯದಾಗಿದ್ದು (ಮೀನು) ಮೇಲಿನ ಭಾಗವನ್ನು ಮನುಷ್ಯನ ರೂಪದಲ್ಲಿ ತೋರಲಾಗಿರುತ್ತದೆ. ಸಾಮಾನ್ಯವಾಗಿ ಈ ಶಿಲ್ಪಗಳಲ್ಲಿ ವಿಷ್ಣುವಿಗೆ ನಾಲ್ಕು ಕೈಗಳಿದ್ದು ಕ್ರಮವಾಗಿ ಮೇಲಿನ ಎರಡು ಬಲಗೈ ಮತ್ತು ಎಡಗೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದರೆ ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿರುತ್ತವೆ. ವಿಷ್ಣು ಕಿರೀಟಮಕುಟಧಾರಿಯಾಗಿದ್ದು ಕಿವಿಯೋಲೆ, ಕಂಠಾಭರಣ, ಹಾರ ಕಚ್ಚುಗಳಿರುವ ಕಟಿಬಂಧ, ಉಂಗುರಗಳು, ಕೈಕಡಗ ಮತ್ತು ತೋಳುಬಂಧಿ, ಮುಂತಾದ ಆಭರಣಗಳನ್ನು ಧರಿಸಿರುವನು. ಶಿಲ್ಪಗಳಲ್ಲಿ ಮೀನಿನ ಬಾಲದ ಭಾಗವನ್ನು ಎಡ ಅಥವಾ ಬಲಬದಿಗೆ ತಿರುಗಿರುವಂತೆ ಹಾಗೂ ಅದನ್ನು ಆಧಾರವಾಗಿರಿಸಿಕೊಂಡು ನಿಂತಿರುವಂತೆ ತೋರಲಾಗಿರುತ್ತದೆ. ಮೀನುಗಳಿಗೆ ಇರುವಂತೆ ಎರಡೂ ಪಕ್ಕೆಗಳಲ್ಲಿ ರೆಕ್ಕೆಗಳನ್ನು ಹಾಗೂ ದೇಹದ ಮೇಲಿರುವ ಪೊರೆಗಳನ್ನು ಕೆಲವೊಂದು ಶಿಲ್ಪಗಳಲ್ಲಿ ಕೆತ್ತಲಾಗಿದೆ.

ಹೀಗೆ ಹಂಪಿ ಪರಿಸರದ ದೇವಾಲಯಗಳ ಕಂಬಗಳು, ಭಿತ್ತಿ, ಬಾಗಿಲವಾಡದ ಲತಾಸುರಳಿ, ಕೋಷ್ಟಕ ಮತ್ತು ಇತರೆ ಭಾಗಗಳಲ್ಲಿ ಪ್ರಧಾನವಾಗಿ ಕಂಡುಬರುವ ಉಬ್ಬುಶಿಲ್ಪಗಳನ್ನು ಹಾಗೂ ವರ್ಣಚಿತ್ರಗಳಲ್ಲಿನ ದಶಾವತಾರ ಚಿತ್ರಗಳನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ಹಂಪಿ ಪರಿಸರದ ದೇವಾಲಯಗಳಲ್ಲಿರುವ ಮತ್ಸ್ಯಾವತಾರ ಶಿಲ್ಪಗಳ ಕೋಷ್ಟಕ

ಕ್ರ.ಸಂ.	ದೇವಾಲಯಗಳು	ನರಮೃಗರೂಪ	ಮೃಗರೂಪ	ಒಟ್ಟು
೦೧.	ಪಟ್ಟಾಭಿರಾಮ ದೇವಾಲಯ, ಕಮಲಾಪುರ	೧	೮	೯
೦೨.	ಅಚ್ಯುತರಾಯ ದೇವಾಲಯ, ಹಂಪಿ	೬	೩	೯
೦೩.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೭	೦	೭
೦೪.	ವಿರೂಪಾಕ್ಷ ದೇವಾಲಯ, ಹಂಪಿ	೨	೨	೪

ಕ್ರ.ಸಂ.	ದೇವಾಲಯಗಳು	ನರಮೃಗರೂಪ	ಮೃಗರೂಪ	ಒಟ್ಟು
೦೫.	ವಿಜಯವಿಠಲ ದೇವಾಲಯ, ಹಂಪಿ	೪	೦	೪
೦೬.	ಕೃಷ್ಣ ದೇವಾಲಯ, ಹಂಪಿ	೩	೦	೩
೦೭.	ಶ್ರೀರಂಗ ದೇವಾಲಯ, ಹಂಪಿ	೧	೦	೧
೦೮.	ಹಜಾರರಾಮಚಂದ್ರ ದೇವಾಲಯ, ಹಂಪಿ	೨	೧	೩
೦೯.	ಕೋಟೆಶಂಕರದೇವಾಲಯ, ಹಂಪಿ	೧	೧	೨
೧೦.	ರಂಗನಾಥ ದೇವಾಲಯ, ಆನೆಗುಂದಿ	೦	೨	೨
೧೧.	ಅನಂತಶಯನ ದೇವಾಲಯ, ಅನಂತಶಯನಗುಡಿ	೨	೦	೨
೧೨.	ವೇಣುಗೋಪಾಲಸ್ವಾಮಿ ದೇವಾಲಯ, ತಿಮ್ಮಲಾಪುರ	೧	೦	೧
೧೩.	ಗೆಜ್ಜಲ ಮಂಟಪ, ಹಂಪಿ	೧	೦	೧
೧೪.	ಕುದುರೆಗೊಂಬೆ ಮಂಟಪ, ಹಂಪಿ	೧	೦	೧
೧೫.	ಆಂಜನೇಯ ದೇವಾಲಯ, ತಳವಾರಘಟ್ಟ ದ್ವಾರದ ಹತ್ತಿರ, ಹಂಪಿ	೧	೦	೧
೧೬.	ಈಶ್ವರ ದೇವಾಲಯ, ನಿಂಬಾಪುರ	೧	೦	೧
	ಒಟ್ಟು	೩೪	೧೭	೫೧


ಪಟ್ಟಾಭಿರಾಮ ಮತ್ತು ಅಚ್ಯುತರಾಯ ದೇವಾಲಯಗಳಲ್ಲಿ ಅತಿ ಹೆಚ್ಚು ಮತ್ಸ್ಯಾವತಾರ ಶಿಲ್ಪಗಳು ಕಂಡುಬರುತ್ತವೆ. ಪಟ್ಟಾಭಿರಾಮ ದೇವಾಲಯದಲ್ಲಿ ಒಂದು ನರಮೃಗ ರೂಪದ ಮತ್ಸ್ಯ ಹಾಗೂ ಎಂಟು ಮೃಗರೂಪದ ಮತ್ಸ್ಯ ಸೇರಿ ಒಟ್ಟು ಒಂಭತ್ತು ಮತ್ಸ್ಯಾವತಾರ ಶಿಲ್ಪಗಳನ್ನು ಗುರುತಿಸಲಾಗಿದೆ. ಇಲ್ಲಿನ ನರಮೃಗ ರೂಪದ ಮತ್ಸ್ಯ ಶಿಲ್ಪವು ಕಲ್ಯಾಣಮಂಟಪದ ೫೯ನೆಯ ಕಂಬದ ಕೆಳಪಟ್ಟಿಕೆಯಲ್ಲಿದ್ದು ದಕ್ಷಿಣಾಭಿಮುಖವಾಗಿದೆ. ಈ ಶಿಲ್ಪವು ಸಮಭಂಗಿಯಲ್ಲಿದ್ದು ಸೊಂಟದಿಂದ ಮೇಲಕ್ಕೆ ವಿಷ್ಣುವಿನ ರೂಪ ಕೆಳಕ್ಕೆ ಮೀನಿನ ರೂಪದಲ್ಲಿರುವುದರಿಂದ ಇದನ್ನು ನರಮೃಗ ರೂಪದ ಮತ್ಸ್ಯಾವತಾರ ಶಿಲ್ಪವೆಂದು ಕರೆಯಲಾಗುತ್ತದೆ. ಈ ಶಿಲ್ಪದಲ್ಲಿನ ಮತ್ಸ್ಯಾವತಾರಿ ವಿಷ್ಣುವು ಮೀನಿನ ಬಾಲದಿಂದ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿದ್ದಾನೆ. ಮೇಲ್ಭಾಗದ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹಿಡಿದಿದ್ದು, ಕೆಳಭಾಗದ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಈ ಶಿಲ್ಪದಲ್ಲಿ ವಿವಿಧ ರೀತಿಯ ಆಭರಣಗಳನ್ನು ಧರಿಸಿದ್ದಾನೆ. ಕೆಳಭಾಗದ ಮೀನಿಗೆ ಎರಡೂ ಪಕ್ಕೆಗಳಲ್ಲಿ ರೆಕ್ಕೆಗಳಿದ್ದು ಬಾಲವು ನೇರವಾಗಿ ನಿಂತಿರುವಂತೆ ಚಿತ್ರಿಸಲಾಗಿದೆ.

ಈ ಶಿಲ್ಪದಲ್ಲಿನ ಮೀನಿನ ದೇಹ ಲಕ್ಷಣಗಳ ಆಧಾರದ ಮೇಲೆ ಈ ಮೀನು ಕ್ಲೂಪಿಯಿಫಾರ್ಮಿಸ್ (*Clupeiformes*) ಗಣದ ಕ್ಲೂಪಿಯಿಡೆ (*Clupeidae*) ಕುಟುಂಬಕ್ಕೆ ಸೇರಿದ ಪಾಲಾಸ, ಪಾಟಿಯ ಮೀನುಗಳೆಂದು ಗುರುತಿಸಲಾಗಿದ್ದು, ಹಿಲ್ಸ ಇಲಿಷ (*Hilsa ilisha*) ಎಂಬುದು ಇದರ ವೈಜ್ಞಾನಿಕ

ಹೆಸರಾಗಿದೆ.[೬] ಉಳಿದಂತೆ ಎಂಟು ಮೃಗರೂಪ (ಮೀನಿನ) ಶಿಲ್ಪಗಳಿದ್ದು ಅವು ಸಹ ಈ ಮೇಲಿನ ಪ್ರಭೇದಕ್ಕೆ ಸೇರಿದ್ದು ಹೆಚ್ಚು ವ್ಯತ್ಯಾಸಗಳಿರುವುದಿಲ್ಲ. ಆದರೆ ಈ ಮೀನುಗಳು ವಿಷ್ಣುವಿನ ದಶಾವತಾರ ಉಬ್ಬುಶಿಲ್ಪಗಳನ್ನು ತೋರುವ ಉಪಕ್ರಮ ಮತ್ತು ಸಮೂಹಗಳಲ್ಲಿ ತೋರಲಾಗಿರುವುದರಿಂದ ಮೀನಿನ ಉಬ್ಬುಶಿಲ್ಪವು ಕೇವಲ ಮೃಗವಾಗಿರದೆ ವಿಷ್ಣುವಿನ ದಶಾವತಾರ ಶಿಲ್ಪವಾಗಿಯೇ ಪರಿಗಣಿಸಬೇಕಾಗುತ್ತದೆ.



ಪಾಲಾಸ ತಳಿಯ ಮೀನು
ಗಣ : ಕ್ಲೂಪಿಯಿಫಾರ್ಮಿಸ್
ಕುಟುಂಬ : ಕ್ಲೂಪಿಂಯಿಡೆ



ಪಟ್ಟಾಭಿರಾಮ ದೇವಾಲಯ,
ಕಮಲಾಪುರ

ಇದರಿಂದ ಶಿಲ್ಪಿಯು ಸಾಮಾನ್ಯ ಮೀನಿಗೂ ಮತ್ತು ವಿಷ್ಣುವಿನ ಅವತಾರಕ್ಕೂ ಇರುವ ವ್ಯತ್ಯಾಸಗಳನ್ನು ತೋರುವಲ್ಲಿ ಯಶಸ್ವಿಯಾಗಿರುವನು. ಹಂಪಿ ಪರಿಸರದಲ್ಲಿ ಮೀನಿನ ಅನೇಕ ಉಬ್ಬುಶಿಲ್ಪಗಳನ್ನು ಸ್ವತಂತ್ರವಾಗಿ ಅಥವಾ ಇತರೆ ಜಲಚರ ಪ್ರಾಣಿಗಳಾದ ಆಮೆ, ಮೊಸಳೆ, ಹಾವು ಮುಂತಾದವುಗಳೊಂದಿಗೆ ದೇವಾಲಯದ ಪ್ರಾಕಾರಗೋಡೆ ಮತ್ತು ಕೋಟೆ ಗೋಡೆಗಳಲ್ಲಿ ಕೆತ್ತಲಾಗಿದೆ. ಈ ಉಬ್ಬುಶಿಲ್ಪಗಳನ್ನು ವಿಷ್ಣುವಿನ ದಶಾವತಾರದ ಶಿಲ್ಪಗಳಾಗಿ ಪರಿಗಣಿಸಲು ಸಾಧ್ಯವಿಲ್ಲ. ಆದರೆ ಯಾವ ಮೀನು ಶಿಲ್ಪವು ದಶಾವತಾರ ಉಬ್ಬುಶಿಲ್ಪಗಳ ಸಮೂಹದಲ್ಲಿ ಇರುತ್ತವೆಯೊ ಅವುಗಳನ್ನು ಮಾತ್ರ ಮತ್ಸ್ಯಾವತಾರ ಶಿಲ್ಪಗಳೆಂದು ಪರಿಗಣಿಸಲಾಗಿದೆ.

ಅಚ್ಯುತರಾಯ ದೇವಾಲಯದಲ್ಲಿ ೬ ನರಮೃಗ ರೂಪದ ಶಿಲ್ಪಗಳು ಮತ್ತು ೩ ಮೃಗರೂಪದ ಮತ್ಸ್ಯ ಶಿಲ್ಪಗಳು ಕಂಡುಬರುತ್ತವೆ. ಅದರಲ್ಲಿ ನರಮೃಗ ರೂಪದ ೬ ಶಿಲ್ಪಗಳು ಮೇಲೆ ವಿವರಿಸಿದಂತೆ ಪಟ್ಟಾಭಿರಾಮ ದೇವಾಲಯದಲ್ಲಿನ ಶಿಲ್ಪದ ಲಕ್ಷಣಗಳನ್ನೇ ಹೋಲುತ್ತವೆ. ಆದರೆ ಬಾಲದ ಸ್ವರೂಪದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಕಂಡುಬರುತ್ತದೆ. ಇಲ್ಲಿನ ೫ ನರಮೃಗ ರೂಪ ವಿಷ್ಣು ಶಿಲ್ಪದಲ್ಲಿ ಕೆಳಭಾಗದ ಮೃಗದ (ಮೀನು) ಬಾಲವು ಎಡಭಾಗಕ್ಕೆ ವಾಲಿಕೊಂಡಂತೆ ತೋರಲಾಗಿದೆ. ಉಳಿದ ಒಂದು ಶಿಲ್ಪದಲ್ಲಿ ಬಾಲವು ಬಲಭಾಗಕ್ಕೆ ವಾಲಿಕೊಂಡಿದ್ದು ಮೀನಿನ ಮೇಲ್ಭಾಗದಲ್ಲಿ ಹುರುಪೆಗಳು ಸ್ಪಷ್ಟವಾಗಿ ಕಾಣುವಂತೆ ಬಿಡಿಸಿರುವುದರಿಂದ ಈ ಮೀನು ಕರ್ನಾಟಕದ ಕಾರ್ಪ್ ಅಥವಾ ಗೆಂಡೆ ಮೀನು ಎಂದು ಗುರುತಿಸಲಾಗಿದೆ. ಪುಂಟಿಯಸ್ ಕರ್ನಾಟಿಕಸ್ (*Puntius Carnaticus*) ಎಂಬುದು ಇದರ ಶಾಸ್ತ್ರೀಯ





ನಾಮವಾಗಿದೆ. ಹಾಗೆಯೇ ಮೃಗರೂಪದ ಮತ್ಸ್ಯ ಶಿಲ್ಪಗಳು ಸಹ ಕಂಡುಬಂದಿದ್ದು. ಅವುಗಳನ್ನು ಸಿಪ್ರಿನಿಡೆ ಕುಟುಂಬಕ್ಕೆ ಸೇರಿದ ಕುರಿ ಮೀನು ಎಂದು ಗುರುತಿಸಲಾಗಿದೆ.[೮] ಹಾಗೆಯೇ ವಿರೂಪಾಕ್ಷ, ಹಜಾರರಾಮ, ಆನೆಗುಂದಿಯ ರಂಗನಾಥ ಮತ್ತು ನಿಂಬಾಪುರದ ಶಿವ ದೇವಾಲಯಗಳಲ್ಲಿನ ಮತ್ಸ್ಯಾವತಾರ ಶಿಲ್ಪಗಳಲ್ಲಿನ ಮೀನುಗಳಿಗೂ ರೆಕ್ಕೆ ಮತ್ತು ಹುರುಪೆಗಳ ಆಕಾರದಿಂದ ಇವುಗಳು ಸಹ ಈ ಮೇಲಿನ ತಳಿಯ ಮೀನುಗಳೆಂಬುದು ತಿಳಿಯುತ್ತದೆ.



ಬೆಣ್ಣೆ ಮಾರ್ಜಾಲ ಮೀನು
ಗಣ : ಸೈಲೂರಿಫಾರ್ಮಿಸ್
ಕುಟುಂಬ : ಸೈಲೂರಿಡೆ



ಮಾಲ್ಯವಂತ ರಘುನಾಥ ದೇವಾಲಯ,
ಹಂಪಿ

ಪಟ್ಟಾಭಿರಾಮ, ಅಚ್ಯುತರಾಯ ದೇವಾಲಯಗಳ ತರುವಾಯ ಮಾಲ್ಯವಂತ ರಘುನಾಥ ದೇವಾಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ಅಂದರೆ ಒಟ್ಟು ಏಳು ಮತ್ಸ್ಯಾವತಾರ ವಿಷ್ಣುವಿನ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಹಂಪಿ ಪರಿಸರದ ಇತರೆ ದೇವಾಲಯಗಳಲ್ಲಿ ಕಂಡುಬರುವ ಮತ್ಸ್ಯಾವತಾರ ಶಿಲ್ಪಗಳಿಗೆ ಹೋಲಿಸಿದರೆ ಮಾಲ್ಯವಂತ ರಘುನಾಥ ದೇವಾಲಯದಲ್ಲಿನ ಮತ್ಸ್ಯಾವತಾರ ಶಿಲ್ಪಗಳು ವಿಶೇಷವಾಗಿವೆ. ಏಕೆಂದರೆ ಇಲ್ಲಿನ ಮತ್ಸ್ಯಾವತಾರ ಶಿಲ್ಪಗಳಲ್ಲಿನ ಮೀನು ಬೇರೆ ಬೇರೆ ಪ್ರಭೇದದ್ದಾಗಿರದೇ ಎಲ್ಲಾ ಶಿಲ್ಪಗಳಲ್ಲೂ ಒಂದೇ ಪ್ರಭೇದದ ಮೀನನ್ನು ತೋರಿಸಿರುವುದು. ಈ ಮೀನು ರೆಕ್ಕೆ, ಹುರುಪೆಗಳಿಲ್ಲದೆ ನಯವಾಗಿದ್ದು ಉದ್ದವಾಗಿದೆ. ಹಾಗಾಗಿ ಇದು ಸೈಲೂರಿಫಾರ್ಮಿಸ್ (*Siluriformes*) ಗಣದ, ಸೈಲೂರಿಡಿ (*Siluridae*) ಕುಟುಂಬಕ್ಕೆ ಸೇರಿದ ಬೆಣ್ಣೆ ಮಾರ್ಜಾಲ ಮೀನು ಎಂದು ಗುರುತಿಸಲಾಗಿದೆ. ಓಂಪೋಕ್ ಬೈಮ್ಯಾಕುಲೇಟಸ್ (*Ompak bimaculatus*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ.[೯]

ವಿಜಯವಿಠಲ, ಕೃಷ್ಣ ಮತ್ತು ತಿಮ್ಮಲಾಪುರದ ವೇಣುಗೋಪಾಲಸ್ವಾಮಿ ದೇವಾಲಯಗಳಲ್ಲಿನ ಮತ್ಸ್ಯಾವತಾರ ಶಿಲ್ಪಗಳಲ್ಲಿನ ಮೀನುಗಳು ಸಹ ಈ ಮೇಲಿನ ತಳಿಯದ್ದೆಂದು ಗುರುತಿಸಲಾಗಿದೆ. ಇವೆಲ್ಲಾ ಉಬ್ಬುಶಿಲ್ಪಗಳು ಒಂದೇ ರೀತಿಯ ಗುಣಲಕ್ಷಣಗಳನ್ನು ಹೊಂದಿದ್ದು ಅವುಗಳಲ್ಲಿ ಮೇಲೆ ವಿವರಿಸಿದ ಸಾಮ್ಯತೆಗಳನ್ನೇ ಗಮನಿಸಬಹುದು. ಬಹುಪಾಲು ಉಬ್ಬುಶಿಲ್ಪಗಳು ಒಂದನ್ನು ಮತ್ತೊಂದು ಹೋಲುತ್ತವೆಯಾದರೂ ಕೆಲವು ಸಣ್ಣಪುಟ್ಟ ವ್ಯತ್ಯಾಸಗಳನ್ನು ಕೆತ್ತನೆಗಳಲ್ಲಿ ಕಾಣಬಹುದು. ಏಕೆಂದರೆ

ವಿವಿಧ ಶಿಲ್ಪಿಗಳು ಕೆತ್ತನೆ ಕೆಲಸಗಳನ್ನು ಮಾಡಿರುವುದರಿಂದ ಇಂತಹ ವ್ಯತ್ಯಾಸಗಳಾಗುತ್ತವೆ. ಕೆತ್ತನೆಯ ಕೆಲವನ್ನು ಮಾಡುವ ಶಿಲ್ಪಿಯು ತನ್ನದೇ ಆದ ಶೈಲಿಯನ್ನು ಶಿಲ್ಪಗಳಲ್ಲಿ ಮೂಡಿಸುವುದರಿಂದ ವಿವಿಧ ಶಿಲ್ಪಗಳಲ್ಲಿ ಕೆಲವೊಂದು ವ್ಯತ್ಯಾಸಗಳು ಸಹಜವಾಗಿಯೇ ಮೂಡಿಬರುತ್ತವೆ. ಆದರೆ ಇವೆಲ್ಲ ಶಿಲ್ಪಗಳಲ್ಲಿ ವಸ್ತ್ರ, ಆಭರಣ, ಮುಖಭಾವ, ಭಂಗಿ ಹಾಗೂ ರಚನಾವಿಧಾನಗಳು ಒಂದೇ ರೀತಿಯಲ್ಲಿ ಇವೆ. ದೇವರ ಮತ್ಸ್ಯಭಾಗದ ಬಾಲವನ್ನು ಉದ್ದ ತ್ರಿಕೋನ ಮತ್ತು ದುಂಡಗೆ ಇದ್ದು ಅವುಗಳಿಗೆ ಬಾಲದ ರೆಕ್ಕೆ ಮತ್ತು ಪೊರೆಗಳು ಇರುವಂತೆ ಮತ್ತು ಕೆಲವಕ್ಕೆ ಅವುಗಳು ಇಲ್ಲದಂತೆಯು ತೋರಲಾಗಿದೆ. ಇದರಿಂದ ಮೀನುಗಳ ತಳಿಗಳನ್ನು ಗುರುತಿಸಲು ಸಹಾಯವಾಗುವಂತೆ ಶಿಲ್ಪಿ ಕೆತ್ತಿದ್ದು, ಮೀನಿನ ತಳಿಗಳ ಬಗ್ಗೆ ಅವನಿಗಿರುವ ಜ್ಞಾನವನ್ನು ತಿಳಿಯಬಹುದು.

ಹಂಪಿ ಪರಿಸರದಲ್ಲಿ ಒಟ್ಟು ೧೭ ಮೃಗರೂಪದ ಮತ್ಸ್ಯಾವತಾರ ಶಿಲ್ಪಗಳು ಕಂಡುಬಂದಿವೆ. ಇವೆಲ್ಲವೂ ಸಾಮಾನ್ಯವಾಗಿ ಮೀನಿನ ಆಕಾರದ ಶಿಲ್ಪಗಳಾಗಿದ್ದು, ದೇವಾಲಯಗಳ ಕಂಬಗಳಲ್ಲಿ ಕಂಡುಬರುತ್ತವೆ. ಆದರೆ ಒಂದು ಮೃಗರೂಪದ ಮತ್ಸ್ಯಾವತಾರ ಶಿಲ್ಪವನ್ನು ಪೂಜಿಸಲಾಗುತ್ತಿದ್ದು, ಇದನ್ನು ಮತ್ಸ್ಯ ಅವತಾರದ ವೆಂಕಟರಮಣ ಅಥವಾ ಗುಡ್ಡದ ತಿಮ್ಮಪ್ಪ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯವು ವೆಂಕಟಾಪುರ ವ್ಯಾಪ್ತಿಯಲ್ಲಿನ ಕಣಶಿಲೆಯ ಗುಡ್ಡದ ಮೇಲ್ಭಾಗದಲ್ಲಿದೆ. ಸ್ವಾಭಾವಿಕ ಹುಟ್ಟು ಬಂಡೆಯ ಮೇಲೆ ಅಸ್ಪಷ್ಟವಾಗಿ ಕೆತ್ತಿರುವ ಈ ಉಬ್ಬುಶಿಲ್ಪವನ್ನು ಸ್ಥಳೀಯರು ಮತ್ಸ್ಯ ಅವತಾರದ ವೆಂಕಟರಮಣ ಅಥವಾ ವಿಷ್ಣುವೆಂದು ಭಾವಿಸಿ ಪೂಜಿಸುತ್ತಿದ್ದಾರೆ. ಬಂಡೆಯ ಮೇಲೆ ಮೀನಿನ ಆಕಾರದ ತೆಳುವಾದ ಗೆರೆಯನ್ನು ಕೊರೆಯಲಾಗಿದ್ದು ಮತ್ಸ್ಯದ ತಲೆಯ ಮುಖದ ಭಾಗದಲ್ಲಿ ಕಣ್ಣಿನ ಗುಡ್ಡೆಯನ್ನು ಅಳವಡಿಸಿರುವುದರಿಂದ ಉಬ್ಬುಶಿಲ್ಪವು ನಿಜವಾದ ಮೀನಿನಂತೆ ಕಾಣುತ್ತದೆ. ತಲೆಯ ಮೇಲೆ ಕಿರೀಟ ಭಾಗವನ್ನು ಮತ್ತು ದೇಹದ ಭಾಗದಲ್ಲಿ ಮೀನಿನ ಆಕಾರದ ಕವಚವನ್ನು ಹೊದಿಸಲಾಗಿರುತ್ತದೆ. ಇದರಿಂದ ಉಬ್ಬುಶಿಲ್ಪವು ನೈಜ ಮೀನು ಅಥವಾ ಮತ್ಸ್ಯಾವತಾರ ವಿಷ್ಣುವಿನಂತೆ ಕಾಣುತ್ತದೆ. ಆದರೆ ಈ ದೇವಾಲಯವನ್ನು ಇತ್ತೀಚೆಗೆ ನವೀಕರಿಸಿರುವುದರಿಂದ ಇದರ ಮೂಲ ಸ್ವರೂಪ ಮರೆಯಾಗಿದೆ. ಮತ್ಸ್ಯ ಅವತಾರದ ವಿಷ್ಣುವಿನ ಉಬ್ಬುಶಿಲ್ಪವು ಕ್ರಿ.ಶ.ಸುಮಾರು ೧೪–೧೫ನೇ ಶತಮಾನದ್ದಾಗಿದ್ದರೆ, ದೇವಾಲಯದ ಗರ್ಭಗೃಹದ ಮುಂಭಾಗದ ಮಂಟಪ, ಇದರ ಮೇಲಿನ ವಿಮಾನದ ಶಿಖರ ಭಾಗ ಮತ್ತು ಇತರೆ ವಾಸ್ತು ನಿರ್ಮಿತಿಗಳು ನಂತರದ ಸೇರ್ಪಡೆಗಳಾಗಿವೆ. ಹಂಪಿ ಪರಿಸರದಲ್ಲಿ ಮತ್ಸ್ಯ ಅವತಾರದ ವಿಷ್ಣುವಿಗೆ ನಿರ್ಮಿಸಿದ ಏಕಮಾತ್ರ ದೇವಾಲಯ ಇದಾಗಿದೆ. ಈ ದೇವಾಲಯದಲ್ಲಿನ ಮತ್ಸ್ಯವನ್ನು ಹುಟ್ಟುಬಂಡೆಯ ಮೇಲೆ ಗೆರೆಗಳ ಮೂಲಕ ಮೂಡಿಸಿದ್ದು ರೆಕ್ಕೆ ಮತ್ತು ಹುರುಪೆಗಳು ಕಂಡುಬರುವುದಿಲ್ಲ. ಹಾಗಾಗಿ ಇದರ ಆಕಾರದ ಮೇಲೆ ಈ ಮೀನು ಸಿಫ್ರಿನಿಫಾರಿಸ್ ಗಣದ ಸಿಪ್ರಿನಿಡೆ ಕುಟುಂಬಕ್ಕೆ ಸೇರಿದ ಹಳದಿ ಮಶೀರ್ ಮೀನು ಎಂಬುದಾಗಿ ಗುರುತಿಸಲಾಗಿದ್ದು, ಟಾರ್‌ಕುದ್ರೀ (*Tor Khudree*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ.[೧೦] ಒಟ್ಟಾರೆ ಹಂಪಿ ಪರಿಸರದ ದೇವಾಲಯಗಳಲ್ಲಿ ಸಾಕಷ್ಟು ಮತ್ಸ್ಯಾವತಾರ ಶಿಲ್ಪಗಳು ಕಂಡುಬಂದಿದ್ದು ಈ ಅವತಾರದ ಪ್ರಾಮುಖತೆಯನ್ನು ತಿಳಿಸುವಲ್ಲಿ ಸಹಕಾರಿಯಾಗಿವೆ. ಜೊತೆಗೆ ಈ ಶಿಲ್ಪಗಳನ್ನು ಕೆತ್ತಿದ ಶಿಲ್ಪಿಗೆ ಮೀನುಗಳ ತಳಿಗಳ ಬಗ್ಗೆ ಜ್ಞಾನವಿದ್ದು, ಅಂತಹ ಪ್ರಮುಖ ತಳಿಗಳನ್ನು ಶಿಲ್ಪಗಳಲ್ಲಿ ಮೂಡಿಸುವಲ್ಲಿ ಶಿಲ್ಪಿಯು ಯಶಸ್ವಿಯಾಗಿದ್ದಾನೆ.

ಕೂರ್ಮಾವತಾರ

ಕೂರ್ಮಾವತಾರವು ವಿಷ್ಣುವಿನ ಹತ್ತು ಅವತಾರಗಳಲ್ಲಿ ಎರಡನೆಯ ಅವತಾರವಾಗಿದೆ. ಭೂಮಿಯನ್ನು ರಕ್ಷಿಸಲು ವಿಷ್ಣುವು ಕೂರ್ಮ ಅಥವಾ ಆಮೆಯ ಅವತಾರವನ್ನು ತಾಳಿದನು. ಇನ್ನೊಂದು ಮೂಲದಂತೆ ಭೂಮಿಯಲ್ಲಿರುವ ಜೀವಿಗಳನ್ನು ರಕ್ಷಿಸಲು ಪ್ರಜಾಪತಿಯು ಈ ಅವತಾರವನ್ನು ತಾಳಿದನೆಂದು ಸಹ ತಿಳಿದುಬರುತ್ತದೆ.[೧೧] ಸುರರು ಮತ್ತು ಅಸುರರು ಮಂದರ ಪರ್ವತವನ್ನು ಕಡಗೋಲನ್ನಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಕ್ಷೀರಸಾಗರವನ್ನು ಕಡೆಯುವ ಸಂದರ್ಭದಲ್ಲಿ ಮಂದರ ಗಿರಿಯು ನೀರಿನಲ್ಲಿ ಮುಳುಗಲಾರಂಭಿಸಿತು. ಆಗ ವಿಷ್ಣುವು ಆಮೆಯ ಅವತಾರ ತಾಳಿ ಮಂದರ ಪರ್ವತವನ್ನು ತನ್ನ ಬೆನ್ನಿನ ಮೇಲೆ ಇರಿಸಿಕೊಂಡು ಸಮಸ್ಥಿತಿಯಲ್ಲಿ ನಿಲ್ಲಿಸುವಲ್ಲಿ ಆಸರೆಯಾದನು.[೧೨] ಎಂದು ಪುರಾಣಗಳು ಉಲ್ಲೇಖಿಸುತ್ತವೆ.

ವಿಷ್ಣುವಿನ ಮೊದಲನೆಯ ಮತ್ತು ಎರಡನೆಯ ಅವತಾರಗಳಾದ ಮತ್ಸ್ಯ ಮತ್ತು ಕೂರ್ಮ ಅವತಾರಗಳು ಉಳಿದ ಎಂಟು ಅವತಾರಗಳಿಗೆ ಹೋಲಿಸಿದರೆ ಗೌಣವಾದ ಸ್ಥಾನವನ್ನು ಪಡೆದಿವೆ ಎಂದು ಹೇಳಬಹುದು. ಇವುಗಳನ್ನು ಸಾಹಿತ್ಯ ಮತ್ತು ಶಿಲ್ಪಗಳಲ್ಲಿ ಅಧಿಕವಾಗಿ ತೋರಿಲ್ಲ. ಕೂರ್ಮ ಅವತಾರದ ಬಿಡಿಶಿಲ್ಪಗಳು ಬೆರಳೆಣಿಕೆಯಷ್ಟು ದೊರಕಿದ್ದು ಅವುಗಳು ಇಂದಿಗೂ ಪೂಜೆಗೆ ಒಳಪಟ್ಟಿವೆ.[೧೩] ಆಂಧ್ರಪ್ರದೇಶದ ಶ್ರೀ ಕಾಕುಳಂ ಜಿಲ್ಲೆಯ ಶ್ರೀಕೂರ್ಮಂನ ಕೂರ್ಮನಾಥಸ್ವಾಮಿ ದೇವಾಲಯ ಮತ್ತು ಚಿತ್ತೂರು ಜಿಲ್ಲೆಯ ಕುರ್ಮಾಯಿ ಎಂಬಲ್ಲಿ ಕೂರ್ಮ ವಾದಿರಾಜಸ್ವಾಮಿ ದೇವಾಲಯ ಹಾಗೆಯೇ ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಗವಿರಂಗಾಪುರ ಗ್ರಾಮದಲ್ಲಿ ಗವಿರಂಗನಾಥಸ್ವಾಮಿ ದೇವಾಲಯಗಳು ಈ ಮೂರು ದೇವಾಲಯಗಳು ಆಮೆ ರೂಪದಲ್ಲಿರುವ ವಿಷ್ಣುವನ್ನು ಪೂಜಿಸುತ್ತಿರುವ ಪ್ರಮುಖ ದೇವಾಲಯಗಳಾಗಿವೆ.[೧೪]

ಈ ಅವತಾರದಲ್ಲಿ ವಿಷ್ಣುವನ್ನು ಅರ್ಧ ಮನುಷ್ಯ ಮತ್ತು ಅರ್ಧ ಮೃಗ ರೂಪದಲ್ಲಿ ತೋರಲಾಗುತ್ತದೆ. ದೇಹದ ಕೆಳಗಿನ ಅರ್ಧಭಾಗವು ಆಮೆಯದಾಗಿದ್ದು ನಿಂತ ಭಂಗಿಯಲ್ಲಿ ಆಮೆಯ ಹಿಂಬದಿಯ ಎರಡು ಕಾಲುಗಳ ಮೇಲೆ ಅಥವಾ ಆಮೆಯ ಹೊರಕವಚದ ತುದಿಯ ಮೇಲೆ ನಿಂತಿರುವಂತೆ ತೋರಲಾಗುತ್ತದೆ. ಶಿಲ್ಪದಲ್ಲಿನ ಕೂರ್ಮಾವತಾರಿ ವಿಷ್ಣುವಿಗೆ ನಾಲ್ಕು ಕೈಗಳಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರ ಹಿಡಿದಿದ್ದರೆ ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿರುತ್ತವೆ. ದೇವತೆಯು ಕಿರೀಟಮಕುಟವನ್ನು ಮತ್ತು ಇತರೆ ಆಭರಣಗಳನ್ನು ಧರಿಸಿರುವನು.

ಹಂಪಿ ಪರಿಸರದಲ್ಲಿ ಕೂರ್ಮಾವತಾರದ ಬಿಡಿ ಶಿಲ್ಪ ಮತ್ತು ಉಬ್ಬುಶಿಲ್ಪಗಳು ದೊರಕಿವೆ. ಇದರಲ್ಲಿ ನರಮೃಗ ಮತ್ತು ಪ್ರಾಣಿ ಅಥವಾ ಮೃಗರೂಪದ ೧೧೪ ಶಿಲ್ಪಗಳು ಕಂಡುಬಂದಿವೆ. ಈ ೧೧೪ ಶಿಲ್ಪಗಳಲ್ಲಿ ನರಮೃಗ ರೂಪದ ೨೮ ಮತ್ತು ಮೃಗರೂಪದ ೮೬ ಶಿಲ್ಪಗಳಿವೆ. ಹಂಪಿ ಪರಿಸರದಲ್ಲಿರುವ ದೇವಾಲಯಗಳ ಬಾಗಿಲವಾಡದ ಲತಾಸುರುಳಿ, ಕೋಷ್ಟಕ, ಭಿತ್ತಿಚಿತ್ರ ಮತ್ತು ಇತರೆ ಭಾಗಗಳಲ್ಲಿ ದಶಾವತಾರ ಶಿಲ್ಪಗಳನ್ನು ತೋರುವಾಗ ಕೂರ್ಮನನ್ನು ಕಿರು ಉಬ್ಬುಶಿಲ್ಪಗಳಾಗಿ ತೋರಲಾಗಿದ್ದು ಅವುಗಳನ್ನು ಸಹ ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ಹಂಪಿ ಪರಿಸರದ ದೇವಾಲಯಗಳಲ್ಲಿರುವ ಕೂರ್ಮಾವತಾರ ಶಿಲ್ಪಗಳ ಕೋಷ್ಟಕ

ಕ್ರ.ಸಂ.	ದೇವಾಲಯಗಳು	ನರಮೃಗರೂಪ	ಮೃಗರೂಪ	ಒಟ್ಟು
೦೧.	ಅಚ್ಯುತರಾಯ ದೇವಾಲಯ, ಹಂಪಿ	೫	೩೯	೪೪
೦೨.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೪	೫	೯
೦೩.	ಪಟ್ಟಾಭಿರಾಮ ದೇವಾಲಯ, ಕಮಲಾಪುರ	೨	೪	೬
೦೪.	ವಿಜಯವಿಠಲ ದೇವಾಲಯ, ಹಂಪಿ	೩	೩	೬
೦೫.	ಕೃಷ್ಣ ದೇವಾಲಯ, ಹಂಪಿ	೨	೩	೫
೦೬.	ವಿರೂಪಾಕ್ಷ ದೇವಾಲಯ, ಹಂಪಿ	೧	೪	೫
೦೭.	ಹಜಾರರಾಮ ದೇವಾಲಯ, ಹಂಪಿ	೨	೨	೪
೦೮.	ಹಸ್ತಗಿರಿ ರಂಗನಾಥಸ್ವಾಮಿ ದೇವಾಲಯ, ಹಂಪಿ	೦	೮	೮
೦೯.	ಕೋಟೆಶಂಕರದೇವಾಲಯ, ಹಂಪಿ	೧	೧	೨
೧೦.	ನಗರೇಶ್ವರ ದೇವಾಲಯ, ಹಂಪಿ (ಮನ್ಮಥ ಹೊಂಡದ ಹತ್ತಿರ)	೦	೫	೫
೧೧.	ಮಾಧವ ದೇವಾಲಯ, ಹಂಪಿ	೧	೦	೧
೧೨.	ಶಿವ ದೇವಾಲಯ, ಹಂಪಿ (ಕಡ್ಲೆಕಾಳು ಗಣೇಶನ ಹಿಂಭಾಗ)	೧	೦	೧
೧೩.	ಗೆಜ್ಜಲಮಂಟಪ, ಹಂಪಿ	೧	೦	೧
೧೪.	ಅನಂತಶಯನ ದೇವಾಲಯ,ಅನಂತಶಯನಗುಡಿ	೨	೧	೩
೧೫.	ರಂಗನಾಥ ದೇವಾಲಯ, ಆನೆಗುಂದಿ	೦	೪	೪
೧೬.	ಶಿವ ದೇವಾಲಯ, ನಿಂಬಾಪುರ	೧	೦	೧
೧೭.	ವೇಣುಗೋಪಾಲ ದೇವಾಲಯ, ತಿಮ್ಮಲಾಪುರ	೨	೩	೫
೧೮.	ಶಿವ ದೇವಾಲಯ, ತಿಮ್ಮಲಾಪುರ	೦	೪	೪
	ಒಟ್ಟು	೨೮	೮೬	೧೧೪

ಅಚ್ಯುತರಾಯ ದೇವಾಲಯದಲ್ಲಿ ನರಮೃಗ ಮತ್ತು ಮೃಗರೂಪದ ಸುಮಾರು ೪೪ ಕೂರ್ಮ ಶಿಲ್ಪಗಳು ಕಂಡುಬಂದಿದ್ದು, ಹಂಪಿ ಪರಿಸರದ ದೇವಾಲಯಗಳಲ್ಲಿಯೇ ಅಧಿಕ ಸಂಖ್ಯೆಯ ಕೂರ್ಮ ಶಿಲ್ಪಗಳನ್ನು ಹೊಂದಿರುವ ದೇವಾಲಯವು ಇದಾಗಿದೆ. ಈ ದೇವಾಲಯದಲ್ಲಿ ಶ್ರೀವೈಷ್ಣವ ಧರ್ಮದ ಪ್ರಭಾವ ಅಧಿಕವಾಗಿದ್ದುದರಿಂದ ಅಧಿಕ ಸಂಖ್ಯೆಯಲ್ಲಿ ಕೂರ್ಮ ಶಿಲ್ಪಗಳು ಕಂಡುಬರುತ್ತವೆ ಎಂದರೆ ತಪ್ಪಾಗಲಾರದು. ಈ ದೇವಾಲಯದಲ್ಲಿ ನರಮೃಗ ರೂಪದ ೫ ಶಿಲ್ಪಗಳು ಹಾಗೂ ಮೃಗರೂಪದ

೩೯ ಶಿಲ್ಪಗಳಿವೆ. ನರಮೃಗರೂಪದ ವಿಷ್ಣುವಿನ ಕೆಳಗಿನ ಅರ್ಧಭಾಗವು ಆಮೆಯದಾಗಿದ್ದು ನಾಲ್ಕು ಕಾಲುಗಳನ್ನು ಮತ್ತು ಆಮೆಯ ಮಧ್ಯಭಾಗದಲ್ಲಿ ನೇರವಾಗಿ ಒಂದು ಗೆರೆಯನ್ನು ಸಹ ತೋರಲಾಗಿದೆ. ಇದೇ ರೀತಿಯ ಗೆರೆಯನ್ನು ಮೃಗರೂಪದ ಕೂರ್ಮ ಶಿಲ್ಪಗಳಲ್ಲಿ ಸಹ ನಾವು ಕಾಣಬಹುದು.

ಈ ದೇವಾಲಯದಲ್ಲಿನ ನರಮೃಗ ರೂಪದ ಶಿಲ್ಪಗಳಲ್ಲಿ ವಿಶಿಷ್ಟವಾದುದು ಅಥವಾ ವಿಭಿನ್ನವಾದದುದೆಂದರೆ ಪ್ರಕಾರ ಗೋಡೆಯ ಸಾಲುಮಂಟಪದ ೧೧೩ನೇ ಕಂಬದ ಮಧ್ಯಭಾಗದಲ್ಲಿದ್ದು ಉತ್ತರಾಭಿಮುಖವಾಗಿದೆ.



ಕಡಲಾಮೆ
ಗಣ : ಕಿಲೋನಿಯಾ
ಕುಟುಂಬ : ಕಿಲೋನಿಡೆ



ಅಚ್ಯುತರಾಯ ದೇವಾಲಯ, ಹಂಪಿ




ಮಾಲ್ಯವಂತ ರಘುನಾಥ ದೇವಾಲಯ, ಹಂಪಿ

ಈ ಶಿಲ್ಪದಲ್ಲಿ ಕಿರೀಟಮಕುಟಧಾರಿಯಾದ ವಿಷ್ಣುವಿನ ಮುಖದ ಭಾಗ ಮಾತ್ರವಿದ್ದು, ಉಳಿದ ಕೆಳಭಾಗ ಸಂಪೂರ್ಣವಾಗಿ ಮೃಗರೂಪದ ಆಮೆಯನ್ನು ತೋರಲಾಗಿದೆ. ಈ ರೀತಿಯ ಶಿಲ್ಪ ಹಂಪಿ ಪರಿಸರದಲ್ಲಿ ಬೇರೆಲ್ಲೂ ಕಂಡುಬರುವುದಿಲ್ಲ. ಹಾಗಾಗಿ ಇದೊಂದು ವಿಭಿನ್ನ ಮತ್ತು ವಿಶಿಷ್ಟವಾದುದೆಂದೇ ಹೇಳಬಹುದು. ಈ ಶಿಲ್ಪದಲ್ಲಿನ ಆಮೆಯ ದೇಹ ಲಕ್ಷಣ, ಆಕಾರದ ಆಧಾರದ ಮೇಲೆ ಇದೊಂದು ಕಡಲಾಮೆಯಾಗಿದ್ದು, ಕಿಲೋನಿಯಾ (*Chelonia*) ಗಣದ, ಕಿಲೋನಿಡೆ (*Chelonidae*) ಕುಟುಂಬಕ್ಕೆ ಸೇರಿದ ಹಸಿರು ಆಮೆ ಎಂದು ಗುರುತಿಸಲಾಗಿದ್ದು, ಕಿಲೋನಿಯ ಮೈದಾಸ್ (*Chelonia mydas*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ. ಇದೇ ತಳಿಯ ಮತ್ತೊಂದು ಕೂರ್ಮಾವತಾರ ಶಿಲ್ಪ ಇದೇ ದೇವಾಲಯದ ಪ್ರವೇಶದ್ವಾರದ, ಪಟ್ಟಿಕೆಯಲ್ಲಿ ಹಾಗೂ ಮಾಲ್ಯವಂತ ರಘುನಾಥ, ಪಟ್ಟಾಭಿರಾಮ, ವಿಜಯವಿಠಲ ದೇವಾಲಯಗಳಲ್ಲೂ ಸಹ ಕೆತ್ತಲಾಗಿದೆ. ಉಳಿದ ಹಂಪಿ ಪರಿಸರದ ದೇವಾಲಯಗಳಲ್ಲಿನ ನರಮೃಗ ರೂಪದ ಕೂರ್ಮಾವತಾರ ಶಿಲ್ಪಗಳಲ್ಲಿನ ಆಮೆಯ ದೇಹದ ಲಕ್ಷಣ, ಆಕಾರದ ಮೇಲೆ ಅವು ಕಿಲೋನಿಯ ಗಣದ ಟೆಸ್ಟುಡಿನಿಡೆ (*Testudinidae*) ಮತ್ತು ಬಟಾಗುರಿಡೆ (*Bataguridae*) ಕುಟುಂಬಕ್ಕೆ ಸೇರಿದ ಬೆಟ್ಟದ ಆಮೆ, ಕಾಡು ಆಮೆ, ಕಲ್ಲಾಮೆ ಎಂದು ಗುರುತಿಸಲಾಗಿದೆ. ಇದರ ವೈಜ್ಞಾನಿಕ ಹೆಸರು ಇಂಡೋಟೆಸ್ಟುಡೊ ಫಾರಸ್ಟಿನೀ (*Indotestudo Forestini*).[೧೫]



ಈ ದೇವಾಲಯದಲ್ಲಿ ಮೃಗರೂಪ ಕೂರ್ಮದ ೩೯ ಶಿಲ್ಪಗಳಿದ್ದು, ಅದರಲ್ಲಿ ಪ್ರಮುಖವಾದ ಶಿಲ್ಪವೆಂದರೆ ನೂರು ಕಂಬಗಳ ಮಂಟಪದಲ್ಲಿನ ೬೫ನೇ ಕಂಬದಲ್ಲಿನ ಶಿಲ್ಪ. ಇದು ಕಂಬದ ಮಧ್ಯಭಾಗದಲ್ಲಿದ್ದು ಉತ್ತರಾಭಿಮುಖವಾಗಿದೆ. ಈ ಶಿಲ್ಪದಲ್ಲಿ ಕೂರ್ಮವು ಮೀನಿನ ಮೇಲೆ ನಿಂತುಕೊಂಡಿರುವಂತೆ ಬಿಡಿಸಲಾಗಿದೆ. ಆಮೆಯ ಕವಚದ ಮಧ್ಯಭಾಗದಲ್ಲಿ ಗೆರೆಯನ್ನು ತೋರಲಾಗಿದ್ದು ತಲೆಯು ಬಲಭಾಗಕ್ಕೆ ಸ್ವಲ್ಪ ವಾಲಿಕೊಂಡಂತೆ ಕೆತ್ತಲಾಗಿದೆ.



ಪ್ರವೇಶದ್ವಾರ, ಅಚ್ಯುತರಾಯ
ದೇವಾಲಯ, ಹಂಪಿ



ನೂರು ಕಂಬಗಳ ಮಂಟಪ,
ಅಚ್ಯುತರಾಯ ದೇವಾಲಯ, ಹಂಪಿ

ವಿಷ್ಣುವಿನ ದಶಾವತಾರಗಳಲ್ಲಿ ಮೊದಲನೆಯದು ಮತ್ಸ್ಯಾವತಾರ. ಎರಡನೆಯದು ಕೂರ್ಮವತಾರ. ಇಲ್ಲಿ ಮೀನಿನ ಮೇಲೆ ಆಮೆ ಇರುವುದು ಮತ್ಸ್ಯಾವತಾರದ ನಂತರವೇ ಕೂರ್ಮಾವತಾರ ಎಂಬುದನ್ನು ಈ ಶಿಲ್ಪವು ತಿಳಿಸುತ್ತದೆಂದು ಹೇಳಬಹುದು. ಹಾಗಾಗಿ ಈ ಶಿಲ್ಪ ಇತರೆ ಕೂರ್ಮಾವತಾರ ಶಿಲ್ಪಗಳಿಗೆ ಹೋಲಿಸಿದರೆ ವಿಭಿನ್ನ ಮತ್ತು ವಿಶಿಷ್ಟವಾದದ್ದಾಗಿದ್ದು ಪ್ರಮುಖವಾಗಿದೆ.

ಹಂಪಿ ಪರಿಸರದ ದೇವಾಲಯಗಳಲ್ಲಿನ ಮೃಗರೂಪದ ಕೂರ್ಮಶಿಲ್ಪಗಳು ನೈಜವಾಗಿರುವ ಆಮೆಯನ್ನು ಹೋಲುತ್ತಿದ್ದು, ಆಮೆಯ ಮೇಲಿನ ಭಾಗವನ್ನು ಮಾತ್ರ ತೋರುತ್ತವೆ. ಕೆಳಭಾಗವನ್ನು ತೋರುವುದಿಲ್ಲ. ಆಮೆಯ ಮೇಲಿನ ಹೊರಕವಚದಿಂದ ಮುಖ ಮತ್ತು ಕಾಲುಗಳು ಹೊರಬಂದಿರುವಂತೆ ತೋರಲಾಗಿದೆ. ಕೆಲವೊಂದು ಶಿಲ್ಪಗಳಲ್ಲಿ ಕವಚದ ಮಧ್ಯರೇಖೆಯನ್ನು ತೋರಿದರೆ ಬಹುಪಾಲು ಮೃಗರೂಪದ ಆಮೆಗಳಲ್ಲಿ ಈ ಗೆರೆಯನ್ನು ತೋರಿಲ್ಲ. ಹೊರಕವಚವು ಕೆಲವೊಂದಕ್ಕೆ ದುಂಡಾಗಿದ್ದರೆ, ಮತ್ತೆ ಕೆಲವು ಮೊಟ್ಟೆಯಾಕಾರದಲ್ಲಿ ತೋರಿದ್ದು ಅಲಂಕರಣೆಗಳು ಇಲ್ಲದಂತೆ ಕೆತ್ತಲಾಗಿದೆ. ಕಂಬಗಳಲ್ಲಿರುವ ಚೌಕಕಾರ ಭಾಗದಲ್ಲಿ ಆಮೆಯನ್ನು ಕೋನಾಕಾರದಲ್ಲಿ ಕೆತ್ತಿದ್ದು ಅದರ ತಲೆಯು ಚೌಕಾಕಾರ ಭಾಗದ ಒಂದು ಮೂಲೆಯತ್ತ ಇರುವಂತೆ ಕೆತ್ತಿರುವುದು ಕಂಡುಬರುತ್ತದೆ. ಬಹುತೇಕ ಮೃಗರೂಪದ ಕೂರ್ಮ ಶಿಲ್ಪಗಳಲ್ಲಿನ ಆಮೆಗಳ ದೇಹ ಲಕ್ಷಣ, ಆಕಾರದ ಆಧಾರದ ಮೇಲೆ ಇವು ಕಿಲೋನಿಯ (*Chelonia*) ಗಣದ ಟೆಸ್ಟುಡಿನಿಡೆ (*Testudinidae*) ಮತ್ತು ಬಟಾಗುರಿಡೆ (*Batguridae*) ಕುಟುಂಬಕ್ಕೆ ಸೇರಿದ ಬೆಟ್ಟದ ಆಮೆ, ಕಾಡು ಆಮೆ, ಗುಡ್ಡದ ಆಮೆ, ಕಲ್ಲಾಮೆ ಎಂದು ಗುರುತಿಸಲಾಗಿದೆ.




ಪಟ್ಟಾಭಿರಾಮ ದೇವಾಲಯದ ಮುಖಮಂಟಪದ ಕಂಬದಲ್ಲಿರುವ ಮೃಗರೂಪದ ಕೂರ್ಮ ಶಿಲ್ಪವು ತನ್ನ ನಾಲ್ಕು ಕಾಲುಗಳನ್ನು ಎತ್ತಿರಿಸಿಕೊಂಡು ನಡೆಯುತ್ತಿರುವಂತೆ ತೋರಲಾಗಿದೆ. ಈ ಶಿಲ್ಪದಲ್ಲಿನ ಆಮೆಯ ದೇಹದ ಲಕ್ಷಣಗಳು ಮತ್ತು ಆಕಾರದ ಆಧಾರದ ಮೇಲೆ ಇದನ್ನು ಕಿಲೋನಿಯ ಗಣದ ಟೆಸ್ಟುಡಿನಿಡೆ (*Testudinidae*) ಕುಟುಂಬಕ್ಕೆ ಸೇರಿದ ಕಾಡು ಆಮೆ ಅಥವಾ ತಾರಾ ಆಮೆ (*Star Tortoise*) ಎಂದು ಗುರುತಿಸಲಾಗಿದೆ. ಜಿಯೊಚಿಲೋನ್ ಎಲಿಗನ್ಸ್ (*Geochelone elegans*) ಎಂಬುದು ಇದರ ಶಾಸ್ತ್ರೀಯನಾಮ.[೧೬]




ಕಾಡು / ತಾರಾ ಆಮೆ
ಗಣ : ಕಿಲೋನಿಯಾ
ಕುಟುಂಬ : ಟೆಸ್ಟುಡಿನಿಡೆ



ಪಟ್ಟಾಭಿರಾಮ ದೇವಾಲಯ,
ಕಮಲಾಪುರ

ಅನಂತಶಯಗುಡಿಯ ಅನಂತಶಯನ ದೇವಾಲಯದಲ್ಲಿನ ಒಂದು ನರಮೃಗ ರೂಪದ ಶಿಲ್ಪವು ಸ್ವಲ್ಪ ಭಿನ್ನತೆಯಿಂದ ಕೂಡಿದೆ. ಈ ಶಿಲ್ಪದಲ್ಲಿನ ಕೂರ್ಮವತಾರ ವಿಷ್ಣುವಿನ ಮೇಲಿನ ದೇಹವು ನರ ರೂಪದಲ್ಲಿದ್ದು ಎರಡು ಕೈಗಳಲ್ಲಿ ಶಂಖ, ಚಕ್ರ ಮತ್ತು ಇನ್ನೆರಡು ಕೈಗಳು ಒಂದು ವರದ ಮುದ್ರೆಯಲ್ಲಿದೆ. ಮತ್ತೊಂದು ಅಭಯ ಮುದ್ರೆಯ ಬದಲೂ ಕೆಳಕ್ಕೆ ನೇರವಾಗಿ ಇಳಿಬಿಟ್ಟಿರುವ ಹಾಗೆ ತೋರಲಾಗಿದೆ. ಕೆಳಗಿನ ಅರ್ಧಭಾಗವು ಆಮೆಯದ್ದಾಗಿದ್ದು ಚಿಪ್ಪಿನ ಮೇಲ್ಭಾಗದ ಅಂಚಿನ ಸುತ್ತಲೂ ಗೆರೆಯನ್ನು ಬಿಡಿಸಲಾಗಿದೆ. ಜೊತೆಗೆ ಸಮಭಂಗಿಯಲ್ಲಿ ನಿಂತಿರದೆ ಎಡಭಾಗಕ್ಕೆ ಬಾಗಿಕೊಂಡಿರುವುದು ವಿಭಿನ್ನತೆಯನ್ನು ತೋರಿಸುತ್ತದೆ.

ಈ ಕುರ್ಮಾವತಾರ ಶಿಲ್ಪದಲ್ಲಿನ ಆಮೆಯ ದೇಹಲಕ್ಷಣ, ಆಕಾರದ ಆಧಾರದ ಮೇಲೆ ಇದನ್ನು ಬಟಾಗುರಿಡೆ (*Batguridae*) ಕುಟುಂಬಕ್ಕೆ ಸೇರಿದ ಕಾಡು ಬೆತ್ತ ಆಮೆ ಅಥವಾ ಬಂಡೆ ಆಮೆ ಎಂದು ಗುರುತಿಸಲಾಗಿದ್ದು, ಜಿಯಾಮ್ ಸಿಲ್‌ವ್ಯಾಟಿಕ (*Giams Selvatica*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೭] ಹಜಾರರಾಮ, ವಿರೂಪಾಕ್ಷ, ಕೃಷ್ಣ ಹಾಗೂ ತಿಮ್ಮಲಾಪುರದ ವೇಣುಗೋಪಾಲಸ್ವಾಮಿ ದೇವಾಲಯಗಳ ಕೂರ್ಮಾವತಾರ ಶಿಲ್ಪಗಳಲ್ಲಿನ ಆಮೆಗಳು ಸಹ ಇದೇ ತಳಿಯವು ಎಂದು ಗುರುತಿಸಲಾಗಿದೆ. ಈ ಮೇಲೆ ವಿವರಿಸಿದ ಕೆಲವು ಭಿನ್ನತೆಯುಳ್ಳ ಶಿಲ್ಪಗಳನ್ನು ಹೊರತುಪಡಿಸಿದರೆ ಹಂಪಿ ಪರಿಸರದಲ್ಲಿನ ಬಹುತೇಕ ಉಬ್ಬುಶಿಲ್ಪಗಳೆಲ್ಲವೂ ಒಂದೇ ರೀತಿಯಲ್ಲಿವೆ.



ಕೂರ್ಮಾವತಾರ ಶಿಲ್ಪ,
ಅನಂತಶಯನ ದೇವಾಲಯ,
ಅನಂತಶಯನಗುಡಿ

ಹಂಪಿ ಪರಿಸರದಲ್ಲಿನ ಬಹುತೇಕ ಕೂರ್ಮವತಾರ ಶಿಲ್ಪಗಳು ದೇವಾಲಯಗಳ ಕಂಬಗಳಲ್ಲಿನ ಉಬ್ಬುಶಿಲ್ಪಗಳಾಗಿವೆ. ಆದರೆ ಆನೆಗುಂದಿಯಲ್ಲಿರುವ ಚಿಂತಾಮಣಿ ಮಠದ ಬಳಿ ಕೂರ್ಮವತಾರ ವಿಷ್ಣುವಿನ ಒಂದು ಬಿಡಿಶಿಲ್ಪ ಕಂಡುಬಂದಿದೆ.



ಕಲ್ಲಾಮೆ
ಗಣ : ಕಿಲೋನಿಯಾ
ಕುಟುಂಬ : ಟೆಸ್ಟುಡಿನಿಡೆ



ಕೂರ್ಮಾವತಾರ ಶಿಲ್ಪ,
ಚಿಂತಾಮಣಿ ಮಠ, ಆನೆಗುಂದಿ

ಈ ಕೂರ್ಮಾವತಾರ ಶಿಲ್ಪದಲ್ಲಿನ ಆಮೆಯು ದೇಹ ರಚನೆ, ಲಕ್ಷಣ, ಆಕಾರದ ಆಧಾರದ ಮೇಲೆ ಇದನ್ನು ಟೆಸ್ಟುಡಿನಿಡೆ (*Testudinidae*) ಕುಟುಂಬಕ್ಕೆ ಸೇರಿದ ಕಲ್ಲಾಮೆ ಎಂದು ಗುರುತಿಸಲಾಗಿದೆ. ಇಂಡೊಟೆಸ್ಟುಡೊ ಫಾರಸ್ಟೈನೀ (*Indotestudo Farastaini*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ.[೧೮] ಕಪ್ಪುಶಿಲೆಯ ಈ ಶಿಲ್ಪವನ್ನು ಒಂದು ಗರ್ಭಗೃಹದಂತಿರುವ ರಚನೆಯಲ್ಲಿ ಇಟ್ಟು ಪೂಜಿಸಲಾಗುತ್ತಿದೆ. ಈ ಶಿಲ್ಪವು ಬಿಡಿಯಾಗಿರುವುದರಿಂದ ಬಹುಶಃ ಇದನ್ನು ಯಾವುದೋ ದೇವಾಲಯದಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದರು ಎಂದು ಊಹಿಸಬಹುದು. ಕಾಲಕ್ರಮದಲ್ಲಿ ಈ







ದೇವಾಲಯ ನಾಶವಾಗಿ ಅಲ್ಲಿದ್ದ ಶಿಲ್ಪವನ್ನು ಪ್ರಸ್ತುತ ಇರುವ ಜಾಗಕ್ಕೆ ತಂದಿರುವ ಸಾಧ್ಯತೆಯಿದೆಯೆಂದು ಹೇಳಬಹುದು. ಈ ಶಿಲ್ಪವು ನರಮೃಗ ರೂಪದ ಕೂರ್ಮವತಾರ ಶಿಲ್ಪವಾಗಿದ್ದು ಇದಕ್ಕೂ ಮುಂಚೆ ವಿವರಿಸಿರುವ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಆಯತಾಕಾರದ ಪೀಠದಂತೆ ಇರುವ ಭಾಗದಲ್ಲಿ ಮೂರ್ತಿಶಿಲ್ಪವು ನಿಂತಂತೆ ತೋರಿರುವುದರಿಂದ ಈ ಶಿಲ್ಪವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿತ್ತು ಎಂದು ಊಹಿಸಬಹುದು. ಇದು ಹಂಪಿ ಪರಿಸರದಲ್ಲಿ ದೊರಕಿರುವ ಏಕೈಕ ಕೂರ್ಮಾವತಾರದ ಬಿಡಿ ಶಿಲ್ಪವಾಗಿದ್ದು, ಶಿಲ್ಪದ ಶೈಲಿಯ ಆಧಾರದಿಂದ ಇದು ಕ್ರಿ.ಶ.೧೬–೧೭ನೇ ಶತಮಾನಕ್ಕೆ ಸೇರುತ್ತದೆ ಎಂದು ತಿಳಿದುಬರುತ್ತದೆ.[೧೯]

ಹಂಪಿ ಪರಿಸರದ ಕೂರ್ಮವತಾರ ಶಿಲ್ಪಗಳಲ್ಲಿ ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ಇಲ್ಲಿರುವ ಬಹುತೇಕ ಉಬ್ಬುಶಿಲ್ಪಗಳೆಲ್ಲವೂ ಒಂದೇ ರೀತಿಯಲ್ಲಿವೆ. ಆ ಉಬ್ಬುಶಿಲ್ಪಗಳನ್ನು ವಿವಿಧ ಶಿಲ್ಪಿಗಳು ಕೆತ್ತಿರುವುದರಿಂದ ಇಂತಹ ಸಣ್ಣಪುಟ್ಟ ವ್ಯತ್ಯಾಸಗಳು ಕಂಡುಬರುತ್ತವೆಂದು ಅಭಿಪ್ರಾಯಪಡಬಹುದು. ಹಂಪಿ ಪರಿಸರದಲ್ಲಿ ಕೂರ್ಮವತಾರ ವಿಷ್ಣುವು ಇತರೆ ಅವತಾರಕ್ಕಿಂತ ಹೆಚ್ಚು ಪ್ರಸಿದ್ಧಿ ಮತ್ತು ಮನ್ನಣೆಯನ್ನು ಪಡೆದಿತ್ತು ಎಂಬುದು ಅಧಿಕ ಸಂಖ್ಯೆಯಲ್ಲಿ ದೊರೆತಿರುವ ಕೂರ್ಮವತಾರ ಶಿಲ್ಪಗಳಿಂದ ದೃಢಪಡುತ್ತದೆ. ಮತ್ತು ಶಿಲ್ಪಿಯಾದವನು ಕೂರ್ಮಾವತಾರದ ಶಿಲ್ಪಗಳನ್ನು ಕೆತ್ತುವಾಗ ವಿವಿಧ ತಳಿಗಳ ಆಮೆಗಳನ್ನು ಬಿಡಿಸಿರುವುದು ಸೂಕ್ಷ್ಮವಾಗಿ ಗಮನಿಸಿದಾಗ ನಮಗೆ ತಿಳಿದುಬರುತ್ತದೆ.

ವರಾಹಾವತಾರ

ವಿಷ್ಣುವಿನ ಪ್ರಸಿದ್ಧ ದಶಾವತಾರಗಳಲ್ಲಿ ಮತ್ಸ್ಯ ಮತ್ತು ಕೂರ್ಮ ಎಂಬ ಎರಡು ಅವತಾರಗಳ ನಂತರ ಮೂರನೆಯ ಅವತಾರವೇ ವರಾಹಾವತಾರ. ಶತಪಥ ಬ್ರಾಹ್ಮಣದಲ್ಲಿ ಈ ಅವತಾರವನ್ನು ಕುರಿತಾದ ಮೊದಲ ಉಲ್ಲೇಖವಿದೆ. ಅದರಂತೆ ವರಾಹ (ಹಂದಿ) ಕೆಳಗಿನಿಂದ (ಪಾತಾಳದಿಂದ) ಭೂಮಿಯನ್ನು ಮೇಲೆತ್ತಿದಂತೆ ಉಲ್ಲೇಖಿಸಲಾಗಿದೆ. ತ್ರೈತ್ತಿರೀಯ ಸಂಹಿತೆಯಲ್ಲಿ ಈ ಅವತಾರವನ್ನು ಪ್ರಜಾಪತಿಯ ಅವತಾರವೆಂದು ಗುರುತಿಸಲಾಗಿದೆ. ಮಹಾಕಾವ್ಯಗಳು ಮತ್ತು ಪುರಾಣಗಳು ಈ ನಂಬಿಕೆ ಮತ್ತು ಐತಿಹ್ಯಗಳ ಅಂತಿಮ ಘಟ್ಟವಾಗಿದ್ದು, ಅವುಗಳು ವರಾಹ ಅಥವಾ ಹಂದಿಯನ್ನು ವಿಷ್ಣುವಿನ ಅವತಾರ ಎಂದು ನಿಶ್ಚಯಿಸಿವೆ. ತ್ಯಾಗಮಯಿ ಮತ್ತು ಲೋಕರಕ್ಷಕನಾದ ವಿಷ್ಣವು ಪಾತಾಳದಿಂದ ಭೂಮಿಯನ್ನು ರಕ್ಷಿಸಿ ಮೇಲೆತ್ತಿ ಅದನ್ನು ಪುನರ್ ನಿರ್ಮಿಸಲು ಇಚ್ಛಿಸಿದ್ದರಿಂದ ವಿಷ್ಣುವು ಈ ಅವತಾರವನ್ನು ತಳೆದನು ಎಂದು ಭಾಗವತ ಪುರಾಣವು ಉಲ್ಲೇಖಿಸುತ್ತದೆ. ಆದರೆ ಮಹಾಭಾರತದಲ್ಲಿ ವರಾಹ ಅವತಾರವಾದುದು ಪ್ರಾಣಿ ಸಂಖ್ಯಾ ಸ್ಫೋಟದ ಪರಿಣಾಮವೆಂದು ವರ್ಣಿಸಲಾಗಿದೆ. "ಈ ಜಗತ್ತಿನಲ್ಲಿ ಒಮ್ಮೆ ಮನುಷ್ಯರೂ, ಪ್ರಾಣಿಗಳು ಅಸಂಖ್ಯಾತವಾಗಿ ಬೆಳೆದಾಗ ಆ ಭಾರವನ್ನು ಭೂಮಿಗೆ ತಾಳಿಕೊಳ್ಳಲು ಸಾಧ್ಯವಾಗಲಿಲ್ಲ. ಅದು ನೂರು ಯೋಜನಗಳಷ್ಟು ಆಳಕ್ಕೆ ಕುಸಿದು ಹೋಯಿತು. ಆಗ ಮಹಾವಿಷ್ಣುವು ಒಂದೇ ದಾಡೆಯುಳ್ಳ ವರಾಹನಾಗಿ ಅದನ್ನು ಮೇಲಕ್ಕೆ ಎತ್ತಿದನು.[೨೦] ಅಲ್ಲಿ ಯಜ್ಞವರಾಹನೆಂದಾಗಲಿ, ಶ್ವೇತವರಾಹನೆಂದಾಗಲಿ ವರ್ಣಿಸಲ್ಪಟ್ಟಿಲ್ಲ. ಹಿರಣ್ಯಕ್ಷನನ್ನು ಕೊಂದ ಕಥೆಯೂ ಇಲ್ಲ. ಆದರೆ ಶ್ರೀ ಮದ್ಭಾಗವತದಲ್ಲಿ ವರಾಹಾವತಾರದ ಉದ್ದೇಶ ಬೇರೆಯೇ ಇದೆ.

ವಿಷ್ಣುಪುರಾಣ, ಲಿಂಗಪುರಾಣ ಮತ್ತು ಗರುಡ ಪುರಾಣಗಳಲ್ಲಿ ಬ್ರಹ್ಮನು ಸಾಗರದಿಂದ ಭೂಮಿಯನ್ನು ಎತ್ತಿದನು ಎಂದು ತಿಳಿದುಬರುತ್ತದೆ. ಆದರೆ ಇದೇ ಸಮಯದಲ್ಲಿ ಬ್ರಹ್ಮನನ್ನು ವಿಷ್ಣುವಿನೊಂದಿಗೆ ಸಮೀಕರಿಸಲಾಗುತ್ತದೆ. ತಾನೇ ಬಲಶಾಲಿಯೆಂದು ಗರ್ವವನ್ನು ಹೊಂದಿದ್ದ ಹಿರಣ್ಯಾಕ್ಷ ಎಂಬ ಅಸುರರ ದೊರೆಯು ದೇವತೆಗಳನ್ನು ಸೋಲಿಸಿ ಅವರ ಇಂದ್ರಲೋಕವನ್ನು ವಶಪಡಿಸಿಕೊಳ್ಳುತ್ತಾನೆ ಎಂದು ಅಗ್ನಿ ಪುರಾಣವು ಉಲ್ಲೇಖಿಸುತ್ತದೆ. ಆಗ ದೇವತೆಗಳು ವಿಷ್ಣುವಿನ ಸಹಾಯವನ್ನು ಬೇಡುತ್ತಾರೆ. ವಿಷ್ಣುವು ಬ್ರಹ್ಮನ ಮೂಗಿನಿಂದ ವರಾಹ ಅವತಾರವನ್ನು ತಾಳಿ ಹಿರಣ್ಯಾಕ್ಷನನ್ನು ಕೊಲ್ಲುತ್ತಾನೆ. ನಂತರ ಕಾಲದ ಸಾಹಿತ್ಯ ಬರವಣಿಗೆಗಳಲ್ಲಿ ವರಾಹ ಅವತಾರವನ್ನು ವಿಷ್ಣುವು ಮಾತ್ರ ತಳೆದನೆಂದು ದಾಖಲಿಸುತ್ತವೆ. ಆಗಮಗಳು ಮತ್ತು ತಂತ್ರಗಳು ಸಹ ಇದನ್ನೇ ಪ್ರತಿಪಾದಿಸುತ್ತವೆ.[೨೧]

ವೈಖಾಸನ ಆಗಮದಂತೆ ವರಾಹನ ಮುಖವು ಹಂದಿಯುದಾಗಿದ್ದು ದೇಹವು ಮನುಷ್ಯನದ್ದಾಗಿರಬೇಕು. ಅವನಿಗೆ ನಾಲ್ಕು ಕೈಗಳಿದ್ದು ಅವುಗಳಲ್ಲಿ ಎರಡು ಕೈಗಳು ಶಂಖ ಮತ್ತು ಚಕ್ರವನ್ನು ಹಿಡಿದಿರಬೇಕು. ಬಲಗಾಲು ಸ್ವಲ್ಪ ಬಾಗಿದಂತೆಯಿದ್ದು ನಾಗದೇವತೆಯಾದ ಆಭರಣ ಖಚಿತ ಆದಿಶೇಷನ ಹೆಡೆಯ ಮೇಲೆ ಇರಿಸಿರಬೇಕು. ಮತ್ತು ಆತನು ತನ್ನ ಪತ್ನಿಯರೊಂದಿಗೆ ಇರಬೇಕು. ವರಾಹನ ಉಳಿದ ಎರಡು ಕೈಗಳಲ್ಲಿ ಎಡಗೈ ಭೂದೇವಿಯನ್ನು ಹೊತ್ತಿರುವಂತೆಯೂ, ದೇವಿಯು ವರಾಹದ ಬಾಗಿದ ಕಾಲಿನ ಮೇಲೆ ಕುಳಿತಂತೆ ಇದ್ದು ತನ್ನ ಕಾಲುಗಳನ್ನು ಇಳಿಬಿಟ್ಟಿರಬೇಕು. ವರಾಹದ ಬಲಗೈ ದೇವಿಯ ನಡುವನ್ನು ಬಳಸಿರಬೇಕು. ವರಾಹದ ಮುಖವು ಸ್ವಲ್ಪ ಎತ್ತಿದಂತೆ ಇದ್ದು ಅದರ ಮೂರ್ತಿಯು ದೇವಿಯ ವಾಸನೆಯನ್ನು ಆಸ್ವಾದಿಸುತ್ತಿರಬೇಕು. ವರಾಹದ ಬಣ್ಣವು ಸಂಜೆಯ ನಸುಗತ್ತಲೆಯಂತಿರಬೇಕು. ಹಾಗೂ ಭೂದೇವಿಯು ಸೂಕ್ತ ಆಭರಣಗಳೊಂದಿಗೆ ಅಂಜಲಿ ಮುದ್ರೆಯಲ್ಲಿರಬೇಕು. ಆಕೆಯ ಮುಖವು ಸ್ವಲ್ಪ ಎತ್ತಿದ್ದು ದೇವರನ್ನು ನಾಚಿಕೆ ಮತ್ತು ಸಂತೋಷದಿಂದ ನೋಡುತ್ತಿರಬೇಕು. ಆಕೆಯು ತಲೆಯು ವರಾಹದ ವೃಕ್ಷಸ್ಥಲದವರೆಗೆ ಇರಬೇಕು ಮತ್ತು ಈಕೆಯನ್ನು ಪಂಚತಲ ಅಳತೆಯಲ್ಲಿ ಕೆತ್ತಬೇಕೆಂಬುದಾಗಿ ತಿಳಿದುಬರುತ್ತದೆ.[೨೨] ಈ ರೀತಿಯ ವರಾಹಾವತಾರದ ಶಿಲ್ಪಗಳು ಹಂಪಿ ಪರಿಸರದ ಹಲವು ದೇವಾಲಯಗಳಲ್ಲಿ ಕಂಡುಬಂದಿದ್ದು ಅವುಗಳ ಕೋಷ್ಟಕವನ್ನು ಈ ಕೆಳಗೆ ನೀಡಲಾಗಿದೆ.

ವರಾಹಾವತಾರ ಶಿಲ್ಪಗಳ ಕೋಷ್ಟಕ

ಕ್ರಸಂ.	ದೇವಾಲಯಗಳು	ನರಮೃಗರೂಪ	ಮೃಗರೂಪ	ಒಟ್ಟು
೦೧.	ಅಚ್ಯುತರಾಯ ದೇವಾಲಯ, ಹಂಪಿ	೩	೩	೬
೦೨.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೨	೦	೨
೦೩.	ಪಟ್ಟಾಭಿರಾಮ ದೇವಾಲಯ, ಕಮಲಾಪುರ	೧	೨	೩
೦೪.	ವಿಜಯವಿಠಲ ದೇವಾಲಯ, ಹಂಪಿ	೧	೨	೩
೦೫.	ಕೃಷ್ಣ ದೇವಾಲಯ, ಹಂಪಿ	೩	೧	೪
೦೬.	ವಿರೂಪಾಕ್ಷ ದೇವಾಲಯ, ಹಂಪಿ	೩	೧	೪

ಕ್ರಸಂ.	ದೇವಾಲಯಗಳು	ನರಮೃಗರೂಪ	ಮೃಗರೂಪ	ಒಟ್ಟು
೦೭.	ಹಜಾರರಾಮ ದೇವಾಲಯ, ಹಂಪಿ	೩	೦	೩
೦೮.	ಭಾ.ಪು.ಸ, ವಸ್ತುಸಂಗ್ರಹಾಲಯ, ಕಮಲಾಪುರ	೧	೦	೧
೦೯.	ಕೋಟೆಶಂಕರದೇವಾಲಯ, ಹಂಪಿ	೧	೦	೧
೧೦.	ಮಲ್ಲಿಕಾರ್ಜುನ ದೇವಾಲಯ, ಮಲಪನಗುಡಿ	೦	೧	೧
೧೧.	ಗೆಜ್ಜಲಮಂಟಪ, ಹಂಪಿ	೩	೦	೩
	ಒಟ್ಟು	೨೧	೧೦	೩೧

ಹಂಪಿ ಪರಿಸರದಲ್ಲಿ ಒಟ್ಟು ಸುಮಾರು ೩೧ ವರಾಹ ಅವತಾರದ ಶಿಲ್ಪಗಳು ಕಂಡುಬಂದಿದ್ದು ಇದರಲ್ಲಿ ೨೧ ನರಮೃಗ ರೂಪದ ಶಿಲ್ಪಗಳು ೧೦ ಮೃಗರೂಪದ ಶಿಲ್ಪಗಳಾಗಿವೆ. ಇಲ್ಲಿ ವರಾಹದ ಬಿಡಿಶಿಲ್ಪ ಮತ್ತು ಉಬ್ಬುಶಿಲ್ಪಗಳೆರಡೂ ದೊರಕಿವೆ. ಇಲ್ಲಿನ ಬಹುಪಾಲು ಶಿಲ್ಪಗಳು ದೇವಾಲಯಗಳಲ್ಲಿ ಕಂಡುಬರುತ್ತವೆ. ಅಂದರೆ ದೇವಾಲಯದ ಕಂಬಗಳು ಬಾಗಿಲವಾಡದ ಲತಾಸುರಳಿ ಅಲಂಕರಣೆ ಮತ್ತು ಇತರೆ ಭಾಗಗಳಲ್ಲಿ ದಶಾವತಾರ ಶಿಲ್ಪಗಳಲ್ಲಿ ವರಾಹನನ್ನು ಕಿರು ಉಬ್ಬುಶಿಲ್ಪಗಳಾಗಿ ತೋರಲಾಗಿದೆ. ಹಾಗೆಯೇ ಕೆಲವು ಕಡೆ ವರಾಹನ ಬಿಡಿಶಿಲ್ಪಗಳೂ ಸಹ ದೊರಕಿದ್ದು ಅವುಗಳೆಲ್ಲವನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ನರಮೃಗ ರೂಪದ ವರಾಹ ಅವತಾರಗಳಲ್ಲಿ ಭೂವರಾಹ, ಯಜ್ಞವರಾಹ ಮತ್ತು ಪ್ರಳಯ ವರಾಹ ಎಂಬ ಮೂರು ಪ್ರಕಾರಗಳನ್ನು ನೋಡಬಹುದು. ಈ ಮೂರು ಪ್ರಕಾರದ ವರಾಹ ಅವತಾರದ ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬಂದಿದ್ದು, ಅದರಲ್ಲಿ ಭೂವರಾಹ ಶಿಲ್ಪಗಳೇ ಹೆಚ್ಚಾಗಿ ಕಂಡುಬಂದಿರುತ್ತವೆ. ಇದರೊಂದಿಗೆ ವ್ಯಾಖ್ಯಾನ ವರಾಹ ಎಂಬ ಉಬ್ಬುಶಿಲ್ಪವನ್ನು ಹೊಸದಾಗಿ ಇಲ್ಲಿ ಪರಿಚಯಿಸಲಾಗಿದೆ.

ಹಂಪಿ ಪರಿಸರದಲ್ಲಿ ಒಟ್ಟು ೨೧ ನರಮೃಗ ರೂಪದ ವರಾಹ ಶಿಲ್ಪಗಳು ದೊರಕಿದ್ದು ಅಚ್ಯುತರಾಯ ದೇವಾಲಯದ ಉತ್ತರದ ಪ್ರವೇಶ ದ್ವಾರಗೋಪುರದ ಪಟ್ಟಿಕೆಯಲ್ಲಿ ೩ ಶಿಲ್ಪಗಳು ಕಂಡುಬಂದಿವೆ. ಈ ಮೂರು ಶಿಲ್ಪಗಳು ಒಂದೇ ರೀತಿಯಾಗಿದ್ದು ಒಂದು ಶಿಲ್ಪವನ್ನು ಮಾತ್ರ ಸರಿಯಾಗಿ ಕೆತ್ತಲ್ಪಟ್ಟಿಲ್ಲ. ಈ ಶಿಲ್ಪಗಳಲ್ಲಿ ವರಾಹ ಮೂರ್ತಿಯು ಒಂದು ಪೀಠದ ಮೇಲೆ ಕುಳಿತು ಎಡಗಾಲನ್ನು ಮಡಚಿಕೊಂಡಿದ್ದು ಬಲಗಾಲನ್ನು ಇಳಿಬಿಟ್ಟಿರುವನು. ವರಾಹನಿಗೆ ನಾಲ್ಕು ಕೈಗಳಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿರುವಂತೆ ತೋರಲಾಗಿದೆ. ವರಾಹವು ವಿವಿಧ ಆಭರಣಗಳ ಜೊತೆಗೆ ಧೋತಿಯನ್ನು ಧರಿಸಿದ್ದಾನೆ. ಶಿಲ್ಪಗಳಲ್ಲಿನ ವರಾಹನ ಮುಖವು ಹಂದಿಯದ್ದಾಗಿದ್ದು, ಸಂಪೂರ್ಣ ಬಲಭಾಗಕ್ಕೆ ತಿರುಗಿರುವಂತೆ ತೋರಲಾಗಿದೆ.


ಕೃಷ್ಣ ದೇವಾಲಯದಲ್ಲಿ ಎರಡು ಭೂವರಾಹ, ಒಂದು ಪ್ರಳಯ ವರಾಹ ಶಿಲ್ಪಗಳು ಕಂಡುಬಂದಿದ್ದು ಇಲ್ಲಿನ ಭೂವರಾಹ ಶಿಲ್ಪಗಳು ಅಚ್ಯುತರಾಯ ದೇವಾಲಯದಲ್ಲಿನ ಭೂವರಾಹ



ಭೂವರಾಹ ಶಿಲ್ಪ, ಕೃಷ್ಣ
ದೇವಾಲಯ, ಹಂಪಿ



ಪ್ರಳಯ ವರಾಹ ಶಿಲ್ಪ, ಕೃಷ್ಣ
ದೇವಾಲಯ, ಹಂಪಿ



ವ್ಯಾಖ್ಯಾನ ವರಾಹ ಶಿಲ್ಪ,
ವಿರೂಪಾಕ್ಷ ದೇವಾಲಯ, ಹಂಪಿ



ಪ್ರಳಯ ವರಾಹ ಶಿಲ್ಪ, ಭಾರತೀಯ ಪುರಾತತ್ವ ಸರ್ವೇಕ್ಷಣ
ಇಲಾಖೆಯ ವಸ್ತುಸಂಗ್ರಹಾಲಯ, ಕಮಲಾಪುರ









ಶಿಲ್ಪಗಳನ್ನೇ ಹೋಲುತ್ತವೆ. ಆದರೆ ಕೃಷ್ಣ ದೇವಾಲಯದ ವರಾಹದ ಮುಖವು ಪಕ್ಕಕ್ಕೆ ನೋಡದೇ ನೇರವಾಗಿ ಮುಂದಕ್ಕೆ ನೋಡುತ್ತಿರುವಂತೆ ತೋರಲಾಗಿರುವುದು ಭಿನ್ನತೆಯನ್ನು ತೋರಿಸುತ್ತದೆ. ಪ್ರಳಯ ವರಾಹದ ಶಿಲ್ಪದಲ್ಲಿ ವರಾಹನು ಒಂದು ಪೀಠದ ಮೇಲೆ ಕುಳಿತಿದ್ದು ಎಡಗಾಲನ್ನು ಮಡಚಿಕೊಂಡಿದ್ದು ಬಲಗಾಲನ್ನು ಸಂಪೂರ್ಣವಾಗಿ ಇಳಿಬಿಟ್ಟಂತೆ ಕೆತ್ತಲಾಗಿದೆ. ಇನ್ನುಳಿದಂತೆ ಕೀರ್ತಿಮುಖದ ಕೋಷ್ಟಕದಲ್ಲಿ ಈ ಶಿಲ್ಪವನ್ನು ಕೆತ್ತಿದ್ದು ಮುಖಭಾಗವು ನೇರವಾಗಿದ್ದು ಮುಂದೆ ನೋಡುತ್ತಿದೆ.

ವಿರೂಪಾಕ್ಷ ದೇವಾಲಯದಲ್ಲಿಯೂ ಸಹ ಮೂರು ನರಮೃಗ ರೂಪದ ವರಾಹವತಾರ ಶಿಲ್ಪಗಳಿದ್ದು, ಅವುಗಳಲ್ಲಿ ಒಂದು ವ್ಯಾಖ್ಯಾನ ವರಾಹ ಶಿಲ್ಪವಾಗಿದೆ. ಈ ವ್ಯಾಖ್ಯಾನ ವರಾಹ ಶಿಲ್ಪವು ವಿರೂಪಾಕ್ಷ ದೇವಾಲಯದ ದಕ್ಷಿಣದ ಪ್ರಕಾರ ಗೋಡೆಯ ಸಾಲುಮಂಟಪದ ಕಂಬದ ಮಧ್ಯಪಟ್ಟಿಕೆಯಲ್ಲಿದ್ದು ಪೂರ್ವಾಭಿಮುಖವಾಗಿದೆ. ವರಾಹನು ಒಂದು ಪೀಠದ ಮೇಲೆ ಕುಳಿತಿದ್ದು ತನ್ನ ಎಡಗಾಲಿನ ಮೇಲೆ ಬಲಗಾಲನ್ನು ಹಾಕಿರುವಂತೆ ತೋರಲಾಗಿದೆ. ಈ ಶಿಲ್ಪದಲ್ಲಿನ ವರಾಹನಿಗೆ ಎರಡು ಕೈಗಳಿದ್ದು ಬಲಗೈನಲ್ಲಿ ಬೆರಳುಗಳನ್ನು ಆಡಿಸುತ್ತಿರುವಂತೆ, ಎಡಗೈನಲ್ಲಿನ ಬೆರಳುಗಳನ್ನು ನೇರವಾಗಿ ಇಟ್ಟುಕೊಂಡಂತೆ ಬಿಡಿಸಲಾಗಿದೆ. ವರಾಹನ ಮುಖವು ಬಲಭಾಗಕ್ಕೆ ತಿರುಗಿದ್ದು ಬಲಗೈನ ಬೆರಳುಗಳನ್ನು ನೋಡುತ್ತಿರುವಂತೆ ಹಾಗೂ ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಂತೆ ಕೆತ್ತಲಾಗಿದೆ. ಇದೇ ರೀತಿಯ ವ್ಯಾಖ್ಯಾನ ವರಾಹ ಶಿಲ್ಪಗಳು ಹಂಪಿಯ ಕೋಟೆಶಂಕರದೇವಾಲಯ ಮತ್ತು ಗೆಜ್ಜಲಮಂಟಪದಲ್ಲಿ ಒಂದೊಂದಂತೆ ಕಂಡುಬರುತ್ತವೆ. ಇವು ಸಹ ಈ ಮೇಲೆ ವಿವರಿಸಿದ ಲಕ್ಷಣಗಳನ್ನೇ ಹೊಂದಿವೆ. ಹಾಗಾಗಿ ಇದೊಂದು ವಿಭಿನ್ನ ಮತ್ತು ವೈಶಿಷ್ಟತೆಯನ್ನೇ ಪಡೆದುಕೊಂಡಿದೆ ಎಂದರೆ ತಪ್ಪಾಗಲಾರದು.

ಇದೇ ದೇವಾಲಯದ ಮುಖಮಂಟಪದ ಕಂಬದಲ್ಲಿ ಭೂವರಾಹದ ಸುಂದರ ಶಿಲ್ಪವಿದೆ. ಇದರಲ್ಲಿ ವರಾಹನು ಆದಿಶೇಷನ ಮೇಲೆ ಬಾಗಿದ ಬಲಗಾಲ ಮೇಲೆ ನಿಂತಿದ್ದು ಲಲಿತಾಸನದಲ್ಲಿರುವಂತೆ ಕಾಲನ್ನು ಮಡಚಿರುವನು. ಅದರ ಮೇಲೆ ಭೂದೇವಿಯು ಕುಳಿತಿರುವಳು. ವರಾಹನು ನಾಲ್ಕು ಕೈಗಳನ್ನು ಹೊಂದಿದ್ದು ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿದ್ದು ಮೇಲಿನ ಬಲಗೈ ಚಕ್ರವನ್ನು, ಎಡಗೈ ಶಂಖವನ್ನು ಹಿಡಿದಿದೆ. ಕೆಳಗಿನ ಎಡಗೈ ಭೂದೇವಿಯ ನಡುವನ್ನು ಬಳಸಿದಂತೆ ಹಿಂಬದಿಯಿಂದ ಬಂದು ವರದ ಮುದ್ರೆಯಲ್ಲಿದೆ. ವರಾಹನು ಎಡಬದಿಗೆ ತಿರುಗಿದ್ದು ಭೂದೇವಿಯ ಮುಖವನ್ನು ನೋಡುತ್ತಿರುವಂತೆ ತೋರಲಾಗಿದೆ. ವಿಜಯನಗರ ಶೈಲಿಯಲ್ಲಿ ವರಾಹನ ಮುಖವನ್ನು ನಿಜವಾದ ವರಾಹದ (ಹಂದಿಯ) ಮುಖದಂತೆ ಕೆತ್ತಿರುವುದು ಗಮನಾರ್ಹ. ಮೇಲೆ ವಿವರಿಸಿರುವ ವಿರೂಪಾಕ್ಷ ದೇವಾಲಯದಲ್ಲಿನ ಭೂವರಾಹ ಶಿಲ್ಪವನ್ನು ಹೋಲುವ ಉಬ್ಬುಶಿಲ್ಪಗಳು ವಿಠಲ, ಹಜಾರರಾಮ ದೇವಾಲಯಗಳಲ್ಲಿ ಕಂಡುಬರುತ್ತವೆ. ಈ ಶಿಲ್ಪಗಳು ಒಂದೇ ರೀತಿಯ ಲಕ್ಷಣಗಳನ್ನು ಹೊಂದಿದ್ದು ಸಾಮ್ಯತೆಯನ್ನು ಹೊಂದಿವೆ. ಆದರೆ ಪ್ರಮುಖವಾಗಿ ವರಾಹನ ಮೂರ್ತಿಯು ದಪ್ಪ ಮತ್ತು ದೊಡ್ಡದಾಗಿದ್ದು ಗಮನಾರ್ಹವಾಗಿದೆ. ಈ ಮೂರು ಶಿಲ್ಪಗಳು ವೈಖಾನಸ ಆಗಮದಂತೆ ಕೆತ್ತಲ್ಪಟ್ಟಿವೆ. ಶಿಲ್ಪ ಪಠ್ಯಗಳ ಉಲ್ಲೇಖದಂತೆ ಈ ಶಿಲ್ಪಗಳಿದ್ದರೂ ಕೆಲವು ಅಂಶಗಳಲ್ಲಿ ಭಿನ್ನತೆಯನ್ನು ತೋರಲಾಗಿದೆ.

ಹಜಾರರಾಮ ದೇವಾಲಯದ ರಂಗಮಂಟಪದಲ್ಲಿರುವ ಕಪ್ಪುಶಿಲೆಯ ಕಂಬದ ಮೇಲೆ ಭೂವರಾಹದ ಪ್ರಮುಖ ಉಬ್ಬುಶಿಲ್ಪವಿದೆ. ಅದರಲ್ಲಿ ವರಾಹನು ಒಂದು ಪೀಠದ ಮೇಲೆ ಕುಳಿತ

ಬಲಗಾಲನ್ನು ಇಳಿಬಿಟ್ಟಿರುವನು. ಕುಳಿತ ಪೀಠದ ಮೇಲೆ ಎಡಗಾಲನ್ನು ಮಡಚಿ ಇರಿಸಿದ್ದು ಅವನ ತೊಡೆಯ ಮೇಲೆ ಭೂದೇವಿಯು ಕುಳಿತಿರುವಳು. ವರಾಹನಿಗೆ ನಾಲ್ಕು ಕೈಗಳಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳಿದ್ದರೆ, ಕೆಳಗಿನ ಎಡಗೈ ಭೂದೇವಿಯ ಸೊಂಟವನ್ನು ಬಳಸಿದೆ. ಬಲಗೈ ಮುರಿದಿದ್ದು ಹಾಳಾಗಿದೆ. ವರಾಹನು ಸಾಮಾನ್ಯವಾಗಿ ಧರಿಸುವ ಆಭರಣಗಳನ್ನು ಧರಿಸಿದ್ದಾನೆ. ಶಿಲ್ಪದಲ್ಲಿನ ಭೂದೇವಿಗೆ ಎರಡು ಕೈಗಳಿದ್ದು ಎಡಗೈಯಲ್ಲಿ ತೊಟ್ಟಿರುವ ಹೂವಿನ ಮೊಗ್ಗು ಹಿಡಿದಿದ್ದು ಬಲಗೈ ದೇವರ ಬೆನ್ನ ಹಿಂದಿದ್ದು ಆಲಿಂಗನ ಮಾಡಿರುವಂತೆ ತೋರಲಾಗಿದೆ. ದೇವಿಯು ಸೀರೆಯನ್ನು ಧರಿಸಿದ್ದು ಕಿರೀಟಮಕುಟ, ಹಾರ ಬಳೆ, ಕೈಕಡಗ, ಕಾಲ್ಗಡಗ ಮುಂತಾದ ಆಭರಣಗಳನ್ನು ಧರಿಸಿದ್ದಾಳೆ. ಇವರಿಬ್ಬರೂ ಮಕರತೋರಣಗಳಿರುವ ಪ್ರಭಾವಳಿಯ ನಡುವೆ ಕುಳಿತಂತೆ ತೋರಲಾಗಿದೆ. ಕೀರ್ತಿಮುಖವು ತೋರಣದ ಮಧ್ಯೆ ಮೇಲ್ಭಾಗದಲ್ಲಿದೆ. ಈ ಉಬ್ಬುಶಿಲ್ಪವನ್ನು ಅತ್ಯಂತ ಜಾಗೂರಕತೆಯಿಂದ ಎದ್ದುಬರುವಂತೆ ಪ್ರಧಾನ ಉಬ್ಬುಶಿಲ್ಪವಾಗಿ ಕೆತ್ತಿರುವುದರಿಂದ ಶಿಲ್ಪದಲ್ಲಿ ವಿವರಗಳು ಸ್ಪಷ್ಟವಾಗಿ ಕಾಣುತ್ತವೆ. ಈ ಇಬ್ಬರು ದೇವತೆಗಳು ನೋಡುಗರನ್ನು ನೇರವಾಗಿ ನೋಡುವಂತೆ ಕೆತ್ತಲಾಗಿರುವುದು ವಿಶೇಷವಾಗಿದೆ.

ವಿಜಯವಿಠಲ ದೇವಾಲಯದ ಹೊರಭಾಗದಲ್ಲಿರುವ ಹಾಳಾಗಿರುವ ಮಂಟಪದಲ್ಲಿರುವ ಕಂಬದ ಮೇಲೆ ಯಜ್ಞ ವರಾಹನ ಶಿಲ್ಪವಿದೆ. ಇದರಲ್ಲಿ ದೇವತೆಯು ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತು ಬಲಗಾಲನ್ನು ಸ್ವಲ್ಪ ಮಡಚಿದ್ದು ಪೀಠದಿಂದ ಇಳಿಬಿಟ್ಟಂತೆ ತೋರಲಾಗಿದೆ. ದೇವತೆಯು ನಾಲ್ಕು ಕೈಗಳನ್ನು ಹೊಂದಿದ್ದು ಕೆಳಭಾಗದ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹಿಡಿದಿರುವನು. ಕಿರೀಟಮಕುಟದ ಜೊತೆ ಇತರೆ ಆಭರಣಗಳನ್ನು ಹೊಂದಿರುವ ವರಾಹನ ಜೊತೆ ದೇವಿಯನ್ನು ಇಲ್ಲಿ ತೋರಿಸಿಲ್ಲ. ಈ ಶಿಲ್ಪವನ್ನು ಪ್ರಳಯ ವರಾಹನ ಶಿಲ್ಪ ಎಂದು ಗುರುತಿಸಬಹುದು. ಇಂತಹದೇ ಯಜ್ಞ ವರಾಹ ಅಥವಾ ಪ್ರಳಯ ವರಹದ ಉಬ್ಬುಶಿಲ್ಪವನ್ನು ಕೃಷ್ಣದೇವಾಲಯದ ಕಂಬದಲ್ಲಿ ಕಾಣಬಹುದು. ಶಿಲ್ಪ ಪಠ್ಯಗಳಂತೆ ಯಜ್ಞ ವರಾಹ ಅಥವಾ ಪ್ರಳಯ ವರಾಹ ಶಿಲ್ಪಗಳನ್ನು ದೇವಿಯೊಂದಿಗೆ ತೋರಬೇಕು ಎಂದು ಶಿಲ್ಪರತ್ನವು ವಿವರಿಸಿದೆ. ಆದರೆ ಮೇಲೆ ಉಲ್ಲೇಖಿಸಿದ ಶಿಲ್ಪದಲ್ಲಿ ದೇವಿಯರನ್ನು ತೋರಿಲ್ಲ. ಹಾಗಾಗಿ ವಿಜಯನಗರ ಕಾಲದ ಶಿಲ್ಪಿಗಳು ಶಿಲ್ಪ ಪಠ್ಯಗಳಿಗಿಂತ ಭಿನ್ನವಾಗಿ ದೇವತೆಯ ಪತ್ನಿ (ದೇವಿ)ಯರು ಇಲ್ಲದಂತೆ ಇಲ್ಲಿ ಕೆತ್ತಿರುವುದು ಕಂಡುಬರುತ್ತದೆ.

ಹಂಪಿ ಪರಿಸರದಲ್ಲಿ ವರಾಹವತಾರದ ಬಿಡಿಶಿಲ್ಪಗಳು ಕಂಡುಬಂದಿದ್ದು ಅವುಗಳಲ್ಲಿ ಮುಖ್ಯವಾಗಿ ಕಮಲಾಪುರದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಅಪರೂಪದ ಕುಳಿತ ಪ್ರಳಯ ವರಾಹನ ಬಿಡಿಶಿಲ್ಪವಿದೆ. ಶಿಲ್ಪದಲ್ಲಿ ವರಾಹನು ಪಂಚರಥ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಂತೆ ತೋರಲಾಗಿದೆ. ವರಾಹನು ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಈ ಶಿಲ್ಪದಲ್ಲಿ ವರಾಹನ ಕಿರೀಟ ಭಾಗವು ಹಾಳಾಗಿದ್ದು ಇತರೆ ಆಭರಣಗಳನ್ನು ಧರಿಸಿರುವನು. ಈ ಶಿಲ್ಪವು ಮೇಲೆ ವಿವರಿಸಿದ ವಿರೂಪಾಕ್ಷ ದೇವಾಲಯದ ಶಿಲ್ಪಕ್ಕಿಂತ ಭಿನ್ನವಾಗಿ ತೋರಲಾಗಿದೆ. ಅಂದರೆ ಮುಖ್ಯವಾಗಿ ಭೂದೇವಿ, ನಾಗ, ನಾಗಲೋಕವನ್ನು ತೋರದೆ ಸ್ಕಂದಪುರಾಣದ ಎರಡನೆಯ ಸಂಪುಟದಲ್ಲಿರುವಂತೆ ಈ ವರಾಹ ಶಿಲ್ಪವನ್ನು ಕೆತ್ತಲಾಗಿದೆ.[೨೨]

ವರಾಹದ ಮತ್ತೊಂದು ಬಿಡಿಶಿಲ್ಪ ಇದೇ ಊರಿನ ಶ್ರೀ ರಾಘವೇಂದ್ರಸ್ವಾಮಿಯವರ ಮಠದಲ್ಲಿ ದೊರಕಿದೆ. ಕಪ್ಪುಶಿಲೆಯ ಈ ಭೂವರಾಹವು ಸಮಭಂಗಿಯಲ್ಲಿ ನಿಂತಿದ್ದು ನಾಲ್ಕು ಕೈಗಳನ್ನು ಹೊಂದಿದೆ. ಮೇಲಿನ ಎರಡು ಕೈಗಳು ಶಂಖ ಮತ್ತು ಚಕ್ರವನ್ನು ಹಿಡಿದಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ದೇವತೆಯು ದೋತಿಯ ಜೊತೆಗೆ ಇತರೆ ಸಾಮಾನ್ಯ ಆಭರಣಗಳನ್ನು ಧರಿಸಿರುವನು. ಈ ಶಿಲ್ಪದಲ್ಲಿ ದೇವಿಯನ್ನು ತೋರಿಲ್ಲ. ಈ ಭೂವರಾಹ ಶಿಲ್ಪವು ನಿತ್ಯಪೂಜೆಗೆ ಒಳಪಡುತ್ತಿದೆ.

ಹಂಪಿ ಪರಿಸರದಲ್ಲಿ ಒಟ್ಟು ೧೦ ಮೃಗರೂಪದ ವರಾಹ ಶಿಲ್ಪಗಳು ದೊರಕಿವೆ. ಇವುಗಳಲ್ಲಿ ವರಾಹನನ್ನು ನೈಜ ಹಂದಿಯ ರೂಪದಲ್ಲಿ ನಾಲ್ಕು ಕಾಲುಗಳಿರುವಂತೆ ತೋರಲಾಗಿದೆ. ಈ ಉಬ್ಬು ಶಿಲ್ಪಗಳನ್ನು ಉಳಿದ ಪ್ರಾಣಿಶಿಲ್ಪಗಳಂತೆ ತೋರಲಾಗಿದೆ. ಈ ರೀತಿಯ ಶಿಲ್ಪಗಳು ಅಚ್ಯುತರಾಯ ದೇವಾಲಯದಲ್ಲಿ ಮೂರು ಹಾಗೂ ವಿಠಲ ಮತ್ತು ಪಟ್ಟಾಭಿರಾಮ ದೇವಾಲಯಗಳಲ್ಲಿ ತಲಾ ಎರಡು ಶಿಲ್ಪಗಳು ಕಂಡುಬರುತ್ತವೆ. ವಿಜಯನಗರ ಅರಸರ ರಾಜಲಾಂಛನವು ವರಾಹವೇ ಆಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಯಾವ ರೀತಿಯಲ್ಲಿ ವಿಷ್ಣುವು ವರಾಹ ಅವತಾರವನ್ನು ತಾಳಿ ಭೂಮಿಯನ್ನು (ಭೂದೇವಿ) ರಕ್ಷಿಸಿದನೋ ಅದೇ ರೀತಿಯಲ್ಲಿ ಅರಸರು ಭೂಮಿ (ಸಾಮ್ರಾಜ್ಯ)ಯನ್ನು ರಕ್ಷಿಸುತ್ತಾರೆ ಎಂಬುದನ್ನು ಸಾಂಕೇತಿಕವಾಗಿ ತಮ್ಮ ಲಾಂಛನದ ಮೂಲಕ ತೋರಿರುವರು. ಹಾಗೆಯೇ ವಿಜಯನಗರ ಸಾಮ್ರಾಜ್ಯದ ನಾಣ್ಯಗಳಲ್ಲೂ ಸಹ ವರಾಹ ಅವತಾರದ ಚಿಹ್ನೆಗಳನ್ನು ಅಚ್ಚು ಹಾಕಿಸಿರುವುದು ಗಮನಾರ್ಹವಾಗಿದೆ. ಹಂಪಿ ಪರಿಸರದಲ್ಲಿ ವರಾಹ ಲಾಂಛನದ ಸುಮಾರು ಹತ್ತು ಶಿಲ್ಪಗಳು ಕಂಡುಬಂದಿರುತ್ತವೆ. ಈ ಶಿಲ್ಪಗಳಲ್ಲಿ ವರಾಹದ ಪಕ್ಕದಲ್ಲಿ ಒಂದು ಖಡ್ಗ, ಸೂರ್ಯ, ಚಂದ್ರರು ಇರುವಂತೆ ಕೆತ್ತಲಾಗಿದೆ. ವರಾಹನನ್ನು ಬದಾಮಿ ಚಲುಕ್ಯರು ಸಹ ರಾಜಲಾಂಛನವನ್ನಾಗಿಸಿಕೊಂಡಿದ್ದರು.

ಹಂಪಿ ಪರಿಸರದಲ್ಲಿ ವರಾಹನಿಗೆಂದೇ ಎರಡು ದೇವಾಲಯಗಳಿರುವುದನ್ನು ಕಾಣಬಹುದು. ಹಾಗಾಗಿ ವರಾಹವತಾರವು ಹಂಪಿ ಪರಿಸರದಲ್ಲಿ ಎಷ್ಟು ಮಹತ್ವವನ್ನು ಪಡೆದುಕೊಂಡಿತ್ತೆಂಬುದನ್ನು ನಾವು ತಿಳಿಯಬಹುದು. ಈ ಎರಡು ದೇವಾಲಯಗಳು ವಿಠಲ ದೇವಾಲಯದ ಸಮೀಪದಲ್ಲಿದ್ದು, ಇವುಗಳಲ್ಲಿ ಮೂಲಮೂರ್ತಿಯು ಇರುವುದಿಲ್ಲ. ಪ್ರಾಯಶಃ ಇಲ್ಲಿನ ವಿಗ್ರಹಗಳನ್ನು ಸ್ಥಳಾಂತರಿಸಬಹುದು. ಅಥವಾ ಕಾಲದ ತುಳಿತಕ್ಕೆ ಸಿಲುಕಿ ನಾಶವಾಗಿರಬಹುದು. ಆದರೆ ಪಾರಂಪರಿಕವಾಗಿ ಈ ಎರಡೂ ದೇವಾಲಯಗಳನ್ನು ವರಾಹ ದೇವಾಲಯಗಳೆಂದೇ ಗುರುತಿಸಲಾಗುತ್ತಿದೆ. ಇಲ್ಲಿರುವ ಇತರೆ ಉಬ್ಬುಶಿಲ್ಪಗಳ ಆಧಾರದ ಮೇಲೆ ಇವು ವೈಷ್ಣವ ಪಂಥಕ್ಕೆ ಸೇರಿದವುಗಳೆಂದು ಹೇಳಬಹುದು. ಹಂಪಿ ಪರಿಸರದಲ್ಲಿ ವರಾಹನ ಎರಡು ಬಿಡಿ ಶಿಲ್ಪಗಳು ದೊರಕಿರುವುದರಿಂದ ಪ್ರಾಯಶಃ ಈ ದೇವಾಲಯಗಳಲ್ಲಿ ವರಾಹನ ಮೂರ್ತಿ ಶಿಲ್ಪಗಳನ್ನು ಇರಿಸಿ ಪೂಜಿಸುತ್ತಿದ್ದರು ಎಂಬ ಸಂದೇಹಕ್ಕೆ ಎಡೆಮಾಡದೇ ನಿರ್ಧರಿಸಬಹುದು. ಇದಕ್ಕೆ ಪೂರಕವಾಗಿ ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿರುವ ವಿಭಿನ್ನ ಶೈಲಿಯ ವರಾಹನ ಶಿಲ್ಪ ಮತ್ತು ಶ್ರೀರಾಘವೇಂದ್ರಸ್ವಾಮಿ ಮಠದಲ್ಲಿ ಇಂದಿಗೂ ಪೂಜೆಗೆ ಒಳಪಡುತ್ತಿರುವ ವರಾಹನ ಶಿಲ್ಪಗಳನ್ನು ಉದಾಹರಿಸಬಹುದು.

ಹಂಪಿ ಪರಿಸರದ ಎಲ್ಲಾ ದೇವಾಲಯಗಳಲ್ಲಿ ಕಂಡುಬಂದಿರುವ ವರಾಹವತಾರ ಶಿಲ್ಪಗಳಲ್ಲಿನ ವರಾಹದ ದೇಹದ ಮೇಲಿನ ಕೂದಲು, ಕೋರೆಹಲ್ಲು, ಆಕಾರ ಮುಂತಾದ ಲಕ್ಷಣಗಳ ಆಧಾರದ

ಮೇಲೆ ಶಿಲ್ಪಗಳಲ್ಲಿನ ವರಾಹವು ಕಾಡು ಹಂದಿ ಎಂಬುದು ತಿಳಿಯುತ್ತದೆ. ಇದು ಆರ್ಟಿಯೊಡ್ಯಾಕ್ಟೈಲ (*Artiyodactyla*) ಗಣದ, ಸೂಯಿಡೆ (*Suiedae*) ಕುಟುಂಬಕ್ಕೆ ಸೇರಿದ ಸಸ್‌ಸ್ಕ್ರಾಫ್ ಕ್ರಿಸ್‌ಟೇಟಸ್ (*Suscraf Cristetus*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ.[೨೪]

ವಿಜಯನಗರ ಕಾಲದ ಶಿಲ್ಪಿಯು ವೈಖಾನಸ ಶಿಲ್ಪರತ್ನ ಮತ್ತು ಸ್ಕಂದ ಪುರಾಣಗಳಲ್ಲಿ ಉಲ್ಲೇಖಿತವಾಗಿರುವಂತೆ ಪಠ್ಯಗಳನ್ನು ಅನುಸರಿಸಿ ಶಿಲ್ಪಗಳನ್ನು ಕೆತ್ತಿರುವುದು ವಿಶೇಷವಾಗಿ ಕಾಣಬಹುದು. ಕೆಲವು ಶಿಲ್ಪಗಳು ಶಿಲ್ಪಪಠ್ಯಗಳನ್ನು ಹೊರತುಪಡಿಸಿ ಕೆಲವು ಹೊಸ ಲಕ್ಷಣಗಳೊಂದಿಗೆ ಕೆತ್ತಲ್ಪಟ್ಟಿರುವುದು ಸಹ ಕಂಡುಬರುತ್ತದೆ. ಉದಾಹರಣೆಗೆ ಪಠ್ಯದಲ್ಲಿ ಇಲ್ಲದ ಹೊಸ ಮಾದರಿಯ ಶಿಲ್ಪಗಳಾದ ವ್ಯಾಖ್ಯಾನ ವರಾಹ ಉಬ್ಬುಶಿಲ್ಪಗಳನ್ನು ಇಲ್ಲಿ ಕಾಣಬಹುದಾಗಿದೆ. ಶಿಲ್ಪ ಪಠ್ಯದಲ್ಲಿ ಉಲ್ಲೇಖಿತವಾದಂತೆ ನಾಗ, ನಾಗಲೋಕ, ಆದಿಶೇಷ, ಪತ್ನಿಯರಾದ ಲಕ್ಷ್ಮಿ ಮತ್ತು ಭೂದೇವಿಯರನ್ನು ತೋರುವ ಕ್ರಮವನ್ನು ಕೈಬಿಟ್ಟು, ಯಾವುದಾದರೂ ಒಬ್ಬ ದೇವಿ ಅಥವಾ ಇಬ್ಬರೂ ದೇವಿಯರನ್ನು ತೋರುವ ಕ್ರಮವನ್ನು ಶಿಲ್ಪಿಗಳು ಮಾಡಿದರು. ವಿಜಯನಗರ ಪೂರ್ವ ಕಾಲಘಟ್ಟಗಳಲ್ಲಿನ ವರಾಹ ಶಿಲ್ಪಗಳಲ್ಲಿ ವರಾಹನಿಗೆ ಕೋರೆ ಹಲ್ಲನ್ನು ಪ್ರಧಾನವಾಗಿಯೂ ಭೂದೇವಿಯನ್ನು ಸಮುದ್ರ ಅಥವಾ ಪಾತಾಳದಿಂದ ಎತ್ತಿಕೊಂಡು ಬರುವಾಗ ಈ ಕೋರೆಹಲ್ಲುಗಳ ಮೇಲೆ ಕುಳ್ಳಿರಿಸಿಕೊಂಡು ಬರುವಂತೆಯೂ ತೋರಲಾಗುತ್ತಿತ್ತು. ಆದರೆ ಹಂಪಿ ಪರಿಸರದಲ್ಲಿರುವ ಎಲ್ಲಾ ವರಾಹ ಶಿಲ್ಪಗಳಲ್ಲಿ ಕೋರೆಹಲ್ಲುಗಳು ಪ್ರಧಾನವಾಗಿರದೇ ಅತ್ಯಂತ ಸೌಮ್ಯ ಮತ್ತು ಶಾಂತ ಸ್ವರೂಪ ಭಾವನೆಯುಳ್ಳದ್ದಾಗಿದೆ. ಗುಪ್ತರ ಕಾಲದಿಂದ ವಿಜಯನಗರ ಕಾಲದವರೆಗೆ ನಾವು ವರಾಹ ಶಿಲ್ಪಗಳ ಬೆಳವಣಿಗೆಯನ್ನು ಗಮನಿಸಿದರೆ ಒಂದು ರೀತಿಯ ವಿಕಸನವನ್ನು ಕಾಣಬಹುದಾಗಿದೆ. ಪ್ರಾರಂಭ ಕಾಲದ ವರಾಹ ಶಿಲ್ಪಗಳು ಕೋರೆ ಹಲ್ಲುಗಳನ್ನು ಹೊಂದಿ ದೃಢವಾದ ಮೈಕಟ್ಟಿನೊಂದಿಗೆ ಬಲಶಾಲಿಯಾಗಿ ಹೋರಾಟದ ಸ್ವರೂಪದ ಭಾವನೆಗಳನ್ನು ಸೂಚಿಸುವ ಲಕ್ಷಣಗಳನ್ನು ಹೊಂದಿದ್ದರೆ ವಿಜಯನಗರ ಕಾಲದ ಶಿಲ್ಪಗಳು ಅದಕ್ಕೆ ವಿರುದ್ಧವಾಗಿ ಸೌಮ್ಯ, ಶಾಂತ ಮತ್ತು ಮೃದು ಧೋರಣೆಯ ಮುಖಲಕ್ಷಣಗಳನ್ನು ಹೊಂದಿದ್ದು ಒಂದು ರೀತಿಯ ಪಳಗಿಸಲಾದ ಮೃಗಗಳಂತೆ ಕೋರೆ ಹಲ್ಲುಗಳು ಹೆಚ್ಚು ಉದ್ದವಿಲ್ಲದ ಸೌಮ್ಯ ಮತ್ತು ಶಾಂತತೆಯಿಂದ ಕೂಡಿದ ಶಿಲ್ಪಗಳಾಗಿ ಕಂಡುಬರುತ್ತವೆ. ಆದರೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ತಾಡಪತ್ರಿಯ ಚಿಂತಲವೆಂಕಟರಮಣ ದೇವಾಲಯದಲ್ಲಿನ ಒಂದು ಶಿಲ್ಪ ಉಗ್ರರೂಪದಲ್ಲಿದೆ.

ದೇವಾಲಯದ ಮುಖಮಂಟಪದಲ್ಲಿನ ಕಪ್ಪುಶಿಲೆಯ ಈ ಶಿಲ್ಪವು ಕಂಬದ ಮೇಲ್ಪಟ್ಟಿಕೆಯಲ್ಲಿದ್ದು ದಕ್ಷಿಣಾಭಿಮುಖವಾಗಿದೆ. ವಿಜಯನಗರ ಕಾಲದ ಈ ದೇವಾಲಯದಲ್ಲಿನ ಈ ಶಿಲ್ಪವನ್ನು ಅಪರೂಪದ ಶಿಲ್ಪವೆಂದೇ ಹೇಳಬಹುದು. ಏಕೆಂದರೆ ಈ ಶಿಲ್ಪವು ವರಾಹವತಾರದ ಹಿನ್ನೆಲೆ, ಉದ್ದೇಶ ಮತ್ತು ತಾನೇ ಬಲಶಾಲಿಯೆಂದು ಗರ್ವಪಡುತ್ತಿದ್ದ ಹಿರಣ್ಯಾಕ್ಷನೆಂಬ ಅಸುರನನ್ನು ಸಂಹಾರ ಮಾಡುತ್ತಿರುವುದನ್ನು ತಿಳಿಸುವ ಏಕೈಕ ಶಿಲ್ಪ ಇದಾಗಿದೆ. ಈ ಶಿಲ್ಪದಲ್ಲಿನ ವರಾಹನು ತನ್ನ



ವರಾಹಾವತಾರ ಶಿಲ್ಪ,
ಚಿಂತಲವೆಂಕಟರಮಣ ದೇವಾಲಯ, ತಾಡಪತ್ರಿ

ಎರಡು ಕಾಲುಗಳನ್ನು ಸ್ವಲ್ಪ ಬಾಗಿಸಿದ್ದು ಹಿರಣ್ಯಾಕ್ಷನೆಂಬ ಅಸುರನನ್ನು ತನ್ನ ಎರಡು ಕೈಗಳಿಂದ ಮೇಲಕ್ಕೆ ಎತ್ತಿ ಕೋರೆಯಿಂದ ಅಸುರನ ಹೊಟ್ಟೆಯನ್ನು ತಿವಿಯುತ್ತಿರುವಂತೆ ತೋರಲಾಗಿದೆ. ಶಿಲ್ಪದಲ್ಲಿ ವರಾಹನಿಗೆ ಕಿರೀಟಮಕುಟವನ್ನು ತೋರಿಸಿರುವುದಿಲ್ಲ. ಉಳಿದಂತೆ ಕಂಠಹಾರ, ಎದೆಹಾರ, ನಡುಪಟ್ಟಿ, ಕೈಕಡಗ, ಕಾಲ್ಗಡಗ ಮತ್ತು ಇತರೆ ಆಭರಣಗಳೊಂದಿಗೆ ದೋತಿಯನ್ನು ಧರಿಸಿರುವಂತೆ ತೋರಿಸಲಾಗಿದೆ. ಈ ರೀತಿ ವರಾಹ ಅವತಾರದ ಹಿನ್ನೆಲೆ ಮತ್ತು ಉದ್ದೇಶವನ್ನು ತಿಳಿಸುವಂತೆ ಕಾರ್ಯಪ್ರವೃತ್ತವಾಗಿರುವ ಶಿಲ್ಪವು ಹಂಪಿ ಪರಿಸರದಲ್ಲಿ ಕಂಡುಬಂದಿರುವುದಿಲ್ಲ. ಹಾಗಾಗಿ ಇದೊಂದು ಅಪರೂಪದ ಶಿಲ್ಪವಾಗಿದ್ದು ವಿಶಿಷ್ಟವಾದುದುದಾಗಿದೆ.

ವರಾಹದ ಚಾರಿತ್ರಿಕ ಹಿನ್ನೆಲೆಯಲ್ಲಿ ಗುಪ್ತರ ಕಾಲದ ಉದಯಗಿರಿ ಗುಹಾಲಯಗಳಲ್ಲಿನ ಭೂವರಾಹದ ಶಿಲ್ಪ ಉಲ್ಲೇಖನೀಯವಾಗಿದೆ. ಈ ಉಬ್ಬುಶಿಲ್ಪ ವರಾಹರೂಪದ ವಿಷ್ಣುವಿನ ಅತ್ಯಂತ ಪ್ರಾಚೀನ ಶಿಲ್ಪದ ಉದಾಹರಣೆಯಾಗಿದೆ. ಮನುಷ್ಯ ಶರೀರದಿಂದೊಡಗೂಡಿರುವ ವರಾಹ ಮುಖದ ವಿಷ್ಣು ತನ್ನ ಬಲಕೋರೆಯಿಂದ ಸ್ತ್ರೀರೂಪದ ಭೂದೇವಿಯನ್ನು ರಸಾತಲದಿಂದ ಎತ್ತಿಹಿಡಿದಿರುವ ದೃಶ್ಯ ಅದ್ಭುತ ರಮ್ಯವಾಗಿದೆ ಎಂದು ತಿಳಿದುಬರುತ್ತದೆ.[೨೫] ಅದೇ ರೀತಿ ಮಧ್ಯಪ್ರದೇಶ ಕಜುರಾಹೋ, ಆಂಧ್ರಪ್ರದೇಶದ ತಿರುಪತಿ, ತಮಿಳುನಾಡಿನ ಶ್ರೀಮೂಷ್ಣಮ್ ಎಂಬಲ್ಲಿ ವಿಷ್ಣುವಿನ ವರಾಹಾವತಾರದ ದೇವಾಲಯಗಳಿವೆ. ಮಧ್ಯಪ್ರದೇಶದ ಎರಾನ್ ಎಂಬಲ್ಲಿ ಬೃಹತ್ ಗಾತ್ರದ ಮೃಗರೂಪದ ವರಾಹದ ಶಿಲ್ಪವಿರುವುದು ತಿಳಿದುಬರುತ್ತದೆ.[೨೬]

ಒಟ್ಟಾರೆ ಹಂಪಿ ಪರಿಸರದಲ್ಲಿ ವರಾಹವತಾರ ವಿಷ್ಣುವು ಮತ್ಸ್ಯ ಮತ್ತು ಕೂರ್ಮ ಅವತಾರಗಳಿಗಿಂತ ಕಡಿಮೆ ಪ್ರಸಿದ್ಧಿ ಮನ್ನಣೆಯನ್ನು ಪಡೆದಿತ್ತು ಎಂಬುದು ಕಡಿಮೆ ಸಂಖ್ಯೆಯಲ್ಲಿ ದೊರೆತಿರುವ ವರಾಹಾವತಾರ ಶಿಲ್ಪಗಳಿಂದ ದೃಢಪಡುತ್ತದೆ.

ನರಸಿಂಹ ಅವತಾರ

ವಿಷ್ಣುವಿನ ದಶಾವತಾರಗಳಲ್ಲಿ ನರಸಿಂಹ ಅವತಾರವು ಒಂದಾಗಿದ್ದು ನಾಲ್ಕನೆಯ ಅವತಾರವಾಗಿದೆ. ಮುಖಭಾಗವು ಸಿಂಹದ ಮುಖದಂತೆ ಉಳಿದ ಭಾಗವು ಮನುಷ್ಯನ ರೂಪದಲ್ಲಿರುವುದರಿಂದ ನರಸಿಂಹ ಎಂಬ ಹೆಸರು ಬಂದಿದೆ. ಭಕ್ತ (ಪ್ರಹ್ಲಾದ)ನ ರಕ್ಷಣೆಗೆ ಮತ್ತು ಸಕಾಲಕ್ಕೆ ಒಲಿಯಲು ಹಾಗೂ ಗರ್ವವನ್ನು ಮೈಗೂಡಿಸಿಕೊಂಡಿದ್ದ ಹಿರಣ್ಯಕಶಿಪು ಎಂಬ ಅಸುರನನ್ನು ಸಂಹಾರ ಮಾಡಲು ಮಹಾವಿಷ್ಣು ಈ ರೂಪದಿಂದ ಭೂಮಿಯಲ್ಲಿ ಅವತರಿಸಿದನೆಂದು ಪುರಾಣಗಳಲ್ಲಿ ಹೇಳಲಾಗಿದೆ.[೨೭]

ಹಿನ್ನೆಲೆ : ವರಾಹಾವತಾರದಲ್ಲಿ ವಿಷ್ಣು ಹಿರಣ್ಯಾಕ್ಷನನ್ನು ವಧಿಸಿದ ನಂತರ ಇವನ ಅಣ್ಣನಾದ ಹಿರಣ್ಯಕಶಿಪು ಸೇಡು ತೀರಿಸಿಕೊಳ್ಳಲು ಹಂಬಲಿಸುತ್ತಾನೆ. ಆಗ ತನ್ನ ಅಸುರ ಬಂದುಗಳನ್ನೆಲ್ಲಾ ಕರೆಸಿ ನಾರಾಯಣ ನೆಲೆಸಿರುವ ಕಡೆಯಲೆಲ್ಲಾ ದಾಳಿ ಮಾಡುವಂತೆ ಅಜ್ಞಾಪಿಸಿ, ಬ್ರಹ್ಮನ ಕುರಿತು ಕಠಿಣ ತಪಸ್ಸು ಮಾಡಿ ಅಮರತ್ವದ ವರವನ್ನು ಪಡೆಯುತ್ತಾನೆ. ನಂತರ ಗರ್ವದಿಂದ ಇಂದ್ರಲೋಕ ಮತ್ತು ವೈಕುಂಠಗಳಿಗೆ ಹೋಗಿ ದೇವತೆಗಳಿಗೆ ತೊಂದರೆ ಕೊಡಲು ಪ್ರಾರಂಭಿಸುತ್ತಾನೆ. ಆಗ ದೇವಾನು-

ದೇವತೆಗಳೆಲ್ಲಾ ವಿಷ್ಣುವಿನ ಮೊರೆ ಹೋಗಿ ತಮಗೆ ಆದ ನೋವನ್ನು ಹೇಳಿಕೊಳ್ಳುತ್ತಾರೆ. ಆಗ ವಿಷ್ಣು ಗೋವು ಮತ್ತು ಬ್ರಾಹ್ಮಣರಿಗೆ ತೊಂದರೆ ಮಾಡಿದವನಿಗೆ ಈಗಲ್ಲದಿದ್ದರೂ ಮುಂದೆ ಅವನನ್ನು ಶಿಕ್ಷಿಸುತ್ತೇನೆಂದು ಹೇಳಿದನು. ನಂತರದಲ್ಲಿ ಹಿರಣ್ಯಕಶಿಪುವಿಗೆ ಪರಮ ಭಾಗವತ್ತೋತ್ತಮನಾದ ಮತ್ತು ಶ್ರೀಹರಿಯ ಅಂಶದಿಂದ ಪ್ರಹ್ಲಾದನೆಂಬ ಮಗ ಜನಿಸುತ್ತಾನೆ. ಮಹಾಭಕ್ತನಾಗಿ ಹುಟ್ಟಿದ ಪ್ರಹ್ಲಾದನನ್ನು ಭಕ್ತಿ ಮಾರ್ಗದಿಂದ ತಿರುಗಿಸಲು ಹಿರಣ್ಯಕಶಿಪುವಿಗೆ ಸಾಧ್ಯವಾಗಲೇ ಇಲ್ಲ. ಆಗ ಹಿರಣ್ಯಕಶಿಪು ಪುತ್ರ ವ್ಯಾಮೋಹವನ್ನು ತೊರೆದು ಮಗನನ್ನು ದ್ವೇಷಿಸುತ್ತಾ ಹೊಡೆದು ಬಡಿದು ಹಿಂಸಿಸಲು ಆರಂಭಿಸಿದನು. ಆದರೂ ಪ್ರಹ್ಲಾದ ಹರಿಧ್ಯಾನವನ್ನು ನಿಲ್ಲಿಸಲಿಲ್ಲ. ಕೊನೆಗೆ ಪ್ರಹ್ಲಾದನನ್ನು ಕೊಲ್ಲಿಸಲು ಹಲವು ಪ್ರಯತ್ನಗಳನ್ನು ಸಹ ಮಾಡಿದರು ಪ್ರಯೋಜನವಾಗಲಿಲ್ಲ. ಕೊನೆಗೆ ತಂದೆ ಮಗನ ನಡುವೆ ಮಾತಿನ ಚಕಮಕಿ ನಡೆದು ನಿನ್ನ ಹರಿ ಈ ಕಂಬದಲ್ಲಿಯೂ ಇದ್ದಾನೆಯೇ ಎಂದು ಕಂಬಕ್ಕೆ ಹೊಡೆಯುತ್ತಾನೆ. ಈ ಸಮಯವನ್ನೇ ಕಾಯುತ್ತಿದ್ದ ವಿಷ್ಣು ಕಂಬದಿಂದ ನರಸಿಂಹ ಅವತಾರಿಯಾಗಿ ಹೊರಬಂದನು. ಈ ಅವತಾರದಲ್ಲಿ ತಲೆಯು ಸಿಂಹದಂತೆ, ದೇಹವು ಮನುಷ್ಯರಂತಿತ್ತು. ಮಾನವನೂ ಅಲ್ಲದ, ಮೃಗವೂ ಅಲ್ಲದ ಆ ಜೀವಿಯು ನೋಡಲು ಭಯಂಕರವಾಗಿತ್ತು. ಶಂಖ, ಚಕ್ರ, ಗದೆ ಮೊದಲಾದ ಆಯುಧಗಳನ್ನು ಹಿಡಿದ ನರಸಿಂಹನು ಹಿರಣ್ಯಕಶಿಪುನೊಡನೆ ಕಾದಾಡಿ ಹೊಸ್ತಿಲಿನೆಡೆಗೆ ಎಳೆದುಕೊಂಡು ಬಂದನು. ಅವನಿಗೆ ಮನೆಯ ಒಳಗಾಗಲೀ ಹೊರಗಾಗಲೀ ಸಾವು ಬರಬಾರದೆಂಬ ವರವಿದ್ದುದರಿಂದ, ಒಳಗೂ ಹೊರಗೂ ಅಲ್ಲದ ಹೊಸ್ತಿಲಿನ ಮೇಲೆ ಕುಳಿತನು. ಭೂಮಿಯಲ್ಲಾಗಲಿ, ಆಕಾಶದಲ್ಲಾಗಲೀ ಆತ ಸಾಯುವಂತಿರಲಿಲ್ಲ. ಹಾಗಾಗಿ ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಆಯುಧವಲ್ಲದ, ಪ್ರಾಣವಿಲ್ಲದ ಉಗುರುಗಳಿಂದಲೇ ಸೀಳಿ ಕೊಂದುಬಿಟ್ಟನು. ರಾತ್ರಿ ಮತ್ತು ಹಗಲಿನಲ್ಲಿ ಹಿರಣ್ಯಕಶಿಪು ಸಾಯಬಾರದಂತ ವರವನ್ನು ಪಡೆದಿದ್ದರಿಂದ ನರಸಿಂಹನು ಅವನನ್ನು ಸಂಧ್ಯಾಕಾಲದಲ್ಲಿಯೇ ಸಂಹರಿಸಿ ಅವನ ಕರುಳನ್ನು ಕಿತ್ತು ಹೊರಗೆಳೆದು ಮಾಲೆಯಂತೆ ಕೊರಳಿನಲ್ಲಿ ಧರಿಸಿಕೊಂಡನು[೨೮] ಎಂಬುದಾಗಿ ಪುರಾಣ ಗ್ರಂಥಗಳಿಂದ ತಿಳಿದುಬರುತ್ತದೆ. ಈ ರೀತಿಯ ಹಲವು ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬಂದಿವೆ.

ಹಂಪಿ ಪರಿಸರದಲ್ಲಿನ ಬಹುತೇಕ ನರಸಿಂಹಾವತಾರ ಶಿಲ್ಪಗಳು ಸಾಮಾನ್ಯವಾಗಿ ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹಿಡಿದಿದ್ದರೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ದೇವತೆಯು ಧೋತಿಯನ್ನು ಧರಿಸಿದ್ದು, ಕಿರೀಟಮಕುಟ, ಕಂಠಹಾರ, ಎದೆಹಾರ, ನಡುಪಟ್ಟಿ, ಕೈಕಡಗ, ಕಾಲ್ಗಡಗ ಮುಂತಾದ ಆಭರಣಗಳನ್ನು ಧರಿಸಿರುವಂತೆ ಬಿಡಿಸಲಾಗಿದೆ.

ಹಂಪಿ ಪರಿಸರದಲ್ಲಿ ನರಸಿಂಹ ಅವತಾರದ ಬಿಡಿ ಮತ್ತು ಉಬ್ಬುಶಿಲ್ಪಗಳೆರಡೂ ದೊರಕಿದ್ದು ಎಲ್ಲವೂ ನರಮೃಗ ರೂಪದವುಗಳಾಗಿವೆ. ಇಲ್ಲಿ ಮೃಗರೂಪದ ಶಿಲ್ಪಗಳು ಕಂಡುಬಂದಿಲ್ಲ. ಇಲ್ಲಿನ ಬಹುಪಾಲು ಉಬ್ಬುಶಿಲ್ಪಗಳು ಇಲ್ಲಿರುವ ವಿವಿಧ ದೇವಾಲಯಗಳಲ್ಲಿದ್ದು, ಏಕೈಕ ಬಿಡಿಶಿಲ್ಪವೊಂದು ಹಂಪಿಯ ಕೃಷ್ಣ ದೇವಾಲಯದ ಪಕ್ಕದಲ್ಲಿದೆ. ಇದು ಲಕ್ಷ್ಮಿ ನರಸಿಂಹವೆಂದೇ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಹಂಪಿ ಪರಿಸರದಲ್ಲಿರುವ ದೇವಾಲಯಗಳ ಕಂಬಗಳು, ಬಾಗಿಲವಾಡದ ಲತಾಸುರಳಿ, ಅಲಂಕರಣೆ, ಕೋಷ್ಟಕ ಮತ್ತು ಇತರೆ ಭಾಗಗಳಲ್ಲಿ ದಶಾವತಾರ ಶಿಲ್ಪಗಳನ್ನು ತೋರುವಾಗ ನರಸಿಂಹನನ್ನು ಕಿರು ಉಬ್ಬುಶಿಲ್ಪವಾಗಿ ತೋರಲಾಗಿದ್ದು, ಅವುಗಳನ್ನು ಸಹ ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ.

ಹಂಪಿ ಪರಿಸರದ ದೇವಾಲಯಗಳಲ್ಲಿರುವ ನರಸಿಂಹ ಅವತಾರದ ಶಿಲ್ಪಗಳ ಕೋಷ್ಟಕ

ಕ್ರಸಂ.	ದೇವಾಲಯಗಳು	ನರಮೃಗರೂಪ	ಒಟ್ಟು
೦೧.	ಅಚ್ಯುತರಾಯ ದೇವಾಲಯ, ಹಂಪಿ	*. ಯೋಗ ನರಸಿಂಹ-೪ * ಉಗ್ರ ನರಸಿಂಹ-೪ * ಲಕ್ಷ್ಮಿ ನರಸಿಂಹ ೧	೯
೦೨.	ಹಜಾರರಾಮ ದೇವಾಲಯ, ಹಂಪಿ	* ಯೋಗ ನರಸಿಂಹ -೩ * ಉಗ್ರನರಸಿಂಹ- ೨	೫
೦೩.	ಕುದುರೆಗೊಂಬೆ ಮಂಟಪ, ಹಂಪಿ	* ಉಗ್ರ ನರಸಿಂಹ-೩ * ಲಕ್ಷ್ಮಿ ನರಸಿಂಹ-೧	೪
೦೪.	ವಿಜಯವಿಠಲ ದೇವಾಲಯ, ಹಂಪಿ	* ಯೋಗ ನರಸಿಂಹ-೩ * ಉಗ್ರ ನರಸಿಂಹ-೨	೫
೦೫.	ಗೆಜ್ಜಲಮಂಟಪ, ಹಂಪಿ	* ಲಕ್ಷ್ಮಿ ನರಸಿಂಹ-೨ * ಯೋಗ ನರಸಿಂಹ-೧	೩
೦೬.	ಕೃಷ್ಣ ದೇವಾಲಯ. ಹಂಪಿ	* ಉಗ್ರ ನರಸಿಂಹ-೨	೨
೦೭.	ಶ್ರೀವಿರೂಪಾಕ್ಷ ದೇವಾಲಯ, ಹಂಪಿ	* ಉಗ್ರ ನರಸಿಂಹ-೨ * ಲಕ್ಷ್ಮಿ ನರಸಿಂಹ-೧	೩
೦೮.	ಶ್ರೀರಂಗನಾಥ ದೇವಾಲಯ, ಆನೆಗುಂದಿ	* ಉಗ್ರ ನರಸಿಂಹ-೧	೧
೦೯.	ಖಾಲಿ ಮಂಟಪ, ಹನುಮನಹಳ್ಳಿ	* ಉಗ್ರನರಸಿಂಹ-೨ * ಯೋಗ ನರಸಿಂಹ-೧	೩
೧೦.	ಶಿವ ದೇವಾಲಯ, ತಿಮ್ಮಲಾಪುರ	* ಉಗ್ರನರಸಿಂಹ-೪ * ಯೋಗ ನರಸಿಂಹ-೧ * ಲಕ್ಷ್ಮಿ ನರಸಿಂಹ-೧	೬
೧೧.	ಜಂಬುನಾಥೇಶ್ವರ ದೇವಾಲಯ, ಜಂಬುನಾಥನಹಳ್ಳಿ	* ಉಗ್ರನರಸಿಂಹ-೨ * ಯೋಗ ನರಸಿಂಹ-೧ * ಲಕ್ಷ್ಮಿ ನರಸಿಂಹ-೧	೪
		ಒಟ್ಟು –	೪೫

ಹಂಪಿ ಪರಿಸರದಲ್ಲಿ ಒಟ್ಟು ಸುಮಾರು ೪೫ ನರಸಿಂಹಾವತಾರ ಶಿಲ್ಪಗಳು ದೊರಕಿದ್ದು, ಅದರಲ್ಲಿ ೨೪ ಉಗ್ರ ನರಸಿಂಹ, ೧೪ ಯೋಗ ನರಸಿಂಹ ಮತ್ತು ೭ ಲಕ್ಷ್ಮಿ ನರಸಿಂಹ ಶಿಲ್ಪಗಳಾಗಿವೆ. ಅಚ್ಯುತರಾಯ ದೇವಾಲಯದಲ್ಲಿ ಅತಿ ಹೆಚ್ಚು ನರಸಿಂಹಾವತಾರ ಶಿಲ್ಪಗಳು ಕಂಡುಬರುತ್ತವೆ. ಇಲ್ಲಿ ಒಟ್ಟು ೯ ನರಸಿಂಹ ಅವತಾರದ ಶಿಲ್ಪಗಳಿದ್ದು ಎಲ್ಲವೂ ನರಮೃಗ ರೂಪದವುಗಳಾಗಿವೆ.

ಇವುಗಳಲ್ಲಿ ನಾಲ್ಕು ಯೋಗನರಸಿಂಹ ಶಿಲ್ಪಗಳಾಗಿದ್ದು, ನರಸಿಂಹನನ್ನು ಯೋಗ ಮುದ್ರೆಯಲ್ಲಿ ಕುಳಿತಂತೆ ತೋರಲಾಗಿದೆ. ಶಿಲ್ಪದಲ್ಲಿನ ನರಸಿಂಹನ ತಲೆಯ ಭಾಗವು ಸಿಂಹದ ತಲೆಯಾಗಿದ್ದು ಇನ್ನುಳಿದಂತೆ ಮನುಷ್ಯನ ರೂಪದಲ್ಲಿರುವಂತೆ ತೋರಲಾಗಿದೆ. ನರಸಿಂಹನು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹಿಡಿದಿದ್ದರೆ, ಕೆಳಗಿನ ಎರಡು ಕೈಗಳನ್ನು ತನ್ನ ಮೊಣಕಾಲಿನ ಮೇಲಿಟ್ಟು ಬೆರಳುಗಳನ್ನು ಕೆಳಕ್ಕೆ ಇಳಿಬಿಟ್ಟಂತೆ ತೋರಲಾಗಿದೆ. ನರಸಿಂಹನು ಒಂದು ಪೀಠದ ಮೇಲೆ ಕುಳಿತಿದ್ದು ತನ್ನ ಎರಡು ಕಾಲುಗಳನ್ನು ಯೋಗಮುದ್ರೆಯಲ್ಲಿದ್ದು ಮಡಚಿಕೊಂಡಂತೆ ತೋರಲಾಗಿದೆ. ಹಾಗಾಗಿ ಈ ರೀತಿಯ ಶಿಲ್ಪಗಳನ್ನು ಯೋಗನರಸಿಂಹ ಶಿಲ್ಪ ಎಂದೇ ಕರೆಯಲಾಗುತ್ತದೆ. ಉಳಿದ ಮೂರು ಯೋಗನರಸಿಂಹ ಶಿಲ್ಪಗಳು ಸಹ ಇದೇ ರೀತಿಯ ಸಾಮ್ಯತೆಯಿಂದ ಕೂಡಿವೆ.

ಇದೇ ದೇವಾಲಯದಲ್ಲಿ ನಾಲ್ಕು ಉಗ್ರನರಸಿಂಹ ಶಿಲ್ಪಗಳು ಸಹ ಕಂಡುಬಂದಿವೆ. ಈ ಎಲ್ಲಾ ಶಿಲ್ಪಗಳಲ್ಲಿ ಉಗ್ರನರಸಿಂಹನು ಒಂದು ಪೀಠದ ಮೇಲೆ ಕುಳಿತಿದ್ದು ತನ್ನ ಎಡಗಾಲನ್ನು ಮಡಚಿಕೊಂಡು ಬಲಗಾಲನ್ನು ಪೀಠದಿಂದ ಕೆಳಕ್ಕೆ ಇಳಿಬಿಟ್ಟಿದ್ದಾನೆ. ಮುಖವು ಸಿಂಹದ್ದಾಗಿದ್ದು ಉಗ್ರರೂಪದಲ್ಲಿರುವುದರಿಂದ ಉಗ್ರನರಸಿಂಹನೆಂದು ಕರೆಯಲ್ಪಟ್ಟಿದೆ. ಶಿಲ್ಪದಲ್ಲಿ ನರಸಿಂಹನು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹಿಡಿದಿರುವಂತೆಯೂ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿರುವಂತೆ ತೋರಲಾಗಿದ್ದು, ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಂತೆ ಕೆತ್ತಲಾಗಿದೆ.

ಇದೇ ದೇವಾಲಯದಲ್ಲಿ ಒಂದು ಲಕ್ಷ್ಮಿ ನರಸಿಂಹ ಶಿಲ್ಪವು ಸಹ ದೊರಕಿದೆ. ಈ ಶಿಲ್ಪವು ನೂರು ಕಂಬಗಳ ಮಂಟಪದಲ್ಲಿದ್ದು ನೋಡಲು ಸುಂದರವಾಗಿದೆ. ಈ ಶಿಲ್ಪದಲ್ಲಿ ನರಸಿಂಹನ ಜೊತೆ ಲಕ್ಷ್ಮಿಯನ್ನು ಸಹ ತೋರಿಸಿರುವುದರಿಂದ ಇಂತಹ ಶಿಲ್ಪವನ್ನು ಲಕ್ಷ್ಮಿನರಸಿಂಹವೆಂದು ಕರೆಯಲಾಗುತ್ತದೆ. ನರಸಿಂಹನು ಒಂದು ಪೀಠದ ಮೇಲೆ ಕುಳಿತಿದ್ದು ಎಡಗಾಲನ್ನು ಮಡಚಿ ದೇವಿಗೆ ಆಸನವನ್ನಾಗಿ ನೀಡಿರುವನು. ಬಲಗಾಲನ್ನು ಪೀಠದಿಂದ ಕೆಳಗೆ ಇಳಿಬಿಟ್ಟಿರುವಂತೆ ಬಿಡಿಸಲಾಗಿದೆ. ನರಸಿಂಹನು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಎರಡು ಕೈಗಳು ಶಂಖ ಮತ್ತು ಚಕ್ರವನ್ನು ಹಿಡಿದಿವೆ. ಕೆಳಗಿನ ಎರಡು ಕೈಗಳಲ್ಲಿ ಬಲಗೈ ಅಭಯ ಮುದ್ರೆಯಲ್ಲಿದ್ದರೆ, ಎಡಗೈ ದೇವಿಯ ಸೊಂಟವನ್ನು ಬಳಸಿಕೊಂಡು ವರದ ಮುದ್ರೆಯಲ್ಲಿರುವಂತೆ ಕೆತ್ತಲಾಗಿದೆ. ಹಾಗೆಯೇ ನರಸಿಂಹನ ಎಡತೊಡೆಯ ಮೇಲೆ ಸೀರೆಯನ್ನು ಉಟ್ಟಿರುವ ಲಕ್ಷ್ಮಿದೇವಿಯು ಆಸೀನಳಾಗಿದ್ದು ಎಡಗೈಯಲ್ಲಿ ಹೂವಿನ ಮೊಗ್ಗನ್ನು ಹಿಡಿದಿರುವಂತೆ, ಬಲಗೈ ಸ್ವಾಮಿಯ ಬೆನ್ನನ್ನು ಅಲಂಗಿಸಿರುವಂತೆ ತೋರಲಾಗಿದೆ. ಈ ಶಿಲ್ಪದಲ್ಲಿ ದೇವತೆಯನ್ನು ಉಗ್ರವಾಗಿ ತೋರಿಸದೇ ವಿವಿಧ ರೀತಿಯ ಆಭರಣಗಳನ್ನು ಧರಿಸಿ ಶಾಂತ ಸ್ವಭಾವದಲ್ಲಿರುವಂತೆ ತೋರಲಾಗಿದೆ.



ಲಕ್ಷ್ಮೀನರಸಿಂಹ ಶಿಲ್ಪ, ಅಚ್ಯುತರಾಯ ದೇವಾಲಯ, ಹಂಪಿ



ಯೋಗನರಸಿಂಹ ಶಿಲ್ಪ, ಹಜಾರರಾಮ ದೇವಾಲಯ, ಹಂಪಿ



ಉಗ್ರನರಸಿಂಹ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

ಮೇಲೆ ವಿವರಿಸಿರುವ ಅಚ್ಯುತರಾಯ ದೇವಾಲಯದಲ್ಲಿನ ಯೋಗನರಸಿಂಹ ಶಿಲ್ಪಗಳನ್ನೇ ಹೋಲುವಂತ ಯೋಗನರಸಿಂಹ ಶಿಲ್ಪಗಳು ಹಜಾರರಾಮ ದೇವಾಲಯದಲ್ಲಿ ೩ ಶಿಲ್ಪಗಳು ದೊರಕಿವೆ. ಜೊತೆಗೆ ಇಲ್ಲಿ ಎರಡು ಉಗ್ರನರಸಿಂಹನ ಶಿಲ್ಪಗಳೂ ಸಹ ಕಂಡುಬಂದಿದ್ದು, ಒಂದರಲ್ಲಿ ಉಗ್ರರೂಪಿ ನರಸಿಂಹನು ಹಿರಣ್ಯಕಶಿಪುವಿನ ಜೊತೆ ಕಾದಾಟ ನಡೆಸುತ್ತಿರುವುದಾಗಿದ್ದು, ಮತ್ತೊಂದು ಶಿಲ್ಪದಲ್ಲಿ ನರಸಿಂಹನು ಹೊಸ್ತಿಲಿನ ಮೇಲೆ ಕುಳಿತು ಹಿರಣ್ಯಕಶಿಪುನನ್ನು ಸಂಹಾರ ಮಾಡುತ್ತಿರುವಂತೆಯೂ, ದೇವತೆಯ ಬಲಗಾಲಿನ ಪಾದವನ್ನು ಪ್ರಹ್ಲಾದನು ಹಿಡಿದಿರುವಂತೆಯೂ ತೋರಲಾಗಿದೆ. ಈ ಶಿಲ್ಪದಲ್ಲಿನ ನರಸಿಂಹನಿಗೆ ಎಂಟು ಕೈಗಳನ್ನು ತೋರಲಾಗಿದ್ದು, ಮೇಲಿನಿಂದ ಕ್ರಮವಾಗಿ ಮೇಲಿನ ಎರಡು ಕೈಗಳು ತಲೆಯ ಭಾಗದವರೆಗೂ ಮೇಲಕ್ಕೆತ್ತಿದಂತಿವೆ. ಮತ್ತೆರಡು ಕೈಗಳು ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದರೆ, ಮತ್ತೆರಡು ಕೈಗಳಲ್ಲಿ ಎಡಗೈ ಹಿರಣ್ಯಕಶಿಪುವಿನ ತಲೆಯನ್ನು ಬಲಗೈ ಕಾಲನ್ನು ಹಿಡಿದಿರುವಂತೆ ತೋರಲಾಗಿದೆ. ಮತ್ತು ಕೆಳಗಿನ ಮತ್ತೆರಡು ಕೈಗಳು ಹಿರಣ್ಯಕಶಿಪುನ ಹೊಟ್ಟೆಯ ಭಾಗವನ್ನು ಬಗಿಯುತ್ತಿರುವಂತೆ ತೋರಲಾಗಿದೆ. ಜೊತೆಗೆ ಪ್ರಹ್ಲಾದನು ದೇವತೆಯ ಬಲಗಾಲಿನ ಪಾದವನ್ನು ಹಿಡಿದಿರುವಂತೆಯೂ ತಂದೆಯ ರಕ್ಷಣೆಯ ದೃಷ್ಟಿಯಿಂದ ಬೇಡುಕೊಳ್ಳುವಂತೆಯೂ ಬಿಡಿಸಲಾಗಿದೆ. ಶಿಲ್ಪದಲ್ಲಿ ಪ್ರಹ್ಲಾದನೂ ಸೇರಿದಂತೆ ದೇವತೆಯು ಧೋತಿ, ಕಿರೀಟಮಕುಟ ಮತ್ತು ಇತರೆ ಆಭರಣಗಳನ್ನು ಧರಿಸಿರುವಂತೆ ತೋರಲಾಗಿದೆ.

ಹಿರಣ್ಯಕಶ್ಯಿಪುನನ್ನು ಸಂಹಾರ ಮಾಡುತ್ತಿರುವ ಈ ರೀತಿಯ ಶಿಲ್ಪಗಳು ಹಂಪಿಯ ಕೃಷ್ಣ, ವಿಠಲ ಹಾಗೂ ಆನೆಗುಂದಿಯ ರಂಗನಾಥ, ತಿಮ್ಮಲಾಪುರದ ವೇಣುಗೋಪಾಲಸ್ವಾಮಿ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಈ ಎಲ್ಲಾ ಶಿಲ್ಪಗಳು ಒಂದೇ ರೀತಿಯ ಸಾಮ್ಯತೆಗಳನ್ನು ಹೊಂದಿದ್ದರೂ ಸ್ವಲ್ಪಮಟ್ಟಿನ ಭಿನ್ನತೆಯನ್ನು ಕಾಣಬಹುದು. ಅಂದರೆ ಒಂದು ಶಿಲ್ಪದಲ್ಲಿ ನರಸಿಂಹನಿಗೆ ಎಂಟು ಕೈಗಳನ್ನು ತೋರಿಸಿದ್ದರೆ, ಮತ್ತೊಂದು ಶಿಲ್ಪದಲ್ಲಿ ಆರು ಕೈಗಳನ್ನು ತೋರಲಾಗಿರುತ್ತದೆ. ಕೃಷ್ಣ ದೇವಾಲಯದ ಮುಖಮಂಟಪದಲ್ಲಿನ ಶಿಲ್ಪ ಹಾಗೂ ವಿಠಲ ದೇವಾಲಯದ ಕಲ್ಯಾಣ ಮಂಟಪದ ಒಂದು ಕಂಬದಲ್ಲಿ ಕೆಳಗಿನಿಂದ ಮೇಲಕ್ಕೆ ಕ್ರಮವಾಗಿ ಕೆಳಪಟ್ಟಿಕೆಯಲ್ಲಿ ನರಸಿಂಹ ಕಂಬದಿಂದ ಹೊರಬಂದು ಹಿರಣ್ಯಕಶಿಪುವಿನ



ತಲೆಯ ಕೂದಲನ್ನು ಹಿಡಿದು ಬಲಗಾಲಿನಿಂದ ಒದೆಯುತ್ತಿರುವಂತೆಯೂ, ಮಧ್ಯಪಟ್ಟಿಯಲ್ಲಿ ಹಿರಣ್ಯಕಶಿಪುವಿನ ಜೊತೆ ಯುದ್ಧ ಮಾಡುತ್ತಿರುವಂತೆಯೂ, ಮೇಲ್ಪಟ್ಟಿಕೆಯಲ್ಲಿ ಅವನ ಹೊಟ್ಟೆಯನ್ನು ಬಗೆದು ಕರಳನ್ನು ಹಾರವನ್ನಾಗಿ ಧರಿಸುತ್ತಿರುವಂತೆಯೂ ತೋರಲಾಗಿದೆ. ಇದೇ ರೀತಿಯ ಮತ್ತೊಂದು ಶಿಲ್ಪ ಸಂಗೀತ ಮಂಟಪದಲ್ಲಿ ಕಂಡುಬರುತ್ತದೆ. ಈ ಶಿಲ್ಪವನ್ನು ಸುಂದರವಾಗಿ, ಸೂಕ್ಷ್ಮವಾಗಿ ಕೆತ್ತಿರುವುದರಿಂದ ದೇವತೆಯ ಆಭರಣಗಳು ಹಾಗೂ ಹಿರಣ್ಯಕಶಿಪುವಿನ ಕರಳು ಮುಂತಾದವು ಸ್ಪಷ್ಟವಾಗಿ ಕಂಡುಬರುತ್ತವೆ. ಈ ರೀತಿಯ ಶಿಲ್ಪಗಳಲ್ಲಿ ಇದು ಅತ್ಯಂತ ದೊಡ್ಡದಾದ ಶಿಲ್ಪವಾಗಿದ್ದು ಗಮನಾರ್ಹವಾಗಿದೆ.

ಹಂಪಿಯ ಕೃಷ್ಣ ದೇವಾಲಯ, ಗೆಜ್ಜಲಮಂಟಪ ಹಾಗೂ ಜಂಬುನಾಥನಹಳ್ಳಿಯ ಜಂಬುನಾಥೇಶ್ವರ ದೇವಾಲಯ, ತಿಮ್ಮಲಾಪುರದ ವೇಣುಗೋಪಾಲಸ್ವಾಮಿ ದೇವಾಲಯಗಳಲ್ಲಿ ಲಕ್ಷ್ಮಿ ನರಸಿಂಹನ ಪ್ರಮುಖ ಶಿಲ್ಪಗಳು ದೊರಕಿದ್ದು ಇವೆಲ್ಲವು ಅಚ್ಯುತ ದೇವಾಲಯದಲ್ಲಿನ ಶಿಲ್ಪಗಳನ್ನೇ ಹೋಲುತ್ತವೆಯಾದರೂ ಹಲವು ಜನ ಶಿಲ್ಪಿಗಳು ಕೆತ್ತನೆ ಕೆಲಸ ಮಾಡಿರುವುದರಿಂದ ಸ್ವಲ್ಪಮಟ್ಟಿನ ಭಿನ್ನತೆಯನ್ನು ಕಾಣಬಹುದು. ಹಂಪಿಯಲ್ಲಿ ಲಕ್ಷ್ಮಿ ನರಸಿಂಹನಿಗೆ ದೇವಾಲಯವನ್ನು ನಿರ್ಮಿಸಿದ್ದು ಇಲ್ಲಿನ ಲಕ್ಷ್ಮಿ ನರಸಿಂಹ ವಿಗ್ರಹವನ್ನು ಏಕಶಿಲೆಯ ಗ್ರಾನೈಟ್ ಕಲ್ಲಿನಿಂದ ಕೆತ್ತಲ್ಪಟ್ಟಿದ್ದು, ಏಳು ಹೆಡೆಯ ಸರ್ಪ ನರಸಿಂಹನಿಗೆ ನೆರಳನ್ನು ನೀಡಿ ಆಶ್ರಯ ನೀಡಿರುವುದು ವಿಶೇಷವಾಗಿದೆ. ಇದು ಉಗ್ರನರಸಿಂಹನೆಂದೇ ಪ್ರಸಿದ್ಧಿ ಪಡೆದಿದೆ. ಏಕೆಂದರೆ ಶಿಲ್ಪದಲ್ಲಿನ ಲಕ್ಷ್ಮಿಯ ಶಿಲ್ಪವು ನಾಶವಾಗಿದ್ದು, ಲಕ್ಷ್ಮಿದೇವಿಯ ಬಲಗೈ ದೇವತೆಯ ಬೆನ್ನನ್ನು ಆಲಂಗಿಸಿಕೊಂಡಿರುವುದನ್ನು ಮಾತ್ರ ಇಂದು ನಾವು ಕಾಣಬಹುದು. ಹಾಗಾಗಿ ಇದು ಲಕ್ಷ್ಮಿ ನರಸಿಂಹ ವಿಗ್ರಹವೆಂಬುದು ಖಚಿತವಾಗುತ್ತದೆ. ಹಾಗೆಯೇ ಹಂಪಿಯ ಸೀತಾಸೆರಗು ಮುಂಭಾಗದಲ್ಲಿ ಮತ್ತೊಂದು ನರಸಿಂಹ ದೇವಾಲಯವಿದೆ. ಒಟ್ಟಾರೆ ಲಕ್ಷ್ಮಿನರಸಿಂಹನ ಪ್ರಭಾವ, ಪ್ರಸಿದ್ಧಿ ಹಂಪಿಯಲ್ಲಿ ಎಷ್ಟರಮಟ್ಟಿಗೆ ಆಗಿದೆ ಎಂಬುದಕ್ಕೆ ಈ ದೇವಾಲಯಗಳೇ ಸಾಕ್ಷಿ ಎಂದರೆ ತಪ್ಪಾಗಲಾರದು.

ಹಂಪಿ ಪರಿಸರದಲ್ಲಿ ಕಂಡುಬಂದಿರುವ ಎಲ್ಲಾ ನರಸಿಂಹಾವತಾರದ ಶಿಲ್ಪದಲ್ಲಿನ ಮುಖಭಾಗವು ಸಿಂಹದಾಗಿದ್ದು ಇದು ಕಾರ್ನಿವೋರ (*Carnivora)* ಗಣದ, ಫೀಲಿಡೆ (*Philidae)* ಕುಟುಂಬಕ್ಕೆ ಸೇರಿದ ಭಾರತದ ಸಿಂಹವೆಂದು ಗುರುತಿಸಲಾಗಿದೆ. ಪ್ಯಾಂಥೆರಾ ಲಿಯೋ ಪರ್ಶಿಕಾ (*Panthera Leo Persica*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೫] ಹಂಪಿ ಪರಿಸರದಲ್ಲಿ ವರಾಹಾವತಾರಕ್ಕಿಂತ ನರಸಿಂಹಾವತಾರವು ಹೆಚ್ಚು ಪ್ರಸಿದ್ಧಿ ಮತ್ತು ಮನ್ನಣೆಯನ್ನು ಪಡೆದುಕೊಂಡಿತ್ತೆಂಬುದು ಇಲ್ಲಿ ಕಂಡುಬಂದಿರುವ ಶಿಲ್ಪಗಳಿಂದ ದೃಢಪಡುತ್ತದೆ ಹಾಗೂ ಹಂಪಿ ಪ್ರದೇಶದಲ್ಲಿ ಎರಡು ನರಸಿಂಹ ದೇವಾಲಯಗಳಿರುವುದು ಗಮನಾರ್ಹ. ಒಟ್ಟಾರೆ ಅತ್ಯಂತ ರೋಚಕವಾದ ಈ ಅವತಾರದಲ್ಲಿ ಭಗವಂತನ ಲೀಲೆ ಅತ್ಯದ್ಭುತವಾದುದು. ಶ್ರೀಹರಿ ಶಾಪಗ್ರಸ್ತ ಜಯ ವಿಜಯರ ಉದ್ಧಾರಕ್ಕಾಗಿ ಬಂದದ್ದು ಮಾತ್ರವಲ್ಲ, ಜಗತ್ತಿಗೊಬ್ಬ ಆದರ್ಶ ಬಾಲಕನನ್ನು ತೋರಿಸಿಕೊಟ್ಟನು. ಭಕ್ತಿಯಿಂದ ದೇಶ, ಕೋಶ, ಪತ್ನಿ, ಪುತ್ರರನ್ನು ತ್ಯಾಗ ಮಾಡಿದವರಿದ್ದಾರೆ. ಆದರೆ ಇಲ್ಲಿ ಪ್ರಹ್ಲಾದ ತಂದೆಯನ್ನೇ ಪ್ರತಿಭಟಿಸಿದ್ದು ಗಮನಾರ್ಹ. ಪ್ರಹ್ಲಾದನು ಚಿಕ್ಕ ಬಾಲಕನಾದರೂ ವಿಷ್ಣುವಿನಲ್ಲಿದ್ದ ನಿಶ್ಚಲ ಭಕ್ತಿಯಿಂದ ಬೆಂಕಿ, ನೀರು, ಗಾಳಿಗಳನ್ನು, ಹಿಂಸ್ರ



ಪ್ರಾಣಿಪಕ್ಷಿಗಳನ್ನು ಖಳನ ಖಡ್ಗವನ್ನೂ ಪ್ರತಿಭಟಿಸಿ ನಿಲ್ಲುವುದು ಸಾಧ್ಯವಾಯಿತು. ಸೃಷ್ಟಿಕರ್ತನ ಕರ್ತವ್ಯದಲ್ಲಿ ಶ್ರೀಹರಿಯೂ ಹಸ್ತಕ್ಷೇಪ ಮಾಡುವುದಿಲ್ಲ ಎಂಬುದನ್ನು ಸತ್ಯಗೊಳಿಸುವುದಕ್ಕಾಗಿ ಹಿರಣ್ಯಕಶಿಪುವಿನ ವಧಾಕಾರ್ಯದಲ್ಲಿ ಅವನಿಗೆ ದೊರಕಿದ ವರಗಳ ಎಳೆ ಎಳೆಗಳಿಗೂ ಮಾನ್ಯತೆಯನ್ನಿತ್ತು ಕಾರ್ಯವನ್ನು ಮುಗಿಸಿದನು. ಶ್ರೀಮನ್ನಾರಾಯಣನನ್ನು ಅಸುರ ವೈರಿ ಎನ್ನುವುದು ಸಾಮಾನ್ಯವಾಗಿದೆ. ಆದರೆ ಪ್ರಹ್ಲಾದ ಅಸುರ ಕುಲದವನಲ್ಲವೇ? ಹಾಗಾಗಿ ಶ್ರೀ ಹರಿ ಅಸುರೀ ಪ್ರವೃತ್ತಿಯ ವೈರಿಯೇ ಹೊರತು ಒಂದು ಜಾತಿಯ ವೈರಿಯಲ್ಲ[೩೦] ಎಂಬುದನ್ನು ಹಾಗೂ ಭಕ್ತರ ಮಾತನ್ನು ತೆಗೆದುಹಾಕದೆ, ಭಕ್ತನಿಗೆ ಸಕಾಲಕ್ಕೆ ಒಲಿಯುತ್ತೇನೆಂಬ ತತ್ವ ನರಸಿಂಹಾವತಾರದಲ್ಲಿ ಉಲ್ಲೇಖನೀಯವಾದ ಅಂಶವಾಗಿದೆ.

ಕಲ್ಕಿ ಅವತಾರ

ಕಲ್ಕಿಯು ವಿಷ್ಣುವಿನ ೧೦ನೇ ಅವತಾರವಾಗಿದೆ. ಇದು ಕಲಿಯುಗದ ಕೊನೆಯಲ್ಲಿ ಸಂಭವಿಸುತ್ತದೆ. ಅಗ್ನಿಪುರಾಣದ ಪ್ರಕಾರ ಕಲಿಯುಗದಲ್ಲಿ ಮನುಷ್ಯತ್ವವಿಲ್ಲದ ಪುರುಷರು ನರಕಕ್ಕೆ ಹೊಂದುವ ಕೃತ್ಯಗಳನ್ನು ಮಾಡುತ್ತಾರೆ. ಇದರಿಂದ ಜಾತಿ ಜಾತಿಗಳ ನಡುವೆ ಗೊಂದಲಗಳು ಉಂಟಾಗಿ ಸದ್ಗುಣ ಮತ್ತು ಧರ್ಮವು ಕಣ್ಮರೆಯಾಗುತ್ತವೆ. ಅಂತಹ ಸಮಯದಲ್ಲಿ ವಿಷ್ಣು ಕಲ್ಕಿ ಅವತಾರವಾಗಿ ಜನಿಸಿ ಧರ್ಮವನ್ನು ಪ್ರಚೋದನೆ ಮಾಡುತ್ತಾನೆ. ಅಧರ್ಮದ ಕಡೆ ನಿಂತ ಎಲ್ಲಾ ಬ್ರಷ್ಟರನ್ನು ಸಂಹಾರ ಮಾಡಿ ಧರ್ಮದ ಪ್ರಚೋದನೆ ಮಾಡುತ್ತಾನೆ. ಆದುದರಿಂದ ಪ್ರಚೋದಾಯತ್ ಎಂಬುದಾಗಿ ಗಾಯಿತ್ರಿ ಮಂತ್ರದಲ್ಲಿ ಅವನಿಗೆ ಹೆಸರು ಬಂದಿದೆ.


ಕಲಿಯುಗದ ಸಂಧ್ಯಾಕಾಲದಲ್ಲಿ ಧರ್ಮವು ಸಂಪೂರ್ಣವಾಗಿ ನಶಿಸಿಹೋಗುತ್ತದೆ. ಅಂತಹ ಸಮಯದಲ್ಲಿ ಬ್ರಷ್ಟರನ್ನು ನಿರ್ಮೂಲನೆ ಮಾಡಲು ಭಗವಂತ ಕಲ್ಕಿ ಅವತಾರವಾಗಿ ಜನಿಸುವನು. ಶ್ರೀಮದ್ಭಾಗವತ ಪ್ರಕಾರ ಈ ಅವತಾರವು ಭವಿಷ್ಯತ್‌ನಲ್ಲಿ ನಡೆಯುವ ಘಟನೆಯಾಗಿದೆ. ಕಲಿಯುಗದಲ್ಲಿ ದಯೆ, ಧರ್ಮ, ಸತ್ಯಹೀನವಾಗಿ ಕ್ರೋಧ, ಮದ ಮತ್ಸರಗಳಿಂದ ಮಹಿಳೆಯರನ್ನು, ಮಕ್ಕಳನ್ನು ಹಿಂಸಿಸಿ ಸಾಯಿಸುತ್ತಾರೆ. ಬೇರೆಯವರ ಸಂಪತ್ತನ್ನು, ಆಸ್ತಿಯನ್ನು ಆಕ್ರಮಿಸುವ ಹಾಗೂ ಪರಸ್ತ್ರೀಯರ ಮೇಲಿನ ವ್ಯಾಮೋಹದ ಕಲ್ಪನೆಗಳು ಹೆಚ್ಚಾಗುತ್ತವೆ. ಇದರ ಪ್ರತಿಫಲವಾಗಿ ದಿನದಿಂದ ದಿನಕ್ಕೆ ಧರ್ಮ, ದಯೆ, ನೀತಿ, ಸತ್ಯಗಳು ನಶಿಸಿಹೋಗುತ್ತವೆ. ಯಾವುದೇ ವರ್ಣಬೇಧವಿಲ್ಲದೇ ಧನ ಮತ್ತು ಬಲವಿರುವವರು ಪ್ರಭಲರಾಗುತ್ತಾರೆ. ಮಳೆ ಬೆಳೆಯಿಲ್ಲದೇ ಬರಗಾಲ ಬರುತ್ತದೆ. ಮನುಷ್ಯ ಮನುಷ್ಯರ ನಡುವೆ ಅನ್ಯೋನ್ಯತೆ ಕಡಿಮೆಯಾಗಿ ದ್ವೇಷಗಳು ಬೆಳೆಯುತ್ತವೆ. ಹೀಗೆ ಕಲಿಯುಗದಲ್ಲಿ ಜನರು ಅವಿನೀತಿಯ ಪರವಾದಾಗ ಭಗವಂತ ಧರ್ಮವನ್ನು, ಸತ್ಯವನ್ನು ಮತ್ತೆ ನೆಲೆಸುವಂತೆ ಮಾಡಲು ಭೂಮಿಯ ಮೇಲೆ ಅವತಾರವೆತ್ತಿ ಬರುತ್ತಾನೆ. ಆತನೇ ಕಲ್ಕಿ. ಇಕ್ಷಾಕು ವಂಶಸ್ಥನು ಶಂಬಾಲವೆಂಬ ಗ್ರಾಮದಲ್ಲಿ ವಿಷ್ಣುಯಶ ಮತ್ತು ಸುಮತಿ ಎಂಬ ದಂಪತಿಗೆ ಭಗವಂತನು ಕಲ್ಕಿಯಾಗಿ ಜನಿಸುವನು. ಆತನು ಪದ್ಮಾವತಿ ಎಂಬ ಯುವತಿಯನ್ನು ವಿವಾಹವಾಗಿ ಇಡೀ ಭೂಮಂಡಲಕ್ಕೆ ಅಧಿಪತಿಯಾಗಿ ಬಿಳಿ ಕುದುರೆಯ ಮೇಲೆ ಇಡೀ ಭೂಮಂಡಲವನ್ನೆಲ್ಲಾ ತಿರುಗಿ ತನ್ನ ಖಡ್ಗದಿಂದ ಅಧರ್ಮದ ಪರವಾಗಿರುವ ದುಷ್ಟರನ್ನೆಲ್ಲಾ ಸಂಹಾರ ಮಾಡಿ ಧರ್ಮವನ್ನು ಸಂಸ್ಥಾಪಿಸಿ ಮತ್ತೆ ಸುಲಲಿತವಾಗಿ ನಡೆಯುವಂತೆ ಮಾಡುತ್ತಾನೆ. ಇದೇ ಕಲ್ಕಿ ಅವತಾರದ ಕಥೆ.[೩೧]

ಈ ಮೇಲಿನ ಕಲ್ಕಿ ಅವತಾರದ ಶಿಲ್ಪಗಳು ಹಂಪಿ ಪರಿಸರದ ಕೆಲವೇ ಸ್ಮಾರಕಗಳಲ್ಲಿ ಕಂಡುಬರುತ್ತವೆ. ಪ್ರಮುಖವಾಗಿ ವಿಜಯವಿಠಲ, ಹಜಾರರಾಮ, ಕೃಷ್ಣ, ಅಚ್ಯುತರಾಯ ದೇವಾಲಯ ಮತ್ತು ಗಜಶಾಲೆಯ ಉತ್ತರಕ್ಕಿರುವ ಗುಡ್ಡದ ತಪ್ಪಲಿನಲ್ಲಿರುವ ದಶಾವತಾರ ಸಮೂಹ ಶಿಲ್ಪಗಳಲ್ಲಿ ಹಾಗೂ ಶ್ರೀವಿರೂಪಾಕ್ಷ ದೇವಾಲಯ ಮುಖಮಂಟಪದ ವರ್ಣಚಿತ್ರಗಳಲ್ಲಿನ ದಶಾವತಾರ ಸಮೂಹ ಚಿತ್ರಗಳಲ್ಲಿ ಕಂಡುಬರುತ್ತವೆ.


ಗಜಶಾಲೆಯ ಉತ್ತರಕ್ಕಿರುವ ಗುಡ್ಡದ ತಪ್ಪಲಿನಲ್ಲಿರುವ ದಶಾವತಾರ ಸಮೂಹ ಶಿಲ್ಪಗಳಲ್ಲಿ ಕಲ್ಕಿಯನ್ನು ೧೦ನೇ ಸ್ಥಾನದಲ್ಲಿ ತೋರಿಸಿದ್ದು ಸಮಭಂಗಿಯಲ್ಲಿ ನಿಂತಿರುವಂತೆ ತೋರಲಾಗಿದೆ. ಕಲ್ಕಿಗೆ



ಕಲ್ಕಿಯ ಶಿಲ್ಪ, ಹಜಾರರಾಮ ದೇವಾಲಯ, ಹಂಪಿ



ಕಲ್ಕಿಯ ಸ್ಥಾನದಲ್ಲಿ ಕುದುರೆಯನ್ನು ತೋರಿಸಿರುವ ಶಿಲ್ಪ, ಕೃಷ್ಣ ದೇವಾಲಯ, ಹಂಪಿ



ಗಜಶಾಲೆಯ ಉತ್ತರಕ್ಕಿರುವ ಗುಡ್ಡದಲ್ಲಿನ ಕಲ್ಕಿಯ ಶಿಲ್ಪ, ಹಂಪಿ



ಕಲ್ಕಿಯ ವರ್ಣಚಿತ್ರ, ಮುಖಮಂಟಪದ ಮೇಲ್ಚಾವಣಿ, ವಿರೂಪಾಕ್ಷ ದೇವಾಲಯ, ಹಂಪಿ









ನಾಲ್ಕು ಕೈಗಳನ್ನು ತೋರಿಸಿದ್ದು, ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿರುವಂತೆ, ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿರುವಂತೆ ಬಿಡಿಸಲಾಗಿದೆ. ಈತ ಕಿರೀಟಮಕುಟದ ಜೊತೆಗೆ ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಂತೆ ಕೆತ್ತಲಾಗಿದೆ. ಇಲ್ಲಿ ಕಲ್ಕಿಯ ವಾಹನವಾದ ಕುದುರೆಯನ್ನು ತೋರಿಸಿಲ್ಲ. ಇದೇ ರೀತಿಯ ಲಕ್ಷಣಗಳನ್ನು ಹೊಂದಿದ ಕಲ್ಕಿಯ ಶಿಲ್ಪ ಅಚ್ಯುತರಾಯ ದೇವಾಲಯದ ಉತ್ತರದ ಎರಡನೆ ಪ್ರವೇಶದ್ವಾರದ ಪಟ್ಟಿಕೆಯಲ್ಲಿ ಕಂಡುಬರುತ್ತದೆ.

ವಿಜಯವಿಠಲ, ಹಜಾರರಾಮ ದೇವಾಲಯದಲ್ಲಿನ ಶಿಲ್ಪಗಳು ಮತ್ತು ಶ್ರೀವಿರೂಪಾಕ್ಷ ದೇವಾಲಯ ಮುಖಮಂಟಪದ ವರ್ಣಚಿತ್ರಗಳಲ್ಲಿನ ದಶಾವತಾರ ಸಮೂಹ ಚಿತ್ರಗಳಲ್ಲಿನ ಕಲ್ಕಿ ಅವತಾರಗಳು ಪುರಾತನ ಗ್ರಂಥಗಳಲ್ಲಿ ಮತ್ತು ಪುರಾಣಗಳಲ್ಲಿ ನೀಡಿದ ವಿವರಣೆಗಳಿಗೆ ಅನುಗುಣವಾಗಿವೆ. ವಿಜಯವಿಠಲ ದೇವಾಲಯದ ಕಲ್ಯಾಣಮಂಟಪದ ಕಂಬದಲ್ಲಿ ಕಲ್ಕಿಯನ್ನು ಕುದುರೆಯ ಮೇಲೆ ಸವಾರಿ ಮಾಡಿತ್ತಿರುವಂತೆ ತೋರಲಾಗಿದೆ. ಇಲ್ಲಿ ಕುದುರೆಯು ಮುಂದಿನ ಬಲಗಾಲನ್ನು ಎತ್ತಿದ್ದು ಚಲಿಸುತ್ತಿರುವಂತೆ ಬಿಡಿಸಲಾಗಿದೆ. ಕಲ್ಕಿಯು ನಾಲ್ಕು ಕೈಗಳನ್ನು ಹೊಂದಿದ್ದು, ಮೇಲಿನ ಎರಡು ಕೈಗಳು ಶಂಖ ಮತ್ತು ಚಕ್ರಗಳನ್ನು ಹಿಡಿದಿರುವಂತೆ ಹಾಗೂ ಕೆಳಗಿನ ಎರಡು ಕೈಗಳಲ್ಲಿ ಎಡಗೈ ಕುದುರೆಯ ಲಗಾಮನ್ನು ಹಿಡಿದಿದ್ದು ಬಲಗೈ ಮುಂದೆ ಚಾಚಿದ್ದು, ಕುದುರೆಗೆ ಮುಂದೆ ಹೋಗಲು ಸೂಚಿಸುತ್ತಿರುವಂತೆ ತೋರಲಾಗಿದೆ. ಶಿಲ್ಪದಲ್ಲಿನ ಕಲ್ಕಿಯು ಕಿರೀಟಮಕುಟದ ಜೊತೆಗೆ ವಿವಿಧ ರೀತಿಯ ಆಭರಣಗಳನ್ನು ಧರಿಸಿರುವನು. ಇದೇ ರೀತಿಯ ಮತ್ತೊಂದು ಶಿಲ್ಪ ಹಜಾರರಾಮ ದೇವಾಲಯದ ನವರಂಗ ಒಂದು ಕಂಬದಲ್ಲಿ ಕಂಡರಿಸಲ್ಪಟ್ಟಿದೆ. ಈ ಶಿಲ್ಪದಲ್ಲಿ ಕಲ್ಕಿಯು ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದು, ಕೆಳಗಿನ ಎರಡು ಕೈಗಳಲ್ಲಿ ಬಲಗೈನಲ್ಲಿ ಖಡ್ಗವನ್ನು ಮತ್ತು ಎಡಗೈನಲ್ಲಿ ವೃತ್ತಾಕಾರದ ಗುರಾಣಿಯನ್ನು ಹಿಡಿದು ಅಲಂಕಾರಿಕ ಕುದುರೆಯ ಮೇಲೆ ಕುಳಿತು ಚಲಿಸುತ್ತಿರುವಂತೆ ತೋರಲಾಗಿದೆ. ಈ ಶಿಲ್ಪವನ್ನು ಕೀರ್ತಿಮುಖದ ಪಟ್ಟಿಕೆಯಲ್ಲಿ ಕೆತ್ತಲಾಗಿದ್ದು, ಹಂಪಿ ಪರಿಸರದ ಕಲ್ಕಿ ಶಿಲ್ಪಗಳಲ್ಲೇ ಇದು ಅತ್ಯಂತ ಸುಂದರವಾಗಿದೆ.

ಈ ಮೇಲಿನ ಶಿಲ್ಪಗಳಲ್ಲಿ ಕಲ್ಕಿಯನ್ನು ಚತುರ್ಭಜಧಾರಿಯಾಗಿ ತೋರಿಸಲಾಗಿದೆ. ಆದರೆ ಶ್ರೀವಿರೂಪಾಕ್ಷ ದೇವಾಲಯ ಮುಖಮಂಟಪದ ಮೇಲ್ಛಾವಣೆಯಲ್ಲಿನ ದಶಾವತಾರ ವರ್ಣಚಿತ್ರಗಳಲ್ಲಿನ ಕಲ್ಕಿಯನ್ನು ದ್ವಿಭುಜಧಾರಿಯಾಗಿ ತೋರಿಸಿರುವುದು ಸ್ವಲ್ಪಮಟ್ಟಿನ ಭಿನ್ನತೆಯನ್ನು ತೋರಿಸುತ್ತದೆ. ಈ ಚಿತ್ರದಲ್ಲಿ ಕಲ್ಕಿಯು ಬಿಳಿಕುದುರೆಯ ಮೇಲೆ ಕುಳಿತ್ತಿದ್ದು ಸವಾರಿ ಮಾಡಿತ್ತಿರುವಂತೆ ತೋರಿಸಲಾಗಿದೆ. ಕಲ್ಕಿಯು ಕಿರೀಟಮಕುಟದ ಜೊತೆಗೆ ವಿವಿಧ ರೀತಿಯ ವಸ್ತ್ರಾಭರಣಗಳನ್ನು ಧರಿಸಿರುವಂತೆಯೂ ಮತ್ತು ವಾಹನವಾದ ಕುದುರೆಯನ್ನು ಹೆಚ್ಚು ಅಲಂಕಾರಿಕವಾಗಿಯೂ ಚಿತ್ರಿಸಲಾಗಿದೆ. ಹಾಗೆಯೇ ಕೃಷ್ಣ ದೇವಾಲಯದ ಪೂರ್ವದ ಪ್ರವೇಶದ್ವಾರಗೋಪುರದ ಲತಾಸುರಳಿಯಲ್ಲಿನ ದಶಾವತಾರ ಶಿಲ್ಪಗಳಲ್ಲಿ ಕಲ್ಕಿಯನ್ನು ತೋರಿಸದೇ ಅವನ ಸ್ಥಾನದಲ್ಲಿ ವಾಹನವಾದ ಕುದುರೆಯನ್ನು ಮಾತ್ರ ತೋರಿಸಿರುವುದು ವಿಶೇಷವಾಗಿದೆ. ಹೀಗೆ ವಿವಿಧ ಕಾಲಘಟ್ಟಗಳಲ್ಲಿ ಅಧರ್ಮವನ್ನು ನಿರ್ಮೂಲನೆ ಮಾಡಿ ಧರ್ಮವನ್ನು ಪುನಃ ಸಂಸ್ಥಾಪಿಸಲು ಶ್ರೀವಿಷ್ಣು ಅವತಾರ ಪುರುಷನಾಗಿ ಜನ್ಮ ತಾಳುವನು. ಅದರಂತೆ ಕಲಿಯುಗದ ಕೊನೆಯಲ್ಲಿ ಧರ್ಮ, ನ್ಯಾಯ, ನೀತಿಗಳನ್ನು ರಕ್ಷಿಸುವ ಸಲುವಾಗಿ ವಿಷ್ಣು ತಾಳಿದ ಅವತಾರವೇ ಕಲ್ಕಿ

ಅವತಾರ. ಇದು ಭವಿಷ್ಯತ್ ಅವತಾರವಾದರೂ ಪುರಾಣಗಳಲ್ಲಿ ಇದರ ಕುರಿತು ಮಾಹಿತಿ ತಿಳಿದುಬರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಹಂಪಿ ಪರಿಸರದ ಕೆಲವು ಸ್ಮಾರಕಗಳಲ್ಲಿ ಕಲ್ಕಿ ಅವತಾರದ ಶಿಲ್ಪಗಳು ಕಂಡುಬಂದಿದ್ದು ಅವುಗಳನ್ನು ಈ ಮೇಲಿನಂತೆ ವಿವರಿಸಲಾಗಿದೆ.

ವಿಷ್ಣುವಿನ ದಶಾವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ ಹಾಗೂ ಕಲ್ಕಿ ಅವತಾರಗಳು ನನ್ನ ಅಧ್ಯಯನ ವಿಷಯಕ್ಕೆ ಪೂರಕವಾಗಿರುವುದರಿಂದ ಈ ಐದು ಅವತಾರಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದು ವಿವರಿಸಿರುತ್ತೇನೆ.

ಭಾಗವತಕ್ಕೆ ಸಂಬಂಧಿಸಿದ ಪ್ರಾಣಿಶಿಲ್ಪಗಳು

ವೇದವ್ಯಾಸರು ರಚಿಸಿದ ೧೮ ಪುರಾಣಗಳಲ್ಲಿ ಹೆಚ್ಚು ಪ್ರಸಿದ್ಧವಾದುದು ಹಾಗೂ ಪುರಾಣಗಳ ರಾಜ ಎನ್ನಬಹುದಾದ ಮಹಾಪುರಾಣ ಭಾಗವತ. ಕೃಷ್ಣಾವತಾರದ ಘಟನಾವಳಿಗಳ ಚಕ್ರ ಅತ್ಯಂತ ವಿಶಾಲವಾದುದು. ವ್ಯಾಸರು ಮಿಕ್ಕ ಎಲ್ಲಾ ಅವತಾರಗಳಿಗಿಂತ ಕೃಷ್ಣಾವತಾರಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಂತೆ ಕಾಣುತ್ತದೆ. ಶ್ರೀ ರಾಮಕೃಷ್ಣ ಪರಮಹಂಸರು ಶ್ರೀ ಕೃಷ್ಣ ಪರಮಾತ್ಮನನ್ನು ನೋಡುತ್ತಿದ್ದಾಗ ಅವನಿಂದ ಎರಡು ಕಿರಣಗಳು ಹೊರ ಹೊಮ್ಮಿದವು. ಒಂದು ಭಕ್ತರನ್ನು ತಲುಪಿದರೆ, ಇನ್ನೊಂದು ಭಾಗವತನನ್ನು ತಲುಪಿತು. ಕೊನೆಗೆ ಎಲ್ಲವೂ ಶ್ರೀಕೃಷ್ಣ ಪ್ರಕಾಶದಲ್ಲೇ ಲಯ ಹೊಂದಿವು ಎನ್ನುತ್ತಾರೆ. ಹೀಗೆ ಶ್ರೀಕೃಷ್ಣ ಚರಿತ್ರೆಯೇ ಭಾಗವತ. ಭಾಗವತ ವಾಚನವೆಂದರೆ ಶ್ರೀಕೃಷ್ಣಾವತಾರದ ಕಥೆ ಎಂಬ ನಂಬಿಕೆ ಪರಂಪರಾಗತವಾಗಿ ಜನಮನದಲ್ಲಿ ಬೇರೂರಿಕೊಂಡು ಬಂದಿದೆ.[೨೧] ವ್ಯಾಸರು ಭಾಗವತ ಪುರಾಣದ ಪ್ರತಿಪದದಲ್ಲಿಯೂ ಶ್ರೀಕೃಷ್ಣನನ್ನು ತಮ್ಮ ಮನತೃಪ್ತಿಯಾಗುವವರೆಗೆ ಕೊಂಡಾಡಿರುವುದರಿಂದ ಶ್ರೀ ಮದ್ಭಾಗವತವು ಎಲ್ಲಾ ಪುರಾಣಗಳಿಗಿಂತ ಸರ್ವಶ್ರೇಷ್ಠವಾಗಿದೆ.[೨೨]

ಭಾಗವತ ಪುರಾಣದಲ್ಲಿ ಶ್ರೀಕೃಷ್ಣನಿಂದ ನನಗೆ ಸಾವು ಎಂಬುದನ್ನು ತಿಳಿದ ಕಂಸನು ಕೃಷ್ಣನನ್ನು ಸಂಹಾರ ಮಾಡಲು ಅನೇಕ ಅಸುರರನ್ನು ಪ್ರಾಣಿಗಳ ರೂಪದಲ್ಲಿ ಕಳುಹಿಸುತ್ತಾನೆ. ಅಂತಹವುಗಳಲ್ಲಿ ವತ್ಸಾಸುರ (ಹಸುವಿನ ರೂಪ) ಬಕಾಸುರ (ಪಕ್ಷಿ ರೂಪ), ಕಾಳಿಯೂ (ಸರ್ಪ) ಮುಂತಾದವು ಪ್ರಮುಖವಾಗಿವೆ.[೨೩] ಇವು ನನ್ನ ಅಧ್ಯಯನಕ್ಕೆ ಪೂರಕವಾಗಿದ್ದರಿಂದ ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಹಂಪಿ ಪರಿಸರದಲ್ಲಿ ಭಾಗವತಕ್ಕೆ ಸಂಬಂಧಿಸಿದ ವತ್ಸಾಸುರ, ಭಕಾಸುರ ಮತ್ತು ಕಾಳಿಂಗಮರ್ಧನ ಶಿಲ್ಪಗಳು ಹೇರಳವಾಗಿ ಕಂಡುಬಂದಿವೆ. ಇವುಗಳಲ್ಲಿ ವತ್ಸಾಸುರನ ಶಿಲ್ಪಗಳು ಅತಿ ಕಡಿಮೆ ಸಂಖ್ಯೆಯಲ್ಲಿಯೂ, ಕಾಳಿಂಗಮರ್ಧನ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿಯೂ ಕಂಡುಬಂದಿರುತ್ತವೆ.

ಕಾಳಿಂಗಮರ್ಧನ

ಹಿನ್ನೆಲೆ : ಗರುಡನನ್ನು ಎದುರು ಹಾಕಿಕೊಂಡಿದ್ದ ಕಾಳಿಂಗ ಸರ್ಪವು ಅದರ ಹೆದರಿಕೆಯಿಂದ ತನ್ನ ಸ್ವಸ್ಥಳವನ್ನು ಬಿಟ್ಟು ಕಾಳಿಂದಿ ಮಡುವಿನಲ್ಲಿ ಬಂದು ಸೇರಿಕೊಂಡಿತ್ತು. ಅದು ಆ ನೀರಿನಲ್ಲಿ ತನ್ನ ಕುಟುಂಬದೊಂದಿಗೆ ಚೆಲ್ಲಾಟವಾಡಿಕೊಂಡು ಆನಂದದಿಂದ ಕಾಲ ಕಳೆಯುತ್ತಾ ಆ ಮಡುವಿನ

ನೀರನ್ನೆಲ್ಲಾ ವಿಷಮಯವನ್ನಾಗಿ ಮಾಡಿತ್ತು. ಕೃಷ್ಣನು ತನ್ನ ಗೆಳೆಯರ ಗುಂಪಿನೊಂದಿಗೆ ಆ ಮಡುವಿನ ಬಳಿಗೆ ಬರುವಷ್ಟರಲ್ಲಿ ಆಟವಾಡಿ ಬಳಲಿದ್ದ ಆ ಹುಡುಗರು ಕಾಳಿಂದಿ ಮಡುವನ್ನು ಕಂಡ ಕೂಡಲೇ ದಾಹವನ್ನು ನೀಗಿಸಲು ಬೊಗಸೆಯಿಂದ ನೀರೆತ್ತಿ ಕುಡಿದು ಪ್ರಜ್ಞಾಹೀನರಾದರು. ದನಗಳಿಗೂ ಪದೇ ಪದೇ ಅದೇ ಗತಿ ಆಗಿದೆ ಎಂದು ತಿಳಿದ ಕೃಷ್ಣನು ತನ್ನ ಶಕ್ತಿಯಿಂದ ಆ ಹುಡುಗರು ಮೇಲೇಳುವಂತೆ ಮಾಡಿದನು. ಮತ್ತು ಆ ಮಡುವಿಗೆ ಧುಮುಕಿ ತನ್ನನ್ನು ಸುತ್ತುಗಟ್ಟಿ ನಿಂತಿದ್ದ ಕಾಳಿಂಗವನ್ನು ಬಿಡಿಸಿಕೊಂಡು ಅದರ ಹೆಡೆಯನ್ನೇರಿ ಅದರ ಮೇಲೆ ಮನಮೋಹಕವಾಗಿ ನರ್ತಿಸಿದನು. ಇದರಿಂದಾಗಿ ಕಾಳಿಂಗನ ಶಕ್ತಿಯೆಲ್ಲವೂ ತಗ್ಗಿತು. ಕೊನೆಗೆ ಕಾಳಿಂಗವು ಶರಣಾಗಿ ತನ್ನನ್ನು ಅನುಗ್ರಹಿಸುವಂತೆ ಪ್ರಾರ್ಥಿಸಿತು. ಆಗ ಕೃಷ್ಣನು ಕಾಳಿಂಗನಿಗೆ ನೀನು ಇನ್ನು ಮುಂದೆ ಈ ಮಡುವಿನಲ್ಲಿ ಇರಬಾರದು. ನಿನ್ನ ಪರಿವಾರದೊಂದಿಗೆ ಹೊರಟು ಸಮುದ್ರದಲ್ಲಿ ಸೇರಿಕೋ. ಮುಂದೆ ಈ ನೀರು ಪ್ರಾಣಿಗಳಿಗೂ ಮನುಷ್ಯರಿಗೂ ವಿಷವಾಗಬಾರದು. ಈ ಘಟನೆಯಿಂದಾಗಿ ಈ ಮಡುವು ಪಾಪ ಪರಿಹಾರಕವೂ, ಸದ್ಗತಿದಾಯಕವೂ ಆಗಿ ಪ್ರಸಿದ್ಧಿ ಪಡೆಯುತ್ತದೆಂದು ಹೇಳಿದನು.[೩೫] ಈ ರೀತಿಯ ಕಥೆಯನ್ನು ಉಲ್ಲೇಖಿಸುವಂತಹ ಹಲವು ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬಂದಿವೆ.

ಹಂಪಿ ಪರಿಸರದ ದೇವಾಲಯಗಳಲ್ಲಿನ ಕಾಳಿಂಗಮರ್ಧನ ಶಿಲ್ಪಗಳ ಕೋಷ್ಟಕ

ಕ್ರಸಂ.	ದೇವಾಲಯಗಳು	ಕಾಳಿಂಗಮರ್ಧನ ಶಿಲ್ಪಗಳು
೦೧.	ಅಚ್ಯುತರಾಯ ದೇವಾಲಯ, ಹಂಪಿ	೫೧
೦೨.	ಕೃಷ್ಣ ದೇವಾಲಯ, ಹಂಪಿ	೧೮
೦೩.	ವಿಜಯವಿಠಲ ದೇವಾಲಯ, ಹಂಪಿ	೧೫
೦೪.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೧೨
೦೫.	ವಿರೂಪಾಕ್ಷ ದೇವಾಲಯ, ಹಂಪಿ	೮
೦೬.	ಹಜಾರರಾಮ ದೇವಾಲಯ, ಹಂಪಿ	೫
೦೭.	ಗೆಜ್ಜಲಮಂಟಪ, ಹಂಪಿ	೫
೦೮.	ಪಟ್ಟಾಭಿರಾಮ ದೇವಾಲಯ, ಹಂಪಿ	೪
೦೯.	ಪಾನ್‌ಸುಪಾರಿ ಬಜಾರಿನ ದೇವಾಲಯಗಳ ಸಮೂಹ	೯
೧೦.	ಚಂಡಿಕೇಶ್ವರ ದೇವಾಲಯ, ಹಂಪಿ	೨
೧೧.	ರಂಗನಾಥ ದೇವಾಲಯ, ಆನೆಗುಂದಿ	೭
೧೨.	ಜಂಬುನಾಥೇಶ್ವರ ದೇವಾಲಯ, ಜಂಬುನಾಥನಹಳ್ಳಿ	೭
೧೩.	ರಂಗನಾಥಸ್ವಾಮಿ ದೇವಾಲಯ, ನಾಗೇನಹಳ್ಳಿ	೨
೧೪.	ಈಶ್ವರ ದೇವಾಲಯ, ನಾಗೇನಹಳ್ಳಿ	೪

ಕ್ರಸಂ.	ದೇವಾಲಯಗಳು	ಕಾಳಿಂಗಮರ್ಧನ ಶಿಲ್ಪಗಳು
೧೫.	ಶಿವ ದೇವಾಲಯ, ನಿಂಬಾಪುರ	೨
೧೬.	ವಿಷ್ಣು ದೇವಾಲಯ, ನಿಂಬಾಪುರ	೧
೧೭.	ಗೋಪಾಲಸ್ವಾಮಿ ದೇವಾಲಯ, ತಿಮ್ಮಲಾಪುರ	೮
೧೮.	ಶಿವ ದೇವಾಲಯ, ತಿಮ್ಮಲಾಪುರ	೩
	ಒಟ್ಟು –	೧೬೩

ಹಂಪಿ ಪರಿಸರದಲ್ಲಿ ಒಟ್ಟು ೧೬೩ ಕಾಳಿಂಗಮರ್ಧನ ಶಿಲ್ಪಗಳು ಕಂಡುಬಂದಿದ್ದು, ಅತಿ ಹೆಚ್ಚು ಕಾಳಿಂಗಮರ್ಧನ ಶಿಲ್ಪಗಳನ್ನು ಹೊಂದಿರುವ ಕೀರ್ತಿ ಅಚ್ಯುತರಾಯ ದೇವಾಲಯಕ್ಕೆ ಸಲ್ಲುತ್ತದೆ. ಇಲ್ಲಿನ ಕೆಲವು ಶಿಲ್ಪಗಳಲ್ಲಿ ಬಾಲಕೃಷ್ಣನು ತನ್ನ ಎಡಗೈನಿಂದ ಸರ್ಪದ ಬಾಲವನ್ನು ಹಿಡಿದು ತನ್ನ ಬಲಗಾಲನ್ನು ಹೆಡೆಯ ಮೇಲಿಟ್ಟಂತೆ ಮತ್ತೆ ಕೆಲವು ಶಿಲ್ಪಗಳಲ್ಲಿ ಬಲಗೈಯಲ್ಲಿ ಸರ್ಪದ ಬಾಲವನ್ನು ಹಿಡಿದಿದ್ದು, ತನ್ನ ಎಡಗಾಲನ್ನು ಸರ್ಪದ ಹೆಡೆಯ ಮೇಲಿಟ್ಟು ನೃತ್ಯ ಮಾಡುತ್ತಿರುವಂತೆ ತೋರಲಾಗಿದೆ. ಇನ್ನು ಕೆಲವು ಶಿಲ್ಪಗಳಲ್ಲಿ ಕೃಷ್ಣನು ತನ್ನ ಎಡಗೈನಲ್ಲಿ ಚಿಕ್ಕದಾದ ಹಾವನ್ನು ಹಿಡಿದು ನೃತ್ಯ ಮಾಡುತ್ತಿರುವಂತೆ ತೋರಲಾಗಿದೆ.



ಕಾಳಿಂಗ ಸರ್ಪ
ಗಣ : ಒಫಿಡಿಯ
ಕುಟುಂಬ : ಇಲಾಫಿಡೆ



ಕಾಳಿಂಗ ಮರ್ಧನ ಶಿಲ್ಪ,
ಅಚ್ಯುತರಾಯ ದೇವಾಲಯ, ಹಂಪಿ

ಇಲ್ಲಿ ಸರ್ಪದ ಮೇಲೆ ನಿಲ್ಲದೇ ಇನ್ನು ಕೈಯಲ್ಲೇ ಹಿಡಿದು ನೃತ್ಯ ಮಾಡುತ್ತಿರುವುದು ಕಾಳಿಯ ಮರ್ಧನದ ಆರಂಭದ ಹಂತವೆಂದೇ ಹೇಳಬಹುದು. ಮತ್ತೆ ಕೆಲವು ಶಿಲ್ಪಗಳಲ್ಲಿ ಬಾಲಕೃಷ್ಣನು ಸಮಭಂಗಿಯಲ್ಲಿ ನಿಂತು ತನ್ನ ಎರಡೂ ಕೈಗಳಿಂದ ಕಾಳಿಂಗ ಸರ್ಪದ ಬಾಯಿಯನ್ನು ಸೀಳುತ್ತಿರುವಂತೆ ತೋರಲಾಗಿದೆ. ಇಲ್ಲಿ ಸರ್ಪವನ್ನು ದೊಡ್ಡದಾಗಿಯೂ ಮತ್ತು ತಲೆಯ ಮೇಲೆ ಕೂದಲಿನಂತೆ ಹುಬ್ಬಿದಂತೆಯೂ ತೋರಿರುವುದು ಗಮನಾರ್ಹ. ಹೀಗೆ ಹಂಪಿ ಪರಿಸರದ ಶಿಲ್ಪದಲ್ಲಿನ ಸರ್ಪದ ಲಕ್ಷಣ, ಆಕಾರದ ಆಧಾರದ ಮೇಲೆ ಇದು ಒಫಿಡಿಯ (*Ophidia*) ಗಣದ, ಇಲಾಫಿಡೆ (*Elaphidae*)



ಕುಟುಂಬಕ್ಕೆ ಸೇರಿದ ಕಾಳಿಂಗ ಸರ್ಪ ಅಥವಾ ರಾಜನಾಗರ ಹಾವು ಎಂದು ಗುರುತಿಸಲಾಗಿದೆ. ಒಫಿಯೊಫೇಗಸ್ ಹನ್ನ (*Ophiophagus Hannah*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ.[೩೬]

ಹಂಪಿ ಪರಿಸರದ ಇತರೆ ದೇವಾಲಯಗಳಲ್ಲಿನ ಎಲ್ಲಾ ಕಾಳಿಂಗಮರ್ಧನ ಶಿಲ್ಪಗಳು ಸಹ ಈ ಮೇಲೆ ವಿವರಿಸಿದ ಲಕ್ಷಣಗಳನ್ನೇ ಹೊಂದಿವೆಯಾದರೂ ಅನೇಕ ಜನ ಶಿಲ್ಪಿಗಳು ಇವುಗಳನ್ನು ಕೆತ್ತನೆ ಮಾಡಿರುವುದರಿಂದ ಸಹಜವಾಗಿ ಕೆಲವು ಸಣ್ಣಪುಟ್ಟ ವ್ಯತ್ಯಾಸಗಳು ಕಂಡುಬರುತ್ತವೆ.

ಭಕಪಕ್ಷಿ ಸಂಹಾರ

ಕಂಸನು ಕೃಷ್ಣನಿಗೆ ಮೇಲಿಂದ ಮೇಲೆ ಗಂಡಾಂತರಗಳನ್ನು ಸೃಷ್ಟಿಸುತ್ತಿದ್ದನು. ಅದರಲ್ಲಿ ಬಕಾಸುರನೆಂಬ ಅಸುರನು ಕೊಕ್ಕರೆ ರೂಪದಲ್ಲಿ ಬಂದು ಕೃಷ್ಣನನ್ನು ಕೊಲ್ಲಲು ಇಚ್ಚಿಸಿದನು. ಆಗ ಕೃಷ್ಣನು ಅದರ ಹಿಡಿತದಿಂದ ಬಿಡಿಸಿಕೊಂಡು ಕೊಕ್ಕರೆಯ ಬಾಯಿಯ ಎರಡೂ ತುದಿಗಳನ್ನು ಕೈಯಲ್ಲಿ ಹಿಡಿದು ಸೀಳಿಹಾಕಿದನು. ಈ ಕಥೆಯನ್ನು ವಿವರಿಸುವ ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬಂದಿವೆ. ಇಂತಹ ಶಿಲ್ಪಗಳಲ್ಲಿನ ಪಕ್ಷಿಯ ದೇಹ ಲಕ್ಷಣ, ಆಕಾರದ ಆಧಾರದ ಮೇಲೆ ಇದೊಂದು ಕೊಕ್ಕರೆ ಜಾತಿಯ ಹೆಬ್ಬಕ ಎಂದು ಗುರುತಿಸಲಾಗಿದೆ. ಇದು ಚೋರ್ಡಟಾ (Chordata) ಗಣದ, ಸಿಕೋನಿಡೆ (Siconidae) ಕುಟುಂಬಕ್ಕೆ ಸೇರಿದ್ದು, ಲೆಪ್ಟೋಟೀಸ್ ಜವಾನಿಯಸ್ (*Leptoptilos Javanius*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೩೭]

ಹಂಪಿ ಪರಿಸರದ ದೇವಾಲಯಗಳಲ್ಲಿನ ಭಕಪಕ್ಷಿ ಸಂಹಾರ ಶಿಲ್ಪಗಳ ಕೋಷ್ಟಕ

ಕ್ರ.ಸಂ.	ದೇವಾಲಯಗಳು	ಭಕಪಕ್ಷಿ ಸಂಹಾರ ಶಿಲ್ಪಗಳು
೦೧.	ಅಚ್ಯುತರಾಯ ದೇವಾಲಯ, ಹಂಪಿ	೩
೦೨.	ಕೃಷ್ಣ ದೇವಾಲಯ, ಹಂಪಿ	೨
೦೩.	ವಿಜಯವಿಠಲ ದೇವಾಲಯ, ಹಂಪಿ	೮
೦೪.	ಪಟ್ಟಾಭಿರಾಮ ದೇವಾಲಯ, ಕಮಲಾಪುರ	೨
೦೫.	ವಿರೂಪಾಕ್ಷ ದೇವಾಲಯ, ಹಂಪಿ	೧
೦೬.	ಹಜಾರರಾಮ ದೇವಾಲಯ, ಹಂಪಿ	೧
೦೭.	ಚಂಡಿಕೇಶ್ವರ ದೇವಾಲಯ, ಹಂಪಿ	೧
೦೮.	ವೇಣುಗೋಪಾಲಸ್ವಾಮಿ ದೇವಾಲಯ, ತಿಮ್ಮಲಾಪುರ	೧
	ಒಟ್ಟು –	೧೯

ಹಂಪಿ ಪರಿಸರದಲ್ಲಿ ಒಟ್ಟು ೧೯ ಭಕಪಕ್ಷಿ ಸಂಹಾರ ಶಿಲ್ಪಗಳು ಕಂಡುಬಂದಿದ್ದು, ವಿಠಲ ದೇವಾಲಯವು ಅತಿ ಹೆಚ್ಚು ಭಕಪಕ್ಷಿ (೮) ಸಂಹಾರ ಶಿಲ್ಪಗಳನ್ನು ಹೊಂದಿರುವ ದೇವಾಲಯವಾಗಿದೆ. ಈ ದೇವಾಲಯದ ಕಲ್ಯಾಣಮಂಟಪದ ಕಂಬದಲ್ಲಿನ ಭಕಪಕ್ಷಿ ಸಂಹಾರ ಶಿಲ್ಪದಲ್ಲಿ ಬಾಲಕೃಷ್ಣನು


ತನ್ನ ಬಲಗಾಲನಿಂದ ಪಕ್ಷಿಯ ಕೊರಳನ್ನು ಸುತ್ತುವರೆದು ಹಿಡಿದುಕೊಂಡಂತೆ ಮತ್ತು ತನ್ನ ಎರಡು ಕೈಗಳಿಂದ ಪಕ್ಷಿಯ ಬಾಯಿಯನ್ನು ಸೀಳುತ್ತಿರುವಂತೆಯೂ ತೋರಲಾಗಿದೆ.

ಶಿಲ್ಪದಲ್ಲಿನ ಕೃಷ್ಣನು ಕಿವಿಯೋಲೆ, ಕಂಠಹಾರ, ನಡುಪಟ್ಟಿ, ಕೈಕಡಗ, ಕಾಲ್ಗಡಗ ಇತರೆ ಆಭರಣಗಳನ್ನು ಧರಿಸಿರುವಂತೆ ತೋರಲಾಗಿದೆ. ಆದರೆ ಇದರಲ್ಲಿ ಕೃಷ್ಣನಿಗೆ ಕಿರೀಟಮಕುಟವನ್ನು ತೋರಿಸಿಲ್ಲ. ಇದೇ ರೀತಿಯ ಸಾಮ್ಯತೆಯುಳ್ಳ ಶಿಲ್ಪಗಳು ಅಚ್ಯುತರಾಯ, ಕೃಷ್ಣ ವಿರೂಪಾಕ್ಷ, ಹಜಾರರಾಮ ಮುಂತಾದ ದೇವಾಲಯಗಳಲ್ಲಿ ಕಂಡುಬಂದಿರುತ್ತವೆ.

ಭಕಪಕ್ಷಿ ಸಂಹಾರ ಶಿಲ್ಪಗಳಿಗೆ ಹೋಲಿಸಿದರೆ ಕಾಳಿಂಗಮರ್ಧನ ಶಿಲ್ಪಗಳು ಹಂಪಿ ಪರಿಸರದಲ್ಲಿ ಹೆಚ್ಚಿನ ಮನ್ನಣೆ ಮತ್ತು ಪ್ರಸಿದ್ಧಿಯನ್ನು ಪಡೆದುಕೊಂಡಿದ್ದವು ಎಂಬುದು ಇಲ್ಲಿ ಕಂಡುಬಂದಿರುವ ಶಿಲ್ಪಗಳಿಂದ ದೃಢಪಡುತ್ತದೆ.



ಹೆಬ್ಬಕ
ಗಣ : ಸಿಕೋನಿಫಾರ್ಮಿಸ್
ಕುಟುಂಬ : ಸಿಕೋನಿಡೆ



ಬಕಪಕ್ಷಿ ಸಂಹಾರ ಶಿಲ್ಪ
ವಿಜಯವಿಠಲ ದೇವಾಲಯ, ಹಂಪಿ

ರಾಮಾಯಣಕ್ಕೆ ಸಂಬಂಧಿಸಿದ ಪ್ರಾಣಿಶಿಲ್ಪಗಳು

ಅವತಾರ ಪುರುಷನಾದ ಶ್ರೀರಾಮನು ಮೂರು ಲೋಕಗಳಲ್ಲಿ ಧರ್ಮ ಸಂಸ್ಥಾಪನೆ ಮಾಡಲು ಬಂದವನು. ಅಂತಹ ಅವತಾರ ಪುರುಷನ ಸಮಸ್ತ ವಿವರಗಳನ್ನು ಸಂಪೂರ್ಣವಾಗಿ ರಾಮಾಯಣದಲ್ಲಿ ನೀಡಲಾಗಿದೆ. ಅಧರ್ಮವನ್ನು ಎತ್ತಿ ಹಿಡಿಯಲು ಹೊರಟ ಪಾತ್ರಗಳು ಅವನತಿಯನ್ನು ಹೊಂದುತ್ತವೆ ಎಂಬುದನ್ನು ರಾಮಾಯಣವು ತಿಳಿಸಿ ಹೇಳುತ್ತದೆ.

ರಾಮಾಯಣದ ಅರಣ್ಯಕಾಂಡದಲ್ಲಿ ರಾಮನ ವನವಾಸದ ಜೀವನವನ್ನು ತಿಳಿಯಬಹುದು. ಸೀತೆಯ ಮೋಹಕ್ಕೆ ಒಳಗಾದ ರಾವಣನು ಸೀತೆಯನ್ನು ಅಪಹರಿಸಲು ಕಾರ್ಯ ಪ್ರವೃತ್ತನಾಗುತ್ತಾನೆ. ಈ ಕಾರ್ಯಕ್ಕೆ ಮಾರೀಚನು ವಿಧಿಯಿಲ್ಲದೆ ಸಹಕರಿಸಲು ಒಪ್ಪಲೇಬೇಕಾಯಿತು. ಹಾಗಾಗಿ ಮಾರೀಚನು ಒಂದು ಉಪಾಯವನ್ನು ಹೂಡಿದನು. ಅದೇ ಮಾಯಾಮೃಗ ಅಥವಾ ಮಾಯಾಜಿಂಕೆಯ ರೂಪ.[೩೮]





ರಾಮ, ಲಕ್ಷ್ಮಣ ಮತ್ತು ಸೀತೆಯು ವಾಸಿಸುತ್ತಿದ್ದ ಆಶ್ರಮದ ಬಳಿಗೆ ಅತ್ಯಂತ ಮನೋಹರವಾದ ಜಿಂಕೆಯ ರೂಪವನ್ನು ಧರಿಸಿ, ಅಲ್ಲಲ್ಲಿಯೇ ಸುಳಿದಾಡುತ್ತಿರುವಾಗ ಸೀತೆಯು ಅದನ್ನು ಕಂಡು ಮನಸೋತು ಆ ಜಿಂಕೆ ನನಗೆ ಬೇಕೆಂದು ರಾಮನಿಗೆ ಹೇಳಿದಳು. ಅದನ್ನು ಹಿಡಿದು ತಂದು ಕೊಡಲೇಬೇಕೆಂದು ಅದರ ಬೆನ್ನಟ್ಟಿದ ರಾಮನು ಎಷ್ಟೇ ಪ್ರಯತ್ನಿಸಿದರೂ ಅದು ಸಿಗದಿದ್ದಾಗ ಬಾಣ ಹೊಡೆದನು. ಆಗ ಜಿಂಕೆಯು ರಾಕ್ಷಸನ ಮೂಲ ಪಡೆಯುತ್ತಾ ನೆಲಕ್ಕೆ ಬಿದ್ದಿತು. ಈ ಘಟನೆಯನ್ನು ತಿಳಿಸುವಂತ ಶಿಲ್ಪಗಳು ಹಂಪಿ ಪರಿಸರದ ದೇವಾಲಯಗಳಲ್ಲಿ ಕಂಡುಬಂದಿವೆ. ಅಂತವುಗಳಲ್ಲಿ ಪ್ರಮುಖವಾಗಿ ವಿಜಯವಿಠಲ ದೇವಾಲಯದಲ್ಲಿ ಎರಡು ಶಿಲ್ಪಗಳು, ಹಜಾರರಾಮಸ್ವಾಮಿ ದೇವಾಲಯದಲ್ಲಿ ಮತ್ತು ವಿರೂಪಾಕ್ಷ ದೇವಾಲಯದಲ್ಲಿ ತಲಾ ಒಂದೊಂದು ಶಿಲ್ಪಗಳು ಕಂಡುಬಂದಿವೆ.



ಚಿಂಕಾರ / ಜಿಂಕೆ
ಗಣ : ಆರ್ಟಿಯೋಡಾಕ್ಟೈಲ
ಕುಟುಂಬ : ಬೋವಿಡೆ



ಮಾಯಾ ಜಿಂಕೆಯ ಶಿಲ್ಪ,
ವಿಜಯವಿಠಲ ದೇವಾಲಯ, ಹಂಪಿ

ಹಂಪಿಯ ವಿಜಯವಿಠಲ ದೇವಾಲಯದ ಕಲ್ಯಾಣಮಂಟಪದಲ್ಲಿನ ಶಿಲ್ಪದಲ್ಲಿ ರಾಮನು ಮಾಯಾಜಿಂಕೆಗೆ ಬಾಣ ಹೂಡುತ್ತಿರುವಂತೆಯೂ, ಆ ಬಾಣ ಜಿಂಕೆಗೆ ನಾಟಿ ಅಸುರ ರೂಪವನ್ನು ತಾಳುತ್ತಿರುವಂತೆಯೂ ತೋರಲಾಗಿದೆ. ಜಿಂಕೆಯ ತಲೆಯು ನೆಲದ ಮೇಲೆ ಬಿದ್ದಿದ್ದು, ಜಿಂಕೆಯ ಕೊರಳಿನ ಭಾಗದಿಂದ ಅಸುರನು ಉದ್ಭವನಾಗುತ್ತಿರುವಂತೆ ತೋರಿಸಲಾಗಿದೆ. ಶಿಲ್ಪದಲ್ಲಿನ ರಾಮನು ತನ್ನ ಎಡಗೈನಲ್ಲಿ ಬಿಲ್ಲನ್ನು ಹಿಡಿದಿದ್ದು ಬಲಗೈನಿಂದ ಬಾಣ ಹೂಡಿದಂತೆ ತೋರಲಾಗಿದೆ. ಇದೇ ರೀತಿಯ ಲಕ್ಷಣಗಳನ್ನು ಹೊಂದಿರುವ ಶಿಲ್ಪವು ಇದೇ ದೇವಾಲಯದ ನವರಂಗದ ಕಂಬದಲ್ಲಿ ಕಂಡುಬರುತ್ತದೆ. ಆದರೆ ಈ ಶಿಲ್ಪದಲ್ಲಿ ಜಿಂಕೆಯು ಮೇಲಕ್ಕೆ ಜಿಗಿದಿದ್ದು ಅಸುರನ ಮೂಲ ರೂಪ ಪಡೆಯುತ್ತಿರುವಂತೆ ತೋರಲಾಗಿರುವುದು ಭಿನ್ನತೆಯನ್ನು ಸೂಚಿಸುತ್ತದೆ.

ವಿರೂಪಾಕ್ಷ ಹಾಗೂ ಹಜಾರರಾಮ ದೇವಾಲಯಗಳಲ್ಲಿನ ಶಿಲ್ಪಗಳು ಸಹ ಈ ಮೇಲೆ ವಿವರಿಸಿದ ವಿಠಲ ದೇವಾಲಯದಲ್ಲಿನ ಶಿಲ್ಪಗಳ ಸಾಮ್ಯತೆಯನ್ನೇ ಹೊಂದಿವೆ. ಆದರೂ ಈ ಶಿಲ್ಪಗಳನ್ನು ಹಲವರು ಕೆತ್ತಿರುವ ಕಾರಣದಿಂದ ಸ್ವಲ್ಪಮಟ್ಟಿನ ಭಿನ್ನತೆಗಳನ್ನು ಕಾಣಬಹುದು. ಹಂಪಿ ಪರಿಸರದಲ್ಲಿನ ಈ ರೀತಿಯ ಶಿಲ್ಪಗಳಲ್ಲಿನ ಜಿಂಕೆಯ ಕೋಡು, ಇತರೆ ದೇಹಲಕ್ಷಣ ಮತ್ತು ಆಕಾರದ ಆಧಾರದ ಮೇಲೆ ಇದು




ಆರ್ಟಿಯೊಡ್ಯಾಕ್ಟೈಲ (*Artiyodactyla*) ಗಣದ, ಬೋವಿಡೆ (*Bovidae*) ಕುಟುಂಬಕ್ಕೆ ಸೇರಿದ ಚಿಂಕಾರ ಅಥವಾ ಭಾರತದ ಗಸೆಲ (*Indian Gazzele*) ಎಂದು ಗುರುತಿಸಲಾಗಿದೆ. ಗಸೆಲ ಬೆನ್ನಟ್ಟಿ (*Gezzela Bennatti*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ.[೫೯]

ರಾವಣನು ಸನ್ಯಾಸಿ ವೇಷದಲ್ಲಿ ಬಂದು ಸೀತೆಯನ್ನು ಅಪಹರಿಸಿಕೊಂಡು ಹೋಗುತ್ತಿರುವಾಗ ಜಟಾಯುವು ಕಂಡು ರಾವಣನ ಜೊತೆ ಕಾದಾಡಿ ಸಾವನ್ನಪ್ಪುವ ಸನ್ನಿವೇಶವು ಸಹ ಪ್ರಸಿದ್ಧಿಯಾಗಿದೆ. ಈ ಘಟನೆಯನ್ನು ವಿವರಿಸುವ ಶಿಲ್ಪಗಳು ಹಂಪಿಯ ಹಜಾರರಾಮ ದೇವಾಲಯದಲ್ಲಿ ಮಾತ್ರ ದೊರಕಿದ್ದು ಒಟ್ಟು ನಾಲ್ಕು ಜಟಾಯು ಶಿಲ್ಪಗಳು ಕಂಡುಬಂದಿವೆ. ಅದರಲ್ಲಿ ಮುಖ್ಯವಾದುದು ದೇವಾಲಯದ ಭಿತ್ತಿಯಲ್ಲಿ ಕಂಡುಬರುತ್ತದೆ.



ಜಟಾಯು / ಹದ್ದು
ಗಣ : ಚೋರ್ಡಟ
ಕುಟುಂಬ : ಅಸಿಪಿಟ್ರಿಡೆ



ರಾವಣನೊಂದಿಗೆ ಸೆಣಸಾಡುತ್ತಿರುವ
ಜಟಾಯುವಿನ ಶಿಲ್ಪ, ಹಜಾರರಾಮ
ದೇವಾಲಯ, ಹಂಪಿ

ಈ ಶಿಲ್ಪದಲ್ಲಿ ಕುದುರೆಯ ರಥವನ್ನು ತೋರಿಸಿದ್ದು ಅದರಲ್ಲಿ ಒಂದು ಕಡೆ ಸೀತೆಯನ್ನು ಮತ್ತೊಂದು ಕಡೆ ಹತ್ತು ತಲೆಯ ರಾವಣನನ್ನು ತೋರಿಸಲಾಗಿದೆ. ರಾವಣನು ಜಟಾಯು ಪಕ್ಷಿಯ ಜೊತೆ ಯುದ್ಧ ಮಾಡುತ್ತಿದ್ದು, ಖಡ್ಗದಿಂದ ಜಟಾಯುವಿನ ರೆಕ್ಕೆಗೆ ಹೊಡೆಯುತ್ತಿರುವಂತೆ ತೋರಿಸಲಾಗಿದೆ. ಉಳಿದ ಮೂರು ಶಿಲ್ಪಗಳಲ್ಲಿ ಕೇವಲ ಜಟಾಯುವಿನ ಉಬ್ಬುಶಿಲ್ಪವನ್ನು ಪಟ್ಟಿಕೆಯಲ್ಲಿ ತೋರಿಸಲಾಗಿದೆ. ಈ ಶಿಲ್ಪಗಳಲ್ಲಿನ ಜಟಾಯುವಿನ ದೇಹಲಕ್ಷಣ, ಆಕಾರದ ಆಧಾರದ ಮೇಲೆ ಇದು ಹದ್ದು ಜಾತಿಗೆ ಸೇರಿದ ಪಕ್ಷಿಯೆಂದು ಗುರುತಿಸಲಾಗಿದ್ದು, ಇದು ಚೋರ್ಡಟಾ (*Chordata*) ಗಣದ, ಅಸಿಪಿಟ್ರಿಡೆ (*Accipitradae*) ಕುಟುಂಬಕ್ಕೆ ಸೇರಿದ್ದು ಕ್ಲಾಂಗ ಹಸ್ಟಾಟ (*Clange Hastata*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೬೦] ಹೀಗೆ ಪುರಾಣದ ಕಥೆಗಳನ್ನು ಜನಸಾಮಾನ್ಯರಿಗೂ ತಿಳಿಸುವಂತ ಪ್ರಮುಖ ಆಕರಗಳಾಗಿ ಇಂತಹ ಶಿಲ್ಪಗಳು ಕಾರ್ಯನಿರ್ವಹಿಸುತ್ತಿವೆ ಎಂದೇ ಹೇಳಬಹುದು.

ಅಷ್ಟದಿಕ್ಪಾಲಕರ ಶಿಲ್ಪಗಳಲ್ಲಿ ಪ್ರಾಣಿಗಳು

ಅಷ್ಟದಿಕ್ಪಾಲಕರ ಪರಿಕಲ್ಪನೆಯು ವೇದಗಳ ಕಾಲದಿಂದಲೂ ಬೆಳೆದುಬಂದಿದೆ. ಬೌದ್ಧ ಮತ್ತು ಜೈನರ ಧಾರ್ಮಿಕ ಗ್ರಂಥಗಳು ಮತ್ತು ಆಚರಣೆಯಲ್ಲೂ ಈ ಪರಿಕಲ್ಪನೆಯನ್ನು ಕಾಣಬಹುದಾಗಿದೆ.





ಎಂಟು ದಿಕ್ಕುಗಳನ್ನು ಎಂಟು ದೇವತೆಗಳು ಸಂರಕ್ಷಿಸುತ್ತಾರೆ ಎಂಬುದು ಈ ಪರಿಕಲ್ಪನೆಯ ಅಂಶವಾಗಿದೆ. ಆ ನಂತರದ ಕಾಲದಲ್ಲಿ ಇನ್ನೆರಡು ದಿಕ್ಕುಗಳನ್ನು ಇವುಗಳ ಜೊತೆಗೆ ಸೇರಿಸಲಾಯಿತು. ಅವೇ ಮೇಲಿನ ದಿಕ್ಕು ಮತ್ತು ಕೆಳಗಿನ ದಿಕ್ಕುಗಳು. ಇವುಗಳಲ್ಲಿ ನಾಲ್ಕು ಪ್ರಮುಖ ದಿಕ್ಕುಗಳಾಗಿದ್ದು, ಉಳಿದವು ವಿದಿಕ್ಕುಗಳಾಗಿವೆ. ಪ್ರತಿಯೊಂದು ದಿಕ್ಕನ್ನು ಆಯಾ ನಿರ್ದಿಷ್ಟ ದೇವರು ರಕ್ಷಿಸುತ್ತಾನೆ. ಈ ಅಷ್ಟಾದಿಕ್ಪಾಲಕರ ಶಿಲ್ಪಗಳಲ್ಲಿ ದೇವರ ವಾಹನಗಳಾದ ಪ್ರಾಣಿಗಳನ್ನು ಮುಖ್ಯವಾಗಿ ಇಲ್ಲಿ ಗಣನೆಗೆ ತೆಗೆದುಕೊಂಡು ಅವುಗಳ ಪ್ರಾಮುಖ್ಯತೆಯನ್ನು ವಿವರಿಸಲಾಗಿದೆ.

ಅಷ್ಟದಿಕ್ಪಾಲಕರ ಹೆಸರುಗಳು, ಅವರ ದಿಕ್ಕುಗಳು ಮತ್ತು ವಾಹನಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.[೪೧]

ಕ್ರಸಂ.	ಅಷ್ಟದಿಕ್ಪಾಲಕರ ಹೆಸರುಗಳು	ದಿಕ್ಕುಗಳು	ವಾಹನಗಳು
೦೧.	ಇಂದ್ರ	ಪೂರ್ವ	ಐರಾವತ
೦೨.	ಅಗ್ನಿ	ಆಗ್ನೇಯ	ಟಗರು
೦೩.	ಯಮ	ದಕ್ಷಿಣ	ಕೋಣ
೦೪.	ನಿರ್ಋತಿ (ನಿರುತ್ತಿ)	ನೈರುತ್ಯ	ನರವಾಹನ
೦೫.	ವರುಣ	ಪಶ್ಚಿಮ	ಮೊಸಳೆ
೦೬.	ವಾಯು	ವಾಯವ್ಯ	ಜಿಂಕೆ
೦೭.	ಕುಬೇರ	ಉತ್ತರ	ಆನೆ (ಕುದುರೆ)
೦೮.	ಈಶಾನ	ಈಶಾನ್ಯ	ನಂದಿ

ಹಂಪಿ ಪರಿಸರದಲ್ಲಿ ಈ ರೀತಿಯ ಅಷ್ಟದಿಕ್ಪಾಲಕರ ಸಮೂಹ ಶಿಲ್ಪಗಳು ಹಂಪಿಯ ವಿಜಯವಿಠಲ ದೇವಾಲಯ, ವಿರೂಪಾಕ್ಷ ದೇವಾಲಯದ ಮುಖಮಂಟಪದ ವರ್ಣಚಿತ್ರಗಳಲ್ಲಿ ಮತ್ತು ಪಕ್ಕದ ಭುವನೇಶ್ವರಿ ದೇವಾಲಯದಲ್ಲಿ ಹಾಗೂ ಕಮಲಾಪುರದ ಪ್ರವಾಸಿ ಮಂದಿರದ ಮುಂಭಾಗದಲ್ಲಿ ಪ್ರಮುಖವಾಗಿ ಕಂಡುಬಂದಿವೆ.

ವಿಠಲ ದೇವಾಲಯದ ಆವರಣದಲ್ಲಿನ ಒಂದು ಪೀಠದಲ್ಲಿನ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕ್ರಮವಾಗಿ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

೧. **ಇಂದ್ರ:** ಇವನು ಪೂರ್ವ ದಿಕ್ಕಿನ ಅಧಿಪತಿ. ವಜ್ರಾಯುಧ ಇವನ ಆಯುಧವಾಗಿದ್ದು, ವೇದಗಳ ಕಾಲದಿಂದಲೂ ಅತ್ಯಂತ ಪ್ರಮುಖನಾದ ದೇವತೆಯಾಗಿದ್ದಾನೆ. ಇವನನ್ನು ಸ್ವರ್ಗದ ಒಡೆಯ ಎಂದು ಕರೆಯಲಾಗಿದೆ. ಇಂದ್ರನನ್ನು ಅಷ್ಟದಿಕ್ಪಾಲಕರ ಪಟ್ಟಿಕೆಯ ಪೂರ್ವಭಾಗದಲ್ಲಿ ಐರಾವತದ ಮೇಲೆ ಕುಳಿತು ಹೋಗುತ್ತಿರುವಂತೆ ತೋರಲಾಗಿದೆ. ಶಿಲ್ಪದಲ್ಲಿನ ಇಂದ್ರನು ನಾಲ್ಕು ಕೈಗಳನ್ನೊಂದಿದ್ದು, ಮೇಲಿನ ಎರಡು ಕೈಗಳಲ್ಲಿ ಬಲಗೈನಲ್ಲಿ ವಜ್ರಾಯುಧವನ್ನು, ಎಡಗೈನಲ್ಲಿ ಥಾಲಿಯನ್ನು ಹಿಡಿದಿದ್ದರೆ, ಕೆಳಭಾಗದ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿರುವಂತೆ ಬಿಡಿಸಲಾಗಿದೆ. ಇಂದ್ರನು ಧೋತಿಯನ್ನು

ಧರಿಸಿದ್ದು, ಕಿರೀಟಮಕುಟ, ಕಂಠಹಾರ, ಎದೆಹಾರ, ನಡುಪಟ್ಟಿ, ಕೈಕಡಗ, ಕಾಲ್ಗಡಗ ಮತ್ತು ಇತರೆ ಆಭರಣಗಳನ್ನು ಧರಿಸಿರುವನು. ಶಿಲ್ಪದಲ್ಲಿ ಐರಾವತ (ಆನೆ)ವು ಚಲಿಸಿರುವಂತಿದ್ದು, ಅದರ ಮೈಮೇಲೆ ಅಲಂಕೃತ ಬಟ್ಟೆಯನ್ನು ಹೊದಿಸಿರುವಂತೆಯೂ ತೋರಲಾಗಿದೆ. ಆನೆಗಳಲ್ಲಿ ಪ್ರಮುಖವಾಗಿ ಎರಡು ಪ್ರಭೇದಗಳಿವೆ. ಒಂದು ಎಲಿಫಾಸ್ ಆಫ್ರಿಕಾನ (ಆಫ್ರಿಕಾದ ಆನೆ), ಎರಡನೆಯದು ಎಲಿಫಾಸ್ ಮ್ಯಾಕ್ಸಿಮಸ್ (ಭಾರತದ ಆನೆ). ಹಂಪಿ ಪರಿಸರದ ಶಿಲ್ಪಗಳಲ್ಲಿನ ಎಲ್ಲಾ ಆನೆಗಳು ಭಾರತದ ಆನೆಗಳಾಗಿದ್ದು ಪ್ರೊಬಾಸಿಡಿಯ (*Probacidia*) ಗಣದ, ಎಲಿಫಾನ್‌ಟಿಡೆ (*Elephanitidae*) ಕುಟುಂಬಕ್ಕೆ ಸೇರಿವೆ. ಎಲಿಫಾಸ್ ಮ್ಯಾಕ್ಸಿಮಸ್ (*Elephas maximus*) ಎಂಬುದು ಇದರ ವೈಜ್ಞಾನಿಕ ಹೆಸರು.[೬೨]

ಅಪರಾಜಿತಪೃಚ್ಛ ಗ್ರಂಥವು ಇಂದ್ರನ ಎಡಗೈನಲ್ಲಿ ಥಾಲಿಯನ್ನು ಹಿಡಿದಿರಬೇಕೆಂದು ತಿಳಿಸುತ್ತದೆ. ಅದರಂತೆ ಇಲ್ಲಿನ ಶಿಲ್ಪದಲ್ಲಿ ಇಂದ್ರನು ತನ್ನ ಎಡಗೈನಲ್ಲಿ ಥಾಲಿಯನ್ನು ಹಿಡಿದಿರುವಂತೆ ತೋರಲಾಗಿದೆ. ಹಾಗಾಗಿ ಶಿಲ್ಪಿಯು ಕೆಲಮಟ್ಟಿಗೆ ಶಾಸ್ತ್ರ ಗ್ರಂಥಗಳ ನಿಯಮಗಳನ್ನು ಅನುಸರಿಸಿ ಶಿಲ್ಪಗಳನ್ನು ಕೆತ್ತಿದ್ದಾನೆಂಬುದು ಸ್ಪಷ್ಟವಾಗುತ್ತದೆ.



ಇಂದ್ರನ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

೨. ಅಗ್ನಿ: ಅಗ್ನಿಯ ಆಗ್ನೇಯ ದಿಕ್ಕಿನ ಅಧಿಪತಿ. ಇವನು ಇಂದ್ರ ಮತ್ತು ಸೂರ್ಯರಿಗೆ ಸಮನಾದ ಸ್ಥಾನವನ್ನು ಪಡೆದುಕೊಂಡಿದ್ದ. ಅಗ್ನಿ, ಇಂದ್ರ ಮತ್ತು ಸೂರ್ಯ ಈ ಮೂರು ದೇವತೆಗಳು ವೇದಗಳ ಕಾಲದಲ್ಲಿ ತ್ರಿಮೂರ್ತಿಗಳಾಗಿ ಪ್ರಸಿದ್ಧಿಯನ್ನು ಪಡೆದಿದ್ದರು. ಅನಂತರದ ಕಾಲದಲ್ಲಿ ಅಗ್ನಿಯನ್ನು ಕಿರಿಯ ಸ್ಥಾನಕ್ಕೆ ಇಳಿಸಲಾಯಿತು. ಇವನು ಎಲ್ಲವನ್ನು ಸ್ವಾಹ ಮಾಡುವ ಸಂಕೇತನಾಗಿದ್ದಾನೆ.

ವಿಠಲ ದೇವಾಲಯದ ಶಿಲ್ಪದಲ್ಲಿ ಅಗ್ನಿಯನ್ನು ಆಗ್ನೇಯ ದಿಕ್ಕಿನಲ್ಲಿ ತನ್ನ ವಾಹನವಾದ ಟಗರಿನ ಮೇಲೆ ಚಲಿಸುತ್ತಿರುವಂತೆ ಕೆತ್ತಲಾಗಿದೆ. ಈ ಶಿಲ್ಪದಲ್ಲಿನ ಟಗರಿನ ದೇಹ ಲಕ್ಷಣ ಮತ್ತು ಆಕಾರದ ಆಧಾರದ ಮೇಲೆ ಇದು ಆರ್ಟಿಯೊಡ್ಯಾಕ್ಟೈಲ (*Artiodactyla*) ಗಣದ, ಬೋವಿಡೆ (*Bovidae*) ಕುಟುಂಬಕ್ಕೆ ಸೇರಿದ ಗಂಡು ಕುರಿ ಎಂದು ಗುರುತಿಸಲಾಗಿದ್ದು, ಒವಿಸ್ ಅರಿಯಸ್ (*Ovis aries*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೬೩] ಹಂಪಿ ಪರಿಸರದ ಇತರೆ ಶಿಲ್ಪಗಳಲ್ಲಿನ ಟಗರುಗಳ ಸಹ ಇದೇ ಪ್ರಭೇದಕ್ಕೆ ಸೇರಿದವುಗಳಾಗಿವೆ. ಶಿಲ್ಪದಲ್ಲಿ ಅಗ್ನಿಯು ಎರಡು ಕೈಗಳನ್ನು ಹೊಂದಿದ್ದು, ಬಲಗೈನಲ್ಲಿ ದಂಡದಂತಿರುವ ಆಯುಧವನ್ನು, ಎಡಗೈನಲ್ಲಿ ಕಮಲದ ಹೂವಿನ ಮೊಗ್ಗಿನಂತಿರುವ ವಸ್ತುವೊಂದನ್ನು ಹಿಡಿದಿರುವಂತೆಯೂ ತೋರಲಾಗಿದೆ. ಅಗ್ನಿಯು ಕಿರೀಟಮಕುಟ, ಕಂಠಹಾರ, ಎದೆಹಾರ




ಅಗ್ನಿಯ ಶಿಲ್ಪ, ಪ್ರವಾಸಿ ಮಂದಿರದ ಮುಂಭಾಗ, ಕಮಲಾಪುರ





ಇತರೆ ಆಭರಣಗಳನ್ನು ಧರಿಸಿದ್ದಾನೆ. ಅಗ್ನಿಯು ಎಡಗೈನಲ್ಲಿ ಕಮಲದ ಪುಷ್ಪವನ್ನು ಹಿಡಿದಿರಬೇಕೆಂದು ಅಪರಾಜಿಪೃಚ್ಛ ಗ್ರಂಥವು ತಿಳಿಸುತ್ತದೆ. ಅದರಂತೆ ಇಲ್ಲಿನ ಶಿಲ್ಪದಲ್ಲಿ ಅಗ್ನಿಯು ತನ್ನ ಎಡಗೈನಲ್ಲಿ ಕಮಲದ ಮೊಗ್ಗನ್ನು ಹಿಡಿದಿದ್ದು ಗಮನಾರ್ಹವಾಗಿದೆ.



ಯಮನ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

೩. ಯಮ: ಯಮನು ದಕ್ಷಿಣ ದಿಕ್ಕಿನ ಅಧಿಪತಿಯಾಗಿದ್ದು, ನರಕ ನಗರವಾದ ಯಮಪುರದಲ್ಲಿ ದುಷ್ಟರನ್ನು ಶಿಕ್ಷಿಸುವುದು ಅವನ ಮುಖ್ಯ ಕರ್ತವ್ಯ. ವಿಠಲ ದೇವಾಲಯದ ಶಿಲ್ಪದಲ್ಲಿ ಯಮನನ್ನು ಕೋಣದ ಮೇಲೆ ಕುಳಿತು ಸವಾರಿ ಮಾಡುತ್ತಿರುವಂತೆ ತೋರಲಾಗಿದೆ. ಯಮನು ಎರಡು ಕೈಗಳನ್ನು ಹೊಂದಿದ್ದು ಬಲಗೈನಲ್ಲಿ ಆಯುಧವನ್ನು, ಎಡಗೈನಲ್ಲಿ ಕೋಣದ ಮೂಗುದಾರಕ್ಕೆ ಹಾಕಿರುವ ಹಗ್ಗವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಶಿಲ್ಪದಲ್ಲಿನ ಯಮನು ಇತರೆ ಅಷ್ಟದಿಕ್ಪಾಲಕರು ಧರಿಸಿರುವಂತೆ ಸಾಮಾನ್ಯ ಆಭರಣಗಳನ್ನೇ ಧರಿಸಿರುವಂತೆ ತೋರಲಾಗಿದೆ. ಯಮನ ವಾಹನವಾದ ಕೋಣದ ಕೊಂಬುಗಳನ್ನು ದೊಡ್ಡದಾಗಿಯೂ ಭಯಂಕರವಾಗಿಯೂ ತೋರಿಸಿದ್ದು, ಅದರ ಬೆನ್ನ ಮೇಲೆ ಹಾಸಿರುವ ಹೊದಿಕೆಯನ್ನು ಅದರ ಉದರ ಮತ್ತು ಪೃಷ್ಠಕ್ಕೆ ಪಟ್ಟಿಗಳಿಂದ ಕಟ್ಟಲಾಗಿದೆ. ಕೋಣದ ಕೊರಳನ್ನು ಸುಂದರವಾದ ಹಾರಗಳಿಂದ ಅಲಂಕರಿಸಲಾಗಿದೆ. ಇಲ್ಲಿ ವಿವರಿಸಿದ ಎಲ್ಲಾ ಲಕ್ಷಣಗಳು ಶ್ರೀಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರ ಕೃತಿಯಲ್ಲಿನ ಲಕ್ಷಣಗಳನ್ನೇ ಹೋಲಿರುವುದು ಗಮನಾರ್ಹ.[೪೪] ಈ ಶಿಲ್ಪದಲ್ಲಿನ ಯಮನ ವಾಹನವಾದ ಕೋಣದ ದೇಹ ಲಕ್ಷಣ, ಆಕಾರದ ಆಧಾರದ ಮೇಲೆ ಇದು ಆರ್ಟಿಯೊಡ್ಯಾಕ್ಟೈಲ (*Artiodactyla*) ಗಣದ, ಬೋವಿಡೆ (*Bovidae*) ಕುಟುಂಬಕ್ಕೆ ಸೇರಿದ ಭಾರತದ ಎಮ್ಮೆ ಅಥವಾ ಕೋಣ ಎಂದು ಗುರುತಿಸಲಾಗಿದೆ. ಬುಬಾಲಸ್ ಬುಬಾಲೀಸ್ (*Bubalus Bubalies*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ.[೪೫]



ನಿರ್ಯತಿ(ನಿರುತ್ತಿ)ಯ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

೪. ನಿರ್ಯತಿ (ನಿರುತ್ತಿ): ನಿರ್ಯತಿಯು ನೈರುತ್ಯ ದಿಕ್ಕಿನ ಅಧಿಪತಿ. ಹಾಗೆಯೇ ಭೂತ ಮತ್ತು ರಾಕ್ಷಸರ ಅಧಿಪತಿಯು ಆಗಿದ್ದಾನೆ. ನಿರ್ಯತಿಯ ಬಗ್ಗೆ ಕಾಶ್ಯಪ ಶಿಲ್ಪ ಶಾಸ್ತ್ರಂ ಕೃತಿಯಲ್ಲಿ[೪೬] ಈ ರೀತಿಯಾಗಿ ವಿವರಿಸಿದೆ. "ನಿರ್ಯತಿ ದೇವನು ನೀಲವರ್ಣದ ದೇಹಿ. ಎರಡು ಭುಜಗಳು ಮಹಾಶರೀರವನ್ನು ಪಡೆದುಕೊಂಡಿದ್ದು ಬಲಹಸ್ತದಲ್ಲಿ ಖಡ್ಗವನ್ನು, ಎಡಹಸ್ತದಲ್ಲಿ ಖೇಟಕವನ್ನು (ಗುರಾಣಿಯನ್ನು) ಹಿಡಿದಿದ್ದು ರೌದ್ರರೂಪದೊಂದಿಗೆ ಭಯಂಕಾರವಾದ ಮುಖವನ್ನು ಪಡೆದುಕೊಂಡಿರುತ್ತಾನೆ. ಈ ದೇವನು ಹಳದಿ ವಸ್ತ್ರಗಳನ್ನು ಧರಿಸಿದ್ದು, ನೈರುತ್ಯ ದಿಕ್ಕಿನ ಅಧಿಪತಿಯಾಗಿ ಜಗತ್‌ಪತಿ ನಿರ್ಯತಿ ಎಂಬ ಹೆಸರನ್ನು ಪಡೆದಿರುತ್ತಾನೆ. ಈತನ ಮುಖದಲ್ಲಿ ಕೋರೆ ಹಲ್ಲುಗಳು

ಭಯಂಕರವಾಗಿ ಕಾಣಿಸುತ್ತಿರುತ್ತವೆ. ಈತನು ಶವದ ಮೇಲೆ ಕುಳಿತಿರುತ್ತಾನೆ" ಎಂಬುದಾಗಿ ತಿಳಿಸುತ್ತದೆ. ವಿಠಲ ದೇವಾಲಯದಲ್ಲಿನ ನಿರ್ಯತಿಯ ಶಿಲ್ಪದಲ್ಲಿ ನರನು ತನ್ನ ಬಲಗಾಲಿನ ಮೊಣಕಾಲನ್ನು ನೆಲಕ್ಕೆ ಮಡಚಿದ್ದು, ತನ್ನ ಎರಡು ಕೈಗಳಲ್ಲಿ ನಿರ್ಯತಿಯ ಎರಡು ಪಾದಗಳನ್ನು ಇಟ್ಟುಕೊಂಡಂತೆಯೂ, ನಿರ್ಯತಿಯ ಬಲಹಸ್ತದಲ್ಲಿ ಖಡ್ಗವನ್ನು ಎಡಹಸ್ತದಲ್ಲಿ ಗುರಾಣಿಯನ್ನು ಹಿಡಿದಿರುವಂತೆ ತೋರಲಾಗಿದೆ. ಮಕರವನ್ನು ವಾಹನವನ್ನಾಗಿ ತೋರಿಸಿದ್ದು, ಇಲ್ಲಿ ಶವದ ಮೇಲೆ ಕುಳಿತಂತೆ ತೋರಿಸಿಲ್ಲ. ಜೊತೆಗೆ ಹಂಪಿಯಲ್ಲಿ ಈ ರೀತಿಯ ಶಿಲ್ಪಗಳು ಎಲ್ಲೂ ಕಂಡುಬಂದಿರುವುದಿಲ್ಲ. ಹಾಗಾಗಿ ಹಂಪಿ ಪರಿಸರದಲ್ಲಿ ದೊರೆತಿರುವ ನಿರ್ಯತಿ ಶಿಲ್ಪಗಳು ಕಾಶ್ಯಪ ಶಿಲ್ಪಶಾಸ್ತ್ರದಲ್ಲಿ ವಿವರಿಸಿರುವಂತೆ ಕೆಲವು ಲಕ್ಷಣಗಳನ್ನು ಹೊಂದಿದ್ದರೆ ಮತ್ತೆ ಕೆಲವು ಲಕ್ಷಣಗಳನ್ನು ಹೊಂದಿಲ್ಲದಿರುವುದು ಗಮನಾರ್ಹವಾಗಿ ಕಂಡುಬರುತ್ತದೆ.

೫. ವರುಣ: ವರುಣ ಪಶ್ಚಿಮ ದಿಕ್ಕಿನ ಅಧಿಪತಿಯಾಗಿದ್ದು ವರುಣ ವೈದಿಕ ದೇವತೆಗಳಲ್ಲಿ ಒಬ್ಬ. ವೈದಿಕ ಸಾಹಿತ್ಯದಲ್ಲಿ ಇಂದ್ರನೊಂದಿಗೆ ವರುಣನೂ ಮುಖ್ಯ ದೇವನಾಗಿದ್ದು, ನಿಯಮಿತ ರೂಪದಲ್ಲಿ ಕಾಣಿಸಿ-ಕೊಳ್ಳುವ ಸೂರ್ಯ ದೇವನೊಂದಿಗೆ ಸಂಬಂಧವಿರಿಸಿ-ಕೊಂಡಿರುವ ವರುಣನು ಸೃಷ್ಟಿಯ ನೈತಿಕ ಮತ್ತು ಭೌತಿಕ ನಿಯಮಗಳ ಸರ್ವೋಚ್ಚಪಾಲಕನೆಂದು ಅಂಗೀಕರಿಸ-ಲಾಗಿದೆ. ಆದರೆ ವೈದಿಕೋತ್ತರ ಸಾಹಿತ್ಯದಲ್ಲಿ ಈತನನ್ನು ಕೇವಲ ಜಲಾಧಿಪತಿ ಎಂದು ಮಾತ್ರವೇ ಹೇಳಲಾಗಿದೆ.[೪೭] ಮತ್ಸ್ಯಪುರಾಣ, ರೂಪಮಂಡನ, ವಿಷ್ಣುಧರ್ಮೋತ್ತರ ಪುರಾಣ, ಕಾಶ್ಯಪ ಶಿಲ್ಪಶಾಸ್ತ್ರಂ, ಶ್ರೀ ಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರಂ ಮುಂತಾದ ಗ್ರಂಥಗಳಲ್ಲಿ ವರುಣನನ್ನು ಹಲವು ರೀತಿಯಲ್ಲಿ ವಿವರಿಸಲಾಗಿದೆ. ಅದರಲ್ಲಿ ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ ಎಂಬ ಗ್ರಂಥದಲ್ಲಿ ವರುಣ ದೇವನ ಲಕ್ಷಣಗಳನ್ನು ಈ ಕೆಳಗಿನಂತೆ ತಿಳಿಸುತ್ತದೆ.


ವರುಣನ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

"ವರುಣ ಶ್ವೇತವರ್ಣಸ್ತು ದ್ವಿಭುಜಃ ಪಾಶಹಸ್ತಕ॥
ಸರ್ವಾಭರಣ ಸಂಯುಕ್ತಃ ಕರಂಡ ಮುಕುಟಾನ್ವಿತಾ
ಪೀತವಸ್ತ್ರಧರಃ ಶಾಂತಃ ಮಹಾಬಲ ಸುಮನ್ವಿತ॥
ಯಜ್ಞಸತ್ರ ಸಮಾಯುಕ್ತೋ ಮಕರಾಸನ ಸಾಸ್ಥಿತಃ
ವರುಣಲಕ್ಷಣಂ ಪ್ರೋಕ್ತಂ"...॥[೪೮]

ಶ್ವೇತವರ್ಣದ ಮೈಕಾಂತಿಯಿಂದ ಕಂಗೊಳಿಸುತ್ತಿರುವ ವರುಣ ದೇವನು ಎರಡು ತೋಳುಗಳನ್ನು ಹೊಂದಿದ್ದಾನೆ. ಕರಂಡಮಕುಟವನ್ನು ಧರಿಸಿದ್ದು ಎಲ್ಲಾ ಆಭರಣಗಳಿಂದ ಅಲಂಕೃತನಾಗಿರುತ್ತಾನೆ. ಹಳದಿ ವಸ್ತ್ರಗಳನ್ನು ಧರಿಸಿರುವ ಈ ದೇವನು ಸೌಮ್ಯ ರೂಪನು, ಶಾಂತಚಿತ್ತನೂ, ಮಹಾಬಲನೂ ಆಗಿದ್ದಾನೆ. ಮಕರದ ಮೇಲೆ ಕುಳಿತಿರುವ ಈ ದೇವನು ಎರಡು ಹಸ್ತಗಳಲ್ಲಿ ಪಾಶವನ್ನು ಧರಿಸಿರುತ್ತಾನೆ. ಇದು ವರುಣದೇವನ ಲಕ್ಷಣ ಎಂಬುದಾಗಿ ತಿಳಿಸುತ್ತದೆ. ಇದೇ ವಿವರಣೆ ಶಿಲ್ಪರತ್ನದಲ್ಲೂ ದೊರೆಯುತ್ತದೆ.


ಈ ಕೃತಿಯಲ್ಲಿ ವಿವರಿಸಿರುವ ಲಕ್ಷಣಗಳನ್ನೇ ಹೊಂದಿರುವ ವರುಣದೇವನ ಶಿಲ್ಪ ವಿಠಲ ದೇವಾಲಯದಲ್ಲಿ ಕಂಡುಬಂದಿದೆ. ಈ ಶಿಲ್ಪದಲ್ಲಿ ವರುಣನು ಮಕರದ (ಮೊಸಳೆ) ಮೇಲೆ ಕುಳಿತು ಚಲಿಸುತ್ತಿರುವಂತೆ ತೋರಲಾಗಿದೆ. ವರುಣನಿಗೆ ಎರಡು ಕೈಗಳಿದ್ದು ಬಲಗೈನಲ್ಲಿ ಪತಾಕೆಯನ್ನು ಎಡಗೈನಲ್ಲಿ ತನ್ನ ವಾಹನವಾದ ಮಕರಕ್ಕೆ ಹಾಕಿರುವ ಹಗ್ಗವನ್ನು ಹಿಡಿದಿರುವಂತೆ ತೋರಲಾಗಿದೆ. ಆದರೆ ವಿಷ್ಣುಧರ್ಮೋತ್ತರ ಪುರಾಣವು ವರುಣನು ಎಡಗೈನಲ್ಲಿ ಕಮಲವನ್ನು ಹಿಡಿದಿರಬೇಕು[೫೯] ಎಂದು ತಿಳಿಸುತ್ತದೆ. ಈ ಶಿಲ್ಪವನ್ನು ಶಿಲ್ಪಿ ಸ್ಪಷ್ಟವಾಗಿ ಕೆತ್ತಿಲ್ಲದಿರುವುದರಿಂದ ವರುಣನು ಧರಿಸಿರುವ ಆಭರಣಗಳು ಅಸ್ಪಷ್ಟವಾಗಿವೆ. ಹಾಗೆಯೇ ಮಕರವನ್ನು ಚಲಿಸುತ್ತಿರುವಂತೆ ಹಾಗೂ ಘರ್ಜಿಸುತ್ತಿದ್ದು ಸೊಂಡಿಲನ್ನು ಮೇಲೆತ್ತಿರುವಂತೆಯೂ ತೋರಲಾಗಿದೆ.

ರೂಪಮಂಡನ ಗ್ರಂಥವು[೬೦] ಮೊಸಳೆಯನ್ನು ವಾಹನವಾಗಿ ಪಡೆದಿರುವ ವರುಣನು ಪಶ್ಚಿಮ ದಿಕ್ಕಿನ ಅಧಿಪತಿ ಎಂಬುದಾಗಿ ತಿಳಿಸುತ್ತದೆ. ಹಂಪಿ ಪರಿಸರದಲ್ಲಿ ಕಂಡುಬಂದಿರುವ ಅಷ್ಟದಿಕ್ಪಾಲಕರ ಶಿಲ್ಪಗಳಲ್ಲಿ ವರುಣನು ಕಾಲ್ಪನಿಕ ಶಿಲ್ಪವಾದ ಮಕರವನ್ನೇ ವಾಹನವಾಗಿಟ್ಟುಕೊಂಡಿದ್ದು, ಮೊಸಳೆಯನ್ನು ನಿರ್ದಿಷ್ಟವಾಗಿ ಶಿಲ್ಪಗಳಲ್ಲಿ ತೋರಿಸಿಲ್ಲ.

೬. ವಾಯು: ವಾಯವ್ಯ ವಲಯದ ರಕ್ಷಕನಾದ ವಾಯುನನ್ನು ಪುರಾಣಗಳಲ್ಲಿ ವಾಯು ತತ್ವದ ದೇವತೆ ಎಂದು ಹೇಳಲಾಗಿದೆ. ಈತನು ಭುವರ್ಲೋಕದ ಅಧಿಪತಿ. ಆದ್ದರಿಂದ ಈತನಿಗೆ ಭುವಸ್ಪತಿ ಮತ್ತು ಮಾತರೀಶ್ವರನ್ ಎಂಬ ನಾಮಾಂತರವಿದೆ. ಅಪರಾಜಿತ ಪೃಚ್ಛ ಗ್ರಂಥವು ವಾಯುವಿನ ವಾಹನ ಜಿಂಕೆ ಎಂಬುದಾಗಿ ವಿವರಿಸುತ್ತದೆ.



ಕೃಷ್ಣಮೃಗ / ಭಾರತದ ಜಿಗರಿ / ಸಾರಂಗ
ಗಣ : ಆರ್ಟಿಯೋಡಾಕ್ಟೈಲ
ಕುಟುಂಬ : ಬೋವಿಡೆ



ವಾಯುವಿನ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

ವಿಠಲ ದೇವಾಲಯದ ಆವರಣದಲ್ಲಿರುವ ಶಿಲ್ಪದಲ್ಲಿ ವಾಯುವು ಜಿಂಕೆಯ ಮೇಲೆ ಆಸೀನನಾಗಿದ್ದು ಎರಡು ಕೈಗಳನ್ನು ಹೊಂದಿದ್ದಾನೆ. ಬಲಗೈನಲ್ಲಿ ಖಡ್ಗವನ್ನು ಹಾಗೂ ಎಡಗೈನಲ್ಲಿ ಜಿಂಕೆಯ ಮೂಗಿಗೆ ಹಾಕಿರುವ ಹಗ್ಗವನ್ನು ಹಿಡಿದಿರುವಂತೆ ತೋರಲಾಗಿದೆ. ಆದರೆ ಶ್ರೀಕಾಶ್ಯಪ ಶಿಲ್ಪಶಾಸ್ತ್ರಂನಲ್ಲಿ ವಾಯುವು ಬಲಹಸ್ತದಲ್ಲಿ ಧ್ವಜವನ್ನು, ಎಡಹಸ್ತದಲ್ಲಿ ದಂಡವನ್ನು,



ಹಿಡಿದಿರುವಂತಿರಬೇಕೆಂದು ತಿಳಿದುಬರುತ್ತದೆ. ಹಾಗಾಗಿ ಈ ಶಿಲ್ಪವನ್ನು ಶಿಲ್ಪಪಠ್ಯದ ನಿಯಮಗಳನ್ನು ಅನುಸರಿಸಿ ಕೆತ್ತಿಲ್ಲವೆಂಬುದು ದೃಢಪಡುತ್ತದೆ. ಹಾಗೆಯೇ ವಾಯು ಕರಂಡಮಕುಟ, ಕಂಠಹಾರ, ಕೈಕಡಗ, ಕಾಲ್ಗಡಗ ಮತ್ತು ಇತರೆ ಆಭರಣಗಳನ್ನು ಧರಿಸಿದ್ದು ಅವು ಶಿಲ್ಪದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿಲ್ಲ. ವಾಹನವಾದ ಜಿಂಕೆಯ ಕೊಂಬುಗಳನ್ನು ದೊಡ್ಡದಾಗಿ ತೋರಿಸಿದ್ದು, ಇದರ ಮೈಮೇಲೆ ಮೆತ್ತೆಯನ್ನು ಹಾಕಿ ಅಲಂಕರಿಸಿರುವುದು ಶಿಲ್ಪದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಮತ್ತು ಹಂಪಿಯ ಇತರೆ ಅಷ್ಟದಿಕ್ಪಾಲಕರ ಶಿಲ್ಪಗಳಲ್ಲಿನ ಜಿಂಕೆಯ ದೇಹ ಲಕ್ಷಣ ಮತ್ತು ಆಕಾರದ ಆಧಾರದ ಮೇಲೆ ಇವು ಆರ್ಟಿಯೊಡ್ಯಾಕ್ಟೈಲ (*Artiodactyla)* ಗಣದ, ಬೋವಿಡೆ (*Bovidae)* ಕುಟುಂಬಕ್ಕೆ ಸೇರಿದ ಕೃಷ್ಣಮೃಗ ಅಥವಾ ಭಾರತದ ಚಿಗರಿ (ಸಾರಂಗ) (*Black Buck or Indian Antelope*) ಎಂಬುದಾಗಿ ಗುರುತಿಸಲಾಗಿದೆ. ಆಂಟೆಲೋಪ್ ಸರ್ವಿಕ್ಯಾಪ್ರ (*Antelope cervicapra*) ಎಂಬುದು ಇದರ ಶಾಸ್ತ್ರೀಯ ನಾಮವಾಗಿದೆ.[೫೧]

೭. ಕುಬೇರ: ಕುಬೇರನು ಉತ್ತರ ದಿಕ್ಕಿನ ಅಧಿಪತಿಯಾಗಿದ್ದು ಸಂಪತ್ತಿನ ಒಡೆಯನಾಗಿದ್ದಾನೆ. ಆನೆ ಇವನ ವಾಹನ ಕೆಲವೊಮ್ಮೆ ಕುದುರೆ ಮತ್ತು ನರನು ವಾಹನಗಳಾಗಿರುವುದು ಪಠ್ಯಗ್ರಂಥಗಳಿಂದ ತಿಳಿದುಬರುತ್ತದೆ. ಅಂಶುಮದ್‌ಭೇದಾಗಮವು ಕುಬೇರನು ಆನೆ ಅಥವಾ ಟಗರಿನ ಮೇಲೆ ಆಸೀನನಾಗಿರಬೇಕೆಂದು ತಿಳಿಸುತ್ತದೆ.[೫೨]

ಮತ್ಸ್ಯಪುರಾಣದಲ್ಲಿ ಕುಬೇರ ಕುರಿತು ಈ ವಿವರಣೆ ದೊರೆಯುತ್ತದೆ.

"ಕುಬೇರಂ ಚಪ್ರವಕ್ಷ್ಯಾಮಿ ಕುಂಡಾಲಭ್ಯಾಮಲಂಕೃತಮ್
ಮಹೋದರಂ ಮಹಾಕಾಯಂ ನಿರ್ಧ್ಯಷ್ಟಕ ಸಮನ್ವಿತಮ್॥
ಗುಹ್ಯಕೈರ್ಬಹುಭಿರ್ಯುಕ್ತಂ ಧನವ್ಯಯ ಕರೈಸ್ತಥಾ
ಹಾರ ಕೇಯೂರ ರಚಿತಂ ಸಿತಾಂಬರಧರಂ ಸದಾ॥
ಗದಾಧರಂ ಚ ಕರ್ತವ್ಯಂ ವರದಂ ಮುಕುಟಾನ್ವಿತಮ್
ನರಯುಕ್ತ ವಿಮಾನಸ್ಥಂ ಏವಂ ರೀತ್ಯಾ ಚ ಕಾರಯೇತ್"[೫೩]


ಸ್ಥೂಲಕಾಯನಾಗಿರುವ ಕುಬೇರನಿಗೆ ಗುಡಾಣದಂತಹ ಹೊಟ್ಟೆಯಿದ್ದು ಈತನ ವಶದಲ್ಲಿ ಅಷ್ಟನಿಧಿಗಳು ಇರುತ್ತವೆ. ಹಾರ, ಕೇಯೂರ, ಕಂಕಣ, ಕಿಂಕಿಣಿ, ಕುಂಡಲ, ಕಿರೀಟಾದಿಗಳಿಂದ ಅಲಂಕೃತನಾಗಿರುವ ಕುಬೇರನು ಶ್ವೇತವಸ್ತ್ರಧಾರಿಯಾಗಿರುತ್ತಾನೆ. ಈತನು ಧನವನ್ನು ಗುಪ್ತವಾಗಿ ಭದ್ರಪಡಿಸುವ ಗುಣ ಪಡೆದಿರುವ ಹಾಗೆಯೇ ಧನವನ್ನು ವ್ಯಯಮಾಡುವ ಬುದ್ಧಿಯೂ ಇರುವವನು. ಈತನು ಒಂದು ಹಸ್ತದಲ್ಲಿ ಗದೆ ಹಿಡಿದಿದ್ದು ಇನ್ನೊಂದು ಹಸ್ತ ವರದ ಮುದ್ರೆಯಲ್ಲಿದೆ. ಈತನು ಕುಳಿತಿರುವ ವಿಮಾನವನ್ನು ನರನು ಹೊತ್ತು ಸಾಗಿಸುತ್ತಿರುತ್ತಾರೆ ಎಂಬುದಾಗಿ ವಿವರಿಸುತ್ತದೆ.

ಶ್ರೀಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರಂ ಗ್ರಂಥವು ಕುಬೇರನು ಭರ್ಜಿಯನ್ನು ಹಿಡಿದಿದ್ದು ಕುದುರೆಯ ಮೇಲೆ ಕುಳಿತಿರುತ್ತಾನೆ. ಹಾಗೆಯೇ ಚಿನ್ನದ ಮೈಬಣ್ಣವನ್ನು ಹೊಂದಿರುತ್ತಾನೆಂಬುದಾಗಿ ತಿಳಿಸುತ್ತದೆ.

ವಿಠಲ ದೇವಾಲಯದಲ್ಲಿನ ಕುಬೇರ ಶಿಲ್ಪದಲ್ಲಿ ಕುಬೇರನು ಕುದುರೆಯ ಮೇಲೆ ಕುಳಿತಿದ್ದು ಕುದುರೆಯು ಚಲಿಸುತ್ತಿರುವಂತೆ ಕೆತ್ತಲಾಗಿದೆ.



ಭಾರತದ ಕುದುರೆ
ಗಣ : ಪೆರಿಸೊಡಾಕ್ಟೈಲ
ಕುಟುಂಬ : ಈಕ್ವಿಡೆ



ಕುಬೇರನ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

ಕುಬೇರನು ಎರಡು ಕೈಗಳನ್ನು ಹೊಂದಿದ್ದು ಬಲಗೈನಲ್ಲಿ ಖಡ್ಗವನ್ನು ಎಡಗೈನಲ್ಲಿ ಕುದುರೆಯ ಲಗಾಮನ್ನು ಹಿಡಿದಿರುವಂತೆ ತೋರಲಾಗಿದೆ. ಈತನು ಕರಂಡಮಕುಟದ ಜೊತೆಗೆ ಇತರೆ ಆಭರಣಗಳನ್ನು ಧರಿಸಿದ್ದು ಶಿಲ್ಪದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿಲ್ಲ. ಶಿಲ್ಪದಲ್ಲಿ ಕುದುರೆಗೆ ಜೀನನ್ನು ಹಾಕಿ ಅಲಂಕರಿಸಿರುವುದು ಕಂಡುಬರುತ್ತದೆ. ಈ ಶಿಲ್ಪವು ಸಹ ಪಠ್ಯಕ್ರಮದ ನಿಯಮಗಳಾನುಸಾರ ಕೆತ್ತಲ್ಪಟ್ಟಿಲ್ಲವೆಂಬುದು ದೃಢಪಡುತ್ತದೆ. ಹಂಪಿ ಪರಿಸರದಲ್ಲಿನ ಅಷ್ಟದಿಕ್ಪಾಲಕರ ಕುಬೇರ ಶಿಲ್ಪದಲ್ಲಿನ ಕುದುರೆಯ ದೇಹ ಲಕ್ಷಣ, ಆಕಾರದ ಆಧಾರದ ಮೇಲೆ ಭಾರತದ ಕುದುರೆಯೆಂದು ಗುರುತಿಸಲಾಗಿದೆ. ಇದು ಪೆರಿಸೊಡ್ಯಾಕ್ಟೈಲ (*Perisodactyla*) ಗಣದ, ಈಕ್ವಿಡೆ (*Equidae*) ಕುಟುಂಬಕ್ಕೆ ಸೇರಿದ್ದು ಈಕ್ವೆಸ್ ಕೆಬಲಸ್ (*Equus caballus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೪]

೮. **ಈಶಾನ:** ಈಶಾನ್ಯ ದಿಕ್ಕಿನ ಅಧಿಪತಿಯಾದ ಈಶಾನನು ವೃಷಭದ ಮೇಲೆ ಕುಳಿತಿರುತ್ತಾನೆ. ಈಶಾನನ ಕುರಿತು ಶ್ರೀಕಾಶ್ಯಪ ಶಿಲ್ಪಶಾಸ್ತ್ರಂನಲ್ಲಿ ಈ ರೀತಿಯ ವಿವರಣೆ ಇದೆ.[೨೫]

"ಈಶೋವೈ ದ್ವಿಭುಜಃ ಶಾಂತಃ ಸ್ವರ್ವಾಭರಣ ಭೂಷಿತಃ॥

ಜಟಾಮಕುಟ ಸಂಯುಕ್ತಃ ಶುಕ್ಲ ವಸ್ತ್ರದ್ಯುತಿಃ ಸ್ಥಿತಃ

ಶುಕ್ಲ ಯಜ್ಞೋಪವೀತಶ್ಚ ಪದ್ಮೋ ಪರಿಸ್ಥಿತಃ॥


ಶೂಲ ದಕ್ಷಿಣಹಸ್ತೇ ಚ ಕಪಾಲಂ ವಾಮಹಸ್ತಕೇ"

ಶಾಂತಭಾವದ ಈಶಾನಮೂರ್ತಿಯು ದ್ವಿಭುಜದವನಾಗಿದ್ದು, ಬಿಳುಪು ಮೈಕಾಂತಿಯಿಂದ ಶೋಭಾಯಮಾನವಾಗಿದ್ದು ಬಿಳುಪು ವಸ್ತ್ರಗಳನ್ನು ಧರಿಸಿರುತ್ತಾನೆ. ಸಕಲ ವಿಧವಾದ ಆಭರಣಗಳನ್ನು, ಜಟಾಮಕುಟವನ್ನು ಧರಿಸಿದ್ದು ಯಜ್ಞೋಪವೀತಧಾರಿಯಾಗಿರುತ್ತಾನೆ. ಸೌಮ್ಯರೂಪದ ಈ ದೇವನು





ಶ್ವೇತಕಮಲದ ಮೇಲೆ ಕುಳಿತಿದ್ದು ಬಲಹಸ್ತದಲ್ಲಿ ಶೂಲವನ್ನು ಎಡಹಸ್ತದಲ್ಲಿ ಕಪಾಲವನ್ನು ಧರಿಸಿರುತ್ತಾನೆ[೫೮] ಎಂಬುದಾಗಿ ವಿವರಿಸಿದೆ.


ಈಶಾನನ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

ವಿಠಲ ದೇವಾಲಯದಲ್ಲಿನ ಈಶಾನ ಶಿಲ್ಪದಲ್ಲಿ ಈಶಾನನು ವೃಷಭದ ವೇಲೆ ಆಸೀನನಾಗಿದ್ದಾನೆ. ಈಶಾನನು ಎರಡು ಕೈಗಳನ್ನು ಹೊಂದಿದ್ದು, ಎಡಹಸ್ತದಲ್ಲಿ ಶೂಲವನ್ನು, ಬಲಹಸ್ತದಲ್ಲಿ ಕಪಾಲವನ್ನು ಹಿಡಿದಿರುವಂತೆ ತೋರಲಾಗಿದೆ. ಕರಂಡಮಕುಟದ ಜೊತೆಗೆ ಇತರೆ ಆಭರಣಗಳನ್ನು ಧರಿಸಿದ್ದು, ಶಿಲ್ಪ ಒರಟಾಗಿರುವು-ದರಿಂದ ಆಭರಣಗಳು ಸ್ಪಷ್ಟವಾಗಿ ಕಾಣಬರುವುದಿಲ್ಲ. ಹಂಪಿ ಪರಿಸರದಲ್ಲಿನ ಅಷ್ಟದಿಕ್ಪಾಲಕರ ಶಿಲ್ಪಗಳಲ್ಲಿನ ಈಶಾನನ ವಾಹನವಾದ ವೃಷಭದ ದೇಹ ಲಕ್ಷಣಗಳು ಮತ್ತು ಆಕಾರದ ಆಧಾರದ ಮೇಲೆ ಇದು ಅಮೃತ್ ಮಹಲ್ ತಳಿಯದೆಂದು ಗುರುತಿಸಲಾಗಿದೆ.[೫೯]

ಹಂಪಿ ಪರಿಸರದಲ್ಲಿ ವಿಠಲ ದೇವಾಲಯ ಆವರಣದಲ್ಲಿನ ಅಷ್ಟದಿಕ್ಪಾಲಕರ ಶಿಲ್ಪಗಳ ಸಾಮ್ಯತೆಯನ್ನೇ ಹೋಲುವ ಅಷ್ಟದಿಕ್ಪಾಲಕರ ಶಿಲ್ಪಗಳು ವಿರೂಪಾಕ್ಷ ದೇವಾಲಯ ಮತ್ತು ಕಮಲಾಪುರದ ಪ್ರವಾಸಿ ಮಂದಿರದ ಮುಂಭಾಗದಲ್ಲಿ ಕಂಡುಬಂದರೂ ಕೆಲವು ಶಿಲ್ಪಗಳಲ್ಲಿ ಭಿನ್ನತೆಯನ್ನು ಕಾಣಬಹುದು. ವಿರೂಪಾಕ್ಷ ದೇವಾಲಯದಲ್ಲಿನ ಭುವನೇಶ್ವರಿ ದೇವಾಲಯದ ಭಾವಣಿಯಲ್ಲಿನ ಅಷ್ಟದಿಕ್ಪಾಲಕರ ಶಿಲ್ಪಗಳು ಕಪ್ಪುಶಿಲೆಯಿಂದ ಕೂಡಿದ್ದು, ಈ ಶಿಲ್ಪಗಳಲ್ಲಿ ವಾಹನಗಳಾದ ಪ್ರಾಣಿಗಳನ್ನು ಪಾಲಕರಿಗಿಂತ ದೊಡ್ಡದಾಗಿ ತೋರಲಾಗಿರುವುದು ಅವುಗಳ ಪ್ರಾಮುಖ್ಯತೆಯನ್ನು ಸೂಚಿಸುತ್ತದೆಂದೇ ಹೇಳಬಹುದು. ಈ ದೇವಾಲಯದ ವಾಸ್ತುರಚನೆ, ಶಿಲ್ಪದ ಮಾದರಿ ಮತ್ತು ಶಿಲ್ಪದ ಮಾಧ್ಯಮಗಳನ್ನು ಗಮನಿಸಿದಾಗ ಇದು ವಿಜಯನಗರ ಸಾಮ್ರಾಜ್ಯದ ಪೂರ್ವದ ಕಾಲದ ವಾಸ್ತುರಚನೆ ಎಂಬುದು ತಿಳಿದುಬರುತ್ತದೆ. ನಂತರ ವಿರೂಪಾಕ್ಷ ದೇವಾಲಯದ ಮುಖಮಂಟಪದಲ್ಲಿನ ಭಿತ್ತಿಚಿತ್ರಗಳಲ್ಲಿ ಅಷ್ಟದಿಕ್ಪಾಲಕರ ಚಿತ್ರಗಳು ಸಹ ವಿಠಲ ದೇವಾಲಯದ ಅಷ್ಟದಿಕ್ಪಾಲಕರ ಶಿಲ್ಪಗಳ ಲಕ್ಷಣಗಳನ್ನು ಹೊಂದಿದ್ದರೂ ಸ್ವಲ್ಪಮಟ್ಟಿನ ವಿಭಿನ್ನತೆ ಮತ್ತು ವೈಶಿಷ್ಟತೆಗಳನ್ನು ಕಾಣಬಹುದಾಗಿದೆ. ಅಂದರೆ ಶಿಲ್ಪಗಳಲ್ಲಿ ಸ್ಪಷ್ಟವಾಗಿ ಕಾಣಬರದ ಸೂಕ್ಷ್ಮವಾದ ಅಲಂಕರಣೆಗಳು ಮತ್ತು ಆಯುಧಗಳು ಮುಂತಾದವು ಭಿತ್ತಿಚಿತ್ರಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ಜೊತೆಗೆ ಈ ಚಿತ್ರಗಳಲ್ಲಿ ಈಶಾನನ ವಾಹನ ಗೂಳಿಯಾಗಿರದೇ ಹಸುವಾಗಿರುವುದು ಗಮನಾರ್ಹವಾಗಿದೆ.

ಕಮಲಾಪುರದ ಪ್ರವಾಸಿ ಮಂದಿರದ ಮುಂಭಾಗದಲ್ಲಿನ ಅಷ್ಟದಿಕ್ಪಾಲಕರ ಕೆಲವು ಶಿಲ್ಪಗಳು ಮಾತ್ರ ಶಿಲ್ಪಶಾಸ್ತ್ರದಂತೆ ರಚನೆಯಾಗಿದ್ದು ವೈಶಿಷ್ಟತೆಯಿಂದ ಕೂಡಿವೆ. ಅದರಲ್ಲಿ ಮುಖ್ಯವಾಗಿ ಟಗರಿನ ಮೇಲೆ ಸವಾರಿ ಮಾಡುತ್ತಿರುವ ಅಗ್ನಿಯು ಎರಡು ತಲೆಗಳನ್ನು ಹೊಂದಿರುವಂತೆ ತೋರಲಾಗಿದೆ. ದೇವನಿಗೆ ಎರಡು ಮುಖಗಳು, ಮೂರು ಪಾದಗಳು ಎಂಟು ಭುಜಗಳಿದ್ದು, ಕೆಂಪು ಆಭರಣಗಳಿಂದ



ಅಲಂಕೃತನಾಗಿರುವಂತೆ ಅಗ್ನಿದೇವನನ್ನು ನಿರ್ಮಿಸಬೇಕೆಂದು ಶ್ರೀಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರಂ ಗ್ರಂಥವು ನಿರೂಪಿಸುತ್ತದೆ. ಹಾಗಾಗಿ ಈ ಶಿಲ್ಪವನ್ನು ಶಿಲ್ಪಿಯು ಸ್ವಲ್ಪಮಟ್ಟಿನ ಶಿಲ್ಪಪಠ್ಯದ ನಿಯಮಗಳನ್ನು ಪಾಲಿಸಿ ಜಿಡಿಸಿದ್ದಾನೆ ಎಂದು ಹೇಳಬಹುದು. ಆದರೆ ಮೂರುಪಾದಗಳು, ಎಂಟು ತೋಳುಗಳನ್ನು ಶಿಲ್ಪದಲ್ಲಿ ತೋರಲಾಗಿಲ್ಲ.



ಅಷ್ಟದಿಕ್ಪಾಲಕರ ಸಮೂಹ ಶಿಲ್ಪ, ಪ್ರವಾಸಿ ಮಂದಿರ, ಕಮಲಾಪುರ

ಇಲ್ಲಿನ ಅಷ್ಟಾದಿಕ್ಪಾಲಕರ ಶಿಲ್ಪಗಳು ಸ್ವಲ್ಪ ಸೂಕ್ಷ್ಮವಾಗಿ ಕೆತ್ತಲ್ಪಟ್ಟಿದ್ದು, ಈ ಶಿಲ್ಪ ಸಮೂಹವು ಅರ್ಧಕ್ಕೆ ಹೊಡೆದಿರುವುದರಿಂದ ವಾಯು, ಕುಬೇರ ಮತ್ತು ಈಶಾನರ ಶಿಲ್ಪಗಳು ಇಲ್ಲಿ ಕಂಡುಬರುವುದಿಲ್ಲ. ಹಂಪಿ ಪರಿಸರದಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳು ವಿರಳವಾಗಿದ್ದು, ಅಷ್ಟದಿಕ್ಕುಗಳನ್ನು ಸಂರಕ್ಷಿಸುವ ಅಷ್ಟ ದೇವತೆಗಳು ಎಷ್ಟು ಪ್ರಾಮುಖ್ಯತೆಯನ್ನು ಹೊಂದಿರುವವರೋ ಅವರ ವಾಹನಗಳಾಗಿ ಪ್ರಾಣಿಗಳೂ ಸಹ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವುದು ಇಲ್ಲಿ ಕಂಡುಬಂದಿರುವ ಶಿಲ್ಪಗಳಿಂದ ದೃಢಪಡುತ್ತದೆ.

ಒಟ್ಟಾರೆ ಹಂಪಿ ಪರಿಸರದಲ್ಲಿ ಕಂಡುಬಂದಿರುವ ಅಷ್ಟದಿಕ್ಪಾಲಕರ ಶಿಲ್ಪಗಳ ಅಧ್ಯಯನದಿಂದ ತಿಳಿಯುವುದೇನೆಂದರೆ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ರೂಪಿಸಿದ ಶಿಲ್ಪಿಗಳು ಶಿಲ್ಪಶಾಸ್ತ್ರ ಗ್ರಂಥಗಳ ಸಂಪೂರ್ಣ ನಿಯಮಗಳನ್ನು ಅನುಸರಿಸದೇ ಸ್ವತಂತ್ರವಾಗಿ ಶಿಲ್ಪಗಳನ್ನು ಕೆತ್ತನೆ ಮಾಡಿರುವುದು. ಆದರೂ ಅವರು ಶಿಲ್ಪಗ್ರಂಥಗಳ ಸಾಮಾನ್ಯ ನಿಯಮಗಳ ಎಲ್ಲೆಯ ಒಳಗೆ ಶಿಲ್ಪ ಕೆತ್ತನೆಯ ಕಾರ್ಯ ಮಾಡಿರುವುದನ್ನು ತಳ್ಳಿಹಾಕುವಂತಿಲ್ಲ.

ಗಜೇಂದ್ರಮೋಕ್ಷ ಶಿಲ್ಪಗಳು

ವಿಷ್ಣುವು ಕೈಗೊಂಡ ಹಲವು ಸತ್ಕಾರ್ಯಗಳಲ್ಲಿ ಗಜೇಂದ್ರಮೋಕ್ಷ ಕಾರ್ಯವು ಒಂದಾಗಿದ್ದು ವೈಷ್ಣವ ಸಿದ್ಧಾಂತದ ಒಂದು ಅವಿಭಾಜ್ಯ ವಿಷಯವಾಗಿದೆ. ಭಗವಂತ ನಂಬಿದವರ ಉದ್ಧಾರಕ್ಕಾಗಿ ಸೊಂಟ ಕಟ್ಟಿ ನಿಲ್ಲುತ್ತಾನೆಂಬುದಕ್ಕೆ ಈ ಗಜೇಂದ್ರಮೋಕ್ಷ ಕಥೆಯು ಪ್ರಮುಖ ಉದಾಹರಣೆಯಾಗಿದೆ. ಈ ಕಥೆಯನ್ನು ತಿಳಿಸುವ ಹಲವು ಶಿಲ್ಪಗಳು ಹಂಪಿ ಪರಿಸರದಲ್ಲಿ ದೊರಕಿವೆ.

ಹಿನ್ನೆಲೆ: ಭಾಗವತ ಪುರಾಣದಲ್ಲಿ ವಿವರಿಸಿರುವಂತೆ ತ್ರಿಕೂಟ ಎಂಬ ಶ್ರೇಷ್ಠವಾದ ಪರ್ವತದ ತಪ್ಪಲಿನಲ್ಲಿ ಅತ್ಯಂತ ಸ್ವಚ್ಛ ಸುಂದರವಾದ ಸರೋವರ ಒಂದು ಇತ್ತು. ಅದು ತಂಪಾಗಿಯೂ




ರುಚಿಕರವಾಗಿಯೂ ನೋಡುವ ಕಣ್ಮನಗಳಿಗೆ ಆಹ್ಲಾದವನ್ನು ಉಂಟು ಮಾಡುವ ಸರೋವರವಾಗಿಯೂ ಇತ್ತು. ಈ ಸರೋವರದಿಂದ ಬೀಸಿದ ತಂಗಾಳಿಯಿಂದ ಆಕರ್ಷಿತವಾದ ಆನೆಗಳ ಗುಂಪಿಗೆ ಒಡೆಯನಾದ ಗಜರಾಜನು ತನ್ನ ಬಳಗದೊಂದಿಗೆ ನೀರಿಗಿಳಿದು ಜಲಕೇಳಿಯನ್ನಾರಂಭಿಸಿತು. ವಿಪರೀತವಾದ ಆನಂದದಿಂದ ಮೈಮರೆತ್ತಿತ್ತು. ಈ ಸಮಯವನ್ನು ಕಾಯುತ್ತಿದ್ದ ಮೊಸಳೆಯೊಂದು ಸದ್ದಿಲ್ಲದೆ ನೀರ ಮೇಲೆ ಬಂದು ಗಜರಾಜನ ಕಾಲೊಂದನ್ನು ಹಿಡಿದು ಒಳಕ್ಕೆ ಎಳೆಯಲಾರಂಭಿಸಿತು ಅಗ ಗಜೇಂದ್ರ ಕೋಪದಿಂದ ಕಾಲು ಝಾಡಿಸಿತು. ಆದರೆ ಅದು ಎಷ್ಟೇ ಪ್ರಯತ್ನ ಮಾಡಿದರೂ ಕಾಲನ್ನು ಬಿಡಿಸಿಕೊಳ್ಳಲು ಆಗಲಿಲ್ಲ. ಮದೋನ್ಮತ್ತನಾಗಿದ್ದ ಗಜೇಂದ್ರನ ಶಕ್ತಿ ಕ್ರಮೇಣ ಕುಂದುತ್ತ ಬಂತು. ಇನ್ನು ತನಗೆ ಉಳಿಗಾಲವಿಲ್ಲ. ತನ್ನ ಪ್ರಾಣ ಹೊರಟು ಹೋಯಿತು ಎಂದು ಭಾವಿಸಿತು. ಅದರ ಎರಡು ಕಣ್ಣುಗಳಲ್ಲಿ ಕಣ್ಣೀರು ಹರಿಯಲಾರಂಭಿಸಿತು. ಆಗ ಇದ್ದಕ್ಕಿದ್ದಂತೆ ಅದಕ್ಕೆ ತನ್ನ ಜನ್ಮದ ಸ್ಮರಣೆ ಬಂದಿತು.[೫೮]

ಹಿಂದೆ ಪಾಂಡ್ಯರಾಜನಾಗಿದ್ದ ಇಂದ್ರದ್ಯುಮ್ನನು ನಾನೇ ತಾನೇ, ಆಗ ದೈವಭಕ್ತನಾಗಿದ್ದೆ, ರಾಜ್ಯಕೋಶಗಳನ್ನು ತೊರೆದು ಮಲಯ ಪರ್ವತಕ್ಕೆ ಬಂದು ಅಲ್ಲಿ ಘೋರ ತಪಸ್ಸನ್ನು ಆಚರಿಸಿದೆ. ಅಲ್ಲಿಗೆ ಅಗಸ್ತ್ಯ ಮುನಿಗಳು ಬಂದರೂ ತನಗೆ ಅದರ ಪರಿವೇ ಇರಲಿಲ್ಲ. ಇದರಿಂದ ಆ ಮುನಿಗಳಿಗೆ ಕೋಪಬಂದು 'ಎಲ್ಲವೋ ಮದಾಂಧ, ಬಾಗಿಲಿಗೆ ಬಂದ ಬ್ರಾಹ್ಮಣರನ್ನು ಆದರಿಸದ ನೀನು ಮದ ಬರುವ ಆನೆಯ ಜನ್ಮವನ್ನೇ ಹೊಂದು, ನಿನ್ನ ಮನಸ್ಸು ಅಜ್ಞಾನದಿಂದ ಮುಳುಗಲಿ' ಎಂದು ಶಪಿಸಿದರು.[೫೯] ಆದ್ದರಿಂದ ತಾನೇ ತನಗೆ ಈ ಜನ್ಮಬಂದು ಮದೋನ್ಮತ್ತನಾದೆ. ಈಗ ಇದೆಲ್ಲಾ ನೆನಪಿಗೆ ಬಂತು. ಅಯ್ಯೋ ಅನ್ಯಾಯವಾಗಿ ನನ್ನ ಈ ಜನ್ಮವನ್ನೆಲ್ಲಾ ವ್ಯರ್ಥವಾಗಿ ಕಾಲಹರಣೆ ಮಾಡಿದೆನಲ್ಲಾ ಎಂದು ಆ ಗಜೇಂದ್ರನಿಗೆ ಪಶ್ಚಾತ್ತಾಪವಾಯಿತು. ಜ್ಞಾನೋದಯವಾಗಿದ್ದರಿಂದ ಭಗವಂತನೊಬ್ಬನ ಹೊರತು ಬೇರ‍್ಯಾರೂ ತನ್ನನ್ನು ರಕ್ಷಿಸಲಾರರು ಎಂಬ ಅರಿವುಂಟಾಗಿ ಅಂತರಾಳದಿಂದ ಮಹಾವಿಷ್ಣುವನ್ನು ಸ್ತುತಿಸಿದನು.


ಮರುಕ್ಷಣವೇ ಮಹಾವಿಷ್ಣು ಚಕ್ರಾಯುಧವನ್ನು ಹಿಡಿದು ಗರುಡ ವಾಹನನಾಗಿ ಅಲ್ಲಿಗೆ ಬಂದು ಚಕ್ರವನ್ನು ಪ್ರಯೋಗಿಸಿದನು. ಅದರಿಂದ ಮೊಸಳೆಯ ಶಿರವು ತುಂಡಾಯಿತು. ಆನೆಯು ನೀರಿನಿಂದ ಮೇಲೆ ಬಂದಿತು. ನಂತರ ಶ್ರೀಹರಿಯು ಅವನನ್ನು ತನ್ನೊಡನೆಯೇ ಕರೆದುಕೊಂಡು ಹೋಗಿ ಕರುಣಿಸಿದನು. ಇದು ಗಜೇಂದ್ರಮೋಕ್ಷವೆಂದು ಹೆಸರು ಪಡೆದ ಕಥೆ. ಈ ಘಟನೆಯಲ್ಲಿ ವಿಷ್ಣು ಚಕ್ರ ತಗಲುತ್ತಲೇ ಮೊಸಳೆಯ ದೇಹದಿಂದ ಒಬ್ಬ ಗಂಧರ್ವನು ಮೇಲೆ ಬಂದು ಮಹಾವಿಷ್ಣುವಿಗೆ ವಂದಿಸಿ ಸ್ತುತಿಸಲಾರಂಭಿಸಿದನು. ಈ ಆಶ್ಚರ್ಯವನ್ನು ಕಂಡು ಒಂದೆಡೆಯಿಂದ ದೇವತೆಗಳೂ ಇನ್ನೊಂದೆಡೆಯಿಂದ ಮಹರ್ಷಿಗಳೂ ಧಾವಿಸಿ ಅಲ್ಲಿಗೆ ಬಂಧರು. ಆಗ ಮಹಾವಿಷ್ಣುವು ಆಶ್ಚರ್ಯ ಪಡಬೇಡಿ. ಈ ಮೊಸಳೆಯು ಪೂರ್ವಜನ್ಮದಲ್ಲಿ ಒಬ್ಬ ಗಂಧರ್ವನಾಗಿತ್ತು. ಹುಹೂ ಎಂಬ ಗಂಧರ್ವನು ದೇವಲ ಮುನಿಯಿಂದ ಶಾಪ ಹೊಂದಿ ಮೊಸಳೆಯಾಗಿದ್ದ.[೬೦] ಅವನಿಗೆ ನನ್ನಿಂದ ಮೋಕ್ಷ ಲಭಿಸಿದೆ ಎಂದನು. ಈ ಕಥೆಯನ್ನು ತಿಳಿಸುವಂತಹ ಶಿಲ್ಪಗಳು ಹಂಪಿ ಪರಿಸರದ ಪ್ರಮುಖ ದೇವಾಲಯಗಳಾದ ವಿಠಲ ದೇವಾಲಯದಲ್ಲಿ (೩), ಕುದುರೆಗೊಂಬೆ ಮಂಟಪದಲ್ಲಿ (೨), ಹಾಗೂ ಅಚ್ಯುತರಾಯ ದೇವಾಲಯ, ಹಜಾರರಾಮ ದೇವಾಲಯ, ಮಾಲ್ಯವಂತ ರಘುನಾಥ ದೇವಾಲಯ ಮತ್ತು ಪಟ್ಟಾಭಿರಾಮ ದೇವಾಲಯಗಳಲ್ಲಿ ತಲಾ ಒಂದೊಂದರಂತೆ ಗಜೇಂದ್ರ ಮೋಕ್ಷ ಶಿಲ್ಪಗಳು ಕಂಡುಬಂದಿರುತ್ತವೆ. ಹಂಪಿಯ ಈ ಗಜೇಂದ್ರಮೋಕ್ಷ ಶಿಲ್ಪಗಳನ್ನು ವರದರಾಜ ಅಥವಾ ಕರಿವರದರಾಜ ಶಿಲ್ಪಗಳೆಂದು ಸಹ ಕರೆಯಲ್ಪಡುತ್ತವೆ.[೬೧]



ಆನೆ
ಗಣ : ಪ್ರೋಬಾಸಿಡಿಯ
ಕುಟುಂಬ : ಎಲಿಫಾನ್‌ಟಿಡೆ



ಗಜೇಂದ್ರಮೋಕ್ಷ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ



ಗಜೇಂದ್ರಮೋಕ್ಷ ಶಿಲ್ಪ, ಅಚ್ಯುತರಾಯ ದೇವಾಲಯ, ಹಂಪಿ

ಹಂಪಿಯ ವಿಠಲ ದೇವಾಲಯದಲ್ಲಿ ಈ ಕಥೆಯನ್ನು ವಿವರಿಸುವಂತ ಮೂರು ಶಿಲ್ಪಗಳು ದೊರಕಿದ್ದು. ಅದರಲ್ಲಿ ಎರಡು ಶಿಲ್ಪಗಳು ವಿಠಲ ದೇವಾಲಯದ ಸಂಗೀತ ಮಂಟಪದಲ್ಲಿ, ಒಂದು ಕಲ್ಯಾಣಮಂಟಪದ ಕಂಬದಲ್ಲಿ ಕಂಡುಬರುತ್ತದೆ. ಕಲ್ಯಾಣಮಂಟಪದ ಕಂಬದಲ್ಲಿನ ಗಜೇಂದ್ರಮೋಕ್ಷ ಶಿಲ್ಪಗಳು ಕ್ರಮವಾಗಿ ಕೆಳಗಿನಿಂದ ಮೇಲಕ್ಕೆ ಮೂರು ಪಟ್ಟಿಕೆಗಳಲ್ಲಿ ತೋರಲಾಗಿದೆ. ಕೆಳಗಿನ ಪಟ್ಟಿಕೆಯಲ್ಲಿ ಮೊಸಳೆಯು ಆನೆಯ ಕಾಲನ್ನು ಹಿಡಿದಿರುವಂತೆ ತೋರಲಾಗಿದ್ದು ಇದು ದಕ್ಷಿಣಾಭಿಮುಖವಾಗಿದೆ. ನಂತರ ಮಧ್ಯಪಟ್ಟಿಕೆಯಲ್ಲಿ ತನ್ನ ವಾಹನವಾದ ಗರುಡನ ಮೇಲೆ ಆಸೀನವಾಗಿರುವಂತೆಯೂ ನಂತರದ ಮೇಲ್ಪಟ್ಟಿಕೆಯಲ್ಲಿ ವಿಷ್ಣುವು ಗಜೇಂದ್ರನಿಗೆ ಆಶೀರ್ವಾದಿಸುತ್ತಿರುವಂತೆಯೂ ತೋರಲಾಗಿದೆ. ಈ ಶಿಲ್ಪದಲ್ಲಿನ ವಿಷ್ಣುವು ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದರೆ ಕೆಳಗಿನ ಎರಡು ಕೈಗಳಲ್ಲಿ ಎಡಗೈ ಸೊಂಟದ ಮೇಲಿಟ್ಟುಕೊಂಡಿದ್ದು, ಬಲಗೈ ಗಜೇಂದ್ರನ ತಲೆಯ ಮೇಲಿಟ್ಟು ಆಶೀರ್ವಾದಿಸುತ್ತಿರುವಂತೆಯೂ ತೋರಲಾಗಿದೆ. ಈ ಶಿಲ್ಪದಲ್ಲಿನ ಗಜೇಂದ್ರನು ಮೈಮೇಲೆ ವಿವಿಧ ವಸ್ತ್ರಾಭರಣಗಳನ್ನು ಧರಿಸಿರುವಂತೆ ಹಾಗೂ ತನ್ನ ಹಿಂಭಾಗದ ಎರಡು ಕಾಲುಗಳನ್ನು ಮಡಚಿ ಕುಳಿತಂತೆಯೂ ಬಿಡಿಸಲಾಗಿದೆ. ಇಲ್ಲಿ ಗಜೇಂದ್ರನ ಕಾಲನ್ನು ಮೊಸಳೆಯು ಬಲವಾಗಿ ಹಿಡಿದಿದ್ದರಿಂದ ಗಜೇಂದ್ರ ನಿಲ್ಲಲಾರದ ಸ್ಥಿತಿಯನ್ನು ತೋರಿಸಿದ್ದು, ಗಜೇಂದ್ರನ ನೋವನ್ನು ಶಿಲ್ಪಿ ಅತೀ ಸೂಕ್ಷ್ಮವಾಗಿ ವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಗಜೇಂದ್ರಮೋಕ್ಷ ಕಥೆಯನ್ನು ತಿಳಿಸುವ ಹಂಪಿ ಪರಿಸರದ ಶಿಲ್ಪಗಳಲ್ಲಿಯೇ ವಿಶಿಷ್ಟವಾದುದು ಮತ್ತು ಭಿನ್ನವಾದುದು ಇದೇ ದೇವಾಲಯದ ಸಂಗೀತ ಮಂಟಪದ ಕಂಬದಲ್ಲಿ ಕಂಡುಬರುತ್ತದೆ. ಈ ಕಂಬದ ಒಂದು ಪಟ್ಟಿಕೆಯಲ್ಲಿ ಆನೆಯ ಎಡಗಾಲನ್ನು ಮೊಸಳೆಯೊಂದು ಹಿಡಿದು ಎಳೆಯುತ್ತಿರುವಂತೆ, ಮತ್ತೊಂದು ಪಟ್ಟಿಕೆಯಲ್ಲಿ ಗರುಡವಾಹನದ ಮೇಲೆ ವಿಷ್ಣು ಅಲ್ಲಿಗೆ ಆಗಮಿಸುತ್ತಿರುವಂತೆ, ನಂತರದ ಪಟ್ಟಿಕೆಯಲ್ಲಿ ವಿಷ್ಣುವು ಗಜೇಂದ್ರನನ್ನು ರಕ್ಷಿಸಿ ಆಶಿರ್ವಾದಿಸುತ್ತಿರುವಂತೆ ಕಂಡರಿಸಲಾಗಿದೆ.

ಇಲ್ಲಿ ವಿಶಿಷ್ಟವೆಂದರೇ ದೇವಲ ಮುನಿಯಿಂದ ಶಾಪ ಹೊಂದಿ ಮೊಸಳೆಯಾಗಿದ್ದ ಹುಹೂ ಎಂಬ ಗಂಧರ್ವನು ವಿಷ್ಣುವಿನ ಚಕ್ರದ ಸ್ಪರ್ಶದಿಂದ ಶಾಪ ವಿಮೋಚನೆಗೊಂಡು ಪುನ: ಮಾನವ ರೂಪ ಪಡೆದು ವಿಷ್ಣುವಿನ ಪಾದಕ್ಕೆ ನಮಸ್ಕರಿಸುತ್ತಿರುವುದು. ಮೊಸಳೆಯು ತನ್ನ ಶಾಪ ವಿಮೋಚನೆ

ಹೊಂದಿ ಮಾನವ ರೂಪ ಪಡೆದು ವಿಷ್ಣುವಿನ ಪಾದಕ್ಕೆ ನಮಸ್ಕರಿಸುತಿರುವ ಈ ರೀತಿಯ ಶಿಲ್ಪ ಇಲ್ಲಿ ಬಿಟ್ಟರೆ ಹಂಪಿ ಪರಿಸರದಲ್ಲಿ ಬೇರೆಲ್ಲೂ ಕಂಡುಬಂದಿಲ್ಲ. ಹಾಗಾಗಿ ಗಜೇಂದ್ರಮೋಕ್ಷ ಶಿಲ್ಪಗಳಲ್ಲಿಯೇ ಇದು ವಿಭಿನ್ನವಾಗಿದ್ದು ವಿಶಿಷ್ಟವಾಗಿದೆ. ಇದೇ ಸಂಗೀತ ಮಂಟಪದ ಮೇಲ್ಛಾವಣಿಯ ಪಟ್ಟಿಕೆಯಲ್ಲಿನ ಗಜೇಂದ್ರಮೋಕ್ಷ ಶಿಲ್ಪ ಹಾಗೂ ಹಜಾರರಾಮ, ಪಟ್ಟಾಭಿರಾಮ, ಮಾಲ್ಯವಂತ ರಘುನಾಥ ದೇವಾಲಯ ಮತ್ತು ಕುದುರೆಗೊಂಬೆ ಮಂಟಪದಲ್ಲಿನ ಗಜೇಂದ್ರಮೋಕ್ಷ ಶಿಲ್ಪಗಳೂ ಸಹ ವಿಠಲ ದೇವಾಲಯದ ಕಲ್ಯಾಣ ಮಂಟಪದಲ್ಲಿನ ಶಿಲ್ಪ ಹೊಂದಿರುವ ಲಕ್ಷಣಗಳ ಸಾಮ್ಯತೆಯನ್ನು ಹೊಂದಿದ್ದರೂ ಸ್ವಲ್ಪಮಟ್ಟಿನ ಭಿನ್ನತೆಯನ್ನು ಕಾಣಬಹುದಾಗಿದೆ. ಮುಖ್ಯವಾಗಿ ಹಜಾರರಾಮ ದೇವಾಲಯದಲ್ಲಿನ ಗಜೇಂದ್ರಮೋಕ್ಷ ಶಿಲ್ಪದಲ್ಲಿ ವಿಷ್ಣುವು ಒಂದು ಪೀಠದ ಮೇಲೆ ಕುಳಿತಿದ್ದು ಬಲಗಾಲನ್ನು ಕೆಳಗೆ ಇಳಿಬಿಟ್ಟಿದ್ದು ಎಡಗಾಲನ್ನು ಬಲಗಾಲಿನ ಮೇಲೆ ಹಾಕಿಕೊಂಡಿದ್ದಾನೆ. ಜೊತೆಗೆ ವಿಷ್ಣು ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳು ಶಂಖ ಮತ್ತು ಚಕ್ರವನ್ನು ಹಿಡಿದಿದ್ದರೆ ಕೆಳಗಿನ ಎರಡು ಕೈಗಳಲ್ಲಿ ಬಲಗೈ ಅಭಯ ಮುದ್ರೆಯಲ್ಲಿದ್ದರೆ, ಎಡಗೈ ಗಜೇಂದ್ರನ ತಲೆಯ ಮೇಲಿಟ್ಟು ಆಶೀರ್ವಾದಿಸುತ್ತಿರುವಂತೆ ಹಾಗೆಯೇ ಗಜೇಂದ್ರನು ವಿವಿಧ ರೀತಿಯ ವಸ್ತ್ರಾಭರಣಗಳಿಂದ ಅಲಂಕೃತಗೊಂಡಿದ್ದು ತನ್ನ ಸೊಂಡಿಲಿನಿಂದ ವಿಷ್ಣುವಿನ ಪಾದಕ್ಕೆ ನಮಸ್ಕರಿಸುತ್ತಿರುವಂತೆ ತೋರಲಾಗಿದೆ.



ಗಜೇಂದ್ರಮೋಕ್ಷ ಕಥೆಯನ್ನು ತಿಳಿಸುವ ಸಮೂಹ ಶಿಲ್ಪಗಳು, ಸಂಗೀತ ಮಂಟಪ, ವಿಜಯವಿಠಲ ದೇವಾಲಯ, ಹಂಪಿ

ಅಚ್ಯುತರಾಯ ದೇವಾಲಯದಲ್ಲಿ ಅಮ್ಮನ ದೇವಾಲಯದ ಮುಖಮಂಟಪದ ಒಂದು ಕಂಬದಲ್ಲಿ ಗಜೇಂದ್ರಮೋಕ್ಷದ ಸಂಪೂರ್ಣ ಕಥೆಯನ್ನು ವಿವರಿಸುವಂತ ಶಿಲ್ಪಗಳು ಕಂಡುಬಂದಿವೆ. ಕಂಬದ ಒಂದು ಪಟ್ಟಿಕೆಯಲ್ಲಿ ಆನೆಯು ಸೊಂಡಿಲಿನಲ್ಲಿ ಕಮಲದ ಹೂವನ್ನು ಹಿಡಿದು, ಪೀಠದ ಮೇಲೆ ನಿಂತಿರುವಂತೆಯೂ, ಮತ್ತು ಆನೆಯ ಹಿಂಭಾಗದ ಬಲಗಾಲನ್ನು ಮೊಸಳೆಯೊಂದು ತನ್ನ ಬಾಯಿಯಿಂದ ಹಿಡಿದು ಎಳೆಯುತ್ತಿರುವಂತೆಯೂ ತೋರಲಾಗಿದೆ. ಇಲ್ಲಿ ಮೊಸಳೆಯ ಹಲ್ಲುಗಳನ್ನು ಸ್ಪಷ್ಟವಾಗಿ ಕಾಣುವಂತೆ ಬಿಡಿಸಿದ್ದು ಬಲಿಷ್ಠವಾದವು ಎಂಬುದನ್ನು ತಿಳಿಯಬಹುದು. ಈ ಶಿಲ್ಪದಲ್ಲಿ ಮೊಸಳೆ, ಆನೆ ಮತ್ತು ಇತರೆ ಗಿಡ ಮರಗಳನ್ನು ಅತಿ ಸುಂದರವಾಗಿ ಕೆತ್ತಿರುವುದು ಆ ಶಿಲ್ಪಿಯ ಸೃಜನಶೀಲತೆಯೆಂದೇ ಹೇಳಬಹುದು.

ಮತ್ತೊಂದು ಪಟ್ಟಿಕೆಯಲ್ಲಿ ವಿಷ್ಣುವು ವರದರಾಜನ ರೂಪದಲ್ಲಿದ್ದು ತನ್ನ ವಾಹನವಾದ ಗರುಡ ಬಾಗಿರುವಂತೆ ವಿಷ್ಣುವಿನ ಹಿಂಭಾಗದಲ್ಲಿ ತೋರಲಾಗಿದೆ. ವಿಷ್ಣುವು ಗಜೇಂದ್ರನನ್ನು ಆಶೀರ್ವಾದಿಸು-

ತ್ತಿರುವಂತೆ ತೋರಲಾಗಿದ್ದು ಶಿಲ್ಪದಲ್ಲಿನ ವಿಷ್ಣು ಮತ್ತು ಆನೆಯು ವಿವಿಧ ರೀತಿಯ ವಸ್ತ್ರಾಭರಣಗಳಿಂದ ಅಲಂಕೃತಗೊಂಡಿರುವಂತೆಯೂ ಕೆತ್ತಲಾಗಿದೆ.[೧೨]

ಹಂಪಿ ಪರಿಸರದಲ್ಲಿ ಈ ರೀತಿಯ ಒಟ್ಟು ಎಂಟು ಶಿಲ್ಪಗಳು ದೊರಕಿದ್ದು, ಇವು ಗಜೇಂದ್ರಮೋಕ್ಷದ ಕಥೆಯನ್ನು ವಿವರಿಸುವಲ್ಲಿ ಪ್ರಮುಖ ಆಕರಗಳಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಗಜೇಂದ್ರಮೋಕ್ಷ ಅಥವಾ ವರದರಾಜನಿಗೆ ಸಂಬಂಧಿಸಿದಂತೆ ಹಂಪಿ ಪರಿಸರದಲ್ಲಿ ಎಲ್ಲೂ ದೇವಾಲಯಗಳು ಕಂಡುಬರುವುದಿಲ್ಲ. ಆದರೆ ತಮಿಳುನಾಡಿನ ಕಂಚಿಯಲ್ಲಿ ವರದರಾಜನಿಗೆ ಸಂಬಂಧಿಸಿದಂತೆ ವರದರಾಜಸ್ವಾಮಿ ದೇವಾಲಯವಿದ್ದು, ಇದು ದಕ್ಷಿಣ ಭಾರತದಲ್ಲೇ ಶ್ರೀ ವೈಷ್ಣವರಿಗೆ ಸಂಬಂಧಿಸಿದಂತೆ ಅತ್ಯಂತ ಪ್ರಸಿದ್ಧ ದೇವಾಲಯವಾಗಿದೆ.[೧೩]

ಗಜೇಂದ್ರಮೋಕ್ಷ ಶಿಲ್ಪದ ಅತ್ಯಂತ ಪ್ರಾಚೀನ ಉದಾಹರಣೆ ಕ್ರಿ.ಶ.೫ ಮತ್ತು ೬ನೇ ಶತಮಾನದ ಗುಪ್ತರ ಕಾಲದಲ್ಲಿ ಮೊದಲಿಗೆ ಕಂಡುಬರುತ್ತದೆ. ಈ ಶಿಲ್ಪ ದೇವಗಢದ ದಶಾವತಾರ ದೇವಾಲಯದ ಶಿಲ್ಪಫಲಕಗಳಲ್ಲಿ ಇರುವುದು ತಿಳಿದುಬರುತ್ತದೆ. ಈ ಶಿಲ್ಪಫಲಕದಲ್ಲಿ ಗಜೇಂದ್ರಮೋಕ್ಷ ಕಥೆಯನ್ನು ಚಿತ್ರಿಸಿದ್ದು, ಗಜರಾಜನ ಕಾಲನ್ನು ಹಿಡಿದಿರುವ ಪ್ರಾಣಿ ಇಲ್ಲಿ ಮೊಸಳೆಯಾಗಿರದೆ ಹೆಬ್ಬಾವಾಗಿರುವುದು ಕುತೂಹಲಕಾರಿಯಾಗಿದ್ದು ವೈಶಿಷ್ಟ್ಯತೆಯಿಂದ ಕೂಡಿದೆ.[೧೪] ಆದರೆ ಹಂಪಿ ಪರಿಸರದಲ್ಲಿನ ಎಲ್ಲಾ ಗಜೇಂದ್ರ ಮೋಕ್ಷ ಶಿಲ್ಪಗಳಲ್ಲಿ ಮೊಸಳೆಯನ್ನೇ ಪ್ರಧಾನವಾಗಿ ತೋರಿಸಲಾಗಿದೆ. ಈ ಕಥೆಯು ನಂಬಿದವರನ್ನು ಭಗವಂತ ಎಂದಿಗೂ ಕೈಬಿಡುವುದಿಲ್ಲವೆಂಬ ತತ್ವವನ್ನು ಜಗತ್ತಿಗೆ ತಿಳಿಸಿಕೊಡುತ್ತದೆ.

ಪುರುಷಮೃಗ ಶಿಲ್ಪ

ಹಂಪಿ ಪರಿಸರದಲ್ಲಿ ಪುರಾಣ ಹಾಗೂ ಪ್ರಾಚೀನ ಮಹಾಕಾವ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ಇಲ್ಲಿನ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ. ವಿಶೇಷವಾಗಿ ರಾಮಾಯಣ ಕಾವ್ಯವನ್ನು ಸಂಪೂರ್ಣವಾಗಿ ಶಿಲ್ಪಗಳ ಕೆತ್ತನೆಯ ಮೂಲಕ ತೋರಿಸಿರುವ ಹಂಪಿಯಲ್ಲಿ ಮಹಾಭಾರತ ಕಾವ್ಯಕ್ಕೂ ಮಾನ್ಯತೆ ನೀಡಿರುವುದಕ್ಕೆ ಹಂಪಿ ಪರಿಸರದಲ್ಲಿ ದೊರೆಯುವ ಮಹಾಭಾರತದ ಸನ್ನಿವೇಶವನ್ನು ಬಿಂಬಿಸುವ ಶಿಲ್ಪಗಳು ಸಾಕ್ಷಿಯಾಗಿವೆ. ಅಂತಹವುಗಳಲ್ಲಿ ಪುರುಷಮೃಗದ ಶಿಲ್ಪಗಳು ಪ್ರಮುಖವಾಗಿವೆ. ಪುರುಷಮೃಗವು ಮಹಾಭಾರತದಲ್ಲಿ ಉಲ್ಲೇಖಿತವಾಗಿರುವ ದೇಹದ ಅರ್ಧಭಾಗ ಮನುಷ್ಯ ಹಾಗೂ ಅರ್ಧಭಾಗ ಪ್ರಾಣಿ ಅದರಲ್ಲೂ ವ್ಯಾಘ್ರ ರೂಪವನ್ನು ಹೊಂದಿರುವ ಶಿಲ್ಪವಾಗಿದೆ. ಆದ್ದರಿಂದ ಇದನ್ನು ವ್ಯಾಘ್ರಪಾದವೆಂತಲೂ ಕರೆಯಲಾಗುತ್ತದೆ. ಅಲ್ಲದೆ ಸದಾಕಾಲ ಶಿವನ ಪೂಜೆಯಲ್ಲಿ ತಲ್ಲೀನನಾಗಿರುವುದು ಇದರ ಪ್ರಮುಖ ಲಕ್ಷಣ.[೧೫] ಇಂತಹ ಪುರುಷಮೃಗದ ಶಿಲ್ಪಗಳು ಹಂಪಿ ಪರಿಸರದಲ್ಲಿ ಸಾಕಷ್ಟು ಕಂಡುಬರುತ್ತವೆ.

ಪುರುಷಮೃಗ ಶಿಲ್ಪಗಳಿಗೆ ಸಂಬಂಧಿಸಿದಂತೆ ಈಗಾಗಲೇ ಹೇಮಾವತಿ ಶಿ. ಮೆಣಸಗಿಯವರು ಹಂಪಿಯ ಶಿಲ್ಪಗಳಲ್ಲಿ ಮಹಾಭಾರತ ಉಲ್ಲೇಖಿತ ಪುರುಷಮೃಗ ಶಿಲ್ಪ ಎಂಬ ವಿಷಯದ ಕುರಿತು ಇತಿಹಾಸ ದರ್ಶನ ಸಂಪುಟ ೩೦ರಲ್ಲಿ ಲೇಖನವನ್ನು ಪ್ರಕಟಿಸಿರುತ್ತಾರೆ. ಈ ಲೇಖನದಲ್ಲಿ ಅವರು ಹಂಪಿಯ ಶಿಲ್ಪಗಳಲ್ಲಿ ಮಹಾಭಾರತದ ಕಥೆಯನ್ನು ಉಲ್ಲೇಖಿಸುವ ಪುರುಷಮೃಗ ಶಿಲ್ಪಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ವಿವರಿಸಿರುತ್ತಾರೆ. ಆದರೆ ಇಲ್ಲಿ ನಾನು ಇವುಗಳ ಜೊತೆಗೆ ಶಿವಲಿಂಗವನ್ನು

ಪೂಜಿಸುತ್ತಿರುವ ಪುರುಷಮೃಗ ಶಿಲ್ಪ ಹಾಗೂ ಶಿವಲಿಂಗವಿಲ್ಲದೆ ಪುರುಷಮೃಗವನ್ನು ಮಾತ್ರವೇ ಕೆತ್ತಿರುವ ಶಿಲ್ಪಗಳು ಹಂಪಿ ಪರಿಸರದಲ್ಲಿ ಅಧಿಕ ಸಂಖ್ಯೆಯಲ್ಲಿ ದೊರತಿದ್ದು ಅವುಗಳನ್ನು ಇಲ್ಲಿ ಪಟ್ಟಿ ಮಾಡಿ ವಿವರಿಸಲಾಗಿದೆ.

ಹಂಪಿ ಪರಿಸರದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಪುರುಷಮೃಗವು ಶಿವನ ಪರಮಭಕ್ತ. ಇದೊಂದು ಪೌರಾಣಿಕ ಜೀವಿಯಾಗಿದ್ದು ಕಲೆ, ಸಂಪ್ರದಾಯ, ಆಚರಣೆ ಹಾಗೂ ದಂತಕಥೆಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಆದರೆ ಹೆಚ್ಚು ಪ್ರಸಿದ್ಧಿ ಪಡೆದುದು ಭಾರತದ ಪ್ರಾಚೀನ ಮಹಾಕಾವ್ಯವಾದ ಮಹಾಭಾರತದ ಹಿನ್ನೆಲೆಯಲ್ಲಿ. ಮಹಾಭಾರತದ ಸಭಾಪರ್ವದ ಏಳನೇ ಸಂಧಿಯಲ್ಲಿ[೬೬] ಇದರ ಉಲ್ಲೇಖ ಬರುತ್ತದೆ. ಅದರಲ್ಲಿರುವಂತೆ ಪಂಚಪಾಂಡವರಲ್ಲಿ ಹಿರಿಯನಾದ ಧರ್ಮರಾಯನು ನಾರದೋಪದೇಶದಿಂದ ರಾಜಸೂಯ ಯಾಗವನ್ನು ಕೈಗೊಳ್ಳುತ್ತಾನೆ. ಈ ಯಜ್ಞವನ್ನು ಕೈಗೊಂಡ ಸಮಯದಲ್ಲಿ ಅತಿಥಿಗಳನ್ನು ಸ್ವಾಗತಿಸಲು ಮತ್ತು ಎಂಜಲಿನ ಶುದ್ಧತೆಗೆ ಚಿಂತಿಸಿದ ಧರ್ಮರಾಯನು ಶ್ರೀಕೃಷ್ಣನ ಸಲಹೆಯಂತೆ ಪುರುಷಮೃಗವನ್ನು ಕರೆತರಲು ಭೀಮನನ್ನು ಕಳುಹಿಸುತ್ತಾನೆ. ಹೇಮಾಚಲದ ದಕ್ಷಿಣಕ್ಕೆ ಮಾನಸಸರೋವರದ ತೀರದಲ್ಲಿನ ಅರಣ್ಯದಲ್ಲಿ ಶಿವಪೂಜೆಯಲ್ಲಿ ತೊಡಗಿರುವ ಪುರುಷಮೃಗವನ್ನು ಕರೆತರಲು ಭೀಮ ಹೊರಡುತ್ತಾನೆ. ದಾರಿ ಮಧ್ಯದಲ್ಲಿ ಪವನಸುತ ಆಂಜನೇಯನ ದರ್ಶನವಾಗುತ್ತದೆ. ಭೀಮನು ಪುರುಷಮೃಗವನ್ನು ಕರೆದೊಯ್ಯಲು ಬಂದಿರುವ ಉದ್ದೇಶವನ್ನು ತಿಳಿದ ಆಂಜನೇಯನು ಭೀಮನಿಗೆ ಅದು ಮನೋವೇಗದಲ್ಲಿ ಚಲಿಸುವ ಪ್ರಾಣಿ ಎಂದು ತಿಳಿಸಿ, ಅದನ್ನು ಕರೆತರುವ ಉಪಾಯವನ್ನು ಹೇಳಿದನು. ಹಾಗೂ ತನ್ನ ಬಾಲದಿಂದ ಒಂದಿಷ್ಟು ರೋಮಗಳನ್ನು ಕಿತ್ತು ಆತನ ಸಹಾಯಕ್ಕಾಗಿ ನೀಡವನು. ಅದನ್ನು ಪಡೆದ ಭೀಮನು ಮುಂದೆ ಸಾಗಿ ಪುರುಷಮೃಗವನ್ನು ಭೇಟಿ ಮಾಡಿ ತಾನು ನನ್ನ ಅಣ್ಣನ ಆದೇಶದ ಮೇರೆಗೆ ತಮ್ಮನ್ನು ಕರೆದೊಯ್ಯಲು ಬಂದಿರುವೆನು ಎಂದು ತಿಳಿಸಿದನು. ಆಗ ಪುರುಷಮೃಗವು ಒಂದು ಷರತ್ತಿನ ಮೇರೆಗೆ ಆತನೊಂದಿಗೆ ಹೋಗಲು ಒಪ್ಪುತ್ತದೆ. ಅದರ ಪ್ರಕಾರ ಭೀಮನು ಮುಂದೆ ಮುಂದೆ ಓಡುವುದು ಹಿಂದೆ ಪುರುಷಮೃಗವು ಆತನನ್ನು ಬೆನ್ನಟ್ಟುವುದು ಹಾಗೂ ಭೀಮನು ಕೈಗೆ ಸಿಕ್ಕಿದಲ್ಲಿ ಆತನನ್ನು ಹಿಡಿಯುವುದು ಎಂಬ ಷರತ್ತು ನಿರ್ಧರಿತವಾಯಿತು. ಇದಕ್ಕೊಪ್ಪಿದ ಭೀಮನು ಓಡಲಾರಂಭಿಸಿದನು. ಪುರುಷಮೃಗವು ಆತನನ್ನು ಬೆನ್ನಟ್ಟಿತು. ಅದು ಹತ್ತಿರ ಬಂದಾಗ ಭೀಮನು ಆಂಜನೇಯ ನೀಡಿದ ಒಂದು ರೋಮವನ್ನು ಭೂಮಿಗೆ ಹಾಕಲು ಅಲ್ಲಿ ಶಿವಲಿಂಗವು ಉದ್ಭವಿಸುತ್ತದೆ. ಅದನ್ನು ನೋಡಿದ ಶಿವಭಕ್ತನಾದ ಪುರುಷಮೃಗನು ಶಿವಪೂಜೆಯಲ್ಲಿ ತೊಡಗುವನು. ಈ ಸಮಯವನ್ನು ಉಪಯೋಗಿಸಿಕೊಂಡ ಭೀಮನು ಮುಂದೆ ಓಡಲು ಆರಂಭಿಸಿದನು. ಲಿಂಗಪೂಜೆ ಮುಗಿಸಿದ ಪುರುಷಮೃಗವು ಮತ್ತೆ ಭೀಮನನ್ನು ಬೆನ್ನಟ್ಟಲು ಭೀಮನು ಮತ್ತೆ ರೋಮವನ್ನೆಸೆಯಲು ಶಿವಲಿಂಗ ಉದ್ಭವಿಸುತ್ತದೆ. ಹಾಗೆಯೇ ಪುರುಷಮೃಗವು ಮತ್ತೆ ಲಿಂಗಪೂಜೆಯಲ್ಲಿ ತೊಡಗುತ್ತದೆ.

ಹೀಗೆ ಮುಂದುವರಿದ ಪುರುಷಮೃಗ ಹಾಗೂ ಭೀಮರ ಓಟವು ಯಾಗದ ಸ್ಥಳದವರೆಗೂ ಮುಂದುವರೆಯಿತು. ಯಾಗ ಸ್ಥಳದ ಬಾಗಿಲ ಬಳಿ ಬಂದಾಗ ಪುರುಷಮೃಗವು ಭೀಮನ ಕಾಲನ್ನು ಹಿಡಿದೆಳೆಯಿತು. ಆಗ ಭೀಮನ ಒಂದು ಕಾಲು ದ್ವಾರದ ಒಳಗೆ ಹಾಗೂ ಇನ್ನೊಂದು ಕಾಲು ಹೊರಗೆ ಇದ್ದುದರಿಂದ ಇಬ್ಬರಲ್ಲೂ ವಾದವು ಆರಂಭವಾಯಿತು. ಅಲ್ಲಿಗೆ ಬಂದ ಧರ್ಮರಾಯನು ನ್ಯಾಯವನ್ನು ನೀಡಲು, ಅದಕ್ಕೆ ಮೆಚ್ಚಿದ ಪುರುಷಮೃಗವು ಭೀಮನನ್ನು ಮನ್ನಿಸಿ ಅವರ ಕಾರ್ಯಗಳನ್ನು

ಮುಂದುವರೆಸಲು ಒಪ್ಪಿತ್ತು. ಅದರಂತೆ ಪುರುಷಮೃಗವನ್ನು ಯಜ್ಞದ ಭೋಜನಶಾಲೆಯಲ್ಲಿ ಸ್ವರ್ಣ ಕಂಬದಲ್ಲಿ ಬಂಧಿಸಿಡಲಾಯಿತು. ಈ ವಿವರಣೆಯು ಕುಮಾರವ್ಯಾಸ ಮಹಾಭಾರತದಲ್ಲಿ ತಿಳಿದುಬರುತ್ತದೆ.

ಪ್ರಮುಖವಾಗಿ ದಕ್ಷಿಣ ಭಾರತದ ಎಲ್ಲಾ ದೇವಾಲಯಗಳಲ್ಲಿ ಅದರಲ್ಲೂ ಮುಖ್ಯವಾಗಿ ಶೈವ ದೇವಾಲಯಗಳಲ್ಲಿ ಕಂಡುಬರುವ ಪುರುಷಮೃಗ ಶಿಲ್ಪಕ್ಕೆ ಮೇಲಿನ ಮಹಾಭಾರತದ ಕಥೆಯಲ್ಲದೆ ಇನ್ನೂ ಹಲವು ಬಗೆಯ ಹಿನ್ನೆಲೆಗಳನ್ನು ಹೇಳಲಾಗುತ್ತದೆ. ಅಂತಹವುಗಳಲ್ಲಿ ಈ ಮುಂದಿನ ಕಥೆಯು ಒಂದು. ಇಲ್ಲಿ ಮೇಲೆ ತಿಳಿಸಿದ ಮಹಾಭಾರತದ ಕಥೆಯೇ ಸ್ವಲ್ಪ ಭಿನ್ನ ಸ್ವರೂಪವನ್ನು ಹೊಂದಿದ್ದು ಕೇರಳ ಮತ್ತು ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯಲ್ಲಿರುವ ೧೨ ಶಿವಾಲಯಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ದಿನಗಳಲ್ಲಿಯೂ ಆಚರಣೆಯ ರೂಪದಲ್ಲಿ ಅಸ್ತಿತ್ವದಲ್ಲಿರುವುದು ವಿಶೇಷ. ಈ ಕಥೆಯಲ್ಲಿ ಪುರುಷಮೃಗವು ಆಳವಾದ ಶಿವಪೂಜೆಯಲ್ಲಿ ತೊಡಗಿದ್ದು ವಿಷ್ಣು ಮತ್ತು ವಿಷ್ಣುವಿನ ಭಕ್ತರನ್ನು ತಾತ್ಸಾರ ಭಾವದಿಂದ ಕಾಣುತ್ತಿರುತ್ತದೆ. ಹೀಗಿರುವಲ್ಲಿ ಪಾಂಡರವರಲ್ಲಿ ಹಿರಿಯವನಾದ ಧರ್ಮರಾಯನು ರಾಜಸೂಯ ಯಾಗವನ್ನು ಕೈಗೊಳ್ಳುತ್ತಾನೆ. ಈ ಸಂದರ್ಭದಲ್ಲಿ ಯಜ್ಞಕ್ಕೆ ಪುರುಷಮೃಗದ ಹಾಲಿನ ಅವಶ್ಯಕತೆಯಿಂಟಾಗುತ್ತದೆ. ಈ ಜವಾಬ್ದಾರಿಯನ್ನು ನಿರ್ವಹಿಸಲು ಭೀಮನು ಅತಿಯಾದ ನಂಬಿಕೆಯಿಂದ ಮುಂದೆ ಬರುತ್ತಾನೆ. ಶ್ರೀಕೃಷ್ಣನು ಶಿವ ಹಾಗೂ ವಿಷ್ಣುಗಳಿಬ್ಬರು ಒಂದೇ ಎಂಬುದನ್ನು ತಿಳಿಸಲು ಹಾಗೂ ಭೀಮನ ಅತಿಯಾದ ಸ್ವನಂಬಿಕೆಯನ್ನು ನಿಗ್ರಹಿಸಲು ಬಯಸಿ, ೧೨ ಶಿವಲಿಂಗಗಳನ್ನು ಭೀಮನಿಗೆ ಕೊಟ್ಟು ಅವಶ್ಯಕತೆ ಬಿದ್ದಲ್ಲಿ ಒಂದೊಂದೇ ಲಿಂಗವನ್ನು ಭೂಮಿಗೆ ಹಾಕುವಂತೆ ಹೇಳಿ ಕಳುಹಿಸುತ್ತಾನೆ. ಹಾಗೂ ಗೋವಿಂದ ಗೋಪಾಲ ಎಂಬ ಪದಗಳನ್ನು ಉಚ್ಚರಿಸಲು ತಿಳಿಸುತ್ತಾನೆ.

ಭೀಮನು ಶಿವನ ಪೂಜೆಯಲ್ಲಿ ನಿರತನಾದ ಪುರುಷಮೃಗವಿದ್ದ ಅರಣ್ಯದೊಳಗೆ ಪ್ರವೇಶಿಸಿ ಪುರುಷಮೃಗದ ಹಾಲನ್ನು ಪಡೆಯಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಗೋವಿಂದ ಗೋಪಾಲ ಎಂದು ಉಚ್ಚರಿಸುತ್ತಾನೆ. ಇದರಿಂದ ಶಿವಪೂಜೆಯಲ್ಲಿ ತೊಡಗಿರುವ ಪುರುಷಮೃಗಕ್ಕೆ ತೊಂದರೆಯುಂಟಾಗಿ ಲಿಂಗದಲ್ಲಿ ವಿಷ್ಣು ಇರುವಂತೆ ಭಾಸವಾಗಿ ಕೋಪದಿಂದ ಭೀಮನನ್ನು ಹಿಡಿಯಲು ಮುಂದಾಗುತ್ತದೆ. ಆಗ ಭೀಮನು ಅದರಿಂದ ತಪ್ಪಿಸಿಕೊಳ್ಳಲು ಓಡಲಾರಂಭಿಸುತ್ತಾನೆ. ಅದು ಆತನ ಸಮೀಪಕ್ಕೆ ಬಂದಾಗ ಕೃಷ್ಣನು ನೀಡಿದ ಶಿವಲಿಂಗವೊಂದನ್ನು ಭೂಮಿಗೆ ಚೆಲ್ಲುತ್ತಾನೆ. (ಕೆಲವೆಡೆ ರುದ್ರಾಕ್ಷಿಮಣಿಗಳನ್ನು ಚೆಲ್ಲಿ ಲಿಂಗರೂಪ ಪಡೆಯುತ್ತದೆ ಎಂದು ಹೇಳಲಾಗಿದೆ.) ಅದು ಶಿವಾಲಯವಾಗಿ ಪರಿವರ್ತನೆಯಾದಾಗ ಪುರುಷಮೃಗವು ಶಿವಪೂಜೆಯಲ್ಲಿ ತೊಡಗುತ್ತದೆ. ಆಗ ಮತ್ತೆ ಭೀಮನು ಅದರ ಹಾಲನ್ನು ಪಡೆಯಲು ಗೋವಿಂದ ಗೋಪಾಲ ಎಂದು ಹಾಡುತ್ತಾನೆ. ಆಗ ಪುರುಷಮೃಗವು ಮತ್ತೆ ಕುಪಿತನಾಗಿ ಭೀಮನನ್ನು ಹಿಡಿಯಲು ಆತನ ಹಿಂದೆ ಓಡುತ್ತದೆ. ಆಗ ಭೀಮನು ಮತ್ತೆ ಶಿವಲಿಂಗವನ್ನು ಚೆಲ್ಲುತ್ತಾನೆ.

ಹೀಗೆ ೧೨ ಲಿಂಗಗಳನ್ನು ಚೆಲ್ಲಿದಾಗ ಅಲ್ಲಿ ೧೨ ಶಿವಾಲಯಗಳು ನಿರ್ಮಾಣವಾಗುತ್ತವೆ. ಕೊನೆಯಲ್ಲಿ ಪುರುಷಮೃಗ ಭೀಮನನ್ನು ಹಿಡಿದಾಗ ಭೀಮನ ಒಂದು ಕಾಲು ಯಾಗ ಶಾಲೆಯ ದ್ವಾರದ ಒಳಗೆ ಹಾಗೂ ಇನ್ನೊಂದು ಕಾಲು ಹೊರಗೆ ಇರುತ್ತದೆ. ಭೀಮನು ತಾನು ಒಳಗೆ ಪ್ರವೇಶಿಸಿದಂತೆ ಎಂದು ವಾದಿಸಲು ಧರ್ಮರಾಯನು ಬಂದು ಭೀಮನ ಅರ್ಧದೇಹ ಒಳಗೆ ಇದ್ದು ಇನ್ನರ್ಧ ಹೊರಗೆ ಇರುವುದರಿಂದ ಹೊರಗೆ ಇರುವ ದೇಹದ ಅರ್ಧಭಾಗವು ಪುರುಷಮೃಗಕ್ಕೆ ಸಲ್ಲುತ್ತದೆ ಎಂದು

ನ್ಯಾಯವನ್ನು ಹೇಳುತ್ತಾನೆ. ಈ ನ್ಯಾಯಕ್ಕೆ ಮೆಚ್ಚಿದ ಪುರುಷಮೃಗವು ಯಾಗ ಪೂರ್ಣಗೊಳ್ಳಲು ತನ್ನ ಹಾಲನ್ನು ನೀಡುತ್ತದೆ. ಈ ೧೨ ಶಿವಾಲಯಗಳು ತಮಿಳುನಾಡಿನ ಕನ್ಯಾಕುಮಾರಿಯ ಸುತ್ತಮುತ್ತಲ ಸ್ಥಳಗಳಲ್ಲಿ ಕಂಡುಬರುತ್ತವೆ. ಹಾಗೂ ಈಗಲೂ ಶಿವರಾತ್ರಿಯಂದು ಅಲ್ಲಿನ ಜನ ಬರಿಗಾಲಿನಲ್ಲಿ ಕೈಯಲ್ಲೊಂದು ತಾಳೆ ಮರದ ಎಲೆಯೊಂದನ್ನು ಹಿಡಿದು ಗೋಪಾಲ ಗೋವಿಂದ ಎಂದು ಹಾಡುತ್ತಾ ೭೫ ಕಿ.ಮೀ.ಗಳಷ್ಟು ಓಡಿ, ಈ ೧೨ ದೇವಾಲಯಗಳ ದರ್ಶನ ಪಡೆಯುತ್ತಾರೆ ಎಂದು ತಿಳಿದುಬರುತ್ತದೆ. ಈ ಮೂಲಕ ಅವರು ಶಿವ ಮತ್ತು ವಿಷ್ಣುಗಳಿಬ್ಬರೂ ಒಂದೇ ಎಂಬ ಭಾವೈಕ್ಯತೆಯನ್ನು ಪ್ರದರ್ಶಿಸುತ್ತಾರೆ ಎಂದೂ ಸಹ ಹೇಳಲಾಗುತ್ತದೆ.[೬೭]

ಈ ಮೇಲಿನ ದೀರ್ಘ ವಿವರಣೆಯನ್ನು ಉಲ್ಲೇಖಿಸಲಾದ ಪುರುಷಮೃಗದ ನಿರೂಪಣಾತ್ಮಕ ಶಿಲ್ಪಗಳು ಹಂಪಿ ಪರಿಸರದ ಹಲವು ದೇವಾಲಯಗಳಲ್ಲಿ ಕಂಡುಬರುತ್ತವೆ.

ಹಂಪಿ ಪರಿಸರದ ದೇವಾಲಯಗಳಲ್ಲಿನ ಪುರುಷಮೃಗ ಶಿಲ್ಪಗಳ ಕೋಷ್ಟಕ

ಕ್ರಸಂ.	ದೇವಾಲಯಗಳು	ಪುರುಷಮೃಗ ಶಿಲ್ಪಗಳು
೦೧.	ವಿರೂಪಾಕ್ಷ ದೇವಾಲಯ, ಹಂಪಿ	೦೬
೦೨.	ಅಚ್ಯುತರಾಯ ದೇವಾಲಯ, ಹಂಪಿ	೦೩
೦೩.	ಹಜಾರರಾಮ ದೇವಾಲಯ, ಹಂಪಿ	೦೨
೦೪.	ವಿಜಯವಿಠಲ ದೇವಾಲಯ, ಹಂಪಿ	೦೧
೦೫.	ನೆಲಸ್ತರದ ಶಿವಾಲಯ, ಹಂಪಿ	೦೧
೦೬.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೦೧
೦೭.	ಕಡ್ಲೆಕಾಳು ಗಣೇಶ ದೇವಾಲಯ, ಹಂಪಿ	೦೧
೦೮.	ಹೇಮಕೂಟ ದೇವಾಲಯಗಳ ಸಮೂಹ, ಹಂಪಿ	೦೧
೦೯.	ನಾಗನಾಥ ದೇವಾಲಯ (ಮನ್ಮಥಹೊಂಡದ ಪಕ್ಕ) ಹಂಪಿ	೦೧
೧೦.	ಉಮಾಮಹೇಶ್ವರ ದೇವಾಲಯ,(ಪಾನ್ ಸುಪಾರಿ ಬಜಾರ್), ಹಂಪಿ	೦೧
೧೧.	ಪಟ್ಟಾಭಿರಾಮ ದೇವಾಲಯ, ಕಮಲಾಪುರ	೦೧
೧೨.	ಜಂಬುನಾಥೇಶ್ವರ ದೇವಾಲಯ, ಜಂಬುನಾಥನಹಳ್ಳಿ	೦೩
೧೩.	ಮಲ್ಲಿಕಾರ್ಜುನ ದೇವಾಲಯ, ಮಲಪನಗುಡಿ	೦೧
೧೪.	ನಗರೇಶ್ವರ ದೇವಾಲಯ, ಕಮಲಾಪುರ	೦೧
೧೫.	ವೇಣುಗೋಪಾಲಸ್ವಾಮಿ ದೇವಾಲಯ, ಕಮಲಾಪುರ	೦೧
೧೬.	ವೇಣುಗೋಪಾಲಸ್ವಾಮಿ ದೇವಾಲಯ, ತಿಮ್ಮಲಾಪುರ	೦೧
	ಒಟ್ಟು –	೨೮

[ಸೂಚನೆ: ಹಂಪಿ ಪರಿಸರದ ಪ್ರಮುಖ ದೇವಾಲಯಗಳನ್ನು ಮತ್ತು ಅದರಲ್ಲಿನ ಪುರುಷಮೃಗ ಶಿಲ್ಪಗಳನ್ನು ಮಾತ್ರವೇ ಪಟ್ಟಿಯಲ್ಲಿ ನೀಡಲಾಗಿದೆ. ಕೆಲವು ಮಂಟಪಗಳು ಮತ್ತು ಹೆಸರಿಲ್ಲದ ಕೆಲವು ದೇವಾಲಯಗಳನ್ನು ಪಟ್ಟಿಯಲ್ಲಿ ನೀಡಲಾಗಿಲ್ಲ.]

ಹಂಪಿಯ ವಿರೂಪಾಕ್ಷ ದೇವಾಲಯದಲ್ಲೇ ಆರು ಪುರುಷಮೃಗ ಶಿಲ್ಪಗಳು ಕಂಡುಬಂದಿವೆ. ದೇವಾಲಯದ ನವರಂಗ ಭಾಗದಲ್ಲಿನ ಮೊದಲನೇ ಕಂಬದಲ್ಲಿಯೇ ಲಿಂಗಪೂಜೆಯಲ್ಲಿ ತೊಡಗಿರುವ ಪುರುಷಮೃಗ ಶಿಲ್ಪವನ್ನು ಕೆತ್ತಲಾಗಿದೆ. ಇಲ್ಲಿ ಪುರುಷಮೃಗನನ್ನು ಶಿವಭಕ್ತನಾಗಿ ಮತ್ತು ಪವಿತ್ರತೆಯ ಸಂಕೇತದಲ್ಲಿ ತೋರಿಸಲಾಗಿದೆ ಎಂದು ಹೇಳಬಹುದು ಹಾಗೂ ಇದೇ ದೇವಾಲಯದ ಪೂರ್ವ, ಉತ್ತರ, ದಕ್ಷಿಣದ ಭಿತ್ತಿಗಳಲ್ಲಿಯೂ ಪುರುಷಮೃಗದ ನಿರೂಪಣಾತ್ಮಕ ಶಿಲ್ಪಗಳನ್ನು ಕಾಣಬಹುದು.



ಪುರುಷಮೃಗದ ನಿರೂಪಣಾತ್ಮಕ ಶಿಲ್ಪ, ವಿರೂಪಾಕ್ಷ ದೇವಾಲಯ, ಹಂಪಿ

ಇಲ್ಲಿನ ಶಿಲ್ಪಗಳನ್ನು ಮಹಾಭಾರತದ ಕಥೆಯನ್ನಾಧರಿಸಿ ಕೆತ್ತಲಾಗಿದೆ. ಪೂರ್ವ ದಿಕ್ಕಿರುವ ಪ್ರವೇಶದ್ವಾರದ ಬಲಕ್ಕೆ ಅಂದರೆ ನವರಂಗದ ಹೊರಭಾಗದ ಭಿತ್ತಿಯಲ್ಲಿ ಈ ಶಿಲ್ಪವನ್ನು ಕೆತ್ತಿದ್ದು, ಇಲ್ಲಿ ಮುಂದೆ ಭೀಮನನ್ನು, ಮಧ್ಯದಲ್ಲಿ ಲಿಂಗವನ್ನು ಇದರ ಹಿಂದೆ ಪುರುಷಮೃಗವನ್ನು ಕೆತ್ತಲಾಗಿದೆ. ಶಿಲ್ಪದಲ್ಲಿ ಭೀಮನೆಂದು ಗುರುತಿಸಲು ಆತನ ಬಲಗೈಯಲ್ಲಿ ಗದೆಯನ್ನು ತೋರಿಸಿರುವರು ಹಾಗೂ ಎಡಗೈಯ ಆಂಜನೇಯ ನೀಡಿದ ರೋಮಗಳನ್ನು ಎಸೆಯುತ್ತಿರುವಂತೆ ಕೆತ್ತಲಾಗಿದೆ. ಮತ್ತು ಆತನ ಮುಖವು ಹಿಂದಿರುವ ಪುರುಷಮೃಗವನ್ನು ನೋಡುತ್ತಿರುವಂತಿದೆ. ಈತನ ಹಿಂದೆ ಪೀಠ ಸಹಿತ ಲಿಂಗವಿದ್ದು, ಅದಕ್ಕೆ ಪುರುಷಮೃಗವು ಪೂಜೆ ಸಲ್ಲಿಸುತ್ತಿರುವಂತೆ ತೋರಿಸಲಾಗಿದೆ. ಇದರ ಎಡಗೈಯಲ್ಲಿ ಗಂಟೆ, ಬಲಗೈಯಲ್ಲಿ ಪುಷ್ಪವನ್ನು ಹಿಡಿದು ಲಿಂಗಕ್ಕೆ ಅರ್ಪಿಸುತ್ತಿರುವಂತೆ ಕೆತ್ತಲಾಗಿದೆ. ಹಾಗೂ ಇದರ ವ್ಯಾಘ್ರ ಪಾದಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಭೀಮನ ಮುಂದೆ ಒಬ್ಬ ವ್ಯಕ್ತಿಯು ಸಮಭಂಗಿಯಲ್ಲಿ ನಿಂತಿದ್ದು ಈತನನ್ನು ಧರ್ಮರಾಯನೆಂದು ಹೇಳಬಹುದು. ಇದೇ ಲಕ್ಷಣಗಳನ್ನು ಒಳಗೊಂಡ ಶಿಲ್ಪಗಳು ಉತ್ತರ ಹಾಗೂ ದಕ್ಷಿಣದ ಭಿತ್ತಿಯಲ್ಲಿಯೂ ಕಂಡುಬರುತ್ತವೆ. ಆದರೆ ಇಲ್ಲಿ ಪುರುಷಮೃಗವು ಬಲಗೈನಲ್ಲಿ ಧೂಪಾರತಿಯನ್ನು ಹಿಡಿದಿದ್ದು ಎಡಗೈಯಲ್ಲಿ ಗಂಟೆಯನ್ನು ತೋರಿಸಿದ್ದು ಭೀಮನನ್ನು ಓಡುತ್ತಿರುವ ಭಂಗಿಯಲ್ಲಿ ಕೆತ್ತಲಾಗಿದೆ. ಆದರೆ ಈ ಎರಡೂ ಭಿತ್ತಿಯಲ್ಲಿನ ಶಿಲ್ಪಗಳಲ್ಲಿ ಧರ್ಮರಾಯನನ್ನು ತೋರಿಸಲಾಗಿಲ್ಲ. ಇದೇ ಲಕ್ಷಣಗಳುಳ್ಳ ಶಿಲ್ಪಗಳು ವಿರೂಪಾಕ್ಷ ದೇವಾಲಯದ ನೂರು ಕಂಬಗಳ ಮಂಟಪದಲ್ಲಿ, ಹಜಾರರಾಮಸ್ವಾಮಿ ದೇವಾಲಯದಲ್ಲಿ.[೩೮] ಹೇಮಕೂಟ ದೇವಾಲಯ

ಸಮೂಹವೊಂದರಲ್ಲಿ, ನೆಲಸ್ತರ ಶಿವಾಲಯದ ಉತ್ಸವ ಮಂಟಪದ ಕಂಬವೊಂದರಲ್ಲಿಯೂ, ಪಾನ್‌ಸುಪಾರಿ ಬಜಾರಿನಲ್ಲಿ ಶಿಥಿಲಾವಸ್ಥೆಯಲ್ಲಿರುವ ದೇವಾಲಯದ (ಉಮಾಮಹೇಶ್ವರ) ಮಂಟಪದ ಕಂಬದಲ್ಲಿಯು ಹಾಗೂ ಜಂಬುನಾಥನಹಳ್ಳಿಯ ಜಂಬುನಾಥೇಶ್ವರ ದೇವಾಲಯದ ಮುಖಮಂಟಪದ ಕಂಬದಲ್ಲಿ ಹಾಗೆಯೇ ಆಂಧ್ರಪ್ರದೇಶದ ಲೇಪಾಕ್ಷಿ ದೇವಾಲಯದಲ್ಲಿಯೂ ಕಂಡುಬರುತ್ತದೆ.[೬೯]

ಹಂಪಿ ಪರಿಸರದಲ್ಲಿ ಈ ಮೇಲೆ ವಿವರಿಸಿದ ಶಿಲ್ಪಗಳನ್ನು ಹೊರತುಪಡಿಸಿದರೆ ಕೇವಲ ಗಂಟೆ ಮತ್ತು ಧೂಪದಾರತಿಯನ್ನು ಹಿಡಿದಿರುವ ಪುರುಷಮೃಗ ಶಿಲ್ಪಗಳು ಹೇರಳವಾಗಿ ಕಂಡುಬರುತ್ತವೆ. ಅಚ್ಯುತರಾಯ ದೇವಾಲಯದಲ್ಲಿ ಈ ರೀತಿಯ ಮೂರು ಶಿಲ್ಪಗಳು ದೊರಕಿದ್ದು, ಇಲ್ಲಿನ ಶಿಲ್ಪದಲ್ಲಿ ಪುರುಷಮೃಗವು ಒಂದು ಪೀಠದ ಮೇಲಿದ್ದು, ಇದರ ಬಲಗೈಯಲ್ಲಿ ಗಂಟೆಯನ್ನು, ಎಡಗೈನಲ್ಲಿ ಧೂಪದಾರತಿಯನ್ನು ಹಿಡಿದು ಪೂಜಿಸುತ್ತಿರುವಂತೆ ತೋರಿಸಲಾಗಿದೆ. ಇದೇ ರೀತಿಯ ಲಕ್ಷಣಗಳನ್ನು ಹೊಂದಿರುವ ಶಿಲ್ಪಗಳು ಕಡ್ಲೆಕಾಳು ಗಣೇಶ, ಮಾಲ್ಯವಂತ ರಘುನಾಥ, ಮನ್ಮಥಹೊಂಡದ ಪಕ್ಕದಲ್ಲಿರುವ ನಗರೇಶ್ವರ, ಪಟ್ಟಾಭಿರಾಮ, ವಿಠಲ, ಕಮಲಾಪುರದ ವೇಣುಗೋಪಾಲ ಮತ್ತು ಪಕ್ಕದಲ್ಲಿರುವ ನಗರೇಶ್ವರ, ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯ ಹಾಗೂ ತಿಮ್ಮಲಾಪುರದ ವೇಣುಗೋಪಾಲಸ್ವಾಮಿ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಇವೆಲ್ಲವೂ ನೋಡಲು ಒಂದೇ ರೀತಿಯ ಸಾಮ್ಯತೆಯನ್ನು ಹೊಂದಿದ್ದರೂ ಸ್ವಲ್ಪಮಟ್ಟಿನ ಬದಲಾವಣೆಗಳಿಂದ ಭಿನ್ನತೆಯನ್ನು ಕಾಣಬಹುದು. ಅಂದರೆ ಕೆಲವು ಶಿಲ್ಪಗಳಲ್ಲಿ ಪುರುಷಮೃಗವು ಬಲಗೈಯಲ್ಲಿ ಗಂಟೆಯನ್ನು ಎಡಗೈನಲ್ಲಿ ಧೂಪದಾರತಿಯನ್ನು ಹಿಡಿದಿರುವಂತೆ ತೋರಿಸಿದ್ದರೆ, ಮತ್ತೆ ಕೆಲವು ಶಿಲ್ಪಗಳಲ್ಲಿ ಎಡಗೈನಲ್ಲಿ ಗಂಟೆಯನ್ನು ಬಲಗೈನಲ್ಲಿ ಧೂಪದಾರತಿಯನ್ನು ಹಿಡಿದು ಪೂಜಿಸುತ್ತಿರುವಂತೆ ತೋರಲಾಗಿರುತ್ತದೆ. ಇಲ್ಲಿ ಲಿಂಗವನ್ನಾಗಲಿ, ಭೀಮನನ್ನಾಗಲಿ ತೋರಿಸಿಲ್ಲ. ಹಾಗಾಗಿ ಈ ರೀತಿಯ ಶಿಲ್ಪಗಳು ಯಾವ ದೇವಾಲಯಗಳಲ್ಲಿ ಕಂಡುಬರುತ್ತವೋ ಅವು ಅದೇ ದೇವರನ್ನು ಪೂಜಿಸುತ್ತಿರಬಹುದೆಂದು ಹೇಳಬಹುದು.

ಒಟ್ಟಾರೆ ಈ ಮೇಲೆ ವಿವರಿಸಿದ ವಿವರಣೆಗಳು ಹಾಗೂ ಶಿಲ್ಪಗಳ ಅಧ್ಯಯನದಿಂದ ಪುರುಷಮೃಗವು ಶಿವನ ಪರಮಭಕ್ತನೆಂಬುದು ತಿಳಿಯುತ್ತದೆ. ಆದರೆ ಇದಕ್ಕೆ ಭಿನ್ನವಾಗಿ ವಿಷ್ಣುವಿನ ರೂಪಗಳಿಗೂ ಪುರುಷಮೃಗ ಆರಾಧಿಸುತ್ತಿರುವಂತೆ ಕೆತ್ತಲಾಗಿರುವ ಶಿಲ್ಪಗಳೂ ಹಂಪಿಯಲ್ಲಿ ದೊರೆಯುತ್ತವೆ. ಅಂತಹವುಗಳೆಂದರೆ ಹಜಾರರಾಮ ದೇವಾಲಯದಲ್ಲಿ ಯೋಗ ನರಸಿಂಹನನ್ನು, ವಿಜಯವಿಠಲ ದೇವಾಲಯದಲ್ಲಿ ವಿಠಲನನ್ನು ಹಾಗೆಯೇ ಕಡ್ಲೆಕಾಳು ಗಣೇಶ ದೇವಾಲಯದ ಮುಖಮಂಟಪದ ಕಂಬವೊಂದರಲ್ಲಿ ಗಣೇಶನನ್ನು ಆರಾಧಿಸುತ್ತಿರುವಂತೆ ಕೆತ್ತಲಾಗಿದೆ. ಹಾಗಾಗಿ ಪುರುಷಮೃಗವು ಪವಿತ್ರ ಸ್ಥಾನವನ್ನು ಪಡೆದಿದ್ದು, ಆರಾಧನೆ ದೇವತೆಯಾಗಿದೆ ಎಂಬುದು ಪ್ರಮುಖವಾಗಿ ತಿಳಿದುಬರುತ್ತದೆ. ಹೀಗೆ ಪುರುಷಮೃಗವು ದಕ್ಷಿಣ ಭಾರತದಲ್ಲಿ ಕ್ರಿ.ಶ.೬-೭ನೇ ಶತಮಾನದಲ್ಲಿ ಅಂದರೆ ಪಲ್ಲವರ ಕಾಲದಿಂದಲೇ ಕಂಡುಬಂದಿದ್ದು, ಬೇರೆ ಬೇರೆ ಸ್ಥಳಗಳಲ್ಲಿ ವಿಭಿನ್ನವಾಗಿ ಆರಾಧಿಸಲ್ಪಡುತ್ತಿರುವುದು ತಿಳಿದುಬರುತ್ತದೆ. ಮಧುರೈ ಹತ್ತಿರವಿರುವ ತಿರುವಟವೂರಿನ ಶಿವ ದೇವಾಲಯದಲ್ಲಿ ಪುರುಷಮೃಗವು ರಕ್ಷಕದೇವರಾಗಿ ಆರಾಧಿಸಲ್ಪಡುತ್ತಿದೆ. ಜೊತೆಗೆ ಈ ದೇವಾಲಯಕ್ಕೆ ಭೇಟಿ ನೀಡಿದ ಭಕ್ತರ ಪಾಪ ಹಾಗೂ ಭಯವು ನಿವಾರಣೆಯಾಗುತ್ತದೆಂಬ ಪ್ರತೀತಿಯಿದೆ. ಹಾಗೂ ಮಳೆಯ ಬರುವಿಕೆಗಾಗಿ

ಪುರುಷಮೃಗವನ್ನು ಇಲ್ಲಿ ವಿಶೇಷವಾಗಿ ಪೂಜೆ ಮಾಡುವ ಆಚರಣೆಯೂ ಇದೆ. ಹಾಗೆಯೇ ಭಾರತದಲ್ಲಿಯೇ ಪ್ರಖ್ಯಾತವಾದ ಚಿದಂಬರಂನ ಶಿವ-ನಟರಾಜ ದೇವಾಲಯದಲ್ಲಿಯೂ ಪುರುಷಮೃಗದ ಶಿಲ್ಪವಿದ್ದು, ಅದರ ಆರಾಧನೆ ಮಾಡಲಾಗುತ್ತದೆ. ಈ ಸ್ಥಳದಲ್ಲಿ ವ್ಯಾಘ್ರಪಾದ ಮುನಿಯು ಶಿವನ ತಪಸ್ಸನ್ನು ಕೈಗೊಂಡು ದೇಹದ ಅರ್ಧಭಾಗ ಪ್ರಾಣಿರೂಪವನ್ನು ಪಡೆದುಕೊಂಡನೆಂಬ ಐತಿಹ್ಯ ಪ್ರಚಲಿತದಲ್ಲಿದೆ.[೨೦]

ಒಟ್ಟಾರೆ ಪುರುಷಮೃಗವು ಶಿವನ ಅತಿಭಕ್ತನಾಗಿದ್ದು, ಆರಾಧನಾ ದೇವತೆಯಾಗಿ ಹಂಪಿ ಪರಿಸರದಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದರೆ, ಕೆಲವು ಕಡೆ ಪುರುಷಮೃಗವನ್ನೇ ವಿಭಿನ್ನವಾಗಿ ಆರಾಧಿಲ್ಪಡುತ್ತಿರುವುದು ತಿಳಿದುಬರುತ್ತದೆ. ಇದರಿಂದ ಪುರುಷಮೃಗ ದೇವರ ಸ್ಥಾನಮಾನವನ್ನು ಪಡೆದಿದ್ದು, ಅದರ ಮಹತ್ವವನ್ನು ತಿಳಿಯಬಹುದಾಗಿದೆ.


ಗಜಸಂಹಾರ ಶಿಲ್ಪಗಳು

ಶಿವನ ಲೀಲಾಮೂರ್ತಿಗಳಲ್ಲಿ ಅನುಗ್ರಹಮೂರ್ತಿಗಳು ಮತ್ತು ಸಂಹಾರ ಮೂರ್ತಿಗಳು ಎಂದು ಎರಡು ಬಗೆಗಳಿವೆ. ಅದರಲ್ಲಿ ಗಜಸಂಹಾರ ಮೂರ್ತಿಯ ಎರಡನೇ ಪ್ರಭೇಧಕ್ಕೆ ಸೇರಿದ್ದಾಗಿದೆ. ಶಿವನು ಗಜರೂಪದಲ್ಲಿರುವ ಅಸುರನನ್ನು ಸಂಹರಿಸಲು ತಾಳಿದ ರೂಪವನ್ನು ಶಿಲ್ಪಗಳಲ್ಲಿ ತೋರಿಸಿದ್ದು ಅವುಗಳನ್ನು ಗಜಸಂಹಾರ ಶಿಲ್ಪಗಳೆಂದು ಕರೆಯಲಾಗುತ್ತದೆ.

ಗಜಸಂಹಾರ ಶಿಲ್ಪದ ಪೌರಾಣಿಕ ಹಿನ್ನೆಲೆ ಏನೆಂದರೆ "ಕೂರ್ಮಪುರಾಣದ ಪ್ರಕಾರ"[೨೧] ಕಾಶಿಯಲ್ಲಿರುವ ಕೃತ್ತಿ ವಾಸೇಶ್ವರನೆಂಬ ಪ್ರಸಿದ್ಧವಾದ ಲಿಂಗದ ಮಹತ್ವವನ್ನು ಸೂತ ಪುರಾಣಿಕರು ವಿವರಿಸುತ್ತಾ ಈ ಉದಂತವನ್ನು ತಿಳಿಸಿದ್ದಾರೆ. ಈ ಲಿಂಗದ ಆರಾಧನೆಯಲ್ಲಿ ತೊಡಗಿದ್ದ ಭಕ್ತರನ್ನು ಹಿಂಸಿಸಲೆಂದು ಆನೆಯ ರೂಪದಲ್ಲಿ ಒಬ್ಬ ಅಸುರ ಬಂದು ತೊಂದರೆ ಕೊಡಲಾರಂಭಿಸಿದ ಭಕ್ತರು ಕೃತ್ತಿ ವಾಸೇಶ್ವರನ ಮೊರೆ ಹೋಗಲು ಶಿವನು ಲಿಂಗದಿಂದಲೇ ಉದ್ಭವಿಸಿ ಬಂದು ಆ ಆನೆಯನ್ನು ಕೊಂದು ಅದರ ಚರ್ಮವನ್ನು ತನ್ನುಡಿಗೆಯನ್ನಾಗಿ ಧರಿಸಿದನೆಂದು ತಿಳಿದುಬರುತ್ತದೆ.

ವರಾಹ ಪುರಾಣವು ಬೇರೊಂದು ತೆರನಾದ ಕಥೆಯನ್ನು ಹೇಳುತ್ತದೆ. ಅಂಧಕಾಸುರನು ತನ್ನ ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ನಾನಾ ವರಗಳನ್ನು ಪಡೆದುಕೊಂಡ. ಈ ಶಕ್ತಿಯಿಂದ ಉನ್ಮತ್ತನಾಗಿ ದೇವತೆಗಳನ್ನು ಕಾಡ ತೊಡಗಿಸಿದ. ದೇವತೆಗಳೆಲ್ಲಾ ಕೈಲಾಸಕ್ಕೆ ಓಡಿ ಶಿವನನ್ನು ಪ್ರಾರ್ಥಿಸಿದರು. ಅವರೆಲ್ಲರೂ ಅಲ್ಲಿರುವಾಗಲೇ ಅಂಧಕಾಸುರ ಕೈಲಾಸಕ್ಕೆ ಬಂದ. ಶಿವ ಅಸುರನೊಂದಿಗೆ ಯುದ್ಧ ಮಾಡಲು ಸನ್ನದ್ಧನಾದ ನೀಲ ಎಂಬ ಅಸುರನು ಶಿವನನ್ನು ಕೊಲ್ಲುವ ರಹಸ್ಯ ಯೋಜನೆಯನ್ನು ತಯಾರಿಸಿ ಅದರಂತೆ ಆನೆಯ ರೂಪಧರಿಸಿದ. ಇದನ್ನು ಗಮನಿಸಿದ ನಂದಿಯು ವೀರಭದ್ರನಿಗೆ ತಿಳಿಸಿದ. ವೀರಭದ್ರನು ಸಿಂಹದ ರೂಪವನ್ನು ಪಡೆದುಕೊಂಡು ಆನೆಯೊಂದಿಗೆ ಹೋರಾಡಿ ಅದನ್ನು ಕೊಂದು ಅದರ ಚರ್ಮವನ್ನು ತಂದು ಶಿವನಿಗೆ ಅರ್ಪಿಸಿದ. ಈ ಚರ್ಮವನ್ನು ಮೇಲುಡಿಯಾಗಿ ಧರಿಸಿ, ವಾಸುಕಿ, ತಾರಾಕ್ಷ ಮತ್ತು ಧನಂಜಯ ಎಂಬ ಸರ್ಪಗಳನ್ನು ಸೊಂಟದಲ್ಲಿ ಸುತ್ತಿಕೊಂಡು ತನ್ನ ತ್ರಿಶೂಲವನ್ನು ತಿರುಗಿಸುತ್ತಾ. ಗಣಗಳೊಂದಿಗೆ ತಾರಕಾಸುರ ಸಂಹಾರಕ್ಕೆ ಶಿವನು ಉದ್ಯುಕ್ತನಾದ.

ಗಜಸಂಹಾರ ಶಿಲ್ಪಗಳು




ದಕ್ಷಿಣದ ಪ್ರಾಕಾರ ಮಂಟಪದ ಕಂಬ,
ವಿರೂಪಾಕ್ಷ ದೇವಾಲಯ, ಹಂಪಿ



ಹಿಂಭಾಗದ ಭಿತ್ತಿ, ಗಾಯತ್ರಿ ಪೀಠ (ಹೇಮಕೂಟ), ಹಂಪಿ



ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ, ಕಮಲಾಪುರ



ಶಿವ ದೇವಾಲಯ, ತಿಮ್ಮಲಾಪುರ






ಈ ಕಥೆಗಳಲ್ಲಿ ಒಂದು ಸಮಾನ ವಿವರವೆಂದರೆ ಗಜವನ್ನು ಕೊಂದು ಅದರ ಚರ್ಮವನ್ನು ಉಡುಗೆಯನ್ನಾಗಿ ಧರಿಸಿರುವುದು. ಈ ಘಟನೆಯು ತಂಜಾವೂರಿನ ಬಳಿಯ ವಳುವೂರಿನಲ್ಲಿ ನಡೆಯಿತು. ಎಂದು ಅಲ್ಲಿಯ ಸ್ಥಳಪುರಾಣ ಹೇಳುತ್ತದೆ. ಅಲ್ಲಿ ಗಜಾಸುರ ಮೂರ್ತಿಯ ದೇವಾಲಯ ಇದೆ.[೭೨] ಈ ಮೂರ್ತಿಯ ಲಕ್ಷಣಗಳು ಮತ್ತು ಇತರೆ ವಿವರಗಳು ಕಾಶ್ಯಪ ಶಿಲ್ಪಶಾಸ್ತ್ರ, ಶಿಲ್ಪರತ್ನ, ಅಂಶುಮದ್ಭೇದಾಗಮ, ಉತ್ತರಕಾರಣಾಗಮ ಹಾಗೂ ಶ್ರೀತತ್ವನಿಧಿಯಲ್ಲಿ ವಿವರಿಸಲಾಗಿದೆ. ಅವುಗಳಲ್ಲಿ ಮುಖ್ಯವಾದ ವಿವರಣೆ ಈ ಕೆಳಗಿನಂತಿದೆ.

ಶಿವನು ಈ ಅವತಾರದಲ್ಲಿ ನಾಲ್ಕು ಅಥವಾ ಎಂಟು ತೋಳಗಳನ್ನು ಪಡೆದಿರಬೇಕು. ನಾಲ್ಕು ತೋಳುಗಳಿದ್ದರೆ ಎರಡು ಬಲಹಸ್ತಗಳೂ ಒಂದು ಹಸ್ತ ಪಾಶವನ್ನು, ಇನ್ನೊಂದು ಹಸ್ತ ಚರ್ಮವನ್ನು ಹಿಡಿದಿದ್ದರೆ, ಉಳಿದ ಎರಡು ಎಡಹಸ್ತಗಳಲ್ಲಿ ಒಂದು ಆನೆಯ ದಂತವನ್ನು, ಇನ್ನೊಂದು ಚರ್ಮವನ್ನು ಹಿಡಿದಿರಬೇಕು. ಎಂಟು ಬಾಹುಗಳಿದ್ದರೆ ನಾಲ್ಕು ಬಲಹಸ್ತಗಳಲ್ಲಿ ತ್ರಿಶೂಲ ಡಮರುಗ, ಪಾಶಗಳನ್ನು ಹಿಡಿದಿದ್ದು, ನಾಲ್ಕನೆಯ ಹಸ್ತವು ಆನೆಯ ಚರ್ಮವನ್ನು ಹಿಡಿದಿರಬೇಕು. ಎಡಹಸ್ತಗಳಲ್ಲಿ ಒಂದು ವಿಸ್ಮಯ ಮುದ್ರೆಯನ್ನು ಧರಿಸಿದ್ದು, ಇನ್ನೊಂದು ಆನೆಯ ಚರ್ಮವನ್ನು ಹಿಡಿದಿರಬೇಕು. ಉಳಿದ ಎರಡು ಹಸ್ತಗಳಲ್ಲಿ ಕಪಾಲ ಮತ್ತು ಆನೆದಂತ ಹಿಡಿದಿರಬೇಕು. ಶಿವನ ಎಡಪಾದವು ಆನೆಯ ತಲೆಯ ಮೇಲೆ ಭದ್ರವಾಗಿ ಊರಿದ್ದು, ಬಲಗಾಲು ಮಡಚಿದ್ದು ಇನ್ನೊಂದು ಕಾಲು ತೊಡೆಗಿಂತಲೂ ಮೇಲಕ್ಕೆ ಎತ್ತಿರಬೇಕು. ಶಿವನ ಮಕುಟದ ಮೇಲೆ ಆನೆಯ ಬಾಲ ಕಾಣಿಸುತ್ತಿರಬೇಕು. ಆನೆಯ ಚರ್ಮವು ಶಿವನಿಗೆ ಪ್ರಭಾಮಂಡಲದಂತೆ ಇರಬೇಕು. ಶಿವನು ಸರ್ವಾಭರಣ ಭೂಷಿತನಾಗಿ, ಹುಲಿಯ ಚರ್ಮ ರೇಶಿಮೆಯ ವಸ್ತ್ರಗಳಿಂದ ಅಲಂಕೃತನಾಗಿರಬೇಕು. ಶಿವನ ಬಣ್ಣವು ಕೆಂಪಾಗಿರಬೇಕೆಂದು ಅಂಶುಮದ್ಭೇದಾಗಮವು ವಿವರಿಸುತ್ತದೆ.[೭೩]

ಶಿಲ್ಪರತ್ನ ಮತ್ತು ಇತರೆ ಶೈವಾಗಮಗಳ ಪ್ರಕಾರ[೭೪] ಶಿವನ ಬಲ ಹಸ್ತಗಳಲ್ಲಿ ತ್ರಿಶೂಲ, ಖಡ್ಗ, ಆನೆದಂತ ಮತ್ತು ಆನೆಯ ಚರ್ಮ, ಎಡ ಹಸ್ತಗಳಲ್ಲಿ ಕಪಾಲ, ಖೇಟಕ, ಘಂಟೆ ಮತ್ತು ಆನೆಯ ಚರ್ಮವನ್ನು ಹಿಡಿದಿರಬೇಕು. ಎಡಪಾದವು ಆನೆಯ ತಲೆಯ ಮೇಲೆ ಭದ್ರವಾಗಿ ಊರಿದ್ದು, ಬಲ ಪಾದವನ್ನು ಉತ್ಕುಟಕಾಸನದಲ್ಲಿರಿಸಿಕೊಂಡಿರಬೇಕು. ಆದರೆ ಉತ್ತರ ಕಾರಣಾಗಮವು ಸ್ವಲ್ಪ ಭಿನ್ನವಾದ ವಿವರಣೆಯನ್ನು ನೀಡುತ್ತದೆ. ಇದು ಶಿವನು ಕೆಂಪುವರ್ಣದಿಂದ ಕೂಡಿ ತ್ರಿನೇತ್ರಗಳುಳ್ಳವನಾಗಿರಬೇಕು. ಪೂಜಾಷ್ಟಕಗಳಿಂದ ಕೂಡಿ ಕೋರೆದಾಡೆಗಳುಳ್ಳ ಕರಾಳ ವದನ ಹಾಗೂ ವೃತ್ತಪಿಂಗಳ ಜಟಾಧರನಾಗಿರಬೇಕು. ಶಿವನ ಎರಡೂ ಪಕ್ಕಗಳಲ್ಲೂ ಆನೆಯ ಪಾದವಿದ್ದು, ಆನೆಯ ಬಾಲವು ತಲೆಯ ಮೇಲೆ ಇರಬೇಕು. ಶಿವನ ಎಡಪಾದವು ಗಜ(ಆನೆ)ನ ತಲೆಯ ಮೇಲಿದ್ದು, ಬಲಪಾದವು ಮೇಲಕ್ಕೆತ್ತಿ ಬಾಗಿಸಿದ್ದಿರಬೇಕು. ಶೂಲ, ಡಮರು, ಪಾಶಗಳನ್ನು ಎಡಹಸ್ತಗಳಲ್ಲೂ ಕಪಾಲ, ಖಡ್ಗ, ಖೇಟಗಳನ್ನು ಬಲಭಾಗದ ಹಸ್ತಗಳಲ್ಲೂ ಇರಿಸಿರಬೇಕು. ಪ್ರಭಾಮಂಡಲ ಮಧ್ಯದಲ್ಲಿದ್ದು, ಎಲ್ಲಾ ಅವಯವಗಳಿಂದಲೂ ಸುಂದರನಾಗಿ ದ್ವಿಭುಜ, ದ್ವಿನೇತ್ರ ಕಿರೀಟಮಕುಟಗಳಿಂದ ಉಜ್ವಲನಾಗಿ ಶೋಭಿಸುತ್ತಿರಬೇಕು ಎಂದು ಹೇಳುತ್ತದೆ. ಇಲ್ಲಿ ಉತ್ತರಕಾರಣಾಗಮವು ಹಿಂದೆ ವಿವರಿಸಿದ ಶಿಲ್ಪಶಾಸ್ತ್ರಗಳಲ್ಲಿರುವಂತೆ ಚತುರ್ಭುಜ ಮತ್ತು ಅಷ್ಟಭುಜಗಳ ಬದಲಾಗಿ ಷಡ್ಭುಜ ಮತ್ತು ದ್ವಿಭುಜಗಳನ್ನು ಹಾಗೂ ಅವುಗಳಲ್ಲಿರುವ ಆಯುಧಗಳನ್ನು ಹೇಳಿದೆ ಎಂಬುದು ತಿಳಿಯುತ್ತದೆ.[೭೫]

ಈ ಮೇಲೆ ವಿವರಿಸಿದ ಲಕ್ಷಣಗಳನ್ನು ಹೊಂದಿರುವ ಗಹಸಂಹಾರ ಶಿಲ್ಪಗಳು ಪ್ರಾಚೀನ ಕಾಲದಿಂದಲೂ ಪೌರಾಣಿಕ ಹಿನ್ನೆಲೆಯಲ್ಲಿ ಮೂಡಿಬಂದಿವೆ. ಕರ್ನಾಟಕದಲ್ಲಿ ಸ್ವಲ್ಪ ಪ್ರಾಚೀನ-ವೆನ್ನಬಹುದಾದ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲಿ ಈ ಶಿಲ್ಪವನ್ನು ಕಾಣಬಹುದು.[೭೬] ಮುಂದೆ ಹೊಯ್ಸಳರ ಪ್ರಮುಖ ಸಂಸ್ಕೃತಿಯ ನೆಲೆಯಾದ ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿ ಹಾಗೂ ಅಮೃತಪುರದ ಅಮೃತೇಶ್ವರ ದೇವಾಲಯದಲ್ಲಿ ಈ ಶಿಲ್ಪಗಳನ್ನು ಕಾಣಬಹುದು.[೭೭] ತಮಿಳುನಾಡಿನಲ್ಲಿ ಇಂತಹ ಶಿಲ್ಪಗಳ ಜೊತೆಗೆ ಕಂಚಿನ ಮೂರ್ತಿಗಳು ಸಹ ಕಂಡುಬರುತ್ತವೆ.[೭೮] ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲೂ ಈ ಮೇಲೆ ತಿಳಿಸಿದ ಲಕ್ಷಣಗಳುಳ್ಳ ಶಿಲ್ಪಗಳೇ ಮುಂದುವರೆದಿದ್ದು, ಆಂಧ್ರ ಪ್ರದೇಶದ ಲೇಪಾಕ್ಷಿಯ ವೀರಭದ್ರ ದೇವಾಲಯದಲ್ಲಿ ಇದೇ ರೀತಿಯ ಗಜಸಂಹಾರ ಶಿಲ್ಪವೊಂದು ಕಂಡುಬರುತ್ತದೆ.[೭೯]

ಹಂಪಿ ಪರಿಸರದಲ್ಲಿ ಇದೇ ರೀತಿಯ ಒಟ್ಟು ನಾಲ್ಕು ಶಿಲ್ಪಗಳು ಕಂಡುಬರುತ್ತದೆ. ಒಂದನೆಯದು ವಿರೂಪಾಕ್ಷ ದೇವಾಲಯದಲ್ಲಿ, ಎರಡನೆಯದು ಹೇಮಕೂಟದ (ಗಾಯತ್ರಿ ಪೀಠ) ತ್ರಿಕೂಟ ದೇವಾಲಯದಲ್ಲಿ, ಮೂರನೆಯದು ಕಮಲಾಪುರದ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ, ನಾಲ್ಕನೆಯದು ತಿಮ್ಮಲಾಪುರದ ಶಿವ ದೇವಾಲಯದಲ್ಲಿ ಕಂಡುಬರುತ್ತವೆ.

ಮೊದಲನೆಯದು ಹಂಪಿಯ ವಿರುಪಾಕ್ಷ ದೇವಾಲಯದ ಎಡಬದಿಯ ಪ್ರಕಾರ ಮಂಟಪದ ಮೊದಲನೆಯ ಕಂಬದಲ್ಲಿದೆ. ಇಲ್ಲಿ ಶಿವನು ಚತುರ್ಭುಜನಾಗಿದ್ದು ಮೇಲಿನ ಎರಡು ಕೈಗಳಲ್ಲಿ ಗಜಚರ್ಮವನ್ನು ಹಿಡಿದಿದ್ದರೆ, ಕೆಳಗಿನ ಎರಡು ಕೈಗಳಲ್ಲಿ ಬಲಗೈ ತ್ರಿಶೂಲವನ್ನು ಹಿಡಿದು ಆನೆಯ ಚರ್ಮಕ್ಕೆ ಚುಚ್ಚುತ್ತಿರುವಂತೆ ತೋರಲಾಗಿದೆ. ಎಡಗೈ ಕಾಣುತ್ತಿದ್ದರೂ ಅದರಲ್ಲಿರುವ ಆಯುಧ ಅಸ್ಪಷ್ಟವಾಗಿದೆ. ಈ ಶಿಲ್ಪದ ಕುರಿತು ಮೆಣಸಗಿ ಹೇಮಾವತಿ ಶಿವಾನಂದ ಇವರ ಹಂಪಿ ಪರಿಸರದ ಶೈವಶಿಲ್ಪಗಳು ಎಂಬ ಅಪ್ರಕಟಿತ ಪಿಎಚ್.ಡಿ ಪ್ರಬಂಧದಲ್ಲಿ ಈ ರೀತಿಯಾಗಿ ವಿವರಿಸಿರುತ್ತಾರೆ. ಶಿಲ್ಪದಲ್ಲಿ ಗಜದ ಶಿರಭಾಗವು ಶಿವನ ಎಡಭಾಗಕ್ಕೆ ತಿರುಗಿದೆ. ಶಿವನ ಬಲಪಾದವು ಗಜದ ತಲೆ ಮೇಲೆ ಸ್ಥಿರವಾಗಿದ್ದು, ಎಡಗಾಲನ್ನು ಮೇಲೆತ್ತಿ ಗಜದ ಸೊಂಡಿಲ ಮೇಲಿಟ್ಟಿದ್ದು, ನೃತ್ಯಭಂಗಿಯುಲ್ಲಿರುವನು. ಜಟಾಮಂಡಲಧಾರಿಯಾಗಿದ್ದು, ತನ್ನ ಎಡಭಾಗಕ್ಕೆ ತಿರುಗಿರುವನೆಂದು ವಿವರಿಸಿದ್ದಾರೆ. ಆದರೆ ಈ ಶಿಲ್ಪದಲ್ಲಿ ಗಜದ ಶಿರಭಾಗವು ಶಿವನ ಬಲಭಾಗಕ್ಕೆ ತಿರುಗಿದ್ದು, ಶಿವನ ಬಲಪಾದವು ಆನೆಯ ಸೊಂಡಿಲ ಮೇಲಿದ್ದು, ಎಡಪಾದವು ಗಜನ ತಲೆಯ ಮೇಲೆ ಇಟ್ಟಿದ್ದು, ನೃತ್ಯಭಂಗಿಯಲ್ಲಿರುವನು. ಜೊತೆಗೆ ಶಿವನು ಶಿಲ್ಪದಲ್ಲಿ ತನ್ನ ಬಲಭಾಗಕ್ಕೆ ತಿರುಗುವಂತೆ ತೋರಲಾಗಿದೆ. ಹಾಗೆಯೇ ಗಜದ ಬಾಲವು ಶಿವನ ತಲೆಯ ಮೇಲಾಗದಲ್ಲಿದ್ದು, ಅದರ ಚರ್ಮವು ಶಿವನ ಸುತ್ತ ಪ್ರಭಾಮಂಡಲದಂತೆ ವಿಸ್ತರಿಸಿದೆ ಈ ಶಿಲ್ಪವನ್ನು ಒರಟಾಗಿ ಕೆತ್ತಿರುವುದರಿಂದ ಹಾಗೂ ಸೂಕ್ಷ್ಮ ಕೆತ್ತನೆಯ ಕೊರತೆಯಿಂದಾಗಿ ಶಿವನ ವಸ್ತ್ರಾಭರಣಗಳು ಮತ್ತು ಇತರೆ ಆಯುಧಗಳು ಅಸ್ಪಷ್ಟವಾಗಿದೆ.[೮೦]

ಇನ್ನೊಂದು ಶಿಲ್ಪವು ಹೇಮಕೂಟದ (ಗಾಯಿತ್ರಿ ಪೀಠ) ತ್ರಿಕೂಟ ದೇವಾಲಯ ಹೊರಭಾಗದ ಭಿತ್ತಿಯಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಶಿವನು ತನ್ನ ಬಲಗಾಲನ್ನು ಗಜದ ತಲೆಯ ಮೇಲೆ ಸ್ಥಿರವಾಗಿರಿಸಿದ್ದು, ಎಡಗಾಲನ್ನು ಮೇಲೆತ್ತಿದ್ದು ನೃತ್ಯಭಂಗಿಯಲ್ಲಿರುವನು. ಶಿವನು ಚತುರ್ಭುಜಧಾರಿ

ಯಾಗಿದ್ದು, ತನ್ನ ನಾಲ್ಕು ಕೈಗಳಿಂದ ಆನೆಯ ಚರ್ಮವನ್ನು ಹಿಡಿದಿರುವಂತೆ ತೋರಲಾಗಿದೆ. ಶಿವನು ತಲೆಯನ್ನು ಸ್ವಲ್ಪ ಕೆಳಗೆ ಬಾಗಿಸಿದ್ದು ತ್ರಿನೇತ್ರಗಳನ್ನು ಹೊಂದಿದ್ದು, ಎರಡೂ ಕಣ್ಣುಗಳನ್ನು ಮುಚ್ಚಿದ್ದಾನೆ. ಶಿವನು ಜಟಾಮಕುಟಧಾರಿಯಾಗಿದ್ದು, ಉದ್ದನೆಯ ಜಡೆಗಳು ಬೆನ್ನ ಹಿಂದೆ ಹರಡಿರುವವು ಹಾಗೂ ಉದ್ದನೆಯ ವನಮಾಲೆಯನ್ನು ಧರಿಸಿರುವನು. ಜೊತೆಗೆ ಕಿರೀಟಮಕುಟ, ಕಂಠಹಾರ, ಕೈಕಡಗ, ಕಾಲ್ಗಡಗ ಇತರೆ ಆಭರಣಗಳನ್ನು ಧರಿಸಿರುವಂತೆ ತೋರಲಾಗಿದೆ.[೮೧]

ಮತ್ತೊಂದು ಶಿಲ್ಪವು ಕಮಲಾಪುರದಲ್ಲಿನ ರಾಘವೇಂದ್ರ ಮಠದ ಬಳಿ ಇರುವ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ಕಂಬವೊಂದರಲ್ಲಿದೆ. ಉತ್ತರಕಾರಣಾಗಮವು ತಿಳಿಸಿದಂತೆ ಇಲ್ಲಿ ಶಿವನು ದ್ವಿಭುಜನಾಗಿರುವುದು ಗಮನಾರ್ಹ ಮತ್ತು ವಿಶೇಷವಾಗಿದೆ. ಇಲ್ಲಿಯೂ ಸಹ ಶಿವನು ಬಲಗಾಲನ್ನು ಗಜದ ಶಿರದ ಮೇಲೆ ಸ್ಥಿರವಾಗಿಟ್ಟಿದ್ದು, ಎಡಗಾಲನ್ನು ಎದೆಯ ಭಾಗದವರೆಗೆ ಮೇಲೆತ್ತಿರುವನು. ಶಿವನು ತನ್ನ ಎರಡು ಕೈಗಳನ್ನು ಮೇಲೆತ್ತಿ ಆನೆಯ ಚರ್ಮವನ್ನು ಹಿಡಿದಿರುವನು. ಆನೆಯ ಸೊಂಡಿಲು ಶಿವನ ಎಡಕ್ಕೆ ತಿರುಗಿದ್ದು, ಅದರ ದೇಹವು ಶಿವನ ಸುತ್ತ ಪ್ರಭಾಮಂಡಲಬಂತೆ ವಿಸ್ತರಿಸಿದೆ. ಕೊನೆಯದಾಗಿ ಹಂಪಿ ಪರಿಸರದಲ್ಲಿ ದೊರೆಯುವ ಗಜಸಂಹಾರ ಶಿಲ್ಪವೆಂದರೆ ತಿಮ್ಮಲಾಪುರದ ತ್ರಿಕೂಟ ದೇವಾಲಯವಾದ ಶಿವ ದೇವಾಲಯದ ನವರಂಗದ ಕಂಬದಲ್ಲಿನ ಶಿಲ್ಪ. ಈ ಶಿಲ್ಪವು ಮೇಲಿನ ಶಿಲ್ಪಗಳಿಗಿಂತ ಸುಂದರವಾಗಿದೆ. ಇಲ್ಲಿ ಆನೆಯ ದೇಹವನ್ನು ಅತಿ ಸೂಕ್ಷ್ಮವಾಗಿ, ಸುಂದರವಾಗಿ ತೋರಿಸಲಾಗಿದೆ. ಅದರ ಆಕಾರ, ದೇಹದಲ್ಲಿನ ಮೂಳೆಗಳು ಸ್ಪಷ್ಟವಾಗಿ ಕಾಣುವಂತೆ ಕೆತ್ತಲಾಗಿದೆ. ಆನೆಯ ದೇಹದ ಮಧ್ಯದಲ್ಲಿ ಶಿವನನ್ನು ತೋರಿಸಿದ್ದು, ಚತುರ್ಭುಜಧಾರಿಯಾಗಿ ಆನೆಯ ತಲೆಯ ಮೇಲೆ ಸಮಪಾದದಲ್ಲಿ ತ್ರಿಭಂಗಿಯಲ್ಲಿ ನಿಂತಿರುವನು. ಮೇಲಿನ ಎರಡು ಕೈಗಳಲ್ಲಿ ಬಲಗೈ ತ್ರಿಶೂಲವನ್ನು ಹಿಡಿದಿದ್ದು, ಅದು ಆನೆಯನ್ನು ಕೆಳಗೆ ಸಂಹರಿಸಲು ಬಳಸುತ್ತಿರುವಂತೆ ತೋರಲಾಗಿದೆ. ಎಡಗೈಯಲ್ಲಿ ಪರಶುವನ್ನು ಹಿಡಿದಿರುವನು. ಕೆಳಗಿನ ಎರಡು ಕೈಗಳು ಆನೆಯ ಚರ್ಮವನ್ನು ಹಿಡಿದಿವೆ. ಆನೆಯ ಚರ್ಮವು ಶಿಲ್ಪದ ಪ್ರಭಾಮಂಡಲಕ್ಕೆ ವ್ಯಾಪಿಸಿದಂತೆ ಹಾಗೂ ಆನೆಯ ನಾಲ್ಕು ಕಾಲುಗಳನ್ನು ತೋರಿಸಿದ್ದು, ಬಾಲವು ದೇವತೆಯ ಕಿರೀಟದ ಮೇಲಿರುವಂತೆ ತೋರಿಸಲಾಗಿದೆ. ಈ ಮೇಲೆ ವಿವರಿಸಿದ ಎಲ್ಲಾ ಶಿಲ್ಪಗಳಲ್ಲಿ ಆನೆಯ ಸೊಂಡಿಲು ಶಿವನ ಬಲಭಾಗಕ್ಕೆ ಇರುವಂತೆ ತೋರಿಸಿದ್ದಾರೆ. ಆದರೆ ಈ ಶಿಲ್ಪದಲ್ಲಿ ಆನೆಯ ಸೊಂಡಿಲು ಶಿವನ ಎಡಭಾಗಕ್ಕೆ ಇರುವಂತೆ ತೋರಿಸಿರುವುದು ಗಮನಾರ್ಹವಾಗಿದ್ದು ಭಿನ್ನತೆಯನ್ನು ಸೂಚಿಸುತ್ತದೆ. ಶಿವನು ತ್ರಿನೇತ್ರಧಾರಿಯಾಗಿದ್ದು, ಧೋತಿ ಹಾಗೂ ಉದ್ದನೆಯ ವನಮಾಲೆಯನ್ನು ಧರಿಸಿರುವನು. ಜೊತೆಗೆ ಕಿರೀಟಮಕುಟ, ಕರ್ಣಕುಂಡಲ, ಕಂಠಹಾರ, ನಡುಪಟ್ಟಿ, ಕೈಗಡಗ, ಕಾಲ್ಗಡಗ ಮತ್ತು ಇತರೆ ಆಭರಣಗಳನ್ನು ಧರಿಸಿರುವನು. ಈ ಶಿಲ್ಪವನ್ನು ಕುರಿತು ಕೆ.ಎಂ. ಸುರೇಶ್ ಅವರು ಲೇಖನವನ್ನು ಪ್ರಕಟಿಸಿರುತ್ತಾರೆ.[೮೨] ಹಾಗೆಯೇ ಎಸ್.ಎನ್. ಶಿವರುದ್ರಸ್ವಾಮಿಯವರ 'ವಿಜಯನಗರ ಟೆಂಪಲ್ಸ್ ಇನ್ ಕರ್ನಾಟಕ' ಎಂಬ ಗ್ರಂಥದಲ್ಲೂ ಈ ಶಿಲ್ಪ ಉಲ್ಲೇಖವಾಗಿದೆ.[೮೩]

ಹಂಪಿ ಪರಿಸರದಲ್ಲಿ ದೊರೆತಿರುವ ಈ ಮೇಲಿನ ನಾಲ್ಕು ಗಜಸಂಹಾರ ಶಿಲ್ಪಗಳ ಕೆಲವು ಲಕ್ಷಣಗಳು ಶಿಲ್ಪ ಪಠ್ಯದಂತಿದ್ದರೆ ಮತ್ತೆ ಕೆಲವು ಲಕ್ಷಣಗಳು ಶಿಲ್ಪಪಠ್ಯದಂತಿಲ್ಲದಿರುವುದು ತಿಳಿಯುತ್ತದೆ. ಜೊತೆಗೆ ಈ ಎಲ್ಲಾ ಶಿಲ್ಪಗಳಲ್ಲಿ ಶಿಲ್ಪಿಯ ಸ್ವಂತಿಕೆಯಿರುವುದು ಕಂಡುಬರುತ್ತದೆ.

ಒಟ್ಟಾರೆ ಮೇಲಿನ ಎಲ್ಲಾ ಶಿಲ್ಪಶಾಸ್ತ್ರಗಳು ಹಾಗೂ ಶಿಲ್ಪಗಳ ಅಧ್ಯಯನದಿಂದ ಶಿವನು ಆನೆಯ ತಲೆಯ ಮೇಲೆ ತನ್ನ ಕಾಲುಗಳನ್ನು ಇಟ್ಟಿದ್ದು, ಆನೆಯ ಚರ್ಮವು ಶಿವನಿಗೆ ಪ್ರಭಾಮಂಡಲದಂತೆ ವಿಸ್ತರಿಸಿರುತ್ತದೆ. ಹಲವು ಭುಜಗಳನ್ನು ಹೊಂದಿರುವ ಶಿವನು ವಿವಿಧ ಆಯುಧಗಳನ್ನು ಹಿಡಿದಿದ್ದು, ಸರ್ವಾಭರಣಗಳಿಂದ ಅಲಂಕೃತನಾಗಿರುತ್ತಾನೆಂಬುದು ತಿಳಿದುಬರುತ್ತದೆ. ಹಾಗೆಯೇ ದೇವತೆ ಮತ್ತು ಅಸುರರ ಸ್ವರೂಪವಾಗಿಯೂ ಪ್ರಾಣಿಗಳು ಬಳಕೆಯಾಗಿದ್ದು, ಅವುಗಳ ಪ್ರಾಮುಖ್ಯತೆಯನ್ನು ತಿಳಿಯಬಹುದಾಗಿದೆ.

ವೃಷಭಾವತಾರ ಶಿಲ್ಪ

ವೃಷಭವು ಮನುಷ್ಯನ ತಲೆಯ ಮೇಲೆ ತನ್ನ ಕಾಲನ್ನಿರಿಸಿದ ಶಿಲ್ಪವನ್ನೇ ಶಿವನ ವೃಷಭಾವತಾರ ಶಿಲ್ಪ ಎಂದು ಕರೆಯಲಾಗುತ್ತದೆ. ಈ ಶಿಲ್ಪದ ಕುರಿತು ಯಾವುದೇ ಶಿಲ್ಪಶಾಸ್ತ್ರಗಳಲ್ಲಿ ಉಲ್ಲೇಖವಿಲ್ಲದಿದ್ದರೂ ಶ್ರೀಶಿವಮಹಾಪುರಾಣದಲ್ಲಿ[೪೪] ಶತರುದ್ರ ಸಂಹಿತೆಯ ೨೨ ಹಾಗೂ ೨೩ನೇ ಅಧ್ಯಾಯದಲ್ಲಿ ಶಿವನು ವೃಷಭಾವತಾರ ತಾಳಿದುದರ ಕುರಿತು ವಿವರಣೆ ದೊರೆಯುತ್ತದೆ. ಇಲ್ಲಿಯ ವಿವರಣೆಯಂತೆ ದೇವ-ದಾನವರು ಅಮೃತಕ್ಕಾಗಿ ಮಂದರ ಪರ್ವತವನ್ನು ಕಡೆಯುತ್ತಿದ್ದ ಸಂದರ್ಭದಲ್ಲಿ ಲಕ್ಷ್ಮೀ, ಧನ್ವಂತರಿ, ಚಂದ್ರ, ಪಾರಿಜಾತ, ಐರಾವತ, ಶಂಖ ಕೌಸ್ತುಭಮಣಿ ಹಾಗೂ ಮಹಾಕಾಲಕೂಟ ವಿಷವೂ ಹುಟ್ಟಿತು. ನಂತರದಲ್ಲಿ ಅಮೃತವು ಹುಟ್ಟುವಾಗ ಅತ್ತಿತ್ತ ಚೆಲ್ಲಿದ ಅಮೃತದ ಹನಿಗಳಿಂದ ಸುಂದರ ಅಪ್ಸರೆ ಸ್ತ್ರೀಯರು ಉದಯಿಸಿದರು. ಹಾಗೆಯೇ ದೇವತೆಗಳು ವಿಷ್ಣುವಿನ ಸಹಾಯದಿಂದ ಅಮೃತವನ್ನು ಪಡೆಯುವ ಯುದ್ಧದಲ್ಲಿ ಬಲಶಾಲಿಯಾದರು. ನಂತರ ಸಂದರ್ಭದಲ್ಲಿ ವಿಷ್ಣುವು ಈ ಅಪ್ಸರೆಯರ ಮೋಹಕ್ಕೊಳಗಾಗಿ ಅನೇಕ ಪುತ್ರರು ಜನಿಸಿದರು. ಇವರು ಲೋಕಕ್ಕೆಲ್ಲ ಉಪದ್ರವ ನೀಡಲು ಆರಂಭಿಸಿದರು. ಆಗ ದೇವಮುನಿಗಳೆಲ್ಲ ಶಿವನ ಮೊರೆ ಹೋದಾಗ ಶಿವನು ವೃಷಭಾವತಾರ ತಾಳಿ ಅವರನ್ನು ಸಂಹರಿಸಿದನು. ತನ್ನ ಮಕ್ಕಳೆಲ್ಲ ಹೀಗೆ ಮಡಿದುದನ್ನು ಕಂಡ ವಿಷ್ಣು ಈ ವೃಷಭವನ್ನು ಎದುರಿಸಲು ತನ್ನ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದನು. ಆದರೆ ವೃಷಭನು ಇವುಗಳನ್ನೆಲ್ಲ ನಾಶಪಡಿಸಿ ಭಯಂಕರವಾಗಿ ಗುಟುರು ಹಾಕುತ್ತ ವಿಷ್ಣುವಿನ ಮೇಲೆರಗಿ ತನ್ನ ಗೋರಸು ಮತ್ತು ಕೊಂಬುಗಳ ಇರಿತದಿಂದ ಆತನನ್ನು ಘಾಸಿಗೊಳಿಸಿತು. ಆಗ ವಿಷ್ಣು ಶಿವನೇ ವೃಷಭಾವತಾರ ತಾಳಿದುದನ್ನು ಅರಿತು ಕ್ಷಮೆಯಾಚಿಸಿದನು.

ಈ ಕಥೆಯನ್ನು ವಿವರಿಸುವ ಎರಡು ಶಿಲ್ಪಗಳು ಹಂಪಿ ಪರಿಸರದಲ್ಲಿ ದೊರೆತಿವೆ. ಗಂಗಾವತಿ ತಾಲೂಕಿನ ಕೃಷ್ಣಾಪುರದ ಬಸವಣ್ಣ ದೇವಾಲಯದಲ್ಲಿ ಒಂದು ಹಾಗೂ ಜಂಬುನಾಥನಹಳ್ಳಿಯ ಜಂಬುನಾಥ ದೇವಾಲಯದ ಮುಖಮಂಟಪದ ಕಂಬದಲ್ಲಿ ಮತ್ತೊಂದು ಶಿಲ್ಪ ಕಂಡುಬರುತ್ತದೆ.

ಕೃಷ್ಣಾಪುರದ ಬಸವಣ್ಣ ದೇವಾಲಯದಲ್ಲಿನ ವೃಷಭಾವತಾರ ಶಿಲ್ಪವು ಗರ್ಭಗುಡಿಯಲ್ಲಿದ್ದು, ಇಂದಿಗೂ ಪೂಜೆಗೆ ಒಳಪಡುತ್ತಿರುವುದು ಕಂಡುಬರುತ್ತದೆ. ಈ ಶಿಲ್ಪದಲ್ಲಿನ ವೃಷಭವು ಬಲಿಷ್ಠ ಮೈಕಟ್ಟಿನಿಂದ ಸುಂದರವಾಗಿ ಕೆತ್ತಲ್ಪಟ್ಟಿದೆ. ತನ್ನ ಬಲಗಾಲನ್ನು ಮನುಷ್ಯನ ತಲೆಯ ಭಾಗದ ಮೇಲೆ ಇಟ್ಟು ತುಳಿಯುತ್ತಿರುವಂತೆ ತೋರಿಸಲಾಗಿದೆ. ಹಾಗೂ ನಂದಿಯು ಗಂಟೆಗಳ ಮಾಲೆ ಮತ್ತು ವಸ್ತ್ರಾಭರಣಗಳಿಂದ ಅಲಂಕೃತಗೊಂಡಂತೆ ಕೆತ್ತಲಾಗಿದೆ. ಜೊತೆಗೆ ಇದರ ಕೊರಳಿನ ಕೆಳಭಾಗದಲ್ಲಿ

ಶಿವಲಿಂಗವನ್ನು ಸಹ ಬಿಡಿಸಲಾಗಿದೆ. ಹಾಗಾಗಿ ಶಿವನೇ ವೃಷಭಾವತಾರ ತಾಳಿದರ ಸಂಕೇತವಾಗಿ ಇಲ್ಲಿ ಲಿಂಗವನ್ನು ಕೆತ್ತಲಾಗಿದೆ ಎನ್ನಬಹುದು. ಇದೇ ರೀತಿ ಜಂಬುನಾಥ ದೇವಾಲಯದ ಮುಖಮಂಟಪದಲ್ಲಿನ ಶಿಲ್ಪದಲ್ಲಿ ವೃಷಭವು ತನ್ನ ಎಡಗಾಲಿನಿಂದ ಮನುಷ್ಯನ ತಲೆಯ ಭಾಗವನ್ನು ತುಳಿಯುತ್ತಿರುವಂತೆ ತೋರಲಾಗಿದೆ. ಹಾಗೂ ಇಲ್ಲಿ ಶಿವಲಿಂಗವನ್ನು ತೋರಿಲ್ಲ. ಇದು ಸ್ವಲ್ಪಮಟ್ಟಿನ ಭಿನ್ನತೆಯನ್ನು ಸೂಚಿಸುತ್ತದೆ.



ಅಮೃತ್‌ಮಹಲ್ ತಳಿಯ ಗೂಳಿ



ವೃಷಭಾವತಾರ ಶಿಲ್ಪ, ಬಸವೇಶ್ವರ ದೇವಸ್ಥಾನ, ಕೃಷ್ಣಾಪುರ, ಗಂಗಾವತಿ (ತಾ)



ವೃಷಭಾವತಾರ ಶಿಲ್ಪ, ಜಂಬುನಾಥೇಶ್ವರ ದೇವಾಲಯ, ಜಂಬುನಾಥನಹಳ್ಳಿ

ಒಟ್ಟಾರೆ ಹಂಪಿ ಪರಿಸರದ ಈ ಎರಡು ಶಿಲ್ಪಗಳಲ್ಲಿ ವೃಷಭವು ಮಾನವನ ತಲೆಯ ಭಾಗದ ಮೇಲೆ ಕಾಲಿಟ್ಟು ತುಳಿಯುತ್ತಿರುವಂತೆ ಕಂಡರಿಸಲಾಗಿದೆ. ಹಾಗಾಗಿ ಇದು ಶಿವನ ಸಂಹಾರ ರೂಪವನ್ನೇ ಸೂಚಿಸುತ್ತದೆಂದು ಹೇಳಬಹುದು. ಹಂಪಿ ಪರಿಸರದಲ್ಲಿ ಈ ರೀತಿಯ ತನ್ನ ಎಡ ಮತ್ತು ಬಲಗಾಲನ್ನು ಮೇಲೆತ್ತಿ ನಿಂತಿರುವ ನಂದಿ ಶಿಲ್ಪಗಳು ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತವೆ. ಆದರೆ ಈ ಶಿಲ್ಪಗಳಲ್ಲಿ ಮನುಷ್ಯರ ಶಿರಭಾಗವನ್ನು ಮತ್ತು ಲಿಂಗವನ್ನು ತೋರಿಸಲಾಗಿಲ್ಲ. ಆದರೂ ಈ ಶಿಲ್ಪಗಳೂ ಸಹ ಇದೇ ಕಥೆಯನ್ನು ತಿಳಿಸುತ್ತವೆಂದು ಹೇಳಬಹುದು. ಜೊತೆಗೆ ಕೃಷ್ಣಾಪುರದಲ್ಲಿನ ವೃಷಭಾವತಾರ ಶಿಲ್ಪವನ್ನು ಹುಟ್ಟು ಬಂಡೆಯ ಮೇಲೆ ಕೆತ್ತಿದ್ದು, ಈ ಶಿಲ್ಪಕ್ಕೆ ದೇವಾಲಯವನ್ನು ನಿರ್ಮಿಸಿದ್ದು, ಪೂಜೆಗೆ ಒಳಪಟ್ಟಿರುವುದರಿಂದ ಈ ಪ್ರದೇಶದ ಜನರು ನಂದಿಗೆ (ವೃಷಭಕ್ಕೆ) ವಿಶೇಷ ಸ್ಥಾನಮಾನ ನೀಡಿ ಆರಾಧಿಸುತ್ತಾರೆಂಬುದು ತಿಳಿಯುತ್ತದೆ. ಈ ರೀತಿಯ ಶಿಲ್ಪಗಳಿಂದ ವಿಜಯನಗರ ಕಾಲದಲ್ಲಿ ಶಿವನ ಲೀಲಾಮೂರ್ತಿಗಳೊಂದಿಗೆ ಶಿವಪುರಾಣದಲ್ಲಿ ದೊರೆಯುವ ಶಿವನ ಕೆಲವು ಪ್ರಮುಖ ಅವತಾರಗಳನ್ನು ಶಿಲ್ಪಗಳಲ್ಲಿ ತೋರಿಸಿರುವುದು ಗಮನಾರ್ಹವಾಗಿದ್ದು, ಇಲ್ಲಿ ಪ್ರಾಣಿಯಾದ ವೃಷಭದ ಪ್ರಾಮುಖ್ಯತೆಯನ್ನು ಅರಿಯಬಹುದಾಗಿದೆ.

ಕಿನ್ನರ ಮತ್ತು ಕಿನ್ನರಿ ಶಿಲ್ಪಗಳು

ಶಿಲ್ಪಗಳಲ್ಲಿ ಮೇಲಿನ ಅರ್ಧದೇಹ ಮನುಷ್ಯನದು ಹಾಗೂ ಕೆಳಗಿನ ಅರ್ಧದೇಹ ಪಕ್ಷಿಯದು ಆಗಿದ್ದು ಕೈಯಲ್ಲಿ ವೀಣೆಯನ್ನು ಹಿಡಿದಿರುವ ಶಿಲ್ಪಗಳನ್ನು ಕಿನ್ನರ ಶಿಲ್ಪಗಳೆಂದು ಗುರುತಿಸಲಾಗಿದೆ. ಆಕಾಶದಲ್ಲಿ ಹಾರಾಡುವ ದಂಪತಿಗಳೆಂದೇ ಪ್ರಸಿದ್ಧವಾಗಿರುವ ಈ ಕಿನ್ನರ ಶಿಲ್ಪಗಳು ಆರಂಭಿಕ ಭಾರತೀಯ



ಕಲೆಯಲ್ಲಿ ಕಂಡುಬರುತ್ತವೆ. ಸಂಗೀತ ವಾದ್ಯಗಳನ್ನಿಡಿದು ಹಾಡುವಲ್ಲಿ ಇವು ಪ್ರಸಿದ್ಧಿಯನ್ನು ಪಡೆದಿದ್ದು, ಅರೆದೈವಿಕ ಮಾನವರೆಂದು ಕರೆಯಲ್ಪಟ್ಟಿವೆ. ವಿಷ್ಣುಧರ್ಮೋತ್ತರ ಪುರಾಣದಲ್ಲಿ[೮೫] ಕಿನ್ನರವನ್ನು ಅರ್ಧ ಮನುಷ್ಯ ಹಾಗೂ ಅರ್ಧ ಕುದುರೆ ಎಂದು ವಿವರಿಸಲಾಗಿದೆ. ಹಾಗೆಯೇ ಶ್ರೀ ಪಂಪಾ ಮಹಾತ್ಮೆಯಲ್ಲಿ[೮೬] ಕಿನ್ನರರ ಈ ರೀತಿಯ ವಿವರಣೆ ದೊರೆಯುತ್ತದೆ. "ಕಿನ್ನರರು ದೇವೇಂದ್ರನಿಂದ ಶಾಪಕ್ಕೊಳಗಾಗಿ ಶಿವನ ಬಳಿ ಬಂದು ಹೇ ತಂದೆಯೇ ದೇವೇಂದ್ರನ ಶಾಪನಿಂದ ಭಯಗ್ರಸ್ಥರಾಗಿ ನಿನ್ನ ಪಾದ ಸನ್ನಿಧಿಯನ್ನು ಬಯಸಿ ಬಂದಿರುವ ಅನಾಥ ಮಕ್ಕಳಂತಿರುವ ನಮ್ಮನ್ನು ಕಾಪಾಡು ಹೇ ಚಂದ್ರಧರನೇ, ವಿರೂಪಾಕ್ಷನು ನಮ್ಮ ಕಾಯುವನೆಂದು ಬಯಸಿ ಬಂದಿರುವ ನಮ್ಮನ್ನು ನೀನೆ ಕಾಯಬೇಕು. ದೇವಾಧಿ ದೇವನೇ ಅಷ್ಟದಿಕ್ಪಾಲಕರಿಂದ ಸೇವಿಸಲ್ಪಡುವ ಅಧಿಕಾರವುಳ್ಳ ಪರಮೇಶ್ವರನೇ, ಶಂಖರನೇ ನಮಗೆ ಹೇಗೆ ಸುಖದೊರಕಬಲ್ಲುದೋ ಹಾಗೆ ನೀನು ನಮ್ಮನ್ನು ಅನುಗ್ರಹಿಸು ಎಂದು ಬೇಡಿಕೊಳ್ಳುತ್ತವೆ.

ಗಂಧರ್ವದ ಸ್ತುತಿಯನ್ನು ಕೇಳಿ ದೀನರನ್ನು ಉದ್ಧರಿಸುವ ಇಚ್ಛೆಯುಳ್ಳವನಾಗಿ ಶ್ರೀವಿರೂಪಾಕ್ಷನು ಹೇ ಕಿನ್ನರರೇ ನಿಮ್ಮ ಮಧುರವಾದ ಸ್ತೋತ್ರದಿಂದ ಸಂತುಷ್ಟನಾಗಿದ್ದೇನೆ. ನಿಮಗೆ ಬೇಕಾದ ವರವನ್ನು ಬೇಡಿರಿ ಕೊಡುತ್ತೇನೆ ಎನ್ನಲು ಗಂಧರ್ವರು ಹೇ ವಿರೂಪಾಕ್ಷನೇ ವಿಷ್ಣುವಿನ ಶಾಪದಿಂದ ನರದೇಹವನ್ನು ಹೊಂದಿ ದುಃಖ ಪಡುತ್ತಿರುವೆವು. ಇದರಿಂದ ಭಯಗೊಂಡ ನಮ್ಮನ್ನು ನೀನು ನಿನ್ನ ನಿಜ ಮಕ್ಕಳಂತೆ ಭಾವಿಸಿ ರಕ್ಷಿಸು ಎಂದು ಬೇಡಿದರು. ಆಗ ವಿರೂಪಾಕ್ಷನು 'ಹೇ ಮನೋಜ್ಞರಾದ ದೇವತೆಗಳೇ ಇಂದಿನಿಂದ ನೀವು ಕಿನ್ನರರೆಂಬ ಹೆಸರನ್ನು ಧರಿಸಿಕೊಂಡು ನನ್ನ ಸನ್ನಿಧಿಯಲ್ಲಿ ನಿತ್ಯವೂ ಗಾನ ಮಾಡಿರಿ. ನನ್ನ ಸಂತೋಷಕ್ಕಾಗಿ ನೀವು ಹಾಗೆ ಮಾಡುವುದರಿಂದ ದೇವ-ದಾನವ ಬ್ರಹ್ಮಾದಿಗಳೆಲ್ಲರಲ್ಲಿಯೂ ಗಾನವಿದ್ಯೆಯಲ್ಲಿ ಸನ್ಮಾನ ಪಡೆಯುವಿರಿ. ಹಾಗೂ ಜೀವನ್ಮುಕ್ತರಾಗುವಿರಿ ಇಂದಿನಿಂದ ಸಂಶಯವನ್ನು ಬಿಟ್ಟು ಸ್ವೇಚ್ಛೆಯಾಗಿ ಸಂಚರಿಸಿರಿ ಸೂರ್ಯಚಂದ್ರತಾರೆಗಳು ಇರುವವರೆಗೂ ಈ ಸ್ಥಾನದಲ್ಲಿ ನಾನು ವಾಸಿಸುವೆನು. ನಿಮ್ಮ ದೆಸೆಯಿಂದ ಮಾತಂಗಿ ಸಮೇತರಾಗಿ ಕಿನ್ನರೇಶ ಎಂಬ ಹೆಸರನ್ನು ಧರಿಸುವೆನು ನಿಮ್ಮಂಥವರಿಗೆ ಮುಕ್ತಿ ಕೊಡುವುದರ ಸಲುವಾಗಿ ಈ ಪೂರ್ವ ಮಹಾದ್ವಾರದಲ್ಲಿ ನೆಲೆಸುವೆನು. ನೀವು ದೇವ ದಾನವ ಯಕ್ಷರಿಂದ ಪೂಜೆಗೊಳ್ಳುತ್ತ ನಿರ್ಭಯದಿಂದ ಸಂಚರಿಸಿರಿ. ಈ ನನ್ನ ಆಲಯದಲ್ಲಿ ಯಾವ ಮಾನವರು ಮಧುರಗಾನ ಮಾಡುತ್ತಾರೋ ಅದರಿಂದ ಸಂತುಷ್ಟನಾಗಿ ಅವರಿಗೆ ಬೇಡಿದ ಸರ್ವಾರ್ಥಗಳನ್ನು ಕೊಡುವೆನು'. ಹೀಗೆ ಶಿವನಿಂದ ಶಾಪವಿಮೋಚನೆ ಹೊಂದಿದ ಕಿನ್ನರರು ನಿತ್ಯವೂ ಮಹೇಶ ಚರಿತ್ರೆಯನ್ನು ಗಾನ ಮಾಡುತ್ತಾ ಶಿವಸನ್ನಿಧಿಯಲ್ಲಿಯೇ ವಾಸಿಸಿದರೆಂದು ತಿಳಿದುಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಹಂಪಿಯ ಪೂರ್ವಕ್ಕೆ ಅಂದರೆ ಬುಕ್ಕಸಾಗರ ಗ್ರಾಮದ ವ್ಯಾಪ್ತಿಯಲ್ಲಿ ಕಿನ್ನರೇಶ್ವರ ದೇವಾಲಯವಿದ್ದು, ಇಂದಿಗೂ ಪೂಜೆಗೆ ಒಳಪಟ್ಟಿದೆ. ಹಂಪಿಯ ಪಂಚಲಿಂಗ ದೇವಾಲಯಗಳಲ್ಲಿ ಈ ಕಿನ್ನರೇಶ್ವರ ದೇವಾಲಯವು ಒಂದಾಗಿದ್ದು ಪೌರಾಣಿಕ ಮಹತ್ವವನ್ನು ಪಡೆದುಕೊಂಡಿದೆ.

ಹಂಪಿ ಪರಿಸರದ ಕಿನ್ನರರ ಶಿಲ್ಪಗಳು ಶೈವ ದೇವಾಲಯಗಳಲ್ಲಿ ಅಧಿಕ ಸಂಖ್ಯೆಯಲ್ಲಿಯೂ, ವೈಷ್ಣವ ದೇವಾಲಯಗಳಲ್ಲಿ ಕಡಿಮೆ ಸಂಖ್ಯೆಯಲ್ಲಿಯೂ ಕಂಡುಬಂದಿದ್ದು, ಅಲಂಕಾರಿಕ ಶಿಲ್ಪಗಳಾಗಿ ಕಂಬಗಳಲ್ಲಿ, ಭಿತ್ತಿಗಳಲ್ಲಿ ಮತ್ತು ಪ್ರವೇಶದ್ವಾರದ ಪಟ್ಟಿಕೆಗಳಲ್ಲಿ ಕೆತ್ತಿದ್ದರೂ ಈ ಮೇಲಿನ ವಿವರಣೆಯಿಂದ ಕಿನ್ನರ ಶಿಲ್ಪಗಳು ದೈವತ್ವದ ಮಹತ್ವವನ್ನು ಪಡೆದುಕೊಂಡಿರುವುದು ತಿಳಿಯುತ್ತದೆ.

ಹಂಪಿ ಪರಿಸರದ ದೇವಾಲಯಗಳಲ್ಲಿನ ಕಿನ್ನರರ ಶಿಲ್ಪಗಳ ಕೋಷ್ಟಕ

ಕ್ರಸಂ.	ದೇವಾಲಯಗಳು	ಕಿನ್ನರ	ಕಿನ್ನರಿ	ಒಟ್ಟು
೦೧.	ಶ್ರೀವಿರೂಪಾಕ್ಷ ದೇವಾಲಯ, ಹಂಪಿ	೦೮	೧೧	೧೯
೦೨.	ಅಚ್ಯುತರಾಯ ದೇವಾಲಯ, ಹಂಪಿ	೦೬	೦೯	೧೫
೦೩.	ಪಾನ್‌ಸುಪಾರಿ ಬಜಾರಿನ ದೇವಾಲಯಗಳ ಸಮೂಹ, ಹಂಪಿ	೦೫	೦೬	೧೧
೦೪.	ಕೃಷ್ಣ ದೇವಾಲಯ, ಹಂಪಿ	೦೬	೦೧	೦೭
೦೫.	ವಿಜಯವಿಠಲ ದೇವಾಲಯ, ಹಂಪಿ	೦೪	೦೫	೦೯
೦೬.	ಹಜಾರರಾಮಸ್ವಾಮಿ ದೇವಾಲಯ, ಹಂಪಿ	೦೨	೦೪	೦೬
೦೭.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೦೩	೦	೦೩
೦೮.	ಹೇಮಕೂಟ ದೇವಾಲಯ ಸಮೂಹ, ಹಂಪಿ	೦೨	೦	೦೨
೦೯.	ಗೆಜ್ಜಲಮಂಟಪ, ಹಂಪಿ	೦೧	೦	೦೧
೧೦.	ಚಂಡಿಕೇಶ್ವರ ದೇವಾಲಯ, ಹಂಪಿ	೦	೦೧	೦೧
೧೧.	ಶ್ರೀಜಂಬುನಾಥೇಶ್ವರ ದೇವಾಲಯ, ಜಂಬುನಾಥನಹಳ್ಳಿ	೦೩	೦೬	೦೯
೧೨.	ಶ್ರೀವೇಣುಗೋಪಾಲಸ್ವಾಮಿ ದೇವಾಲಯ, ತಿಮ್ಮಲಾಪುರ	೦೩	೦೨	೦೫
೧೩.	ಶಿವ ದೇವಾಲಯ, ತಿಮ್ಮಲಾಪುರ	೦	೦೧	೦೧
೧೪.	ಪಟ್ಟಾಭಿರಾಮ ದೇವಾಲಯ, ಕಮಲಾಪುರ	೦೩	೦	೦೩
೧೫.	ಮಲ್ಲಿಕಾರ್ಜುನ ದೇವಾಲಯ, ಮಲಪನಗುಡಿ	೦೧	೦೧	೦೨
೧೬.	ವಿಷ್ಣು ದೇವಾಲಯ, ನಿಂಬಾಪುರ	೦	೦೧	೦೧
	ಒಟ್ಟು	೪೭	೪೮	೯೫

(ಸೂಚನೆ: ಹಂಪಿ ಪರಿಸರದ ಪ್ರಮುಖ ದೇವಾಲಯಗಳಲ್ಲಿನ ಕಿನ್ನರರ ಶಿಲ್ಪಗಳನ್ನು ಈ ಮೇಲಿನ ಕೋಷ್ಟಕದಲ್ಲಿ ನೀಡಲಾಗಿದೆ.)


ಹಂಪಿ ಪರಿಸರದಲ್ಲಿ ಒಟ್ಟು ಸುಮಾರು ೯೫ ಕಿನ್ನರರ ಶಿಲ್ಪಗಳು ಕಂಡುಬಂದಿರುತ್ತವೆ. ವಿರೂಪಾಕ್ಷ ದೇವಾಲಯ ಒಂದರಲ್ಲಿ ೧೯ ಶಿಲ್ಪಗಳು ದೊರಕಿದ್ದು ಶಿಲ್ಪದಲ್ಲಿ ಕಿನ್ನರನಿಗೆ ಕಿರೀಟಮಕುಟ ತೋರಿಸಿದ್ದರೆ, ಕಿನ್ನರಿಗೆ ತುರುಬನ್ನು ಮತ್ತು ಸ್ತನಗಳನ್ನು ತೋರಿಸಿರುತ್ತಾರೆ. ಈ ಲಕ್ಷಣಗಳಿಂದ ಕಿನ್ನರಿಯನ್ನು ಗುರುತಿಸಲಾಗಿದೆ.

ವಿರೂಪಾಕ್ಷ ದೇವಾಲಯದ ನೂರು ಕಂಬಗಳ ಮಂಟಪದ ಒಂದು ಕಂಬದಲ್ಲಿನ ಕಿನ್ನರ ಶಿಲ್ಪವು ಪ್ರಮುಖವಾಗಿದ್ದು, ಮೇಲಿನ ಅರ್ಧ ದೇಹ ಮನುಷ್ಯ ಹಾಗೂ ಕೆಳಗಿನ ಭಾಗ ಸಿಂಹ ದೇಹವನ್ನು ಹೊಂದಿದೆ. ಇಲ್ಲಿ ಕಿನ್ನರ ತನ್ನ ಎಡಗೈನಲ್ಲಿ ವೀಣೆಯನ್ನು ಹಿಡಿದು ಭುಜದ ಮೇಲೆ ಇಟ್ಟುಕೊಂಡಿದ್ದು,

ಬಲಗೈ ಮುಂದಕ್ಕೆ ಬಾಚಿದ್ದು ವ್ಯಾಖ್ಯಾನ ಮುದ್ರೆಯಲ್ಲಿದೆ. ಕಿನ್ನರ ಕಿರೀಟಮಕುಟ ಕಂಠಹಾರ, ತೋಳ್ಬಂದಿ, ಕೈಕಡಗ ಮತ್ತು ಇತರೆ ಆಭರಣಗಳನ್ನು ಧರಿಸಿರುವಂತೆ ತೋರಲಾಗಿದೆ. ಹಾಗಾಗಿ ಈ ಶಿಲ್ಪ ವಿಷ್ಣುಧರ್ಮೋತ್ತರ ಪುರಾಣವು ತಿಳಿಸುವ ಲಕ್ಷಣಗಳನ್ನು ಒಳಗೊಂಡಂತೆ ಬಿಡಿಲಾಗಿದ್ದು ಪ್ರಮುಖವಾಗಿದೆ. ಇದೇ ರೀತಿಯ ಶಿಲ್ಪ ಕುದುರೆಗೊಂಬೆ ಮಂಟಪದ ಕಂಬದಲ್ಲಿದೆ. ಇಲ್ಲಿ ಸಿಂಹದ ಬಾಲದ ಬದಲಾಗಿ ಪಕ್ಷಿಯ ಪುಕ್ಕ (ಗರಿ)ಗಳನ್ನು ತೋರಿಸಿರುವುದು. ಹಾಗೆಯೇ ಬಲಗೈನಲ್ಲಿ ವೀಣೆ ಹಿಡಿದಿದ್ದು, ಎಡಗೈ ತನ್ನ ಸೊಂಟದ ಮೇಲೆ ಇಟ್ಟುಕೊಂಡಂತೆ ತೋರಿರುವುದು ವಿಶೇಷವಾಗಿದೆ.



ಕಿನ್ನರ ಶಿಲ್ಪ, ನೂರು ಕಂಬಗಳ ಮಂಟಪ,
ವಿರೂಪಾಕ್ಷ ದೇವಾಲಯ, ಹಂಪಿ



ಕಿನ್ನರಿ ಶಿಲ್ಪ, ಶಂಕರೇಶ್ವರ ದೇವಾಲಯ,
ಕನಕಗಿರಿ ಗೋಪುರದ ಮುಂಭಾಗ, ಹಂಪಿ

ಮತ್ತೊಂದು ಪ್ರಮುಖ ಶಿಲ್ಪವು ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರದ ಮುಂಭಾಗದ ಶಂಖರೇಶ್ವರ ದೇವಾಲಯದ ಕಂಬದಲ್ಲಿ ಕಂಡುಬರುತ್ತದೆ. ಈ ಶಿಲ್ಪವು ಕಿನ್ನರಿಯದ್ದಾಗಿದ್ದು, ಮನುಷ್ಯ ರೂಪದ ಮೇಲಿನ ದೇಹವು ತನ್ನ ಎರಡು ಕೈಗಳನ್ನು ಮೇಲೆತ್ತಿ ಜೋಡಿಸಿ ನಮಸ್ಕರಿಸುತ್ತಿರುವಂತೆ ತೋರಲಾಗಿದೆ. ಕೆಳಭಾಗದ ಪಕ್ಷಿರೂಪವನ್ನು ಅದರ ಗರಿಗಳನ್ನು, ರೆಕ್ಕೆಗಳನ್ನು ಸ್ಪಷ್ಟವಾಗಿ ಕಾಣುವಂತೆ ಬಿಡಿಸಲಾಗಿದೆ. ಹಾಗೆಯೇ ಕಿನ್ನರಿಯು ತುರುಬನ್ನು ಜೊತೆಗೆ ವಿವಿಧ ರೀತಿಯ ಆಭರಣಗಳನ್ನು ಧರಿಸಿದ್ದು ಇಲ್ಲಿ ವೀಣೆಯನ್ನು ತೋರಿಸಿಲ್ಲ. ಹಂಪಿ ಪರಿಸರದಲ್ಲಿ ಈ ರೀತಿಯ ಏಕೈಕ ಶಿಲ್ಪ ಇದಾಗಿದೆ.

ಈ ಮೇಲೆ ವಿವರಿಸಿದ ಮೂರು ಶಿಲ್ಪಗಳನ್ನು ಹೊರತುಪಡಿಸಿದರೆ ಹಂಪಿ ಪರಿಸರದಲ್ಲಿನ ಮಿಕ್ಕೆಲ್ಲಾ ಕಿನ್ನರರ ಶಿಲ್ಪಗಳು ಒಂದೇ ರೀತಿಯ ಸಾಮ್ಯತೆಯನ್ನು ಹೊಂದಿವೆ. ಅಂದರೆ ಅರ್ಧದೇಹ ಮನುಷ್ಯ, ಅರ್ಧದೇಹ ಪಕ್ಷಿಯದ್ದಾಗಿದ್ದು, ಕೈಯಲ್ಲಿ ವೀಣೆ ಮತ್ತೊಂದು ಕೈ ವ್ಯಾಖ್ಯಾನ ಮುದ್ರೆಯಲ್ಲಿರುವಂತೆ ಹಾಗೂ ವಿವಿಧ ಆಭರಣಗಳನ್ನು ಧರಿಸುವಂತೆ ತೋರಿಸಲಾಗಿರುತ್ತದೆ. ಆದರೆ ಕೆಲವು ಶಿಲ್ಪಗಳಲ್ಲಿ ವೀಣೆಯನ್ನು ಎಡಗೈನಲ್ಲಿ ಹಿಡಿದಿರುವಂತೆ ತೋರಿಸಿರುವುದು ಸ್ವಲ್ಪ ಮಟ್ಟಿನ ಭಿನ್ನತೆಯನ್ನು ತೋರಿಸುತ್ತದೆ.

ಒಟ್ಟಾರೆ ಹಂಪಿ ಪರಿಸರದ ದೇವಾಲಯಗಳ ಕಂಬ, ಭಿತ್ತಿ ಮತ್ತು ಪ್ರವೇಶದ್ವಾರದ ಪಟ್ಟಿಕೆಗಳಲ್ಲಿ ಅಲಂಕಾರಿಕವಾಗಿ ಕಂಡುಬರುವ ಈ ಶಿಲ್ಪಗಳು ಮೇಲಿನ ಸಾಹಿತ್ಯ ವಿವರಣೆಯಿಂದ ಮತ್ತು ಇಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬಂದಿರುವ ಶಿಲ್ಪಗಳಿಂದ ಕಿನ್ನರರು ದೈವತ್ವದ ಮಹತ್ವ ಪಡೆದುಕೊಂಡಿರುವುದು




ದೃಢಪಡುತ್ತದೆ. ಹಂಪಿ ಪರಿಸರದಲ್ಲಿ ಕಿನ್ನರೇಶ್ವರ ದೇವಾಲಯವಿರುವುದು ಇದಕ್ಕೆ ಪುಷ್ಟಿ ನೀಡಿದ್ದು ಗಮನಾರ್ಹವಾಗಿದೆ.

ಧಾರ್ಮಿಕ ಐತಿಹ್ಯಗಳನ್ನು ತಿಳಿಸುವ ಪ್ರಾಣಿ ಶಿಲ್ಪಗಳು

ಹಂಪಿ ಪರಿಸರದಲ್ಲಿ ವಿವಿಧ ರೀತಿಯ ಐತಿಹ್ಯಗಳು ಪ್ರಚಲಿತದಲ್ಲಿದ್ದು, ಅವುಗಳಲ್ಲಿ ಧಾರ್ಮಿಕ ಐತಿಹ್ಯಗಳು ಪ್ರಮುಖವಾಗಿವೆ. ಇಂತಹ ಐತಿಹ್ಯಗಳನ್ನು ವಿವರಿಸುವಲ್ಲಿ ಇಲ್ಲಿನ ಪ್ರಾಣಿಶಿಲ್ಪಗಳು ಪ್ರಮುಖ ಪಾತ್ರವಹಿಸಿದ್ದು, ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

೧. ಶ್ರೀಕಾಳಹಸ್ತಿ ದೇವಾಲಯದ ಐತಿಹ್ಯವನ್ನು ತಿಳಿಸುವ ಪ್ರಾಣಿಶಿಲ್ಪಗಳು

ಶ್ರೀಕಾಳಹಸ್ತಿ ದೇವಾಲಯವು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿದ್ದು, ಪುರಾಣ ಪ್ರಸಿದ್ಧ ಶೈವಕೇಂದ್ರವಾಗಿದೆ. ಈ ದೇವಾಲಯದಲ್ಲಿ ಪಂಚಭೂತ ಲಿಂಗಗಳಲ್ಲಿ ಒಂದಾದ ವಾಯುಲಿಂಗವಿದ್ದು, ಈ ಪ್ರದೇಶವನ್ನು ದಕ್ಷಿಣಕಾಶಿಯೆಂದೇ ಕರೆಯಲಾಗುತ್ತದೆ.

ಈ ದೇವಾಲಯಕ್ಕೆ ಶ್ರೀಕಾಳಹಸ್ತಿ ಎಂಬ ಹೆಸರು ಬಂದಿರುವುದಕ್ಕೆ ಒಂದು ಐತಿಹ್ಯವಿದೆ. ಅದೇನೆಂದರೆ ಶಿವನ ಪರಮಭಕ್ತರಾಗಿದ್ದ ಜೇಡರಹುಳು, ಸರ್ಪ, ಆನೆ ಈ ಮೂರು ಪ್ರಾಣಿಗಳು ಪ್ರತಿನಿತ್ಯ ತಮ್ಮದೇ ಆದ ರೀತಿಯಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುತ್ತವೆ. ಇಲ್ಲಿ ಜೇಡರಹುಳು ಶಿವಲಿಂಗಕ್ಕೆ ಧೂಳು ಮತ್ತು ಕಸದಿಂದ ಯಾವುದೇ ರೀತಿಯ ಹಾನಿಯಾಗಬಾರದೆಂದು ಬಲೆಯನ್ನು ಅಣೆದು ಲಿಂಗಕ್ಕೆ ಆಶ್ರಯ ನೀಡಿ ಪೂಜಿಸುತ್ತಿರುತ್ತದೆ. ಅದೇ ರೀತಿ ಸರ್ಪವು ಸಹ ಲಿಂಗದ ಮೇಲೆ ತನ್ನ ಮಣಿಯನ್ನಿಟ್ಟು ಹಡೆಯಿಂದ ರಕ್ಷಣೆ ನೀಡುತ್ತಾ ಪೂಜಿಸುತ್ತಿರುತ್ತದೆ. ಹಾಗೆಯೇ ಆನೆಯು ನೀರನ್ನು ತಂದು ಲಿಂಗವನ್ನು ಸ್ವಚ್ಚಗೊಳಿಸಿ ಬಿಲ್ವಪತ್ರಗಳನ್ನಿಟ್ಟು ಪೂಜಿಸುತ್ತಿರುತ್ತದೆ. ಹೀಗೆ ಈ ಮೂರು ಪ್ರಾಣಿಗಳು ತಮ್ಮ ತಮ್ಮ ಭಕ್ತಿಯನ್ನು ತೋರಿಸುತ್ತಿರುತ್ತವೆ. ಆದರೆ ಒಂದು ದಿನ ಜೇಡರಹುಳು ಮತ್ತು ಸರ್ಪವು ತಮ್ಮ ಪೂಜೆ ಸಲ್ಲಿಸಿದ ನಂತರ ತಡವಾಗಿ ಬಂದ ಆನೆಯು ನೀರನ್ನು ತಂದು ಲಿಂಗದ ಮೇಲೆ ಹಾಕಿತು. ಇದರಿಂದ ನಮ್ಮ ಪೂಜೆಯು ಅಪವಿತ್ರವಾಯಿತೆಂದು ತಿಳಿದ ಜೇಡರಹುಳು ಮತ್ತು ಸರ್ಪ ಆನೆಯ ವಿರುದ್ಧ ದ್ವೇಷಸಾರಿದವು. ಈ ಮೂರರ ನಡುವೆ ಹೋರಾಟವಾಗಿ ಇದರಲ್ಲಿ ಈ ಮೂರು ಪ್ರಾಣಿಗಳು ಮರಣವನ್ನಪ್ಪಿದವು. ಆಗ ಶಿವನು ಪ್ರತ್ಯಕ್ಷನಾಗಿ ಅವುಗಳ ನಿಸ್ವಾರ್ಥ ಸೇವೆಗೆ ಮೆಚ್ಚಿ ಮೋಕ್ಷವನ್ನು ನೀಡಿದನು. ಅಂದಿನಿಂದ ಜೇಡರಹುಳುವಿನಿಂದ 'ಶ್ರೀ', ಸರ್ಪದಿಂದ 'ಕಾಳ' ಮತ್ತು ಆನೆಯಿಂದ 'ಹಸ್ತಿ' ಎಂಬ ಪದಗಳು ಸೇರಿ ಈ ದೇವಾಲಯಕ್ಕೆ ಶ್ರೀಕಾಳಹಸ್ತೇಶ್ವರ ಎಂಬ ಹೆಸರು ಬಂದಿತು. ಎಂಬ ವಿವರಣೆ ದೊರೆಯುತ್ತದೆ. ಈ ಐತಿಹ್ಯವನ್ನು ತಿಳಿಸುವ ಸಮೂಹ ಶಿಲ್ಪಗಳು ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಹಾಗೂ ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ವಿರೂಪಾಕ್ಷ ದೇವಾಲಯದ ಅಂತರಾಳದ ಹೊರಭಾಗದ ದಕ್ಷಿಣ ದಿಕ್ಕಿನ ಭಿತ್ತಿಯಲ್ಲಿ ಈ ಐತಿಹ್ಯವನ್ನು ಒಳಗೊಂಡ ಶಿಲ್ಪಗಳು ಕಂಡುಬರುತ್ತವೆ. ಇದರ ಕುರಿತು ವಿವರಗಳನ್ನು ಇನ್ನೊಂದೆಡೆ ನೀಡಲಾಗಿದೆ.[೮೭]



ಶ್ರೀ ಕಾಳಹಸ್ತಿ ದೇವಾಲಯದ ಐತಿಹ್ಯವನ್ನು ತಿಳಿಸುವ ಸಮೂಹ ಶಿಲ್ಪಗಳು, ವಿರೂಪಾಕ್ಷ ದೇವಾಲಯ, ಹಂಪಿ

ಹೀಗೆ ವಿರೂಪಾಕ್ಷ ದೇವಾಲಯದಲ್ಲಿ ಕಂಡುಬರುವ ಶಿಲ್ಪಗಳಂತೆಯೇ ಇನ್ನೂ ಹಲವು ಶಿಲ್ಪಗಳು ಹಂಪಿ ಪರಿಸರದ ದೇವಾಲಯಗಳಾದ ಚಂದ್ರಶೇಖರ, ನೆಲಸ್ತರದ ಶಿವ, ಕಡಲೇಕಾಳು ಗಣೇಶ, ಮಲಪನಗುಡಿಯ ಮಲ್ಲಿಕಾರ್ಜುನ, ಜಂಬುನಾಥನಹಳ್ಳಿಯ ಜಂಬುನಾಥೇಶ್ವರ, ತಿಮ್ಮಲಾಪುರದ ಶಿವ ದೇವಾಲಯ ಹೀಗೆ ಇನ್ನೂ ಮುಂತಾದ ದೇವಾಲಯಗಳಲ್ಲಿ ಕಂಡುಬರುತ್ತವೆ. ಲಿಂಗವನ್ನು ಪೂಜಿಸುತ್ತಿರುವ ಜೇಡರಹುಳುವಿನ ಶಿಲ್ಪಗಳು ವಿರೂಪಾಕ್ಷ ದೇವಾಲಯದ ದಕ್ಷಿಣದಿಕ್ಕಿನ ಭಿತ್ತಿ ಮತ್ತು ಎಡಭಾಗದ ಪ್ರಕಾರ ಮಂಟಪದ ಕಂಬದಲ್ಲಿ, ಚಂದ್ರಶೇಖರ ದೇವಾಲಯದ ನವರಂಗದಲ್ಲಿ ಹಾಗೂ ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯದ ನವರಂಗದ ಕಂಬದಲ್ಲಿ ತಲಾ ಒಂದೊಂದರಂತೆ ಕಂಡುಬರುತ್ತವೆ. ಹಾಗೆಯೇ ಸರ್ಪ ಲಿಂಗಕ್ಕೆ ಸುತ್ತಿಕೊಂಡಿರುವ ಶಿಲ್ಪಗಳು ಹಾಗೂ ಆನೆಯು ಲಿಂಗಕ್ಕೆ ನೀರೆರಚುವ ಹಾಗೂ ಪುಷ್ಪವನ್ನು ಹಾಕುವ ಬಿಡಿಶಿಲ್ಪಗಳು ಹಂಪಿ ಪರಿಸರದಲ್ಲಿನ ಈ ಮೇಲೆ ಹೇಳಿದ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಇಲ್ಲಿ ಸರ್ಪವು ಒಂದು, ಎರಡು, ಮೂರು, ಐದು ಹಾಗೂ ಏಳು ಹೆಡೆಯನ್ನು ಹೊಂದಿರುವಂತೆ ಶಿಲ್ಪದಲ್ಲಿ ತೋರಿಸಿರುವುದು ಗಮನಾರ್ಹವಾಗಿದೆ. ಹೀಗೆ ಈ ಎಲ್ಲಾ ಬಿಡಿಶಿಲ್ಪಗಳು ಸಹ ಶ್ರೀಕಾಳಹಸ್ತಿಯ ಐತಿಹ್ಯವನ್ನೆ ತಿಳಿಸುವಂತಿದ್ದು, ಅದು ಬಹು ಪ್ರಚಲಿತದಲ್ಲಿತ್ತೆಂದು ಹೇಳಬಹುದು.

ಶ್ರೀಕಾಳಹಸ್ತೇಶ್ವರನಿಗೆ ಭಕ್ತಿಯಿಂದ ಪೂಜಿಸಿದರೆ ಅವರ ಹಲವು ದೋಷ ಅಥವಾ ಸಮಸ್ಯೆಗಳು ಪರಿಹಾರವಾಗುತ್ತವೆ ಎಂಬ ನಂಬಿಕೆಯೊಂದಿದೆ. ಅದರಂತೆ ಹಂಪಿಯ ವಿರೂಪಾಕ್ಷನಿಗೂ ಭಕ್ತಿಯಿಂದ ಪೂಜಿಸಿದರೆ ಅಂತಹ ದೋಷಗಳು ನಿವಾರಣೆಯಾಗುತ್ತವೆ ಎಂಬುದನ್ನು ಹಾಗೂ ವಿರೂಪಾಕ್ಷ ದೇವಾಲಯವು ಸಹ ಶ್ರೀಕಾಳಹಸ್ತೇಶ್ವರ ದೇವಾಲಯದಷ್ಟೇ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಪಡೆದಿತ್ತು ಎಂಬುದು ಇಲ್ಲಿ ದೊರೆತಿರುವ ಶಿಲ್ಪಗಳಿಂದ ದೃಢಪಡುತ್ತದೆ.

೨. ಮೂರು ತಲೆಯ ನಂದಿ ಶಿಲ್ಪ

ಈ ಶಿಲ್ಪವು ವಿರೂಪಾಕ್ಷನಿಗೆ ಎದುರಾಗಿ ಪೂರ್ವದ ದ್ವಾರಗೋಪುರದ ಮುಂಭಾಗದಲ್ಲಿ ಕಂಡುಬರುತ್ತದೆ. ದೇವಾಲಯದ ಆವರಣದಲ್ಲಿರುವ ಈ ಶಿಲ್ಪವು ಮೂರು ತಲೆಯನ್ನು ಹೊಂದಿದ್ದು,



ಕಪ್ಪುಶಿಲೆಯಲ್ಲಿ ಕೆತ್ತಲ್ಪಟ್ಟಿರುತ್ತದೆ. ವಿರೂಪಾಕ್ಷ ದೇವಾಲಯದ ಎದುರು ಬಸವಣ್ಣಗಳಲ್ಲಿ ಇದು ಒಂದಾಗಿದ್ದು, ಅತ್ಯಂತ ಪ್ರಮುಖವಾಗಿದೆ. ಇದೊಂದು ಅಪರೂಪದ ಶಿಲ್ಪವಾಗಿದ್ದು, ವೈಶಿಷ್ಟತೆಯಿಂದ ಕೂಡಿದೆ. ನಂದಿಯು ವಿವಿಧ ಆಭರಣಗಳಿಂದ ಅಲಂಕೃತಗೊಂಡಿದ್ದು, ಸೂಕ್ಷ್ಮವಾಗಿ ಕೆತ್ತಲ್ಪಟ್ಟಿದೆ.

ಈ ಶಿಲ್ಪಕ್ಕೆ ಸಂಬಂಧಿಸಿದಂತೆ ಅಲ್ಲಿನ ಸ್ಥಳೀಯರು ಮೂರು ರೀತಿಯ ಐತಿಹ್ಯಗಳನ್ನು ತಿಳಿಸುತ್ತಾರೆ. ಮೊದಲನೆಯದು ಈ ಶಿಲ್ಪದಲ್ಲಿನ ಮೂರು ತಲೆಗಳು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರ (ಶಿವ)ನನ್ನು ಸಂಕೇತಿಸುತ್ತವೆ. ಸೃಷ್ಟಿ, ಕರ್ತೃ, ಲಯ ಈ ಮೂರನ್ನು ತಿಳಿಸುವ ಸಲುವಾಗಿ ಈ ರೀತಿಯ ನಂದಿ ಶಿಲ್ಪವನ್ನು ರಚನೆ ಮಾಡಲಾಗಿದೆ ಎಂದು ತಿಳಿಯುತ್ತದೆ.



ಮೂರು ತಲೆಯ ನಂದಿ ಶಿಲ್ಪ, ಪೂರ್ವ ದ್ವಾರದ ಮುಂಭಾಗ, ವಿರೂಪಾಕ್ಷ ದೇವಾಲಯ, ಹಂಪಿ

ಎರಡನೆಯದು ಈ ಶಿಲ್ಪವು ಮೂರು ಕಾಲಗಳನ್ನು ಸೂಚಿಸುತ್ತದೆ. ಅಂದರೆ ಒಂದು ತಲೆಯ ಭೂತಕಾಲವನ್ನು, ಇನ್ನೊಂದು ವರ್ತಮಾನ ಕಾಲವನ್ನು, ಮತ್ತೊಂದು ತಲೆಯು ಭವಿಷ್ಯತ್ ಕಾಲವನ್ನು ಸಂಕೇತಿಸುತ್ತದೆ. ಹಾಗಾಗಿ ಈ ಶಿಲ್ಪವನ್ನು ತ್ರಿಕಾಲ ಶಿಲ್ಪವೆಂದು ಕರೆಯಲಾಗುತ್ತದೆಂಬುದು ಐತಿಹ್ಯವಾಗಿದೆ.

ಮೂರನೆಯದು ವಿರೂಪಾಕ್ಷ ದೇವರಿಗೆ ಬೆಳಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ ಹೀಗೆ ಮೂರು ಸಮಯದಲ್ಲಿ ಪೂಜೆ ಅಥವಾ ಅಭಿಷೇಕ ಮಾಡುತ್ತಾರೆ. ಇದನ್ನು ಸಂಕೇತಿಸುವ ಸಲುವಾಗಿ ಈ ರೀತಿಯ ಶಿಲ್ಪವನ್ನು ಕೆತ್ತಲ್ಪಟ್ಟಿದೆ. ಇದು ಈ ದೇವಾಲಯದಲ್ಲಿ ನಡೆಯುವ ತ್ರಿಕಾಲ ಪೂಜೆಯನ್ನು ಸೂಚಿಸುತ್ತದೆಂಬುದು ಐತಿಹ್ಯವಾಗಿದೆ. ಹೀಗೆ ಇದೊಂದು ಧಾರ್ಮಿಕ ಐತಿಹ್ಯವನ್ನು ತಿಳಿಸುವ ಶಿಲ್ಪವಾಗಿ ವಿರೂಪಾಕ್ಷನಿಗೆ ಎದುರು ಬಸವಣ್ಣನಾಗಿ ಪ್ರಾಮುಖ್ಯತೆಯನ್ನು ಹೊಂದಿದ್ದು, ಅಪರೂಪದ ಶಿಲ್ಪವೆಂದೇ ಹೇಳಬಹುದು.

೩. ಉದ್ಭವ ಬಸವಣ್ಣ (ನಂದಿ) ಶಿಲ್ಪ

ಈ ಶಿಲ್ಪವು ಹೊಸಪೇಟೆಯಿಂದ ಹಂಪಿಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಅಂದರೆ ಗಾಳೆಮ್ಮ ದೇವಸ್ಥಾನ ಮುಂಭಾಗದಲ್ಲಿ ಸುಮಾರು ೩೦೦ ಮೀಟರ್ ದೂರದಲ್ಲಿ ರಸ್ತೆಯ ಬದಿಯಲ್ಲಿ ಕಂಡುಬರುತ್ತದೆ. ಇದು ಜಂಬುನಾಥೇಶ್ವರನಿಗೆ ಎದುರು ಬಸವಣ್ಣನೆಂಬುದು ಮೌಖಿಕ ಆಕರಗಳಿಂದ ತಿಳಿದುಬರುತ್ತದೆ. ಈ ನಂದಿಯ ಅರ್ಧದೇಹ ಮೇಲಿದ್ದು, ಇನ್ನೂ ಅರ್ಧ ಮಣ್ಣಿನಲ್ಲಿ ಹೂತುಹೋಗಿದೆ. ಹಾಗಾಗಿ ಇದನ್ನು ಉದ್ಭವ ನಂದಿ ಎಂಬುದಾಗಿಯೂ ಕರೆಯವುದುಂಟು. ಈ ನಂದಿಗೆ ಸಂಬಂಧಿಸಿದಂತೆ ಒಂದು ಐತಿಹ್ಯವು ತಿಳಿದುಬರುತ್ತದೆ. ಅದೇನೆಂದರೆ ಈ ನಂದಿಯು ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು ಇದು ಸಂಪೂರ್ಣ ಭೂಮಿಯಿಂದ ಹೊರಬಂದಿದ್ದೇ ಆದರೆ ಅಂದೇ ಪ್ರಳಯವಾಗುತ್ತದೆ ಹಾಗಾಗಿ ಇದು ಪ್ರಳಯದ ಸೂಚನೆ

ಅಥವಾ ಪ್ರತೀಕವಾಗಿದೆ ಎಂಬುದಾಗಿ ಅಲ್ಲಿನ ಸ್ಥಳೀಯರಿಂದ ತಿಳಿದುಬರುತ್ತದೆ. ಆದರೆ ಇದು ವಾಸ್ತವಿಕವಾಗಿ ಪೂರ್ವದಲ್ಲಿ ಮಣ್ಣಿನಲ್ಲಿ ಮುಚ್ಚಿಹೋಗಿದ್ದು ಪ್ರಸ್ತುತ ದಿನಗಳಲ್ಲಿ ಮಣ್ಣಿನ ಸವೆತದಿಂದ ಇದು ಮೇಲೇಳುತ್ತಿರುವಂತೆ ಕಂಡುಬರುತ್ತಿದೆ ಎಂಬುದಾಗಿ ಹೇಳಬಹುದು.

೪. ಏಡಿಗುಡ್ಡ

ಹಂಪಿಯ ತುಲಾಭಾರದಿಂದ ಬಲಬದಿಗೆ ಕಂಡುಬರುವ ಒಂದು ಸ್ಥಳಕ್ಕೆ 'ಏಡಿಗುಡ್ಡ' ಎಂದು ಕರೆಯಲಾಗುತ್ತದೆ. ಇಲ್ಲಿ ಕೋಟೆಗೋಡೆಗೆ ಹೊಂದಿಕೊಂಡಂತೆ ಏಕಶಿಲಾ ಹಾಸಿಗೆಯ ಮೇಲೆ ಕಲ್ಲಿನ ಸಣ್ಣ ಪೊಟರೆಯಿದ್ದು, ಇಲ್ಲಿ ನೀರು ಸದಾ ಜಿನುಗುತ್ತಿರುತ್ತದೆ. ಈ ಸ್ಥಳದಲ್ಲಿ ಸುಮಾರು ಎಂಟು ಅಡಿ ಉದ್ದದ ಏಳು ಹೆಡೆಯ ಸರ್ಪದ ಕೆತ್ತನೆ, ಅದರ ಮುಂದೆಯೇ ನಂದಿಯ ಕೆತ್ತನೆಯೂ ಕಂಡುಬರುತ್ತದೆ. ಇದರ ಪಕ್ಕದಲ್ಲಿಯೇ ಚೌಕಾಕಾರದ ಪಟ್ಟಿಕೆಯೊಂದರಲ್ಲಿ ಮತ್ತೊಂದು ಸರ್ಪವು ಪರಸ್ಪರ ಎದುರುಬದುರಾಗಿರುವ ಬಲಗಾಲಿನ ಎರಡು ಹೆಜ್ಜೆ ಗುರುತುಗಳ ಸುತ್ತ ಸುತ್ತಿಕೊಂಡಿದೆ. ಇದರ ಬಗೆಗಿನ ಐತಿಹ್ಯವೊಂದು ಹೀಗಿದೆ.[೮೮]



ಏಡಿಗುಡ್ಡದ ಐತಿಹ್ಯವನ್ನು ತಿಳಿಸುವ ಶಿಲ್ಪ, ರಾಜತುಲಾಭಾರದ ಸಮೀಪ, ಹಂಪಿ

ಹಿಂದೆ ಒಮ್ಮೆ ಬೆಂಕಿ ಮಳೆ ಅಥವಾ ಪ್ರಳಯದಿಂದ ಭೂಲೋಕವೆಲ್ಲಾ ಸುಟ್ಟು ಭಸ್ಮವಾಗಿತ್ತು. ಆಕಾಲದಲ್ಲಿ ಅಣ್ಣತಂಗಿಯರಿಬ್ಬರು ಇಲ್ಲಿನ ಏಡಿ-ಗುಡ್ಡದೊಳಗೆ ಸೇರಿಕೊಂಡು ಜೀವ ಉಳಿಸಿಕೊಂಡರು. ಇಂತಹ ಸಂದರ್ಭದಲ್ಲಿ ಶಿವ ಪಾರ್ವತಿಯರು ಭೂಲೋಕವನ್ನು ಸುತ್ತಲು ಬಂದರು. ನಮ್ಮನ್ನು ಪೂಜಿಸುತ್ತಿರುವವರು ಹಾಗೂ ಆರಾಧಿ-ಸುವವರು ಯಾರೂ ಇಲ್ಲವಲ್ಲ ಮುಂದೆ ಮಾನವ ಸಂತತಿಯ ಸೃಷ್ಟಿ ಹೇಗೆ? ಎಂದು ಅವರಿಗೆ ಚಿಂತೆಯಾಯಿತು. ಹೀಗೆ ಆಕಾಶ ಮಾರ್ಗವಾಗಿ ಅವರು ಹೋಗುತ್ತಿರುವಾಗ ಕಲ್ಲಿನ ಪೊಟರೆಯಿಂದ ಸೂಜಿಗಾತ್ರದ ಹೊಗೆ ಕಂಡಿತು. ತಕ್ಷಣ ಪಾರ್ವತಿ ಶಿವನಿಗೆ ಅದನ್ನು ತೋರಿಸುತ್ತಾಳೆ. ಶಿವ ಆಲಿಕಲ್ಲಿನ ಮಳೆ ಬರುವಂತೆ ಮಾಡಿ ಭೂಮಿಗೆ ತಂಪೆರಗುತ್ತಾನೆ. ಬೆಂಕಿ ಆರಿದ ಮೇಲೆ ಶಿವನು ಅಡಗಿ ಕುಳಿತ ಅಣ್ಣ-ತಂಗಿಯನ್ನು ಕಲ್ಲಿನ ಪೊಟರೆಯಿಂದ ಹೊರಬರುವಂತೆ ಹೇಳುತ್ತಾನೆ. ಹೆದರುತ್ತಾ ಹೊರಬಂದ ಅಣ್ಣ-ತಂಗಿಯರನ್ನು ಕುರಿತು ವಿಚಾರಿಸಿದಾಗ ನಾವು ಅಣ್ಣ-ತಂಗಿಯರು ಇಲ್ಲಿ ರಕ್ಷಣೆ ಪಡೆದು ಇದ್ದೇವೆ ಎಂದರಂತೆ. ಶಿವ ಪಾರ್ವತಿಯರು ನೋಡಿ ಪ್ರಪಂಚವೇ ಭಸ್ಮವಾಗಿದೆ. ಭೂಮಿಯ ಮೇಲೆ ನಿಮ್ಮನ್ನು ಬಿಟ್ಟರೆ ಒಂದು ಜೀವಾತ್ಮವೂ ಇಲ್ಲ. ಆದ್ದರಿಂದ ನಿಮ್ಮಿಂದಲೇ ಭೂಮಿಯ ಮೇಲೆ ಜೀವಿಗಳ ಸೃಷ್ಟಿಯಾಗಬೇಕು ಎಂದರಂತೆ. ಅದಕ್ಕೆ ಆ ಅಣ್ಣ-ತಂಗಿ ಇದು ಸಾಧ್ಯವಿಲ್ಲ. ಇದಕ್ಕೆ ನಾವು ಒಪ್ಪುವುದಿಲ್ಲ ಎನ್ನುತ್ತಾರೆ. ಆಗ ಶಿವ ಪಾರ್ವತಿ ಈ ಇಬ್ಬರಿಂದಲೇ ಈ ಭೂಮಿಯ ಮೇಲೆ ಮಾನವ ಪ್ರಾಣಿ

ಸಂತತಿ ಹುಟ್ಟುವುದು ಎಂದು ತಿಳಿದು ಅವರ ಬುದ್ಧಿ ಮರೆವು ಮಾಡಿದರು. ಅನಂತರ ಇಬ್ಬರನ್ನು ಪರಸ್ಪರ ಎದುರುಬದುರು ನಿಲ್ಲಿಸಿ ನೀವುಗಳು ಏನಾಗಬೇಕೆಂದು ಕೇಳಿದಾಗ ಅವರು ನಾವು ಗಂಡ-ಹೆಂಡತಿಯರಾಗಬೇಕು ಎಂದು ಹೇಳಿದರು. ತಕ್ಷಣ ಶಿವನು ತನ್ನ ಕೊರಳಲ್ಲಿನ ಸರ್ಪವನ್ನು ಅವರಿಗೆ ರಕ್ಷಣೆಯಾಗಿಟ್ಟು, ಭೂಮಿಯ ಮೇಲೆ ಮಾನವ ಸಂತತಿಯ ಬೆಳವಣಿಗೆಗೆ ಅನುವು ಮಾಡಿದನಂತೆ. ಹೀಗೆ ಈ ಐತಿಹ್ಯವು ಹಂಪಿ ಪರಿಸರದಲ್ಲಿ ತುಂಬಾ ಜನಪ್ರಿಯವಾಗಿದೆ. ಹೀಗೆ ಹಂಪಿ ಪರಿಸರದಲ್ಲಿ ಸಾಕಷ್ಟು ರೀತಿಯ ಐತಿಹ್ಯಗಳಿದ್ದು, ಅವುಗಳಲ್ಲಿ ಧಾರ್ಮಿಕತೆಗೆ ಸಂಬಂಧಿಸಿದ ಕೆಲವು ಪ್ರಮುಖವಾದಂತಹ ಐತಿಹ್ಯಗಳನ್ನು ವಿವರಿಸಲಾಗಿದ್ದು, ಇಂತಹ ಐತಿಹ್ಯಗಳಲ್ಲಿಯೂ ಪ್ರಾಣಿಗಳ ಪಾತ್ರ ಮತ್ತು ಮಹತ್ವಗಳನ್ನು ತಿಳಿಸಲಾಗಿದೆ.

ನಾಥಪಂಥದ ಶಿಲ್ಪಗಳಲ್ಲಿ ಪ್ರಾಣಿ ಶಿಲ್ಪಗಳು

ಹಂಪಿ ಪರಿಸರದಲ್ಲಿ ಮೀನು, ಚೇಳು, ಆಮೆ, ಹಾವು ಹೀಗೆ ಮುಂತಾದ ಪ್ರಾಣಿಗಳ ಮೇಲೆ ಯೋಗಿ ವಿವಿಧ ಭಂಗಿಯಲ್ಲಿ ಕುಳಿತು ಯೋಗದಂಡವನ್ನು ಹಿಡಿದಿರುವಂತೆ ಕೆತ್ತಿರುವ ಶಿಲ್ಪಗಳನ್ನು ನಾಥಪಂಥದ ಶಿಲ್ಪಗಳೆಂದು ಗುರುತಿಸಲಾಗಿದೆ.

ನಾಥ ಸಂಪ್ರದಾಯವು ಮತ್ಸ್ಯೇಂದ್ರನಾಥನಿಂದ ಸ್ಥಾಪಿಸಲ್ಪಟ್ಟ ಗೋರಕನಾಥನಿಂದ ಹೆಚ್ಚು ಪ್ರಸಿದ್ಧಿಯನ್ನು ಪಡೆದುದಾಗಿದೆ. ಇವರನ್ನು ನಾಥ, ಯೋಗಿ, ಸಿದ್ಧರೆಂದು ಕರೆಯಲಾಗುತ್ತದೆ. ಇವರು ಶಿವ ಮತ್ತು ಶಕ್ತಿಯ ಆರಾಧಕರಾಗಿದ್ದು, ಬೈರವ ಇವರ ಆರಾಧ್ಯ ದೈವವಾಗಿರುವುದು ತಿಳಿದುಬರುತ್ತದೆ.[೮೯] ಕರ್ನಾಟಕದ ಕರಾವಳಿ ತೀರದ ಮಂಗಳೂರಿನ ಕದಿರೆಯಲ್ಲಿ ಮತ್ತು ಆಂಧ್ರದ ಶ್ರೀಶೈಲದಲ್ಲಿ ಇಂದಿಗೂ ನಾಥಪಂಥಕ್ಕೆ ಸಂಬಂಧಿಸಿದ ಮಠಗಳಿದ್ದು[೯೦] ಧರ್ಮಸ್ಥಳದ ಮಂಜುನಾಥ ದೇವಾಲಯವು ಇವರ ಸಂಪ್ರದಾಯದ ಕೇಂದ್ರವಾಗಿದೆ.[೯೧]

ಈ ನಾಥ ಸಂಪ್ರದಾಯವು ಕರ್ನಾಟಕ ಭಾರತದಲ್ಲಷ್ಟೇ ಅಲ್ಲದೆ ಪಕ್ಕದ ನೇಪಾಳ ಮತ್ತು ಚೀನಾ ದೇಶಗಳಲ್ಲಿಯೂ ನೆಲೆಯೂರಿದ್ದು ಇಂದಿಗೂ ಜೀವಂತ ಧರ್ಮವಾಗಿದೆ.[೯೨] ಈ ರೀತಿ ಪ್ರಭಾವವನ್ನು ಹೊಂದಿರುವ ನಾಥ ಮುನಿಗಳ ಶಿಲ್ಪಗಳು ಕರ್ನಾಟಕದ ಹಂಪಿಯಲ್ಲಿಯೂ ಹೇರಳವಾಗಿ ಕಂಡುಬಂದಿದ್ದು, ಹಂಪಿಯು ನಾಥಸಂಪ್ರದಾಯದ ಕೇಂದ್ರವಾಗಿತ್ತೆಂದೇ ಹೇಳಬಹುದು. ಇಲ್ಲಿ ನಾಥಸಂಪ್ರದಾಯದ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡುವುದರ ಜೊತೆಗೆ ನಾಥಮುನಿಗಳ ವಾಹನಗಳಾದ ಪ್ರಾಣಿಗಳನ್ನು ಹಾಗೂ ಅವುಗಳ ಪ್ರಾಮುಖ್ಯತೆಯನ್ನು ಇಲ್ಲಿ ವಿವರಿಸಲಾಗಿದೆ.

ಹಂಪಿ ಪರಿಸರದಲ್ಲಿ ಈ ನಾಥಮುನಿಗಳ ಶಿಲ್ಪಗಳು ಸಾಮಾನ್ಯವಾಗಿ ಪ್ರದೇಶದ್ವಾರದ ಪಟ್ಟಿಕೆಗಳಲ್ಲಿ ಮತ್ತು ದೇವಾಲಯದ ಭಿತ್ತಿಗಳಲ್ಲಿ ಕಂಡುಬಂದರೂ, ಹೆಚ್ಚಾಗಿ ದೇವಾಲಯಗಳ ಕಂಬಗಳಲ್ಲಿ ಕಂಡುಬರುತ್ತವೆ. ಈ ನಾಥ ಸಂಪ್ರದಾಯದ ಪ್ರಮುಖ ನಾಥರೆಂದರೇ ಮತ್ಸ್ಯೇಂದ್ರನಾಥರು ಇವರು ಮೀನಿನ ಮೇಲೆ ಕುಳಿತು ಯೋಗದಂಡವನ್ನು ಹಿಡಿದಿರುತ್ತಾರೆ.

ಹಂಪಿ ಪರಿಸರದ ದೇವಾಲಯಗಳಲ್ಲಿನ ಮತ್ಸ್ಯೇಂದ್ರನಾಥ ಶಿಲ್ಪಗಳ ಕೋಷ್ಟಕ

ಕ್ರ.ಸಂ.	ದೇವಾಲಯಗಳು	ಶಿಲ್ಪಗಳ ಸಂಖ್ಯೆ
೦೧.	ಅಚ್ಯುತರಾಯ ದೇವಾಲಯ, ಹಂಪಿ	೩೩
೦೨.	ಶ್ರೀವಿರೂಪಾಕ್ಷ ದೇವಾಲಯ, ಹಂಪಿ	೧೦
೦೩.	ಅನಂತಶಯನ ದೇವಾಲಯ, ಅನಂತಶಯನಗುಡಿ	೦೮
೦೪.	ವೇಣುಗೋಪಾಲಸ್ವಾಮಿ ದೇವಾಲಯ, ತಿಮ್ಮಲಾಪುರ	೦೬
೦೫.	ಶಿವ ದೇವಾಲಯ, ತಿಮ್ಮಲಾಪುರ	೦೬
೦೬.	ಶ್ರೀಜಂಬುನಾಥೇಶ್ವರ ದೇವಾಲಯ, ಜಂಬುನಾಥನಹಳ್ಳಿ	೦೫
೦೭.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೦೫
೦೮.	ಕಡ್ಲೆಕಾಳು ಗಣೇಶ ದೇವಾಲಯ, ಹಂಪಿ	೦೪
೦೯.	ಹಜಾರರಾಮ ದೇವಾಲಯ, ಹಂಪಿ	೦೩
೧೦.	ಪಟ್ಟಾಭಿರಾಮ ದೇವಾಲಯ, ಕಮಲಾಪುರ	೦೩
೧೧.	ಶ್ರೀರಂಗನಾಥಸ್ವಾಮಿ ದೇವಾಲಯ, ಆನೆಗುಂದಿ	೦೩
೧೨.	ಕೃಷ್ಣ ದೇವಾಲಯ, ಹಂಪಿ	೦೨
೧೩.	ನೆಲಸ್ತರದ ಶಿವಾಲಯ, ಹಂಪಿ	೦೨
೧೪.	ಚಂಡಿಕೇಶ್ವರ ದೇವಾಲಯ, ಹಂಪಿ	೦೧
೧೫.	ಕುದುರೆಗೊಂಬೆ ಮಂಟಪ, ಹಂಪಿ	೦೧
	ಒಟ್ಟು -	**೯೨**


ಹಂಪಿ ಪರಿಸರದಲ್ಲಿ ಒಟ್ಟು ೯೨ ಮತ್ಸ್ಯೇಂದ್ರನಾಥ ಶಿಲ್ಪಗಳು ಕಂಡುಬಂದಿವೆ. ಅದರಲ್ಲಿ ಅಚ್ಯುತರಾಯ ದೇವಾಲಯ ಒಂದರಲ್ಲಿ ೩೩ ಶಿಲ್ಪಗಳು ದೊರಕಿದ್ದು, ಅತಿ ಹೆಚ್ಚು ಮತ್ಸ್ಯೇಂದ್ರನಾಥ ಶಿಲ್ಪಗಳನ್ನು ಹೊಂದಿರುವ ದೇವಾಲಯ ಇದಾಗಿದೆ.

ಅಚ್ಯುತರಾಯ ದೇವಾಲಯದ ನೂರು ಕಂಬಗಳ ಮಂಟಪದ ಒಂದು ಕಂಬದಲ್ಲಿನ ಮತ್ಸ್ಯೇಂದ್ರನಾಥ ಶಿಲ್ಪದಲ್ಲಿ ನಾಥನು ಮೀನಿನ ಮೇಲೆ ಆಸೀನವಾಗಿದ್ದು, ಯೋಗಭಂಗಿಯಲ್ಲಿ ಕುಳಿತಿರುವನು. ನಾಥನು ಎರಡು ಮೊಣಕಾಲುಗಳನ್ನು ತನ್ನ ಎರಡು ಕೈಗಳಿಂದ ತಬ್ಬಿಕೊಂಡಂತೆ ಹಾಗೂ ವಿವಿಧ ರೀತಿಯ ಆಭರಣಗಳನ್ನು ಧರಿಸಿರುವಂತೆಯೂ ತೋರಲಾಗಿದೆ. ನಾಥನ ಬಲಭಾಗದಲ್ಲಿ ಚಿಕ್ಕದಾಗಿ ಶಿವಲಿಂಗವನ್ನು, ಎಡಭಾಗದಲ್ಲಿ ತ್ರಿಶೂಲವನ್ನು ತೋರಿಸಿದ್ದು, ಅವು ಮೀನಿನ ಮೇಲೆ ಇಟ್ಟಂತೆ ಕೆತ್ತಲಾಗಿದೆ. ಇಲ್ಲಿ ನಾಥನ ವಾಹನವಾದ ಮೀನಿನ ಕೊರಳ ಭಾಗದಲ್ಲಿ ಎರಡು ಗೆರೆಗಳಿದ್ದು ಅದು ಪಟ್ಟಿಕೆಯಂತೆ ಕಂಡುಬರುತ್ತದೆ. ಮೀನಿನ ದೇಹದ ಮಧ್ಯಭಾಗದಲ್ಲಿ ಉಬ್ಬಿದ ಗೆರೆಯೊಂದನ್ನು ತೋರಲಾಗಿದ್ದು ಈ

ಲಕ್ಷಣಗಳ ಆಧಾರದ ಮೇಲೆ ಈ ಶಿಲ್ಪದಲ್ಲಿನ ಮೀನು ಸಿಪ್ರಿನಿಪಾರ್ಮಿಸ್ (*Spriniformes*) ಗಣದ, ಸಿಪ್ರಿನಿಡೆ (*Siprinidae*) ಕುಟುಂಬಕ್ಕೆ ಸೇರಿದ ಪುಂಟಿಯಸ್ ಜಾತಿಯ ಮೀನು ಎಂಬುದಾಗಿ ಗುರುತಿಸಲಾಗಿದ್ದು, ಪುಂಟಿಯಾಸ್ ಫಿಲಮೆಂಟೋಸಸ್ (*Puntius filamnetosus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೯೩] ಇದೇ ತಳಿಯ ಮೀನನ್ನು ವಾಹನವನ್ನಾಗಿ ಹೊಂದಿರುವ ಮತ್ಸೇಂದ್ರನಾಥ ಶಿಲ್ಪಗಳು ವಿರೂಪಾಕ್ಷ, ಕೆಳಸ್ತರದ ಶಿವಾಲಯ ಮತ್ತು ಅನಂತಶಯನ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ.




ಪುಂಟಿಯಸ್ ಜಾತಿಯ ಮೀನು
ಗಣ : ಸಿಪ್ರಿನಿಫಾರ್ಮಿಸ್
ಕುಟುಂಬ : ಸಿಪ್ರಿನಿಡೆ



ಮತ್ಸೇಂದ್ರನಾಥ ಶಿಲ್ಪ, ಅಚ್ಯುತರಾಯ ದೇವಾಲಯ, ಹಂಪಿ



ಎಟ್ರೋಪ್ಲಸ್ ತಳಿಯ ಮೀನು
ಗಣ : ಪರ್ಸಿಫಾರ್ಮಿಸ್
ಕುಟುಂಬ : ಸಿಕ್ಲಿಡೆ



ಮತ್ಸೇಂದ್ರನಾಥ ಶಿಲ್ಪ, ಅಚ್ಯುತರಾಯ ದೇವಾಲಯ, ಹಂಪಿ



ಗೆಂಡೆ ಮೀನು
ಗಣ : ಸಿಪ್ರಿನಿಫಾರ್ಮಿಸ್
ಕುಟುಂಬ : ಸಿಪ್ರಿನಿಡೆ



ಮತ್ಸೇಂದ್ರನಾಥ ಶಿಲ್ಪ, ಕಡಲೆಕಾಳು ಗಣೇಶ ದೇವಾಲಯ, ಹಂಪಿ













ಇದೇ ದೇವಾಲಯದ ಎರಡನೇ ಸುತ್ತಿನ ಪ್ರಕಾರ ಗೋಡೆಯ ಒಳಭಾಗದ ಮತ್ತೊಂದು ಮತ್ಸ್ಯೇಂದ್ರನಾಥನ ಶಿಲ್ಪದಲ್ಲಿ ನಾಥನು ಪಧ್ಮಾಸನದಲ್ಲಿ ಕುಳಿತು ತನ್ನ ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸುತ್ತಿರುವಂತೆ ತೋರಿಸಿದ್ದು, ವಾಹನವಾದ ಮೀನನ್ನು ನಾಥನಿಗಿಂತ ದೊಡ್ಡದಾಗಿಯೂ ಹಾಗೂ ಮೀನಿನ ದೇಹದ ಭಾಗಗಳಾದ ಬಾಯಿ, ಕಣ್ಣು, ರೆಕ್ಕೆ ಮತ್ತು ಬಾಲಗಳನ್ನು ಸ್ಪಷ್ಟವಾಗಿ ಕೆತ್ತಿದ್ದು, ಇತರೆ ಮೀನುಗಳಿಗಿಂತ ಇದನ್ನು ಭಿನ್ನವಾಗಿ ತೋರಲಾಗಿದೆ. ಈ ಶಿಲ್ಪದಲ್ಲಿನ ಮೀನಿನ ದೇಹ ಲಕ್ಷಣಗಳ ಆಧಾರದ ಮೇಲೆ ಇದನ್ನು ಪರ್ಸಿಫಾರ್ಮಿಸ್ (*Perciformes*) ಗಣದ, ಸಿಕ್ಲಿಡೆ (*Sicledae*) ಕುಟುಂಬಕ್ಕೆ ಸೇರಿದ ಎಟ್ರೋಪ್ಲಸ್ ಮೀನು ಎಂಬುದಾಗಿ ಗುರುತಿಸಲಾಗಿದ್ದು ಎಟ್ರೋಪ್ಲಸ್ ಕೆನರನ್ಸಿಸ್ (*Etroplus canarencis*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೯೪]

ಮತ್ಸ್ಯೇಂದ್ರನಾಥನ ಮತ್ತೊಂದು ಪ್ರಮುಖ ಮತ್ತು ವಿಭಿನ್ನ ಶಿಲ್ಪ ಕಡಲೆಕಾಳು ಗಣೇಶ ದೇವಾಲಯದ ಮುಖಮಂಟಪದ ಕಂಬದಲ್ಲಿದ್ದು, ಇದರಲ್ಲಿ ಮೀನಿನ ಮೇಲೆ ನಿಂತಿರುವ ನಾಥನು ತನ್ನ ಬಲಗಾಲಿನ ಮೊಣಕಾಲನ್ನು ಮೀನಿನ ಮೇಲೆ ಊರಿ, ಎರಡು ಕೈಗಳನ್ನು ತಲೆಯ ಮೇಲ್ಭಾಗದವರೆಗೆ ಎತ್ತಿ ಹಿಡಿದು ನಾಟ್ಯ ಮಾಡುತ್ತಿರುವ ಭಂಗಿಯಲ್ಲಿ ತೋರಲಾಗಿದೆ. ಇಲ್ಲಿ ನಾಥ ಯಾವುದೇ ರೀತಿಯ ದಂಡ, ಆಯುಧಗಳಾಗಲಿ ಹಿಡಿದಿರುವಂತೆ ತೋರಿಸಿಲ್ಲ. ಇದೇ ರೀತಿಯ ಶಿಲ್ಪವು ತಿಮ್ಮಲಾಪುರದ ವೇಣುಗೋಪಾಲಸ್ವಾಮಿ ದೇವಾಲಯ ಮುಖಮಂಟಪದ ಕಂಬದಲ್ಲಿ ಕಂಡುಬರುತ್ತದೆಯಾದರೂ ಇಲ್ಲಿ ಮೀನಿನ ಮೇಲೆ ನಿಂತಿರದೇ ಕುಳಿತಂತೆಯೂ, ಹಾಗೂ ತನ್ನ ಎರಡೂ ಕೈಗಳನ್ನು ಮೇಲೆತ್ತಿ ಯೋಗದಂಡವನ್ನು ಹಿಡಿದಿರುವಂತೆ ತೋರಲಾಗಿರುವುದು ಸ್ವಲ್ಪಮಟ್ಟಿನ ಭಿನ್ನತೆಯನ್ನು ತೋರಿಸುತ್ತದೆ. ಈ ಶಿಲ್ಪಗಳಲ್ಲಿನ ಮೀನಿನ ದೇಹ ಲಕ್ಷಣಗಳ ಆಧಾರದ ಮೇಲೆ ಇವು ಕರ್ನಾಟಕದ ಗೆಂಡೆಮೀನು ಎಂದು ಗುರುತಿಸಲಾಗಿದ್ದು ಪುಂಟಿಯಸ್ ಕರ್ನಾಟಿಕಸ್ (*Puntius karnaticus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೯೫]

ಈ ಮೇಲಿನ ತಳಿಗಳನ್ನು ಹೊರತುಪಡಿಸಿದರೆ ಹಂಪಿ ಪರಿಸರದಲ್ಲಿನ ಬಹುತೇಕ ಮತ್ಸ್ಯೇಂದ್ರನಾಥನ ಶಿಲ್ಪಗಳಲ್ಲಿ ಕರ್ನಾಟಕದ ಗೆಂಡೆಮೀನನ್ನೇ ನಾಥರ ವಾಹನಗಳಾಗಿ ತೋರಿಸಿರುವುದು ಕಂಡುಬರುತ್ತದೆ. ಇಲ್ಲಿ ಶಿಲ್ಪಿಯಾದವನು ಮೀನಿನ ಭಾಗಗಳನ್ನು ಸ್ಪಷ್ಟವಾಗಿ, ಸೂಕ್ಷ್ಮವಾಗಿ ಕೆತ್ತಿರುವುದರಿಂದ ಅವುಗಳ ತಳಿಗಳನ್ನು ಗುರುತಿಸಲು ಸಾಧ್ಯವಾಗಿದ್ದು, ಹಲವು ತಳಿಗಳ ಮೀನುಗಳನ್ನು ನಾಥರ ವಾಹನಗಳಾಗಿ ತೋರಿಸುವಲ್ಲಿ ಶಿಲ್ಪಿಯು ಯಶಸ್ವಿಯಾಗಿದ್ದಾನೆ. ಇದು ಆ ಶಿಲ್ಪಿಯು ಮೀನುಗಳ ವಿವಿಧ ತಳಿಗಳ ಬಗೆಗಿನ ಜ್ಞಾನವನ್ನು ಹೊಂದಿದ್ದಾನೆಂಬುದು ತಿಳಿದುಬರುತ್ತದೆ.

ಹಂಪಿ ಪರಿಸರದಲ್ಲಿನ ಕೆಲವು ಪ್ರಮುಖ ಮತ್ಸ್ಯೇಂದ್ರನಾಥನ ಶಿಲ್ಪಗಳನ್ನು ಇಲ್ಲಿ ವಿವರಿಸಲಾಗಿದ್ದು, ಇನ್ನುಳಿದ ಎಲ್ಲಾ ಶಿಲ್ಪಗಳು ಒಂದೇ ರೀತಿಯ ಸಾಮ್ಯತೆಯನ್ನು ಹೊಂದಿವೆ. ಆದರೂ ಕೆಲವು ಶಿಲ್ಪಗಳಲ್ಲಿ ಮೀನಿನ ಆಕಾರ ಮತ್ತು ಗಾತ್ರದಲ್ಲಿ ಬದಲಾವಣೆಗಳು ಕಂಡುಬರುತ್ತವೆ. ಹಾಗೆಯೇ ಕೆಲವು ಶಿಲ್ಪಗಳಲ್ಲಿ ಮೀನಿನ ಮೇಲೆ ಆಸೀನನಾದ ನಾಥನು ವಿವಿಧ ಭಂಗಿಗಳಲ್ಲಿ ಕುಳಿತಿರುವಂತೆ ಮತ್ತು ಕೆಲವು ಶಿಲ್ಪಗಳಲ್ಲಿ ನಿಂತು ನಾಟ್ಯ ಮಾಡುತ್ತಿರುವಂತೆ ಯೋಗದಂಡ, ಪುಷ್ಪ, ತಂಬೂರಿ ಮುಂತಾದವುಗಳನ್ನು ಕೈಗಳಲ್ಲಿ

ಹಿಡಿದಿರುವಂತೆ ತೋರಿಸಿದ್ದರಿಂದ ಶಿಲ್ಪಗಳಲ್ಲಿ ಭಿನ್ನತೆಯಿರುವುದು ತಿಳಿದುಬರುತ್ತದೆ. ಶಿಲ್ಪಗಳನ್ನು ಹಲವು ಶಿಲ್ಪಿಗಳು ಕೆತ್ತಿರುವುದರಿಂದ ಈ ರೀತಿಯ ಭಿನ್ನತೆಗಳು ಕಂಡುಬರುವುದು ಸಹಜ ಎಂದು ಹೇಳಬಹುದು. ಹಂಪಿ ಪರಿಸರದಲ್ಲಿ ಇತರೆ ನಾಥರ ಶಿಲ್ಪಗಳು ಸಹ ಕಂಡುಬಂದಿವೆ. ಅವುಗಳಲ್ಲಿ ಆಮೆಯ ಮೇಲೆ, ಸರ್ಪದ ಮೇಲೆ ಹಾಗೂ ವೃಶ್ಚಿಕ ಅಥವಾ ಚೇಳಿನ ಮೇಲೆ ಕುಳಿತ ನಾಥರ ಶಿಲ್ಪಗಳು ಪ್ರಮುಖವಾಗಿದ್ದು, ಕಡಿಮೆ ಸಂಖ್ಯೆಯಲ್ಲಿ ಕಂಡುಬಂದಿರುತ್ತವೆ. ಇದರಲ್ಲಿ ಮುಖ್ಯವಾಗಿ ವೃಶ್ಚಿಕ ಅಥವಾ ಚೇಳಿನ ಮೇಲೆ ಕುಳಿತ ನಾಥನನ್ನು ವೃಶ್ಚಿಕೇಂದ್ರನಾಥ ಅಥವಾ ಭೈರವನಾಥನೆಂದು ಹೇಳಲಾಗಿದೆ.[೯೬]

ಹಂಪಿ ಪರಿಸರದ ದೇವಾಲಯಗಳಲ್ಲಿನ ವೃಶ್ಚಿಕೇಂದ್ರನಾಥ ಶಿಲ್ಪಗಳ ಕೋಷ್ಟಕ

ಕ್ರಸಂ.	ದೇವಾಲಯಗಳು	ಶಿಲ್ಪಗಳ ಸಂಖ್ಯೆ
೦೧.	ಅಚ್ಯುತರಾಯ ದೇವಾಲಯ, ಹಂಪಿ	೦೧
೦೨.	ತಳವಾಘಟ್ಟದ್ವಾರದ ದಕ್ಷಿಣಕ್ಕೆ ಇರುವ ಚಿಕ್ಕ ದೇವಾಲಯ, ಹಂಪಿ	೦೧
೦೩.	ಶಿವ ದೇವಾಲಯ, ತಿಮ್ಮಲಾಪುರ	೦೧
ಒಟ್ಟು –		೦೩

ವೃಶ್ಚಿಕೇಂದ್ರನಾಥನ ಶಿಲ್ಪಗಳು ಹಂಪಿ ಪರಿಸರದಲ್ಲಿ ಕೇವಲ ಮೂರು ಶಿಲ್ಪಗಳು ಮಾತ್ರ ಕಂಡುಬಂದಿವೆ. ಅವುಗಳಲ್ಲಿ ಒಂದು ಅಚ್ಯುತರಾಯ ದೇವಾಲಯದ ನೂರು ಕಂಬಗಳ ಮಂಟಪದ ಕಂಬದಲ್ಲಿ ಕಂಡುಬಂದಿದ್ದು, ಈ ಶಿಲ್ಪದಲ್ಲಿ ನಾಥನು ಚಲಿಸುತ್ತಿರುವ ದೊಡ್ಡ ಚೇಳಿನ ಮೇಲೆ ಕುಳಿತಿದ್ದು ತನ್ನ ಬಲಗೈನಿಂದ ಎಡಗಾಲಿನ ಪಾದವನ್ನು ಹಿಡಿದಿದ್ದು, ಬಲಗೈನಲ್ಲಿ ಕೊಳವೆಯಾಕಾರದ ವಸ್ತುವಿನಲ್ಲಿ ಮಾಧಕ ಸೇವನೆ ಮಾಡುತ್ತಿರುವಂತೆಯೂ ಹಾಗೂ ಈತನ ತಲೆಯ ಮೇಲೆ ಟೋಪಿಯಂತಹ ಉಡುಗೆಯೊಂದನ್ನು ಧರಿಸಿದ್ದು, ತಲೆಯ ಭಾಗವು ಎಡಭಾಗಕ್ಕೆ ವಾಲಿದಂತೆಯೂ ತೋರಲಾಗಿದೆ. ಜೊತೆಗೆ ಈತನ ಬಲಭಾಗದಲ್ಲಿ ತ್ರಿಶೂಲವನ್ನು ಆ ತ್ರಿಶೂಲಕ್ಕೆ ತಂಬೂರಿಯನ್ನೂ ನೇತು ಹಾಕಿರುವಂತೆ ಬಿಡಿಸಲಾಗಿದೆ. ಹಾಗೆಯೇ ನಾಥನ ವಾಹನವಾದ ಚೇಳಿನ ದೇಹದ ಭಾಗಗಳಾದ ಮುಂಭಾಗದ ಕೊಂಡಿ, ಕಾಲುಗಳು ಮತ್ತು ಹಿಂಭಾಗದ ಬಾಲದಲ್ಲಿನ ವಿಷದ ಕೊಂಡಿಯನ್ನು ಸೂಕ್ಷ್ಮವಾಗಿ ಬಿಡಿಸಲಾಗಿದೆ.




ಚೇಳು
ಗಣ : ಸ್ಕಾರ್ಪನೇಸ್
ಕುಟುಂಬ : ಬೂತಿಡೆ



ವೃಶ್ಚಿಕೇಂದ್ರನಾಥ ಶಿಲ್ಪ, ಅಚ್ಯುತರಾಯ ದೇವಾಲಯ, ಹಂಪಿ



ವೃಶ್ಚಿಕೇಂದ್ರನಾಥ ಶಿಲ್ಪ, ತಳವಾರಘಟ್ಟ ದ್ವಾರದ ದಕ್ಷಿಣಕ್ಕಿರುವ ದೇವಾಲಯ, ಹಂಪಿ



ವೃಶ್ಚಿಕೇಂದ್ರನಾಥ ಶಿಲ್ಪ, ಶಿವ ದೇವಾಲಯ, ತಿಮ್ಮಲಾಲಪುರ

ಈ ಶಿಲ್ಪವು ಸ್ಕಲ್ಪಚರ್ ಅರ್ಟ್ ವಿಜಯನಗರ ಎಂಬ ಗ್ರಂಥದಲ್ಲಿ ಉಲ್ಲೇಖವಾಗಿದ್ದು,[೬೭] ಇಲ್ಲಿ ದೊಡ್ಡ ಗಾತ್ರದ ಚೇಳಿನ ಮೇಲೆ ಯೋಗಿ ವಿಶ್ರಾಂತಿ ಪಡೆಯುತ್ತಿದ್ದು, ಕೊಳವೆಯಾಕಾರದ ವಸ್ತುವಿನಲ್ಲಿ ಬಹುಶಃ ಮಾಧಕ ಸೇವನೆ ಮಾಡುತ್ತಿದ್ದಾನೆಂದು ಹೇಳಿರುವುದು ಗಮನಾರ್ಹವಾಗಿದೆ.

ವೃಶ್ಚಿಕೇಂದ್ರನಾಥ ಅಥವಾ ಬೈರವನಾಥನ ಮತ್ತೊಂದು ಶಿಲ್ಪ ವಿಜಯವಿಠಲ ದೇವಾಲಯಕ್ಕೆ ಹೋಗುವ ರಸ್ತೆ ಮಧ್ಯದಲ್ಲಿ ಬರುವ ತಳವಾರಘಟ್ಟ ದ್ವಾರದ ದಕ್ಷಿಣಕ್ಕೆ ಗದ್ದೆಯಲ್ಲಿನ ಒಂದು ಚಿಕ್ಕ ದೇವಾಲಯದಲ್ಲಿ ಕಂಡುಬರುತ್ತದೆ. ಈ ಶಿಲ್ಪವು ಮುಖಮಂಟಪದ ಕಂಬದಲ್ಲಿದ್ದು ಪಶ್ಚಿಮಕ್ಕೆ ಅಭಿಮುಖವಾಗಿದೆ. ಈ ಶಿಲ್ಪದಲ್ಲಿ ನಾಥನು ಚೇಳಿನ ಮೇಲೆ ಕುಳಿತಂತೆ ಬಿಡಿಸಿದ್ದು, ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿರುವಂತೆ ಕೆತ್ತಲಾಗಿದೆ. ಶಿಲ್ಪದಲ್ಲಿನ ಚೇಳಿಗೆ ಮುಂಭಾಗದ ಕೊಂಡಿಗಳನ್ನು ಮತ್ತು ಹಿಂಭಾಗದ ವಿಷದ ಕೊಂಡಿಯನ್ನು ಮಾತ್ರ ಬಿಡಿಸಿದ್ದು, ಕಾಲುಗಳನ್ನು ಬಿಡಿಸಿಲ್ಲದಿರುವುದು ಕಂಡುಬರುತ್ತದೆ. ಶಿಲ್ಪವನ್ನು ಇಲ್ಲಿ ಸ್ಪಷ್ಟವಾಗಿ ಬಿಡಿಸಿಲ್ಲದ ಕಾರಣ ಇದನ್ನು ಇನ್ನೂ ನಿರ್ಮಾಣದ ಹಂತದಲ್ಲಿಯೇ ಕೈಬಿಟ್ಟಿರಬಹುದು. ಅಥವಾ ನಿಪುಣನಲ್ಲದ ಶಿಲ್ಪಿ ಇದನ್ನು ಕೆತ್ತಿರಬಹುದೆಂದು ಅಭಿಪ್ರಾಯಪಡಬಹುದು.

ಮತ್ತೊಂದು ಶಿಲ್ಪವು ತಿಮ್ಮಲಾಪುರದ ಶಿವ ದೇವಾಲಯದ ಮುಖಮಂಟಪದ ಕಂಬದಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ನಾಥನು ಚೇಳಿನ ಮೇಲೆ ಯೋಗಾಸನದಲ್ಲಿ ಕುಳಿತಿದ್ದು ತನ್ನ ಎಡಗೈಯನ್ನು ಮೊಣಕಾಲಿನ ಮೇಲಿಟ್ಟು ಮುಂದಕ್ಕೆ ಚಾಚಿದ್ದು ವ್ಯಾಖ್ಯಾನ ಮುದ್ರೆಯಂತೆ ತೋರಲಾಗಿದೆ. ಬಲಗೈನಲ್ಲಿ ತಂಬೂರಿಯಂತಹ ವಾದ್ಯವನ್ನು ಹಿಡಿದಿದ್ದು, ಅದನ್ನು ಭುಜದ ಮೇಲೆ ಇಟ್ಟುಕೊಂಡಿದ್ದಾನೆ. ನಾಥನ ವಾಹನವಾದ ಚೇಳು ಚಲಿಸುತ್ತಿರುವಂತಿದ್ದು ಎಂಟು ಕಾಲುಗಳನ್ನು ಹೊಂದಿದೆ. ಬಾಲದ ವಿಷದ ಕೊಂಡಿಯನ್ನು ಸೂಕ್ಷ್ಮವಾಗಿ ತೋರಿಸಿದ್ದು ಅದು ಹಿಂದಕ್ಕೆ ಮಡಚಿಕೊಂಡಂತೆ ಕೆತ್ತಲಾಗಿದೆ. ಆದರೆ ಅಚ್ಯುತ ದೇವಾಲಯದಲ್ಲಿನ ಶಿಲ್ಪದಲ್ಲಿ ಚೇಳು ತನ್ನ ವಿಷದ ಕೊಂಡಿಯನ್ನು ಮುಂದಕ್ಕೆ ಮಡಚಿಕೊಂಡಿದೆ. ಇದು ಆ ಶಿಲ್ಪಗಳಲ್ಲಿನ ಭಿನ್ನತೆಯನ್ನು ತೋರಿಸುತ್ತದೆ. ಈ ಮೇಲಿನ ಎಲ್ಲಾ ವೃಶ್ಚಿಕೇಂದ್ರನಾಥ ಶಿಲ್ಪಗಳಲ್ಲಿನ ಚೇಳಿನ ದೇಹ ಲಕ್ಷಣಗಳ ಆಧಾರದ ಮೇಲೆ ಇವು ಸ್ಕಾರ್ಪ್ನೇಸ್ (*Scorpines*) ಗಣದ, ಬೂತಿಡೆ





(*Buthidae*) ಕುಟುಂಬಕ್ಕೆ ಸೇರಿದವುಗಳೆಂದು ಗುರುತಿಸಲಾಗಿದ್ದು ಹೊಟ್ಟೇನ್‌ಟೊಟ್ಟ ಟಾಮುಲಸ್ (*Hottentotta tamulus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೯೮] ಹೀಗೆ ಚೇಳಿನ ಮೇಲೆ ಕುಳಿತ ನಾಥನ ಶಿಲ್ಪಗಳು ಹಂಪಿ ಪರಿಸರದಲ್ಲಿ ಬೆರಳಣಿಕೆ ಸಂಖ್ಯೆಯಲ್ಲಿ ದೊರೆತಿದ್ದು, ಮತ್ಸೇಂದ್ರನಾಥನ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಿವೆ. ಹಾಗಾಗಿ ವೃಶ್ಚಿಕೇಂದ್ರನಾಥ ಹಾಗೂ ಇತರೆ ನಾಥರರಿಗಿಂತ ಮತ್ಸೇಂದ್ರನಾಥ ಹೆಚ್ಚು ಪ್ರಭಾವವನ್ನು ಹೊಂದಿದ್ದು, ಪ್ರಾಮುಖ್ಯತೆಯನ್ನು ಇಲ್ಲಿ ಪಡೆದುಕೊಂಡಿದ್ದನೆಂಬುದು ತಿಳಿಯಬಹುದು. ಹಾಗೆಯೇ ಈ ಪರಿಸರದಲ್ಲಿ ನಾಥ ಸಂಪ್ರದಾಯ ಹೆಚ್ಚು ಪ್ರಚಲಿತದಲ್ಲಿತ್ತು ಎಂಬುದಕ್ಕೆ ಇಲ್ಲಿನ ಶಾಸನಗಳು ಮತ್ತು ದೇವಾಲಯಗಳು ಸಾಕ್ಷಿಯಾಗಿವೆ.

ಈ ನಾಥಪಂಥವು ಕ್ರಿ.ಶ. ೧೨ನೇ ಶತಮಾನದಿಂದಲೇ ಪ್ರಚಲಿತವಿದ್ದು, ಈ ನಾಡಿನಲ್ಲಿ ೧೩ನೇ ಶತಮಾನದಿಂದ ಹೆಚ್ಚು ಪ್ರಚಲಿತವಾದುದನ್ನು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಹಂಪಿ ಪರಿಸರದಲ್ಲಿನ ಆನೆಗುಂದಿಯೇ ಸಿದ್ಧನಾಥನ ಮೂಲಸ್ಥಳವೆಂಬುದು ಇಲ್ಲಿರುವ ಆನಂದ ಸಿದ್ಧನ ಗುಹೆ ಮತ್ತು ಅವನ ಕುರಿತಾಗಿ ಶಾಸನದ ಉಲ್ಲೇಖದಿಂದ ನಿರ್ಧರಿಸಬಹುದಾಗಿದೆ.[೯೯] ಆನೆಗುಂದಿಯಲ್ಲಿರುವ ಶಾಸನವೊಂದು[೧೦೦] ಆನಂದ ಸಿದ್ಧನು (ಸಿದ್ಧನಾಥ) ಪಾರ್ವತಿಯ ಮಗನೆಂದು (ತ್ರಿಪುರಾರಿದವ್ವೆಯ ಮಗ) ಹಾಗೂ ಅವನ ಭಕ್ತಿಗೆ ಮೆಚ್ಚಿ ಶಿವನೆ ಸಿದ್ಧದೇವನ ಗುಹೆಗೆ ಬಂದು ದರ್ಶನ ನೀಡಿ ಆಶೀರ್ವದಿಸುತ್ತಿದ್ದನೆಂದು ಶಾಸನದಲ್ಲಿ ಉಲ್ಲೇಖವಾಗಿರುವುದು. ಇದೊಂದು ದೊಡ್ಡದಾಗಿರುವ ಪ್ರಾಕೃತಿಕ ಗುಹೆಯಾಗಿದ್ದು, ಈ ಗುಹೆಗೆ ಬಾಗಿಲು ಚೌಕಟ್ಟನ್ನು ಹೊಂದಿಸಲಾಗಿದೆ. ಹಾಗೂ ನಂದಿ, ಲಿಂಗ, ನಾಗ ಮತ್ತು ಭೈರವ ಶಿಲ್ಪಗಳು ಇರುವವು. ಪ್ರಸನ್ನ ನಂದಿ ದೇವರ ಎದುರಿನಲ್ಲಿರುವ ಗುಹೆಯಲ್ಲಿರುವ ಸಿದ್ಧನಾಥನೆಂದು ಉಲ್ಲೇಖಿಸಿರುವುದು ಈ ಶಾಸನದಿಂದ ತಿಳಿದುಬರುತ್ತದೆ. ಹಾಗೆಯೇ ಹಂಪಿ ಪರಿಸರದ ಆನೆಗುಂದಿಯ ಚೆಂಚಲಕೋಟೆ,[೧೦೧] ಬೈನಕನ ಬಾವಿ ಹತ್ತಿರವಿರುವ ಬೆಟ್ಟದಲ್ಲಿ,[೧೦೨] ಗಾಣಗಿತ್ತಿ ಜಿನಾಲಯದ ಪೂರ್ವ ದಿಕ್ಕಿನಲ್ಲಿರುವ ಬೆಟ್ಟದಲ್ಲಿ,[೧೦೩] ಅಕ್ಕತಂಗಿಯ ಗುಂಡಿನ ಬಳಿ ಗಣ್ಯವ್ಯಕ್ತಿಗಳ ಅರಮನೆಗಳ ಆವರಣದ ಪಶ್ಚಿಮಕ್ಕಿರುವ ಬೆಟ್ಟದಲ್ಲಿ ನಾಥರ ಶಿಲ್ಪಗಳು ಹಾಗೂ ದೇವಾಲಯಗಳಿದ್ದು, ಆ ಸ್ಥಳಗಳು ನಾಥ ಸಂಪ್ರದಾಯದ ಕೇಂದ್ರವಾಗಿರುವವು ಎಂಬುದಾಗಿ ಅಲ್ಲಿನ ಶಾಸನಗಳು ತಿಳಿಸುತ್ತವೆ.

ಹೀಗೆ ಹಂಪಿ ಪರಿಸರದಲ್ಲಿನ ನಾಥರ ಶಿಲ್ಪಗಳು, ಗುಹೆ ಅಥವಾ ದೇವಾಲಯಗಳು ಮತ್ತು ಶಾಸನಗಳ ಅಧ್ಯಯನದಿಂದ ಈ ನಾಥಪಂಥವು ವಿಜಯನಗರ ಕಾಲಾವಧಿಯ ಹಂಪಿ ಪ್ರದೇಶದಲ್ಲಿ ಬಾಳಿ ಬೆಳಗಿದ್ದು, ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂದು ತಿಳಿದುಬರುತ್ತದೆ. ಹಾಗೆಯೇ ಈ ಪ್ರದೇಶದಲ್ಲಿ ನಾಥರು ಹೆಚ್ಚು ಪ್ರಭಾವ ಬೀರಿದ್ದು, ಇವರಿಗೆ ಕೆಲವು ಪ್ರಾಣಿಗಳು ವಾಹನಗಳು ಆಗಿರುವುದು ಶಿಲ್ಪದಲ್ಲಿ ತೋರಿಸಿದ್ದು ಅವುಗಳ ಮಹತ್ವ ಅಥವಾ ಪ್ರಾಮುಖ್ಯತೆಯನ್ನು ಅರಿಯಲು ಸಹಾಯವಾಗಿದೆ.

ದೈವಭಕ್ತ ಪ್ರಾಣಿಶಿಲ್ಪಗಳು

ಶಿಲ್ಪಗಳಲ್ಲಿ ಪ್ರಾಣಿಗಳು ಶಿವಲಿಂಗವನ್ನು ಆರಾಧಿಸುತ್ತಿರುವ ಅಥವಾ ಪೂಜಿಸುತ್ತಿರುವ ಶಿಲ್ಪಗಳನ್ನು ದೈವಭಕ್ತ ಪ್ರಾಣಿಶಿಲ್ಪಗಳೆಂದು ಗುರುತಿಸಲಾಗಿದೆ. ಸಾಮಾನ್ಯವಾಗಿ ದೇವಾಲಯಗಳಲ್ಲಿ ಲಿಂಗವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿ ಪೂಜಿಸುವುದು ವಾಡಿಕೆ. ಆದರೆ ಇಲ್ಲಿನ ದೇವಾಲಯಗಳ ಭಿತ್ತಿ ಹಾಗೂ

ಕಂಬಗಳಲ್ಲಿನ ಶಿಲ್ಪಗಳಲ್ಲಿ ವಿವಿಧ ಪ್ರಾಣಿಗಳು ಅವುಗಳದೇ ಆದ ರೀತಿಯಲ್ಲಿ ಶಿವನನ್ನು ಅಥವಾ ಲಿಂಗವನ್ನು ಪೂಜಿಸಿ ಆರಾಧಿಸುತ್ತಿರುವುದು ಗಮನಾರ್ಹವಾಗಿದೆ. ಇಂತಹ ಶಿಲ್ಪಗಳಲ್ಲಿ ಹಸು, ನಂದಿ, ಹಾವು, ಆನೆ, ಹಲ್ಲಿ ಹಾಗೂ ಜೇಡರಹುಳು ಮುಂತಾದವು ಶಿವನನ್ನು ಆರಾಧಿಸುವ ಪ್ರಮುಖ ಭಕ್ತ ಪ್ರಾಣಿಗಳಾಗಿರುತ್ತವೆ.[೧೦೪]

ಹಂಪಿ ಪರಿಸರಗಳಲ್ಲಿನ ದೈವಭಕ್ತ ಪ್ರಾಣಿಶಿಲ್ಪಗಳ ಕೋಷ್ಟಕ

ಕ್ರ.ಸಂ.	ದೇವಾಲಯಗಳು	ದೈವಭಕ್ತ ಪ್ರಾಣಿಶಿಲ್ಪಗಳು					
		ಹಸು	ಆನೆ	ನಂದಿ	ಹಾವು	ಹಲ್ಲಿ	ಜೇಡ
೦೧.	ಶ್ರೀವಿರೂಪಾಕ್ಷ ದೇವಾಲಯ, ಹಂಪಿ	೧೦	೦೪	೦೪	೧೦	೦೬	೦೧
೦೨.	ಶ್ರೀಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೦೩	೦	೦	೦	೦	೦
೦೩.	ಶ್ರೀಪಟ್ಟಾಭಿರಾಮ ದೇವಾಲಯ, ಕಮಲಾಪುರ	೦೩	೦	೦	೦	೦	೦
೦೪.	ಕಡ್ಲೆಕಾಳು ಗಣೇಶ ದೇವಾಲಯ, ಹಂಪಿ	೦೩	೦	೦	೦೩	೦೨	೦
೦೫.	ಪಾನ್‌ಸುಪಾರಿ ಬಜಾರಿನ ದೇವಾಲಯಗಳ ಸಮೂಹ, ಹಂಪಿ	೩	೦	೦	೩	೦	೦
೦೬.	ಅಚ್ಯುತರಾಯ ದೇವಾಲಯ, ಹಂಪಿ	೨	೦	೦	೧	೦	೦
೦೭.	ಕೋಟೆಶಂಕರದೇವಾಲಯ, ಹಂಪಿ	೨	೦	೦	೦	೦	೦
೦೮.	ನಗರೇಶ್ವರ ದೇವಾಲಯ, ಮನ್ಮಥ ಹೊಂಡದ ಪಕ್ಕ, ಹಂಪಿ	೨	೦	೦	೧	೦	೦
೦೯.	ನಗರೇಶ್ವರ ದೇವಾಲಯ, ಕಮಲಾಪುರ	೨	೦	೦	೦	೦	೦
೧೦.	ಶಿವ ದೇವಾಲಯ, ತಿಮ್ಮಲಾಪುರ	೭	೦	೧	೪	೦	೦
೧೧.	ನೆಲಸ್ತರ ಶಿವಾಲಯ, ಹಂಪಿ	೩	೨	೧	೨	೧	೦
೧೨.	ಶ್ರೀಹಸ್ತಗಿರಿ ರಂಗನಾಥಸ್ವಾಮಿ ದೇವಾಲಯ, ಹಂಪಿ	೧	೦	೦	೦	೦	೦
೧೩.	ವಿಜಯವಿಠಲ ದೇವಾಲಯ, ಹಂಪಿ	೧	೦	೦	೧	೦	೦
೧೪.	ಶ್ರೀವೇಣುಗೋಪಾಲಸ್ವಾಮಿ ದೇವಾಲಯ, ಕಮಲಾಪುರ	೧	೦	೦	೦	೦	೦
೧೫.	ಮಲ್ಲಿಕಾರ್ಜುನ ದೇವಾಲಯ, ಮಲಪನಗುಡಿ	೧	೧	೦	೪	೦	೧
೧೬.	ಶಿವ ದೇವಾಲಯ, ನಿಂಬಾಪುರ	೧	೦	೦	೧	೦	೦

೧೭.	ವಿಷ್ಣು ದೇವಾಲಯ, ನಿಂಬಾಪುರ	೧	೦	೦	೦	೦	೦
೧೮.	ಶ್ರೀರಂಗನಾಥ ದೇವಾಲಯ, ಆನೆಗುಂದಿ	೧	೦	೦	೩	೦	೦
೧೯.	ಶ್ರೀಜಂಬುನಾಥೇಶ್ವರ ದೇವಾಲಯ, ಜಂಬುನಾಥನಹಳ್ಳಿ	೧	೨	೩	೫	೦	೦
೨೦.	ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ, ತಿಮ್ಮಲಾಪುರ	೧	೦	೦	೦	೦	೦
೨೧.	ಈಶ್ವರ ದೇವಾಲಯ, ನಾಗೇನಹಳ್ಳಿ	೦	೦	೦	೨	೦	೦
	ಒಟ್ಟು –	೪೯	೯	೯	೪೦	೯	೦೨

ಶಿವಲಿಂಗವನ್ನು ಪೂಜಿಸುತ್ತಿರುವ ಹಸುವಿನ ಶಿಲ್ಪ

ಹಂಪಿ ಪರಿಸರದಲ್ಲಿ ಒಟ್ಟು ಸುಮಾರು ೧೧೮ ದೈವಭಕ್ತ ಪ್ರಾಣಿಶಿಲ್ಪಗಳು ಕಂಡುಬಂದಿವೆ. ಇವೆಲ್ಲವೂ ಶಿವಲಿಂಗವನ್ನು ಪೂಜಿಸುತ್ತಿರುವ ಪ್ರಾಣಿಗಳಾಗಿವೆ. ಅದರಲ್ಲಿ ಶಿವಲಿಂಗಕ್ಕೆ ತನ್ನ ಹಾಲಿನಿಂದ ಅಭಿಷೇಕ ಮಾಡುತ್ತಿರುವ ಹಸುವಿನ ೪೯ ಶಿಲ್ಪಗಳು ದೊರಕಿವೆ. ಹಸು ಪವಿತ್ರ ಮತ್ತು ಪೂಜ್ಯನೀಯ ಪ್ರಾಣಿಯಾಗಿದ್ದು, ಕಾಮಧೇನು ಎಂದು ಇದನ್ನು ಪೂಜಿಸಲಾಗುತ್ತದೆ.

ಹಸುವು ಶಿವಲಿಂಗಕ್ಕೆ ಹಾಲಿನ ಅಭಿಷೇಕ ಮಾಡುವ ಈ ರೀತಿಯ ಶಿಲ್ಪಕ್ಕೆ ಆಂಧ್ರದ ತಾಡಪತ್ರಿಯ ರಾಮಲಿಂಗೇಶ್ವರ ದೇವಾಲಯ ಹಾಗೂ ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಸ್ಥಳ ಪುರಾಣವಿದೆ.[೧೦೫] ಈ ರೀತಿಯ ಶಿಲ್ಪಗಳು ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ವಿಶೇಷವಾಗಿವೆ. ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪ ಮತ್ತು ಪ್ರಕಾರ ಮಂಟಪದ ಕಂಬಗಳಲ್ಲಿ ಈ ಶಿಲ್ಪಗಳಿದ್ದು ವಿವಿಧ ಭಂಗಿಯಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಹಸುವಿನ ಶಿಲ್ಪಗಳನ್ನು ಶಿಲ್ಪಿಯು ಅತಿ ಸುಂದರವಾಗಿ ಕೆತ್ತಿದ್ದಾನೆ. ಒಂದು ಶಿಲ್ಪದಲ್ಲಿ ಹಸು ಶಿವಲಿಂಗವನ್ನು ತನ್ನ ನಾಲಿಗೆಯಿಂದ ಸ್ಪರ್ಶಿಸುತ್ತಿರುವಂತೆ ತೋರಿಸಲಾಗಿದ್ದರೆ. ಮತ್ತೊಂದರಲ್ಲಿ ಹಸು ಶಿವಲಿಂಗಕ್ಕೆ ತನ್ನ ಹಾಲಿನಿಂದ ಅಭಿಷೇಕವನ್ನು ಮಾಡುತ್ತಿರುವಂತೆ ತೋರಲಾಗಿದೆ. ಇಲ್ಲಿ ಹಸು ಶಿವಲಿಂಗಕ್ಕೆ ಹಾಲುಣಿಸುವುದಕ್ಕಿಂತ ಮೊದಲು ಲಿಂಗವನ್ನು ತನ್ನ ನಾಲಿಗೆಯಿಂದ ಸ್ಪರ್ಶಿಸಿ ನಂತರ ಲಿಂಗದ ಮೇಲೆ ಹಾಲಿನ ಅಭಿಷೇಕ ಮಾಡುತ್ತಿದ್ದಿರಬಹುದೆಂದು ಅಭಿಪ್ರಾಯಿಸಬಹುದು. ಸಾಮಾನ್ಯವಾಗಿ ಹಂಪಿ ಪರಿಸರದ ಶಿಲ್ಪಗಳಲ್ಲಿನ ಹಸುವಿನ ದೇಹಲಕ್ಷಣ ಆಕಾರದ ಆಧಾರದ ಮೇಲೆ ಇವು ಕರ್ನಾಟಕದ ಪ್ರಸಿದ್ಧ ಅಮೃತ್‌ಮಹಲ್ ಮತ್ತು ಹಳ್ಳಿಕಾರ್ ತಳಿಗಳಿಗೆ ಸೇರಿದವು ಎಂಬುದಾಗಿ ಗುರುತಿಸಲಾಗಿದೆ.

ವಿರೂಪಾಕ್ಷ ದೇವಾಲಯವೊಂದರಲ್ಲೇ ಈ ರೀತಿಯ ೧೦ ಶಿಲ್ಪಗಳು ಕಂಡುಬಂದಿದ್ದು ಎಲ್ಲಾ ಶಿಲ್ಪಗಳಲ್ಲಿಯೂ ಹಸು ಶಿವಲಿಂಗಕ್ಕೆ ಹಾಲುಣಿಸುತ್ತಿರುವ ಪ್ರಸಂಗವನ್ನೇ ತೋರಿಸಿದ್ದು, ಒಂದೇ ರೀತಿಯ ಲಕ್ಷಣಗಳನ್ನು ಹೊಂದಿವೆ. ಆದರೂ ಶಿಲ್ಪಿ ಹಸು ಮತ್ತು ಲಿಂಗದ ಆಕಾರ, ಗಾತ್ರದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸ ಕಾಣುವಂತೆ ಬಿಡಿಸಿರುವುದು ಕಂಡುಬರುತ್ತದೆ. ಹಾಗೆಯೇ ಹಂಪಿ ಪರಿಸರದಲ್ಲಿ ಈ ರೀತಿಯ




ಶಿವಲಿಂಗವನ್ನು ಪೂಜಿಸುತ್ತಿರುವ ಹಸುವಿನ ಶಿಲ್ಪ,
ವಿರೂಪಾಕ್ಷ ದೇವಾಲಯ, ಹಂಪಿ

ಅತಿ ಹೆಚ್ಚು ಶಿಲ್ಪಗಳನ್ನು ಹೊಂದಿರುವ ಕೀರ್ತಿ ವಿರೂಪಾಕ್ಷ ದೇವಾಲಂಯಕ್ಕೆ ಸಲ್ಲುತ್ತದೆ. ನಂತರ ಸ್ಥಾನವನ್ನು ತಿಮ್ಮಲಾಪುರದ ಶಿವ ದೇವಾಲಯ (೭) ಪಡೆದುಕೊಂಡಿದೆ. ಹೀಗೆ ಹಂಪಿ ಪರಿಸರದಲ್ಲಿ ಲಿಂಗಕ್ಕೆ ಹಾಲಿನ ಅಭಿಷೇಕ ಮಾಡುತ್ತಿರುವ ಹಸುವಿನ ೪೯ ಶಿಲ್ಪಗಳು ದೊರಕಿದ್ದು, ಈ ಪ್ರದೇಶದಲ್ಲಿಯೂ ಸಹ ಈ ಶಿಲ್ಪಕ್ಕೆ ಸಂಬಂಧಿಸಿದ ಸ್ಥಳಪುರಾಣವು ಹೆಚ್ಚು ಪ್ರಸಿದ್ಧಿ ಮತ್ತು ಪ್ರಭಾವ ಪಡೆದುಕೊಂಡಿತ್ತು ಎಂಬುದು ತಿಳಿಯಬಹುದಾಗಿದೆ.

ಶಿವಲಿಂಗವನ್ನು ಆರಾಧಿಸುತ್ತಿರುವ ಆನೆಯ ಶಿಲ್ಪ

ಹಂಪಿ ಪರಿಸರದಲ್ಲಿ ಶಿವಲಿಂಗಕ್ಕೆ ನೀರನ್ನು ಎರಚುವ ಮತ್ತು ಪುಷ್ಪಗಳನ್ನು ಅಥವಾ ಹೂವಿನ ಹಾರವನ್ನು ಹಾಕುತ್ತಿರುವ ಆನೆಯ ಶಿಲ್ಪಗಳು ದೊರಕಿದ್ದು, ಒಟ್ಟು ೯ ಶಿಲ್ಪಗಳು ಕಂಡುಬಂದಿವೆ. ಅವುಗಳಲ್ಲಿ ವಿರೂಪಾಕ್ಷ ದೇವಾಲಯದಲ್ಲಿ (೪) ಹೆಚ್ಚು ಶಿಲ್ಪಗಳು ಕಂಡುಬಂದಿವೆ. ನಂತರ ನೆಲಸ್ತರದ ಶಿವ ದೇವಾಲಯ, ಜಂಬುನಾಥನಹಳ್ಳಿ ಜಂಬುನಾಥೇಶ್ವರ ದೇವಾಲಯಗಳಲ್ಲಿ ತಲಾ ಎರಡೆರಡು ಶಿಲ್ಪಗಳು ಹಾಗೂ ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯದಲ್ಲಿ ಒಂದು ಶಿಲ್ಪ ಕಂಡುಬಂದಿರುತ್ತದೆ. ವಿರೂಪಾಕ್ಷ ದೇವಾಲಯದಲ್ಲಿನ ಕೆಲವು ಶಿಲ್ಪಗಳಲ್ಲಿ ಆನೆಯು ತನ್ನ ಸೊಂಡಿಲಿನಿಂದ ಲಿಂಗಕ್ಕೆ ನೀರನ್ನು ಹಾಕುತ್ತಿರುವಂತೆ ತೋರಿಸಿದ್ದರೆ, ಮತ್ತೆ ಕೆಲವು ಶಿಲ್ಪಗಳಲ್ಲಿ ಸೊಂಡಿಲಿನಿಂದ ಲಿಂಗಕ್ಕೆ ಹೂವಿನ ಹಾರವನ್ನು ಮತ್ತು ವಿವಿಧ ರೀತಿಯ ಪುಷ್ಪಗಳನ್ನು ಹಾಕುತ್ತಿರುವಂತೆ ಶಿಲ್ಪಿ ಅತೀ ಸೂಕ್ಷ್ಮವಾಗಿ ತೋರಿಸಿದ್ದಾನೆ. ಹಾಗೆಯೇ ಶಿಲ್ಪದಲ್ಲಿ ಆನೆಯ ಆವಯವಗಳನ್ನು ಗಮನಿಸಿದರೆ ಅದು ಅತಿಯಾದ ಭಕ್ತಿಯಿಂದ ಮನಪೂರ್ವಕವಾಗಿ ಪೂಜಿಸುತ್ತಿರುವಂತೆ ಕಂಡುಬರುತ್ತದೆ.



ಜಂಬುನಾಥೇಶ್ವರ ದೇವಾಲಯ, ಜಂಬುನಾಥನಹಳ್ಳಿ



ವಿರೂಪಾಕ್ಷ ದೇವಾಲಯ, ಹಂಪಿ


ಇಲ್ಲಿ ಶಿಲ್ಪಿ ಗಜನ ಭಕ್ತಿಯ ನೈಜತೆಯನ್ನು ತೋರಿಸಿದ್ದಾನೆ. ಇದರಂತೆ ಈ ದೇವಾಲಯದಲ್ಲಿ ಇಂದಿಗೂ ಲಕ್ಷ್ಮಿ ಎಂಬ ಹೆಸರಿನ ಆನೆಯಿದ್ದು ಪ್ರತಿದಿನ ಶಿವನ ಆರಾಧನೆಯಲ್ಲಿ ತೊಡಗುತ್ತಿರುವುದನ್ನು ಕಾಣಬಹುದು. ನೆಲಸ್ತರ ಶಿವ ದೇವಾಲಯ, ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯ ಹಾಗೂ ಜಂಬುನಾಥನಹಳ್ಳಿ ಜಂಬುನಾಥೇಶ್ವರ ದೇವಾಲಯಗಳಲ್ಲಿನ ಶಿಲ್ಪಗಳೂ ಸಹ ಈ ಮೇಲೆ ವಿವರಿಸಿದ ಶಿಲ್ಪಲಕ್ಷಣಗಳ ಸಾಮ್ಯತೆಯನ್ನೇ ಹೊಂದಿದ್ದರೂ ಪೂಜಿಸುವ ವಿಧಾನ, ಅವುಗಳ ಆಕಾರ, ಗಾತ್ರ, ಭಂಗಿಗಳಲ್ಲಿ ಸ್ವಲ್ಪಮಟ್ಟಿನ ಭಿನ್ನತೆಯನ್ನು ಗುರುತಿಸಬಹುದಾಗಿದೆ. ಜೊತೆಗೆ ಶಿಲ್ಪಗಳಲ್ಲಿ ಶಿವಲಿಂಗದ ಜೊತೆಗೆ ಪ್ರಾಣಿಗಳನ್ನು ಅಥವಾ ಆನೆಯನ್ನೇ ತೋರಿಸಿರುವ ಶಿಲ್ಪಗಳನ್ನು ಮಾತ್ರ ದೈವಭಕ್ತ ಪ್ರಾಣಿಶಿಲ್ಪಗಳೆಂದು ಪರಿಗಣಿಸಲಾಗಿದೆ. ಆದರೆ ಶಿಲ್ಪದಲ್ಲಿ ಕೇವಲ ಆನೆಯೊಂದನ್ನು ಮಾತ್ರ ತೋರಿಸಿರುವ ಹಲವು ಶಿಲ್ಪಗಳು ಕಂಡುಬಂದಿದ್ದು, ಶಿವಲಿಂಗವನ್ನು ತೋರಿಸಿರುವುದಿಲ್ಲ. ಇಂತಹ ಶಿಲ್ಪಗಳನ್ನು ಇಲ್ಲಿ ಪರಿಗಣಿಸಲಾಗಿರುವುದಿಲ್ಲ.

ಶಿವಲಿಂಗವನ್ನು ಆರಾಧಿಸುತ್ತಿರುವ ನಂದಿಶಿಲ್ಪ

ಶಿವಲಿಂಗದ ಮುಂಭಾಗದಲ್ಲಿ ನಂದಿಯೊಂದು ವಿವಿಧ ಭಂಗಿಯಲ್ಲಿ ಶಿವನನ್ನು ಆರಾಧಿಸುತ್ತಿರುವ ಶಿಲ್ಪಗಳು ಹಂಪಿ ಪರಿಸರದಲ್ಲಿ ಸುಮಾರು ೯ ಶಿಲ್ಪಗಳು ಕಂಡುಬಂದಿವೆ. ಇಲ್ಲಿ ನಂದಿ ಶಿವನ ವಾಹನವಾಗಿದ್ದು, ಶೈವ ದೇವಾಲಯಗಳಲ್ಲಿ ದೇವರ ಎದುರುಗಡೆ ಸಾಮಾನ್ಯವಾಗಿ ಕಂಡುಬರುತ್ತದೆ. ಆದರೆ ಶಿಲ್ಪಗಳಲ್ಲಿ ಲಿಂಗದ ಜೊತೆ ನಂದಿಯಿರುವ ಶಿಲ್ಪಗಳನ್ನು ಮಾತ್ರ ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ವಿರೂಪಾಕ್ಷ ದೇವಾಲಯದ ಆವರಣದಲ್ಲಿನ ಒಂದು ಶಿಲ್ಪದಲ್ಲಿ ಪೀಠದ ಮೇಲೆ ಶಿವಲಿಂಗವನ್ನು ಮತ್ತು ನಂದಿಯನ್ನು ತೋರಿಸಿದ್ದು, ನಂದಿಯು ಹಿಂಭಾಗದ ಕಾಲುಗಳನ್ನು ಮಡಚಿ ಲಿಂಗಕ್ಕೆ ನಮಸ್ಕರಿಸುತ್ತಿರುವ ಭಂಗಿಯಲ್ಲಿ ಮತ್ತೆ ಕೆಲವು ಶಿಲ್ಪಗಳಲ್ಲಿ ಲಿಂಗದ ಎದುರುಗಡೆ ನಂದಿಯನ್ನು ತೋರಿಸಿದ್ದು ಅದು ಆರಾಧಿಸುತ್ತಿರುವಂತೆ ಕೆತ್ತಲಾಗಿದೆ. ಇಲ್ಲಿ ಲಿಂಗದ ಗಾತ್ರಕ್ಕಿಂತ ನಂದಿಯ ಗಾತ್ರವನ್ನು ದೊಡ್ಡದಾಗಿ ತೋರಿಸಲಾಗಿದೆ. ಇದೇ ರೀತಿಯ ಲಕ್ಷಣಗಳನ್ನು ಹೊಂದಿದ ಶಿಲ್ಪಗಳು ಹಂಪಿಯ ನೆಲಸ್ತರ ಶಿವ ದೇವಾಲಯ (೧), ತಿಮ್ಮಲಾಪುರದ ಶಿವ ದೇವಾಲಯದಲ್ಲಿ (೧) ಹಾಗೂ ಜಂಬುನಾಥನಹಳ್ಳಿಯ ಜಂಬುನಾಥೇಶ್ವರ ದೇವಾಲಯದಲ್ಲಿ (೩) ಕಂಡುಬರುತ್ತವೆ.



ನೆಲಸ್ತರದ ಶಿವ ದೇವಾಲಯ, ಹಂಪಿ



ವಿರೂಪಾಕ್ಷ ದೇವಾಲಯ, ಹಂಪಿ

ಶಿವಲಿಂಗವನ್ನು ಪೂಜಿಸುತ್ತಿರುವ ಹಾವು ಅಥವಾ ಸರ್ಪದ ಶಿಲ್ಪ

ಹಾವು ಅಥವಾ ಸರ್ಪವೊಂದು ಶಿವಲಿಂಗಕ್ಕೆ ಸುತ್ತಿಕೊಂಡು ತನ್ನ ಹೆಡೆಗಳಿಂದ ಅದಕ್ಕೆ ನೆರಳನ್ನು ನೀಡುತ್ತಾ ಆರಾಧಿಸುತ್ತಿರುವ ಶಿಲ್ಪಗಳು ಹಂಪಿ ಪರಿಸರದಲ್ಲಿ ಒಟ್ಟು ಸುಮಾರು ೪೦ ಶಿಲ್ಪಗಳು ಕಂಡುಬಂದಿವೆ. ದೈವಭಕ್ತ ಪ್ರಾಣಿಶಿಲ್ಪಗಳಲ್ಲಿ ಹಸುವಿನ (೪೯) ಶಿಲ್ಪಗಳು ಅತ್ಯಧಿಕ ಸಂಖ್ಯೆಯಲ್ಲಿ ಕಂಡುಬಂದು ಮೊದಲನೇ ಸ್ಥಾನದಲ್ಲಿದ್ದರೆ. ಹಾವಿನ ಶಿಲ್ಪಗಳು ಎರಡನೇ ಸ್ಥಾನವನ್ನು ಪಡೆದುಕೊಂಡಿರುವುದು ಇಲ್ಲಿ ಕಂಡುಬಂದಿರುವ ಶಿಲ್ಪಗಳ ಮೂಲಕ ದೃಡಪಟ್ಟಿದೆ.


ವಿರೂಪಾಕ್ಷ ದೇವಾಲಯದಲ್ಲಿ ಈ ರೀತಿಯ ೧೦ ಶಿಲ್ಪಗಳು ಕಂಡುಬಂದಿದ್ದು, ಎಲ್ಲಾ ಶಿಲ್ಪಗಳಲ್ಲಿಯೂ ಹಾವು ಶಿವಲಿಂಗವನ್ನು ಸುತ್ತಿಕೊಂಡು ಆರಾಧಿಸುತ್ತಿರುವುದನ್ನು ಗಮನಿಸಬಹುದು. ಆದರೆ ಕೆಲವು ಶಿಲ್ಪಗಳು ಆವುಗಳಲ್ಲಿನ ಲಕ್ಷಣಗಳಿಂದ ವಿಶಿಷ್ಟವಾಗಿದ್ದು, ಭಿನ್ನತೆಯನ್ನು ತೋರಿಸುತ್ತವೆ. ಅಂತಹವುಗಳಲ್ಲಿ ಪ್ರಮುಖವಾದುವುಗಳೆಂದರೆ ಒಂದು ಶಿಲ್ಪದಲ್ಲಿ ಲಿಂಗವನ್ನು ಸುತ್ತುವರೆದಿರುವ ಹಾವು ಕಾಳಿಂಗ ಸರ್ಪವಾಗಿರುವುದು ಅದರ ದೇಹದ ಲಕ್ಷಣಗಳಿಂದ ತಿಳಿಯಬಹುದು. ಹಂಪಿ ಪರಿಸರದ ಶಿಲ್ಪಗಳಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವ ಹಾವುಗಳ ದೇಹ ಲಕ್ಷಣಗಳ ಆಧಾರದ ಮೇಲೆ ಪ್ರಮುಖವಾಗಿ ಎರಡು ತಳಿಗಳನ್ನು ಗುರುತಿಸಲಾಗಿದೆ. ಒಂದು ನಾಗರಹಾವು (ವೈಜ್ಞಾನಿಕ ಹೆಸರು ನಾಜನಾಜ) ಮತ್ತೊಂದು ಕಾಳಿಂಗಸರ್ಪ (ವೈಜ್ಞಾನಿಕ ಹೆಸರು ಒಫಿಯೊಪೇಗಸ್ ಹನ್ನ). ಈ ಎರಡು ತಳಿಗಳು ಇಲಾಫಿಡೆ ಕುಟುಂಬಕ್ಕೆ ಸೇರಿದವುಗಳಾಗಿವೆ.[೧೦೬] ಕೆಲವು ಶಿಲ್ಪಗಳಲ್ಲಿ ಹಾವಿಗೆ ಒಂದು ಹೆಡೆ, ಎರಡು ಹೆಡೆ, ಮೂರು ಹೆಡೆ, ಐದು ಹೆಡೆ ಹಾಗೂ ಏಳು ಹೆಡೆಗಳನ್ನು ತೋರಿಸಿರುವುದು ಗಮನಾರ್ಹ.ಈ ಮೇಲೆ ವಿವರಿಸಿದ ಲಕ್ಷಣಗಳನ್ನೇ ಹೋಲುವ ಶಿಲ್ಪಗಳು ಹಂಪಿಯ ಕಡ್ಲೆಕಾಳು ಗಣೇಶ (೩), ಪಾನ್‌ಸುಪಾರಿ ಬಜಾರಿನ ದೇವಾಲಯಗಳ ಸಮೂಹಗಳಲ್ಲಿ (೩), ನೆಲಸ್ತರ ಶಿವ (೨), ಮಲಪನಗುಡಿಯ ಮಲ್ಲಿಕಾರ್ಜುನ (೪), ತಿಮ್ಮಲಾಪುರದ ಶಿವ (೪), ಆನೆಗುಂದಿಯ ರಂಗನಾಥ (೩), ಜಂಬುನಾಥನಹಳ್ಳಿಯ ಜಂಬುನಾಥೇಶ್ವರ ದೇವಾಲಯಗಳಲ್ಲಿ (೫) ಪ್ರಮುಖವಾಗಿ ಕಂಡುಬರುತ್ತವೆ.




ನಾಗರಹಾವು
ಗಣ : ಒಫಿಡಿಯ
ಕುಟುಂಬ : ಇಲಾಫಿಡೆ



ರಂಗನಾಥ ದೇವಾಲಯ, ಹಂಪಿ



ಕಾಳಿಂಗ ಸರ್ಪ
ಗಣ : ಓಫಿಡಿಯ
ಕುಟುಂಬ : ಇಲಾಫಿಡೆ



ವಿರೂಪಾಕ್ಷ ದೇವಾಲಯ, ಹಂಪಿ



ಕಡಲೆಕಾಳು ಗಣೇಶ ದೇವಾಲಯ, ಹಂಪಿ

ಈ ಎಲ್ಲಾ ಶಿಲ್ಪಗಳು ಒಂದೇ ರೀತಿಯ ಸಾಮ್ಯತೆಯನ್ನು ಹೊಂದಿದ್ದರೂ, ಶಿಲ್ಪಿಯ ಕಲ್ಪನಾ ವಿವೇಚನೆಯಿಂದ ಕೆಲವು ಭಿನ್ನತೆಗಳು ಕಂಡುಬರುತ್ತವೆ. ಅದರಲ್ಲಿ ಪ್ರಮುಖವಾಗಿ ಪಾನ್‌ಸುಪಾರಿ ಬಜಾರಿನ ರಂಗ ದೇವಾಲಯದ ಒಂದು ಕಂಬದಲ್ಲಿನ ಶಿಲ್ಪದಲ್ಲಿ ಹಾವೊಂದು ಶಿವಲಿಂಗವನ್ನು ಸುತ್ತಿಕೊಂಡು ತನ್ನ ಹೆಡೆಯಿಂದ ಲಿಂಗಕ್ಕೆ ಆಶ್ರಯ ನೀಡಿದಂತೆಯೂ, ಇದರ ಮುಂಭಾಗದಲ್ಲಿ ಒಬ್ಬ ವ್ಯಕ್ತಿಯೊಬ್ಬ ತನ್ನ ಎರಡೂ ಕೈಗಳನ್ನು ಜೋಡಿಸಿ ವಿನಂಭ್ರತೆಯಿಂದ ನಮಸ್ಕರಿಸುತ್ತಿರುವಂತೆಯೂ ತೋರಲಾಗಿದೆ. ಶಿಲ್ಪದಲ್ಲಿನ ವ್ಯಕ್ತಿ ಕೀರೀಟಮಕುಟ, ಧೋತಿ ಮುಂತಾದ ಆಭರಣಗಳನ್ನು ಧರಿಸಿದ್ದು, ಅವನ ಇತರೆ ಆವಭಾವಗಳಿಂದ ಅವನು ಬಹುಶಃ ರಾಜನಾಗಿದ್ದಿರಬಹುದು ಎಂದು ಅಭಿಪ್ರಾಯಪಡಬಹುದು. ಜೊತೆಗೆ ಆತನಿಗೆ ದೇವರ ದರ್ಶನ ಆಗಿರುವುದು ಈ ಶಿಲ್ಪದ ಮೂಲಕ ತಿಳಿಯಬಹುದು.

ಹೀಗೆ ಶಿವನ ಆಭರಣಗಳಲ್ಲಿ ಒಂದಾಗಿರುವ ಹಾವು ಕೂಡ ಶಿವಲಿಂಗಕ್ಕೆ ತನ್ನ ಹೆಡೆಗಳಿಂದ ನೆರಳನ್ನು ನೀಡುತ್ತಿರುವಂತೆ ಕೆತ್ತಲಾಗಿದೆ. ಇದು ಶಿವನ ಕುರಿತು ಹಾವಿಗಿರುವ ಭಕ್ತಿಯನ್ನು ತೋರ್ಪಡಿಸುತ್ತದೆ. ಈ ರೀತಿಯ ಶಿಲ್ಪಗಳು ಹಂಪಿ ಪರಿಸರದಲ್ಲಿ ಮನೋಜ್ಞಾನವಾಗಿ ಕಂಡುಬಂದಿದ್ದು ಈ ಮೇಲಿನಂತೆ ವಿವರಿಸಲಾಗಿದೆ.

ಶಿವಲಿಂಗವನ್ನು ಪೂಜಿಸುತ್ತಿರುವ ಹಲ್ಲಿಯ ಶಿಲ್ಪ

ಹಂಪಿ ಪರಿಸರದ ಶಿಲ್ಪಗಳಲ್ಲಿ ಶಿವಲಿಂಗದ ಪಕ್ಕದಲ್ಲಿ ಅಥವಾ ಮೇಲ್ಭಾಗದಲ್ಲಿ ಹಲ್ಲಿಗಳನ್ನು ಕೆತ್ತಿದ್ದು, ಅವು ಲಿಂಗವನ್ನು ಪೂಜಿಸುತ್ತಿರುವಂತೆ ತೋರಿಸಲಾಗಿದೆ. ಇವುಗಳನ್ನು ಪ್ರಾಣಿಭಕ್ತಿ ಶಿಲ್ಪವೆಂದು ಪರಿಗಣಿಸಲಾಗಿದೆ. ಹಂಪಿ ಪರಿಸರದಲ್ಲಿ ಈ ರೀತಿಯ ಒಟ್ಟು ಸುಮಾರು ೯ ಶಿಲ್ಪಗಳು ಕಂಡುಬಂದಿವೆ. ಇಲ್ಲಿಯೂ ಕೂಡ ದೇವಾಲಯಗಳ ಕಂಬಗಳು, ಮೇಲ್ಛಾವಣಿ, ಕಪೋತ ಹಾಗೂ ಗೋಪುರಗಳಲ್ಲಿ ಹಲ್ಲಿಯ ಉಬ್ಬು ಶಿಲ್ಪಗಳು ಕಂಡುಬರುತ್ತವೆ. ಆದರೆ ಶಿವಲಿಂಗದ ಜೊತೆಗಿರುವ ಹಲ್ಲಿಯ ಶಿಲ್ಪಗಳನ್ನು ಮಾತ್ರ ಇಲ್ಲಿ ಪರಿಗಣಿಸಿದ್ದು ಅಧ್ಯಯನಕ್ಕೆ ಒಳಪಡಿಸಲಾಗಿದೆ.



ಹಲ್ಲಿ
ಗಣ : ಲ್ಯಾಸರ್‌ಟೀಲಿಯ
ಕುಟುಂಬ : ಗೆಕ್ಕೊನಿಡೆ



ವಿರೂಪಾಕ್ಷ ದೇವಾಲಯ, ಹಂಪಿ

ಹಂಪಿಯ ವಿರೂಪಾಕ್ಷ ದೇವಾಲಯವೊಂದರಲ್ಲೇ ಈ ರೀತಿಯ ೬ ಶಿಲ್ಪಗಳು ದೊರಕಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿರುವ ದೇವಾಲಯ ಇದಾಗಿದೆ. ದೇವಾಲಯದ ಮುಖಮಂಟಪದ ಕಂಬದಲ್ಲಿನ ಒಂದು ಶಿಲ್ಪದಲ್ಲಿ ಹೂವುಗಳಿಂದ ಅಲಂಕರಿಸಿದ ಶಿವಲಿಂಗವನ್ನು ಅದರ ಮೇಲ್ಭಾಗದಲ್ಲಿ ಹಲ್ಲಿಯನ್ನು ತೋರಿಸಿದ್ದು, ಅದು ಲಿಂಗವನ್ನು ಪೂಜಿಸುತ್ತಿರುವಂತೆ ಅಥವಾ ಆರಾಧಿಸುತ್ತಾ ಅದರ ಸೇವೆಯನ್ನು ಮಾಡುತ್ತಿರುವಂತೆ ಶಿಲ್ಪಿ ತೋರಿಸಿದ್ದಾನೆ. ಇಲ್ಲಿ ಶಿಲ್ಪಿ ಹಲ್ಲಿಯ ದೇಹದ ಹಾವಭಾವಗಳನ್ನು ಅತೀ ಸೂಕ್ಷ್ಮವಾಗಿ ಗಮನಿಸಿ ಕೆತ್ತಲಾಗಿದೆ. ಎಂದು ಹೇಳಬಹುದು. ಮತ್ತೊಂದು ಶಿಲ್ಪದಲ್ಲಿ ಹೂವುಗಳಿಂದ ಅಲಂಕರಣೆಯಾದ ಲಿಂಗವನ್ನು ಮತ್ತು ಲಿಂಗದ ಬಲಭಾಗದಲ್ಲಿ ಹಲ್ಲಿಯನ್ನು ತೋರಿಸಲಾಗಿದೆ. ಈ ರೀತಿಯ ಸಣ್ಣಪುಟ್ಟ ಭಿನ್ನತೆಗಳು ಇತರೆ ದೇವಾಲಯಗಳ ಶಿಲ್ಪಗಳಲ್ಲೂ ಕಂಡುಬರುತ್ತವೆ. ಇವುಗಳನ್ನು ಹೊರತುಪಡಿಸಿದರೆ ಎಲ್ಲಾ ಶಿಲ್ಪಗಳಲ್ಲೂ ಶಿವಲಿಂಗವನ್ನು ಹಲ್ಲಿಯು ಪೂಜಿಸುತ್ತಿರುವಂತೆ ಕೆತ್ತಿದ್ದು, ಅದರ ನೈಜ ಭಕ್ತಿಯನ್ನು ತೋರಿಸುವಲ್ಲಿ ಶಿಲ್ಪಿಯು ತನ್ನ ಕಲಾ ನೈಪುಣ್ಯತೆಯನ್ನ ಪ್ರದರ್ಶಿಸಿದ್ದಾನೆ. ಇಲ್ಲಿ ಪ್ರಾಣಿಗಳಿಗೂ ದೈವ ಭಕ್ತಿ ಇರುವುದನ್ನು ನಿರೂಪಿಸಿರುವುದು ಗಮನಾರ್ಹವಾಗಿದೆ. ಹಂಪಿ ಪರಿಸರದ ಬಹುತೇಕ ಶಿಲ್ಪಗಳಲ್ಲಿನ ಹಲ್ಲಿಯ ದೇಹ ಲಕ್ಷಣ ಆಕಾರದ ಆಧಾರದ ಮೇಲೆ ಅವು ಲ್ಯಾಸೆರ್‌ಟೀಲಿಯ (*Lasartilia*) ಗಣದ, ಗೆಕ್ಕೊನಿಡೆ (*Gekkonidae*) ಕುಟುಂಬಕ್ಕೆ ಸೇರಿದ ಗೌಳಿ ಅಥವಾ ಹಲ್ಲಿ ಎಂಬುದಾಗಿ ಗುರುತಿಸಲಾಗಿದೆ. ಹೆಮಿಡ್ಯಾಕ್ಟೆಲಸ್ ಬ್ರೂಕಿ (*Hemidactylus brooki*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೦೭]

ಶಿವಲಿಂಗವನ್ನು ಪೂಜಿಸುತ್ತಿರುವ ಜೇಡರ ಹುಳುವಿನ ಶಿಲ್ಪ

ಹಂಪಿ ಪರಿಸರದಲ್ಲಿನ ಶಿಲ್ಪಗಳಲ್ಲಿ ಜೇಡರಹುಳು ಶಿವಲಿಂಗದ ಮೇಲ್ಭಾಗದಲ್ಲಿದ್ದು ಪೂಜಿಸುತ್ತಿರುವಂತೆ ತೋರಲಾದ ಶಿಲ್ಪಗಳು ಪ್ರಮುಖವಾಗಿವೆ. ಈ ರೀತಿಯ ಶಿಲ್ಪಗಳು ಹಂಪಿ ಪರಿಸರದಲ್ಲಿ ಕೇವಲ ಎರಡು ಶಿಲ್ಪಗಳು ಮಾತ್ರ ಕಂಡುಬಂದಿದ್ದು, ಒಂದು ವಿರೂಪಾಕ್ಷ ದೇವಾಲಯದ ದಕ್ಷಿಣ ಭಿತ್ತಿಯಲ್ಲಿ ಕಂಡುಬಂದರೆ, ಮತ್ತೊಂದು ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯದ ನವರಂಗದ



ಕಂಬದಲ್ಲಿ ಕಂಡುಬರುತ್ತದೆ. ಹಂಪಿ ಪರಿಸರದ ದೈವಭಕ್ತ ಪ್ರಾಣಿಶಿಲ್ಪಗಳಲ್ಲಿ ಅತೀ ಕಡಿಮೆ ಸಂಖ್ಯೆಯಲ್ಲಿ ಕಂಡುಬಂದಿರುವ ಶಿಲ್ಪಗಳು ಇವಾಗಿವೆ.



ಜೇಡರ ಹುಳು
ಗಣ : ಅರಾನಿಡೆ



ವಿರೂಪಾಕ್ಷ ದೇವಾಲಯ, ಹಂಪಿ



ಮಲ್ಲಿಕಾರ್ಜುನ ದೇವಾಲಯ,
ಮಲಪನಗುಡಿ

ವಿರೂಪಾಕ್ಷ ದೇವಾಲಯದ ದಕ್ಷಿಣದ ಭಿತ್ತಿಯಲ್ಲಿನ ಉಬ್ಬುಶಿಲ್ಪದಲ್ಲಿ ಶಿವಲಿಂಗವನ್ನು ತೋರಿಸಿದ್ದು, ಅದರ ಮೇಲ್ಭಾಗದಲ್ಲಿ ಜೇಡರಹುಳುವನ್ನು ಅತಿ ಸೂಕ್ಷ್ಮವಾಗಿ ತೋರಿಸಲಾಗಿದೆ. ಹಾಗೆಯೇ ಮಲಪನಗುಡಿ ಮಲ್ಲಿಕಾರ್ಜುನ ದೇವಾಲಯದಲ್ಲಿನ ಶಿಲ್ಪದಲ್ಲಿಯೂ ಇದೇ ರೀತಿಯಾಗಿದ್ದರೂ ಅದಕ್ಕೆ ಬಣ್ಣ ಬಳಿದಿರುವ ಕಾರಣದಿಂದ ಅಷ್ಟು ಸ್ಪಷ್ಟವಾಗಿ ಕಂಡುಬಂದಿರುವುದಿಲ್ಲ. ಅದನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರ ಅದು ಜೇಡರಹುಳು ಎಂಬುದು ಗೊತ್ತಾಗುತ್ತದೆ. ಈ ರೀತಿಯಾಗಿ ಶಿವಲಿಂಗವನ್ನು ಪೂಜಿಸುತ್ತಿರುವ ವಿರೂಪಾಕ್ಷ ದೇವಾಲಯದಲ್ಲಿನ ಜೇಡರಹುಳು, ಆನೆ, ಸರ್ಪದ ಶಿಲ್ಪಗಳಿಗೆ ಶ್ರೀ ಕಾಳಹಸ್ತಿ ದೇವಾಲಯಕ್ಕೆ ಸಂಬಂಧಿಸಿದಂತೆ ಸ್ಥಳಪುರಾಣ ಅಥವಾ ಐತಿಹ್ಯವಿದ್ದು, ಇದರ ಕುರಿತು ಈಗಾಗಲೇ ಚರ್ಚಿಸಲಾಗಿದೆ.[೧೦೮]

ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿನ ಪ್ರಾಣಿಭಕ್ತ ಶಿಲ್ಪಗಳಾದ ಹಸು, ನಂದಿ, ಗಜ, ಹಲ್ಲಿ, ಹಾವು ಶಿಲ್ಪಗಳ ಕುರಿತು ಶ್ರೀಶೈಲ ಮನಗುತ್ತಿ ಇವರು ಹಂಪಿ ವಿರೂಪಾಕ್ಷ ದೇವಾಲಯದಲ್ಲಿರುವ ಪ್ರಾಣಿಭಕ್ತಿ ಶಿಲ್ಪಗಳು ಎಂಬ ಲೇಖನವನ್ನು ಪ್ರಕಟಿಸಿರುತ್ತಾರೆ.[೧೦೯] ಆದರೆ ಇವರು ವಿರೂಪಾಕ್ಷ ದೇವಾಲಯದಲ್ಲಿ ಪ್ರಾಣಿಭಕ್ತ ಜೇಡರ ಹುಳುವನ್ನು ಕೈಬಿಟ್ಟಿರುತ್ತಾರೆ. ಜೊತೆಗೆ ಇವರು ಕೇವಲ ವಿರೂಪಾಕ್ಷ ದೇವಾಲಯದಲ್ಲಿನ ಪ್ರಾಣಿಭಕ್ತಿ ಶಿಲ್ಪಗಳನ್ನು ಮಾತ್ರ ತಿಳಿಸಿರುತ್ತಾರೆ. ಜೊತೆಗೆ ಈ ಮೇಲೆ ವಿವರಿಸಿದ ಕೆಲವು ದೈವಭಕ್ತ ಪ್ರಾಣಿಶಿಲ್ಪಗಳ ಕುರಿತು ಬೇರೊಂದು ಕಡೆ ಮಾಹಿತಿ ದೊರೆಯುತ್ತದೆ.[೧೧೦] ಈ ಮೇಲಿನ ಪ್ರಾಣಿಭಕ್ತಿ ಶಿಲ್ಪಗಳ ಅಧ್ಯಯನದಿಂದ ನಾವು ಪ್ರಮುಖವಾಗಿ ತಿಳಿಯುವುದೇನೆಂದರೆ ಪ್ರಾಣಿಗಳಿಗೂ ದೈವಿಕ ಭಕ್ತಿ ಇರುವುದು. ಇಲ್ಲಿ ಶಿಲ್ಪಿಯಾದವನು ದೇವರ ಮೇಲಿನ ಪ್ರಾಣಿಗಳ ನೈಜ ಭಕ್ತಿಯನ್ನು ಅತ್ಯಂತ ಸುಂದರವಾಗಿ ನಿರೂಪಿಸಿರುವುದು ಗಮನಾರ್ಹವಾಗಿದೆ. ಒಟ್ಟಾರೆಯಾಗಿ ಹಂಪಿ ಪರಿಸರದ ದೇವಾಲಯಗಳಲ್ಲಿ ಅದರಲ್ಲೂ ಶೈವ ದೇವಾಲಯಗಳಲ್ಲೇ ಪ್ರಮುಖವಾಗಿ ಕಂಡುಬರುವ ಈ ಪ್ರಾಣಿಭಕ್ತ ಶಿಲ್ಪಗಳು ಶಿವನಲ್ಲಿ ವಿಶೇಷವಾದ ಭಕ್ತಿಯನ್ನು ಹೊಂದಿವೆ ಎಂಬುದು ಪ್ರಮುಖವಾಗಿ ತಿಳಿದುಬರುತ್ತದೆ. ಹೀಗೆ ಪ್ರಾಣಿಗಳು ದೈವಭಕ್ತ ಮಾತ್ರವಾಗಿರದೇ ದೈವತ್ವವನ್ನು ಸಹ ಪಡೆದುಕೊಂಡಿರುವುದು ಇಲ್ಲಿನ ಶಿಲ್ಪಗಳಿಂದ ತಿಳಿದುಬರುತ್ತದೆ.



೪.೨ ಧಾರ್ಮಿಕೇತರ ಶಿಲ್ಪಗಳಲ್ಲಿ ಪ್ರಾಣಿ ಶಿಲ್ಪಗಳು

ಈಗಾಗಲೇ ಧಾರ್ಮಿಕ ಶಿಲ್ಪಗಳಲ್ಲಿ ಪ್ರಾಣಿ ಶಿಲ್ಪಗಳ ಪಾತ್ರ ಮತ್ತು ಮಹತ್ವವನ್ನು ಈ ಮೇಲಿನಂತೆ ವಿವರಿಸಲಾಗಿದ್ದು, ಅಂತಹವುಗಳನ್ನು ಹೊರತುಪಡಿಸಿ ಧಾರ್ಮಿಕೇತರ ಪ್ರಾಣಿಶಿಲ್ಪಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಹಂಪಿ ಪರಿಸರದ ಧಾರ್ಮಿಕೇತರ ಪ್ರಾಣಿಶಿಲ್ಪಗಳನ್ನು ಅಧ್ಯಯನ ದೃಷ್ಟಿಯಿಂದ ಕಥಾನಕ ಶಿಲ್ಪಗಳು ಹಾಗೂ ಬಿಡಿಶಿಲ್ಪಗಳೆಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

೪.೨.೧ ಕಥಾನಕ ಶಿಲ್ಪಗಳು

ಯಾವುದೇ ಘಟನೆ, ಸನ್ನಿವೇಶ ಅಥವಾ ಕಥೆಯನ್ನು ವಿವರಿಸುವ ಅಥವಾ ನಿರೂಪಿಸುವ ಶಿಲ್ಪಗಳನ್ನು ಕಥಾನಕ ಶಿಲ್ಪಗಳೆಂದು ಗುರುತಿಸಲಾಗಿದೆ. ಹಂಪಿ ಪರಿಸರದ ಸ್ಮಾರಕಗಳಲ್ಲಿ ಹಲವು ಕಥಾನಕ ಶಿಲ್ಪಗಳನ್ನು ಬಿಡಿಸಲಾಗಿದೆ. ಯಾವುದೇ ಕಥೆ ಅಥವಾ ಸನ್ನಿವೇಶದ ವಿಷಯ ನಿರೂಪಣೆ ಇಲ್ಲಿ ಅತಿಮುಖ್ಯವಾಗಿರುತ್ತದೆ. ಹಂಪಿ ಪರಿಸರದ ದೇವಾಲಯಗಳು, ಮಂಟಪಗಳು, ಅಧಿಷ್ಠಾನ, ಭಿತ್ತಿಗಳು ಮತ್ತು ಕಂಬಗಳಲ್ಲಿ ಕಥಾನಕ ಶಿಲ್ಪಗಳನ್ನು ಪ್ರಮುಖವಾಗಿ ಕಾಣಬಹುದು. ಕಂಬಗಳಲ್ಲಿ ಶಿಲ್ಪಗಳು ಬಿಡಿಶಿಲ್ಪಗಳಂತೆ ಮೇಲ್ನೋಟಕ್ಕೆ ಕಂಡುಬಂದರೂ, ಅವುಗಳು ಸೂಕ್ಷ್ಮ ಅವಲೋಕನೆಯಿಂದ ಅವು ಕಥಾನಕ ಶಿಲ್ಪಗಳಾಗಿರುವುದು ತಿಳಿದುಬರುತ್ತದೆ. ಹಂಪಿ ಪರಿಸರದಲ್ಲಿ ಕಥಾನಕ ಶಿಲ್ಪಗಳು ಮತ್ತು ಬಿಡಿಶಿಲ್ಪಗಳು ಎರಡೂ ಸಹ ಅಧಿಕ ಸಂಖ್ಯೆಯಲ್ಲಿ ಕಂಡುಬಂದಿದ್ದು, ಇಲ್ಲಿ ಕಥಾನಕ ಶಿಲ್ಪಗಳು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ಹಂಪಿ ಪರಿಸರದಲ್ಲಿ ವಿವಿಧ ವಿಷಯಗಳನ್ನು ನಿರೂಪಿಸುವ ಕಥಾನಕ ಶಿಲ್ಪಗಳು ಹೆಚ್ಚು ವೈವಿಧ್ಯಮಯವಾಗಿರುವುದರಿಂದ ಇವುಗಳನ್ನು ಪ್ರಾಣಿ ಬೇಟೆ ಶಿಲ್ಪಗಳು, ಪ್ರಾಣಿಗಳ ಮನರಂಜನಾ ಶಿಲ್ಪಗಳು, ಪ್ರಾಣಿಗಳ ಪಥಸಂಚಲನ ಶಿಲ್ಪಗಳು, ಪ್ರಾಣಿಗಳನ್ನು ಪಳಗಿಸುವ ಮತ್ತು ಮಾರಾಟ ಮಾಡುತ್ತಿರುವ ಶಿಲ್ಪಗಳು, ಖಗೋಳ ಜ್ಞಾನವನ್ನು ತಿಳಿಸುವ ಪ್ರಾಣಿ (ಗ್ರಹಣದ) ಶಿಲ್ಪಗಳು ಹಾಗೂ ಇತರೆ ಶಿಲ್ಪಗಳೆಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

ಅ) ಪ್ರಾಣಿ ಬೇಟೆ ಶಿಲ್ಪಗಳು

ಪ್ರಾಣಿಯನ್ನು ಹಿಡಿದು ಕೊಲ್ಲುವ, ತಿನ್ನುವ ಹಾಗೂ ಪಳಗಿಸುವ ಚಟುವಟಿಕೆಗಳಿಗೆ ಬೇಟೆ ಎನ್ನುತ್ತಾರೆ. ಈ ಬೇಟೆ ಪುರಾತನ ಮಾನವನ ವೃತ್ತಿ ಹಾಗೂ ಆಹಾರ ಮಾಧ್ಯಮ ಒದಗಿಸುವ ಪ್ರಕ್ರಿಯೆಯಾಗಿದೆ. ಬೇಟೆ ಮಾನವನ ಆರಂಭಿಕ ಜೀವನದ ಮತ್ತು ಆಹಾರ ಹುಡುಕಾಟದ ಪ್ರಥಮ ಹಂತ. ಈ ಹಂತದಲ್ಲಿ ತನ್ನ ಬೇಟೆಯ ಅನುಭವಗಳನ್ನು ಮಾನವ ಗುಹೆ, ಕಲ್ಲು-ಬಂಡೆಗಳ ಮೇಲೆ ಬಿಡಿಸಿದ್ದಾನೆ. ಆಹಾರ ಸಂಪಾದನೆ, ಸ್ವಯಂರಕ್ಷಣೆ, ಮನೋರಂಜನೆ, ಪ್ರಕೃತಿ ಸಮತೋಲನ ಮುಂತಾದ ಕಾರಣಗಳಿಂದ ಬೇಟೆಯಾಡುತ್ತಿರುವುದು ತಿಳಿದುಬರುತ್ತದೆ. ಮಾನವ ಆರ್ಥಿಕವಾಗಿ ಸದೃಢನಾದಂತೆ ಜ್ಞಾನದ ವಿಕಾಸದ ಮೇಲೆ ಪರಿಣಾಮ ಬೀರಿ ಆಳುವ, ಪಳಗಿಸುವ ಶಕ್ತಿ ಪಡೆದ ನಂತರದ ಕಾಲದಲ್ಲಿ ಜನಸಾಮಾನ್ಯರು ತಮ್ಮ ಜೀವನ ನಿರ್ವಹಣೆಗೆ ಬೇಟೆಯನ್ನು ಅವಲಂಬಿಸಿ ಮುಖ್ಯ ಕಾಯಕವನ್ನಾಗಿ

ಮಾಡಿಕೊಂಡರು. ಆದರೆ ಸಮಾಜದ ಶ್ರೀಮಂತರಿಗೆ ಆಳುವ ವರ್ಗಗಳಿಗೆ ಮಾತ್ರ ಇದು ಮನೋರಂಜನೆಯ ಭಾಗವಾಗಿತ್ತು. ಹಾಗಾಗಿ ಬೇಟೆಯು ಜೀವನ ನಿರ್ವಹಣೆ ಮತ್ತು ಮನೋರಂಜನೆಯ ದೃಷ್ಟಿಗಳಿಂದ ಪ್ರಾಮುಖ್ಯತೆಯನ್ನು ಗಳಿಸಿತ್ತು.

ಈ ಬೇಟೆಯ ಶಕ್ತಿ ಅನೇಕ ಸಾಮ್ರಾಜ್ಯಗಳ ಸ್ಥಾಪನೆಗೆ ನಾಂದಿಯಾಗಿದೆ. ನಮ್ಮ ಜನಪದರು ಇತಿಹಾಸವನ್ನು ಹೇಳುವಾಗ ರಾಜ್ಯ, ವಂಶ, ಸಾಮ್ರಾಜ್ಯಗಳು ಉದಯವಾಗುವುದು ಬೇಟೆಯಿಂದಲೇ ಎಂದು ಹೇಳುತ್ತಾರೆ. ಉದಾ: ಶಾತವಾಹನರು, ಕದಂಬರು, ಹೊಯ್ಸಳರು, ವಿಜಯನಗರ ಸಂಸ್ಥಾನಗಳನ್ನು ಮುಖ್ಯವಾಗಿ ಹೆಸರಿಸುವುದು. ಪ್ರಾಚೀನ ಕಾಲದಿಂದಲೂ ಅರಸರು ಬೇಟೆಯಾಡುತ್ತಾ ಬಂದಿದ್ದಾರೆ. ಅರಸರ ಬೇಟೆ ಬಗೆಗೆ ಕಾವ್ಯ ಹುಟ್ಟಿಕೊಂಡರೆ, ಜನಸಾಮಾನ್ಯರು ಬೇಟೆ ಬಗೆಗೆ ವೀರಗಲ್ಲುಗಳು ಹುಟ್ಟಿ ಮೌಖಿಕ ಕಾವ್ಯಗಳು ನಿರ್ಮಾಣಗೊಂಡವು.

ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಬೇಟೆ ಉತ್ತುಂಗ ಶಿಖರ ಮುಟ್ಟಿತು. ಕಾರಣ ಅರಸರು ಮತ್ತು ಜನಸಾಮಾನ್ಯರು ಬೇಟೆಯನ್ನು ಒಂದು ಪ್ರಮುಖ ಉದ್ಯೋಗವಾಗಿ ಅವಲಂಬಿಸಿದ್ದರು. ಈ ಕುರಿತಂತೆ ನಮಗೆ ಅನೇಕ ಆಧಾರಗಳು ಲಭ್ಯವುಂಟು. ಅವುಗಳೆಂದರೆ ಪುರಾತತ್ವ ಆಧಾರಗಳು ಮತ್ತು ಸಾಹಿತ್ಯ ಆಧಾರಗಳು. ಪುರಾತತ್ವ ಆಧಾರಗಳಲ್ಲಿ ಪ್ರಮುಖವಾಗಿ ಶಾಸನ, ಶಿಲ್ಪಕಲೆ, ಚಿತ್ರಕಲೆ, ದೇವಾಲಯ ಮತ್ತು ಅವಶೇಷಗಳನ್ನು ಹೆಸರಿಸಬಹುದು. ಇವುಗಳನ್ನು ಹಂಪಿ ಪರಿಸರದ ವ್ಯಾಪ್ತಿಯಲ್ಲಿ ನೀಡಿದ್ದರೂ ಪ್ರಮುಖವಾಗಿ ಹಂಪಿಯ ಮಹಾನವಮಿ ದಿಬ್ಬ ಮತ್ತು ಹಲವು ಸ್ಮಾರಕಗಳಲ್ಲಿ ಪ್ರಮುಖವಾಗಿ ಗಮನಿಸಲಾಗಿದೆ. ಸಾಹಿತ್ಯ ಆಧಾರಗಳು ಎರಡು ಬಗೆಯವು ದೇಶಿಯ ಮತ್ತು ವಿದೇಶಿ ಸಾಹಿತ್ಯ ಆಧಾರಗಳಲ್ಲಿ ಭಾರತಕ್ಕೆ ಬೇಟಿ ನೀಡಿದ ವಿದೇಶಿ ಪ್ರಯಾಣಿಕರ ನೆನಪುಗಳಲ್ಲಿದ್ದ ಬೇಟೆಯ ಉಲ್ಲೇಖಗಳನ್ನು ಗುರುತಿಸಲಾಗುವುದು. ದೇಶಿಯ ಸಾಹಿತ್ಯ ಆಧಾರಗಳಲ್ಲಿ ಕನ್ನಡ, ತೆಲುಗು, ತಮಿಳು ಮತ್ತು ಸಂಸ್ಕೃತ ಕೃತಿಗಳನ್ನು ಅವಲೋಕಿಸಿದರೂ ಪ್ರಧಾನವಾಗಿ ತೆಲುಗು ಮತ್ತು ಕನ್ನಡ ಕೃತಿಗಳು ಗಮನಾರ್ಹವಾಗಿವೆ. ಮಧ್ಯಕಾಲೀನ ಸಂದರ್ಭದಲ್ಲಿ ವಿಜಯನಗರ ಆಸ್ಥಾನದ ಕವಿಗಳು ಕಂಡ ಮೃಗಯಾ ವರ್ಣನೆಯ ಪ್ರಸಂಗಗಳು ವಾಸ್ತವಕ್ಕೆ ಕೈಗನ್ನಡಿಯಾಗಿವೆ.

ಮೇಲೆ ಹೇಳಿದಂತೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದುದೇ ಬೇಟೆಯ ಮೂಲಕ ಎಂಬುದಕ್ಕೆ ಒಂದು ಐತಿಹ್ಯವಿದೆ. ಹಕ್ಕಬುಕ್ಕ (ಹರಿಹರ, ಬುಕ್ಕರಾಯ) ಎಂಬುವವರು ಈ ಪ್ರದೇಶದಲ್ಲಿ ಬೇಟೆಯಾಡುತ್ತಾ ಬರುವಾಗ ಇವರ ಬೇಟೆ ನಾಯಿಗಳನ್ನು ಮೊಲಗಳು ಅಟ್ಟಿಸಿಕೊಂಡು ಹೋದವಂತೆ ಇದನ್ನು ಕಣ್ಣಾರೆ ಕಂಡ ಹಕ್ಕಬುಕ್ಕರ ಗುರುಗಳಾದ ವಿದ್ಯಾರಣ್ಯರು ಈ ಪ್ರದೇಶದ ಮಹಿಮೆಯನ್ನು ಗುರುತಿಸಿ ಈ ಸ್ಥಳದಲ್ಲಿ ರಾಜ್ಯ ಕಟ್ಟಬೇಕೆಂದು ತಿಳಿಸಿದರಂತೆ ಅದರಂತೆ ಈ ರಾಜರಿಬ್ಬರು ಈ ನೆಲದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿದರು ಎಂಬುದು ತಿಳಿದುಬರುತ್ತದೆ.[೧೧೧]

ಅರಸರು ಬೇಟೆಗೆ ಮಹತ್ವ ನೀಡಿದ್ದ ಕುರಿತು ಶಾಸನ ಸಾಹಿತ್ಯ ಮತ್ತು ವಿದೇಶಿ ಪ್ರವಾಸಿಗರ ವರದಿಗಳಿಂದ ತಿಳಿಯುತ್ತದೆ. ಕ್ರಿ.ಶ. ೧೩೪೯ರ ಶಾಸನವು ಹರಿಹರವೊಡೆಯನು ಆನೆಯ ಬೇಟೆಗೆ ಹೋಗಿದ್ದ ಸಂಗತಿಯನ್ನು ತಿಳಿಸುತ್ತದೆ.[೧೧೨] ಕ್ರಿ.ಶ. ೧೪೩೪ರ ಜಟಂಗಿ ರಾಮೇಶ್ವರದ ಶಾಸನವು ಇಮ್ಮಡಿ

ದೇವರಾಯನು ಮಾಚೇನಹಳ್ಳಿಗೆ ಬೇಟೆಯಾಡಲು ಹೋದಾಗ ಜಟಂಗಿ ರಾಮೇಶ್ವರ ದೇವಾಲಯಕ್ಕೆ ಭೇಟಿ ನೀಡಿ ಆ ಹಳ್ಳಿಯ ಆದಾಯ ೨೦ ವರಾಹಗಳನ್ನು ದೇವರಿಗೆ ದಾನ ನೀಡಿದ್ದನು.[೧೧೩] ಕ್ರಿ.ಶ. ೧೪೮೨ರ ಶಾಸನವೊಂದು ಪೆನುಕೊಂಡೆಯ ಮಂತ್ರಿಯು ಬೇಟೆಯಾಡಲು ಬಂದಾಗ ಕಾಡಲ ಉಣಾಳಿಹಳ್ಳಿಯನ್ನು ಮಲ್ಲರಸನಿಗೆ ಉಂಬಳಿಯಾಗಿ ನೀಡಿದ್ದನ್ನು ತಿಳಿಸುತ್ತದೆ.[೧೧೪] ಇಮ್ಮಡಿ ದೇವರಾಯನನ್ನು ಮಹತ್ವದ ಬೇಟೆಗೆ ಹಿರಿಯಣ್ಣನು ಆಹ್ವಾನಿಸಿದ ಸಂಗತಿಯನ್ನು ಕ್ರಿ.ಶ. ೧೪೭೪ರ ವಿರೂಪಾಕ್ಷರಾಯನ ಶಾಸನವು ತಿಳಿಸುತ್ತದೆ.[೧೧೫] ಈ ಸಂಗತಿಗಳು ಅರಸರು ಬೇಟೆಯಲ್ಲಿ ಆಸಕ್ತರಾಗಿ ಸ್ವತಃ ಹೋಗುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಅರಸರು ಮಹತ್ವದ ಬೇಟೆಯಾಡಿ ಅದರ ಸ್ಮರಣಾರ್ಥವಾಗಿ ಬಿರುದುಗಳನ್ನು ಧರಿಸಿದ್ದರು. ದೇವರಾಯನು ಆನೆಯ ಬೇಟೆಗಾರನಾಗಿದ್ದು 'ಗಜಬೇಂಟೆಕಾರ' ಎಂಬ ಬಿರುದ್ದನ್ನು ಧರಿಸಿರುವುದು ಇದಕ್ಕೆ ಉತ್ತಮ ನಿದರ್ಶನ.

ವಿಜಯನಗರ ಕಾಲದ ಬೇಟೆಯನ್ನು ಕೆ. ಶ್ರೀಕಂಠಯ್ಯನವರು ತಮ್ಮ "ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ" ಎಂಬ ಕೃತಿಯಲ್ಲಿ ಪ್ರಾಸಂಗಿಕವಾಗಿ ಉಲ್ಲೇಖಿಸಿದ್ದಾರೆ. ರಾಧಾಕೃಷ್ಣಮೂರ್ತಿ ಅವರು "ವಿಜಯನಗರ ಸಂಸ್ಕೃತಿಯ ಆಕರ ಗ್ರಂಥ ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ" ಎಂಬ ಪ್ರಬಂಧದಲ್ಲಿ ಬೇಟೆಯ ಪ್ರಸ್ತಾಪವಿರುವುದನ್ನು ಬೆಳಕಿಗೆ ತಂದಿದ್ದಾರೆ.[೧೧೬]

ಕ್ರಿ.ಶ. ೧೨ನೇಯ ಶತಮಾನದ ಮುಮ್ಮಡಿ ಸೋಮೇಶ್ವರನ ಮಾನಸೋಲ್ಲಾಸ ಕೃತಿಯು ಬೇಟೆಯಲ್ಲಿ ಅನುಸರಿಸಬೇಕಾದ ತಂತ್ರಗಳ ಬಗ್ಗೆ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ.[೧೧೭] ಹಾಗೆಯೇ ಸೊಬಗಿನ ಸೋನೆ ಕೃತಿಯು ಬೇಟೆಗಾರ ಮತ್ತು ಬೇಟೆಗಾರ್ತಿಯರು ಹಂದಿ, ಜಿಂಕೆ, ಸಾರಂಗ ಮುಂತಾದ ಪ್ರಾಣಿಗಳು ಮತ್ತು ಗೌಜುಗ, ಕೊಕ್ಕರೆ, ಗಿಳಿ ಇತರೆ ಪಕ್ಷಿಗಳನ್ನು ಬೇಟೆಯಾಡಿದ್ದನ್ನು ತಿಳಿಸುತ್ತದೆ.[೧೧೮] ಬೇಟೆಯಲ್ಲಿ ಬೇಟೆಗಾರರು ತೋರಿದ ಶೌರ್ಯ, ಧೈರ್ಯ ಮತ್ತು ಸಾಹಸಗಳ ಬಗ್ಗೆ ಪ್ರೌಢದೇವರಾಯನ ಕಾವ್ಯ ಬಣ್ಣಿಸುತ್ತದೆ.[೧೧೯] ಬೇಟೆಗಾರರು ವಿವಿಧ ಪಕ್ಷಿಗಳ ಜೊತೆ ಆನೆ, ಸಿಂಹ, ಕಾಡುಕೋಣ, ಕಾಡು ಕುದುರೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಜೊತೆಗೆ ತಮ್ಮ ಮೇಲೆ ದಾಳಿ ಮಾಡಿದ ಸಿಂಹವನ್ನು ಚೂಪಾದ ಆಯುಧದಿಂದ ಕೊಂದ ಸಂಗತಿಯ ವರ್ಣನೆ ಅತ್ಯುತ್ತಮವಾಗಿ ಮೂಡಿಬಂದಿದೆ. ಹಾಗೂ ನಂಜುಂಡ ಕವಿಯ ರಾಮನಾಥ ಚರಿತ್ರೆ,[೧೨೦] ಕನಕದಾಸರ ಮೋಹನ ತರಂಗಿ.[೧೨೧] ವಿರೂಪಾಕ್ಷಿ ಪೂಜಾರಹಳ್ಳಿಯವರ ವಿಜಯನಗರ ಕಾಲದ ಸಂಸ್ಕೃತಿ, ಬೇಟೆ, ಪಶುಪಾಲನೆ ಮತ್ತು ಕೃಷಿ[೧೨೨] ಹೀಗೆ ಇನ್ನೂ ಮುಂತಾದ ಸಾಹಿತ್ಯ ಕೃತಿಗಳು ಬೇಟೆಯ ವಿವಿಧ ಆಯಾಮಗಳ ಚಿತ್ರಣವನ್ನು ಅನಾವರಣಗೊಳಿಸುತ್ತವೆ.

ವಿಜಯನಗರ ಕಾಲದಲ್ಲಿದ್ದ ಬೇಟೆಯ ಬಗ್ಗೆ ವಿದೇಶಿಯರ ಬರವಣಿಗೆಗಳನ್ನು ಗಮನಿಸುವುದು ಸೂಕ್ತ. ವೇರ್ಥಮನು ವಿಜಯನಗರ ರಾಜಧಾನಿ ಬಗ್ಗೆ ತಿಳಿಸುತ್ತಾ ಈ ಜಾಗವು ಬೇಟೆಗೂ ಹಕ್ಕಿಗಳನ್ನು ಹಿಡಿಯಲು ಬಹಳ ಚೆನ್ನಾಗಿದ್ದು ಎರಡನೇ ಸ್ವರ್ಗದಂತಿದೆ ಎಂದಿದ್ದಾನೆ.[೧೨೩] ೧೪೪೧ರಲ್ಲಿ ಬಂದ ಅಬ್ದುಲ್ ರಜಾಕ್ ಆನೆ ಹಿಡಿಯುವ ವಿಧಾನ ತಂತ್ರವನ್ನು ತಿಳಿಸಿದ್ದಾನೆ. ೧೫೦೬ರಲ್ಲಿ ಪೋರ್ಚುಗೀಸ್‌ನ ಬಾರ್ಬೋಸಾನು ಸಹ ವಿಜಯನಗರ ಕಾಲದ ಬೇಟೆಯ ಬಗೆಗೆ ತಿಳಿಸುತ್ತಾರೆ.[೧೨೪] ಇಲ್ಲಿನ ಜನರಿಗೆ ಪ್ರಾಣಿ–ಪಕ್ಷಿಗಳ ಬೇಟೆಯಲ್ಲಿ ತುಂಬಾ ಆಸಕ್ತಿಯಿದೆ ಎಂದಿದ್ದಾನೆ.

ಹೀಗೆ ಈ ಮೇಲಿನ ಆಕರಗಳಲ್ಲಿ ವಿವರಿಸಿದ ಬೇಟೆಯ ವಿವರಣೆಗಳನ್ನು ಹಂಪಿ ಪರಿಸರದ ಶಿಲ್ಪಗಳಲ್ಲಿ ಗುರುತಿಸಬಹುದು ಅಧ್ಯಯನ ದೃಷ್ಟಿಯಿಂದ ಪ್ರಾಣಿಬೇಟೆ ಶಿಲ್ಪಗಳನ್ನು ಪ್ರಮುಖವಾಗಿ ಹಂದಿ ಬೇಟೆ ಶಿಲ್ಪಗಳು, ಜಿಂಕೆ ಬೇಟೆ ಶಿಲ್ಪಗಳು, ಹುಲಿ ಬೇಟೆ ಶಿಲ್ಪಗಳು, ಆನೆ ಬೇಟೆಶಿಲ್ಪಗಳು, ಸಿಂಹ ಬೇಟೆ ಶಿಲ್ಪಗಳು ಹಾಗೂ ಇತರ ಬೇಟೆ ಶಿಲ್ಪಗಳೆಂದು ವರ್ಗೀಕರಿಸಿ ವಿವರಿಸಲಾಗಿದೆ.

*** ಹಂದಿ ಬೇಟೆಯ ಶಿಲ್ಪಗಳು**

ವಿಜಯನಗರ ಕಾಲಾವಧಿಯಲ್ಲಿ ಹಂದಿ ಬೇಟೆಯು ಜನಸಾಮಾನ್ಯರಿಗೆ ಆಹಾರದ ಮೂಲವಾಗಿಯೂ ಶ್ರೀಮಂತರಿಗೆ ಅಥವಾ ಆಳುವ ವರ್ಗದವರಿಗೆ ವಿನೋದದ ಪ್ರಕ್ರಿಯೆಯಾಗಿಯೂ ಪ್ರಚಲಿತದಲ್ಲಿತ್ತು. ಈ ಹಂದಿ ಬೇಟೆಯಲ್ಲಿ ಲೌಕಿಕ ಮತ್ತು ಅಲೌಕಿಕ ಎಂಬ ಎರಡು ಪ್ರಕಾರಗಳಿರುವುದನ್ನು ಗಮನಿಸಬಹುದು. ಲೌಕಿಕ ಬೇಟೆಯು ಜನಸಾಮಾನ್ಯರ ಹಸಿವಿನ ಪ್ರಾಯೋಗಿಕ ಚಟುವಟಿಕೆಯಾದರೆ ಅಲೌಕಿಕ ಬೇಟೆಯು ಮಹಾಭಾರತದ ಕಿರಾತಾರ್ಜುನೀಯ (ಶಬರ ಶಂಖರ) ಪ್ರಸಂಗವಾಗಿದೆ. ಕಿರಾತಾರ್ಜುನೀಯವು ಬೇಟೆಗೆ ಬಲಿಯಾಗಿ ಸತ್ತ ಹಂದಿಯನ್ನು ಪಡೆಯಲು ಶಿವನಿಗೂ ಮತ್ತು ಅರ್ಜುನನಿಗೂ ನಡೆಯುವ ಹೋರಾಟದ ಕಥೆ. ಈ ಕಿರಾತಾರ್ಜುನೀಯ ಕಥಾ ಸರಣಿಯ ಶಿಲ್ಪವು ಹಂಪಿಯ ವಿರೂಪಾಕ್ಷ ದೇವಸ್ಥಾನದ ಗರ್ಭಗೃಹದ ವಾಯವ್ಯ ಭಾಗದ ಅರ್ಧಮಂಟಪದ ಹೊರಭಾಗದ ಭಿತ್ತಿಯಲ್ಲಿ ಕಂಡುಬರುತ್ತದೆ.[೧೨೫] ಇದೇ ರೀತಿಯ ಶಿಲ್ಪಗಳು ವಿಜಯನಗರ ಕಾಲಾವಧಿಯ ಲೇಪಾಕ್ಷಿಯ ವೀರಭದ್ರ ದೇವಾಲಯ[೧೨೬] ಹಾಗೂ ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯಗಳಲ್ಲೂ ಇರುವುದು ತಿಳಿದುಬರುತ್ತದೆ.[೧೨೭] ಲೌಕಿಕ ಬೇಟೆ ಶಿಲ್ಪಗಳು ಹಂಪಿ ಪರಿಸರದ ಮಹಾನವಮಿ ದಿಬ್ಬ, ಅದರ ಮುಂದಿನ ಅರಮನೆಯ ಕಟ್ಟಡದ ಅಧಿಷ್ಠಾನ, ಹಜಾರರಾಮಚಂದ್ರ ದೇವಾಲಯದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಮಹಾನವಮಿ ದಿಬ್ಬದಲ್ಲಿ ಹಂದಿ ಬೇಟೆಯ ಪ್ರತ್ಯೇಕ ಶಿಲ್ಪಗಳು ಹಾಗೂ ಜಿಂಕೆ ಬೇಟೆಯಲ್ಲಿನ ಪ್ರಾಸಂಗಿಕ ಶಿಲ್ಪಗಳೆರಡೂ ಕಂಡುಬಂದಿದ್ದು ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

ಮಹಾನವಮಿದಿಬ್ಬವು ಕೃಷ್ಣದೇವರಾಯ ತನ್ನ ವಿಜಯಗಳ ಸಂಕೇತದಿಂದ ಉತ್ಸವ ಆಚರಣೆಗಳನ್ನು ನಡೆಸಲು ಕಟ್ಟಿಸಿದ ಒಂದು ಬೃಹತ್ ವೇದಿಕೆ. ಈ ವೇದಿಕೆಯಲ್ಲಿ ಮತ್ತು ಮುಂಭಾಗದ ಅರಮನೆ ಕಟ್ಟಡಗಳ ಅಧಿಷ್ಠಾನದಲ್ಲಿ ಅಲಂಕಾರವಾದ ಪ್ರಾಣಿ, ಪಕ್ಷಿಗಳ ಉಬ್ಬು ಶಿಲ್ಪಗಳಿವೆ. ಆನೆ, ಕುದುರೆ, ಒಂಟೆ, ಸಿಂಹ, ಹುಲಿ, ಜಿಂಕೆ, ಹಂದಿ, ಗಿಳಿ, ನವಿಲು, ಹಂಸ, ಮೀನು ಶಿಲ್ಪಗಳು ಅಲ್ಲದೆ ಹಲವು ಕಾಲ್ಪನಿಕ ಶಿಲ್ಪಗಳು ಸಹ ಕಂಡುಬರುತ್ತವೆ. ಅದರಲ್ಲೂ ಬೇಟೆಯ ಸನ್ನಿವೇಶದ ಶಿಲ್ಪಗಳನ್ನು ಇಲ್ಲಿ ಅಧಿಕ ಸಂಖ್ಯೆಯಲ್ಲಿ ಬಿಡಿಸಲಾಗಿದೆ.

ಮಹಾನವಮಿ ದಿಬ್ಬದ ದಕ್ಷಿಣ ಬದಿಯ ಮೆಟ್ಟಿಲುಗಳಿಗೆ ಹೊಂದಿಕೊಂಡಂತಿರುವ ಗೋಡೆಯಲ್ಲಿ ದಕ್ಷಿಣಾಭಿಮುಖವಾಗಿರುವ ಕೆಳಗಿನ ಸಾಲಿನಲ್ಲಿ ಹಂದಿ ಬೇಟೆಯ ನಿರೂಪಣಾತ್ಮಕ ಶಿಲ್ಪಗಳಿವೆ. ಅದರಲ್ಲಿ ಎಡದಿಂದ ಬಲಭಾಗಕ್ಕೆ ಅತಿ ಕೆಳಗಿನ ಸಾಲಿನ ಮೊದಲನೆ ಪಟ್ಟಿಕೆಯಲ್ಲಿ ಬೇಟೆಗಾರ ದಂಪತಿಗಳು ಬೇಟೆಯಾಡಿದ ಪ್ರಾಣಿಯನ್ನು ಹೊತ್ತು ಮುನ್ನಡೆಯುತ್ತಿದ್ದು, ದಾರಿ ಮಧ್ಯದಲ್ಲಿ ಕಂಡ ಕಾಡುಹಂದಿಯೊಂದಕ್ಕೆ ಬೇಟೆಗಾರ್ತಿ ಬಿಲ್ಲನ್ನು ಬಿಡುವ ಸನ್ನಿವೇಶವಿದ್ದು, ಮುಂಭಾಗದಲ್ಲಿ ಎರಡು ನಾಯಿಗಳು ಕಾಡುಹಂದಿಯ

ಮೇಲೆ ಎರಗಿದ್ದು, ಒಂದು ಹಂದಿಯ ಮೇಲ್ಭಾಗದಲ್ಲಿದ್ದು, ಕೆಳದವಡೆಯನ್ನು ಹಿಡಿದಿದೆ. ಮತ್ತೊಂದು ಹಂದಿಯ ಮೇಲ್ಭಾಗದಲ್ಲಿದ್ದು, ತಲೆಯ ಭಾಗದಲ್ಲಿ ಕಚ್ಚುತ್ತಿರುವಂತೆ ತೋರಲಾಗಿದೆ. ಈ ಶಿಲ್ಪದಲ್ಲಿನ ಹಂದಿ ಕಾಡುಹಂದಿಯೆಂದು ತಿಳಿಸಲು ಹಂದಿಗೆ ಕೋರೆಹಲ್ಲುಗಳನ್ನು ಉದ್ದವಾಗಿಯೂ, ದೊಡ್ಡದಾಗಿಯೂ ಶಿಲ್ಪಿ ತೋರಿಸಿರುವುದು ಗಮನಾರ್ಹ. ಹಾಗಾಗಿ ಶಿಲ್ಪದಲ್ಲಿನ ಹಂದಿಯ ದೇಹಲಕ್ಷಣಗಳ ಆಧಾರದ ಮೇಲೆ ಇದನ್ನು ಕಾಡುಹಂದಿಯೆಂದು ಗುರುತಿಸಲಾಗಿದೆ. ಇದು ಸೂಯಿಡೆ (*Suiedae*) ಕುಟುಂಬಕ್ಕೆ ಸೇರಿದ್ದು ಸಸ್‌ಸ್ಕ್ರಾಫ್ ಕ್ರಿಸ್‌ಟೇಟಸ್ (*Susscrofa cristetus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೨೮] ಜೊತೆಗೆ ಶಿಲ್ಪದಲ್ಲಿನ ಮರಗಳು ಮತ್ತು ಇತರೆ ಪ್ರಾಣಿಗಳು ಸಹ ಇಲ್ಲಿರುವುದರಿಂದ ಇದೊಂದು ಕಾಡಿನಲ್ಲಿನ ಸನ್ನಿವೇಶವೆಂದು ತಿಳಿಯಬಹುದು. ಈ ಶಿಲ್ಪದಲ್ಲಿ ಬೇಟೆಗಾರ್ತಿಯರು ಧರಿಸಿರುವ ಉಡುಗೆ-ತೊಡುಗೆಗಳಿಂದ ಅವರು ಬುಡಕಟ್ಟು ಜನರಾಗಿದ್ದು, ಆಹಾರಕ್ಕಾಗಿ ಅಥವಾ ಜೀವನ ನಿರ್ವಹಣೆಗಾಗಿ ಬೇಟೆಗೆ ಬಂದಿರುವರು ಎಂದು ಅಭಿಪ್ರಾಯಪಡಬಹುದು. ಶಿಲ್ಪದಲ್ಲಿನ ನಾಯಿಗಳ ದೇಹದ ರಚನೆಯನ್ನು ಗಮನಿಸಿದರೆ ಇವು ಕೈನಿಡೆ ಕುಟುಂಬಕ್ಕೆ ಸೇರಿದ ಮುದೋಳ ನಾಯಿಗಳೆಂದು, ಇವು ಬೇಟೆಗೆ ಹೆಸರುವಾಸಿಯಾದ ತಳಿಗಳೆಂಬುದು ತಿಳಿಯುತ್ತದೆ. ಇದನ್ನು ಕಾರವನ್ ಹಂಡ್ ಎಂದು ಕರೆಯಲಾಗುತ್ತದೆ.[೧೨೯]

ನಂತರದ ಪಟ್ಟಿಕೆಯಲ್ಲಿ ಆರು ಜಿಂಕೆಗಳಿದ್ದು, ಅದರಲ್ಲಿ ಮೂರು ಜಿಂಕೆಗಳು ಹುಲ್ಲನ್ನು ತಿನ್ನುತ್ತಿದ್ದರೆ, ಮೇಲ್ಭಾಗದ ಮೂರು ಜಿಂಕೆಗಳು ಈ ಹಂದಿ ಬೇಟೆಯ ಸನ್ನಿವೇಶವನ್ನು ಗಮನಿಸುತ್ತಿವೆ. ಈ ಶಿಲ್ಪಗಳಲ್ಲಿನ ಜಿಂಕೆಗಳ ದೇಹಲಕ್ಷಣಗಳ ಆಧಾರದ ಮೇಲೆ ಇವು ಬೋವಿಡೆ (*Bovidae*) ಕುಟುಂಬಕ್ಕೆ ಸೇರಿದ ಚಿಂಕಾರ ಎಂಬುದಾಗಿ ಗುರುತಿಸಲಾಗಿದ್ದು, ಗಸೆಲ ಬೆನ್ನಟ್ಟಿ (*Gazzela bennatti*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೩೦] ಶಿಲ್ಪದ ಪ್ರತಿ ದೃಶ್ಯದ ಮಧ್ಯದಲ್ಲಿ ಮರವನ್ನು ತೋರಿಸುವುದು ಈ ಶಿಲ್ಪದ ವಿಶೇಷತೆ ಹಾಗೆಯೇ ಇಲ್ಲಿ ತೋರಿರುವ ಕಾಡಿನ ಚಿತ್ರಣ ಮತ್ತು ಪ್ರಾಣಿಗಳ ಗುಂಪು ಅತ್ಯಂತ ವಾಸ್ತವಿಕವಾಗಿರುವಂತೆ ಶಿಲ್ಪದಲ್ಲಿ ಅತೀಸೂಕ್ಷ್ಮವಾಗಿ ತೋರಿಸುವಲ್ಲಿ ಶಿಲ್ಪಿಯು ಯಶಸ್ವಿಯಾಗಿದ್ದಾನೆ.

ಹಂದಿ ಬೇಟೆಗೆ ಸಂಬಂಧಿಸಿದ ಮತ್ತೊಂದು ಶಿಲ್ಪ ಈ ಮೇಲೆ ವಿವರಿಸಿದ ಶಿಲ್ಪದ ಸಾಲಿನ ಮುಂದಿನ ಪಟ್ಟಿಯಲ್ಲಿದೆ. ಈ ಪಟ್ಟಿಕೆಯಲ್ಲಿ ಬೇಟೆಗಾರ ಮತ್ತು ಬೇಟೆಗಾರ್ತಿಯರಿದ್ದು, ಮುಂದಿನ ಬೇಟೆಗಾರರ ಬಿಲ್ಲನ್ನು ಹಂದಿಯ ಮೇಲೆ ಪ್ರಯೋಗಿಸುತ್ತಿದ್ದು, ಆ ಬಿಲ್ಲು ಹಂದಿಯ ಕುತ್ತಿಗೆಯ ಭಾಗಕ್ಕೆ ಚುಚ್ಚಿಕೊಂಡಿದೆ. ಜೊತೆಗೆ ಎರಡು ಶ್ವಾನಗಳು ಆ ಹಂದಿಯ ಮೇಲೆ ದಾಳಿ ಮಾಡುತ್ತಿರುವಂತೆ ಹಂದಿ ತನ್ನ ಮುಂದಿನ ಎರಡು ಕಾಲುಗಳನ್ನೆತ್ತಿ ಓಡಲು ಪ್ರಯತ್ನಿಸುತ್ತಿರುವಂತೆ ಶಿಲ್ಪಿ ಅತಿ ನೈಜವಾಗಿ ಕೆತ್ತಿದ್ದಾನೆ ಈ ಪಟ್ಟಿಕೆಯಲ್ಲಿ ಬೇಟೆಗಾರ್ತಿಯ ಕಾಲಿಗೆ ಚುಚ್ಚಿರುವ ಮುಳ್ಳನ್ನು ಮತ್ತೊಬ್ಬರು ತೆಗೆಯುತ್ತಿರುವಂತೆ ತೋರಲಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಕಾಲದಲ್ಲಿ ಮಹಿಳೆಯರು ಸಹ ಬೇಟೆಗೆ ಹೋಗುತ್ತಿದ್ದರೆಂಬುದಕ್ಕೆ ಈ ರೀತಿಯ ಶಿಲ್ಪಗಳು ಪ್ರಮುಖ ನಿದರ್ಶನಗಳಾಗಿವೆ.

ಮಹಾನವಮಿ ದಿಬ್ಬದ ದಕ್ಷಿಣ ಬದಿಯ ಎರಡನೆ ಹಂತದಲ್ಲಿ ಹಂದಿ ಬೇಟೆಯ ಮತ್ತೊಂದು ಪ್ರಮುಖ ಶಿಲ್ಪವನ್ನ ಕಂಡರಿಸಲಾಗಿದೆ. ಈ ಶಿಲ್ಪದಲ್ಲಿ ಇಬ್ಬರು ಬೇಟೆಗಾರರು ಮತ್ತು ಒಂದು ನಾಯಿಯನ್ನು





ಕಾಡು ಹಂದಿ
ಗಣ : ಆರ್ಟಿಯೋಡಾಕ್ಟೈಲ
ಕುಟುಂಬ : ಸೂಯಿಡೆ

ಕಾಡು ಹಂದಿ ಬೇಟೆಯ ಶಿಲ್ಪ, ಮಹಾನವಮಿ ದಿಬ್ಬ, ಹಂಪಿ

ತೋರಿಸಲಾಗಿದೆ. ಮುಂದಿರುವ ಬೇಟೆಗಾರ ಹಂದಿಯ ಬೇಟೆಗೆ ಬಾಣಹೂಡಲು ಸಿದ್ಧನಾಗುತ್ತಿದ್ದು, ಹಿಂದಿರುವ ಬೇಟೆಗಾರ ಇವನಿಗೆ ಬಿಲ್ಲನ್ನು ನೀಡುತ್ತಿರುವಂತೆ ಕೆತ್ತಲಾಗಿದೆ. ಹಂದಿಗಳು ಮತ್ತು ಬೇಟೆಗಾರರ ಮಧ್ಯದಲ್ಲಿ ಮರವಿದ್ದು, ಅದರಲ್ಲಿ ದೊಡ್ಡದಾದ ಹಲವು ಹಣ್ಣುಗಳಿದ್ದು, ಅವುಗಳನ್ನು ಮೂರು ಕೋತಿಗಳು ಕಿತ್ತು ತಿನ್ನುತ್ತಿರುವಂತೆ ತೋರಿಸಲಾಗಿದೆ. ಈ ಶಿಲ್ಪದಲ್ಲಿನ ಕೋತಿಗಳ ದೇಹಲಕ್ಷಣ ಅಂದರೆ ಆಕಾರ, ಗಾತ್ರಗಳ ಆಧಾರ ಮೇಲೆ ಇವು ಪ್ರೈಮೇಟ್ಸ್ (*Pramaits*) ಗಣದ, ಸಕೊಪಿತೆಸಿಡೆ (*Sakkopitecidae*) ಕುಟುಂಬಕ್ಕೆ ಸೇರಿದ ಸಾಮಾನ್ಯ ಲಾಂಗೂರ್ ಅಥವಾ ಹನುಮಾನ್ ಕಪಿ ಎಂದು ಗುರುತಿಸಲಾಗಿದ್ದು, ಪ್ರೆಸ್‌ಬೈಟಸ್ ಎನ್‌ಟೆಲ್ಲಸ್ (*Presbytus entelus*) ಎಂಬುದು ಇವುಗಳ ವೈಜ್ಞಾನಿಕ ಹೆಸರಾಗಿದೆ.[೧೩೧] ಮರದಲ್ಲಿನ ಹಣ್ಣುಗಳ ಗಾತ್ರ ಮತ್ತು ಅವುಗಳು ಮರದ ಕಾಂಡದಲ್ಲಿ ಬಿಟ್ಟಿರುವುದರಿಂದ ಇವುಗಳನ್ನು ಹಲಸಿನ ಹಣ್ಣುಗಳೆಂದು ಗುರುತಿಸಬಹುದು. ಮರದ ಮುಂಭಾಗದಲ್ಲಿ ಚಿಕ್ಕ ಹಂದಿಯ ಮುಂಭಾಗದಲ್ಲಿ ಫೀಲಿಡೆ (*Philidae*) ಕುಟುಂಬಕ್ಕೆ ಸೇರಿದ ಹುಲಿಯನ್ನು ಕೆತ್ತಲಾಗಿದ್ದು, ಪ್ಯಾಂಥೇರ ಟ್ರೈಗ್ರಿಸ್ (*Phanthera taigries*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ. ಮೇಲ್ಭಾಗದಲ್ಲಿ ಎರಡು ಹಂದಿಗಳು ಮಿಥುನ ಕ್ರಿಯೆಯಲ್ಲಿ ತೊಡಗಿದ್ದು, ಅವುಗಳ ಮೇಲೆ ಮುಧೋಳ ನಾಯಿಗಳು ದಾಳಿ ಮಾಡಲು ಮುಂದಾಗಿರುವಂತೆ ತೋರಲಾಗಿದೆ. ಇಲ್ಲಿ ಬೇಟೆಗಾರ ಮಿಥುನದಲ್ಲಿ ನಿರತವಾದ ಹಂದಿಗಳನ್ನು ಕೊಲ್ಲಲು ಮುಂದಾಗಿರುವುದರಿಂದ ಇದನ್ನು 'ಕಾಮಜಾ' ಪ್ರಕಾರದ ಬೇಟೆಯ ಶಿಲ್ಪ ಎಂದು ಗುರುತಿಸಬಹುದು.[೧೩೨]

ಮಹಾನವಮಿ ದಿಬ್ಬದ ದಕ್ಷಿಣ ಬದಿಯ ಮೊದಲನೇ ಹಂತದ ಕೆಳಭಾಗದಲ್ಲೂ ಸಹ ಹಂದಿ ಬೇಟೆಯ ಶಿಲ್ಪಗಳನ್ನು ಕಾಣಬಹುದು. ಇವೆಲ್ಲವೂ ಜಿಂಕೆ ಬೇಟೆಯ ಜೊತೆಯಲ್ಲಿ ಪ್ರಾಸಂಗಿಕವಾಗಿ ಕಂಡುಬರುತ್ತದೆ. ಹಂದಿ ಬೇಟೆಯ ಶಿಲ್ಪಗಳು ಮಹಾನವಮಿ ದಿಬ್ಬದ ದಕ್ಷಿಣ ಬದಿಯಲ್ಲೇ ಹೆಚ್ಚಾಗಿ ಕಂಡುಬಂದಿರುವುದು ಗಮನಾರ್ಹ. ಇಲ್ಲಿನ ಬೇಟೆ ಶಿಲ್ಪಗಳ ಕುರಿತು ಶಶಿಕಲಾ ರಾ. ಇಂಜನಿ ಇವರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿರುತ್ತಾರೆ.[೧೩೩] ಹಜಾರರಾಮಸ್ವಾಮಿ ದೇವಾಲಯದ ಪೂರ್ವ ಪ್ರವೇಶದ್ವಾರದ ಅಧಿಷ್ಠಾನದಲ್ಲಿ ಬೇಟೆಗಾರ್ತಿ ಯೊಬ್ಬಳು ಹಂದಿಯನ್ನು ಬೇಟೆಯಾಡುತ್ತಿರುವುದರಲ್ಲಿ ನಿರತವಾಗಿರುವ





ಶಿಲ್ಪವೊಂದು ಕಂಡುಬರುತ್ತದೆ. ಇಲ್ಲಿ ಬೇಟೆಗಾರ್ತಿಯ ದೇಹದ ಲಕ್ಷಣಗಳ ಆಧಾರದ ಮೇಲೆ ಸ್ತ್ರೀಯೆಂದು, ಅವಳು ತೊಟ್ಟಿರುವ ಎಲೆಗಳ ರೀತಿಯ ಉಡುಗೆಯಿಂದ ಅವಳು ಬುಡಕಟ್ಟಿನ ಮಹಿಳೆಯಾಗಿದ್ದು, ತನ್ನ ಜೀವನ ನಿರ್ವಹಣೆಗಾಗಿ ಈ ಬೇಟೆ ಮಾಡುತ್ತಿದ್ದಾಳೆಂದು ಹೇಳಬಹುದು. ಇಲ್ಲಿ ಬೇಟೆಗಾರ್ತಿಯು ಹಂದಿಯ ಮೇಲೆ ಬಾಣ ಪ್ರಯೋಗಿಸಿದ್ದು, ಅದು ಹಂದಿಯ ಕತ್ತಿನ ಭಾಗಕ್ಕೆ ನಾಟಿಕೊಂಡಿದೆ. ಆದರೂ ಬೇಟೆಗಾರ್ತಿಯು ಇದರ ಮೇಲೆ ಮತ್ತೊಂದು ಬಾಣ ಬಿಡಲು ಸಿದ್ಧಳಾಗಿದ್ದಾಳೆ. ಇದರ ಮೇಲ್ಭಾಗದಲ್ಲಿನ ಜಿಂಕೆಯ ಮೇಲೆ ಸಹ ಈಕೆ ಬಾಣ ಹೂಡಿರುವುದು ಕಂಡುಬರುತ್ತದೆ.



ಕಾಮಜಾ ಪ್ರಕಾರದ ಹಂದಿ ಬೇಟೆಯ ಶಿಲ್ಪ, ದಕ್ಷಿಣ ದಿಕ್ಕು ಮಹಾನವಮಿ ದಿಬ್ಬ, ಹಂಪಿ



ಹಂದಿ ಬೇಟೆಯ ಶಿಲ್ಪ, ಹಜಾರರಾಮ ದೇವಾಲಯ, ಹಂಪಿ

ಮಹಾನವಮಿ ದಿಬ್ಬದ ಪಶ್ಚಿಮಕ್ಕಿರುವ ಅರಮನೆಗಳ ಅಧಿಷ್ಠಾನದ ಚಿಕ್ಕ ಕೋಷ್ಟಕಗಳಲ್ಲಿ ಹಲವು ಹಂದಿ ಬೇಟೆಯ ಶಿಲ್ಪಗಳಿದ್ದು, ಅದರಲ್ಲಿ ಬೇಟೆಯಾಡಿದ ಹಂದಿಯನ್ನು ಕಟ್ಟಿಗೆಗೆ ಕಟ್ಟಿ ಹೊತ್ತುಕೊಂಡು ಹೋಗುತ್ತಿರುವ ಶಿಲ್ಪಗಳು ಗಮನಾರ್ಹವಾಗಿದೆ. ಕೊಬ್ಬಿದ ಕಾಡು ಹಂದಿಗಳನ್ನು ಬೇಟೆಯಾಡಲು ಅನುಸರಿಸಬೇಕಾದ ತಂತ್ರಗಳನ್ನು ಮಾನಸೋಲ್ಲಾಸವು ಸುಧೀರ್ಘವಾಗಿ ಉಲ್ಲೇಖಿಸುತ್ತಾ ಹಂದಿ ಬೇಟೆಯನ್ನು 'ಜಾರಜಾ' ಎಂದು ಹೆಸರಿಸುತ್ತದೆ.[೧೩೪] ಹೀಗೆ ಹಂಪಿ ಪರಿಸರದಲ್ಲಿನ ಹಂದಿ ಬೇಟೆಯ ಶಿಲ್ಪಗಳ ಅಧ್ಯಯನದಿಂದ ಹಂದಿ ಬೇಟೆಯು ವಿಜಯನಗರ ಕಾಲದಲ್ಲಿ ಹೆಚ್ಚು ಪ್ರಚಲಿತದಲ್ಲಿತ್ತು ಎಂದು ಹೇಳಬಹುದು. ಇಂದಿಗೂ ಸಹ ಈ ಪರಿಸರದಲ್ಲಿ ಬೇಡ ಜನಾಂಗದವರು ಕೆಲವು ಹಬ್ಬ ಹರಿದಿನಗಳಲ್ಲಿ ಬೇಟೆಗೆ ಹೋಗುವುದನ್ನು ನೋಡಬಹುದು. ವರಾಹವು ವಿಷ್ಣುವಿನ ಅವತಾರವಾಗಿದ್ದು ವಿಜಯನಗರ ಅರಸರು ರಾಜಲಾಂಛನವಾಗಿ ಮಾಡಿಕೊಂಡಿರುವುದು ಈ ಪ್ರಾಣಿಯ ಪ್ರಾಮುಖ್ಯತೆಯನ್ನು ತಿಳಿಯಬಹುದಾಗಿದೆ.

*** ಜಿಂಕೆ ಬೇಟೆ ಶಿಲ್ಪಗಳು**

ಹಂಪಿ ಪರಿಸರದಲ್ಲಿ ಇತರೆ ಬೇಟೆ ಶಿಲ್ಪಗಳಿಗಿಂತ ಜಿಂಕೆ ಬೇಟೆ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿ


ಕಂಡುಬರುತ್ತವೆ. ಅತ್ಯಂತ ಮೃದು ಸ್ವಭಾವದ ಸೂಕ್ಷ್ಮ ಬುದ್ಧಿಯ ಪ್ರಾಣಿಯಾದ ಜಿಂಕೆಯನ್ನು ಮಾನವ ಅನಾದಿ ಕಾಲದಿಂದಲೂ ಬೇಟೆಯಾಡುತ್ತಾ ಬಂದಿದ್ದಾನೆ. ಇದಕ್ಕೆ ನಿದರ್ಶನಗಳಂತೆ ಹಂಪಿ ಪರಿಸರದ ಬೆಟ್ಟಗುಡ್ಡಗಳ ಕಲ್ಲಾಸರೆಗಳಲ್ಲಿ ಇಂದಿಗೂ ಜಿಂಕೆ ಬೇಟೆಯ ಚಿತ್ರಗಳನ್ನು ಕಾಣಬಹುದು. ಹಂಪಿ ಪರಿಸರದ ಹಲವು ಸ್ಮಾರಕಗಳಲ್ಲಿ ಈ ಜಿಂಕೆ ಬೇಟೆಯ ಶಿಲ್ಪಗಳು ಕಂಡುಬರುತ್ತವೆ. ಇಂತಹ ಸ್ಮಾರಕಗಳಲ್ಲಿ ಮಹಾನವಮಿ ದಿಬ್ಬ ಪ್ರಮುಖವಾಗಿದ್ದು, ಇಲ್ಲಿನ ಶಿಲ್ಪಗಳು ಅತ್ಯುತ್ತಮವಾಗಿವೆ.

ಮಹಾನವಮಿ ದಿಬ್ಬದ ಶಿಲ್ಪಫಲಕಗಳಲ್ಲಿ ಜಿಂಕೆ ಬೇಟೆಯನ್ನೇ ಪ್ರಧಾನವಾಗಿ ತೋರಿಸಿದ್ದರೂ ಕೆಲವು ಕಡೆ ಹಂದಿ, ಹುಲಿ, ಕಾಡುಕುದುರೆ ಬೇಟೆಯ ಸನ್ನಿವೇಶಗಳನ್ನು ಸಾಂದರ್ಭಿಕವಾಗಿ ಕಂಡರಿಸಲಾಗಿದೆ. ಅಂತಹವುಗಳಲ್ಲಿ ಕೆಲವು ಪ್ರಮುಖ ಜಿಂಕೆಬೇಟೆ ಶಿಲ್ಪಗಳನ್ನು ಇಲ್ಲಿ ವಿವರಿಸಲಾಗಿದೆ.

ಮಹಾನವಮಿ ದಿಬ್ಬದ ಪಶ್ಚಿಮದ ಬದಿಯ ಮೊದಲನೇ ಹಂತದ ಕೆಳಗಿನ ಸಾಲಿನಲ್ಲಿ ಜಿಂಕೆ ಬೇಟೆಯ ಶಿಲ್ಪಫಲಕ ಕಂಡುಬರುತ್ತದೆ. ಇಲ್ಲಿ ಮೂರು ಜನ ಬೇಟೆಗಾರರಿದ್ದು, ಮುಂದಿನವನು ಬಾಣವನ್ನು ಹಿಡಿದು ಬಿಲ್ಲನ್ನು ಜಿಂಕೆಗಳ ಮೇಲೆ ಪ್ರಯೋಗಿಸಿದ್ದು, ಅದು ಒಂದು ಜಿಂಕೆಯ ತಲೆಯ ಭಾಗಕ್ಕೆ ನಾಟಿದ್ದು, ತನ್ನ ಕಾಲುಗಳನ್ನು ಮೇಲ್ಮುಖವಾಗಿ ಮಾಡಿ ಕೆಳಗೆ ಬೀಳುತ್ತಿರುವಂತೆ ತೋರಲಾಗಿದೆ. ನಂತರ ಬೇಟೆಗಾರ ಮತ್ತೊಂದು ಬಿಲ್ಲನ್ನು ಪ್ರಯೋಗಿಸಲು ಮುಂದಾಗಿರುವುದನ್ನು ಗಮನಿಸಿದ ಉಳಿದ ಎರಡು ಚಿಂಕಾರಗಳು ಭಯದಿಂದ ಹಿಂದಕ್ಕೆ ನೋಡುತ್ತಾ ಓಡುತ್ತಿರುವಂತೆ, ಅವುಗಳನ್ನು ಅಟ್ಟಿಸಿಕೊಂಡು ಹೋಗುತ್ತಿರುವ ಮುಧೋಳ ನಾಯಿಯನ್ನು ಸಹ ಶಿಲ್ಪಿ ಅತೀ ಮನೋಜ್ಞವಾಗಿ ಬಿಡಿಸಿದ್ದಾನೆ. ಇಲ್ಲಿ ಜಿಂಕೆ ಕಾಲುಗಳನ್ನು ಮೇಲ್ಮುಖವಾಗಿ ಮಾಡಿ ಕೆಳಗೆ ಬೀಳುತ್ತಿರುವಂತೆ ಕೆತ್ತಿರುವುದು ಜಿಂಕೆ ಸತ್ತಿರುವುದನ್ನು ಸೂಚಿಸುತ್ತದೆ. ಹಾಗೆಯೇ ಶಿಲ್ಪದಲ್ಲಿ ಮೂರು ಜನ ಬೇಟೆಗಾರರಿದ್ದು, ಬಿಲ್ಲು ಹೂಡುತ್ತಿರುವವನ ಉಡುಗೆ ತೊಡೆಗೆಗಳ ಆಧಾರದ ಮೇಲೆ ಇವನು ರಾಜಪ್ರಮುಖನೆಂದು ಹೇಳಬಹುದು. ಇವನ ಹಿಂಭಾಗದಲ್ಲಿ ಇಬ್ಬರು ಪರಿಚಾರಕ ಬೇಟೆಗಾರರಿದ್ದು, ಒಬ್ಬನು ಬಿಲ್ಲು ಬಾಣವನ್ನಿಡಿದಿದ್ದರೆ, ಮತ್ತೊಬ್ಬನು ಬಲಗೈಯಲ್ಲಿ ಆಯುಧವನ್ನು ಎಡಗೈಯಲ್ಲಿ ನಾಯಿಯ ಕೊರಳಿಗೆ ಕಟ್ಟಿರುವ ಹಗ್ಗವನ್ನು ಹಿಡದು ಸಾಗುತ್ತಿರುವಂತೆ ತೋರಿಸಿರುವುದು ಇವನೊಬ್ಬ ರಾಜಪ್ರಮುಖ ಎಂಬುದಕ್ಕೆ ಪುಷ್ಠಿ ನೀಡುತ್ತದೆ. ಹಾಗಾಗಿ ರಾಜಪ್ರಮುಖನೊಬ್ಬ ಬೇಟೆಯಲ್ಲಿ ಭಾಗವಹಿಸಿರುವುದರಿಂದ ಇಂತಹ ಶಿಲ್ಪಗಳನ್ನು 'ಮೃಗಯಾ ವಿನೋದದ ಶಿಲ್ಪ'ವೆಂದು ಗುರುತಿಸಬಹುದು.



ಮೃಗಯಾ ವಿನೋದದ ಜಿಂಕೆ ಬೇಟೆಯ ಶಿಲ್ಪ, ದಕ್ಷಿಣ ದಿಕ್ಕು ಮಹಾನವಮಿ ದಿಬ್ಬ, ಹಂಪಿ



ಜಿಂಕೆ ಬೇಟೆಯ ಶಿಲ್ಪ, ಪಶ್ಚಿಮ ದಿಕ್ಕು ಮಹಾನವಮಿ ದಿಬ್ಬ, ಹಂಪಿ



ನಂತರ ಇದೇ ಸಾಲಿನಲ್ಲಿ ಮುಂದಿನ ಪಟ್ಟಿಕೆಯಲ್ಲಿ ಮತ್ತೊಂದು ಪ್ರಮುಖ ಜಿಂಕೆ ಬೇಟೆಯ ಸನ್ನಿವೇಶವನ್ನು ಕಾಣಬಹುದು. ಇದರಲ್ಲಿ ಬೇಟೆಗಾರ ಜಿಂಕೆಗಳನ್ನು ಗುರಿಯಾಗಿಟ್ಟುಕೊಂಡು ಬಿಲ್ಲನ್ನು ಹೂಡುತ್ತಿದ್ದು, ಇದನ್ನು ಗಮನಿಸಿದ ಜಿಂಕೆಗಳು ಭಯದಿಂದ ಓಡುತ್ತಿರುವಂತೆ ತೋರಲಾಗಿದೆ. ಜಿಂಕೆಗಳ ಜೊತೆಯಲ್ಲಿ ಒಂದು ಹಂದಿ ಇದ್ದು, ಇದರ ಮೇಲೆ ನಾಯಿಯೊಂದು ದಾಳಿ ಮಾಡುತ್ತಿರುವಂತೆ ತೋರಲಾಗಿದೆ. ಹಾಗೆಯೇ ಶಿಲ್ಪದಲ್ಲಿ ಬೇಟೆಯಾಡಿದ ಜಿಂಕೆಯನ್ನು ಕಟ್ಟಿಗೆಗೆ ಕಟ್ಟಿಕೊಂಡು ಹೊತ್ತೊಯ್ಯುತ್ತಿರುವ ಸನ್ನಿವೇಶ ಗಮನಾರ್ಹ. ನಂತರ ಮುಂದಿನ ಪಟ್ಟಿಕೆಯಲ್ಲಿ ಇದೇ ರೀತಿಯ ಜಿಂಕೆ ಬೇಟೆಯ ಶಿಲ್ಪಫಲಕವನ್ನು ಕಾಣಬಹುದು.

ಜಿಂಕೆ ಬೇಟೆಯ ಮತ್ತೊಂದು ಶಿಲ್ಪ ದಿಬ್ಬದ ಪಶ್ಚಿಮ ದಿಕ್ಕಿನ ಮೆಟ್ಟಿಲುಗಳ ಬಲಭಾಗದ ಮೊದಲನೆ ಹಂತದ ಕೆಳಗಿನ ಸಾಲಿನಲ್ಲಿ ಕಂಡುಬರುತ್ತದೆ. ಶಿಲ್ಪದಲ್ಲಿ ಬೇಟೆಗಾರನೊಬ್ಬ ಜಿಂಕೆಗಳ ಮೇಲೆ ಬಿಲ್ಲನ್ನು ಹೂಡಿದ್ದು, ಒಂದು ಜಿಂಕೆ ಕೆಳಗೆ ಬೀಳುತ್ತಿದೆ. ಮತ್ತೊಂದು ಜಿಂಕೆಗೆ ಬಾಣ ಪ್ರಯೋಗಿಸಲು ಯತ್ನಿಸುತ್ತಿದ್ದು, ಅದನ್ನು ಉಳಿದ ಜಿಂಕೆಗಳು ಗಮನಿಸುತ್ತಿವೆ. ಇಲ್ಲಿ ಜಿಂಕೆಗಳು ಭಯದಿಂದ ಓಡುತ್ತಿದ್ದು, ಮುಧೋಳ ನಾಯಿಯೊಂದು ಜಿಂಕೆಯ ಮೇಲೆರಗಿ ಕೊರಳ ಭಾಗವನ್ನು ಹಿಡಿಯಲು ಯತ್ನಿಸುತ್ತಿರುವುದು ಪ್ರಮುಖವಾಗಿದೆ. ಈ ಶಿಲ್ಪದ ಮಧ್ಯದಲ್ಲಿ ಮರವನ್ನು ತೋರಿಸಿದ್ದು, ಇದು ಕಾಡನ್ನು ಸಂಕೇತಿಸುತ್ತದೆ. ಜೊತೆಗೆ ಇಲ್ಲಿ ಜಿಂಕೆಗಳ ಜೊತೆ ಕರಡಿಯನ್ನು ಸಹ ತೋರಿಸಿದ್ದು, ಈ ಪರಿಸರದಲ್ಲಿ ವಾಸಿಸುವ ಪ್ರಾಣಿಗಳಲ್ಲಿ ಕರಡಿಯು ಪ್ರಮುಖವಾಗಿತ್ತೆಂಬುದು ತಿಳಿಯುತ್ತದೆ. ಹಂಪಿ ಪರಿಸರದಲ್ಲಿ ಕರಡಿಗಳ ಶಿಲ್ಪಗಳು ಮಹಾನವಮಿ ದಿಬ್ಬದಲ್ಲಿ ಎರಡು ಹಾಗೂ ವಿಜಯವಿಠಲ ದೇವಾಲಯ ಪ್ರಕಾರ ಮಂಟಪದ ಸಾಲುಕಂಬಗಳಲ್ಲಿ ಒಂದು ಶಿಲ್ಪದಂತೆ ಒಟ್ಟು ಈ ಪರಿಸರದಲ್ಲಿ ಮೂರು ಶಿಲ್ಪಗಳು ಮಾತ್ರ ಕಂಡುಬರುತ್ತವೆ. ಹಾಗಾಗಿ ಈ ಕರಡಿ ಶಿಲ್ಪಗಳು ಅತಿ ವಿರಳವಾಗಿದ್ದು ಅಪರೂಪದ ಶಿಲ್ಪಗಳಾಗಿವೆ. ಹಂಪಿ ಪರಿಸರದ ಶಿಲ್ಪಗಳಲ್ಲಿನ ಕರಡಿಯ ದೇಹ ಲಕ್ಷಣ, ಆಕಾರದ ಆಧಾರದ ಮೇಲೆ ಇವು ಕಾರ್ನಿವೋರ (*Carnivora*) ಗಣದ, ಆರ್ಸಿಡೆ (*Arcidae*) ಕುಟುಂಬಕ್ಕೆ ಸೇರಿದ್ದು ಮೆಲರ್ಸಸ್ ಆರ್ಸಿನಸ್ (*Melursus ursinus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೩೫]

ಮಹಾನವಮಿ ದಿಬ್ಬದ ದಕ್ಷಿಣ ಬದಿಯ ಜಿಂಕೆ ಬೇಟೆಯ ಶಿಲ್ಪದಲ್ಲಿ ಕಂಡರಿಸಲ್ಪಟ್ಟ ಭಾಗಶಃ ಇಂದಿನ ಪ್ಲಸ್ ಆಕಾರವನ್ನು ಹೋಲುವ ಸಂಕೇತವು ಏನೆಂಬುದು ಚಿಂತನೀಯ ವಿಷಯ. ಮುಮ್ಮಡಿ ಸೋಮೇಶ್ವರನ ಮಾವಸೋಲ್ಲಾಸವು ಪ್ರಾಣಿಗಳಿಗೆ ಕುಡಿಯಲು ನೀರು ಮತ್ತು ತಿನ್ನಲು ಆಹಾರದ ವ್ಯವಸ್ಥೆ ಕಲ್ಪಿಸಿ ಅವು ನೀರು ಕುಡಿಯಲು ಬಂದಾಗ ಬೇಟೆಗಾರರು ಅವುಗಳಿಂದ ಕಣ್ಮರೆಯಾಗಿದ್ದು, ಅವಿತುಕೊಂಡು ಅಥವಾ ಮರವನ್ನೇರಿ ಬೇಟೆಯಾಡಬೇಕೆಂದು ತಿಳಿಸುತ್ತದೆ.[೧೩೬] ಪ್ರಸ್ತುತ ಶಿಲ್ಪವನ್ನು ಈ ಮೇಲಿನಂತೆ ವಿಷಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು. ಮರದ ಬಳಿಯಲ್ಲಿ ಕಂಡರಿಸ್ಪಟ್ಟ ಪ್ಲಸ್ ಆಕಾರವನ್ನು ಹೋಲುವ ಗುರುತು ಬಹುಶಃ ಪ್ರಾಣಿಗಳಿಗೆ ನೀರನ್ನು ಕುಡಿಯಲು ಮಾಡಿದ್ದಿರಬಹುದಾದ ನೀರಿನ ಕೊಳವನ್ನು ಸೂಚಿಸುತ್ತಿರಬಹುದು. ಪ್ರಾಣಿಗಳು ಸಹ ಯಾವುದೇ ಭಯವಿಲ್ಲದೆ ಅತ್ಯಂತ ಸ್ವೇಚ್ಛೆಯಿಂದ ಓಡಾಡುತ್ತಿವೆ. ಮರದ ಮೇಲಿನ ಬೇಟೆಗಾರನೊಬ್ಬ ಈ ಪ್ರಾಣಿಗಳಿಗೆ ಜಾಣತನದಿಂದ ಹೊಡೆಯಲು ಮುಂದಾಗಿದ್ದು, ಇನ್ನೊಬ್ಬ ಖಡ್ಗದಿಂದ ಕಾಡುಪ್ರಾಣಿಯ ಬಾಯಿಗೆ ತಿವಿದು ಕೊಲ್ಲುತ್ತಿದ್ದಾನೆ.

ಈ ಶಿಲ್ಪ ಬೇಟೆಗಾರರು ಬೇಟೆಯಾಡಲು ಅನುಸರಿಸುತ್ತಿದ್ದ ತಂತ್ರಗಳನ್ನು ಸೂಕ್ಷ್ಮವಾಗಿ ತಿಳಿಸುತ್ತದೆ. ಈ ಶಿಲ್ಪ ಪಟ್ಟಿಕೆಯಲ್ಲಿನ ಲಕ್ಷಣಗಳು ಮಾನಸೋಲ್ಲಾಸದಲ್ಲಿ ವಿವರಿಸಲ್ಪಟ್ಟ ವಿವರಣೆಗೆ ಸಾಮ್ಯತೆಯಿರುವುದರಿಂದ ಇದನ್ನು 'ಪಾನೀಯ ಮೃಗಜಾ' ಎಂಬ ವಿನೋದದ ಶಿಲ್ಪ ಎಂದು ಗುರುತಿಸಬಹುದು.

ಹೀಗೆ ಮಹಾನವಮಿ ದಿಬ್ಬದ ಶಿಲ್ಪಪಟ್ಟಿಕೆಯಲ್ಲಿ ಬೇಟೆಯನ್ನೇ ಪ್ರಮುಖ ವಿಷಯ ವಸ್ತುವಾಗಿ ಬಳಸಿದ್ದು, ಸುಮಾರು ೨೫ಕ್ಕೂ ಅಧಿಕ ಜಿಂಕೆ ಬೇಟೆ ಶಿಲ್ಪಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಅಧಿಕ ಸಂಖ್ಯೆಯ ಜಿಂಕೆ ಬೇಟೆಯ ಶಿಲ್ಪಗಳನ್ನು ದಿಬ್ಬದ ದಕ್ಷಿಣ ಬದಿಯಲ್ಲಿ ತೋರಿರುವುದು ವಿಶೇಷವಾಗಿದೆ.


ಪಾನೀಯ ಮೃಗಜಾ ಬಗೆಯ ಜಿಂಕೆ ಬೇಟೆಯ ಶಿಲ್ಪ, ದಕ್ಷಿಣ ದಿಕ್ಕು ಮಹಾನವಮಿ ದಿಬ್ಬ, ಹಂಪಿ

ವಿರೂಪಾಕ್ಷ ದೇವಾಲಯದ ಪ್ರಕಾರ ಮಂಟಪದ ಕಂಬದಲ್ಲಿ ಚಿಂಕಾರ (ಜಿಂಕೆ) ಬೇಟೆಯ ಶಿಲ್ಪವನ್ನು ಕಂಡರಿಸಲಾಗಿದೆ. ಬೇಟೆಗಾರ ಜಿಂಕೆಯ ಮೇಲೆ ಬಾಣ ಪ್ರಯೋಗಿಸಿದ್ದು, ಅದು ಜಿಂಕೆಯ ಹೊಟ್ಟೆಯನ್ನು ಸೀಳಿ ಹೊರಬಂದಿದೆ. ಜಿಂಕೆಯು ತನ್ನ ಮುಂಭಾಗದ ಎರಡು ಕಾಲುಗಳನ್ನು ಮೇಲೆತ್ತಿ ಓಡುತ್ತಿದ್ದು, ನೋವಿನಿಂದ ಹಿಂದಕ್ಕೆ ತಿರುಗಿ ಬೇಟೆಗಾರನನ್ನು ನೋಡುತ್ತಿರುವಂತೆ ತೋರಲಾಗಿದೆ. ಇಲ್ಲಿನ ಇನ್ನೊಂದು ಶಿಲ್ಪದಲ್ಲಿ ಬೇಟೆಗಾರ್ತಿಯೊಬ್ಬಳ ಜಿಂಕೆ ಬೇಟೆಯಾಡುತ್ತಿರುವ ಶಿಲ್ಪವಿದೆ. ಇಲ್ಲಿನ ಬೇಟೆಗಾರರು ಎಲೆಗಳ ರೀತಿಯ ಉಡುಗೆಗಳನ್ನು ಧರಿಸಿದ್ದು, ಇವರು ಬುಡಕಟ್ಟು ಜನವೆಂಬುದು ತಿಳಿಯಬಹುದು. ಹಾಗಾಗಿ ಈ ರೀತಿಯ ಬೇಟೆಯನ್ನು ಆಹಾರಕ್ಕಾಗಿ ಅಥವಾ ಜೀವನ ನಿರ್ವಹಣೆಗಾಗಿ ಜನಸಾಮಾನ್ಯರು ಮಾಡಿದ ಬೇಟೆ ಎಂದೇ ಹೇಳಬಹುದು.


ಜನಸಾಮಾನ್ಯರು ಜಿಂಕೆ ಬೇಟೆಯಾಡುತ್ತಿರುವ ಶಿಲ್ಪ, ವಿರೂಪಾಕ್ಷ ದೇವಾಲಯ, ಹಂಪಿ


ಇದೇ ರೀತಿಯ ಜಿಂಕೆ ಬೇಟೆ ಶಿಲ್ಪಗಳು ಹಜಾರರಾಮ ದೇವಾಲಯದ ಪೂರ್ವದ ಪ್ರವೇಶದ್ವಾರ, ವರಾಹ ದೇವಾಲಯದ ಮುಂಭಾಗದ ದೇವಾಲಯಗಳ ಕಂಬಗಳಲ್ಲಿ, ವಿಠಲ ದೇವಾಲಯದ ನೂರು ಕಂಬಗಳ ಮಂಟಪದ (ಸಭಾಮಂಟಪ) ಅಧಿಷ್ಠಾನದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಈ ಮೇಲಿನ ಜಿಂಕೆ ಬೇಟೆ ಶಿಲ್ಪಗಳ ಅಧ್ಯಯನದಿಂದ ಈ ಪರಿಸರದಲ್ಲಿ ಸಾಕಷ್ಟು ಜಿಂಕೆಗಳು ನೆಲೆಸಿದ್ದುದ್ದು ಹಾಗೂ







ಸಾರಂಗ ಜಿಂಕೆ
ಗಣ : ಆರ್ಟಿಯೋಡಾಕ್ಟೈಲ
ಕುಟುಂಬ : ಸರ್ವಿಡೆ



ಜಿಂಕೆಗಳ ಕಾದಾಟದ ಶಿಲ್ಪ, ದಕ್ಷಿಣ ದಿಕ್ಕು
ಮಹಾನವಮಿದಿಬ್ಬ, ಹಂಪಿ

ಜನಸಾಮಾನ್ಯರಿಂದ ಹಿಡಿದು ರಾಜ ಪ್ರಮುಖರವರೆಗಿನ ಎಲ್ಲರೂ ಜಿಂಕೆ ಬೇಟೆಯನ್ನು ಹೆಚ್ಚಾಗಿ ಮಾಡುತ್ತಿದ್ದರು ಎಂಬ ಅಂಶಗಳು ತಿಳಿದುಬರುತ್ತವೆ.

*** ಹುಲಿಬೇಟೆ ಶಿಲ್ಪಗಳು**

ಹುಲಿಯು ಕ್ರೂರ ಪ್ರಾಣಿಯಾಗಿದ್ದು, ಇದನ್ನು ಕೊಂದವರು ಸಮಾಜದಲ್ಲಿ ಉತ್ತಮ ಸ್ಥಾನಮಾನ ಪಡೆಯುತ್ತಿದ್ದರು. ಜನರು ಅವನ ಶೌರ್ಯ ಪರಾಕ್ರಮವನ್ನು ಕೊಂಡಾಡುತ್ತಿದ್ದರು. ರಾಜರ ಬೇಟೆಗಳಲ್ಲಿ ಹುಲಿ ಬೇಟೆಯು ಪ್ರಮುಖವಾಗಿದ್ದು ಅದು ಅವರ ಪ್ರತಿಷ್ಠೆಯ ಸಂಕೇತ. ಈ ಹಿನ್ನೆಲೆಯಲ್ಲಿ ಹುಲಿ ಬೇಟೆಯು ಪ್ರಾಚೀನ ಕಾಲದಿಂದಲೂ ಪ್ರಚಲಿತದಲ್ಲಿತ್ತು. ಇದಕ್ಕೆ ಪುಷ್ಠಿ ಎಂಬಂತೆ ಹಂಪಿ ಪರಿಸರದಲ್ಲಿನ ಮೊಸಳಯ್ಯನ ಗುಡ್ಡದಲ್ಲಿ ಆದಿಮಾನವನ ವರ್ಣಚಿತ್ರಗಳಲ್ಲಿನ ಹುಲಿಯ ಚಿತ್ರಗಳನ್ನು ಕಾಣಬಹುದು.

ಹುಲಿಯನ್ನು ಆಹಾರಕ್ಕಾಗಿ ಬೇಟೆಯಾಡದೇ ಅವರ ಚರ್ಮ ಮತ್ತು ಉಗುರುಗಳಿಗಾಗಿ ಹಾಗೂ ರಾಜರ ಶೌರ್ಯ ಪರಾಕ್ರಮದ ಸಲುವಾಗಿ ಬೇಟೆಯಾಡುತ್ತಿದ್ದರು. ಇದರ ಚರ್ಮವನ್ನು ಉಡುಗೆಗಾಗಿ ಬಳಸುತ್ತಿದ್ದರು. ಹುಲಿಯ ಉಗುರು ಶುಭಕರ ಎನ್ನುವ ನಂಬಿಕೆ ಪ್ರಚಲಿತದಲ್ಲಿತ್ತು. ಈ ಕಾರಣಗಳಿಂದಾಗಿ ಹುಲಿಯನ್ನು ಬೇಟೆಯಾಡುತ್ತಿದ್ದರು. ಈ ಹುಲಿ ಬೇಟೆಯಲ್ಲಿ ಪಾಲ್ಗೊಂಡು ಮರಣ ಹೊಂದಿದವರ ಅನೇಕ ವೀರಗಲ್ಲುಗಳು ಕರ್ನಾಟಕದಲ್ಲಿವೆ. ಹಂಪಿ ಪರಿಸರದಲ್ಲಿ ಈ ರೀತಿಯ ಏಕೈಕ ವೀರಗಲ್ಲು ಶಿಲ್ಪ ಗಂಗಾವತಿ ತಾಲೂಕಿನ ಆನೆಗುಂದಿ ವ್ಯಾಪ್ತಿಯ ಕಡೇಬಾಗಿಲು ಗ್ರಾಮದಲ್ಲಿ ಕಂಡುಬಂದಿದೆ. ಈ ವೀರಗಲ್ಲಿನಲ್ಲಿ ವೀರನು ತನ್ನ ಬಲಗೈನಿಂದ ಪ್ರಾಣಿಯ ತಲೆಯ ಭಾಗಕ್ಕೆ ಬಾಕು(ಕತ್ತಿ)ವಿನಿಂದ ಚುಚ್ಚುತ್ತಿರುವಂತೆ ಹಾಗೆಯೇ ಬಲಗೈ ಪ್ರಾಣಿಯ ಬೆನ್ನಿನ ಭಾಗವನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಈ ಶಿಲ್ಪದಲ್ಲಿನ ಪ್ರಾಣಿಯ ಮುಖ, ಕಿವಿ, ಕಣ್ಣು, ಕಾಲಿನ ಉಗುರುಗಳು ಹಾಗೂ ಇತರೆ ದೇಹ ಲಕ್ಷಣಗಳನ್ನು ಶಿಲ್ಪಿಯಾದವನು ಸ್ಪಷ್ಟವಾಗಿ ಕೆತ್ತಿರುವುದರಿಂದ ಈ ಪ್ರಾಣಿ ಹುಲಿಯೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ವೀರನ ಹಿಂಬದಿಯಲ್ಲಿ ಇಬ್ಬ ಸ್ತ್ರೀಯನ್ನು ತೋರಿಸಿದ್ದು ಬಹುಶಃ ಈಕೆಯ ರಕ್ಷಣೆಯ ಸಲುವಾಗಿ ವೀರ ಹುಲಿಯೊಡನೆ ಹೋರಾಡುತ್ತಿರಬಹುದು. ಈ ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ತೋರಲಾಗಿದೆ. ಇಲ್ಲಿ ಹುಲಿಯು ಬೇಟೆಯ ವಸ್ತುವಾಗಿ ಬಳಕೆಯಾಗಿರುವುದು ತಿಳಿದುಬರುತ್ತದೆ.





ಹುಲಿ ಬೇಟೆಯ ವೀರಗಲ್ಲು ಶಿಲ್ಪ, ಕಡೇಬಾಗಿಲು ಗ್ರಾಮದ ಹತ್ತಿರ, ಆನೆಗುಂದಿ

ಉಳಿದಂತೆ ಹಂಪಿ ಪರಿಸರದಲ್ಲಿ ಕುದುರೆಯ ಮೇಲೆ ಸವಾರಿ ಮಾಡುತ್ತಾ ಹೋರಾಡುತ್ತಿರುವ ೧೧ ವೀರಗಲ್ಲು ಶಿಲ್ಪಗಳು ಕಂಡುಬಂದಿರುತ್ತವೆ. ಅವುಗಳಲ್ಲಿ ಕೆಲವು ಶಿಲ್ಪಗಳ ಕೆಳಗಿನ ಪಟ್ಟಿಕೆಯಲ್ಲಿ ಕುದುರೆಗಳು ಎದುರುಬದುರಾಗಿ ನಿಂತು ತನ್ನ ಮುಂದಿನ ಕಾಲುಗಳನ್ನು ಮೇಲೆತ್ತಿ ಚಲಿಸುತ್ತಿರುವಂತೆ ತೋರಲಾಗಿದೆ. ಇವುಗಳ ಮೇಲೆ ಕುಳಿತ ವೀರರು ಕತ್ತಿ, ಈಟಿ ಮುಂತಾದ ಆಯುಧಗಳನ್ನು ಹಿಡಿದು ಪರಸ್ಪರ ಹೋರಾಡುತ್ತಿರುವಂತೆ ತೋರಲಾಗಿದೆ. ಇಲ್ಲಿ ಕುದುರೆಗೆ ಜೀನು ಮತ್ತು ಹೊದಿಕೆಯನ್ನು ಹಾಕಿರುವಂತೆ ಕೆತ್ತಲಾಗಿಧೆ. ಅಂದರೆ ಯುದ್ಧದ ಸಂದರ್ಭದಲ್ಲಿ ಪ್ರಾಣಿಗಳಿಗೆ ತೊಡಿಸುವ ಉಡುಗೆ-ತೊಡುಗೆಗಳನ್ನು ಶಿಲ್ಪಿಯಾದವನು ಸ್ಪಷ್ಟವಾಗಿ ಮೂಡಿಸ್ರಿರುವುದು ಕಂಡುಬರುತ್ತದೆ. ಮಧ್ಯ ಪಟ್ಟಿಕೆಯಲ್ಲಿ ಮರಣ ಹೊಂದಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆಯೂ, ನಂತರದ ಮೇಲ್ಪಟ್ಟಿಕೆಯಲ್ಲಿ ಶಿವಲಿಂಗದ ಮುಂದೆ ವೀರನು ಕುಳಿತು ಅಥವಾ ನಿಂತು ಪೂಜಿಸುತ್ತಿರುವ ಭಂಗಿಯಲ್ಲಿ ತೋರಿಸಲಾಗಿದೆ. ಮೇಲ್ಭಾಗದ ಪಟ್ಟಿಕೆಯ ಎಡ ಮತ್ತು ಬಲಭಾಗದಲ್ಲಿ ಸೂರ್ಯ ಚಂದ್ರರನ್ನು, ಮಧ್ಯದಲ್ಲಿ ಶಿವಲಿಂಗ ಮತ್ತು ಅದಕ್ಕೆ ಎದುರಾಗಿ ನಂದಿಯನ್ನು ತೋರಲಾಗಿದೆ. ಈ ರೀತಿಯ ಮೂರು ವೀರಗಲ್ಲು ಶಿಲ್ಪಗಳು ಹಂಪಿ ಪರಿಸರದಲ್ಲಿ ಪ್ರಮುಖವಾಗಿ ಕಂಡುಬಂದಿವೆ.



ವೀರಗಲ್ಲು ಶಿಲ್ಪ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ವಸ್ತುಸಂಗ್ರಹಾಲಯ, ಕಮಲಾಪುರ

ಮತ್ತೆ ಕೆಲವು ವೀರಗಲ್ಲುಗಳು ಒಂದು ಅಥವಾ ಎರಡು ಪಟ್ಟಿಕೆಗಳನ್ನು ಮಾತ್ರ ಹೊಂದಿವೆ. ಮುಖ್ಯವಾಗಿ ಒಂದು ಪಟ್ಟಿಕೆಯುಳ್ಳ ವೀರಗಲ್ಲು ಶಿಲ್ಪದಲ್ಲಿ ವೀರನು ಆಯುಧವನ್ನು ಹಿಡಿದು ಕುದುರೆ ಸವಾರಿ ಮಾಡುತ್ತಿರುವಂತೆ ಕೆತ್ತಲಾಗಿದ್ದು, ವೀರನ ಹಿಂಬದಿಯಲ್ಲಿ ಒಬ್ಬ ಸ್ತ್ರೀಯನ್ನು ತೋರಿಸಲಾಗಿದೆ. ಅಂದರೆ ಇಲ್ಲಿ ಸ್ತ್ರೀಯ ರಕ್ಷಣೆಗಾಗಿ ವೀರನು ಹೋರಾಡಿ ಮಾರಣ ಹೊಂದಿದನೆಂಬ ಅಂಶ ಸ್ಪಷ್ಟವಾಗುತ್ತದೆ. ಮೇಲ್ಭಾಗದಲ್ಲಿ ಸೂರ್ಯ, ಚಂದ್ರ ಮತ್ತು ಶಿವಲಿಂಗವನ್ನು ತೋರಲಾಗಿದೆ. ಈ ರೀತಿಯ ೪ ವೀರಗಲ್ಲು ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬಂದಿವೆ. ವಿಶೇಷವಾಗಿ ಇಲ್ಲಿನ ಒಂದು ವೀರಗಲ್ಲು ಶಿಲ್ಪದಲ್ಲಿ ವೀರನು ಕತ್ತಿ, ಈಟಿಯ ಬದಲಾಗಿ ಬಿಲ್ಲು ಮತ್ತು ಬಾಣವನ್ನು ಹಿಡಿದಿರುವುದು ಸ್ವಲ್ಪ ಮಟ್ಟಿನ ಭಿನ್ನತೆಯನ್ನು ತೋರಿಸುತ್ತದೆ. ಹಾಗೆಯೇ ಮತ್ತೊಂದು ಗಮನಾರ್ಹ ವೀರಗಲ್ಲು ಶಿಲ್ಪದಲ್ಲಿ ವೀರರು ಕುದುರೆ ಮತ್ತು ಆನೆಯ ಮೇಲೆ ಕುಳಿತು ಪರಸ್ಪರ ಎದುರುಬದುರಾಗಿ ಹೋರಾಡುತ್ತಿರುವಂತೆ ಕೆತ್ತಲಾಗಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ತೋರಿಸಲಾಗಿದೆ. ಅದೇ





ರೀತಿ ಹಂಪಿ ಪರಿಸರದಲ್ಲಿ ಎರಡು ಪಟ್ಟಿಕೆಗಳುಳ್ಳ ೩ ವೀರಗಲ್ಲು ಶಿಲ್ಪಗಳು ಕಂಡುಬಂದಿವೆ. ಇವುಗಳಲ್ಲಿ ಕೆಳಗಿನ ಪಟ್ಟಿಕೆಯಲ್ಲಿ ವೀರರು ಕುದುರೆ ಸವಾರರಾಗಿ ಹೋರಾಡುತ್ತಿರುವ ದೃಶ್ಯ, ನಂತರ ಮೇಲ್ಪಟ್ಟಿಕೆಯಲ್ಲಿ ವೀರರು ಶಿವಲಿಂಗದ ಮುಂದೆ ಕುಳಿತು ಅಥವಾ ನಿಂತು ನಮಸ್ಕರಿಸುತ್ತಿರುವಂತೆಯೂ ಹಾಗೂ ಎಡ ಬಲಭಾಗಗಳಲ್ಲಿ ಸೂರ್ಯ ಚಂದ್ರರನ್ನು ತೋರಲಾಗಿದೆ. ಈ ರೀತಿಯ ವೀರರಲ್ಲಿ ಮಹಿಳೆಯರು ಹೋರಾಡಿ ಮಡಿದಿರುವುದು ಇಲ್ಲಿನ ಶಿಲ್ಪಗಳಲ್ಲಿ ಕಂಡುಬರುತ್ತದೆ. ಈ ಮೇಲಿನ ವೀರಗಲ್ಲು ಶಿಲ್ಪಗಳಲ್ಲಿ ಮಾನವನು ಕುದುರೆ, ಆನೆ ಮುಂತಾದ ಪ್ರಾಣಿಗಳನ್ನು ಪಳಗಿಸಿ ಸಾಕಿ ತನ್ನ ಅನುಕೂಲಕ್ಕಾಗಿ ಬಳಸಿಕೊಂಡಿರುವುದು ಪ್ರಮುಖವಾಗಿ ತಿಳಿದುಬರುವ ಅಂಶವಾಗಿದೆ. ವೀರಗಲ್ಲಿನ ಮೇಲ್ಭಾಗದಲ್ಲಿ ಸೂರ್ಯಚಂದ್ರರನ್ನು ಹಾಗೂ ಶಿವಲಿಂಗ ಮತ್ತು ಅದಕ್ಕೆ ಎದುರಾಗಿ ನಂದಿಯನ್ನು ಕೆತ್ತಲಾಗಿರುತ್ತದೆ. ಇಲ್ಲಿ ಸೂರ್ಯ ಚಂದ್ರರು ಶಾಶ್ವತದ ಸಂಕೇತವಾದರೆ, ಶಿವಲಿಂಗ ಮತ್ತು ನಂದಿ ಧರ್ಮವನ್ನು ಸಂಕೇತಿಸುತ್ತವೆ. ಹೀಗೆ ಧರ್ಮದ ಸಂಕೇತವಾಗಿ ಇಲ್ಲಿ ಪ್ರಾಣಿ ಬಳಕೆಯಾಗಿದ್ದು ಮಹತ್ವವನ್ನು ಪಡೆದುಕೊಂಡಿದೆ. ಈ ಮೇಲೆ ವಿವರಿಸಿದ ಎಲ್ಲಾ ವೀರಗಲ್ಲುಗಳು ಪ್ರಸ್ತುತ ಕಮಲಾಪುರದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿದ್ದು ಈ ವೀರಗಲ್ಲು ಶಿಲ್ಪಗಳ ಕುರಿತು ಲೇಖನವು ಪ್ರಕಟವಾಗಿರುತ್ತದೆ.[೧೩೭]



ವೀರಗಲ್ಲು ಶಿಲ್ಪಗಳು, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ವಸ್ತುಸಂಗ್ರಹಾಲಯ, ಕಮಲಾಪುರ

ಹಾಗೆಯೇ ಹಂಪಿ ಪರಿಸರದ ಶಾಸನ ಶಿಲ್ಪಗಳಲ್ಲಿ ಹಸುವೊಂದು ಶಿವಲಿಂಗಕ್ಕೆ ಹಾಲುಣಿಸುತ್ತಿರುವಂತ ಏಕೈಕ ಶಿಲ್ಪ ಆನೆಗುಂದಿಗೆ ನದಿ ದಾಟುವ ಸ್ಥಳಕ್ಕೆ ಹೋಗುವ ರಸ್ತೆಯ ಎಡಬದಿಯಲ್ಲಿ ಕಂಡುಬರುತ್ತದೆ. ಈ ಶಾಸನ ಶಿಲ್ಪದ ಕೆಳಭಾಗದಲ್ಲಿ ಲಿಪಿಗಳಿದ್ದು ಅದರ ಮೇಲಿನ ಭಾಗದಲ್ಲಿ ಹಸು ಲಿಂಗಕ್ಕೆ ಹಾಲುಣಿಸುತ್ತಿರುವಂತೆ ಕೆತ್ತಲಾಗಿದೆ. ಹಸುವಿನ ಮುಂದೆ ಚಿಕ್ಕ ಕರುವನ್ನು ಸಹ ತೋರಲಾಗಿದೆ. ಇದರ ಮೇಲ್ಭಾಗದಲ್ಲಿ ನಂದಿಯನ್ನು ಬಿಡಿಸಲಾಗಿದೆ. ಇಲ್ಲಿ ಹಸು ಲಿಂಗಕ್ಕೆ ಹಾಲುಣಿಸುತ್ತಿದ್ದು ದೈವಭಕ್ತ ಪ್ರಾಣಿಯಾಗಿ ಮಹತ್ವ ಪಡೆದಿರುವುದು ತಿಳಿಯುತ್ತದೆ. ಈ ರೀತಿಯ ಸಾಕಷ್ಟು ಶಿಲ್ಪಗಳು ಇಲ್ಲಿನ ದೇವಾಲಯಗಳ ಕಂಬಗಳಲ್ಲಿ ಕಂಡುಬಂದಿದ್ದರೂ ಶಾಸನ ಶಿಲ್ಪಗಳಲ್ಲಿ ಹಸುವೊಂದು ಲಿಂಗಕ್ಕೆ ಹಾಲುಣಿಸುತ್ತಿರುವ ಈ ರೀತಿಯ ಏಕೈಕ ಶಾಸನ ಶಿಲ್ಪ ಇದಾಗಿದೆ.





ಹಂಪಿ ಪರಿಸರದ ಹಲವು ಸ್ಮಾರಕಗಳಲ್ಲಿ ಹುಲಿಬೇಟೆಯ ಶಿಲ್ಪಗಳು ಕಂಡುಬರುತ್ತವೆ. ಅದರಲ್ಲಿ ಹಂಪಿಯ ಮಹಾನವಮಿ ದಿಬ್ಬ ಅದರ ಮುಂದಿರುವ ಅರಮನೆಯ ಅಧಿಷ್ಠಾನ, ವಿರೂಪಾಕ್ಷ, ವಿಠಲ ದೇವಾಲಯ ಹಾಗೂ ಆನೆಗುಂದಿಯ ಹುಚ್ಚಪ್ಪಯ್ಯನ ಮಠದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಅವುಗಳಲ್ಲಿ ಮಹಾನವಮಿದಿಬ್ಬದಲ್ಲಿನ ಶಿಲ್ಪಗಳು ಅತ್ಯುತ್ತಮವಾಗಿವೆ.

ಮಹಾನವಮಿ ದಿಬ್ಬದಲ್ಲಿ ಸುಮಾರು ೧೧ ಹುಲಿಬೇಟೆ ಶಿಲ್ಪಗಳು ಕಂಡುಬಂದಿವೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದ ಶಿಲ್ಪ ದಿಬ್ಬದ ಪಶ್ಚಿಮ ಬದಿಯಲ್ಲಿನ ಕೆಳಗಿನ ಹಂತದಲ್ಲಿ ರಾಜಪ್ರಮುಖನೊಬ್ಬ ಸೈನ್ಯ ಸಮೇತ ಹುಲಿಯನ್ನು ಬೇಟೆಯಾಡುತ್ತಿರುವ ಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪವನ್ನು ಕ್ಲೋರೈಟಿಕ್ ಶಿಲೆಯಲ್ಲಿ ಕಂಡರಿಸಲಾಗಿದೆ. ಈ ಶಿಲ್ಪದಲ್ಲಿ ಹುಲಿಯು ಆನೆಯ ಮೇಲೆ ಜಿಗಿದು ತನ್ನ ಮುಂಗಾಲುಗಳಿಂದ ಆನೆಯ ಸೊಂಡಿಲನ್ನು ಹಿಡಿದು, ಬಾಯಿಯಿಂದ ಅದರ ಮುಖದ ಭಾಗವನ್ನು ಕಚ್ಚುತ್ತಿದೆ. ಆನೆಯ ಮೇಲಿನ ಮಾವುತನು ಅಂಕುಶದಿಂದ ಆನೆಗೆ ತಿವಿಯುತ್ತಿರುವುದರಿಂದ ಅದು ರಭಸವಾಗಿ ಮುನ್ನುಗ್ಗುತ್ತಿದೆ. ಇದರ ಮುಂಭಾಗದಲ್ಲಿ ಸೈನಿಕನೊಬ್ಬ ಖಡ್ಗದಿಂದ ಹುಲಿಯ ಹೊಟ್ಟೆಗೆ ಚುಚ್ಚಿದ್ದಾನೆ. ಹುಲಿಯ ಹಿಂಬದಿಯಲ್ಲಿ ಅಶ್ವದ ಮೇಲೆ ಕುಳಿತ ವ್ಯಕ್ತಿಯು ಉದ್ದನೆಯ ಈಟಿಯಿಂದ ಹುಲಿಯ ಕೊರಳಿನ ಭಾಗಕ್ಕೆ ಚುಚ್ಚಿದ್ದಾನೆ. ಇವನಿಗೆ ಹಿಂಬದಿಯಲ್ಲಿನ ಸೇವಕ ಛತ್ರಿಯನ್ನು ಹಿಡಿದಿದ್ದಾನೆ. ಇದರಿಂದ ಇವನೊಬ್ಬ ರಾಜಪ್ರಮುಖನೆಂಬುದು ತಿಳಿದುಬರುತ್ತದೆ. ಇವನ ಹಿಂಬದಿಯಲ್ಲಿ ಖಡ್ಗ ಮತ್ತು ಗುರಾಣಿ ಹಿಡಿದ ಸೈನಿಕರು ಹಿಂಬಾಲಿಸುತ್ತಿದ್ದಾರೆ. ಹಾಗಾಗಿ ಇದನ್ನು ರಾಜಪ್ರಮುಖ ತನ್ನ ಸೈನ್ಯ ಸಮೇತ ಆಗಮಿಸಿ ಹುಲಿ ಬೇಟೆಯಾಡುತ್ತಿರುವ ಶಿಲ್ಪ ಎಂದು ಸ್ಪಷ್ಟವಾಗಿ ಗುರುತಿಸಬಹುದು. ಇದೇ ರೀತಿಯ ಶಿಲ್ಪ ಆನೆಗುಂದಿಯ ಹುಚ್ಚಪ್ಪಯ್ಯನ ಮಠದಲ್ಲಿ ಕಂಡುಬರುತ್ತದೆ. ಇದು ಆನೆಗುಂದಿ ವ್ಯಾಪ್ತಿಯಲ್ಲಿ ಕಂಡುಬಂದಿರುವ ಹುಲಿಬೇಟೆಯ ಏಕೈಕ ನಿರೂಪಣಾತ್ಮಕ ಶಿಲ್ಪವಾಗಿದೆ.



ಹುಲಿ
ಗಣ : ಕಾರ್ನಿವೋರ
ಕುಟುಂಬ : ಫೀಲಿಡೆ



ರಾಜಪ್ರಮುಖ ಹುಲಿ ಬೇಟೆ ಶಿಲ್ಪ, ಪಶ್ಚಿಮ ದಿಕ್ಕು, ಮಹಾನವಮಿ ದಿಬ್ಬ

ಹುಲಿಬೇಟೆಯ ಮತ್ತೊಂದು ಪ್ರಮುಖ ಶಿಲ್ಪ ದಿಬ್ಬದ ಪಶ್ಚಿಮದ ಬದಿಯ ಎಡಭಾಗದಲ್ಲಿ ಮೊದಲನೆ ಹಂತದ ಎರಡನೇ ಸಾಲಿನಲ್ಲಿ ಕಂಡುಬರುತ್ತದೆ. ಅಶ್ವಾರೂಢನಾದ ವ್ಯಕ್ತಿ ಈಟಿಯಿಂದ ಕುದುರೆಯ ಮೇಲೆ ಜಿಗಿಯುತ್ತಿರುವ ಹುಲಿಯ ಬಾಯಿಗೆ ಚುಚಿದ್ದಾನೆ. ಇಲ್ಲಿ ಹುಲಿ ಮತ್ತು ಕುದುರೆ



ಎರಡೂ ತಮ್ಮ ಮಂಗಾಲುಗಳನ್ನು ಮೇಲೆತ್ತಿರುವಂತೆ ತೋರಲಾಗಿದೆ. ಮಾನಸೋಲ್ಲಾಸ ಕೃತಿಯು ಒಳ್ಳೆಯ ಜಾತಿಯಲ್ಲಿ ಹುಟ್ಟಿದ ಚೆನ್ನಾಗಿ ತರಬೇತಿಯನ್ನು ಪಡೆದ. ವೇಗವಾಗಿ ಓಡುವ ಕುದುರೆಯನ್ನೇರಿ ರಾಜನು ಚೂಪಾದ ಈಟಿ, ಭಲ್ಲೆ ಮುಂತಾದ ಆಯುಧಗಳಿಂದ ಹರಿಣಿ ಇತ್ಯಾದಿ ಪ್ರಾಣಿಗಳನ್ನು ಕೊಲ್ಲಬೇಕು ಎನ್ನುತ್ತದೆ. ಈ ರೀತಿ ಕುದುರೆ ಮೇಲೆ ಕುಳಿತು ಆಡುವ ಬೇಟೆಯನ್ನು 'ವಾಹಜ' (ಅಶ್ವಜಾ) ಅಥವಾ 'ಅಶ್ವಜಾ ಮೃಗಯಾ' ಎಂದು ಹೆಸರಿಸುತ್ತದೆ.[೧೩೮] ಪ್ರಸ್ತುತ ಶಿಲ್ಪದಲಿರುವ ಬೇಟೆಗಾರ ಅಶ್ವದ ಮೇಲೆ ಕುಳಿತು ಹುಲಿಯನ್ನು ಬೇಟೆಯಾಡುತ್ತಿರುವುದರಿಂದ ಇದನ್ನು 'ಅಶ್ವಜಾ ಮೃಗಯಾ' ಎಂಬ ವಿಧಾನದ ಬೇಟೆಯ ಶಿಲ್ಪ ಎಂದು ಗುರುತಿಸಲಾಗಿದೆ.



ಅಶ್ವಜಾ ಮೃಗಯಾ ವಿಧನದ ಹುಲಿ ಬೇಟೆ ಶಿಲ್ಪ, ಪಶ್ಚಿಮ ದಿಕ್ಕು, ಮಹಾನವಮಿ ದಿಬ್ಬ, ಹಂಪಿ

ಮಹಾನವಮಿ ದಿಬ್ಬದ ಪೂರ್ವದಿಕ್ಕಿನ ಮೊದಲ ಹಂತದಲ್ಲಿ ಎರಡು ಹುಲಿಬೇಟೆಯ ಶಿಲ್ಪಗಳಿದ್ದು, ಒಂದು ಶಿಲ್ಪದಲ್ಲಿ ಬೇಟೆಗಾರ ಉದ್ದನೆಯ ಈಟಿಯಿಂದ ಹುಲಿಯನ್ನು ಬೇಟೆಯಾಡಲು ಮುಂದಾಗಿದ್ದಾನೆ. ಇವನ ಕಡೆ ನೋಡುತ್ತಿರುವ ಹುಲಿಯು ತನ್ನ ಮುಂದೆ ಬೇಟೆಗಾರ ಹಿಡಿದಿರುವ ಈಟಿಯ ತುದಿಯನ್ನು ಕಾಲಿನಿಂದ ಹೊಡೆಯುತ್ತಿದೆ. ಇನ್ನೊಂದು ಶಿಲ್ಪದಲ್ಲಿ ಹುಲಿಯು ಬೇಟೆಗಾರನ ಮೇಲೆ ಜಿಗಿಯುತ್ತಿದ್ದು ಬೇಟೆಗಾರ ಖಡ್ಗದಿಂದ ಅದರ ಕೊರಳಿಗೆ ಚುಚ್ಚಿದ್ದಾನೆ. ಈ ಖಡ್ಗ ಹುಲಿಯ ಕತ್ತನ್ನು ಸೀಳಿ ಹೊರಬಂದಿದೆ. ಈ ಎರಡೂ ಶಿಲ್ಪಗಳಲ್ಲಿ ಮರವನ್ನು ತೋರುವ ಮೂಲಕ ಈ ಘಟನೆ ದಟ್ಟಕಾಡಿನಲ್ಲಿ ನಡೆದಿರುವಂತೆ ಶಿಲ್ಪದಲ್ಲಿ ತೋರಿರುವುದು ಶಿಲ್ಪಿಯ ಕಲಾನೈಪುಣ್ಯತೆ ಎಂದೇ ಹೇಳಬಹುದು. ಇದೇ ರೀತಿಯ ಶಿಲ್ಪಗಳು ವಿರೂಪಾಕ್ಷ ದೇವಾಲಯದ ಮುಖಮಂಟಪದ ಮೇಲ್ಛಾವಣೆಯಲ್ಲಿನ ಭಿತ್ತಿಚಿತ್ರಗಳಲ್ಲಿ, ವಿಠಲ ದೇವಾಲಯದ ಸಭಾಮಂಟಪದ ಅಧಿಷ್ಠಾನದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ.

ಮಹಾನವಮಿ ದಿಬ್ಬದಲ್ಲಿ ಅತ್ಯಂತ ಮಹತ್ವದ ಹುಲಿಬೇಟೆ ಶಿಲ್ಪ ದಕ್ಷಿಣ ಬದಿಯ ಎರಡನೇ ಹಂತದಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಹುಲಿ, ಕಿರುಬ ಮತ್ತು ಜಿಂಕೆಯಿದ್ದು, ಕಿರುಬ ಮತ್ತು ಹುಲಿಯ ಮಧ್ಯಭಾಗದಲ್ಲಿ ಅಸ್ಪಷ್ಟವಾದ ವಸ್ತುವೊಂದು ಇದ್ದು, ಇದು ಬಹುಶಃ ಸತ್ತ ಪ್ರಾಣಿಯಾಗಿರಬಹುದು. ಇದನ್ನು ತಿನ್ನಲು ಇವೆರಡೂ ಪೈಪೋಟಿ ನಡೆಸುತ್ತಿರುವಂತಿದ್ದು, ಇದೇ ಸಮಯವನ್ನು ಕಾಯ್ದು ಮರದ ಮೇಲೆ ಇದ್ದ ಬೇಟೆಗಾರ ಹುಲಿಗೆ ಬಾಣ ಪ್ರಯೋಗಿಸಿದ್ದು, ಅದು ಹುಲಿಯ ಕೊರಳ ಭಾಗಕ್ಕೆ ಚುಚ್ಚಿಕೊಂಡಿದೆ. ನಂತರ ನೋವಿನ ಕೋಪದಿಂದ ಹುಲಿಯು ಮರದ ಮೇಲಿನ ಬೇಟೆಗಾರನ ಮೇಲೆ ದಾಳಿ ಮಾಡಲು ಜಿಗಿದಿದ್ದು, ಬೇಟೆಗಾರ ಖಡ್ಗದಿಂದ ಅದರ ಬಾಯಿಗೆ ಚುಚ್ಚಿದ್ದು ಅದು ಬಾಯಿಯನ್ನು ಸೀಳಿ ಹೊರಬಂದಿದೆ. ನಂತರದಲ್ಲಿ ಹುಲಿಯ ಕಾಲುಗಳನ್ನು

ಮೇಲ್ಮುಖವಾಗಿ ಮಾಡಿ ಕೆಳಗೆ ಬೀಳುತ್ತಿರುವಂತೆ ತೋರಲಾಗಿದ್ದು, ಇದು ಹುಲಿ ಸತ್ತಿರುವುದನ್ನು ಸೂಚಿಸುತ್ತದೆ. ಹಾಗೆಯೇ ಮರದ ಇನ್ನೊಂದು ಬದಿಯಲ್ಲಿ ಹುಲಿಯು ಮರವನ್ನು ಹತ್ತುತ್ತಿರುವಂತೆ ಅದನ್ನು ನಾಯಿ ಗಮನಿಸುತ್ತಿರುವಂತೆ ಶಿಲ್ಪಿ ಅತಿ ಸೂಕ್ಷ್ಮವಾಗಿ ತೋರಿಸಿದ್ದಾನೆ. ಒಟ್ಟಾರೆ ಈ ಎಲ್ಲಾ ಸನ್ನಿವೇಶವನ್ನು ಹಲವು ಕಲ್ಲುಗಳನ್ನು ಬಳಸಿ ನಿಖರವಾಗಿ ಜೋಡಿಸಲಾಗಿದೆ.



ಹುಲಿ ಬೇಟೆಯ ಶಿಲ್ಪ, ದಕ್ಷಿಣ ದಿಕ್ಕು ಮಹಾನವಮಿ ದಿಬ್ಬ, ಹಂಪಿ

ಹುಲಿಗೆ ಮಾಂಸವನ್ನು ಹಾಕಿ ಅದನ್ನು ಆಕರ್ಷಿಸಿ, ಅದು ತಿನ್ನಲು ಬಂದಾಗ ಮರೆಯಲ್ಲಿ ನಿಂತು ಅವುಗಳನ್ನು ಕೊಲ್ಲುವ ತಂತ್ರಗಳನ್ನು ಮಾನಸೋಲ್ಲಾಸ ಕೃತಿಯು ತಿಳಿಸುತ್ತದೆ. ಪ್ರಸ್ತುತ ಶಿಲ್ಪದಲ್ಲಿ ಸತ್ತ ಪ್ರಾಣಿಯೊಂದನ್ನು ಹಾಕಿ ಅದನ್ನು ತಿನ್ನಲು ಬಂದ ಹುಲಿಯನ್ನು ಮರದ ಮೇಲಿನಿಂದ ಬಾಣದಿಂದ ಹೊಡೆದು ಕೊಂದಿರಬಹುದು ಹಾಗಾಗಿ ಹಂಪಿ ಪರಿಸರದಲ್ಲಿ ಕಂಡುಬಂದಿರುವ ಹುಲಿಬೇಟೆ ಶಿಲ್ಪಗಳಲ್ಲಿ ಇದನ್ನು ಅತ್ಯುತ್ತಮ ಶಿಲ್ಪ ಎಂದು ಗುರುತಿಸಲಾಗಿದೆ. ಹೀಗೆ ಮಹಾನವಮಿ ದಿಬ್ಬದಲ್ಲಿ ಇನ್ನೂ ಹಲವು ಹುಲಿಬೇಟೆಯ ಶಿಲ್ಪಗಳಿದ್ದು ಪ್ರಮುಖವಾದವುಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಹಂಪಿ ಪರಿಸರದ ಶಿಲ್ಪಗಳಲ್ಲಿ ಕಂಡುಬಂದಿರುವ ಬಹುತೇಕ ಹುಲಿಗಳ ದೇಹಲಕ್ಷಣಗಳ ಆಧಾರದ ಮೇಲೆ ಅವು ಕಾರ್ನಿವೋರ (*Carnivora*) ಗಣದ, ಫಿಲಿಡೆ (*Philidae*) ಕುಟುಂಬಕ್ಕೆ ಸೇರಿದ್ದು ಪ್ಯಾಂಥೆರ ಟೈಗ್ರಿಸ್ (*Panthera tigris*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೫] ಹೀಗೆ ವಿಜಯನಗರ ಕಾಲಾವದಿಯಲ್ಲಿ ಇತರೆ ಬೇಟೆಗಳಂತೆ ಈ ಹುಲಿಬೇಟೆಯು ಸಹ ವಿಶೇಷವಾದ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತೆಂಬುದು ಈ ಪರಿಸರದಲ್ಲಿ ಕಂಡುಬಂದಿರುವ ಹುಲಿಬೇಟೆ ಶಿಲ್ಪಗಳಿಂದ ತಿಳಿದುಬರುತ್ತದೆ.

*** ಸಿಂಹ ಬೇಟೆಯ ಶಿಲ್ಪ**

ಸಿಂಹವು ಸಹ ಒಂದು ಕ್ರೂರ ಪ್ರಾಣಿಯಾಗಿದ್ದು, ಕಾಡಿನ ರಾಜನೆಂದೇ ಕರೆಯಲ್ಪಡುತ್ತದೆ. ಇಂತಹ ಸಿಂಹವನ್ನೇ ಬೇಟೆಯಾಡುತ್ತಿರುವ ಶಿಲ್ಪವೊಂದು ಮಹಾನವಮಿ ದಿಬ್ಬದಲ್ಲಿ ಕಂಡುಬರುತ್ತದೆ.

ಈ ಶಿಲ್ಪವು ದಿಬ್ಬದ ಪೂರ್ವಬದಿಯ ಮೊದಲ ಹಂತದಲ್ಲಿ ಕಂಡುಬರುತ್ತದೆ. ಶಿಲ್ಪದಲ್ಲಿ ಸಿಂಹವು ವೀರನ ಮೇಲೆ ತನ್ನ ಮುಂಗಾಲುಗಳನ್ನು ಮೇಲೆತ್ತಿ ದಾಳಿ ಮಾಡುತ್ತಿದೆ. ವೀರನು ತನ್ನ ಬಲಗೈನಲ್ಲಿ ಸಿಂಹದ ಕಾಲನ್ನು ಹಿಡಿದಿದ್ದು, ಎಡಗೈನಲ್ಲಿ ಚಾಕುವಿನಿಂದ ಸಿಂಹದ ಎದೆಯ ಭಾಗಕ್ಕೆ ಚುಚ್ಚಲು ಮುಂದಾಗಿದ್ದಾನೆ. ವೀರನ ಹಿಂಬದಿಯಲ್ಲಿ ಮರವನ್ನು ತೋರಿಸಿದ್ದು, ಅದು ಕಾಡನ್ನು ಸಂಕೇತಿಸುತ್ತದೆ.





ಸಿಂಹ
ಗಣ : ಕಾರ್ನಿವೋರ
ಕುಟುಂಬ : ಫೀಲಿಡೆ



ಸಿಂಹ ಬೇಟೆಯ ಶಿಲ್ಪ, ಪೂರ್ವ ದಿಕ್ಕು ಮಹಾನವಮಿ ದಿಬ್ಬ, ಹಂಪಿ

ಪ್ರಾಣಿಯ ಕತ್ತು ಮತ್ತು ಹಣೆಯಲ್ಲಿನ ದಟ್ಟಕೂದಲುಗಳು ಹಾಗೂ ಮುಖದ ಸ್ವಭಾವ ಇತರೆ ಲಕ್ಷಣಗಳನ್ನು ಆಧರಿಸಿ ಇದನ್ನು ಸಿಂಹವೆಂದು ಗುರುತಿಸಲಾಗಿದೆ. ಇದು ಕಾರ್ನಿವೋರ (*Carnivora*) ಗಣದ, ಫಿಲಿಡೆ (*Philidae*) ಕುಟುಂಬಕ್ಕೆ ಸೇರಿದ್ದು, ಪ್ಯಾಂಥೇರ ಲಿಯೋ (*Panthera leo*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೮೦] ಹಂಪಿ ಪರಿಸರದಲ್ಲಿ ಜಿಂಕೆ, ಹುಲಿ, ಆನೆ, ಹಂದಿ ಇತರೆ ಪ್ರಾಣಿಗಳ ಬೇಟೆಯ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿ ಕಂಡುಬಂದಿವೆ. ಆದರೆ ಕಾಡಿನ ರಾಜನಾದ ಸಿಂಹ ಬೇಟೆಯ ಶಿಲ್ಪ ಮಹಾನವಮಿ ದಿಬ್ಬದಲ್ಲಿ ಮಾತ್ರ ಕಂಡುಬಂದಿದ್ದು, ಅತಿ ವಿರಳವೆಂದು ಹೇಳಬಹುದು. ಹಾಗಾಗಿ ಇದನ್ನು ಅಪರೂಪದ ಶಿಲ್ಪ ಎನ್ನಬಹುದು.

*** ಆನೆ ಬೇಟೆಯ ಶಿಲ್ಪ**


ಬೇಟೆಗಾರ ಆನೆಗೆ ಗುರಿಯಿಟ್ಟು ಬಾಣ ಪ್ರಯೋಗಿಸುವಂತ ನಿರ್ಧಿಷ್ಟ ಶಿಲ್ಪಗಳು ಹಂಪಿ ಪರಿಸರದ ಸ್ಮಾರಕಗಳಲ್ಲಿ ಕಂಡುಬರದಿದ್ದರೂ ಈ ಆನೆ ಬೇಟೆಯ ಬಗೆಗೆ ಹಲವು ಸಾಹಿತ್ಯ ಕೃತಿಗಳಲ್ಲಿ ಮಾಹಿತಿ ಸಿಗುತ್ತದೆ. ಅಂತಹವುಗಳಲ್ಲಿ ವಿಜಯನಗರಕ್ಕೆ ಬೇಟಿ ನೀಡಿ ತಾವು ಕಂಡುಕೇಳಿದ್ದನ್ನು ದಾಖಲಿಸಿರುವ ವಿದೇಶಿ ಬರಹಗಳು ಪ್ರಮುಖವಾಗಿವೆ. ಅದರಲ್ಲಿ ಪರ್ಶಿಯಾದ ಅಬ್ದುಲ್ ರಜಾಕನು ಆನೆಗಳನ್ನು ಹಿಡಿಯುವ ಅಥವಾ ಬೇಟೆಯಾಡುವ ವಿದಾನವನ್ನು ಈ ರೀತಿಯಾಗಿ ಹೇಳಿದ್ದಾನೆ.[೧೮೧] ಆನೆ ನೀರು ಕುಡಿಯಲು ಹೋದಾಗ ದಾರಿಗೆ ಅಡ್ಡವಾಗಿ ಕಂದಕವನ್ನು ಅಗೆದು ಅದರ ಬಾಯನ್ನು ಹುಸಿಯಾಗಿ ಮುಚ್ಚುತ್ತಾರೆ. ಇದನ್ನು ಅರಿಯದ ಆನೆ ಕಂದಕದ ಒಳಕ್ಕೆ ಬೀಳುತ್ತದೆ. ಹೀಗೆ ಬಿದ್ದ ಆನೆಯ ಬಳಿಗೆ ಎರಡು ಮೂರು ದಿವಸಗಳು ಯಾರು ಹೋಗುವುದಿಲ್ಲ ಅನಂತರ ಒಬ್ಬನು ಆನೆಯ ಬಳಿಗೆ ಹೋಗಿ ಅದನ್ನು ಕೋಲಿನಿಂದ ಚೆನ್ನಾಗಿ ಹೊಡೆಯುತ್ತಾನೆ. ಆಗ ಮತ್ತೊಬ್ಬನು ಕಾಣಿಸಿಕೊಂಡು ಹೊಡೆಯುತ್ತಿರುವವನನ್ನು ಅಟ್ಟಿಸಿಕೊಂಡು ಹೋಗಿ ಅವರ ಕೈಯಲ್ಲಿರುವ ದೊಣ್ಣೆಯನ್ನು ಕಿತ್ತು ದೂರ ಎಸೆಯುತ್ತಾನೆ. ಹೀಗೆ ಮಾಡಿದ ಮೇಲೆ ಆನೆಗೆ ಸ್ವಲ್ಪ ಮೇವು ಹಾಕಿ ಹೊರಟು ಹೋಗುತ್ತಾನೆ. ಹಲವಾರು ದಿವಸಗಳು ಹೀಗೆ ಒಬ್ಬನು ಆನೆಯನ್ನು ಹೊಡೆಯುವುದು ಮತ್ತೊಬ್ಬನು ಅದನ್ನು ತಪ್ಪಿಸುವುದೂ

ನಡೆಯುತ್ತದೆ. ಹೀಗೆ ಮಾಡುವುದರಿಂದ ಹೊಡೆತವನ್ನು ತಪ್ಪಿಸಿದವನೊಡನೆ ಆನೆ ಒಗ್ಗಿಕೊಳ್ಳುತ್ತದೆ. ಅವನು ದಿನೇ ದಿನೇ ಆನೆಯ ಬಳಿಗೆ ಬಂದು ಮೈತುರಿಸಿ ಅದಕ್ಕೆ ಇಷ್ಟವಾದ ಹಣ್ಣುಗಳನ್ನು ಕೊಟ್ಟು ಪಳಗಿಸಿದ ಮೇಲೆ ಅದರ ಕೊರಳಿಗೆ ಸರಪಳಿಯನ್ನು ಹಾಕುತ್ತಾನೆ.

ಈ ರೀತಿ ಹಿಡಿದ ಒಂದು ಆನೆ ತಪ್ಪಿಸಿಕೊಂಡು ಕಾಡಿಗೆ ಓಡಿಹೋದ ಕಥೆಯೊಂದಿದೆ. ಅದನ್ನು ಅಟ್ಟಿಸಿಕೊಂಡು ಹೋದ ಮಾವುತ ಮತ್ತೊಮ್ಮೆ ಅದನ್ನು ಹಿಡಿಯಬೇಕೆಂದು ದಾರಿಗೆ ಅಡ್ಡವಾಗಿ ಕಂದಕವನ್ನು ಅಗೆದನು ಈ ಮೋಸವನ್ನು ಅರಿತ ಆನೆ ದೊಡ್ಡ ಮರದ ದಿಮ್ಮಿಯನ್ನು ಸೊಂಡಲಲ್ಲಿ ಹಿಡಿದು ತನ್ನ ಮುಂದೆ ಹೆಜ್ಜೆ ಹೆಜ್ಜೆಗೆ ಇಟ್ಟುಕೊಂಡು ನೆಲವು ಭದ್ರವಾಗಿರುವುದೇ ಇಲ್ಲವೇ ಎಂದು ನಿರ್ಧರಿಸಿಕೊಳ್ಳುತ್ತಾ ನೀರು ಕುಡಿಯುವ ಸ್ಥಳಕ್ಕೆ ಹೋಯಿತು. ಇದನ್ನು ಹೇಗಾದರೂ ಮಾಡಿ ಹಿಡಿಯಬೇಕೆಂದು ಮಾವಟಿಗನು ನಿರ್ಧರಿಸಿದನು. ಆನೆಯು ಹೋಗುವ ದಾರಿಯಲ್ಲಿದ್ದ ಮರವೊಂದರ ಮೇಲೆ ಕುಳಿತು ಅದು ಮರದಡಿಗೆ ಬಂದಾಗ ಆನೆಯ ಮೇಲಕ್ಕೆ ಧುಮುಕಿ ಅದಕ್ಕೆ ಕಟ್ಟಿದ್ದ ಹಗ್ಗಗಳನ್ನು ಭದ್ರವಾಗಿ ಹಿಡಿದುಕೊಂಡನು. ಅವನನ್ನು ಎಸೆಯುವುದಕ್ಕೆ ಆನೆ ಎಷ್ಟೋ ಪ್ರಯತ್ನಪಟ್ಟಿತು. ಎಡಗಡೆ ಆನೆ ಹೊರಳಿದರೆ ಅವನು ಬಲಗಡೆ ಹೊರಳುತ್ತಿದ್ದ, ಬಲಗಡೆ ಹೊರಳಿದರೆ ಎಡಗಡೆ ಹೊರಳುತ್ತಿದ್ದ. ಈ ಮಧ್ಯೆ ತಲೆಯನ್ನು ಅಂಕುಶದಿಂದ ತಿವಿಯುತ್ತಿದ್ದ. ಕೊನೆಗೆ ಆನೆ ಸುಸ್ತಾಗಿ ಮಾವಟಿಗನ ಸರಪಳಿಗಳಿಂದ ಬಂಧಿತವಾಯಿತು. ಹೀಗೆ ಬಂಧಿತವಾದ ಆನೆಯನ್ನು ರಾಜನ ಮುಂದೆ ಹಿಡಿದುಕೊಂಡು ಹೋದಾಗ ರಾಜನು ಅವನಿಗೆ ಉದಾರವಾಗಿ ಬಹುಮಾನ ಕೊಟ್ಟನೆಂದು, ಹಿಂದೂಸ್ಥಾನದ ರಾಜರುಗಳು ಕೂಡ ಆನೆಯ ಬೇಟೆಯಲ್ಲಿ ಭಾಗವಹಿಸಿ ತಿಂಗಳುಗಟ್ಟಲೆ ಕಾಡಿನಲ್ಲಿದ್ದುಕೊಂಡು ಆನೆಗಳನ್ನು ಹಿಡಿದು ತಮಗೆ ಬೇಕಾದ ಆನೆ ಸಿಕ್ಕಾಗ ಹೆಮ್ಮೆ ಪಡುತ್ತಾರೆಂಬುದಾಗಿ ದಾಖಲಿಸಿದ್ದಾನೆ.

ಈ ಮೇಲೆ ವಿವರಿಸಿದ ವಿವರಣೆಗೆ ಸಾಮ್ಯತೆಯಿರುವ ಶಿಲ್ಪಗಳು ಅಂದರೆ ಕಟ್ಟಿರುವ ಆನೆಯೊಂದು ತಪ್ಪಿಸಿಕೊಂಡು ಹೋಗುತ್ತಿರುವಂತ ಶಿಲ್ಪಗಳು ವಿಠಲ ದೇವಾಲಯದ ಕಲ್ಯಾಣಪಂಟಪ, ಹಾಗೂ ಪ್ರಕಾರ ಗೋಡೆಯ ಸಾಲುಮಂಟಪದ ಅಧಿಷ್ಠಾನಗಳಲ್ಲಿ ಕಂಡುಬರುತ್ತವೆ. ಕಲ್ಯಾಣ ಮಂಟಪದಲ್ಲಿನ ಈ ಶಿಲ್ಪಪಟ್ಟಿಕೆಯು ಉತ್ತರಾಭಿಮುಖವಾಗಿದ್ದು, ಇಲ್ಲಿ ಆನೆಯ ಹಿಂಬದಿಯ ಎರಡು ಕಾಲುಗಳಿಗೆ ಸರಪಳಿ ಕಟ್ಟಿದ್ದು, ಆ ಸರಪಳಿಯನ್ನು ಮಾವುತನು ಹಿಡಿದು ಕಂಬಕ್ಕೆ ಕಟ್ಟುತ್ತಿರುವಂತೆ ತೋರಲಾಗಿದೆ. ಇದನ್ನು ಸಹಿಸದ ಆನೆಯು ಕಿರುಚುತ್ತಿದ್ದು ಶಬ್ದ ಮಾಡುತ್ತಿರುವಂತೆ ತೋರಲಾಗಿದೆ. ನಂತರ ಮುಂದುವರೆದು ಆನೆಯು ಹಿಂಭಾಗಕ್ಕೆ ನೋಡುತ್ತಾ ಬಾಲವನ್ನು ಎತ್ತಿ ತಪ್ಪಿಸಿಕೊಂಡು ಜೋರಾಗಿ ಓಡುತ್ತಿರುವಂತೆ ತೋರಿಸಲಾಗಿದೆ. ನಂತರ ಮುಂದುವರೆದು ಆನೆಯು ರಭಸದಿಂದ ಮುಂದೆ ಸಾಗುತ್ತಿದೆ. ಇದರ ಮುಂದೆ ಮರವನ್ನು ತೋರಿಸಿರುವುದರಿಂದ ಇದು ಮತ್ತೆ ಕಾಡಿನ ಕಡೆಗೆ ತಪ್ಪಿಸಿಕೊಂಡು ಹೋಗುತ್ತಿದೆ. ಎಂಬುದನ್ನು ಶಿಲ್ಪಿ ಅತಿ ಸೂಕ್ಷ್ಮವಾಗಿ ಮೂಡಿಸಿದ್ದಾನೆ. ನಂತರ ಸಾಲುಮಂಟಪದ ಅಧಿಷ್ಠಾನದಲ್ಲಿ ಪೂರ್ವಾಭಿಮುಖವಾಗಿ ಇಂತಹದೇ ಮತ್ತೊಂದು ಶಿಲ್ಪ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಆನೆಯನ್ನು ಸರಪಳಿಯಿಂದ ಕಂಬಕ್ಕೆ ಕಟ್ಟಿಹಾಕಿದ್ದು, ಮುಂದಿನ ಮರವೊಂದನ್ನು ಸೊಂಡಿಲಿನಿಂದ ಬಿಗಿಯಾಗಿ ಹಿಡಿದು ಸರಪಳಿಯಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ತೋರಲಾಗಿದೆ. ಇಲ್ಲಿ ಆನೆಯ ಮುಂಗಾಲುಗಳಿಗೂ ಸರಪಳಿಯನ್ನು ಕಟ್ಟಿರುವುದು ಕಂಡುಬರುತ್ತದೆ. ನಂತರ ಮುಂದುವರೆದು ಆನೆಯು

ತಪ್ಪಿಸಿಕೊಂಡು ಓಡುತ್ತಿದೆ. ನಂತರದಲ್ಲಿ ತಪ್ಪಿಸಿಕೊಂಡು ಓಡುತ್ತಿರುವ ಆನೆಯನ್ನು ಗಮನಿಸಿದ ಮಾವುತನು ಅದನ್ನು ನಿಲ್ಲಿಸಲು ಅಂಕುಶದಿಂದ ಆನೆಯ ಹಿಂಭಾಗದಲ್ಲಿ ಚುಚ್ಚುತ್ತಿರುವುದನ್ನು ಕಾಣುತ್ತೇವೆ.

ತಪ್ಪಿಸಿಕೊಳ್ಳುತ್ತಿರುವ ಆನೆಯ ಶಿಲ್ಪಗಳು, ವಿಜಯವಿಠಲ ದೇವಾಲಯ, ಹಂಪಿ

ಇದೇ ಅಧಿಷ್ಠಾನದ ಮುಂದಿನ ಶಿಲ್ಪಪಟ್ಟಿಯಲ್ಲಿ ಆನೆಯನ್ನು ಉದ್ದನೆಯ ಈಟಿಯಿಂದ ಇಬ್ಬರು ವ್ಯಕ್ತಿಗಳು ಚುಚ್ಚುತ್ತಿರುವ ಶಿಲ್ಪ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಆನೆಯ ಮುಂಭಾಗದಲ್ಲಿ ಮತ್ತು ಹಿಂಭಾಗದಲ್ಲಿ ಇಬ್ಬರು ವ್ಯಕ್ತಿಗಳು ಈಟಿಯಿಂದ ಚುಚ್ಚುತ್ತಿರುವಂತೆ ತೋರಲಾಗಿದೆ. ಮುಂಭಾಗದಲ್ಲಿನ ವ್ಯಕ್ತಿಯು ಆನೆಯ ಬಾಯಿಗೆ ಈಟಿಯಿಂದ ಚುಚ್ಚಿದ್ದು, ಅವನ ಎಡಗಾಲನ್ನು ಆನೆಯು ಹಿಡಿದು ಎಳೆಯುತ್ತಿರುವಂತೆ ಕೆತ್ತಲಾಗಿದೆ. ಇವನು ಕಿರೀಟ, ಧೋತಿ ಮುಂತಾದ ಉಡುಪುಗಳನ್ನು ಧರಿಸಿರುವುದರಿಂದ ಇವನೊಬ್ಬ ರಾಜಪ್ರಮುಖನೆಂದು ಹೇಳಬಹುದು. ಹಿಂಭಾಗದಲ್ಲಿ ವ್ಯಕ್ತಿಯ ಶಿಲ್ಪವು ಹಾಳಾಗಿದ್ದು, ಈಟಿಯಿಂದ ಚುಚ್ಚುತ್ತಿರುವುದು ಮಾತ್ರ ಶಿಲ್ಪದಲ್ಲಿ ಕಂಡುಬರುತ್ತದೆ. ಇದೇ ರೀತಿಯ ಮತ್ತೊಂದು ಶಿಲ್ಪ ಇದರ ಮುಂದಿನ ಪಟ್ಟಿಕೆಯಲ್ಲಿ ಕಂಡುಬರುತ್ತದೆ. ಹೀಗೆ ರಾಜಪ್ರಮುಖನೊಬ್ಬ ಈಟಿಯಿಂದ ಆನೆಯನ್ನು ಚುಚ್ಚಿ ಪಳಗಿಸುತ್ತಿರುವ ಇಂತಹ ಶಿಲ್ಪಗಳನ್ನು ಆನೆಬೇಟೆಯ ಶಿಲ್ಪಗಳೆಂದೇ ಹೇಳಬಹುದು.

ಹಿಡಿದು ತಂದು ಕಟ್ಟಿದ ಆನೆಯೊಂದು ತಪ್ಪಿಸಿಕೊಂಡಾಗ ಅದನ್ನು ಮತ್ತೆ ಹಿಡಿಯುವ ವಿಧಾನದ ವಿವರಣೆಯನ್ನು ಅಬ್ದುಲ್ ರಜಾಕ್ ನೀಡಿದ್ದು, ಈ ವಿವರಣೆಗೆ ಹೋಲುವಂತೆ ಸೂಕ್ತ ಶಿಲ್ಪಪಟ್ಟಿಕೆಯೊಂದು ಅಚ್ಯುತರಾಯ ದೇವಾಲಯದ ಪ್ರಕಾರ ಗೋಡೆಯ ಅಧಿಷ್ಠಾನದಲ್ಲಿ ಕಾಣಬಹುದು. ಇಲ್ಲಿ ತಪ್ಪಿಸಿಕೊಂಡು ಓಡುತ್ತಿರುವ ಆನೆಯೊಂದನ್ನು ನಿಯಂತ್ರಿಸಲು ಮಾವುತ ಅಂಕುಶವನ್ನಿಡಿದು ಹಿಮ್ಮೆಟ್ಟಿದ್ದಾನೆ. ನಂತರ ಭಾಗದಲ್ಲಿ ಮರದ ಮೇಲೆ ನಿಂತಿರುವ ಮಾವುತನನ್ನು ಕೆಳಗೆ ಆನೆಯನ್ನು ಕೆತ್ತಿದ್ದು, ಮಾವುತ ಇದರ ಮೇಲೆ ಜಿಗಿಯಲು ಸಿದ್ದನಾಗಿರುವಂತೆ ತೋರಲಾಗಿದೆ. ಇಲ್ಲಿ ಇಬ್ಬರು ಮಾವುತರಿದ್ದು ಒಬ್ಬನನ್ನು ಆನೆಯು ತುಳಿದು ಕೊಲ್ಲುತ್ತಿದೆ. ನಂತರದ ಭಾಗದಲ್ಲಿ ಆನೆಯ ಮೇಲೆ ಜಿಗಿದ ಮಾವುತ ಆನೆಗೆ ಕಟ್ಟಿದ ಹಗ್ಗಗಳನ್ನು ಹಿಡಿದು ಕುಳಿತು ಅದನ್ನು ನಿಯಂತ್ರಿಸುತ್ತಿರುವಂತೆ ಆ ಆನೆಯ ಕೋಪದಿಂದ ಮುಂದಿನ ಮರವನ್ನು ಕೀಳುತ್ತಿರುವಂತೆ ಶಿಲ್ಪಿ ಅತಿ ಸುಂದರವಾಗಿ ಇಲ್ಲಿ ಮೂಡಿಸಿದ್ದಾನೆ. ಈ ಎಲ್ಲಾ ಶಿಲ್ಪಗಳಲ್ಲಿ ಕಾಡಿನ ಸಂಕೇತವಾಗಿ ಮರವನ್ನು ತೋರಿಸಲಾಗಿದೆ. ಇದರಿಂದ ಈ ಘಟನೆ ಕಾಡಿನ ಮಧ್ಯದಲ್ಲಿ ನಡೆಯುತ್ತಿದೆ



ತಪ್ಪಿಸಿಕೊಂಡಿರುವ ಆನೆಯನ್ನು ಹಿಡಿಯುತ್ತಿರುವ ಸನ್ನಿವೇಶದ ಶಿಲ್ಪ, ಪ್ರಾಕಾರ ಮಂಟಪದ ಅಧಿಷ್ಠಾನ, ಅಚ್ಯುತರಾಯ ದೇವಾಲಯ, ಹಂಪಿ

ಎಂಬುದು ತಿಳಿಯುವುದರ ಜೊತೆಗೆ ಇದು ಆನೆ ಬೇಟೆಯ ಶಿಲ್ಪಗಳೆಂಬುದು ಸ್ಪಷ್ಟವಾಗುತ್ತಿದೆ. ಹಾಗಾಗಿ ವಿಜಯನಗರ ಕಾಲಾವಧಿಯಲ್ಲಿ ಆನೆ ಬೇಟೆಯು ಪ್ರಮುಖವಾಗಿ ಪ್ರಚಲಿತದಲ್ಲಿತ್ತು ಎಂಬುದು ಈ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ.

*** ಪಕ್ಷಿ ಬೇಟೆಯ ಶಿಲ್ಪ**

ಪಕ್ಷಿ ಬೇಟೆಯ ಶಿಲ್ಪಗಳು ಹಂಪಿ ಪರಿಸರದಲ್ಲಿ ಅತಿ ವಿರಳ. ಮಹಾನವಮಿ ದಿಬ್ಬದ ದಕ್ಷಿಣ ಬದಿಯ ಮೊದಲನೆ ಹಂತದಲ್ಲಿ ಇಂತಹದೊಂದು ಪಕ್ಷಿ ಬೇಟೆಯ ಶಿಲ್ಪವನ್ನು ಗುರುತಿಸಲಾಗಿದೆ. ಈ ಶಿಲ್ಪದಲ್ಲಿ ಇಬ್ಬರು ಬೇಟೆಗಾರರು ಇದ್ದು ಒಬ್ಬ ಬಾಣ ಪ್ರಯೋಗಿಸುತ್ತಿದ್ದಾನೆ. ಇವನ ಹಿಂಬದಿಯಲ್ಲಿರುವ ಸಹಾಯಕನು ಬಲಗೈನಲ್ಲಿ ಖಡ್ಗ ಹಿಡಿದು ಎಡಗೈಯನ್ನು ಮೇಲೆತ್ತಿ ಬಹುಶಃ ಪಕ್ಷಿಯೊಂದನ್ನು ತೋರಿಸುತ್ತಿದ್ದಾನೆ. ಇಲ್ಲಿ ಬೇಟೆಗಾರ ಸಹ ಮುಂಬದಿಯಲ್ಲಿ ಕಂಡರಿಸಿರುವ ಮರದ ತುದಿಯಲ್ಲಿ ಕುಳಿತಿರುವ ಪಕ್ಷಿಯೊಂದನ್ನು ನೋಡುತ್ತಿದ್ದಾನೆ. ಈ ಪಕ್ಷಿ ದೇಹರಚನೆಯ ಆಧಾರದ ಮೇಲೆ ಇದು ಬೂದು ಬೆಳವ ಎಂದು ಗುರುತಿಸಲಾಗಿದೆ. ಇದು ಕೋಲಂಬಿಡೇ (*Colombidae*) ಕುಟುಂಬಕ್ಕೆ ಸೇರಿದ್ದು, ಸ್ಟೆಪ್ಟೋಪೀಲಿಯಾ ಡಿಕಾಕ್ಟೊ (*Steptophilia dicokto*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೪೨] ಹಂಪಿ ಪರಿಸರದಲ್ಲಿ ಕಂಡುಬಂದಿರುವ ಪಕ್ಷಿಬೇಟೆಯ ಮತ್ತೊಂದು ಶಿಲ್ಪ ಅಚ್ಯುತರಾಯ ದೇವಾಲಯದ ನೂರು ಕಂಬಗಳ ಮಂಟಪದ ಕಂಬದಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಬೃಹತ್ತಾದ ಮರವನ್ನು ತೋರಿಸಿದ್ದು, ಈ ಮರದಲ್ಲಿ ಎರಡು ಹನುಮಾನ್ ಕಪಿಗಳು ಮತ್ತು ಒಂದು ಪಕ್ಷಿಯನ್ನು ತೋರಿಸಲಾಗಿದೆ. ಈ ಮರದ ಕೆಳಭಾಗದಲ್ಲಿ ಬೇಟೆಗಾರನಿದ್ದು, ಅವನ ಚಿತ್ತ ಆ ಪಕ್ಷಿಯ ಕಡೆಯಿದ್ದು ತಲೆಯೆತ್ತಿ ಮರದ ಮೇಲಿನ ಪಕ್ಷಿಯನ್ನೇ ನೋಡುತಿದ್ದಾನೆ. ಇವನ ಎಡ ಕಂಕುಳಲ್ಲಿ ಬುಟ್ಟಿ ಅಥವಾ ಚೀಲದಂತ ವಸ್ತುವೊಂದಿದೆ. ಎಡಗೈ ಮೇಲೆತ್ತಿ ಪಕ್ಷಿಯ ಕಡೆ ತೋರಿಸುವಂತಿದ್ದರೆ. ಬಲಗೈ ಸೊಂಟದ ಭಾಗದಲ್ಲಿಟ್ಟುಕೊಂಡಿದ್ದಾನೆ. ಇಲ್ಲಿ ಶಿಲ್ಪ ಅಸ್ಪಷ್ಟವಾಗಿರುವುದರಿಂದ ಅವನ ಕೈಯಲ್ಲಿ ಯಾವ ಆಯುಧಗಳಿವೆಂಬುದು ಸ್ಪಷ್ಟವಾಗಿ ಹೇಳಲು ಆಗುತ್ತಿಲ್ಲ. ಬಹುಶಃ ಇವನು ಕ್ಯಾಟರ್‌ವಿಲ್ (ಕಲ್ಲನ್ನು

ಎಸೆಯುವ ಸಾಧನ) ಹಿಡಿದು ಬಲಗೈಯಿಂದ ಕಲ್ಲನ್ನು ತೆಗೆಯುತ್ತಿದ್ದು, ಪಕ್ಷಿಗೆ ಗುರಿಯಿಡಲು ಸಿದ್ಧನಾಗುತ್ತಿರಬಹುದು. ಇವನ ಉಡುಗೆ-ತೊಡುಗೆಗಳ ಆಧಾರದ ಮೇಲೆ ಇವನೊಬ್ಬ ಜನಸಾಮಾನ್ಯನೆಂಬುದು ತಿಳಿಯುತ್ತದೆ. ಹಾಗೆಯೇ ಮರದ ಮೇಲಿನ ಪಕ್ಷಿಯ ದೇಹರಚನೆ ಇತರೆ ಲಕ್ಷಣಗಳಿಂದ ಇದು ನವಿಲು ಎಂಬುದಾಗಿ ಗುರುತಿಸಲಾಗಿದೆ. ಇದು ಗ್ಯಾಲಿಫಾರ್ಮಿಸ್ (*Gyaliformes*) ಗಣದ, ಫಸಿಯಾನಿಡೆ (*Phasianidae*) ಕುಟುಂಬಕ್ಕೆ ಸೇರಿದ್ದು, ಪಾವೋ ಕ್ರಿಸ್ಟೇಟಸ್ (*Pavo cristatus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೪೩]



ಬೂದು ಬೆಳವ
ಕುಟುಂಬ : ಕೊಲಂಬಿಡೆ



ಪಕ್ಷಿ ಬೇಟೆಯ ಶಿಲ್ಪ, ಮಹಾನವಮಿ ದಿಬ್ಬ



ನವಿಲು
ಗಣ : ಗ್ಯಾಲಿಫಾರ್ಮಿಸ್
ಕುಟುಂಬ : ಫಸಿಯಾನಿಡೆ



ಪಕ್ಷಿ ಬೇಟೆಯ ಶಿಲ್ಪ, ಅಚ್ಯುತರಾಯ ದೇವಾಲಯ, ಹಂಪಿ

ಒಟ್ಟಾರೆಯಾಗಿ ಹಂಪಿ ಪರಿಸರದಲ್ಲಿ ಕೆತ್ತಲಾಗಿರುವ ಬೇಟೆಯ ಶಿಲ್ಪಗಳ ವಿಷಯ ನಿರೂಪಣೆಯಲ್ಲಿ ಶಿಲ್ಪಿಗಳು ವಹಿಸಿರುವ ಮುಂಜಾಗ್ರತೆ ಅವರ ಕಲಾ ನೈಪುಣ್ಯತೆ ಎಂದೇ ಹೇಳಬಹುದು. ಇಲ್ಲಿ ಪ್ರಾಣಿಗಳ ಚಲನವಲನ, ಬೇಟೆಯ ತಂತ್ರಗಳು, ಅವುಗಳನ್ನು ಸಾಗಿಸುತ್ತಿರುವುದು, ದಟ್ಟಕಾಡಿನ ಚಿತ್ರಣವನ್ನು ನೈಜವಾಗಿ





ತೋರಿಸಿರುವುದು ಗಮನಾರ್ಹ. ಹಾಗೆಯೇ ಬೇಟೆಗಾರರು ಧರಿಸಿರುವ ಉಡುಪುಗಳ ಹಿನ್ನೆಲೆಯಿಂದ ಅವರು ಜನಸಾಮಾನ್ಯರೋ ಅಥವಾ ರಾಜಪ್ರಮುಖರೋ ಎಂಬುದನ್ನು ಸ್ಪಷ್ಟವಾಗಿ ತೋರಿಸುವಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ. ಬೇಟೆಯು ಪ್ರಾಚೀನ ಕಾಲದಿಂದಲೂ ಹಲವು ಕಾರಣಗಳಿಂದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ವಿಜಯನಗರ ಕಾಲಾವಧಿಯಲ್ಲಿ ಇದು ಉತ್ತುಂಗ ಮಟ್ಟವನ್ನು ತಲುಪಿರುವುದು ಇಲ್ಲಿ ಕಂಡುಬಂದಿರುವ ಬೇಟೆ ಶಿಲ್ಪಗಳಿಂದ ದೃಢಪಡುತ್ತದೆ. ಜೊತೆಗೆ ವಿಜಯನಗರದ ಸ್ಮಾರಕಗಳಲ್ಲಿ ಮಹತ್ವವಾದ ಮತ್ತು ಅಚ್ಚಳಿಯದೇ ಇರುವ ಒಂದು ಪ್ರದೇಶಕ್ಕೆ 'ಬೇಟೆಗಾರರ ಹೆಚ್ಚಾಗಿಲು' ಎಂದು ಹೆಸರಿಟ್ಟಿರುವುದನ್ನು ನೋಡಿದರೆ ಹಂಪಿ ಪರಿಸರದಲ್ಲಿ ಬೇಟೆಯ ಪ್ರಭಾವ ಎಷ್ಟಿತ್ತೆಂಬುದನ್ನು ಊಹಿಸಬಹುದು. ಹಾಗೆಯೇ ವಿಜಯನಗರದ ಅರಸರು ಬೇಟೆಗೆ ಹೋಗುತ್ತಿದ್ದ ಬಗ್ಗೆ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು ತಿಳಿಸುತ್ತವೆ. ರಾಜರು ಬೇಟೆಯಲ್ಲಿ ಪ್ರವೀಣರಾಗಿದ್ದಾರೆಂಬುದಕ್ಕೆ ಅವರಿಗಿದ್ದ ಬಿರುದುಗಳೇ ಸಾಕ್ಷಿ. ಇಲ್ಲಿ ಎರಡನೇ ದೇವರಾಯನು ಆನೆಗಳ ಬೇಟೆಯಲ್ಲಿ ಪ್ರವೀಣನಾಗಿದ್ದರಿಂದ ಇವನಿಗೆ ಗಜವೇಂಟೆಗಾರ, ಗಜಬೇಟೆಗಾರ ಎಂಬ ಬಿರುದ್ದುಗಳಿದ್ದವು.[೧೪೪] ಹಾಗೆಯೇ ಹಂಪಿಯಲ್ಲಿ ಮಹಾನವಮಿ ಹಬ್ಬ ಆಚರಿಸುವ ಮೊದಲು ಬೇಟೆ ಹಬ್ಬವನ್ನು ಆಚರಿಸುತ್ತಿದ್ದರು. ಈ ಬೇಟೆಹಬ್ಬವು ತಿರುಪತಿಯಲ್ಲಿ ನಡೆಯುತ್ತಿತ್ತು ಎಂಬುದಾಗಿ ತಿಳಿದುಬರುತ್ತದೆ.[೧೪೫] ಇವೆಲ್ಲವೂ ಬೇಟೆಯ ಬಗ್ಗೆ ಅರಸರಿಗಿರುವ ಆಸಕ್ತಿಯನ್ನು ತೋರಿಸುತ್ತವೆ. ಹೀಗೆ ಹಂಪಿ ಪರಿಸರದಲ್ಲಿ ಕಂಡುಬಂದಿರುವ ವಿವಿಧ ರೀತಿಯ ಬೇಟೆಶಿಲ್ಪಗಳು ಅಂದಿನ ಬೇಟೆ ಜೀವನವನ್ನು ಮತ್ತು ಬೇಟೆಯ ವೈವಿಧ್ಯಮಯವಾದ ಕ್ರಮಗಳನ್ನು ತಿಳಿಸುವಲ್ಲಿ ಸಫಲವಾಗಿವೆ.

ಆ) ಪ್ರಾಣಿ ಮನರಂಜನಾ ಶಿಲ್ಪಗಳು

ಪ್ರಾಣಿಗಳ ಕಾಳಗ ಹಾಗೂ ಆಟ (ಕ್ರೀಡೆ)ಗಳನ್ನು ಏರ್ಪಡಿಸಿ ಅವುಗಳಿಂದ ಮನರಂಜನೆ ಪಡೆಯುವ ಸನ್ನಿವೇಶದ ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬಂದಿದ್ದು, ಅಂತಹವುಗಳನ್ನು ಪ್ರಾಣಿ ಮನರಂಜನಾ ಶಿಲ್ಪಗಳು ಎಂದು ಗುರುತಿಸಲಾಗಿದೆ.

ವಿಜಯನಗರ ಕಾಲಾವಧಿಯಲ್ಲಿ ಹಲವು ಜಾತ್ರೆ, ಉತ್ಸವ ಮತ್ತು ಇತರೆ ಸಮಾರಂಭಗಳು ಹಂಪಿಯಲ್ಲಿ ಜರುಗುತ್ತಿದ್ದುದು ತಿಳಿದುಬರುತ್ತದೆ. ಅಂತಹವುಗಳಲ್ಲಿ ಮಹಾನವಮಿ ಅಥವಾ ದಸರಾ ಹಬ್ಬವು ಪ್ರಮುಖವಾಗಿದ್ದು, ಈ ಸಂದರ್ಭದಲ್ಲಿ ಮನರಂಜನೆಗಾಗಿ ಅಥವಾ ವಿನೋದಕ್ಕಾಗಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿತ್ತು. ಇಂತಹ ಕಾರ್ಯಕ್ರಮಗಳಲ್ಲಿ ಮನರಂಜನೆಗಾಗಿ ಹಲವು ಪ್ರಾಣಿಗಳು ಬಳಕೆಯಾಗಿರುವುದು ಹಲವು ಸಾಹಿತ್ಯ ಕೃತಿಗಳು ಹಾಗೂ ವಿದೇಶಿಗರ ಬರಹಗಳು ಸ್ಪಷ್ಟಪಡಿಸುತ್ತವೆ. ಇದಕ್ಕೆ ನಿದರ್ಶನಗಳೆಂಬಂತೆ ಪ್ರಾಣಿಗಳು ಮನರಂಜನೆ ನೀಡುತ್ತಿರುವ ಹಲವು ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬಂದಿರುತ್ತವೆ. ಹಂಪಿ ಪರಿಸರದಲ್ಲಿನ ಪ್ರಾಣಿ ಮನರಂಜನಾ ಶಿಲ್ಪಗಳನ್ನು ಅಧ್ಯಯನ ದೃಷ್ಟಿಯಿಂದ ಪ್ರಾಣಿಕಾಳಗ ಶಿಲ್ಪಗಳು ಮತ್ತು ಪ್ರಾಣಿಗಳ ಆಟ ಅಥವಾ ಕ್ರೀಡೆಯ ಶಿಲ್ಪಗಳು ಎಂಬುದಾಗಿ ವಿಂಗಡಿಸಿಕೊಳ್ಳಲಾಗಿದೆ.

* **ಪ್ರಾಣಿಕಾಳಗ ಶಿಲ್ಪಗಳು** : ಪ್ರಾಣಿ–ಪ್ರಾಣಿಗಳ ನಡುವಿನ ಸೆಣಸಾಟಕ್ಕೆ ಪ್ರಾಣಿಕಾಳಗ ಎನ್ನುವರು.

ಈ ರೀತಿಯ ಪ್ರಾಣಿ ಕಾಳಗಗಳಲ್ಲಿ ಆನೆಕಾಳಗ, ಟಗರು ಕಾಳಗ, ಕೋಳಿಕಾಳಗ, ಗೂಳಿಕಾಳಗ ಮುಂತಾದವು ಪ್ರಮುಖವಾಗಿದ್ದು, ವಿಜಯನಗರ ಕಾಲಾವಧಿಯಲ್ಲಿ ನಡೆಯುತ್ತಿದ್ದವು ಎಂಬುದಕ್ಕೆ ವಿದೇಶಿಗಳ ಬರಹಗಳು ಪ್ರಮುಖ ಆಕರಗಳಾಗಿವೆ.

ಹಂಪಿ ಪರಿಸರದ ಸ್ಮಾರಕಗಳಲ್ಲಿನ ಪ್ರಾಣಿಕಾಳಗ ಶಿಲ್ಪಗಳಲ್ಲಿ ಆನೆ ಕಾಳಗ ಮತ್ತು ಟಗರು ಕಾಳಗ ಶಿಲ್ಪಗಳು ಪ್ರಮುಖವಾಗಿ ಕಂಡುಬರುತ್ತವೆ.

ಆನೆ ಕಾಳಗ ಶಿಲ್ಪಗಳು

ಸಾಮಾನ್ಯವಾಗಿ ಆನೆಯ ಕಾಳಗಗಳು ರಾಜಾಶ್ರಯವನ್ನು ಪಡೆದುಕೊಂಡಿದ್ದವು. ಜನಸಾಮಾನ್ಯರಿಗೆ ಈ ರೀತಿಯ ಕ್ರೀಡೆಗಳನ್ನು ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಅವರು ಕೇವಲ ಪ್ರೇಕ್ಷಕರಾಗಿ ಮನರಂಜನೆ ಪಡೆಯುತ್ತಾ ಇದೇ ಪ್ರಾಣಿ ಗೆಲ್ಲುತ್ತದೆ, ಸೋಲುತ್ತದೆ ಎಂದು ಜೂಜು ಕಟ್ಟಿಕೊಂಡು ಸಂಭ್ರಮಿಸುತ್ತಿದ್ದರು. ವಡ್ಡಾರಾಧನೆಯ ಸುಕೌಶಳ ಸ್ವಾಮಿಯ ಕಥೆಯ ಸಂದರ್ಭದಲ್ಲಿ ಮೂವತ್ತೆರಡು ಬಗೆಯ ಗಜಕ್ರೀಡೆಗಳಿದ್ದ ಬಗ್ಗೆ ಅಂಕಿಅಂಶವನ್ನು ನೀಡುತ್ತಾನೆ.[೧೯೬] ಮದದ ಎರಡು ಆನೆಗಳ ಮಧ್ಯ ಮೂರು ನಾಲ್ಕು ಅಡಿ ಅಗಲವಾದ ಮಣ್ಣಿನ ಗೋಡೆ ಒಂದೊಂದು ಆನೆಯ ಮೇಲೆ ನಾಲ್ಕು ಜನ ಮಾವುತರು ಕುಳಿತಿದ್ದು ಬೈಯುತ್ತಾ, ಕಾಲಿನಿಂದ ತುಳಿಯುತ್ತಾ ಆನೆಯನ್ನು ರೊಚ್ಚಿಗೇಳಿಸಿ ಸೊಂಡಿಲು ಮತ್ತು ಹಣೆಯಿಂದ ಸೆಣಸಾಡುವುದಕ್ಕೆ ಮುಂದು ಮಾಡುತ್ತಾರೆ. ಹಣೆಪಟ್ಟಿ ಒಡೆದರೂ ಕೊರೆಯಿಂದ ಚುಚ್ಚಿ ರಕ್ತ ಚಿಮ್ಮುತ್ತಿದ್ದರೂ ಅರಿವಿಲ್ಲದೇ ಹೋರಾಡುತ್ತಿರುತ್ತವೆ. ಬಲಹೀನವಾದ ಆನೆ ಹಿಮ್ಮೆಟ್ಟಿದರೆ ಗೋಡೆ ಬೀಳಿಸಿ ಬಲಯುಕ್ತ ಆನೆ ಬೆನ್ನಟ್ಟಿ ನೆಲಕ್ಕೆ ಬೀಳುವವರೆಗೂ ಬಿಡುವುದಿಲ್ಲ. ಇಂಥ ಸಂದರ್ಭದಲ್ಲಿ ಜೋರಾಗಿ ಶಬ್ದ ಮಾಡಿಸಿ ಅವುಗಳನ್ನು ಬಿಡಿಸುತ್ತಿದ್ದರು.[೧೯೭] ಕಾಳಗ ನಡೆದಾಗ ಎದುರಾನೆಯ ಕಣ್ಣು ಮಾವುತನ ಮೇಲೆ ಇರುತ್ತಿತ್ತು ಸಮಯ ಸಾಧಿಸಿ ಅವನನ್ನು ಸೊಂಡಿಲಿನಿಂದ ನೆಲಕ್ಕೆ ಅಪ್ಪಳಿಸಿ ಬಿಡುತ್ತದೆ. ಈ ರೀತಿಯ ಮುಂತಾದ ವಿವರದೊಂದಿಗೆ ಈ ಕಾಳಗದ ಕುರಿತು ಪ್ರವಾಸಿ ಪ್ರಾನ್ಸ್ಮಾಸ್ ಬೇರಾನ್ಯ ಹೇಳಿದ್ದಾನೆ.[೧೯೮]

ವರ್ಷಕ್ಕೊಮ್ಮೆ ನಡೆಯುತ್ತಿತ್ತು ಎನ್ನಲ್ಲಾಗುವ ಈ ಕಾಳಗದಲ್ಲಿ ಗೆದ್ದ ಮತ್ತು ಸೋತ ಎರಡೂ ಆನೆಗಳು ಸಾಯುತ್ತವೆ.[೧೯೯] ಸಾಯದೇ ಇದ್ದ ಆನೆಗಳನ್ನು ಇಟ್ಟುಕೊಳ್ಳುವ ಬದಲು ಸಾಯಿಸುವುದೇ ಲೇಸೆಂದು ನದಿಗೆ ನೂಕಲಾಗುತ್ತಿತ್ತು.[೨೦೦] ಈ ರೀತಿಯ ಕ್ರೀಡೆಯನ್ನು ಪ್ರಬಲವಾದ ಗೋಡೆಯ ಮಧ್ಯ ನೆರವೇರಿಸುತ್ತಿದ್ದರು. ಇದನ್ನು ವೀಕ್ಷಿಸಲು ಜನಸಾಮಾನ್ಯರಿಂದ ಹಿಡಿದು ರಾಜಪ್ರಮುಖರವರೆಗೆ ಎಲ್ಲರೂ ಆಗಮಿಸುತ್ತಿದ್ದರು. ಆನೆ ಆನೆಗಳ ಮಧ್ಯ ನಡೆಯುವ ಹೋರಾಟವನ್ನು ನೋಡಿ ಜನರು ಸಂಭ್ರಮಿಸುತ್ತಿದ್ದರು. ಈ ರೀತಿಯ ಆನೆಗಳ ಪರಸ್ಪರ ಸೆಣಸಾಟವನ್ನು 'ಗಜವೈಹಾಳಿ' ಎಂದು ಕರೆಯಲಾಗುತ್ತದೆ. ರಾಜನಾದವನು ಆನೆಗಳ ವೈಹಾಳಿಯನ್ನು ಏರ್ಪಡಿಸಿ ಗೆದ್ದ ಆನೆಗಳ ಮಾವುತರಿಗೆ ಬಟ್ಟೆ-ಆಭರಣ ಮುಂತಾದ ಬಹುಮಾನಗಳನ್ನು ಕೊಟ್ಟು ಗೌರವಿಸಬೇಕೆಂದು ಹಾಗೂ ವೈಹಾಳಿಗೆ ಬರುವ ಆನೆಗಳು ವಿವಿಧ ರೀತಿಯಾಗಿ ಅಲಂಕೃತಗೊಂಡಿರಬೇಕೆಂದು ಮಾನಸೋಲ್ಲಾಸವು ತಿಳಿಸುತ್ತದೆ.[೨೦೧] ಹಂಪಿ ಪರಿಸರದಲ್ಲಿ ಈ ರೀತಿಯ ಆನೆಗಳ ಹೋರಾಟದ ಶಿಲ್ಪಗಳು ಮಹಾನವಮಿ ದಿಬ್ಬ, ವಿರೂಪಾಕ್ಷ, ವಿಠಲ ಇದರ ಪಕ್ಕದಲ್ಲಿನ ಹಳೆಯ ಶಿವ ದೇವಾಲಯ, ಪಟ್ಟಾಭಿರಾಮ ಮತ್ತು ಅಚ್ಯುತರಾಯ ಅಥವಾ ತಿರುವೇಂಗಳನಾಥ ದೇವಾಲಯಗಳಲ್ಲಿ

ಕಂಡುಬರುತ್ತವೆ. ಈ ಮೇಲಿನ ಸಾಹಿತ್ಯ ಕೃತಿಗಳು ಆನೆಗಳ ವೈಹಾಳಿಯ ಶಿಲ್ಪಗಳಲ್ಲಿ ಮಾವುತರು ಇರಲೇಬೇಕೆಂದು ಅವರು ಅವುಗಳನ್ನು ಅಗತ್ಯವಿದ್ದಲ್ಲಿ ನಿಯಂತ್ರಿಸಬೇಕೆಂದು ತಿಳಿಸುತ್ತವೆ. ಆದರೆ ಹಂಪಿ ಪರಿಸರದಲ್ಲಿ ಕಂಡುಬಂದಿರುವ ಗಜಗಳ ವೈಹಾಳಿಯ ಶಿಲ್ಪಗಳಲ್ಲಿ ಅಚ್ಯುತರಾಯ ಮತ್ತು ವಿಠಲ ದೇವಾಲಯವನ್ನು ಹೊರತುಪಡಿಸಿದರೆ ಇತರೆ ಸ್ಮಾರಕಗಳಲ್ಲಿನ ಶಿಲ್ಪಗಳಲ್ಲಿ ಮಾವುತರನ್ನು ತೋರಲಾಗಿಲ್ಲ.

ಅಚ್ಯುತರಾಯ ದೇವಾಲಯದ ಪ್ರಕಾರ ಮಂಟಪದ ಅಧಿಷ್ಠಾನದಲ್ಲಿ ಆನೆಗಳ ಪಟ್ಟಿಕೆಗಳನ್ನು ಕೆತ್ತಲಾಗಿದೆ. ಇವುಗಳ ಜೊತೆಯಲ್ಲಿಯೇ ಗಜಗಳ ಹೋರಾಟದ ಶಿಲ್ಪಗಳನ್ನು ಕಡೆಯಲಾಗಿದೆ. ಇಲ್ಲಿನ ಒಂದು ಶಿಲ್ಪದಲ್ಲಿ ರಾಜಪ್ರಮುಖನೊಬ್ಬ ಗಜಗಳ ಕಾಳಗವನ್ನು ವೀಕ್ಷಿಸುತ್ತಿರುವ ಶಿಲ್ಪ ಆಕರ್ಷಕವಾಗಿದೆ. ಇದರಲ್ಲಿ ಎರಡು ಆನೆಗಳು ವಿವಿಧ ರೀತಿಯಾಗಿ ಅಲಂಕೃತಗೊಂಡಿದ್ದು, ಒಂದಕ್ಕೊಂದು ಕಾದಾಟದಲ್ಲಿ ತೊಡಗಿವೆ. ಇವುಗಳ ಮೇಲೆ ಮಾವುತರು ಕುಳಿತಿದ್ದು, ತಮ್ಮ ತಮ್ಮ ಆನೆಗಳನ್ನು ವೇಗವಾಗಿ ಮುನ್ನುಗ್ಗಿಸಲು ಅಂಕುಶಗಳಿಂದ ಚುಚ್ಚುತ್ತಿದ್ದಾರೆ. ಆನೆಗಳು ಒಂದಕ್ಕೊಂದು ಗುದ್ದಿಕೊಂಡಿದ್ದು, ಬಳೆಗಳಿಂದ ಅಲಂಕೃತಗೊಂಡಿರುವ ಆನೆಗಳ ದಂತಗಳು ಒಂದಕ್ಕೊಂದು ತಾಗಿಕೊಂಡಿವೆ. ಹೀಗೆ ಒಂದು ಆನೆ ತನ್ನ ದಂತಗಳಿಂದ ಇನ್ನೊಂದು ಆನೆಯ ದಂತಗಳಿಗೆ ತಾಗಿದ ಹೊಡೆತವನ್ನು 'ತಾಡಕಾಘಾತ' ಎಂದು ಮಾನಸೋಲ್ಲಾಸವು ಹೆಸರಿಸಿದೆ.[೧೫೨] ಈ ಆನೆಗಳ ಪಕ್ಕದಲ್ಲಿ ಇನ್ನೂ ಎರಡು ಆನೆಗಳಿದ್ದು, ಮಾವುತರು ಇವುಗಳ ಮೇಲೆ ಕುಳಿತಿರುವರು ಬಹುಶಃ ಇವುಗಳನ್ನು ಮಾವುತರು ವೈಹಾಳಿಗೆ ಕರೆತರುತ್ತಿರುವ ಸನ್ನಿವೇಶವೆಂದು ಹೇಳಬಹುದು. ಈ ಆನೆಗಳ ಮಧ್ಯದಲ್ಲಿ ಮಾವುತನೊಬ್ಬ ನಿಂತಿದ್ದು, ಇವನ ಬಳಿಯಲ್ಲಿಯೇ ರಾಜಪ್ರಮುಖ ನಿಂತು ಆನೆಗಳ ಕಾಳಗವನ್ನು ವೀಕ್ಷಿಸುತ್ತಿದ್ದಾನೆ. ಹಾಗಾಗಿ ಹಂಪಿ ಪರಿಸರದಲ್ಲಿ ಗಜಗಳ ವೈಹಾಳಿಯನ್ನು ರಾಜಪ್ರಮುಖನೊಬ್ಬ ವೀಕ್ಷಿಸುತ್ತಿರುವಂತೆ ತೋರಲಾಗಿರುವ ಏಕೈಕ ಶಿಲ್ಪ ಇದಾಗಿದೆ.

ಕಾಳಗದಲ್ಲಿ ದುರ್ಬಲ ಆನೆಯೊಂದು ಸೋತು ಶರಣಾಗಿ ಓಡುತ್ತಿರುವ ವಿಶೇಷ ಶಿಲ್ಪವೊಂದು ಇದೇ ದೇವಾಲಯದ ಅಧಿಷ್ಠಾನದ ಪಟ್ಟಿಕೆಯಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಬಲಿಷ್ಠ ಆನೆಯು ಎದುರಾಳಿ ಆನೆಯ ಮಾವುತನನ್ನು ಕೆಳಗೆ ಬೀಳಿಸಿ ದಂತದಿಂದ ಘಾಸಿಗೊಳಿಸುತ್ತಿದ್ದು, ಆನೆಯ ಮೇಲಿನ ಮಾವುತ ಅದನ್ನು ಬಿಡಿಸಲು ಅಂಕುಶದಿಂದ ಅದಕ್ಕೆ ತಿವಿಯುತ್ತಿರುವಂತೆ ತೋರಲಾಗಿದೆ. ದುರ್ಬಲ ಆನೆಯು ಹಿಂದಕ್ಕೆ ತಿರುಗಿ ನೋಡುತ್ತಾ ಓಡುತ್ತಿರುವಂತೆ ಕೆತ್ತಲಾಗಿದೆ. ಇದರ ಮುಂಭಾಗದಲ್ಲಿ ಹಿಂದಿನ ಎಡಗಾಲನ್ನು ಮಡಚಿ ಕುಳಿತಿರುವ ಚಿಕ್ಕಗಾತ್ರದ ಆನೆಯನ್ನು ತೋರಿಸಲಾಗಿದೆ. ಇದು ಬಹುಶಃ ಸೋತ ಆನೆ ದುರ್ಬಲವೆಂಬುದನ್ನು ಸೂಚಿಸುತ್ತಿದ್ದಿರಬಹುದು. ಈ ಶಿಲ್ಪದಲ್ಲಿನ ಆನೆಗಳು ವಿವಿಧ ರೀತಿಯ ಅಲಂಕರಣೆಯನ್ನು ಹೊಂದಿದೆ. ಈ ಶಿಲ್ಪ ಮೇಲೆ ವಿವರಿಸಲಾದ ಅಂದರೆ ಆನೆ ಕಾಳಗದಲ್ಲಿ ಆನೆಯು ಎದುರಾಳಿ ಆನೆಯ ಮಾವುತನ ಮೇಲೆ ಕಣ್ಣಿಟ್ಟಿದ್ದು ಅವಕಾಶ ಸಿಕ್ಕಾಗ ಅವನನ್ನು ಹಿಡಿದು ನೆಲಕ್ಕೆ ಅಪ್ಪಳಿಸುತ್ತದೆ. ಎಂಬ ವಿವರಣೆಗೆ ಈ ಶಿಲ್ಪ ಉತ್ತಮ ನಿದರ್ಶನವಾಗಿದೆ.

ವಿಠಲ ದೇವಾಲಯದ ಸಭಾಮಂಟಪದ ಅಧಿಷ್ಠಾನದಲ್ಲಿ ಹಾಗೂ ಉತ್ತರದಿಕ್ಕಿನ ಪ್ರಕಾರ ಮಂಟಪದ ಅಧಿಷ್ಠಾನದಲ್ಲಿ ಪರಸ್ಪರ ಕಾದಾಟದಲ್ಲಿ ತೊಡಗಿರುವ ಆನೆ ಶಿಲ್ಪಗಳಿವೆ. ಈ ಆನೆಗಳನ್ನು

ಹೆಚ್ಚು ಅಲಂಕರಣೆ ಹೊಂದಿರುವಂತೆ ತೋರಿಸಿದ್ದು, ಇಲ್ಲಿ ಮಾವುತ ಆನೆಗಳ ಮೇಲೆ ಇರದೆ ಆನೆಯ ಹಿಂಭಾಗದಲ್ಲಿರುವಂತೆ ತೋರಲಾಗಿದ್ದು ಇವನು ಹಿಂಬದಿಯಿಂದ ಆನೆಯ ಬೆನ್ನಿನ ಭಾಗಕ್ಕೆ ಚುಚ್ಚುತ್ತಿದ್ದಾನೆ. ಇದು ಬಹುಶಃ ಆನೆಯು ವೇಗವಾಗಿ ಓಡಿ ಎದುರಾಳಿಯನ್ನು ಹಾದು ಘಾಸಿಗೊಳಿಸಲು ಈ ರೀತಿ ಚುಚ್ಚುತ್ತಿದ್ದಾನೆಂದು ಊಹಿಸಬಹುದು.

ಮಹಾನವಮಿ ದಿಬ್ಬದ ಪಶ್ಚಿಮ ಬದಿಯ ಎರಡನೇಯ ಹಂತದಲ್ಲಿ ಪರಸ್ಪರ ಎದುರು ನಿಂತು ಕಾದಾಡುತ್ತಿರುವ ಆನೆಗಳ ಶಿಲ್ಪಗಳಿವೆ. ಅತ್ಯಂತ ವೇಗವಾಗಿ ಮುನ್ನುಗ್ಗಿ ಬಂದ ಆನೆಗಳು ಮುಖಗಳನ್ನು ಒಂದಕ್ಕೊಂದು ಗುದ್ದುತ್ತಿವೆ. ಪ್ರಸ್ತುತ ಶಿಲ್ಪವನ್ನು ಹೋಲುವ ಶಿಲ್ಪಗಳು ವಿರೂಪಾಕ್ಷ, ಪಟ್ಟಾಭಿರಾಮ ಮತ್ತು ಹಳೆಯ ಶಿವ ದೇವಾಲಯಗಳಲ್ಲಿ ಕಂಡುಬರುತ್ತವೆ. ಹೀಗೆ ವಿಜಯನಗರ ಕಾಲಾವಧಿಯಲ್ಲಿ ಆನೆಕಾಳಗ ಅಥವಾ ವೈಹಾಳಿಯು ಪ್ರಚಲಿತದಲ್ಲಿದ್ದು, ಮನರಂಜನೆಯ ಕ್ರೀಡೆಗಳಲ್ಲಿ ಒಂದಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು ಎಂಬುದನ್ನು ಈ ಆನೆಕಾಳಗ ಶಿಲ್ಪಗಳ ಅಧ್ಯಯನದಿಂದ ತಿಳಿಯುತ್ತದೆ.

ಟಗರು ಕಾಳಗ

ಆದಿಕಾಲದಿಂದ ಹಿಡಿದು ಇತ್ತೀಚಿನ ದಿನಗಳ ವರೆಗೆ ಈ ಟಗರು ಕಾಳಗವು ಪ್ರಚಲಿತದಲ್ಲಿದ್ದು, ಮನರಂಜನೆಯ ಒಂದು ಅಂಗವಾಗಿರುವುದು ಗಮನಾರ್ಹ. ಸ್ವಭಾವತ: ಟಗರುಗಳು ಕಾದಾಡುವ ಪ್ರಾಣಿಗಳು ಇವುಗಳ ಕಾಳಗಗಳಿಂದ ಜನರು ಮನರಂಜನೆ ಪಡೆಯುತ್ತಿದ್ದರು. ವಿಜಯನಗರ ಕಾಲದಲ್ಲಿ ಟಗರು ಕಾಳಗದ ಕುರಿತು ಸಾಕಷ್ಟು ಮಾಹಿತಿಯನ್ನು ಸಾಹಿತ್ಯ ಕೃತಿ ಮತ್ತು ಶಿಲ್ಪಗಳ ಮೂಲಕ ತಿಳಿಯಬಹುದು.

ಟಗರು ಕಾಳಗದ ಈ ಮನರಂಜನೆ ಕ್ರೀಡೆಯ ಉಲ್ಲೇಖ ರಾಮನಾಥ ಚರಿತೆಯಲ್ಲಿ ಬರುತ್ತದೆ.[೧೫೩]

"ಇತ್ತರದೋಳು ಜೂದುಗಾರರು ಕವಳವ

ತುತ್ತಿ ನಿಂಬೆಯ ಪಣ್ಬುಗಳಿಯನು ನೆತ್ತಿಗೊರಸಿ ಖೋಯೆಂದಾಗಿ ತಗರಿನ

ಮೊತ್ತವನಲ್ಲಿ ಕಾದಿಪರು"

ಈ ಮೇಲಿನ ಪಧ್ಯದಲ್ಲಿ ಜೂಜುಗಾರರು ಟಗರನ್ನು ಅನಿಗೊಳಿಸಿ ಬಿಟ್ಟ ಅಂಶವಿದೆ.

ಮಾನಸೋಲ್ಲಾಸವು ಮೇಷಯುದ್ಧದ ಅಥವಾ ಟಗರಿನ ಕಾಳಗದ ವಿನೋದವನ್ನು ಈ ರೀತಿಯಾಗಿ ವಿವರಿಸಿದೆ. ಟಗರುಗಳಲ್ಲಿ ಚೋಲಿಕ, ಜಟಿಲ, ಶೋಣವರ್ಣ ಎಂಬುದಾಗಿ ಮೂರು ವಿಧಗಳಿವೆ. ಕಾಳಗಕ್ಕೆ ಬರುವ ಟಗರಿಗೆ ಮದವು ಬರಲೆಂದು ಮಧ್ಯವನ್ನು ಕುಡಿಸಬೇಕು. ಸಿಟ್ಟು ಬರುವುದಕ್ಕಾಗಿ ಭೂರ್ಜದ ಎಲೆಯನ್ನು ತಿನ್ನಿಸಬೇಕೆಂದು ಇದರಿಂದ ಅದು ನಿಷ್ಠುರವಾಗಿ ಕಾಳಗವನ್ನಾಡುತ್ತದೆ. ಆ ಮೇಲೆ ಎರಡು ಟಗರುಗಳನ್ನು ಯುದ್ಧದಲ್ಲಿ ತೊಡಗಿಸಬೇಕು ಆಗ ಅವು ಪರಸ್ಪರ ಭಯಂಕರವಾಗಿ ಹೋರಾಡುತ್ತವೆ. ಎಂಬುದಾಗಿ ತಿಳಿಸುತ್ತದೆ.[೧೫೪]

ವಿಜಯನಗರ ಕಾಲದಲ್ಲಿ ಈ ಟಗರು ಕಾಳಗ ಹೆಚ್ಚು ಪ್ರಸಿದ್ಧಿಪಡೆದಿತ್ತೆಂಬುದಕ್ಕೆ ಪ್ರೌಢದೇವರಾಯನ ಕಾಲದಲ್ಲಿ ಟಗರು ಕಾಳಗದ ಪ್ರಭುದೇವನೆಂಬ ಇವನು ಟಗರು ಕಾದಾಟ ಮಾಡಿಸುವಲ್ಲಿ ಪ್ರಸಿದ್ಧಿ ಪಡೆದಿದ್ದನೆಂಬ ವಿಷಯ ಪ್ರಮುಖವಾಗಿ ತಿಳಿದುಬರುತ್ತದೆ.[೧೫೫]

ಈ ಮೇಲೆ ವಿವರಿಸಿದ ಸಾಹಿತ್ಯ ಕೃತಿಗಳ ವಿವರಣೆಯನ್ನು ಹೋಲುವಂತ ಟಗರು ಕಾಳಗದ ಏಕೈಕ ಶಿಲ್ಪ ಹಂಪಿಯ ವಿಠಲ ದೇವಾಲಯದ ಮುಖಮಂಟಪದ ಅಧಿಷ್ಠಾನದಲ್ಲಿ ಕಂಡುಬರುತ್ತದೆ.



ಸಂಗೀತ ಮಂಟಪದ ದಕ್ಷಿಣ ದಿಕ್ಕನ ಅದಿಷ್ಠಾನ, ವಿಜಯವಿಠಲ ದೇವಾಲಯ, ಹಂಪಿ

ಈ ಶಿಲ್ಪದಲ್ಲಿ ಎರಡು ಟಗರುಗಳು ಒಂದಕ್ಕೊಂದು ಕಾದಾಡುತ್ತಿದ್ದು ಡಿಕ್ಕಿ ಹೊಡೆದಿವೆ. ಇವುಗಳ ಕೋಡುಗಳು ವೃತ್ತಾಕಾರವಾಗಿ ಸುತ್ತಿಕೊಂಡಂತೆ ಬೆಳೆದಿವೆ. ಹಾಗೆಯೇ ಇವುಗಳ ಕೊರಳ ಭಾಗದಲ್ಲಿ ಕೂದಲುಗಳು ದಪ್ಪನಾಗಿ ಬೆಳೆದಿರುವಂತೆ ತೋರಲಾಗಿರುವುದು ಗಮನಾರ್ಹ. ಈ ಪಟ್ಟಿಕೆಯ ನಂತರದಲ್ಲಿ ಮತ್ತೊಂದು ಟಗರನ್ನು ತೋರಿಸಲಾಗಿದ್ದು, ಅದು ಸಹ ಈ ಮೇಲಿನ ಟಗರುಗಳ ಲಕ್ಷಣಗಳನ್ನೇ ಹೊಂದಿದೆ. ಈ ಟಗರುಗಳು ಸಸ್ತನಿಗಳ ವರ್ಗಕ್ಕೆ ಸೇರಿದ್ದು, ಬೋವಿಡೆ (*Bovidae*) ಕುಟುಂಬದಲ್ಲಿ ಬರುತ್ತವೆ.[೧೫೬] ಓವಿಸ್ ಓರಿಯಂಟಾಲಿಸ್ (*Ovis Oriantalies*) ಎಂಬುದು ಇದರ ವೈಜ್ಞಾನಿಕ ಹೆಸರು.[೧೫೭] ಹೀಗೆ ವಿಜಯನಗರ ಕಾಲದಲ್ಲಿ ಹಂಪಿ ಪರಿಸರದಲ್ಲಿ ಹಬ್ಬ, ಜಾತ್ರೆ, ಉತ್ಸವಗಳ ಸಮಯದಲ್ಲಿ ಜನರು ಸೇರುವ ಪ್ರದೇಶಗಳಲ್ಲಿ ಈ ರೀತಿಯ ಟಗರು ಕಾಳಗವನ್ನು ಏರ್ಪಡಿಸಿ ಮನರಂಜನೆಯನ್ನು ಪಡೆಯುತ್ತಿದ್ದರೆಂದು ಈ ಶಿಲ್ಪದಿಂದ ತಿಳಿಯಬಹುದು. ಟಗರು ಕಾಳಗ ಇಂದು ಸಹ ಈ ಪರಿಸರದಲ್ಲಿ ನಡೆಯುವುದನ್ನು ಕಾಣಬಹುದು. ಇದೇ ರೀತಿಯಾಗಿ ಕೋಳಿ ಕಾಳಗ, ಗೂಳಿ ಕಾಳಗ, ಕೋಣ ಕಾಳಗ ಮುಂತಾದವು ನಡೆಯುತ್ತಿದ್ದ ಬಗ್ಗೆ ಮಾನಸೋಲ್ಲಾಸವು ವಿವರವಾಗಿ ತಿಳಿಸುತ್ತವೆಯಾದರೂ ಇವುಗಳ ಕಾಳಗದ ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬಂದಿರುವುದಿಲ್ಲ. ಹೀಗೆ ಪ್ರಾಣಿ ಪ್ರಾಣಿಗಳ ನಡುವಿನ ಕಾದಾಟವು ಜನರ ಮನರಂಜನೆಯ ಒಂದು ಭಾಗವಾಗಿ ಪ್ರಾಮುಖ್ಯತೆಯನ್ನು ಗಳಿಸಿತ್ತೆಂಬುದು ತಿಳಿದುಬರುತ್ತದೆ.

*** ಪ್ರಾಣಿಗಳ ಆಟ ಅಥವಾ ಕ್ರೀಡೆಯ ಶಿಲ್ಪಗಳು**

ವ್ಯಕ್ತಿಯೊಬ್ಬನು ವಿವಿಧ ರೀತಿಯ ಪ್ರಾಣಿಗಳನ್ನು ಪಳಗಿಸಿ ಆಡಿಸುತ್ತಿರುವ ಶಿಲ್ಪಗಳನ್ನು ಪ್ರಾಣಿಗಳ



ಆಟದ ಶಿಲ್ಪಗಳೆಂದು ಗುರುತಿಸಲಾಗಿದೆ. ಈ ರೀತಿಯ ಆಟಗಳು ಸಹ ಮನರಂಜನೆಯ ಹಿನ್ನೆಲೆಯನ್ನು ಹೊಂದಿವೆ.

ವಿಜಯನಗರ ಕಾಲಾವಧಿಯಲ್ಲಿ ಹಂಪಿ ಪರಿಸರದಲ್ಲಿ ಮನರಂಜನೆಗೋಸ್ಕರ ಈ ರೀತಿಯ ಪ್ರಾಣಿಗಳ ಆಟಗಳನ್ನು ಆಡಿಸುತ್ತಿದ್ದರೆಂಬುದು ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಅದನ್ನು ಇಲ್ಲಿನ ಶಿಲ್ಪಗಳು ದೃಢಪಡಿಸುತ್ತವೆ. ಹಂಪಿ ಪರಿಸರದಲ್ಲಿ ಆನೆ ಆಟದ ಶಿಲ್ಪಗಳು ಮತ್ತು ಹಾವಿನ ಆಟ (ಹಾವಾಡಿಗನು)ವೆಂಬ ಎರಡು ಶಿಲ್ಪಗಳು ಪ್ರಮುಖವಾಗಿ ಕಂಡುಬಂದಿದ್ದು, ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

ಆನೆ ಆಟದ ಶಿಲ್ಪಗಳು

ಮಾವುತನು ಆನೆಯಿಂದ ಚತುರತೆಯ ಆಟಗಳನ್ನು ಆಡಿಸುತ್ತಿರುವಂತ ಶಿಲ್ಪಗಳನ್ನು ಆನೆ ಆಟದ ಶಿಲ್ಪಗಳೆಂದು ಗುರುತಿಸಲಾಗಿದೆ.

ಆನೆಯ ಆಟಗಳ ಕುರಿತು ವಿಜಯನಗರಕ್ಕೆ ಭೇಟಿ ನೀಡಿದ ಪರ್ಶಿಯಾದ ಪ್ರವಾಸಿಗ ಅಬ್ದುಲ್ ರಜಾಕನು ಈ ರೀತಿಯಾಗಿ ಹೇಳಿಕೊಂಡಿದ್ದಾನೆ. ಬಾರಿ ಆನೆಯೊಂದು ಮರದ ತುಂಡಿನ ಮೇಲೆ ನಾಲ್ಕು ಕಾಲುಗಳನ್ನು ಒಂದೇ ಕಡೆ ಹಾಕಿ ನಿಂತುಕೊಂಡು ವಾದ್ಯಕ್ಕೆ ತಕ್ಕಂತೆ ತನ್ನ ಸೊಂಡಿಲನ್ನು, ಮೈಯನ್ನು ಕುಣಿಸುತ್ತಿತ್ತು. ಹಾಗೆಯೇ ತಕ್ಕಡಿಯೋಪಾದಿಯಲ್ಲಿ ಹತ್ತು ಗಜ ಎತ್ತರದಲ್ಲಿ ನೆಟ್ಟ ಸ್ತಂಭವೊಂದಕ್ಕೆ ಒಂದು ಕಡೆ ಆನೆಯ ತೂಕದಷ್ಟು ಕಲ್ಲನ್ನು ಇನ್ನೊಂದು ಕಡೆ ಹಲಗೆಯ ಮೇಲೆ ಆನೆಯನ್ನು ನಿಲ್ಲಿಸಿ ಅರ್ಧ ವೃತ್ತದಷ್ಟು ಅತ್ತಿತ್ತ ಆಡಿಸಿದರು. ಆನೆ ವಾದ್ಯಕ್ಕೆ ತಕ್ಕಂತೆ ಕುಣಿಯುತ್ತಾ ಮೈಕುಲಕುತ್ತಾ ಇತ್ತು ಎಂಬುದಾಗಿ ದಾಖಲಿಸಿದ್ದಾನೆ.[೧೫೮]

ಇಲ್ಲಿ ಮೇಲೆ ತಿಳಿಸಿದಂತೆ ಮರದ ತುಂಡಿನ ಮೇಲೆ ಆನೆಯೊಂದು ಕಸರತ್ತು ಮಾಡುತ್ತಿರುವಂತಹ ಶಿಲ್ಪಗಳು ಹಂಪಿ ಪರಿಸರದಲ್ಲಿ ಎಲ್ಲೂ ಕಂಡುಬಂದಿರದಿದ್ದರೂ ಮೇಲೆ ವಿವರಿಸಿದ ವಿಷಯ ವಸ್ತುವಿಗೆ ಸಾಮ್ಯತೆ ಹೊಂದಿರುವ ಶಿಲ್ಪಗಳು ಹಂಪಿಯ ಅಚ್ಯುತರಾಯ ದೇವಾಲಯ ಮತ್ತು ಮಹಾನವಮಿದಿಬ್ಬದಲ್ಲಿ ಕಂಡುಬರುತ್ತವೆ.

ಅಚ್ಯುತರಾಯ ಅಥವಾ ತಿರುವೇಂಗಳನಾಥ ದೇವಾಲಯದ ಪ್ರಕಾರ ಮಂಟಪದ ಅಧಿಷ್ಠಾನದ ಶಿಲ್ಪಪಟ್ಟಿಕೆಯಲ್ಲಿ ಆನೆಗಳು ಮಾವುತನ ಸನ್ನೆಗೆ ಅನುಗುಣವಾಗಿ ನೃತ್ಯಮಾಡುತ್ತಿರುವಂತ ಪ್ರಮುಖ ಶಿಲ್ಪಗಳು ಕಂಡುಬರುತ್ತವೆ. ಇಲ್ಲಿನ ಒಂದು ಶಿಲ್ಪಪಟ್ಟಿಕೆಯಲ್ಲಿ ಮೂರು ಆನೆಗಳಿದ್ದು, ಅವುಗಳು ಮಾವುತ ಸನ್ನೆಗೆ ಅನುಗುಣವಾಗಿ ವರ್ತಿಸುತ್ತಿರುವಂತೆ ತೋರಲಾಗಿದೆ. ಇಲ್ಲಿ ಒಬ್ಬ ಮಾವುತನು ತನ್ನ ಎಡಗೈಯಿಂದ ಆನೆಯ ಸೊಂಡಿಲನ್ನು ಹಿಡಿದು ಬಲಗೈ ಮೇಲಕ್ಕೆ ಎತ್ತಿ ಸನ್ನೆ ನೀಡುತ್ತಿರುವಂತೆ ಅಥವಾ ಹಾಡನ್ನು ಹಾಡುತ್ತಿರುವಂತೆ ಕೆತ್ತಲಾಗಿದೆ. ಆನೆಯು ಸಹ ಹಿಂದಿನ ಎಡಗಾಲನ್ನು ಮತ್ತು ಮುಂದಿನ ಬಲಗಾಲನ್ನು ಎತ್ತಿ ನೃತ್ಯದ ಭಂಗಿಯಲ್ಲಿರುವಂತೆ ಬಿಡಿಸಲಾಗಿದೆ. ನಂತರದ ಶಿಲ್ಪದಲ್ಲೂ ಸಹ ಮಾವುತ ಸೊಂಡಿಲನ್ನು ಹಿಡಿದು ಆನೆಯನ್ನು ಆಡಿಸುತ್ತಿರುವಂತೆಯೂ ಅದರ ನಂತರ ಶಿಲ್ಪದಲ್ಲಿ ಮಾವುತನು ಉದ್ದನೆಯ

ಅಂಕುಶದಿಂದ ದೂರದಿಂದ ಸೂಚನೆ ನೀಡುವಂತೆ ಅದಕ್ಕೆ ತಕ್ಕಂತೆ ಅದು ವರ್ತಿಸುತ್ತಿರುವಂತೆ ಕೆತ್ತಿದ್ದು ಗಮನಾರ್ಹವಾಗಿದೆ. ಇಲ್ಲಿ ಎಲ್ಲಾ ಮಾವುತರು ಎತ್ತರದ ಪೀಠದ ಮೇಲೆ ನಿಂತಿರುವುದು ಆನೆಗಳ ಎತ್ತರಕ್ಕೆ ಸರಿಸಮಾನವಾಗಿ ನಿಂತು ಆಟ ಆಡಿಸಲು ಅನುಕೂಲವಾಗಿದೆ ಎನ್ನಬಹುದು. ಇಲ್ಲಿನ ಆನೆಗಳು ವಿವಿಧ ರೀತಿಯ ವಸ್ತ್ರಾಭರಣಗಳಿಂದ ಅಲಂಕೃತಗೊಂಡಿವೆ. ಈ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಾವುತನು ಆನೆಗಳ ಆಟವಾಡಿಸುತ್ತಿರುವುದು ಸ್ಪಷ್ಟವಾಗುತ್ತದೆ. ಇಂತಹ ಆಟಗಳನ್ನು ನೋಡಿ ಜನರು ಮನರಂಜನೆ ಪಡೆಯುತ್ತಿದ್ದರೆಂದು ಹೇಳಬಹುದು.



ಮಾವುತನ ಸನ್ನೆಗೆ ತಕ್ಕಂತೆ ನೃತ್ಯಮಾಡುತ್ತಿರುವ ಆನೆಯ ಶಿಲ್ಪ, ದಕ್ಷಿಣ ದಿಕ್ಕು, ಮಹಾನವಮಿ ದಿಬ್ಬ

ಆನೆಗಳು ಸಂಗೀತ ವಾಧ್ಯಕ್ಕೆ ತಕ್ಕಂತೆ ತನ್ನ ಸೊಂಡಿಲನ್ನು ಮತ್ತು ಮೈಯನ್ನು ಕುಣಿಸುತ್ತಿರುವ ಐಕ್ಯೆಕ ಮತ್ತು ವಿಶಿಷ್ಟ ಶಿಲ್ಪವೊಂದು ಮಹಾನವಮಿ ದಿಬ್ಬದ ದಕ್ಷಿಣ ಬದಿಯ ಮೂರನೇ ಹಂತದಲ್ಲಿ ಕಂಡುಬರುತ್ತದೆ. ಈ ಶಿಲ್ಪಪಟ್ಟಿಕೆಯಲ್ಲಿ ವಿವಿಧ ರೀತಿಯ ಆಭರಣಗಳಿಂದ ಅಲಂಕೃತಗೊಂಡಿರುವ ಎರಡು ಆನೆಗಳನ್ನು ಮತ್ತು ಇವುಗಳ ಮಧ್ಯಭಾಗದಲ್ಲಿ ಇಬ್ಬರು ಸ್ತ್ರೀಯರನ್ನು ತೋರಿಸಲಾಗಿದೆ. ಇವರಲ್ಲಿ ಒಬ್ಬಳು ಸಂಗೀತ ವಾದ್ಯವನ್ನು ನುಡಿಸಿದರೆ ಮತ್ತೊಬ್ಬಳು ನೃತ್ಯ ಮಾಡುತ್ತಿರುವಂತೆ ಕೆತ್ತಲಾಗಿದೆ. ಇವರ ಎಡ ಬಲ ಭಾಗಗಳಲ್ಲಿರುವ ಆನೆಗಳು ಸಹ ವಾದ್ಯಕ್ಕೆ ಮತ್ತು ನೃತ್ಯಕ್ಕೆ ತಕ್ಕಂತೆ ಸೊಂಡಿಲನ್ನು ಹಾಗೂ ಮೈಯನ್ನು ಆಡಿಸುತ್ತಿರುವಂತಿದೆ. ಇಲ್ಲಿ ಆನೆಗಳು ಬಾಲವನ್ನು ಮತ್ತು ಸೊಂಡಿಲುಗಳನ್ನು ಎತ್ತಿ ಮುಂಭಾಗದ ಕಾಲುಗಳಲ್ಲಿ ಒಂದನ್ನು ಮಡಚಿ ನೃತ್ಯ ಮಾಡುತ್ತಿರುವಂತೆ ಕೆತ್ತಲಾಗಿದೆ. ಈ ಆನೆಗಳ ಕಾಲಿಗೆ ಕಾಲ್ಗಡಗದಂತ ಆಭರಣವನ್ನು ತೊಡಿಸಿದ್ದು, ಬಹುಶಃ ಇವು ಕಾಲಿಗೆ ಕಟ್ಟುವ ಗೆಜ್ಜೆಯಾಗಿರಬಹುದು. ಈ ಎಲ್ಲಾ ಅಂಶಗಳಿಂದ ತಿಳಿಯುವುದೇನೆಂದರೆ ಈ ರೀತಿಯಾಗಿ ಪ್ರಾಣಿಗಳನ್ನು ಪಳಗಿಸಿ ಜಾತ್ರೆ, ಉತ್ಸವಗಳಲ್ಲಿ ಆಟವಾಡಿಸುವುದರ ಮೂಲಕ ಜನಸಾಮಾನ್ಯರಿಗೆ ಮನರಂಜನೆ ನೀಡುತ್ತಿದ್ದರೆಂಬುದು ತಿಳಿದುಬರುತ್ತದೆ. ಹಾಗಾಗಿ ಆನೆಗಳು ವಾದ್ಯಕ್ಕೆ ತಕ್ಕಂತೆ ನೃತ್ಯಮಾಡುತ್ತಿರುವ ಈ ಶಿಲ್ಪವು ಹಂಪಿ ಪರಿಸರದಲ್ಲಿ ಐಕ್ಯೆಕ ಶಿಲ್ಪವೆಂದೇ ಹೇಳಬಹುದು.

ಮಾನಸೋಲ್ಲಾಸವು ಗಜವೈಯಾಳಿಯ ಆನೆಯ ಕುರಿತು ಈ ರೀತಿಯಾಗಿ ವಿವರಿಸುತ್ತದೆ. ಆನೆಯ ಕಣ್ಣಿಗೆ ಅಡ್ಡವಾಗುವಂತೆ ಮುಖಪಟ್ಟವನ್ನು ಕಟ್ಟಿ ಅದರ ಎರಡು ಕಿವಿಗಳಿಗೂ ಒದ್ದೆ ಬಟ್ಟೆಯನ್ನು



ತುರುಕಿ ಯಮನಂತೆ ದುರ್ಧರ್ಷವಾದ ಆ ಆನೆಯನ್ನು ವೈಹಾಳಿಯ ಭೂಮಿಗೆ ಕರೆತರಬೇಕು. ನಂತರ ದೂರದಿಂದ ಬಹಳ ಜೋರಾಗಿ ವೀರಸೂಡ ಶಬ್ದವನ್ನು ಮಾಡಿಸಬೇಕು. ಆಗ ಆನೆಯು ಕಿವಿಗಳನ್ನು ನಿಮಿರಿಸಿ, ಅವಡು ಕಚ್ಚಿಕೊಂಡು ಸೊಂಡಿಲನ್ನು ಮುಂದೆ ಚಾಚಿ ಕೋಪದಿಂದ ಬಾಲವನ್ನೆತ್ತಿ ಗಾಬರಿಯಿಂದ ವೇಗವನ್ನು ಹೆಚ್ಚಿಸಿ ಆ ಪರಿಕಾರನನ್ನು ಅಟ್ಟಿಸಿಕೊಂಡು ಹೋಗುತ್ತದೆ. ಈ ಸಮಯದಲ್ಲಿ ಪರಿಕಾರ ಮತ್ತು ಪಕ್ಕದಲ್ಲಿನ ಪ್ರೇಕ್ಷಕರ ಮೇಲೂ ಆಕ್ರಮಣ ಮಾಡುತ್ತದೆ. ಕೆಲವರನ್ನು ಉಗುರಿನ ಪಟ್ಟುಗಳಿಂದಲೂ, ದಂತಗಳ ತಿವಿತದಿಂದಲೂ ಸೊಂಡಿಲಿನ ಹೊಡೆತಗಳಿಂದಲೂ ಇನ್ನೂ ಕೆಲವರನ್ನು ಕಲ್ಲುಗಳನ್ನು ಬೀಳಿಸುವುದರಿಂದಲೂ ಆನೆ ಅವರನ್ನು ಕೊಂದು ಹಾಕಬಹುದು.[೧೫೯]




ಗಜವೈಯಾಳಿಯ ಸಂದರ್ಭದಲ್ಲಿ ಮನುಷ್ಯರನ್ನು ಕೊಲ್ಲುತ್ತಿರುವ ಆನೆಯ ಶಿಲ್ಪಗಳು, ಪಶ್ಚಿಮ ದಿಕ್ಕು ಮಹಾನವಮಿ ದಿಬ್ಬ

ಈ ಮೇಲಿನ ವಿವರಣೆಯನ್ನು ಹೋಲುವಂತಹ ಶಿಲ್ಪಗಳು ಹಂಪಿ ಪರಿಸರದ ಮಹಾನವಮಿ ದಿಬ್ಬ, ಹಜಾರರಾಮ, ವಿಠಲ, ವಿರೂಪಾಕ್ಷ, ಅಚ್ಯುತರಾಯ ದೇವಾಲಯ ಮತ್ತು ಅರಮನೆಗಳ ಅಧಿಷ್ಠಾನಗಳಲ್ಲಿ ಕಂಡುಬರುತ್ತವೆ. ಈ ದೇವಾಲಯಗಳಲ್ಲಿನ ಎಲ್ಲಾ ಶಿಲ್ಪಗಳಲ್ಲೂ ಮದವೇರಿದ ಆನೆಯು ವಿವಿಧ ರೀತಿಯಾಗಿ ವ್ಯಕ್ತಿಗಳನ್ನು ಘಾಸಿಗೊಳಿಸಿ ಕೊಲ್ಲುತ್ತಿರುವ ಸನ್ನಿವೇಶವನ್ನು ತೋರಿಸಲಾಗಿದೆ. ಹಾಗಾಗಿ ಇದು ವೈಹಾಳಿಯ ಸಂದರ್ಭದಲ್ಲಿ ಪರಿಕಾರ ಅಥವಾ ಪ್ರೇಕ್ಷಕರ ಮೇಲೆ ದಾಳಿ ಮಾಡಿರುವ ಶಿಲ್ಪಗಳಾಗಿದ್ದಿರಬಹುದೆಂದು ಅಭಿಪ್ರಾಯಿಸಬಹುದು. ಆದರೆ ಬಿ.ಎ. ಸಾಲೆತೊರೆಯವರು ಈ ರೀತಿಯ ಶಿಲ್ಪಗಳನ್ನು ತಪ್ಪು ಮಾಡಿದ ವ್ಯಕ್ತಿಗೆ ಆನೆಯಿಂದ ತುಳಿಸಿ ಶಿಕ್ಷೆಯನ್ನು ನೀಡುತ್ತಿರುವ ಶಿಲ್ಪವೆಂದು ಗುರುತಿಸಿದ್ದಾರೆ.[೧೬೦] ಆದರೆ ಇಲ್ಲಿನ ಎಲ್ಲಾ ಶಿಲ್ಪಗಳಲ್ಲೂ ಮಾವುತನ ಮದವೇರಿದ ಆನೆಯನ್ನು ಹತೋಟಿಗೆ ತರಲು ಪ್ರಯತ್ನಿಸುತ್ತಿರುವುದರಿಂದ ಇವು ಬಹುಶಃ ಗಜವೈಹಾಳಿಯ ಶಿಲ್ಪಗಳೆಂದೇ ಅಭಿಪ್ರಾಯಪಡಬಹುದು. ಈ ರೀತಿಯ ಆಟಗಳು ಸಹ ಮನರಂಜನೆಯ ಒಂದು ಭಾಗವಾಗಿದ್ದವು.

*** ಹಾವಾಡಿಗರ (ಹಾವಿನ ಆಟ)ಶಿಲ್ಪಗಳು**

ಹಾವನ್ನು ಹಿಡಿದು ಪಳಗಿಸಿ ಪುಂಗಿನಾದಕ್ಕೆ ತಕ್ಕಂತೆ ತಲೆಯಾಡಿಸುವಂತಿರುವ ಶಿಲ್ಪಗಳನ್ನು ಹಾವಾಡಿಗ ಶಿಲ್ಪಗಳೆಂದು ಗುರುತಿಸಲಾಗಿದೆ. ಈ ರೀತಿಯ ಆಟ ಹಾವಾಡಿಗನಿಗೆ ವೃತ್ತಿಯಾಗಿದ್ದರೂ ನೋಡುಗರಿಗೆ ಅದು ಮನರಂಜನೆಯಾಗಿರುತ್ತದೆ. ಹಾಗಾಗಿ ಈ ರೀತಿಯ ಶಿಲ್ಪಗಳನ್ನು ಸಹ ಪ್ರಾಣಿ

ಮನರಂಜನ ಶಿಲ್ಪಗಳೆಂದೇ ಪರಿಗಣಿಸಲಾಗಿದೆ. ಈ ರೀತಿಯ ಮನಂರಂಜನೆಯ ಆಟಗಳು ಒಂದು ವೃತ್ತಿಯಾಗಿ ವಿಜಯನಗರ ಕಾಲಾವಧಿಯಲ್ಲಿತ್ತು ಎಂಬುದನ್ನು ಹಂಪಿ ಪರಿಸರದಲ್ಲಿ ಕಂಡುಬಂದಿರುವ ಹಾವಾಡಿಗರ ಹಲವು ಶಿಲ್ಪಗಳು ದೃಡಪಡಿಸುತ್ತವೆ. ಹಾವಾಡಿಗ ಪುಂಗಿಯನ್ನು ಊದುತ್ತಾ ಹಾವನ್ನು ಆಡಿಸುತ್ತಿರುವ ಶಿಲ್ಪಗಳು ಪ್ರಮುಖವಾಗಿದ್ದು, ಈ ರೀತಿಯ ಏಳು ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬರುತ್ತವೆ. ಹಂಪಿಯ ಮಾಲ್ಯವಂತ ರಘುನಾಥ ದೇವಾಲಯ, ಕಮಲಾಪುರದ ಪಟ್ಟಾಭಿರಾಮ ದೇವಾಲಯ ಹಾಗೂ ಕಮಲಾಪುರದಿಂದ ನಲ್ಲಾಪುರಕ್ಕೆ ಹೋಗುವ ರಸ್ತೆಯ ಬಲಭಾಗದ ಸೋಮೇಶ್ವರ ದೇವಾಲಯಗಳಲ್ಲಿ ಪ್ರಮುಖವಾಗಿ ಕಾಣಬಹುದು.


ಹಾವಾಡಿಗನ ಶಿಲ್ಪ
ಮಾಲ್ಯವಂತ ರಘುನಾಥ ದೇವಾಲಯ,
ಹಂಪಿ

ಮಾಲ್ಯವಂತ ರಘುನಾಥ ದೇವಾಲಯದ ಮುಖ-ಮಂಟಪದ ಕಂಬದಲ್ಲಿ ಹಾವಾಡಿಗನ ಪ್ರಮುಖ ಶಿಲ್ಪವೊಂದನ್ನು ಕಾಣಬಹುದು. ಈ ಶಿಲ್ಪದಲ್ಲಿ ಕುಳಿತಿರುವ ಹಾವಾಡಿಗ ತನ್ನ ಎರಡು ಕೈಗಳಿಂದ ಪುಂಗಿಯನ್ನು ಊದುತ್ತಿದ್ದಾನೆ. ಇವನ ಮುಂದಿನ ಪುಟ್ಟಿಯಿಂದ ಹಾವೊಂದು ತನ್ನ ಹೆಡೆಯನ್ನು ಎತ್ತಿ ಹಾವಾಡಿಗನ ಪುಂಗಿಯ ನಾದಕ್ಕೆ ತಲೆತೂಗುತ್ತಿರುವಂತೆ ಶಿಲ್ಪದಲ್ಲಿ ತೋರಲಾಗಿದೆ. ಈ ರೀತಿಯ ಮತ್ತೊಂದು ಶಿಲ್ಪ ಇದೇ ಮುಖಮಂಟಪದ ಇನ್ನೊಂದು ಕಂಬದಲ್ಲಿ ಕಂಡುಬರುತ್ತದೆ. ಶಿಲ್ಪದಲ್ಲಿ ಹಾವಾಡಿಗ ಪುಂಗಿ ಊದುತ್ತಿರುವ ಹಾವಭಾವಗಳನ್ನು ಅತ್ಯಂತ ನೈಜವಾಗಿ ತೋರಿಸುವಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ. ನಂತರ ಇಲ್ಲಿಯ ಮತ್ತೊಂದು ಶಿಲ್ಪದಲ್ಲಿ ಹಾವಾಡಿಗ ಪುಂಗಿಯನ್ನು ಊದುತ್ತಾ ನೋಡುವುದರಲ್ಲಿ ನಿರತನಾಗಿದ್ದಾನೆ. ಬಹುಶಃ ಇದು ಹಾವಾಡಿಗನು ಹಾವಿಗಾಗಿ ಹುಡುಕಾಟ ನಡೆಸುತ್ತಿರುವ ಶಿಲ್ಪವಾಗಿದ್ದಿರಬಹುದು.

ವಿಠಲ ದೇವಾಲಯದ ಮುಖಮಂಟಪದ ಅಧಿಷ್ಠಾನದಲ್ಲಿ ಹಾವಾಡಿಗ ಶಿಲ್ಪವಿದ್ದು ಇದು ವಿಶೇಷವಾಗಿದೆ. ಈ ಶಿಲ್ಪವು ಪೂರ್ವದ ಕಡೆಯಿಂದ ಮಂಟಪವನ್ನು ಪ್ರವೇಶಿಸಲು ಇರುವ ಮೆಟ್ಟಿಲುಗಳ ಬಲಬದಿಯಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಪುಂಗಿಯನ್ನು ಊದುತ್ತಿರುವ ಹಾವಾಡಿಗನು ತನ್ನ ಬಲಗಾಲನ್ನು ಮಡಚಿದ್ದು, ಎಡಗಾಲನ್ನು ಮುಂದಕ್ಕೆ ಚಾಚಿಕೊಂಡಿದ್ದಾನೆ. ಬಲಗೈಯಲ್ಲಿ ಪುಂಗಿ ಹಿಡಿದು ಊದುತ್ತಿದ್ದರೆ, ಎಡಗೈಯಲ್ಲಿ ಹಾವನ್ನು ಹಿಡಿದಿದ್ದಾನೆ. ಇವನ ಮುಂದೆ ಇನ್ನೊಂದು ಸರ್ಪ ಹೆಡೆಯನ್ನು ಎತ್ತಿ ಹಾವಾಡಿಗನತ್ತ ನೋಡುತ್ತಿದೆ. ಹಾಗೆಯೇ ಮತ್ತೊಂದು ಹಾವು ದೂರದಿಂದ ಇವನ ಕಡೆಗೆ ಬರುತ್ತಿರುವಂತೆ ಶಿಲ್ಪದಲ್ಲಿ ತೋರಿಸಲಾಗಿದೆ. ಹಾವಾಡಿಗನ ಮುಂಬದಿಯಲ್ಲಿನ ಹಾವಿನ ಬಳಿ ವ್ಯಕ್ತಿಯೊಬ್ಬ ಕುಳಿತಿದ್ದು, ಇವನು ಹಾವಾಡಿಗರ ಮನರಂಜನೆಯ ಆಟವನ್ನು ವೀಕ್ಷಿಸುತ್ತಿರುವ ಪ್ರೇಕ್ಷಕನಾಗಿದ್ದಿರಬಹುದೆಂದು ಊಹಿಸಬಹುದು ಹಾಗೂ ಸ್ತ್ರೀಯೊಬ್ಬಳು ಹಾವನ್ನು ಹಿಡಿದು ಢಮರನ್ನು ನುಡಿಸುತ್ತಿರುವ ವಿಶೇಷ ಶಿಲ್ಪವೊಂದು ಇದೇ ದೇವಾಲಯದಲ್ಲಿ ಕಂಡುಬರುತ್ತದೆ. ಹಾಗಾಗಿ ಈ ಶಿಲ್ಪದಲ್ಲಿನ ಸ್ತ್ರೀಯು ಹಾವಾಡಗಿತ್ತಿಯಾಗಿರಬಹುದೆಂದು ಅಭಿಪ್ರಾಯಿಸಬಹುದು.



ಒಟ್ಟಾರೆಯಾಗಿ ಈ ಮೇಲೆ ವಿವರಿಸಿದ ಹಾವಾಡಿಗರ ಶಿಲ್ಪಗಳನ್ನು ಅವಲೋಕಿಸಿದರೆ ಹಂಪಿ ಪರಿಸರದಲ್ಲಿ ಹಾವಾಡಿಗರ ಒಂದು ಜನಾಂಗವಿದ್ದು ಅವರು ಜಾತ್ರೆ, ಉತ್ಸವ ಮುಂತಾದ ಜನಸಂದಣಿಯಿಂದ ಕೂಡಿರುವ ಸಂದರ್ಭದಲ್ಲಿ ತಮ್ಮ ವೃತ್ತಿಯಾದ ಈ ಆಟವನ್ನು ಪ್ರದರ್ಶಿಸುತ್ತಾ ಜನರಿಗೆ ಮನರಂಜನೆಯನ್ನು ನೀಡುತ್ತಿದ್ದರು. ಅದರಿಂದ ಬಂದ ಆದಾಯದಿಂದ ತಮ್ಮ ಜೀವನವನ್ನು ಸಾಗಿಸುತ್ತಿದ್ದರು ಎನ್ನಬಹುದು. ಇಲ್ಲಿ ಶಿಲ್ಪಿ ಹಾವಾಡಿಗರನ್ನು ಮತ್ತು ಅವರ ಪ್ರದರ್ಶನವನ್ನು ಅತ್ಯಂತ ನೈಜವಾಗಿ ಸರಳವಾಗಿ ಶಿಲ್ಪರೂಪದಲ್ಲಿ ಕಂಡರಿಸಿದ್ದಾನೆ. ಒಂದು ಕಾಲದಲ್ಲಿ ಮನರಂಜನೆಯ ಆಟವಾಗಿದ್ದ ಹಾವಾಡಿಗರ ಆಟ ಇಂದು ಅಳಿವಿನ ಅಂಚಿನಲ್ಲಿರುವುದು ಮಾತ್ರ ಸತ್ಯ. ಏನೇ ಆದರೂ ಹಾವಾಡಿಗರ ಈ ರೀತಿಯ ಪ್ರದರ್ಶನ ಹಂಪಿ ಪರಿಸರದಲ್ಲಿ ಮನರಂಜನೆಯ ಒಂದು ಅಂಗವಾಗಿರುವುದು ಈ ಮೇಲಿನ ಶಿಲ್ಪಗಳಿಂದ ಸಾಬೀತಾಗುತ್ತದೆ.


ಇ) ಪ್ರಾಣಿಗಳ ಪಥಸಂಚಲನದ ಶಿಲ್ಪಗಳು

ಹಂಪಿ ಪರಿಸರದ ಸ್ಮಾರಕಗಳಲ್ಲಿ ವಿವಿಧ ರೀತಿಯಾಗಿ ಅಲಂಕಾರಗೊಂಡಿರುವ ಆನೆಗಳು, ಕುದುರೆಗಳು, ಒಂಟೆಗಳು, ಗೂಳಿಗಳು ಮುಂತಾದವು ಸಾಲಾಗಿ ಮುನ್ನಡೆಯುತ್ತಿರುವ ಶಿಲ್ಪಗಳನ್ನು ಇಲ್ಲಿ ಪ್ರಾಣಿಗಳ ಪಥಸಂಚಲನದ ಶಿಲ್ಪಗಳೆಂದು ಕರೆಯಲಾಗಿದೆ.

ಹಂಪಿ ಪರಿಸರದಲ್ಲಿ ಈ ರೀತಿಯ ಪಥಸಂಚಲನದ ಶಿಲ್ಪಗಳು ಪ್ರಮುಖವಾಗಿ ಮಹಾನವಮಿ ದಿಬ್ಬ, ಹಜಾರರಾಮ, ವಿರೂಪಾಕ್ಷ, ಅಚ್ಯುತರಾಯ, ವಿಠಲ, ಪಟ್ಟಾಭಿರಾಮ, ಹಳೆಯ ಶಿವ ದೇವಾಲಯ ಮತ್ತು ಹಂಪಿಯಲ್ಲಿನ ಹಲವು ಅರಮನೆ ಕಟ್ಟಡಗಳ ಅಧಿಷ್ಠಾನದಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯಲ್ಲಿ ಹಲವು ಜಾತ್ರೆ, ಉತ್ಸವಗಳು ನಡೆಯುತ್ತಿದ್ದವು. ಅವುಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ಮಹಾನವಮಿ ಉತ್ಸವವು ಪ್ರಮುಖವಾಗಿದ್ದು. ಈ ಸಮಯದಲ್ಲಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಯಲ್ಲಿ ಪ್ರಾಣಿಗಳ ಪಥಸಂಚಲನವು ಇಲ್ಲಿ ನಡೆಯುತ್ತಿತ್ತು ಎಂಬುದು ಈ ರೀತಿಯ ಪಥಸಂಚಲನ ಶಿಲ್ಪಗಳಿಂದ ಸ್ಪಷ್ಟವಾಗುತ್ತದೆ.

ಪ್ರವಾಸಿಗ ಡೋಮಿಂಗೋ ಪ್ಯಾಸನು ಕಂಡ ಮಹಾನವಮಿ ಆಚರಣೆಯ ವರ್ಣನೆಯನ್ನು ಈ ರೀತಿಯಾಗಿ ತಿಳಿಸಿದ್ದಾನೆ.[೧೬೧] ಈ ಉತ್ಸವ ಒಂಬತ್ತು ದಿನಗಳ ಕಾಲ ನಡೆಯುತ್ತದೆ. ರಾಜನು ಬಯಲು ತಾಣದಲ್ಲಿರುವ ಎರಡು ಕಟ್ಟಡಗಳ ಮಧ್ಯೆ ಇರುವ ದ್ವಾರದ ಮೂಲಕ ಅರಮನೆ ಒಳಕ್ಕೆ ಹೋಗುತ್ತಾನೆ. ವಾರಾಂಗನೆಯರು, ದೇವಾಲಯದ ಸೇವಕರು ಹಾಗೂ ಅರಮನೆಯ ನರ್ತಕಿಯರು ಬಹಳ ಹೊತ್ತಿನವರೆಗೆ ದೇವಾಲಯ ವಿಗ್ರಹದ ಮುಂದೆ ನರ್ತನಗೈಯುತ್ತ ಉಳಿಯುತ್ತಾರೆ. ಸೂರ್ಯ ಕೆಳಗಿಳಿದ ನಂತರ ಪಂಜುಗಳನ್ನು ಹೊತ್ತಿಸಲಾಗುತ್ತದೆ. ಅನೇಕ ಚಿತ್ತಾಕರ್ಷಕ ಆಟಗಳನ್ನು ಮತ್ತು ಯುಕ್ತಿಗಳನ್ನು ಆರಂಭಿಸಲಾಗುತ್ತದೆ. ಇವು ಬಹಳ ಹೊತ್ತು ನಿಲ್ಲುವುದಿಲ್ಲ. ಅವು ರಾಜನಿದ್ದಲ್ಲಿಗೆ ಬಂದು ಹೋಗಿಬಿಡುತ್ತವೆ. ನಂತರ ಸ್ತ್ರೀಯರು ಹಿಂದಿರುಗಿ ಹೋಗುತ್ತಾರೆ. ಆಮೇಲೆ ಕುದುರೆಗಳು ನಂತರ ಆನೆಗಳು ಬಂದು ಸಲಾಮು ಮಾಡಿ ಹಿಂತಿರುಗುತ್ತವೆ ಎಂಬುದಾಗಿ ವರ್ಣಿಸಿದ್ದಾನೆ.

ಈ ಮೇಲಿನ ವಿವರಣೆಯನ್ನು ಸಂಕೇತಿಸುವಂತಹ ಶಿಲ್ಪಗಳು ಹಜಾರರಾಮ ದೇವಾಲಯದ ಪ್ರಕಾರ ಗೋಡೆಯ ಹೊರಭಾಗದ ಪೂರ್ವಾಭಿಮುಖವಾಗಿರುವ ಭಿತ್ತಿಯಲ್ಲಿ ಕಂಡುಬರುತ್ತವೆ. ಈ ಭಿತ್ತಿಯಲ್ಲಿ ಕೆಳಗಿನಿಂದ ಮೊದಲನೇ ಪಟ್ಟಿಕೆಯಲ್ಲಿ ಆನೆಗಳ ಶಿಲ್ಪ, ಎರಡನೇ ಪಟ್ಟಿಕೆಯಲ್ಲಿ ಅಶ್ವಗಳ ಶಿಲ್ಪ, ಮೂರನೇ ಪಟ್ಟಿಕೆಯಲ್ಲಿ ಕಾಲ್ದಳ, ನಾಲ್ಕು ಮತ್ತು ಐದನೆಯ ಪಟ್ಟಿಕೆಯಲ್ಲಿ ಸಾಂಸ್ಕೃತಿಕ ಮೆರವಣಿಗೆ ದೃಶ್ಯಗಳಿವೆ. ಈ ಎಲ್ಲಾ ಪಟ್ಟಿಕೆಗಳಲ್ಲಿನ ಶಿಲ್ಪಗಳು ದಕ್ಷಿಣ ದಿಕ್ಕಿಗೆ ಮುಖಮಾಡಿದ್ದು, ಈ ಶಿಲ್ಪಗಳನ್ನು ಕ್ರಮವಾಗಿ ಗಮನಿಸಿದರೆ ಅವು ಚಲನೆಯಲ್ಲಿರುವಂತೆ ಕಂಡು ಬರುತ್ತದೆ. ಹಾಗೆಯೇ ಉತ್ತರ ಮತ್ತು ಪಶ್ಚಿಮ ದಿಕ್ಕಿನಲ್ಲೂ ಇದೇ ರೀತಿಯ ಶಿಲ್ಪಗಳ ಸಾಲುಗಳು ಕಂಡುಬರುತ್ತವೆ. ಆದರೆ ಉತ್ತರ ದಿಕ್ಕಿನ ಭಿತ್ತಿಯಲ್ಲಿನ ಶಿಲ್ಪಗಳಲ್ಲಿ ಒಂಟೆಯ ಸಾಲುಗಳನ್ನು ತೋರಿಸಲಾಗಿದೆ. ಪ್ರತಿಯೊಂದು ಆನೆ, ಕುದುರೆ, ಒಂಟೆ ಶಿಲ್ಪಗಳ ಮುಂದೆ ಮಾವುತರನ್ನು ತೋರಿಸಿದ್ದು, ಅವರು ಅವುಗಳನ್ನು ಮುನ್ನಡೆಸುತ್ತಿರುವಂತೆ ಕಂಡುಬರುತ್ತದೆ. ಈ ಆನೆಗಳ ಪಥಸಂಚಲನದ ಮಧ್ಯೆ ಅಲ್ಲಲ್ಲಿ ವಾದ್ಯವನ್ನು ನುಡಿಸುತ್ತಾ ಮುನ್ನಡೆಯುತ್ತಿರುವ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಎಲ್ಲಾ ಪಥಸಂಚಲನ ಶಿಲ್ಪಗಳಲ್ಲಿ ಪ್ರಾಣಿಗಳು ವಿವಿಧ ರೀತಿಯ ವಸ್ತ್ರಾಭರಣಗಳಿಂದ ಅಲಂಕೃತವಾಗಿರುವುದು ಗಮನಾರ್ಹ. ಉತ್ಸವಗಳ ಮೆರವಣಿಗೆಯ ಸಂದರ್ಭದಲ್ಲಿ ಈ ರೀತಿಯ ಪಥಸಂಚಲನದ ಪ್ರಾಣಿಗಳಿಗೆ ಹೆಚ್ಚು ಅಲಂಕಾರ ಮಾಡುವುದು ಇಂದಿಗೂ ಸಹ ನಾವು ಕಾಣಬಹುದಾಗಿದೆ. ಹಾಗಾಗಿ ಇಲ್ಲಿನ ಈ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇವು ಮಹಾನವಮಿ ಆಚರಣೆಯ ಪಥಸಂಚಲನೆಯ ಚಿತ್ರಣಗಳಂತೆ ತೋರುತ್ತವೆ. ಇಲ್ಲಿನ ಅಶ್ವದಳ ಕಾಲ್ದಳ ಮತ್ತು ಇತರೆ ಸಾಂಸ್ಕೃತಿಕ ಕಾರ್ಯಕ್ರಮದ ಸಾಲುಗಳ ಕೊನೆಯ ಭಾಗದಲ್ಲಿ ಮಂಟಪದಲ್ಲಿ ರಾಜದಂಪತಿಗಳು ಕುಳಿತು ಇವುಗಳನ್ನು ವೀಕ್ಷಿಸುತ್ತಿರುವ ಶಿಲ್ಪವು ಗಮನಾರ್ಹ. ಇಲ್ಲಿನ ಅಶ್ವದಳದ ಸಾಲಿನಲ್ಲಿ ಅರಬ್, ಪರ್ಶಿಯಾ ಮತ್ತು ದೇಶಿಯ ತಳಿಯ ಕುದುರೆ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ.



ಪಥಸಂಚಲನದ ಶಿಲ್ಪಗಳು, ಪ್ರಾಕಾರ ಗೋಡೆಯ ಹೊರಭಾಗ, ಹಜಾರರಾಮ ದೇವಾಲಯ, ಹಂಪಿ

ಇದೇ ರೀತಿಯ ಪಥಸಂಚಲನ ಶಿಲ್ಪಗಳು ಮಹಾನವಮಿ ದಿಬ್ಬ, ವಿಠಲ, ವಿರೂಪಾಕ್ಷ, ಅಚ್ಯುತ, ಮಾಲ್ಯವಂತ ರಘುನಾಥ ದೇವಾಲಯ ಮತ್ತು ಇತರೆ ಪ್ರಮುಖ ಸ್ಮಾರಕಗಳಲ್ಲಿ ಹೇರಳವಾಗಿ ಕಂಡುಬಂದರೂ, ಅವುಗಳನ್ನು ಹಲವು ಜನ ಶಿಲ್ಪಿಗಳು ಕೆತ್ತಿರಬಹುದಾದ ಕಾರಣ ಅವುಗಳ ಗಾತ್ರ, ಆಕಾರ, ಸನ್ನಿವೇಶ ಮುಂತಾದವುಗಳಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸಗಳು ಕಂಡುಬರುತ್ತವೆ. ಯಾವುದೇ ಉತ್ಸವ ಮತ್ತು ಸಮಾರಂಭಗಳಲ್ಲಿ ಸಂಗೀತ ವಾದ್ಯಗಳನ್ನು ನುಡಿಸುತ್ತಾ ಮುಂದೆ ಸಾಗುವುದು ಸಾಮಾನ್ಯ

ಇದೇ ರೀತಿಯಾಗಿ ವಿಜಯನಗರ ಕಾಲದ ಹಂಪಿಯ ಮಹಾನವಮಿ ಉತ್ಸವದಲ್ಲಿ ಆನೆ, ಒಂಟೆ ಮತ್ತು ಗೂಳಿಗಳ ಮೇಲೆ ಸಂಗೀತ ವಾದ್ಯವನ್ನಿಟ್ಟುಕೊಂಡು ನುಡಿಸುತ್ತಾ ಚಲಿಸಿರುವ ಕುರಿತು ಮಹಾನವಮಿ ದಿಬ್ಬದಲ್ಲಿನ ಈ ರೀತಿಯ ಶಿಲ್ಪಗಳಿಂದ ತಿಳಿಯಬಹುದಾಗಿದೆ. ಇಲ್ಲಿ ಆಸಕ್ತಿದಾಯಕ ವಿಷಯವೆಂದರೆ ಅಮೃತ್ ಮಹಲ್ ತಳಿಯ ಗೂಳಿಯ ಮೇಲೆ ಸಂಗೀತ ವಾದ್ಯವನ್ನು ಇಟ್ಟುಕೊಂಡು, ವಾದ್ಯವನ್ನು ಬಾರಿಸುತ್ತಾ ಮುಂದೆ ಸಾಗಿರುವುದು. ಇಂತಹ ಅಪರೂಪದ ಏಕೈಕ ಶಿಲ್ಪವೊಂದು ಮಹಾನವಮಿ ದಿಬ್ಬದ ಪಶ್ಚಿಮ ಬದಿಯ ಗ್ರಾನೈಟ್ ಶಿಲ್ಪಪಟ್ಟಿಕೆಯಲ್ಲಿ ಕಂಡುಬರುತ್ತದೆ. ಇದರಿಂದಾಗಿ ವಿಜಯನಗರ ಕಾಲದಲ್ಲಿ ಹಂಪಿಯಲ್ಲಿ ಉತ್ಸವ ಮತ್ತು ಇತರೆ ಸಮಾರಂಭಗಳ ಮೆರವಣಿಗೆಗಳಲ್ಲಿ ಆನೆ, ಒಂಟೆ, ಕುದುರೆ ಇತರೆ ಪ್ರಾಣಿಗಳು ಎಷ್ಟು ಮಹತ್ವವನ್ನು ಪಡೆದಿದ್ದವೋ ಅಷ್ಟೇ ಮಹತ್ವವನ್ನು ಗೂಳಿಯು ಪಡೆದುಕೊಂಡಿತ್ತು ಎಂಬುದಕ್ಕೆ ಈ ಶಿಲ್ಪ ಏಕೈಕ ನಿದರ್ಶನವಾಗಿದೆ.



ಗೂಳಿಯ ಮೇಲೆ ಸಂಗೀತ ವಾದ್ಯವನ್ನು ನುಡಿಸುತ್ತಾ ಸಾಗುತ್ತಿರುವ ಅಪರೂಪದ ಶಿಲ್ಪ, ಮಹಾನವಮಿ ದಿಬ್ಬ

ಪ್ರಸ್ತುತ ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ಪ್ರಮುಖ ಆಚರಣೆಯೆಂದರೆ ಧ್ವಜಾರೋಹಣೆ ಮತ್ತು ಪಥಸಂಚಲನೆ. ಸೇನೆಯ ಮೂರು ಅಂಗಗಳಾದ ನೆಲ, ಜಲ ಮತ್ತು ವಾಯು ಸೇನೆಯ ಆಯ್ದ ತುಕಡಿಗಳು ಮತ್ತು ಹೊಸದಾಗಿ ಸೇರ್ಪಡೆಗೊಂಡ ಶಸ್ತ್ರಾಸ್ತ್ರಗಳು, ಶಾಲಾ ಬಾಲಕರ ಬಾಲಕಿಯರ ಸಾಂಸ್ಕೃತಿಕ ಪರಂಪರೆಯ ಪ್ರದರ್ಶನ ಹಾಗೂ ಸ್ತಬ್ದ ಚಿತ್ರಗಳ ಮೆರವಣಿಗೆ ಪ್ರಮುಖವಾಗಿರುತ್ತವೆ. ಹಾಗೆ ವಿಜಯನಗರ ಕಾಲದ ಮಹಾನವಮಿ ಆಚರಣೆಯ ಸಂದರ್ಭದಲ್ಲಿ ಇದೇ ರೀತಿಯ ಆಚರಣೆಗಳಿದ್ದ ಕುರುಹಾಗಿ ಹಜಾರರಾಮ ದೇವಾಲಯದ ಪ್ರಕಾರ ಗೋಡೆಯ ಹೊರಭಾಗದಲ್ಲಿ ಮತ್ತು ಮಹಾನವಮಿ ದಿಬ್ಬದ ಸುತ್ತಲೂ ಇರುವ ಉಬ್ಬುಶಿಲ್ಪಗಳಲ್ಲಿ ಮೆರವಣಿಗೆಯ ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ಉಬ್ಬುಶಿಲ್ಪಗಳ ಕುರಿತು ಡಾ. ಜಗದೀಶರವರು 'ಮಹಾನವಮಿ ವೀಕ್ಷಣ ವೇದಿಕೆ ಮತ್ತು ಪಥಸಂಚಲನೆಯ ಉಬ್ಬುಶಿಲ್ಪಗಳ ಹೊಸ ಆಕರ' ಎಂಬ ವಿಷಯದ ಕುರಿತು ವಿಜಯನಗರ ಅಧ್ಯಯನ ಸಂಪುಟ ೧೩ರಲ್ಲಿ ಲೇಖನವನ್ನು ಮಂಡಿಸಿದ್ದು, ಅವರು ಸಹ ಇವುಗಳನ್ನು ಮಹಾನವಮಿ ಉತ್ಸವದಲ್ಲಿ ನಡೆಸುತ್ತಿದ್ದ ಪಥಸಂಚಲನ ಶಿಲ್ಪಗಳೆಂದು ತಿಳಿಸಿರುತ್ತಾರೆ.[೧೬೨] ಹಾಗೆಯೇ *The Ramachandra Temple at Vijayanagara*[೧೬೩] ಹಾಗೂ *Sculpture at Vijayanagara*[೧೬೪] ಎಂಬ ಗ್ರಂಥಗಳಲ್ಲಿ ಈ ಶಿಲ್ಪಗಳನ್ನು

ಸೈನ್ಯದ ಪಥಸಂಚಲನದ ಶಿಲ್ಪಗಳೆಂದು ದಾಖಲಾಗಿರುವುದು ತಿಳಿದುಬರುತ್ತದೆ. ಈ ಎಲ್ಲಾ ಪಥಸಂಚಲನ ಶಿಲ್ಪಗಳು ವಿಜಯನಗರ ಸಮ್ರಾಜ್ಯದ ಸೈನ್ಯ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತವೆ.


ಹಂಪಿ ಪರಿಸರದಲ್ಲಿ ಈ ರೀತಿಯ ಪಥಸಂಚಲನ ಶಿಲ್ಪಗಳ ಮಧ್ಯದಲ್ಲಿ ಅಲ್ಲಲ್ಲಿ ಮದವೇರಿದ ಆನೆ ವ್ಯಕ್ತಿಗಳನ್ನು ಕೊಲ್ಲುತ್ತಿರುವ ಶಿಲ್ಪಗಳು, ಪ್ರಾಣಿಗಳಿಗೆ ಪಾತ್ರೆಯಲ್ಲಿ ಆಹಾರ ಮತ್ತು ನೀರನ್ನು ನೀಡುತ್ತಿರುವ ಶಿಲ್ಪಗಳು ಹಾಗೂ ಗಜಾರೋಹಣ ಮತ್ತು ಅವರೋಹಣ ಮಾಡುತ್ತಿರುವ ಶಿಲ್ಪಗಳು ಹೀಗೆ ಕೆಲವು ಮಹತ್ವದ ಶಿಲ್ಪಗಳನ್ನು ಸಹ ಇಲ್ಲಿ ಕೆತ್ತಲಾಗಿದೆ. ಇದರಿಂದ ಪ್ರಾಣಿಗಳಿಂದಾಗುವ ತೊಂದರೆಗಳು ಮತ್ತು ಅವುಗಳ ಲಾಲನೆ ಪಾಲನೆ, ಗಜಾರೋಹಣ ಮತ್ತು ಅವರೋಹಣಗಳನ್ನು ಯಾವ ರೀತಿ ಮಾಡುತ್ತಿದ್ದರು ಎಂಬ ಮುಂತಾದ ವಿಷಯಗಳನ್ನು ತಿಳಿಸುವ ಉದ್ದೇಶದಿಂದ ಶಿಲ್ಪಿ ಈ ಶಿಲ್ಪಗಳನ್ನು ಇಲ್ಲಿ ಕೆತ್ತಿದ್ದಾನೆಂದು ಹೇಳಬಹುದು. ಇಲ್ಲಿ ಗಜಾರೋಹಣಕ್ಕೆ ಸಂಬಂಧಿಸಿದ ಕಟ್ಟಡವೊಂದು ಹಜಾರರಾಮ ದೇವಾಲಯದ ಪಶ್ಚಿಮಕ್ಕಿರುವ ಹರಿಹರನ ಅರಮನೆಯ ಪಕ್ಕದಲ್ಲಿ ಕಂಡುಬರುತ್ತದೆ. ಇದು ಹಂಪಿ ಪರಿಸರದಲ್ಲಿಯೇ ಗಜಾರೋಹಣಕ್ಕಾಗಿ ಇರುವ ಏಕೈಕ ಸ್ಮಾರಕವಾಗಿ ಉಳಿದಿರುವುದು ಗಮನಾರ್ಹವಾಗಿದೆ.



ಆನೆಗೆ ನೀರುಣಿಸುತ್ತಿರುವ ಶಿಲ್ಪ, ಮಹಾನವಮಿ ದಿಬ್ಬ



ಕುದುರೆಗೆ ಆಹಾರ ಇಟ್ಟಿರುವ ಶಿಲ್ಪ, ಹಜಾರರಾಮ ದೇವಾಲಯ, ಹಂಪಿ




ಗಜಾರೋಹಣ ಶಿಲ್ಪ, ಹಳೆಯ ಶಿವ ದೇವಾಲಯ, ಹಂಪಿ

೪.೨.೨ ಇತರೆ ಶಿಲ್ಪಗಳು

ಈ ಮೇಲೆ ವಿವರಿಸಿದ ಕಥಾನಿರೂಪಕ ಶಿಲ್ಪಗಳು ಪ್ರಮುಖವಾಗಿದ್ದು, ಇವುಗಳನ್ನು ಹೊರತುಪಡಿಸಿ ಹಂಪಿ ಪರಿಸರದಲ್ಲಿ ಇತರೆ ಹಲವು ನಿರೂಪಣಾತ್ಮಕ ಶಿಲ್ಪಗಳು ಕಂಡು ಬಂದಿವೆ. ಅಂತಹವುಗಳನ್ನು ಇಲ್ಲಿ ವಿವರಿಸಲಾಗಿದೆ.

*** ಯುದ್ಧದ ಸನ್ನಿವೇಶವನ್ನು ಸಾರುವ ಪ್ರಾಣಿಶಿಲ್ಪಗಳು**

ಪ್ರಾಚೀನ ಮತ್ತು ಇತಿಹಾಸ ಕಾಲದ ಮಾನವನ ಹೋರಾಟವೆಂದರೆ ನೆನಪಿಗೆ ಬರುವುದು ಯುದ್ಧ. ಯಾವುದೇ ಸಾಮ್ರಾಜ್ಯ ಹುಟ್ಟಿ ಬೆಳೆದು ಬೃಹತ್ ಸಾಮ್ರಾಜ್ಯವಾಗಬೇಕಾದರೆ ಯುದ್ಧಗಳು ಅನಿವಾರ್ಯ. ದಕ್ಷಿಣ ಭಾರತದಲ್ಲಿ ಬೃಹತ್ ಸಾಮ್ರಾಜ್ಯವಾಗಿ ಬೆಳೆದ ವಿಜಯನಗರ ಸಾಮ್ರಾಜ್ಯವು ಸಹ ಹಲವು ಯುದ್ಧಗಳನ್ನು ಮಾಡಿರುವುದು ಅನೇಕ ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಇಂತಹ ಸಾಹಿತ್ಯ ಕೃತಿಗಳು ತಿಳಿಸುವ ಮಾಹಿತಿಗೆ ಪುಷ್ಟಿ ನೀಡುವಂತೆ ಹಂಪಿ ಪರಿಸರದ ಸ್ಮಾರಕಗಳಲ್ಲಿ ಯುದ್ಧದ ಸನ್ನಿವೇಶವನ್ನು ತಿಳಿಸುವ ಹಲವು ಶಿಲ್ಪಗಳು ಕಂಡುಬರುತ್ತವೆ. ಅದರಲ್ಲಿ ಪ್ರಮುಖವಾಗಿ ವಿಠಲ ದೇವಾಲಯದ ಸಭಾಮಂಟಪದ ಅಧಿಷ್ಠಾನದ ಪಟ್ಟಿಕೆಯಲ್ಲಿ ಸೈನಿಕನ ಜೊತೆ ಹೋರಾಡುತ್ತಿರುವ ಆನೆಗಳ ಶಿಲ್ಪಗಳು ಯುದ್ಧದ ಸನ್ನಿವೇಶವನ್ನು ತಿಳಿಸುತ್ತವೆ. ಈ ಶಿಲ್ಪಪಟ್ಟಿಕೆಯೂ ಪೂರ್ವ ಬದಿಯ ಅಧಿಷ್ಠಾನದಲ್ಲಿದ್ದು, ಇಲ್ಲಿ ಎರಡು ಪಟ್ಟಿಕೆಗಳನ್ನು ಬಳಸಿ ಯುದ್ಧದ ಸನ್ನಿವೇಶವನ್ನು ತೋರಿಸುವಲ್ಲಿ ಶಿಲ್ಪಿ ಸಫಲನಾಗಿದ್ದಾನೆ. ಒಂದು ಪಟ್ಟಿಕೆಯಲ್ಲಿ ಎರಡು ಆನೆಗಳು ಅವುಗಳ ಮಧ್ಯದಲ್ಲಿ ಕತ್ತಿ, ಗುರಾಣಿ ಹಿಡಿದಿರುವ ಸೈನಿಕನನ್ನು ತೋರಿಸಲಾಗಿದೆ. ಇಲ್ಲಿ ಸೈನಿಕನು ಅವುಗಳ ಜೊತೆ ಹೋರಾಡಲು ಸಿದ್ಧನಾಗಿರುವಂತೆ ಗಜಗಳು ಸಹ ಬಾಲವನ್ನೆತ್ತಿ ರಭಸದಿಂದ ಅವನ ಕಡೆ ಸಾಗುತ್ತಿರುವಂತೆ ತೋರಲಾಗಿದೆ. ನಂತರ ಮುಂದಿನ ಪಟ್ಟಿಕೆಯಲ್ಲಿ ಆ ಎರಡು ಆನೆಗಳು ಸೈನಿಕನ ಮೇಲೆ ದಾಳಿ ಮಾಡಿದ್ದು, ಅವನು ಕೆಳಗೆ ಬಿದ್ದಿದ್ದಾನೆ. ಆದರೂ ಒಂದು ಆನೆ ಅವನ ಕೈಯನ್ನು, ಇನ್ನೊಂದು ಆನೆ ಅವನ ಕಾಲನ್ನು ಹಿಡಿದು ಎಳೆಯುತ್ತಿರುವಂತೆ ಕೆತ್ತಲಾಗಿದೆ. ಈ ಎರಡೂ ಆನೆಗಳು ಯುದ್ಧದ ಅವಧಿಯಲ್ಲಿ ಧರಿಸುವಂತ ವಸ್ತ್ರಾಭರಣಗಳನ್ನು ಧರಿಸಿರುವಂತೆ ತೋರಿಸಿರುವುದು ಹಾಗೂ ಇವುಗಳ ಮಧ್ಯದಲ್ಲಿ ಕತ್ತಿ, ಗುರಾಣಿ ಹಿಡಿದ ಸೈನಿಕನನ್ನು ತೋರಿಸಿದ್ದರಿಂದ ಇದೊಂದು ಗಜದಳದ ಯುದ್ಧದ ಸನ್ನಿವೇಶವೆಂದು ತಿಳಿಯಬಹುದು.



ಯುದ್ಧದ ಸನ್ನಿವೇಶವನ್ನು ತಿಳಿಸುವ ಆನೆ ಶಿಲ್ಪಗಳು, ವಿಜಯವಿಠಲ ದೇವಾಲಯ, ಹಂಪಿ

ಯುದ್ಧದ ಸನ್ನಿವೇಶವನ್ನು ಸಾರುವ ಮತ್ತೊಂದು ಪ್ರಮುಖ ಶಿಲ್ಪ ಮಹಾನವಮಿ ದಿಬ್ಬದ ಉತ್ತರ ಬದಿಯ ಮೊದಲನೇ ಹಂತದಲ್ಲಿ ಕಂಡುಬರುತ್ತದೆ. ಇಲ್ಲಿನ ಶಿಲ್ಪದಲ್ಲಿ ಅಶ್ವರೂಢನಾದ ಸೈನಿಕನು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈನಲ್ಲಿ ಖಡ್ಗವನ್ನಡಿದು ಮುಂದೆ ಖಡ್ಗ ಗುರಾಣಿ ಹಿಡಿದಿರುವ ಮತ್ತೊಬ್ಬ ಸೈನಿಕನ ಮೇಲೆ ದಾಳಿ ಮಾಡುತ್ತಿರುವಂತೆ ತೋರಲಾಗಿದೆ. ಈ ಕುದುರೆಯ ಹಿಂಭಾಗದಲ್ಲಿ ಇನ್ನೂ ಹಲವು ಕುದುರೆಗಳ ಮತ್ತು ಸೈನಿಕರ ಶಿಲ್ಪಗಳಿದ್ದು, ಬಹುಶಃ ಇವು ಅಶ್ವಪಡೆಯಾಗಿದ್ದಿರಬೇಕು. ಈ ಶಿಲ್ಪಗಳು ಗ್ರಾನೈಟ್ ಶಿಲೆಗಳಲ್ಲಿ ಕೆತ್ತಲ್ಪಟ್ಟಿದ್ದು ಅಸ್ಪಷ್ಟವಾಗಿವೆ. ಆದ್ದರಿಂದ ಇಲ್ಲಿ ಕುದುರೆ ಹಾಗೂ

ಸೈನಿಕರ ಉಡುಗೆ ತೊಡುಗೆಗಳು ಸ್ಪಷ್ಟವಾಗಿ ಗೋಚರಿಸುತ್ತಿಲ್ಲ. ಆದರೂ ಈ ಮೇಲಿನ ಅಂಶಗಳಿಂದ ಇದೊಂದು ಅಶ್ವಪಡೆಯ ಯುದ್ಧದ ಸನ್ನಿವೇಶವೆಂಬುದು ಸ್ಪಷ್ಟವಾಗುತ್ತದೆ.

ಕೃಷ್ಣದೇವರಾಯನು ಒರಿಸ್ಸಾದ ಮೇಲೆ ದಂಡೆಯಾತ್ರೆ ಮಾಡಿ ಗಜಪತಿಯ ವಿರುದ್ಧ ಜಯಗಳಿಸಿದ ಜ್ಞಾಪಕಾರ್ಥವಾಗಿ ಕಟ್ಟಿಸಿದ ಕೃಷ್ಣ ದೇವಾಲಯದ ಪ್ರವೇಶದ್ವಾರ ಗೋಪುರದಲ್ಲಿ ಯುದ್ಧದ ಸನ್ನಿವೇಶವನ್ನು ಸಾರುವ ಗಾರೆಶಿಲ್ಪಗಳನ್ನು ಪಶ್ಚಿಮಾಭಿಮುಖವಾಗಿ ತೋರಿಸಲಾಗಿದೆ. ಈ ಯುದ್ಧದಲ್ಲಿ ಸೈನಿಕ ವಿಭಾಗಗಳಾದ ಅಶ್ವದಳ, ಗಜದಳ ಮತ್ತು ಕಾಲ್ದಳಗಳು ಇದ್ದು, ಅವುಗಳ ಪ್ರಾಮುಖ್ಯತೆಯನ್ನು ತಿಳಿಯಬಹುದಾಗಿದೆ. ಈ ಯುದ್ಧದ ಸನ್ನಿವೇಶವನ್ನು ಇಲ್ಲಿ ಗಾರೆಯಲ್ಲಿ ತೋರಿಸಿದ್ದು, ಕೆಲವು ಭಾಗಗಳು ಕಾಲಾ ನಂತರದಲ್ಲಿ ಹಾಳಾಗಿರುವುದನ್ನು ಸಹ ಕಾಣಬಹುದು.

ಹಂಪಿ ಪರಿಸರದ ಇನ್ನೂ ಹಲವು ಸ್ಮಾರಕಗಳಲ್ಲಿ ಈ ರೀತಿಯ ಯುದ್ಧದ ಸನ್ನಿವೇಶವನ್ನು ತಿಳಿಸುವ ಶಿಲ್ಪಗಳಿದ್ದು ಪ್ರಮುಖವಾದವುಗಳನ್ನು ಮಾತ್ರ ಈ ಮೇಲೆ ವಿವರಿಸಲಾಗಿದೆ. ಒಟ್ಟಾರೆ ಒಂದು ಸಾಮ್ರಾಜ್ಯದ ಅಸ್ತಿತ್ವ ಅಲ್ಲಿನ ನಾಗರೀಕತೆಯ ಉಳಿವು ಆ ಸಾಮ್ರಾಜ್ಯದ ಸೇನಾಶಕ್ತಿಯನ್ನು ಅವಲಂಬಿಸಿದ್ದು, ಇಂತ ಸೇನಾಶಕ್ತಿಯಲ್ಲಿ ಅಶ್ವದಳ ಮತ್ತು ಗಜದಳದ ಪಾತ್ರ ಬಹುಮುಖ್ಯ ಮತ್ತು ಪ್ರಧಾನವೆಂಬುದು ಇಂತಹ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ.


*** ಪ್ರಾಣಿಗಳನ್ನು ಪಳಗಿಸುತ್ತಿರುವ ಶಿಲ್ಪಗಳು**

ಹಂಪಿ ಪರಿಸರದಲ್ಲಿ ಪ್ರಾಣಿಗಳನ್ನು ಪಳಗಿಸುತ್ತಿರುವ ಶಿಲ್ಪಗಳಲ್ಲಿ ಕುದುರೆ ಮತ್ತು ಆನೆಗಳನ್ನು ಪಳಗಿಸುತ್ತಿರುವ ಶಿಲ್ಪಗಳು ಪ್ರಮುಖವಾಗಿ ಕಂಡುಬರುತ್ತವೆ. ಪ್ರಾಚೀನ ಕಾಲದಿಂದಲೂ ಮಾನವ ಪ್ರಾಣಿಗಳನ್ನು ಪಳಗಿಸಿ ತನ್ನ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ನಮಗೆಲ್ಲರಿಗೂ ತಿಳಿದಿರುವ ವಿಷಯ. ಇದೇ ರೀತಿ ವಿಜಯನಗರ ಕಾಲದಲ್ಲೂ ಪ್ರಾಣಿಗಳನ್ನು ಪಳಗಿಸಿ ಮನರಂಜನೆ, ಸರಕು ಸಾಗಾಣಿಕೆ ವ್ಯವಸಾಯ, ಸೈನ್ಯ, ಸಾರಿಗೆ ಹೀಗೆ ಇನ್ನೂ ಮುಂತಾದ ಕಾರ್ಯಗಳಿಗೆ ಬಳಸಿರುವುದು ಹಲವು ಸಾಹಿತ್ಯ ಕೃತಿಗಳಿಂದ ಮತ್ತು ವಿದೇಶಿ ಬರಹಗಳಿಂದ ತಿಳಿದುಬರುತ್ತದೆ. ಇದಕ್ಕೆ ನಿದರ್ಶನಗಳೆಂಬಂತೆ ಹಂಪಿ ಪರಿಸರದ ಹಲವು ಸ್ಮಾರಕಗಳಲ್ಲಿ ಪ್ರಾಣಿಗಳನ್ನು ಪಳಗಿಸುತ್ತಿರುವ ಶಿಲ್ಪಗಳು ಕಂಡುಬರುತ್ತವೆ.

ಹಂಪಿಯ ಮಹಾನವಮಿ ದಿಬ್ಬದ ಶಿಲ್ಪಪಟ್ಟಿಕೆಗಳು ಹಾಗೂ ಹಜಾರರಾಮ ದೇವಾಲಯದ ಪ್ರಕಾರಗೋಡೆಯ ಹೊರಭಾಗದ ಭಿತ್ತಿಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಇವುಗಳನ್ನು ಬಿಟ್ಟರೆ ಉಳಿದ ಸ್ಮಾರಕಗಳ ಅಧಿಷ್ಠಾನಗಳಲ್ಲಿಯೇ ಈ ರೀತಿಯ ಶಿಲ್ಪಗಳನ್ನು ಕೆತ್ತಲಾಗಿದೆ.

ಮಾನಸೋಲ್ಲಾಸವು ಕುದುರೆ, ಆನೆ ಇತರೆ ಮುಂತಾದ ಪ್ರಾಣಿಗಳನ್ನು ಪಳಗಿಸುವ, ತರಬೇತಿ ನೀಡುವ ಹಾಗೂ ಅವುಗಳ ಆಹಾರ, ಚಿಕಿತ್ಸೆ ಮುಂತಾದ ವಿಷಯಗಳ ಕುರಿತು ವಿವರಿಸುತ್ತದೆ.[೧೬೫] ಮಹಾನವಮಿ ದಿಬ್ಬದ ಪಶ್ಚಿಮ ಬದಿಯ ಮೊದಲನೆ ಹಂತದಲ್ಲಿ ರಾಹುತ ಅಥವಾ ವ್ಯಕ್ತಿ ಉದ್ದವಾದ ಈಟಿಯಂತಹ ಆಯುಧವನ್ನಿಡಿದು ಕುದುರೆಯನ್ನು ಪಳಗಿಸುತ್ತಿರುವ ಶಿಲ್ಪವೊಂದು ಗಮನಾರ್ಹವಾಗಿದೆ.

ಈ ಶಿಲ್ಪದಲ್ಲಿ ರಾಹುತನು ಉದ್ದವಾದ ಈಟಿಯಿಂದ ಅದರ ಮೂಗಿನ ಭಾಗಕ್ಕೆ ಚುಚ್ಚಿ ಪಳಗಿಸುತ್ತಿರುವಂತೆ ಕೆತ್ತಲಾಗಿದೆ. ಇಲ್ಲಿ ಕುದುರೆ ಮುಂದಿನ ಎರಡೂ ಕಾಲುಗಳನ್ನು ಮೇಲೆತ್ತಿದ್ದು, ಲಗಾಮು ಧರಿಸಿರುವಂತೆ ಹಾಗೂ ಕುದುರೆಯ ಕೊರಳ ಭಾಗದಲ್ಲಿ ಮತ್ತು ಬಾಲದಲ್ಲಿ ಅತಿ ಹೆಚ್ಚು ರೋಮಗಳಿರುವಂತೆ ಶಿಲ್ಪಿ ತೋರಿಸಿದ್ದಾನೆ. ಹಾಗೆಯೇ ದಕ್ಷಿಣ ಬದಿಯ ಮೊದಲನೇ ಹಂತದ ಮೂರನೇ ಸಾಲಿನಲ್ಲಿ ಸಹ ರಾಹುತ ಆಯುಧದಿಂದ ಕುದುರೆಯನ್ನು ಪಳಗಿಸುತ್ತಿರುವ ಶಿಲ್ಪಗಳು ಕಂಡುಬರುತ್ತವೆ.



ಕುದುರೆಯನ್ನು ಪಳಗಿಸುತ್ತಿರುವ ಶಿಲ್ಪ, ಮಹಾನವಮಿ ದಿಬ್ಬ



ಆನೆಯನ್ನು ಪಳಗಿಸುತ್ತಿರುವ ಶಿಲ್ಪ, ಮಹಾನವಮಿ ದಿಬ್ಬ

ಈ ಮೇಲೆ ವಿವರಿಸಿದ ಶಿಲ್ಪಗಳನ್ನು ಹೋಲುವಂತ ಶಿಲ್ಪಗಳು ಹಜಾರರಾಮ ದೇವಾಲಯದ ಪ್ರಕಾರಗೋಡೆಯ ಹೊರಭಾಗದ ಭಿತ್ತಿಯಲ್ಲಿ, ವಿಠಲ ದೇವಾಲಯಗಳಲ್ಲಿ ಹಾಗೂ ಇತರೆ ಸ್ಮಾರಕಗಳ ಅಧಿಷ್ಠಾನದ ಪಟ್ಟಿಕೆಯಲ್ಲಿ ಕಂಡುಬರುತ್ತವೆ.

ಮಹಾನವಮಿ ದಿಬ್ಬದ ಪಶ್ಚಿಮ ಬದಿಯ ಒಂದು ಶಿಲ್ಪಪಟ್ಟಿಕೆಯಲ್ಲಿ ನಾಲ್ಕು ಆನೆಗಳನ್ನು ತೋರಿಸಿದ್ದು, ಅವುಗಳನ್ನು ಮಾವುತರು ಉದ್ದನೆಯ ಅಂಕುಶದಿಂದ ಸೊಂಡಿಲು ಹಾಗೂ ಮುಖದ ಭಾಗಕ್ಕೆ ಚುಚ್ಚಿ ನಿಯಂತ್ರಿಸುತ್ತಿದ್ದಾರೆ. ಆದರೆ ಇಲ್ಲಿನ ಒಂದು ಆನೆಯ ಮಾವುತನನ್ನು ಸೊಂಡಿಲಿನಿಂದ ಹೊಡೆದು ಕೆಳಗೆ ಬೀಳಿಸಿದ್ದು, ಬಲಗಾಲನ್ನು ಎತ್ತಿ ತುಳಿಯಲು ಮುಂದಾಗಿರುವಂತೆ ಕೆತ್ತಲಾಗಿದೆ. ಅಂದರೆ ಪಳಗಿಸುವ ಸಂದರ್ಭದಲ್ಲಿ ರೊಚ್ಚಿಗೆದ್ದ ಆನೆಯು ಈ ರೀತಿಯಾಗಿ ಮಾವುತನ ಮೇಲೆ ಧಾಳಿ ಮಾಡುತ್ತವೆಂಬುದು ತಿಳಿದುಬರುತ್ತದೆ. ನಂತರ ಮುಂದಿನ ಮತ್ತೊಂದು ಶಿಲ್ಪಪಟ್ಟಿಕೆಯಲ್ಲಿ ಮಾವುತನು ಬಲಗೈಯಿಂದ ಆನೆಯ ದಂತವನ್ನಿಡಿದು ಎಡಗೈನಲ್ಲಿ ಅಂಕುಶದಿಂದ ಹೊಡೆಯಲು ಮುಂದಾಗಿದ್ದು, ಆನೆ ಭಯದಿಂದ ಹಿಂದೆ ಸರಿಯುತ್ತಿರುವಂತೆ ಶಿಲ್ಪಿ ಅತಿ ನೈಜವಾಗಿ ಕೆತ್ತಿದ್ದಾನೆ. ಇದೇ ರೀತಿಯ ಹಲವು ಶಿಲ್ಪಗಳು ಇಲ್ಲಿನ ಶಿಲ್ಪಪಟ್ಟಿಕೆಯಲ್ಲಿ ಕಂಡುಬರುತ್ತದೆ. ಈ ಮೇಲೆ ವಿವರಿಸಿದ ಶಿಲ್ಪಗಳನ್ನು ಹೋಲುವ ಶಿಲ್ಪಗಳು ಹಜಾರರಾಮ ದೇವಾಲಯದ ಸುತ್ತಲಿನ ಅರಮನೆಗಳ ಅಧಿಷ್ಠಾನ, ವಿರೂಪಾಕ್ಷ, ವಿಠಲ, ಅಚ್ಯುತರಾಯ, ಪಟ್ಟಾಭಿರಾಮ ದೇವಾಲಯಗಳಲ್ಲಿ ಕಂಡುಬರುತ್ತವೆ. ಆದರೂ ಹಲವು ಜನ ಶಿಲ್ಪಿಗಳು ಈ ಶಿಲ್ಪಗಳನ್ನು ಕೆತ್ತಿರುವುದರಿಂದ ಆನೆಗಳ ಗಾತ್ರ, ಅವುಗಳನ್ನು ಪಳಗಿಸುವ ವಿಧಾನಗಳಲ್ಲಿ ಸ್ವಲ್ಪ ಮಟ್ಟಿನ ಭಿನ್ನತೆಗಳನ್ನು ಕಾಣಬಹುದು.

ಒಟ್ಟಾರೆಯಾಗಿ ವಿಜಯನಗರ ಸಾಮ್ರಾಜ್ಯದ ಸೈನ್ಯದಲ್ಲಿ ಪ್ರಮುಖ ಪಾತ್ರವಹಿಸುವ ಕುದುರೆ ಮತ್ತು ಆನೆಗಳನ್ನು ಯಾವ ರೀತಿ ಪಳಗಿಸುತ್ತಿದ್ದರು, ಪಳಗಿಸಲು ಬಳಸುವ ಸಾಧನ ಹೀಗೆ ಮುಂತಾದ ವಿಷಯಗಳು ಈ ರೀತಿಯ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ.

* **ಪ್ರಾಣಿಗಳ ವ್ಯಾಪಾರದ ಶಿಲ್ಪಗಳು**

ವಿಜಯನಗರ ಅರಸರು ವ್ಯಾಪಾರಕ್ಕೆ ಹೆಚ್ಚು ಮಹತ್ವ ನೀಡಿದ್ದರೆಂಬುದನ್ನು ತಿಳಿಸುವಲ್ಲಿ ಹಲವು ಸಾಹಿತ್ಯ ಕೃತಿಗಳು ಮತ್ತು ವಿದೇಶಿ ಬರಹಗಳು ಪ್ರಮುಖ ಆಕರ ಸಾಮಾಗ್ರಿಗಳಾಗಿವೆ. ಹಂಪಿ ಪರಿಸರದ ಸ್ಮಾರಕಗಳಲ್ಲಿನ ವ್ಯಾಪಾರ ಮಾಡುತ್ತಿರುವ ಹಲವು ಶಿಲ್ಪಗಳು ಈ ಸಾಹಿತ್ಯ ಆಕರಗಳಿಗೆ ಪುಷ್ಠಿ ನೀಡುವಂತಹ ಪ್ರಾಕ್ತನಾ ಆಕರಗಳಾಗಿ ಮಹತ್ವದ ಪಾತ್ರವಹಿಸುತ್ತವೆ. ಜೊತೆಗೆ ವಿಜಯನಗರ ಅರಸರು ರಾಜಧಾನಿಯಾದ ಹಂಪಿಯಲ್ಲಿ ಏಳು ಬಜಾರು (ಮಾರುಕಟ್ಟೆ) ಗಳನ್ನು ನಿರ್ಮಿಸಿರುವುದು. ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿಜಯನಗರ ಕಾಲದ ಹಂಪಿಯಲ್ಲಿ ವ್ಯಾಪಾರವು ಅತ್ಯುನ್ನತ ಮಟ್ಟವನ್ನು ತಲುಪಿತ್ತು ಎಂಬುದನ್ನು ಹಾಗೂ ಅರಸರು ವ್ಯಾಪಾರಕ್ಕೆ ನೀಡಿದ ಮಹತ್ವವನ್ನು ತಿಳಿಯಬಹುದು.

ಹಂಪಿಗೆ ಭೇಟಿ ನೀಡಿದ ವಿದೇಶಿ ಪ್ರವಾಸಿಗ ಡೋಮಿಂಗೋ ಪ್ಯಾಸ್‌ನು ಇಲ್ಲಿ ಮಾರುಕಟ್ಟೆಯ ಕುರಿತು ಈ ರೀತಿಯಾಗಿ ತಿಳಿಸಿದ್ದಾನೆ. ಫವಾಓ ಎಂದು ಕರೆಯಲಾಗುವ ಒಂದು ವಿಂಟೆಮ್ ಬೆಲೆಯುಳ್ಳ ನಾಣ್ಯಕ್ಕೆ ನಗರದಲ್ಲಿ ಮೂರು ಕೋಳಿ ಕೊಡುತ್ತಾರೆ. ನಗರದ ಹೊರಗೆ ಒಂದು ವಿಂಟೆಮ್‌ಗೆ ನಾಲ್ಕು ಕೋಳಿ ಕೊಡುತ್ತಾರೆ. ಈ ನಾಡಿನಲ್ಲಿ ಅನೇಕ ಕವುಜಗ ಹಕ್ಕಿಗಳಿವೆ. ಆದರೆ ಅವು ನಮ್ಮಂತಹ ನಮೂನೆಯವಲ್ಲ. ಅವು ಇಟಲಿಯ ಎಸ್ಟರ್ನ್‌ಗಳಂತಿವೆ. ಲಾವಕ್ಕಿ ಮತ್ತು ಮೊಲಗಳಿಂದಲೂ ಎಲ್ಲಾ ಜಾತಿಯ ಕಾಡುಪಕ್ಷಿಗಳಿಂದಲೂ ಮತ್ತು ಸರೋವರಗಳಲ್ಲಿರುವ ಗೀಜಗನಂತೆ ಕಾಣುವ ಇತರೆ ಹಕ್ಕಿಗಳಿಂದಲೂ ಮಾರುಕಟ್ಟೆಗಳು ತುಂಬಿರುತ್ತವೆ. ಇವೆಲ್ಲಾ ಪಕ್ಷಿಗಳು ಮತ್ತು ಬೇಟೆ ಪ್ರಾಣಿಗಳನ್ನು ಅವರು ಜೀವಂತ ಮಾರುತ್ತಾರೆ. ಮತ್ತು ಅವು ಬಹಳ ಅಗ್ಗವಿರುತ್ತವೆ.[೧೬೬] ಈ ವಿವರಣೆಯು ಹಂಪಿಯಲ್ಲಿನ ವ್ಯಾಪಾರದ ಮಾರುಕಟ್ಟೆಯ ಸನ್ನಿವೇಶವನ್ನು ತಿಳಿಸುತ್ತದೆ.

ಕೃಷ್ಣದೇವರಾಯನು ನಲವತ್ತು ಸಾವಿರ ಪರ್ದಾಓಗಳನ್ನು ಕೊಟ್ಟು ಸೈದ್ ಮರ್ಕರ್ (ಅಧಿಕಾರಿಯೊಬ್ಬ) ನನ್ನು ಕುದುರೆ ಕೊಳ್ಳಲು ಗೋವಾಕ್ಕೆ ಕಳಿಸಿದ.[೧೬೭] ಕ್ರಿ.ಶ. ೧೫೬೭ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗ ಸೀಜರ್ ಫ್ರೆಡೆರಿಕ್‌ನು ಬಿಜೆನೇಗರದ ಕುದುರೆಗಳು ಸಣ್ಣ ಈ ಕಾರಣ ಅರೇಬಿಯಾ ಕುದುರೆಗಳಿಗೆ ಒಳ್ಳೆ ಗಿರಾಕಿ. ಕುದುರೆಗಳಿಗೆ ಹೆಚ್ಚು ಬೆಲೆ ಬರುವಂತೆ ಮಾಡಲೇಬೇಕು. ಏಕೆಂದರೆ ಇವನ್ನು ಪರ್ಶಿಯಾದಿಂದ ಓರ್ಮ್ಯಾಸಿಗೆ ಸಾಗಿಸಿ ಅಲ್ಲಿಂದ ಗೋವಾಕ್ಕೆ ತಂದು ಗೋವಾದಲ್ಲಿ ಪ್ರತಿ ಕುದುರೆಗೆ ಇನ್ನೂರ ನಲವತ್ತು ಪಗೋಡಾ ಸುಂಕ ಕೊಟ್ಟು ಬಿಜನೇಗರಕ್ಕೆ ತರಬೇಕು. ಇಲ್ಲಿ ಒಂದೊಂದು ಕುದುರೆಗೆ ೩೦೦, ೪೦೦, ೫೦೦ ಕೆಲವು ವೇಳೆ ೧೦೦೦ ಡಕಟ್‌ಗಳು ಬೆಲೆ ಸಿಕ್ಕುತ್ತದೆ ಎಂದಿದ್ದಾನೆ.[೧೬೮] ಈ ವಿವರಣೆಗಳು ಹಂಪಿಯಲ್ಲಿ ಕುದುರೆ ವ್ಯಾಪಾರ ಹೆಚ್ಚು ಪ್ರಚಲಿತವಿತ್ತೆಂಬುದನ್ನು ತಿಳಿಸುತ್ತವೆ. ಇದಕ್ಕೆ ಪುಷ್ಠಿ ನೀಡುವಂತೆ ಹಂಪಿ ಪರಿಸರದ ಸ್ಮಾರಕಗಳಲ್ಲಿ ಕುದುರೆ ವ್ಯಾಪಾರ ಮಾಡುತ್ತಿರುವ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿ ಕಂಡುಬಂದಿವೆ. ಅದರಲ್ಲಿ ಪ್ರಮುಖವಾಗಿ ಹಂಪಿಯ ಮಹಾನವಮಿ ದಿಬ್ಬ, ಹಜಾರರಾಮ ದೇವಾಲಯ, ವಿರೂಪಾಕ್ಷ, ವಿಠಲ, ಮಾಲ್ಯವಂತ ರಘುನಾಥ ದೇವಾಲಯ ಹಾಗೂ ಕಟ್ಟಡಗಳ ಅಧಿಷ್ಠಾನಗಳಲ್ಲಿ ಈ ರೀತಿಯ ಶಿಲ್ಪಗಳು ಕಂಡುಬರುತ್ತವೆ.

ಮಹಾನವಮಿ ದಿಬ್ಬದ ಪೂರ್ವಬದಿಯ ಪ್ರವೇಶ ದ್ವಾರದ ಎಡಭಾಗಕ್ಕೆ ಭಿತ್ತಿಯಲ್ಲಿ ಅರಬ್ ವರ್ತಕನು ಎರಡು ಕುದುರೆಗಳನ್ನು ಹಿಡಿದು ವ್ಯಾಪಾರ ಮಾಡುತ್ತಿರುವಂತೆ ತೋರಲಾಗಿದೆ. ಇವನ

ಮುಂಭಾಗದಲ್ಲಿ ಇಬ್ಬರು ವ್ಯಕ್ತಿಗಳನ್ನು ಸಹ ತೋರಿಸಿದ್ದು ಬಹುಶಃ ಇವರು ಸ್ಥಳೀಯ ವ್ಯಾಪಾರಸ್ಥರು ಆಗಿದ್ದಿರಬಹುದು. ಅಶ್ವಗಳನ್ನಿಡಿದಿರುವ ಈ ವರ್ತಕನು ತಲೆಗೆ ವಿಶಿಷ್ಟ ಬಗೆಯ ಟೋಪಿಯನ್ನು ಧರಿಸಿದ್ದು, ಇವನ ದಪ್ಪನೆಯ ಗಡ್ಡ, ಮೀಸೆಗಳು ಆಕರ್ಷಕವಾಗಿವೆ. ಜೊತೆಗೆ ಉದ್ದನೆಯ ನಿಲುವಂಗಿಯನ್ನು ಧರಿಸಿದ್ದು ಈ ಬಗೆಯ ವಿಶಿಷ್ಟ ಉಡುಗೆ ತೊಡುಗೆಗಳು ಅವರು ಅರಬ್ಬರೆಂಬುದನ್ನು ದೃಢಪಡಿಸುತ್ತದೆ. ಈ ರೀತಿಯ ಉಡುಗೆ ತೊಡುಗೆಗಳನ್ನು ತೊಟ್ಟಿರುವ ವ್ಯಕ್ತಿಗಳು ಕುದುರೆಗಳನ್ನಿಡಿದು ಸಾಗುತ್ತಿರುವ ಇತರೆ ಶಿಲ್ಪಗಳು ಮಹಾನವಮಿ ದಿಬ್ಬದ ಪಶ್ಚಿಮ ಮತ್ತು ದಕ್ಷಿಣ ಬದಿಯ ಶಿಲ್ಪಪಟ್ಟಿಕೆಗಳಲ್ಲಿ ಹಜಾರರಾಮ ದೇವಾಲಯದ ಪ್ರವೇಶ ದ್ವಾರದಲ್ಲಿ, ವಿಠಲ ದೇವಾಲಯದ ಮುಖಮಂಟಪದ ಅಧಿಷ್ಠಾನದಲ್ಲಿ ಮತ್ತು ಹಿಂಬಾಗದ ಪ್ರವೇಶದ್ವಾರದ ಅಧಿಷ್ಠಾನದಲ್ಲಿ ಹಾಗೂ ಮಾಲ್ಯವಂತ ರಘುನಾಥ ದೇವಾಲಯದ ಕಲ್ಯಾಣಮಂಟಪದ ಅಧಿಷ್ಠಾನದಲ್ಲಿ ಕಂಡುಬರುತ್ತವೆ. ಹಾಗಾಗಿ ಈ ಶಿಲ್ಪಪಟ್ಟಿಕೆಯಲ್ಲಿನ ಎಲ್ಲ ಕುದುರೆಗಳು ಅರಬ್ ದೇಶದ ಕುದುರೆಗಳೆಂಬುದು ಸ್ಪಷ್ಟವಾಗುತ್ತದೆ.





ಅರಬ್ ಕುದುರೆಯ ವ್ಯಾಪಾರದ ಶಿಲ್ಪಗಳು, ಮಹಾನವಮಿ ದಿಬ್ಬ

ಮಹಾನವಮಿ ದಿಬ್ಬದ ದಕ್ಷಿಣ ಬದಿಯ ಮೊದಲನೆ ಹಂತದ ಮೂರನೇ ಸಾಲಿನಲ್ಲಿ ಕುದುರೆ ವ್ಯಾಪಾರಿಗಳು ರಾಜ ಪ್ರಮುಖನನ್ನು ಭೇಟಿ ಮಾಡಿರುವ ಶಿಲ್ಪವಿದೆ. ಈ ಶಿಲ್ಪ ಪಟ್ಟಿಕೆಯಲ್ಲಿ ರಾಜಪ್ರಮುಖ ಎತ್ತರದ ಪೀಠದ ಮೇಲೆ ಕುಳಿತಿದ್ದು, ಇವನ ಮುಂಭಾಗದಲ್ಲಿ ಇಬ್ಬರು ಅರಬ್ ವರ್ತಕರು ತಲೆಬಾಗಿ ಕೈಗಳನ್ನು ಕಟ್ಟಿಕೊಂಡು ಅತಿ ವಿನಮ್ರತೆಯಿಂದ ಮಾತನಾಡುತ್ತಿರುವಂತೆ ತೋರಲಾಗಿದೆ. ವರ್ತಕರ ಹಿಂಭಾಗದಲ್ಲಿ ಕುದುರೆಯ ಲಗಾಮು ಹಿಡಿದು ನಿಂತಿರುವ ಅವುಗಳ ಮೇಲೆ ಕುಳಿತಿರುವ ಅಶ್ವವರ್ತಕರ ಸಾಲು ಇದೆ. ಬಹುಶಃ ಅರಬ್ ಅಶ್ವವರ್ತಕರು ಈ ಪ್ರದೇಶದಲ್ಲಿ ವ್ಯಾಪಾರ ಮಾಡಲು ರಾಜಪ್ರಮುಖನಿಂದ ಪರವಾನಗಿ ಅಥವಾ ಅಪ್ಪಣೆ ಪಡೆಯುತ್ತಿರುವ ಸನ್ನಿವೇಶವಾಗಿದ್ದಿರಬಹುದು. ಪ್ರಸ್ತುತ ಶಿಲ್ಪದಲ್ಲಿ ರಾಜಪ್ರಮುಖನ ಹಿಂಭಾಗದಲ್ಲಿ ಒಂದು ಕುದುರೆಯನ್ನು ತೋರಲಾಗಿದೆ. ಅಬ್ದುಲ್ ರಜಾಕ್ ಮತ್ತು ನ್ಯೂನಿಜ್ ಯಾವುದೇ ವರ್ತಕನು ಇಲ್ಲಿನ ರಾಜನನ್ನು ಭೇಟಿಮಾಡಿ ವ್ಯವಹಾರ ಮಾಡಲೋಸುಗ ತನ್ನ ಸರಕಿನ ನಮೂನೆಯನ್ನು ಅರಸನಿಗೆ ಉಡುಗೊರೆಯಾಗಿ ನೀಡುತ್ತಿದ್ದ ಪದ್ಧತಿಯನ್ನು ತಿಳಿಸಿದ್ದಾರೆ.

ಅದರಂತೆ ತಾವು ತಂದ ಅತ್ಯುತ್ತಮ ಕುದುರೆಯೊಂದನ್ನು ಅವನಿಗೆ ಕಾಣಿಕೆ ನೀಡಿದ್ದಾಗಿ ತಿಳಿಸುತ್ತಾರೆ.[೧೯] ಈ ಹಿನ್ನೆಲೆಯಲ್ಲಿ ವಿವರಿಸುವುದಾದರೆ ಈ ಅಶ್ವವು ಬಹುಶಃ ಅರಸನಿಗೆ ಕಾಣಿಕೆಯಾಗಿ ನೀಡಿರುವ ಅಶ್ವವಾಗಿದ್ದಿರಬಹುದು.

ವ್ಯಾಪಾರ ದೃಷ್ಟಿಯಿಂದ ವರ್ತಕರು ರಾಜನನ್ನು ಬೇಟಿ ಮಾಡಿ ಚರ್ಚಿಸುತ್ತಿರುವ ಇತರೆ ಶಿಲ್ಪಗಳು ಇದೇ ದಿಬ್ಬದ ಪಶ್ಚಿಮ ಬದಿಯ ಮೊದಲನೇ ಹಂತದಲ್ಲಿ, ಹಜಾರರಾಮ ದೇವಾಲಯದ ಉತ್ತರದ ಪ್ರವೇಶದ್ವಾರದ ಬಳಿಯ ಪ್ರಕಾರ ಗೋಡೆಯ ಹೊರಭಿತ್ತಿಯಲ್ಲಿ, ವಿಠಲ ದೇವಾಲಯದ ಮುಖಮಂಟಪದ ಅಧಿಷ್ಠಾನದಲ್ಲಿ ಹಾಗೂ ದೇವಾಲಯದ ಹಿಂಭಾಗದ ಪ್ರವೇಶದ್ವಾರದ ಅಧಿಷ್ಠಾನದಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಹಂಪಿ ಪರಿಸರದ ಶಿಲ್ಪಗಳಲ್ಲಿ ಅರಬ್, ಪರ್ಷಿಯಾ ಮತ್ತು ದೇಶಿಯ ತಳಿಯ ಕುದುರೆಗಳನ್ನು ಕಾಣಬಹುದು. ದೇಶಿಯ ತಳಿಯ ಕುದುರೆಗಳು ಗಾತ್ರದಲ್ಲಿ ಚಿಕ್ಕವಾಗಿದ್ದು, ಓಟದ ವೇಗವು ಸಹ ಕಡಿಮೆ. ಆದರೆ ಅರಬ್ ತಳಿಯ ಕುದುರೆಗಳು ಗಾತ್ರದಲ್ಲಿ ದೊಡ್ಡದಾಗಿದ್ದು, ಇವುಗಳ ಬೆನ್ನಿನ ಭಾಗ ಮತ್ತು ಕಾಲಿನ ಗೊರಸಿನ ಮಧ್ಯಭಾಗಗಳಲ್ಲಿ ಪ್ರತ್ಯೇಕ ಮೂಳೆಗಳು ಬೆಳೆಯುವುದರಿಂದ ಮತ್ತು ಇದು ಐದು ಸೊಂಟದ ಕಶೇರು ಖಂಡವನ್ನು ಹೊಂದಿರುವುದರಿಂದ ಇವುಗಳ ಓಟದಲ್ಲಿ ವೇಗ ಹೆಚ್ಚು. ಹಾಗಾಗಿ ಯುದ್ಧದ ಸಂದರ್ಭದಲ್ಲಿ ವೇಗವಾಗಿ ಓಡುವ ಕುದುರೆಗಳು ಅವಶ್ಯವಾದ್ದರಿಂದ ದೇಶಿಯ ತಳಿಯನ್ನು ಬಿಟ್ಟು ವಿದೇಶಿ ತಳಿಗೆ ಹೆಚ್ಚು ಆದ್ಯತೆ ನೀಡಲಾಗಿತ್ತು. ಹಂಪಿ ಪರಿಸರದಲ್ಲಿನ ಅರಬ್ ದೇಶದ ಕುದುರೆಗಳು ಈಕ್ವಿಡೆ (*Equidae*) ಕುಟುಂಬಕ್ಕೆ ಸೇರಿದ್ದು ಈಕ್ವಲಸ್ ಕೆಬಲಸ್ (*Equelus cabalus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೨೦]

ಈ ಮೇಲೆ ವಿವರಿಸಿದ ಶಿಲ್ಪಗಳಂತೆಯೇ ಆನೆಯ ವ್ಯಾಪಾರ ಶಿಲ್ಪಗಳು ಸಹ ಹಂಪಿ ಪರಿಸರದ ಸ್ಮಾರಕಗಳಲ್ಲಿ ಕಂಡುಬರುತ್ತವೆ. ಅಂದರೆ ಆನೆಗಳನ್ನು ಹಿಡಿದು ಸಾಗಿಸುತ್ತಿರುವ, ಅವುಗಳ ಮೇಲೆ ಕುಳಿತಿರುವ ಹಾಗೂ ವರ್ತಕರು ರಾಜಪ್ರಮುಖರ ಜೊತೆ ಚರ್ಚಿಸಿ ಅಪ್ಪಣೆ ಪಡೆಯುತ್ತಿರುವ ಸನ್ನಿವೇಶದ ಶಿಲ್ಪಗಳು ಪ್ರಮುಖವಾಗಿವೆ.

ಮಹಾನವಮಿ ದಿಬ್ಬದ ದಕ್ಷಿಣ ಬದಿಯಿಂದ ಹತ್ತಲು ಇರುವ ಮೆಟ್ಟಿಲುಗಳಿಗೆ ಹೊಂದಿಕೊಂಡಂತೆ ಪೂರ್ವಾಭಿಮುಖವಾಗಿರುವ ಪಟ್ಟಿಕೆಯೊಂದರಲ್ಲಿ ಆನೆಗಳ ವರ್ತಕರು ರಾಜಪ್ರಮುಖರೊಡನೆ ಮಾತನಾಡುತ್ತಿರುವ ವಿಶೇಷ ಶಿಲ್ಪವೊಂದು ಕಂಡುಬರುತ್ತದೆ. ಇಲ್ಲಿ ರಾಜಪ್ರಮುಖನು ಪೀಠದ ಮೇಲೆ ಕುಳಿತು ಮುಂಭಾಗದ ಇಬ್ಬರು ವರ್ತಕರೊಡನೆ ಚರ್ಚಿಸುತ್ತಿದ್ದಾನೆ. ವರ್ತಕರ ಹಿಂಭಾಗದಲ್ಲಿ ಆನೆಗಳ ಸಾಲಿದ್ದು ಅವುಗಳು ಮರದಲ್ಲಿನ ಎಲೆಗಳನ್ನು ತಿನ್ನುತ್ತಿರುವಂತೆ ತೋರಲಾಗಿದೆ. ರಾಜನ ಹಿಂಬದಿಯಲ್ಲಿ ಇಬ್ಬರು ವ್ಯಕ್ತಿಗಳನ್ನು ತೋರಿಸಿದ್ದು ಅವರು ರಾಜಪ್ರಮುಖನ ಪರಿಚಾರಕರಾಗಿದ್ದಿರಬಹುದು. ಈ ಮೇಲಿನ ಶಿಲ್ಪವನ್ನು ಹೋಲುವ ಮತ್ತೆರಡು ಶಿಲ್ಪಗಳು ವಿಠಲ ದೇವಾಲಯದ ಉತ್ತರ ದಿಕ್ಕಿನ ಪ್ರಕಾರ ಮಂಟಪದ ಅಧಿಷ್ಠಾನದಲ್ಲಿ ಕಂಡುಬರುತ್ತವೆ. ಇಲ್ಲಿನ ಒಂದು ಶಿಲ್ಪದಲ್ಲಿ ರಾಜ ಎತ್ತರದ ಪೀಠದ ಮೇಲೆ ಕುಳಿತಿದ್ದು, ಮುಂದೆ ಕೈಕಟ್ಟಿ ಅತಿ ವಿನಮ್ರತೆಯಿಂದ ನಿಂತಿರುವ ವರ್ತಕನೊಡನೆ ಸಂಭಾಷಣೆಯಲ್ಲಿ ತೊಡಗಿರುವಂತೆ ತೋರಲಾಗಿದೆ. ವರ್ತಕನ ಹಿಂಭಾಗದಲ್ಲಿ ಅಲಂಕೃತಗೊಂಡಿರುವ ಹಲವು ಆನೆಗಳನ್ನು ಕೆತ್ತಲಾಗಿದೆ.

ರಾಜನ ಹಿಂಭಾಗದಲ್ಲಿ ವ್ಯಕ್ತಿಯನ್ನು ತೋರಿಸಿದ್ದು, ಇವನು ಕೈಯಲ್ಲಿ ತಲೆಗೆ ಧರಿಸುವ ಕವಚವನ್ನು ಹಿಡಿದಿದ್ದು, ಸೊಂಟದಲ್ಲಿ ಖಡ್ಗವನ್ನು ಧರಿಸಿದ್ದಾನೆ. ಇವನ ಉಡುಗೆ ತೊಡುಗೆಗಳು ಆಕರ್ಷಕವಾಗಿದ್ದು ಬಹುಶಃ ಇವನು ಗಜಪಡೆಯ ಮುಖ್ಯಸ್ಥನಾಗಿದ್ದಿರಬಹುದು. ಇದೇ ರೀತಿಯ ಮತ್ತೊಂದು ಶಿಲ್ಪ ಪ್ರಸ್ತುತ ವಿವರಿಸಿದ ಶಿಲ್ಪದ ಪಕ್ಕದಲ್ಲಿಯೇ ಕಂಡುಬರುತ್ತದೆ.



ಆನೆ ವ್ಯಾಪಾರದ ಶಿಲ್ಪ, ಮಹಾನವಮಿ ದಿಬ್ಬ



ಆನೆ ವ್ಯಾಪಾರದ ಶಿಲ್ಪ, ವಿಜಯವಿಠಲ ದೇವಾಲಯ

ಆನೆಗಳ ವ್ಯಾಪಾರದ ಕುರಿತು ಅಬ್ದುಲ್ ರಜಾಕ್ ಆನೆಯ ವ್ಯಾಪಾರದಲ್ಲಿ ನಿರತರಾದ ವರ್ತಕರು ಸೆರೆನ್‌ದಿಬ್ (ಸಿಂಹಳ)ಗೆ ಅಂದರೆ ಇವತ್ತಿನ ಶ್ರೀಲಂಕಾಗೆ ಹೋಗಿ ಅಲ್ಲಿ ಆನೆಗಳನ್ನು ಕೊಂಡು ನಾನಾ ದೇಶಗಳಿಗೆ ಮಾರುತ್ತಾರೆ. ಆನೆಗೆ ಗಜಕ್ಕೆ ಇಷ್ಟು ಎಂದು ಬೆಲೆ ಕಟ್ಟುತ್ತಾರೆ ಎಂಬುದಾಗಿ ತಿಳಿಸುತ್ತಾನೆ.[೧೬೧] ಈ ಹಿನ್ನೆಲೆಯಲ್ಲಿ ಮೇಲೆ ವಿವರಿಸಿದ ಶಿಲ್ಪಪಟ್ಟಿಕೆಗಳಲ್ಲಿನ ಆನೆಗಳು ಶ್ರೀಲಂಕಾದ ಆನೆಗಳೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಆನೆಯ ವ್ಯಾಪಾರದ ಶಿಲ್ಪಗಳಲ್ಲಿನ ವರ್ತಕರು ಸಹ ಬಹುಶಃ ಶ್ರೀಲಂಕಾದವರಾಗಿರಬಹುದು. ಹಾಗೆಯೇ ದುಆರ್ತೆ ಬಾರ್ಬೊಸಾ 'ರಾಜನ ಬಳಿ ಒಂಬೈನೂರು ಆನೆಗಳು ಇವೆ. ಇವನ್ನೆಲ್ಲಾ ದುಡ್ಡುಕೊಟ್ಟು ಕೊಂಡುಕೊಂಡಿದ್ದಾನೆ. ಒಂದೊಂದು ಆನೆಯ ಬೆಲೆ ೧೫೦೦ ರಿಂದ ೨೦೦೦ ಡಕಟ್. ಏಕೆಂದರೆ ಈ ಆನೆಗಳು ಬಹಳ ಭಾರಿಯಾಗಿದ್ದು, ಯುದ್ಧಕ್ಕೆ ಬೇಕಾದವುಗಳು ಮತ್ತು ರಾಜನ ದರ್ಬಾರ್ ಕಾಲದಲ್ಲಿ(ಸಮಯದಲ್ಲಿ) ಉಪಯೋಗಿಸತಕ್ಕಂಥವುಗಳು ಎಂದಿದ್ದಾನೆ.[೧೬೨]

ಈ ರೀತಿಯ ಸಾಹಿತ್ಯ ಆಕರಗಳು ಮತ್ತು ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿಜಯನಗರ ಕಾಲದಲ್ಲಿ ಕುದುರೆಗಳ ವ್ಯಾಪಾರದಂತೆಯೇ ಆನೆಗಳ ವ್ಯಾಪಾರವು ಸಹ ಹೆಚ್ಚು ಮಹತ್ವ ಪಡೆದಿತ್ತೆಂಬುದು ತಿಳಿಯುತ್ತದೆ. ಜೊತೆಗೆ ವಿಜಯನಗರದ ಅರಸರಿಗೆ ತಮ್ಮ ರಾಜ್ಯದಲ್ಲಿನ ಆನೆಗಳು ಸಾಕಾಗದೆ ಇವುಗಳ ಜೊತೆಗೆ ಇನ್ನೂ ಹೆಚ್ಚಿನ ಆನೆಗಳನ್ನು ಸೆರೆನ್‌ದಿಬ್ (ಶ್ರೀಲಂಕಾ) ನಿಂದ ತರಿಸಿಕೊಳ್ಳುತ್ತಿದ್ದರು. ಇವುಗಳ ಲಾಲನೆ ಪಾಲನೆಗೆ ಅರಸರು ತಮ್ಮ ಆದಾಯವನ್ನು ಮೀಸಲಿಟ್ಟಿರುವುದು ಗಮನಾರ್ಹ ವಿಷಯವಾಗಿದೆ. ಈ ಎಲ್ಲಾ ಅಂಶಗಳನ್ನು ಕೂಲಂಕಶವಾಗಿ ಪರಿಶೀಲಿಸಿದರೆ ವಿಜಯನಗರದ ರಾಜರು ಗಜಪಡೆಗೆ ಎಷ್ಟು ಮಹತ್ವ ನೀಡಿದ್ದರು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಆನೆಗಳಲ್ಲಿ ಪ್ರಮುಖವಾಗಿ ಆಫ್ರಿಕಾ ಆನೆ ಮತ್ತು ಏಷ್ಯಾ ಆನೆಗಳನ್ನು ಕಾಣಬಹುದು. ಹಂಪಿ ಪರಿಸರದ ಶಿಲ್ಪಗಳಲ್ಲಿ ಕಂಡುಬಂದಿರುವ ಬಹುತೇಕ ಆನೆಗಳು ಏಷ್ಯಾದ ಆನೆಗಳಾಗಿದ್ದು, ಎಲಿಫಾನ್‌ಟಿಡೆ (*Elephantidae*) ಕುಟುಂಬಕ್ಕೆ ಸೇರಿದವುಗಳಾಗಿವೆ. ಎಲಿಫಾಸ್ ಮ್ಯಾಕ್ಸಿಮಸ್ (*Elephas maximus*) ಎಂಬುದು ಇವುಗಳ ವೈಜ್ಞಾನಿಕ ಹೆಸರಾಗಿದೆ.[೧೬೩]

*** ಅಶ್ವ ಪರೀಕ್ಷೆಯ ಶಿಲ್ಪಗಳು**

ಸಾಮಾನ್ಯವಾಗಿ ಪ್ರಾಣಿಗಳನ್ನು ಕೊಂಡುಕೊಳ್ಳಬೇಕಾದರೆ ಅವುಗಳಲ್ಲಿನ ಸುಳಿಗಳು, ಮಚ್ಚೆಗಳು, ಹಲ್ಲುಗಳು ಹಾಗೂ ಬಾಲವನ್ನು ನೋಡಿ ಪರೀಕ್ಷಿಸುವುದು ಪ್ರಾಚೀನ ಕಾಲದಿಂದ ಇಂದಿನವರೆಗೂ ರೂಢಿಯಲ್ಲಿರುವ ಒಂದು ಪದ್ಧತಿ. ಇದೇ ರೀತಿಯಾಗಿ ವಿಜಯನಗರ ಕಾಲದಲ್ಲೂ ಸಹ ಪ್ರಾಣಿಗಳನ್ನು ಪರೀಕ್ಷಿಸಿ ಕೊಂಡುಕೊಳ್ಳುತ್ತಿದ್ದರು ಎಂಬುದು ಹಂಪಿ ಪರಿಸರದಲ್ಲಿ ಕಂಡುಬಂದಿರುವ ಈ ರೀತಿಯ ಶಿಲ್ಪಗಳಿಂದ ದೃಢಪಡುತ್ತದೆ.

ಉತ್ತಮ ಕುದುರೆಯ ಲಕ್ಷಣಗಳನ್ನು ಮತ್ತು ಅವುಗಳನ್ನು ನಿರ್ಧರಿಸುವ ಎಂಟು ಅಂಶಗಳನ್ನು ಹಾಗೂ ಅವುಗಳನ್ನು ಯಾವ ರೀತಿ ಪರೀಕ್ಷಿಸಬೇಕೆಂಬ ಮುಂತಾದ ವಿಷಯಗಳನ್ನು ಸೋಮೇಶ್ವರ ವಿರಚಿತ ಮಾನಸೋಲ್ಲಾಸ ಕೃತಿಯು ತಿಳಿಸುತ್ತದೆ.[೧೬೪] ಉತ್ತಮ ಲಕ್ಷಣಗಳನ್ನು ಹೊಂದಿರುವ ಕುದುರೆಗಳು ಅರಸನ ಸೈನ್ಯದಲ್ಲಿದ್ದರೆ ಅವು ಅರಸನಿಗೆ ಶುಭವನ್ನು ಕೊಡುತ್ತವೆಂದು ಅಭಿನವಚಂದ್ರನು ತನ್ನ ಕೃತಿಯಾದ ಅಶ್ವಶಾಸ್ತ್ರದಲ್ಲಿ ವಿವರಿಸಿದ್ದಾನೆ. ಅಭಿನವಚಂದ್ರನು ಕುದುರೆಯ ಆಯಸ್ಸನ್ನು ನಿರ್ಣಯಿಸಲು ಬಳಕೆಯಲ್ಲಿದ್ದ ವಿಧಾನಗಳ ಕುರಿತು ತನ್ನ ಕೃತಿಯಲ್ಲಿ ಈ ರೀತಿ ವಿವರಿಸಿದ್ದಾನೆ.[೧೬೫]

"ಎರಡುಂ ತೆಱದಿಂದಾಯುವ

ನೆರೆಯೆ ಪರಿಕಿಸುವುದು ಬಾಹ್ಯಮಾಭ್ಯಂತರಮೆಂ

ಬೆರಡಹೂಳಂ ತನುವಿಂ ಬಾಹಿರಮಂ

ದಶನಂಗಳಿಂದ ಮಾಭ್ಯಂತರಮರ" ಎಂದು ಉಲ್ಲೇಖಿಸುತ್ತಾನೆ.


ಅಂದರೆ ಅಶ್ವಗಳನ್ನು ಪರೀಕ್ಷಿಸಲು ಬಾಹ್ಯ ಮತ್ತು ಅಭ್ಯಂತರ ಎಂಬ ಎರಡು ವಿಧಾನಗಳಿವೆ. ಬಾಹ್ಯ ಎಂದರೆ ಕುದುರೆಯ ದೇಹದ ಮೇಲಿನ ಲಕ್ಷಣಗಳನ್ನು ಪರೀಕ್ಷಿಸುವುದು. ಅಭ್ಯಂತರ ಎಂದರೆ ಕುದುರೆಯ ಬಾಯಿಯೊಳಗಿನ ಹಲ್ಲುಗಳನ್ನು ಗಮನಿಸಿ ಅದರ ವಯಸ್ಸು ಅಥವಾ ಆಯಸ್ಸು ನಿರ್ಣಯ ಮಾಡುವುದು. ಈ ಮೇಲಿನ ಕೃತಿಗಳು ವಿವರಿಸಿದ ವಿವರಣೆಗೆ ಸಾಮ್ಯತೆಯನ್ನು ಹೊಂದಿರುವ ಶಿಲ್ಪಗಳು ಹಂಪಿಯ ವಿಜಯವಿಠಲ ದೇವಾಲಯದ ಮುಖಮಂಟಪದ ಅಧಿಷ್ಠಾನದಲ್ಲಿ ಅತ್ಯಂತ ಕೆಳಗಿನ ಪಟ್ಟಿಕೆಯಲ್ಲಿ ಹಾಗೂ ಮಾಲ್ಯವಂತ ರಘುನಾಥ ದೇವಾಲಯದ ಕಲ್ಯಾಣ ಮಂಟಪದ ಅಧಿಷ್ಠಾನದಲ್ಲಿ ಕಂಡುಬರುತ್ತವೆ. ಅಶ್ವಗಳನ್ನು ಪರೀಕ್ಷೆ ಮಾಡುತ್ತಿರುವ ಮೂರು ಶಿಲ್ಪಗಳು ಇಲ್ಲಿ ಕಂಡುಬಂದಿದ್ದು, ಅದರಲ್ಲಿ ಒಂದು ಮುಖಮಂಟಪದ ದಕ್ಷಿಣ ಬದಿಯ ಅಧಿಷ್ಠಾನದಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಅಶ್ವದ ಲಗಾಮನ್ನು ಹಿಡಿದ ವ್ಯಕ್ತಿಯೊಬ್ಬ ಅಶ್ವದ ಮುಂದೆ ನಿಂತಿದ್ದು, ಅಶ್ವವು ಬಾಯಿಯನ್ನು ತೆರೆದಿದ್ದು ಈ ವ್ಯಕ್ತಿ ಕುದುರೆಯ ಹಲ್ಲುಗಳನ್ನು ಪರೀಕ್ಷಿಸುತ್ತಿರುವಂತೆ ಕೆತ್ತಲಾಗಿದೆ. ಇದರ ಹಿಂಬದಿಯಲ್ಲಿ ನಿಂತಿರುವ ವ್ಯಕ್ತಿಯು ಸಹ ತನ್ನ ಬಲಗೈನಿಂದ ಅದರ ಬಾಲವನ್ನಿಡಿದು ಪರೀಕ್ಷಿಸುತ್ತಿದ್ದು, ಎಡಗೈನಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ಈ ಸಂದರ್ಭದಲ್ಲಿ ಅಶ್ವವು ತನ್ನ ಮುಂಬದಿಯ ಎರಡು ಕಾಲುಗಳನ್ನು ಮೇಲೆತ್ತಿ ಜಿಗಿಯುತ್ತಿರುವಂತೆ ಕೆತ್ತಲಾಗಿದೆ. ಪ್ರಸ್ತುತ ಶಿಲ್ಪದಲ್ಲಿನ ವ್ಯಕ್ತಿಗಳು ಧರಿಸಿರುವ ಉಡುಗೆ ತೊಡುಗೆಗಳಿಂದ ಮತ್ತು ಅವರು ಹಿಡಿದಿರುವ ಖಡ್ಗಗಳ ಆಧಾರದಿಂದ ಇವರಿಬ್ಬರು ದೇಶಿಯ ಸೈನಿಕರೆಂಬುದು ಸ್ಪಷ್ಟವಾಗುತ್ತದೆ.



ಅರೇಬಿಯನ್ ಕುದುರೆ
ಗಣ : ಪೆರಿಸೋಡಾಕ್ಟೈಲ
ಕುಟುಂಬ : ಈಕ್ವಿಡೆ



ಅಶ್ವಪರೀಕ್ಷೆಯ ಶಿಲ್ಪ, ದಕ್ಷಿಣದ ಅಧಿಷ್ಠಾನ, ವಿಜಯವಿಠಲ ದೇವಾಲಯ



ಅಶ್ವಪರೀಕ್ಷೆಯ ಶಿಲ್ಪಗಳು, ಉತ್ತರದ ಅಧಿಷ್ಠಾನ, ವಿಜಯವಿಠಲ ದೇವಾಲಯ, ಹಂಪಿ

ಇದೇ ರೀತಿಯಾಗಿ ಕುದುರೆಯನ್ನು ಪರೀಕ್ಷೆ ಮಾಡುತ್ತಿರುವ ಇನ್ನೊಂದು ಶಿಲ್ಪ ಮುಖಮಂಟಪದ ಉತ್ತರ ಬದಿಯ ಅಧಿಷ್ಠಾನದಲ್ಲಿ ಕಂಡುಬರುತ್ತದೆ. ಇಲ್ಲಿಯೂ ಸಹ ಒಬ್ಬ ವ್ಯಕ್ತಿ ಕುದುರೆಯ ಲಗಾಮನ್ನು ಹಿಡಿದು ಸಾಗುತ್ತಿದ್ದಾನೆ. ಕುದುರೆಯ ಹಿಂಬದಿಯಲ್ಲಿನ ಮತ್ತೊಬ್ಬ ವ್ಯಕ್ತಿ ತನ್ನ ಬಲಗೈಯಿಂದ ಅದರ ಬಾಲವನ್ನು ಪರೀಕ್ಷಿಸುತ್ತಿದ್ದಾನೆ. ಎಡಗೈನಲ್ಲಿ ಮತ್ತೊಂದು ಕುದುರೆಯ ಲಗಾಮನ್ನು ಹಿಡಿದಿದ್ದಾನೆ. ಪ್ರಸ್ತುತ ಶಿಲ್ಪದಲ್ಲಿನ ವ್ಯಕ್ತಿಗಳು ಧರಿಸಿರುವ ಉಡುಗೆ ತೊಡುಗೆಗಳ ಆಧಾರದ ಮೇಲೆ ಇವರು ವಿದೇಶಿಯರು ಎಂಬುದು ಸ್ಪಷ್ಟವಾಗುತ್ತದೆ. ಇವರು ಧರಿಸಿರುವ ಉದ್ದನೆಯ ತೋಳುಗಳನ್ನು, ಮೇಲುಡಿಗೆ ಕೆಳ ಉಡುಗೆಯಾಗಿ ಪ್ಯಾಂಟನ್ನು ಹಾಗೂ ತಲೆಗೆ ಧರಿಸಿರುವ ಶಿರೋಭೂಷಣಗಳು ಮುಂತಾದವು ಇವರು ಪೋರ್ಚುಗೀಸರೆಂಬುದನ್ನು ದೃಢಪಡಿಸುತ್ತವೆ. ಇದೇ ರೀತಿಯ ಉಡುಗೆಗಳನ್ನು ಧರಿಸಿರುವ ಪೋರ್ಚುಗೀಸರ ಅನೇಕ ಶಿಲ್ಪಗಳು ಹಂಪಿ ಪರಿಸರದಲ್ಲಿವೆ ಎಂಬುದಾಗಿ *"Resent Advances in Vijayanagara* Studies" ಎಂಬ ಕೃತಿಯಲ್ಲಿ ಉಲ್ಲೇಖಿತವಾಗಿದೆ.[೧೭೬] ಹಾಗಾಗಿ ಪ್ರಸ್ತುತ ಮುಖಮಂಟಪದ ಅಧಿಷ್ಠಾನದಲ್ಲಿನ ಈ ರೀತಿಯ ಉಡುಗೆಗಳನ್ನು ಧರಿಸಿರುವ ವ್ಯಕ್ತಿಗಳು ಪೋರ್ಚುಗೀಸರೆಂಬುದು ಸ್ಪಷ್ಟವಾಗುತ್ತದೆ.

ಇದೇ ರೀತಿಯ ಮತ್ತೊಂದು ಶಿಲ್ಪ ಇದೇ ಮುಖಮಂಟಪದ ಪೂರ್ವಬದಿಯ ಅಧಿಷ್ಠಾನದಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಪೋರ್ಚುಗೀಸ್ ಕುದುರೆ ವ್ಯಾಪಾರಿಯೊಬ್ಬ ಕುದುರೆಯ ಮೇಲೆ ಕುಳಿತು ಅದರ ಲಗಾಮನ್ನು ಹಿಡಿದುಕೊಂಡಿದ್ದಾನೆ. ಅಶ್ವದ ಮುಂದೆ ನಿಂತಿರುವ ವ್ಯಕ್ತಿಯು ಅದರ ಮುಖವಾಡ

ಮತ್ತು ಲಗಾಮನ್ನು ಹಿಡಿದು ಅದರ ಹಲ್ಲುಗಳನ್ನು ಪರೀಕ್ಷಿಸುತ್ತಿದ್ದಾನೆ. ಇದನ್ನು ಅತ್ಯಂತ ಸ್ಪಷ್ಟವಾಗಿ ಕಂಡರಿಸಿದ್ದು, ವ್ಯಕ್ತಿಯು ಲಗಾಮನ್ನು ಬಿಗಿಯಾಗಿ ಹಿಡಿದರುವುದರಿಂದ ಅಶ್ವವು ತನ್ನ ಮುಂಗಾಲುಗಳನ್ನು ಮೇಲೆತ್ತಿ ಜಿಗಿಯುತ್ತಿರುವಂತೆ ತೋರಲಾಗಿದೆ. ಮಾಲ್ಯವಂತ ರಘುನಾಥ ದೇವಾಲಯದ ಕಲ್ಯಾಣಮಂಟಪದ ಅಧಿಷ್ಠಾನದಲ್ಲಿ ಈ ಮೇಲೆ ವಿವರಿಸಿದ ಶಿಲ್ಪವನ್ನು ಹೋಲುವ ಮತ್ತೊಂದು ಶಿಲ್ಪ ಕಂಡುಬರುತ್ತದೆ. ಈ ರೀತಿಯಾಗಿ ಕುದುರೆಗಳನ್ನು ಕೊಂಡುಕೊಳ್ಳುವಾಗ ಪರೀಕ್ಷಿಸುವ ಇತರೆ ವಿಧಾನಗಳನ್ನು ವ್ಯಕ್ತಪಡಿಸುವ ಶಿಲ್ಪಗಳು ಅಂದರೆ ರಾಹುತನ ಸೂಚನೆಗೆ ತಕ್ಕಂತೆ ಕಾಲನ್ನು ಎತ್ತುವ, ಜಿಗಿಯುವ ಕುದುರೆಯ ಶಿಲ್ಪಗಳು ಸಹ ಇದೇ ಅಧಿಷ್ಠಾನದಲ್ಲಿ ಕಂಡುಬರುತ್ತವೆ. ಹಾಗಾಗಿ ಇವು ಸಹ ಕುದುರೆಯ ಲಕ್ಷಣಗಳನ್ನು ಅಥವಾ ಅದರ ಶಕ್ತಿಸಾಮರ್ಥ್ಯವನ್ನು ಅಳೆಯುವ ದೃಷ್ಟಿಯಿಂದ ಈ ರೀತಿಯಾಗಿ ಮಾಡುತ್ತಿದ್ದಿರಬಹುದೆಂದು ಹಾಗೂ ಈ ಶಿಲ್ಪಗಳು ಸಹ ಬಹುಶಃ ಕುದುರೆಗಳನ್ನು ಪರೀಕ್ಷಿಸುವ ವಿಧಾನಗಳ ಶಿಲ್ಪಗಳಾಗಿರಬಹುದೆಂದು ಊಹಿಸಬಹುದು.

ಎಸ್. ನಾಗರಾಜಪ್ಪನವರು ವಿಠಲ ದೇವಾಲಯದ ಅಶ್ವ ಪರೀಕ್ಷೆಯ ಶಿಲ್ಪಗಳ ಕುರಿತು ಉಲ್ಲೇಖಿಸಿದ್ದಾರೆ. ಇದರಲ್ಲಿ ಅವರು ವಿಠಲ ದೇವಾಲಯದ ಮುಖ ಮಂಟಪದ ಅಧಿಷ್ಠಾನದಲ್ಲಿ ಅಶ್ವವನ್ನು ಪರೀಕ್ಷಿಸುತ್ತಿರುವ ಎರಡು ಶಿಲ್ಪಗಳು ಮಾತ್ರ ಕಂಡುಬಂದಿವೆ ಎಂದು ದಾಖಲಿಸಿದ್ದಾರೆ.[೧೭೭] ಆದರೆ ಪ್ರಸ್ತುತ ಇಲ್ಲಿ ಈ ರೀತಿಯ ಮೂರು ಶಿಲ್ಪಗಳು ಕಂಡುಬಂದಿದ್ದು ಗಮನಾರ್ಹ. ಇಲ್ಲಿನ ಶಿಲ್ಪಗಳಲ್ಲಿ ಪರೀಕ್ಷೆಗೆ ಒಳಪಟ್ಟಿರುವ ಬಹುತೇಕ ಕುದುರೆಗಳು ಅರಬ್ ಕುದುರೆಗಳೆಂದು ಅವುಗಳ ದೇಹ ಲಕ್ಷಣಗಳಿಂದ ಮತ್ತು ವಿದೇಶಿಗರು ಧರಿಸಿರುವ ಉಡುಗೆಗಳಿಂದ ತಿಳಿಯಬಹುದು.

ಒಟ್ಟಾರೆಯಾಗಿ ಉತ್ತಮ ಗುಣಮಟ್ಟದ ಕುದುರೆಗಳನ್ನು ಕೊಂಡುಕೊಳ್ಳಬೇಕಾದರೆ ಅವುಗಳ ಗುಣಲಕ್ಷಣಗಳನ್ನು ಪರೀಕ್ಷಿಸುವುದು ಹಿಂದಿನಿಂದ ಪ್ರಚಲಿತದಲ್ಲಿರುವ ಒಂದು ಪದ್ಧತಿ. ಈ ಪದ್ಧತಿ ಮುಂದುವರೆದು ವಿಜಯನಗರ ಕಾಲದಲ್ಲೂ ಅನುಸರಿಸುತ್ತಿದ್ದರೆಂಬ ಮಹತ್ವದ ಅಂಶ ಇಲ್ಲಿ ಕಂಡುಬಂದಿರುವ ಶಿಲ್ಪಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರದ ಅರಸರು ತಮ್ಮ ಸೈನ್ಯಕ್ಕೆ ಬೇಕಾದ ಅಶ್ವಗಳನ್ನು ಬೇರೆ ದೇಶಗಳಿಂದ ಕೊಂಡುಕೊಳ್ಳುತ್ತಿದ್ದರು ಎಂಬ ವಿಷಯ ಮತ್ತು ಹಂಪಿಗೆ ಅರಬ್, ಪರ್ಷಿಯಾ, ಶ್ರೀಲಂಕಾ ದೇಶದ ವರ್ತಕರು ವ್ಯಾಪಾರಕ್ಕಾಗಿ ಬರುತ್ತಿದ್ದರೆಂಬ ವಿಷಯಗಳು ಸಹ ಈ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ.

*** ಪ್ರಾಣಿಗಳ ಮಿಥುನ ಶಿಲ್ಪಗಳು**

ಹಂಪಿ ಪರಿಸರದ ಸ್ಮಾರಕಗಳಲ್ಲಿನ ಲೌಕಿಕ ಮತ್ತು ಅಲೌಕಿಕ ಶಿಲ್ಪಗಳ ಜೊತೆಯಲ್ಲೆ ಹಲವು ಮನುಷ್ಯ ಹಾಗೂ ಪ್ರಾಣಿಗಳ ಮಿಥುನ ಶಿಲ್ಪಗಳನ್ನು ಕಂಡರಿಸಲಾಗಿದೆ. ಈ ರೀತಿಯ ಮಿಥುನ ಶಿಲ್ಪಗಳನ್ನು ತೋರಿಸಲು ಸಹ ಒಂದು ಉದ್ದೇಶವಿದೆ. ಅದೇನೆಂದರೆ ಕೆಲ ಮನುಷ್ಯರ ಕಣ್ಣು ದೃಷ್ಟಿಗೆ ಎಂತಹ ಗಟ್ಟಿ ಕಲ್ಲನ್ನಾದರೂ ಹೊಡೆಯುವ ಶಕ್ತಿಯಿದೆಯಂತೆ ಹಾಗಾಗಿ ಇಂತಹವರ ಕಣ್ಣು ದೃಷ್ಟಿ ಸ್ಮಾರಕಗಳ ಮೇಲೆ ಪ್ರಭಾವ ಬೀರದೆ ಇರಲು ಹಾಗೂ ಅವರನ್ನು ಇಂತಹ ಶಿಲ್ಪಗಳ ಕಡೆಗೆ ಆಕರ್ಷಿಸಲು ಈ ರೀತಿಯ ಮಿಥುನ ಶಿಲ್ಪಗಳನ್ನು ತೋರಿಸುತ್ತಾರೆಂಬುದು ಹಿಂದಿನಿಂದಲೂ ಪ್ರಚಲಿತದಲ್ಲಿರುವ ಒಂದು

ಜನಪದ ನಂಬಿಕೆ. ಈ ಹಿನ್ನೆಲೆಯಿಂದ ಹಂಪಿ ಪರಿಸರದ ಸ್ಮಾರಕಗಳಲ್ಲಿ ಹಲವು ಮಿಥುನ ಶಿಲ್ಪಗಳನ್ನು ಬಿಡಿಸಲಾಗಿದೆ.

ಹಂಪಿ ಪರಿಸರದ ಸ್ಮಾರಕಗಳಲ್ಲಿ ಕಂಡುಬರುವ ಮಿಥುನ ಶಿಲ್ಪಗಳನ್ನು ಮಾನವರ ಮಿಥುನ ಶಿಲ್ಪಗಳು, ಪ್ರಾಣಿಗಳ ಮಿಥುನ ಶಿಲ್ಪಗಳು ಹಾಗೂ ಮಾನವ ಮತ್ತು ಪ್ರಾಣಿಗಳ ನಡುವಿನ ಮಿಥುನ ಶಿಲ್ಪಗಳೆಂದು ಮೂರು ರೀತಿಯಾಗಿ ಕಾಣಬಹುದು. ಇಲ್ಲಿ ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟ ಪ್ರಾಣಿಗಳ ಮಿಥುನ ಶಿಲ್ಪಗಳು ಹಾಗೂ ಮಾನವ ಮತ್ತು ಪ್ರಾಣಿಗಳ ನಡುವಿನ ಮಿಥುನ ಶಿಲ್ಪಗಳನ್ನು ಮಾತ್ರ ವಿವರಿಸಲಾಗಿದೆ.

ಪ್ರಾಣಿಗಳ ಮಿಥುನ ಶಿಲ್ಪಗಳಲ್ಲಿ ಜಿಂಕೆ, ಹಂದಿ, ಕೋತಿಯ ಮಿಥುನ ಶಿಲ್ಪಗಳು ಮತ್ತು ಪಕ್ಷಿಗಳಲ್ಲಿ ಗಿಳಿಯ ಮಿಥುನ ಶಿಲ್ಪಗಳು ಪ್ರಮುಖವಾಗಿ ಇಲ್ಲಿ ಕಂಡುಬರುತ್ತದೆ. ಜಿಂಕೆ ಮತ್ತು ಹಂದಿಯ ಮಿಥುನ ಶಿಲ್ಪಗಳು ಮಹಾನವಮಿ ದಿಬ್ಬದಲ್ಲಿನ ಶಿಲ್ಪಪಟ್ಟಿಕೆಗಳಲ್ಲಿ ಮತ್ತು ಮುಂಭಾಗದ ಕಟ್ಟಡಗಳ ಅಧಿಷ್ಠಾನದಲ್ಲಿ ಮಾತ್ರವಿದ್ದು, ಈಗಾಗಲೇ ವಿವರಿಸಿರುವ ಬೇಟೆಗಾರಿಕೆ ಶಿಲ್ಪಗಳಲ್ಲಿ ಇವುಗಳನ್ನು ಉಲ್ಲೇಖಿಸಲಾಗಿದೆ. ನಂತರ ಕೋತಿಯ ಮಿಥುನ ಶಿಲ್ಪಗಳು ವಿಠಲ ದೇವಾಲಯ ಕಲ್ಯಾಣಮಂಟಪವನ್ನು ಉತ್ತರದ ಬದಿಯಿಂದ ಹತ್ತಲು ಇರುವ ಮೆಟ್ಟಿಲುಗಳ ಬಲಭಾಗದಲ್ಲಿ, ಇದೇ ದೇವಾಲಯದ ಸಭಾಮಂಟಪದ ಒಂದು ಕಂಬದಲ್ಲಿ ಹಾಗೂ ಮಾಲ್ಯವಂತ ರಘುನಾಥ ದೇವಾಲಯದ ಅಮ್ಮನವರ ದೇವಸ್ಥಾನದ ಮುಖಮಂಟಪದ ಕಂಬದಲ್ಲಿ ತಲಾ ಒಂದರಂತೆ ಒಟ್ಟು ಮೂರು ಶಿಲ್ಪಗಳು ಹಂಪಿ ಪರಿಸರದ ಸ್ಮಾರಕಗಳಲ್ಲಿ ಕಂಡುಬರುತ್ತವೆ. ಈ ಮೇಲಿನ ಎಲ್ಲಾ ಮಿಥುನ ಶಿಲ್ಪಗಳು ಆಯಾ ಪ್ರಾಣಿಯ ಜೀವನದ ಒಂದು ಭಾಗವಾದ ಲೈಂಗಿಕ ಕ್ರಿಯೆಯನ್ನು ತಿಳಿಸುವುದರ ಜೊತೆಗೆ ಆ ಸ್ಮಾರಕಗಳಿಗೆ ದೃಷ್ಟಿಯಾಗದಂತೆ ತಡೆಯುವಲ್ಲಿ ಇವುಗಳ ಪಾತ್ರ ಪ್ರಮುಖವಾದುದು ಎಂದು ಮೇಲೆ ತಿಳಿಸಿದ ಜನಪದ ನಂಬಿಕೆಯಿಂದ ಸ್ಪಷ್ಟವಾಗುತ್ತದೆ.



ಜಿಂಕೆಗಳ ಮಿಥುನಶಿಲ್ಪ, ಮಹಾನವಮಿ ದಿಬ್ಬ



ಸ್ತ್ರೀ ಮತ್ತು ಕುದುರೆಯ ಮಿಥುನ ಶಿಲ್ಪ, ಅಚ್ಯುತರಾಯ ದೇವಾಲಯ

ಹಂಪಿ ಪರಿಸರದ ಸ್ಮಾರಕಗಳಲ್ಲಿನ ಪಕ್ಷಿಗಳ ಮಿಥುನ ಶಿಲ್ಪಗಳಲ್ಲಿ ಗಿಳಿಗಳ ಮಿಥುನ ಶಿಲ್ಪಗಳು ಮಾತ್ರ ಕಂಡುಬರುತ್ತವೆ. ಈ ರೀತಿಯ ಗಿಳಿಗಳ ಮಿಥುನ ಶಿಲ್ಪಗಳು ಹಂಪಿ ಪರಿಸರದಲ್ಲಿ ಎರಡು ಶಿಲ್ಪಗಳು ಮಾತ್ರ ಕಂಡುಬಂದಿದ್ದು, ಒಂದು ವಿಠಲ ದೇವಾಲಯದ ಮುಖಮಂಟಪದ ಅಧಿಷ್ಠಾನದಲ್ಲಿ

ಕಂಡುಬಂದರೆ, ಮತ್ತೊಂದು ನೆಲಸ್ಥರದ ಶಿವ ದೇವಾಲಯದ ಕಲ್ಯಾಣಮಂಟಪದ ಕಂಬದ ಬೋದಿಗೆಯಲ್ಲಿ ಕಂಡುಬರುತ್ತದೆ. ಈ ಶಿಲ್ಪವನ್ನು ಸಹ ಶಿಲ್ಪಿಯಾದವನು ಈ ಮೇಲಿನ ಜನಪದ ನಂಬಿಕೆಯನ್ನು ಗಮನದಲ್ಲಿಟ್ಟುಕೊಂಡು ಈ ಶಿಲ್ಪವನ್ನು ಕಂಡರಿಸಿರಬಹುದು.

ಪ್ರಾಣಿ ಮತ್ತು ಮಾನವರ ನಡುವಿನ ಏಕೈಕ ಮಿಥುನ ಶಿಲ್ಪ ಹಂಪಿಯ ಅಚ್ಯುತರಾಯ (ತಿರುವೇಂಗಳನಾಥ) ದೇವಾಲಯದ ನೂರು ಕಂಬಗಳ ಮಂಟಪದ ಒಂದು ಕಂಬದಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಕುದುರೆಯೊಂದು ಒಬ್ಬ ಸ್ತ್ರೀಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವಂತೆ ತೋರಿಸಲಾಗಿದೆ. ಇದು ಸಹ ಈ ಮೇಲಿನ ಜನಪದ ನಂಬಿಕೆಗೆ ನಿದರ್ಶನವಾಗಿರಬಹುದು.

ಆದರೆ ಅಶ್ವಮೇಧ ಯಾಗ ಜರುಗುವ ಮುಖ್ಯವಾದ ಸಂಗತಿಯೊಂದನ್ನು ಶ್ರೀನಾಥ ಕವಿಯು ಸಂಸ್ಕೃತದ ಬಿಗಿಯಲ್ಲಿ ಹೀಗೆ ಹೇಳಿದ್ದಾನೆ.

"ಯಜಮಾನ ಪ್ರಮದಾ ವಿಕಸ್ವರಭಗ

ನ್ಯಸ್ತಾಶ್ವ ದೀರ್ಘಸ್ಮರ

ಧ್ವಜದಂಡಂಬಗುನಶ್ವಮೇಧ ಮುಖ ತಂ

ತ್ರಂಬುನ್ ನಿರೀಕ್ಷಿಂಚುಚನ್...."

ಇದರ ಅರ್ಥ ಕುದುರೆಯ ಗುಪ್ತಾಂಗವನ್ನು ಯಜ್ಞ ಅಥವಾ ಯಾಗ ಮಾಡುವವನ ಹೆಂಡತಿಯು ತನ್ನ ಗುಪ್ತಾಂಗದಲ್ಲಿಟ್ಟುಕೊಳ್ಳುವುದು ಅಂದರೆ ಬಹುಶಃ ಕುದುರೆಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು. ಇದನ್ನು ಯಾಗ ಮಾಡುವವನು ವೀಕ್ಷಿಸುತ್ತಿರುತ್ತಾನೆ ಎಂಬುದಾಗಿ ತಿಳಿದುಬರುತ್ತದೆ.[೧೭೮] ಹಾಗಾಗಿ ಈ ಮೇಲೆ ವಿವರಿಸಿದ ಸ್ತ್ರೀಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ಕುದುರೆಯ ಶಿಲ್ಪ ಅಶ್ವಮೇಧ ಯಾಗದಲ್ಲಿ ಜರುಗುವ ಅತಿ ಮುಖ್ಯ ಸಂಗತಿಯೊಂದನ್ನು ತಿಳಿಸುವ ಶಿಲ್ಪವಾಗಿದ್ದಿರಬಹುದೆಂಬುದು ನನ್ನ ಅಭಿಪ್ರಾಯವಾಗಿದೆ.

*** ಖಗೋಳ ಜ್ಞಾನವನ್ನು ತಿಳಿಸುವ (ಗ್ರಹಣದ ಶಿಲ್ಪಗಳು) ಪ್ರಾಣಿ ಶಿಲ್ಪಗಳು**

ಎರಡು ಹಾವುಗಳು ಅವುಗಳ ಮಧ್ಯಭಾಗದಲ್ಲಿನ ಸೂರ್ಯ ಅಥವಾ ಚಂದ್ರನನ್ನು ನುಂಗಲು ಪ್ರಯತ್ನಿಸುತ್ತಿರುವ ಸನ್ನಿವೇಶವನ್ನು ತಿಳಿಸುವಂತ ಶಿಲ್ಪಗಳನ್ನು ಇಲ್ಲಿ ಗ್ರಹಣದ ಶಿಲ್ಪಗಳೆಂದು ಗುರುತಿಸಲಾಗಿದೆ. ಹಂಪಿ ಪರಿಸರದ ಸ್ಮಾರಕಗಳಲ್ಲಿ ಈ ರೀತಿಯ ಹಲವು ಶಿಲ್ಪಗಳು ಕಂಡುಬಂದಿದ್ದು, ಅವುಗಳನ್ನು ವಿವರಿಸುವ ಮುನ್ನ ಗ್ರಹಣದ ಹಿನ್ನೆಲೆ ಏನೆಂಬುದನ್ನು ತಿಳಿಯುವುದು ಅವಶ್ಯಕವಾಗಿರುತ್ತದೆ. ಈ ಗ್ರಹಣದ ಹಿನ್ನೆಲೆಯನ್ನು ಪುರಾಣದ ಹಿನ್ನೆಲೆ ಮತ್ತು ವೈಜ್ಞಾನಿಕ ಹಿನ್ನೆಲೆ ಎಂಬುದಾಗಿ ಎರಡು ರೀತಿಯಲ್ಲಿ ವಿವರಿಸಬಹುದು. ಪುರಾಣದ ಹಿನ್ನೆಲೆಯಲ್ಲಿ ಗ್ರಹಣದ ಕುರಿತ ಕಥೆ ಎಲ್ಲರಿಗೂ ತಿಳಿದಿರುವುದೇ ಆಗಿದೆ. ಸುರಾಸುರರು ಸಮುದ್ರ ಮಂಥನ ಮಾಡುವ ಸಂದರ್ಭದಲ್ಲಿ ಅಮೃತ ಸಿದ್ದಿಸಿತು. ಅದನ್ನು ಸುರಾಸುರರಿಗೆ ಹಂಚುವ ಕೆಲಸ ಮೋಹಿನಿಯ ರೂಪ ಧರಿಸಿದ ವಿಷ್ಣುವಿನದಾಗಿತ್ತು. ಈ ಮೋಹಿನಿ ಜಾಣತನದಿಂದ ಸುರರಿಗೆ ಅಮೃತವನ್ನು, ಅಸುರರಿಗೆ ಮದಿರೆಯನ್ನು ಹಂಚುತ್ತಿದ್ದಳು. ಇದನ್ನು ತಿಳಿದ ಸ್ವರ್ಭಾನು ಎಂಬ

ಅಸುರ ತನ್ನ ಪಂಕ್ತಿಯನ್ನು ಬಿಟ್ಟು ಸುರರ ಪಂಕ್ತಿಯಲ್ಲಿ ಕುಳಿತನು. ಮೋಹಿನಿಯು ಇದನ್ನು ಅರಿಯದೇ ಅಸುರನಿಗೆ ಅಮೃತವನ್ನು ಬಡಿಸಿದಳು ಇದನ್ನು ಗಮನಿಸಿದ ಸೂರ್ಯಚಂದ್ರರರು ಈ ವಿಷಯವನ್ನು ಮೋಹಿನಿಗೆ ತಿಳಿಸಿದರು. ಆಗ ಅಸುರ ಅಮೃತವನ್ನು ನುಂಗುವುದರಲ್ಲಿದುದನ್ನು ಕಂಡ ಮೋಹಿನಿಯ ರೂಪದಲ್ಲಿದ್ದ ವಿಷ್ಣುವು ತನ್ನ ಸುದರ್ಶನ ಚಕ್ರದಿಂದ ಸ್ವರ್ಭಾನುವಿನ ರುಂಡವನ್ನು ಕತ್ತರಿಸಿದನು. ಆಗಿನ್ನು ಅಮೃತ ಕಂಠದ ಮೇಲ್ಭಾಗದಲ್ಲಿ ಉಳಿದಿದ್ದರಿಂದ ಅದು ಅಮರವಾಯಿತು. ಹಾಗಾಗಿ ರುಂಡಕ್ಕೆ ರಾಹುವೆಂದು, ಮುಂಡಕ್ಕೆ ಕೇತು ಎಂದು ಹೆಸರಾಯಿತು. ಇವು ಪೂರ್ವದ್ವೇಷದಿಂದ ಆಗಾಗ್ಗೆ ಸೂರ್ಯಚಂದ್ರರನ್ನು ನುಂಗಲು ಹೋಗುವುದೆ ಗ್ರಹಣವೆಂದು ಪ್ರಸಿದ್ದವಾಗಿದೆ.[೧೭೯]

ಋಗ್ವೇದದಲ್ಲಿ ಸ್ವರ್ಭಾನು ಎಂಬ ಅಸುರನ ಉಲ್ಲೇಖ ದೊರೆಯುತ್ತದೆ. ಅವನನ್ನು ಸೂರ್ಯನ ರಶ್ಮಿಯನ್ನು ನಿಲ್ಲಿಸುವವನು ಎಂದು ಹೇಳಲಾಗಿದೆ. ಇವನು ಸೂರ್ಯನನ್ನು ಕತ್ತಲಿನಿಂದ ಆವರಿಸಿ ಸಕಲ ಸೃಷ್ಟಿಯನ್ನು ಮಂಕುಗೊಳಿಸಿದ. ದೇವತೆಗಳು ಸಾಮಪಠಣದಿಂದ ಈ ಗ್ರಹಣವನ್ನು ದೂರೀಕರಿಸಿದರು ಎಂಬುದಾಗಿ ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರಂ ತಿಳಿಸುತ್ತದೆ.[೧೮೦] ಹೀಗೆ ಪುರಾಣದ ಹಿನ್ನೆಲೆಯಲ್ಲಿ ಗ್ರಹಣದ ಕುರಿತು ಈ ಮೇಲಿನಂತೆ ವಿವರಣೆ ಇದೆ.

ವೈಜ್ಞಾನಿಕ ಹಿನ್ನೆಲೆಯಲ್ಲಿ ಗ್ರಹಣ ಎಂದರೆ ಹಿಡಿಯುವುದು ಎಂಬ ಅರ್ಥವಿದೆ.[೧೮೧] ಇಲ್ಲಿ ಸೂರ್ಯ, ಭೂಮಿ ಮತ್ತು ಚಂದ್ರರು ಒಂದೇ ರೇಖೆಯಲ್ಲಿ ನೇರವಾಗಿ ಬಂದರೆ ಗ್ರಹಣಗಳು ಏರ್ಪಡುತ್ತವೆ. ಒಂದು ಆಕಾಶಕಾಯದ ನೆರಳಿನಿಂದಾಗಿ ಮತ್ತೊಂದು ಆಕಾಶಕಾಯ ಮರೆಯಾಗುವುದು ಅಥವಾ ಮಸುಕಾಗುವುದೇ ಗ್ರಹಣವೆಂದು ಸಾಮಾನ್ಯವಾಗಿ ಅರ್ಥೈಸಬಹುದು.[೧೮೨] ಗ್ರಹಣಗಳಲ್ಲಿ ಮುಖ್ಯವಾಗಿ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣ ಎಂಬ ಎರಡು ಬಗೆಯ ಗ್ರಹಣಗಳನ್ನು ಕಾಣಬಹುದು. ಭೂಮಿಯ ಮೇಲೆ ಚಂದ್ರನ ನೆರಳು ಬೀಳುವಾಗ ಸೂರ್ಯಗ್ರಹಣ ವಾಗುತ್ತದೆ. ಭೂಮಿಯ ನೆರಳು ಚಂದ್ರನ ಮೇಲೆ ಬೀಳುವಾಗ ಚಂದ್ರಗ್ರಹಣವಾಗುತ್ತದೆ.[೧೮೩] ಎಂಬುದು ವೈಜ್ಞಾನಿಕ ಹಿನ್ನೆಲೆಯ ವಿವರಣೆಯಾಗಿದೆ. ಈ ಮೇಲಿನ ವೈಜ್ಞಾನಿಕ ಹಿನ್ನೆಲೆಯ ವಿವರಣೆಯನ್ನು ಹೋಲುವ ಶಿಲ್ಪಗಳು ಹಂಪಿ ಪರಿಸರದಲ್ಲಿ ಕಂಡುಬರದಿದ್ದರೂ, ಪುರಾಣದ ಹಿನ್ನೆಲೆಯ ವಿವರಣೆಯನ್ನು ಹೋಲುವ ಗ್ರಹಣದ ಶಿಲ್ಪಗಳು ಹಂಪಿಯ ಹಲವು ದೇವಾಲಯಗಳಲ್ಲಿ ಕಂಡುಬಂದಿವೆ.

ಹಂಪಿ ಪರಿಸರದ ದೇವಾಲಯಗಳಲ್ಲಿನ ಸೂರ್ಯಗ್ರಹಣದ ಶಿಲ್ಪಗಳ ಕೋಷ್ಟಕ.

ಕ್ರಸಂ.	ದೇವಾಲಯದ ಹೆಸರು	ಶಿಲ್ಪಗಳ ಸಂಖ್ಯೆ	ಶಿಲ್ಪವಿರುವ ಸ್ಥಳ
೦೧.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೦೬	* ಪ್ರಕಾರ ಗೋಡೆಯ ಒಳಭಾಗ-೪ * ಪ್ರಕಾರ ಗೋಡೆಯ ಹೊರಭಾಗ-೨
೦೨.	ವರಾಹ ದೇವಾಲಯ, ಹಂಪಿ	೦೨	* ಪೂರ್ವದ ಪ್ರವೇಶ ದ್ವಾರಗೋಪುರದ ಮೇಲ್ಛಾವಣಿ
೦೩.	ಕೃಷ್ಣ ದೇವಾಲಯ, ಹಂಪಿ	೦೧	* ಪ್ರಕಾರಗೋಡೆಯ ಹೊರಭಾಗ
೦೪.	ಕೋಟಿಶಂಕರ ದೇವಾಲಯ	೦೧	* ಮುಖಮಂಟಪದ ಮೇಲ್ಛಾವಣಿ
	ಒಟ್ಟು -	೧೦	


ಹಂಪಿ ಪರಿಸರದ ದೇವಾಲಯಗಳಲ್ಲಿನ ಚಂದ್ರಗ್ರಹಣದ ಶಿಲ್ಪಗಳ ಕೋಷ್ಟಕ.

ಕ್ರ.ಸಂ.	ದೇವಾಲಯದ ಹೆಸರು	ಶಿಲ್ಪಗಳ ಸಂಖ್ಯೆ	ಶಿಲ್ಪವಿರುವ ಸ್ಥಳ
೦೧.	ಕೃಷ್ಣ ದೇವಾಲಯ, ಹಂಪಿ	೦೧	* ಪೂರ್ವದ ಪ್ರವೇಶ ದ್ವಾರ ಗೋಪುರದ ಮೇಲ್ಚಾವಣೆ
೦೨.	ಅಚ್ಯುತರಾಯ ದೇವಾಲಯ, ಹಂಪಿ	೦೨	* ೧ನೇ ಪ್ರಕಾರಗೋಡೆಯ ದ್ವಾರ-ಗೋಪುರದ ಮೇಲ್ಛಾವಣೆ-೧ * ನೂರು ಕಂಬಗಳ ಮಂಟಪದ ಕಂಬದಲ್ಲಿ-೧
೦೩.	ಮಾಲ್ಯವಂತ ರಘುನಾಥ ದೇವಾಲಯ, ಹಂಪಿ	೦೨	* ಪ್ರಕಾರ ಗೋಡೆಯ ಹೊರಭಾಗ
೦೪.	ಕನಕಗಿರಿ ಗೋಪುರದ ಮಂಭಾಗದ ಚಿಕ್ಕಗೋಪುರ	೦೧	* ಚಿಕ್ಕಗೋಪುರದ ಮೇಲ್ಛಾವಣೆ
	ಒಟ್ಟು -	**೦೬**	


ಹಂಪಿ ಪರಿಸರದ ಸ್ಮಾರಕಗಳಲ್ಲಿ ಒಟ್ಟು ೧೬ ಗ್ರಹಣದ ಶಿಲ್ಪಗಳು ಕಂಡುಬಂದಿವೆ. ಇದರಲ್ಲಿ ೧೦ ಸೂರ್ಯಗ್ರಹಣ ಶಿಲ್ಪಗಳಾದರೆ, ೬ ಚಂದ್ರಗ್ರಹಣ ಶಿಲ್ಪಗಳಾಗಿವೆ. ಹಂಪಿ ಪರಿಸರದ ದೇವಾಲಯಗಳಲ್ಲಿ ಅತಿ ಹೆಚ್ಚು ಗ್ರಹಣದ ಶಿಲ್ಪಗಳನ್ನು ಹೊಂದಿರುವ ಕೀರ್ತಿ ಮಾಲ್ಯವಂತ ರಘುನಾಥ ದೇವಾಲಯಕ್ಕೆ ಸಲ್ಲುತ್ತದೆ.

ಹಂಪಿ ಪರಿಸರದ ಗ್ರಹಣದ ಶಿಲ್ಪಗಳಲ್ಲಿ ವಿಶೇಷವಾದುದು ಮತ್ತು ಆಸಕ್ತಿದಾಯಕವಾದಂತಹ ಶಿಲ್ಪ ಕೃಷ್ಣ ದೇವಾಲಯದ ಪೂರ್ವದ ಪ್ರವೇಶ ದ್ವಾರಗೋಪುರದ ಮೇಲ್ಛಾವಣಿಯಲ್ಲಿ ಕಂಡುಬರುತ್ತದೆ. ಇಲ್ಲಿನ ಶಿಲ್ಪದ ಮಧ್ಯದಲ್ಲಿ ವೃತ್ತಾಕಾರವನ್ನು ಬಿಡಿಸಿದ್ದು, ಅದರಲ್ಲಿ ಮೊಲವನ್ನು ತೋರಿಸಲಾಗಿದೆ. ಇದರ ಎಡಭಾಗದಲ್ಲಿ ಮತ್ತು ಬಲಭಾಗದಲ್ಲಿ ಒಂದೊಂದು ಹಾವನ್ನು ಕಂಡರಿಸಿದ್ದು, ಅವುಗಳು ನಾಲಿಗೆಯನ್ನು ಹೊರಕ್ಕೆ ತೆಗೆದು ಈ ವೃತ್ತವನ್ನು ನುಂಗಲು ಮುಂದಾಗುತ್ತಿರುವಂತೆ ತೋರಲಾಗಿದೆ. ಈ ವೃತ್ತದ ಒಳಭಾಗದಲ್ಲಿ ಮೊಲವನ್ನು ತೋರಿಸಿರುವುದರಿಂದ ಇದು ಚಂದ್ರಗ್ರಹಣವೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಪ್ರಸ್ತುತ ಶಿಲ್ಪದಲ್ಲಿನ ಹಾವುಗಳ ಹೆಡೆ, ಹೆಡೆಯ ಮೇಲಿನ ಗುರುತು, ಆಕಾರಗಳನ್ನು ಗಮನಿಸಿದರೆ ಇವು ನಾಗರ ಹಾವುಗಳೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಪುರಾಣದ ಹಿನ್ನೆಲೆಯಲ್ಲಿ ಈ ಶಿಲ್ಪ ಕೆತ್ತಲ್ಪಟ್ಟಿದ್ದು, ಈ ಸರ್ಪಗಳೇ ರಾಹು ಮತ್ತು ಕೇತುಗಳು ಎಂಬುದನ್ನೇ ತೋರಿಸುವಲ್ಲಿ ಶಿಲ್ಪಿಯು ಯಶಸ್ವಿಯಾಗಿದ್ದಾನೆ. ಈ ಶಿಲ್ಪಗಳಲ್ಲಿನ ಹಾವುಗಳು ನಾಗರ ಹಾವುಗಳಾಗಿದ್ದು, ಇವು ಇಲಾಫಿಡೆ (*Elaphidae*) ಕುಟುಂಬಕ್ಕೆ ಸೇರಿದ್ದು, ನಾಜ ನಾಜ (*Naja Naja*) ಎಂಬುದು ಇವುಗಳ ವೈಜ್ಞಾನಿಕ ಹೆಸರಾಗಿದೆ.[೧೪] ಹಾಗೂ ಈ ಶಿಲ್ಪದಲ್ಲಿನ ಮೊಲದ ದೇಹ ಲಕ್ಷಣಗಳ ಆಧಾರದ ಮೇಲೆ ಇದು

ಲ್ಯಾಗೋಮಾರ್ಫ್ (*Langomarfa*) ಗಣದ ಲೆಪೊರಿಡೆ (*Leporidae*) ಕುಟುಂಬಕ್ಕೆ ಸೇರಿದ ಕಂದು ಮೊಲ ಎಂಬುದಾಗಿ ಗುರುತಿಸಲಾಗಿದೆ. ಲೀಪಸ್ ನೈಗ್ರಿಕೊಲಿಸ್ (*Lepus Naigricollis*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೮೫]



ಚಂದ್ರಗ್ರಹಣದ ಶಿಲ್ಪ, ಕೃಷ್ಣ ದೇವಾಲಯ



ಸೂರ್ಯಗ್ರಹಣದ ಶಿಲ್ಪ, ಮಾಲ್ಯವಂತ ರಘುನಾಥ ದೇವಾಲಯ

ಮಾಲ್ಯವಂತ ರಘುನಾಥ ದೇವಾಲಯದ ಪ್ರಕಾರ ಗೋಡೆಯ ಭಿತ್ತಿಯಲ್ಲಿ ಇದೇ ರೀತಿಯ ಹಲವು ಗ್ರಹಣದ ಶಿಲ್ಪಗಳು ಕಂಡುಬರುತ್ತವೆ. ಪ್ರಕಾರಗೋಡೆಯ ಹೊರಭಾಗದ ದಕ್ಷಿಣ ಬದಿಯ ಭಿತ್ತಿಯಲ್ಲಿ ಚಂದ್ರಗ್ರಹಣದ ಮತ್ತೊಂದು ಪ್ರಮುಖ ಶಿಲ್ಪ ಕಂಡುಬರುತ್ತದೆ. ಈ ಶಿಲ್ಪದ ಮಧ್ಯದಲ್ಲಿ ವೃತ್ತವನ್ನು ತೋರಿಸಿದ್ದು, ಅದರ ಒಂದು ಕಡೆ ಹಾವನ್ನು ಮತ್ತೊಂದು ಕಡೆ ಮೊಲವನ್ನು ತೋರಿಸಿರುವುದು ಆಸಕ್ತಿದಾಯಕವಾಗಿದೆ. ಪ್ರಸ್ತುತ ಶಿಲ್ಪದಲ್ಲಿನ ಸರ್ಪವು ಮುಂದಿನ ವೃತ್ತವನ್ನು ನುಂಗಲು ಬಾಯಿತೆರೆದು ಬರುತ್ತಿರುವಂತೆ ಇದನ್ನು ಮೊಲವು ಗಮನಿಸುತ್ತಿರುವಂತೆ ತೋರಲಾಗಿದೆ. ಇಲ್ಲಿ ಮೊಲವನ್ನು ವೃತ್ತದಲ್ಲಿ ತೋರಿಸದೆ ಪಕ್ಕದಲ್ಲಿ ತೋರಿಸಿದ್ದು ಬಹುಶಃ ಇದು ಸಹ ಚಂದ್ರಗ್ರಹಣದ ಶಿಲ್ಪವೆಂದು ಊಹಿಸಬಹುದು. ಈ ಶಿಲ್ಪದಲ್ಲಿನ ಹಾವು ಅದರ ಲಕ್ಷಣಗಳಿಂದ ಬಹುಶಃ ಕಾಳಿಂಗ ಸರ್ಪವಾಗಿದ್ದಿರಬಹುದು. ಹಾಗೆಯೇ ಮೊಲವು ಮೇಲಿನ ತಳಿಯನ್ನೇ ಹೋಲುತ್ತದೆ. ಇದೇ ರೀತಿಯ ಕಾಳಿಂಗ ಸರ್ಪಗಳು ಚಂದ್ರನನ್ನು ನುಂಗಲು ಯತ್ನಿಸುತ್ತಿರುವ ಮತ್ತೊಂದು ಶಿಲ್ಪ ಇದೇ ಗೋಡೆಯ ಪಶ್ಚಿಮಾಭಿಮುಖವಾಗಿರುವ ಭಿತ್ತಿಯಲ್ಲಿ ಕಂಡುಬರುತ್ತದೆ.

ಕೃಷ್ಣ ದೇವಾಲಯದಲ್ಲಿನ ಚಂದ್ರಗ್ರಹಣ ಶಿಲ್ಪವನ್ನೇ ಹೋಲುವ ಮತ್ತೊಂದು ಶಿಲ್ಪ ಅಚ್ಯುತರಾಯ ದೇವಾಲಯದ ಮೊದಲನೇ ಸುತ್ತಿನ ಉತ್ತರದ ಪ್ರವೇಶದ್ವಾರದ ಮೇಲ್ಛಾವಣಿಯಲ್ಲಿ ಕಂಡುಬರುತ್ತದೆ. ಆದರೆ ಈ ಶಿಲ್ಪದಲ್ಲಿನ ಹಾವುಗಳ ಲಕ್ಷಣಗಳಿಂದ ಇವು ಕಾಳಿಂಗ ಸರ್ಪವೆಂಬುದು ಸ್ಪಷ್ಟವಾಗುತ್ತದೆ. ಅರ್ಧಚಂದ್ರಾಕೃತಿಯನ್ನು ಹಾವು ನುಂಗಲು ಪ್ರಯತ್ನಿಸುತ್ತಿರುವ ಶಿಲ್ಪ ಕನಕಗಿರಿ ಗೋಪುರದ ಮುಂಭಾಗದ ಚಿಕ್ಕಗೋಪುರದ ಮೇಲ್ಛಾವಣಿಯಲ್ಲಿ ಕಂಡುಬರುತ್ತವೆ. ಪ್ರಸ್ತುತ ಶಿಲ್ಪದಲ್ಲಿ ಅರ್ಧಚಂದ್ರನನ್ನು ತೋರಿಸಿರುವುದರಿಂದ ಇದು ಸಹ ಚಂದ್ರಗ್ರಹಣವೆಂಬುದು ತಿಳಿಯುತ್ತದೆ. ನಂತರ ಸೂರ್ಯಗ್ರಹಣದ ಶಿಲ್ಪಗಳು ಮಾಲ್ಯವಂತ ರಘುನಾಥ, ವರಾಹ ಹಾಗೂ ಕೋಟೆಶಂಕರ ದೇವಾಲಯದ ಮುಖಮಂಟಪದ


ಮೇಲ್ಭಾವಣಿಯಲ್ಲಿ ಕಂಡುಬರುತ್ತವೆ. ಮಾಲ್ಯವಂತ ರಘುನಾಥ ದೇವಾಲಯದ ಪ್ರಕಾರ ಗೋಡೆಯ ಒಳಭಾಗದಲ್ಲಿನ ಒಂದು ಶಿಲ್ಪ ವಿಶೇಷವಾಗಿದ್ದು, ಈ ಶಿಲ್ಪದಲ್ಲಿ ಎರಡು ಕಾಳಿಂಗ ಸರ್ಪಗಳು ವೃತ್ತಾಕಾರದ ಭಾಗವನ್ನು ಕಚ್ಚುತ್ತಿರುವಂತೆ ತೋರಿಸಲಾಗಿದೆ. ಶಿಲ್ಪದ ವೃತ್ತದ ಭಾಗದಲ್ಲಿ ಅಥವಾ ಪಕ್ಕದಲ್ಲಿ ಮೊಲವನ್ನು ತೋರಿಸಿಲ್ಲ. ಆದ್ದರಿಂದ ಇದನ್ನು ಸೂರ್ಯಗ್ರಹಣದ ಶಿಲ್ಪವೆಂದು ಗುರುತಿಸಲಾಗಿದೆ. ಹಂಪಿಯ ಇತರೆ ಗ್ರಹಣದ ಶಿಲ್ಪಗಳಲ್ಲಿ ಹಾವುಗಳು ವೃತ್ತವನ್ನು ನುಂಗಲು ಮುಂದಾಗುತ್ತಿರುವಂತೆ ತೋರಿದ್ದರೆ, ಇಲ್ಲಿನ ಶಿಲ್ಪದಲ್ಲಿ ಹಾವುಗಳು ಅದನ್ನು ಕಚ್ಚುತ್ತಿದ್ದು, ಕಾರ್ಯ ಪ್ರವೃತ್ತವಾಗಿರುವುದನ್ನು ಶಿಲ್ಪಿ ತೋರಿಸಿದ್ದಾನೆ.

ನಂತರ ಇದೇ ಭಿತ್ತಿಯಲ್ಲಿ ಮುಂದೆ ಮತ್ತೊಂದು ಗಮನಾರ್ಹ ಸೂರ್ಯಗ್ರಹಣದ ಶಿಲ್ಪ ಕಂಡುಬರುತ್ತದೆ. ಈ ಶಿಲ್ಪದಲ್ಲಿ ಹಾವುಗಳ ಸ್ಥಾನದಲ್ಲಿ ಮೀನುಗಳನ್ನು ತೋರಿಸಿರುವುದು ಗಮನಾರ್ಹ. ಪುರಾಣ ಗ್ರಂಥಗಳ ಪ್ರಕಾರ ರಾಹು ಮತ್ತು ಕೇತುಗಳು ವಿವಿಧ ರೀತಿಯ ಪ್ರಾಣಿಗಳ ರೂಪದಲ್ಲಿ ಬಂದು ಸೂರ್ಯಚಂದ್ರರನ್ನು ನುಂಗುತ್ತವೆ ಎಂಬುದಾಗಿ ತಿಳಿಸುತ್ತದೆ. ಅದರಂತೆ ಇಲ್ಲಿನ ಶಿಲ್ಪದಲ್ಲಿ ಎರಡು ಮೀನುಗಳು ಸೂರ್ಯನನ್ನು ನುಂಗಲು ಪ್ರಯತ್ನಿಸಿರುವಂತೆ ಕಂಡುಬರುತ್ತದೆ. ಇದರ ಒಂದು ಕಡೆ ಹಾವನ್ನು ಸಹ ತೋರಿಸಿದ್ದು, ಬಹುಶಃ ಹಾವಿನ ಸ್ಥಾನವನ್ನು ಮೀನುಗಳು ಪಡೆದುಕೊಂಡಿವೆ ಎಂಬುದನ್ನು ಸಂಕೇತಿಸುತ್ತಿದ್ದಿರಬಹುದು. ಪ್ರಸ್ತುತ ಶಿಲ್ಪದಲ್ಲಿನ ಎರಡು ಮೀನುಗಳಲ್ಲಿ ಎಡಭಾಗದ ಮೀನು ಟೆಟ್ರೊಡಾಂಟಿಫಾರ್ಮಿಸ್ (*Tetrodonti formes*) ಗಣದ, ಟೆಟ್ರೂಡಾಂಟಿಡೆ (*Tetrodontidae*) ಕುಟುಂಬಕ್ಕೆ ಸೇರಿದ ಉಂಡೆ ಮೀನು ಎಂದು ಗುರುತಿಸಲಾಗಿದೆ. ಟೆಟ್ರೂಡಾನ್ ಕುಲ್‌ಕುಟಿಯ (*Tetrodon kulcutia)* ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ. ಬಲಭಾಗದ ಮೀನು ಸಿಪ್ರಿನಿಡೆ (*Siprinidae)* ಕುಟುಂಬಕ್ಕೆ ಸೇರಿದ ಕಾಟ್ಲಾಮೀನು ಎಂದು ಗುರುತಿಸಲಾಗಿದೆ.[೧೮೬]

ಹೀಗೆ ಹಂಪಿ ಪರಿಸರದ ದೇವಾಲಯಗಳಲ್ಲಿ ಗ್ರಹಣವನ್ನು ಉಲ್ಲೇಖಿಸುವಂತ ಅಥವಾ ಸೂಚಿಸುವಂತ ಸಾಕಷ್ಟು ಶಿಲ್ಪಗಳು ಕಂಡುಬಂದಿರುವುದರಿಂದ ಗ್ರಹಣಕ್ಕೆ ಸಂಬಂಧಿಸಿದ ಪುರಾಣದ ಕಥೆಯು ಇಲ್ಲಿ ಹೆಚ್ಚು ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ನಾವು ತಿಳಿಯಬಹುದು. ಅದಕ್ಕೆ ಪುಷ್ಟಿ ಎಂಬಂತೆ ಕ್ರಿ.ಶ. ೧೫೧೩ ಜೂನ್ ೮ ರಂದು ಸೂರ್ಯಗ್ರಹಣದ ದಿವಸ ಕೃಷ್ಣದೇವರಾಯನ ಮರುಪಟ್ಟಾಭಿಷೇಕವಾಗಿ ಅವನು ಅನೇಕ ಗ್ರಾಮಗಳನ್ನು ದಾನವಾಗಿ ನೀಡಿರುವನು. ಇದೇ ದಿವಸವೇ ವಿಠಲನಿಗೂ, ಹಜಾರರಾಮ ಸ್ವಾಮಿಗೂ ವೈಭೋಗದ ದಾನಗಳನ್ನು ನೀಡಿದ್ದಾನೆ. ಇದೇ ದಿವಸ ತಿರುಪತಿಯ ವೆಂಕಟರಮಣನಿಗೂ ದಾನಗಳನ್ನು ನೀಡಿ ೧೬ ಶಾಸನಗಳನ್ನು ಹಾಕಿಸಿರುವನು[೧೮೭] ಹಾಗಾಗಿ ಗ್ರಹಣದ ಕಾಲವು ಶುಭದಿನವೆಂಬುದು ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಹಂಪಿಯ ಗ್ರಹಣದ ಶಿಲ್ಪಗಳ ಕುರಿತು ಅವುಗಳ ಹಿನ್ನೆಲೆ, ಮಹತ್ವ ಹಾಗೂ ಗ್ರಹಣದ ಕುರಿತು ಜನಸಾಮಾನ್ಯರಲ್ಲಿರುವ ನಂಬಿಕೆ ಆಚರಣೆಗಳನ್ನು ಇತರೆ ವಿವರಗಳನ್ನು ಇನ್ನೊಂದೆಡೆ ನೀಡಲಾಗಿದೆ.[೧೮೮] ಹೀಗೆ ಈ ಗ್ರಹಣದ ಶಿಲ್ಪಗಳ ಅಧ್ಯಯನದಿಂದ ವಿಜಯನಗರ ಅರಸರು ಗ್ರಹಣದ ಕುರಿತು ಇರುವ ಪುರಾಣದ ಕಥೆಯನ್ನು ಹೆಚ್ಚು ನಂಬಿದ್ದರೆಂಬುದು ತಿಳಿಯುತ್ತದೆ. ಜನಸಾಮಾನ್ಯರಿಗೂ ಖಗೋಳ ಜ್ಞಾನದ ಅರಿವು ಮೂಡಿಸುವ ಸಲುವಾಗಿ ಶಿಲ್ಪಿಯಾದವನು ಇವುಗಳನ್ನು ಇಲ್ಲಿ ಶಿಲ್ಪದ ರೂಪದಲ್ಲಿ ಕಂಡರಿಸಿದ್ದು, ಈ ರೀತಿಯ ಶಿಲ್ಪಗಳನ್ನು ಕೆತ್ತಿದ ಶಿಲ್ಪಿಯು ಖಗೋಳತಜ್ಞನು, ಪಂಡಿತನು ಆಗಿದ್ದನೆಂಬ ಹಲವು ಮಾಹಿತಿಗಳು ಸ್ಪಷ್ಟವಾಗುತ್ತದೆ.

* **ಜಿಂಕೆ ಪ್ರಸವ ಶಿಲ್ಪ**

ಜಿಂಕೆಯೊಂದು ತನ್ನ ಮರಿಗೆ ಜನ್ಮ ನೀಡುತ್ತಿರುವ ಸನ್ನಿವೇಶದ ಶಿಲ್ಪವನ್ನು ಇಲ್ಲಿ ಜಿಂಕೆ ಪ್ರಸವ ಶಿಲ್ಪವೆಂದು ಗುರುತಿಸಲಾಗಿದೆ. ಈ ಶಿಲ್ಪವು ಮಹಾನವಮಿ ದಿಬ್ಬದ ಪಶ್ಚಿಮಕ್ಕಿರುವ ರಹಸ್ಯ ಕೋಣೆಯ ಆಗ್ನೇಯ ದಿಕ್ಕಿನ ಅರಮನೆಯ ಕಟ್ಟಡವೊಂದರ ಅಧಿಷ್ಠಾನದ ಮೇಲಿನ ಚಿಕ್ಕ ಪಟ್ಟಿಕೆಯಲ್ಲಿ ಕಂಡರಿಸಲಾಗಿದ್ದು, ಪೂರ್ವಾಭಿಮುಖವಾಗಿದೆ. ಈ ಶಿಲ್ಪದಲ್ಲಿ ಎರಡು ಜಿಂಕೆಗಳಿದ್ದು, ಅದರಲ್ಲಿ ಒಂದು ಜಿಂಕೆ ಮರಿಗೆ ಜನ್ಮ ನೀಡುತ್ತಿದ್ದು ಹಿಂದಕ್ಕೆ ತಿರುಗಿ ಮರಿಯನ್ನು ನೋಡುತ್ತಿದೆ. ಎಲ್ಲಾ ಪ್ರಾಣಿಗಳು ಪ್ರಸವದ ಸಂದರ್ಭದಲ್ಲಿ ಹಿಂದಕ್ಕೆ ತಿರುಗಿ ನೋಡುವುದು ಸಾಮಾನ್ಯ. ಅದನ್ನು ಶಿಲ್ಪದಲ್ಲಿ ಅತೀಸೂಕ್ಷ್ಮವಾಗಿ ತೋರಿಸಲಾಗಿದೆ. ಇದರ ಜೊತೆಯಲ್ಲಿಯೇ ಮತ್ತೊಂದು ಜಿಂಕೆ ಹಾಗೂ ಸ್ತ್ರೀಪುರಷ ಬೇಟೆಗಾರರ ಶಿಲ್ಪಗಳಿವೆ. ಪ್ರಸ್ತುತ ಶಿಲ್ಪದಲ್ಲಿ ಸ್ತ್ರೀಯು ಈ ಸನ್ನಿವೇಶವನ್ನು ಕಂಡು ತನ್ನ ಎರಡು ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡು ನಾಚಿಕೆ ಪಡುತ್ತಿರುವಂತೆ ತೋರಿಸಲಾಗಿದೆ. ಪ್ರಸವದ ಸನ್ನಿವೇಶವನ್ನು ನಿರೂಪಿಸುವ ಈ ಶಿಲ್ಪವನ್ನು ಕಡಿಮೆ ಜಾಗ ಹೊಂದಿರುವ ಕೋಷ್ಟಕದಲ್ಲಿ ಕೆತ್ತಿರುವುದರಿಂದ ಸ್ಪಷ್ಟವಾಗಿ ಕಾಣದಿದ್ದರೂ ಸೂಕ್ಷ್ಮವಾಗಿ ಗಮನಿಸಿದರೆ ಇದೊಂದು ಅಪರೂಪದ ಜಿಂಕೆ ಪ್ರಸವ ಶಿಲ್ಪವೆಂಬುದು ಸ್ಪಷ್ಟವಾಗುತ್ತದೆ.



ಚಿಗರಿ / ಜಿಂಕೆ
ಕುಟುಂಬ : ಬೋವಿಡೆ



ಜಿಂಕೆ ಪ್ರಸವ ಶಿಲ್ಪ, ಮಹಾನವಮಿ ದಿಬ್ಬದ ಮುಂಭಾಗದ ಅರಮನೆಯ ಅಧಿಷ್ಠಾನ

ಈ ಶಿಲ್ಪದಲ್ಲಿನ ಸನ್ನಿವೇಶವು ಕಾಡಿನಲ್ಲಿ ನಡೆದಿದೆ ಎಂಬುದಕ್ಕೆ ಶಿಲ್ಪಿ ಇವುಗಳ ಪಕ್ಕದಲ್ಲೇ ಮರವೊಂದನ್ನು ಕೆತ್ತಿರುವುದು ಕಂಡುಬರುತ್ತದೆ. ಹಾಗಾಗಿ ಈ ಶಿಲ್ಪದಲ್ಲಿನ ಜಿಂಕೆಗಳು ಸಾಕಿರುವ ಜಿಂಕೆಗಳಾಗಿರದೇ ಕಾಡಿನ ಜಿಂಕೆಗಳು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಜೊತೆಗೆ ಬೇಟೆಗಾರ ದಂಪತಿಗಳು ಬಿಲ್ಲುಗಳನ್ನು ಹಿಡಿದುಕೊಂಡಿದ್ದು, ಬೇಟೆಗಾಗಿ ಕಾಡಿಗೆ ಹೋದಾಗ ಬಹುಶಃ ಈ ಸನ್ನಿವೇಶವನ್ನು ಕಂಡಿರಬಹುದೆಂದು ಹೇಳಬಹುದು. ಇದನ್ನು ಹೊರತುಪಡಿಸಿದರೆ ಹಂಪಿ ಪರಿಸರದಲ್ಲಿ ಈ ರೀತಿಯ ಪ್ರಸವದ ಸನ್ನಿವೇಶವನ್ನು ತಿಳಿಸುವ ಶಿಲ್ಪ ಬೇರೆಲ್ಲೂ ಕಂಡುಬಂದಿಲ್ಲ. ಹಾಗಾಗಿ ಇದೊಂದು ಪ್ರಮುಖ ಶಿಲ್ಪವಾಗಿದ್ದು, ಅಪರೂಪದ ಶಿಲ್ಪವೆಂದೇ ಗುರುತಿಸಲಾಗಿದೆ. ಪ್ರಸ್ತುತ ಶಿಲ್ಪದಲ್ಲಿನ ಜಿಂಕೆಗಳ ದೇಹಲಕ್ಷಣಗಳ ಆಧಾರದ ಮೇಲೆ ಇವು ಬೋವಿಡೆ (*Bovidae*) ಕುಟುಂಬಕ್ಕೆ ಸೇರಿದ ಚೌಸಿಂಗ ಅಥವಾ ಚಿಗರಿ ಎಂದು ಗುರುತಿಸಲಾಗಿದ್ದು ಟೆಟ್ರಾಸೀರಸ್ ಕ್ವಾಡ್ರಿಕಾರ್ನಿಸ್ (*Tetrasirus kwadricarnis*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೮೯]

* ಐದು ಘಟನೆಗಳನ್ನು ತಿಳಿಸುವ ವಿಶಿಷ್ಟ ಶಿಲ್ಪ

ಪ್ರಸಕ್ತ ಶಿಲ್ಪವನ್ನು ವಿಜಯವಿಠಲ ದೇವಾಲಯದ ಮುಖಮಂಟಪ ದಕ್ಷಿಣ ಬದಿಯ ಅಧಿಷ್ಠಾನದ ಒಂದು ಮೂಲೆಯಲ್ಲಿ ಕಂಡರಿಸಲಾಗಿದೆ. ಈ ಶಿಲ್ಪವು ದಕ್ಷಿಣಾಭಿಮುಖವಾಗಿದ್ದು ಐದು ಘಟನೆಗಳನ್ನು ನಿರೂಪಿಸುವ ಏಕೈಕ ಶಿಲ್ಪವಾಗಿದೆ. ಆ ಐದು ಘಟನೆಗಳನ್ನು ಈ ರೀತಿಯಾಗಿ ವಿಶ್ಲೇಷಿಸಬಹುದು.

ಒಂದನೆಯದು ಈ ಶಿಲ್ಪವನ್ನು ಮೇಲ್ಭಾಗದಿಂದ ನೋಡಿದರೆ ಕಪ್ಪೆಯೊಂದು ಜಿಗುಯುತ್ತಿರುವಂತೆ ಕಂಡುಬರುತ್ತದೆ. ಶಿಲ್ಪದಲ್ಲಿನ ಕಪ್ಪೆಯ ದೇಹಲಕ್ಷಣಗಳ ಆಧಾರದ ಮೇಲೆ ಇದು ಅನೂರ (*Anura*) ಗಣದ, ರಾನಿಡೆ (*Ranidae*) ಕುಟುಂಬಕ್ಕೆ ಸೇರಿದ ಗೂಳಿಕಪ್ಪೆ ಎಂದು ಗುರುತಿಸಲಾಗಿದ್ದು, ರಾನ ಟೈಗರಿನ (*Rana Taigarina*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೯೦]

ಎರಡನೆಯದು ಈ ಶಿಲ್ಪದ ಮುಂಭಾಗದಲ್ಲಿ ನಿಂತು ನೋಡಿದರೆ ಮಧ್ಯಭಾಗದಲ್ಲಿ ಶಿವಲಿಂಗವಿದ್ದು, ಅದಕ್ಕೆ ಆಶ್ರಯವಾಗಿ ಮೇಲ್ಭಾಗದಲ್ಲಿ ನಾಗರ ಹಾವಿನ ಹೆಡೆಯಿರುವಂತೆ ಗೋಚರಿಸುತ್ತದೆ.

ಮೂರನೆಯದು ಈ ಶಿಲ್ಪದ ಬಲಭಾಗದಿಂದ ನೋಡಿದರೆ ತಾಯಿ ಕೋತಿಯು ಮರಿಗೆ ಹಾಲುಣಿಸುತ್ತಿರುವಂತೆ ಕಂಡುಬರುತ್ತದೆ.

ನಾಲ್ಕನೆಯದು ಮೇಲಿನಿಂದ ಮತ್ತೊಂದು ಭಂಗಿಯಲ್ಲಿ ನೋಡಿದರೆ ಕೆಳಗೆ ಬೀಳುತ್ತಿರುವ ಮರಿಯೊಂದನ್ನು ತಾಯಿ ಕೋತಿ ತನ್ನೆರಡು ಕೈಗಳಿಂದ ಮೇಲೆತ್ತುತ್ತಿರುವ ರೀತಿಯಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿನ ಕೋತಿಯ ದೇಹ ಲಕ್ಷಣಗಳ ಆಧಾರದ ಮೇಲೆ ಇದು ಪ್ರೈಮೆಟ್ಸ್ (*Primates*) ಗಣದ, ಸಕೊಪಿತೆಸಿಡೆ (*Sakophitecidae*) ಕುಟುಂಬಕ್ಕೆ ಸೇರಿದ ಬಾನೆಟ್‌ಕೋತಿ ಎಂದು ಗುರುತಿಸಲಾಗಿದ್ದು, ಮಕಾಕ ರೇಡಿಯೇಟಾ (*Makaka rediata*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೯೧]

ಐದನೆಯದು ಈ ಶಿಲ್ಪದ ಎಡಭಾಗದಲ್ಲಿ ನಿಂತು ನೋಡಿದರೆ ಆಂಜನೇಯ ಆಕಾಶದಲ್ಲಿ ಹಾರುತ್ತಿರುವ ಹಾಗೆ ಕಂಡುಬರುತ್ತದೆ. ಹೀಗೆ ಐದು ರೀತಿಯ ಘಟನೆಗಳನ್ನು ಒಂದೇ ಶಿಲ್ಪದಲ್ಲಿ ತೋರಿಸಿರುವುದು ಆ ಶಿಲ್ಪಿಯ ಕಲಾನೈಪುಣ್ಯತೆಗೆ ಹಾಗೂ ತಂತ್ರಗಾರಿಕೆಗೆ ಹಿಡಿದ ಕೈಗನ್ನಡಿ ಎಂದು ಹೇಳಬಹುದು. ಹಂಪಿ ಪರಿಸರದಲ್ಲಿ ಈ ರೀತಿಯ ಹಲವು ಘಟನೆಗಳನ್ನು ನಿರೂಪಿಸುವ ಏಕೈಕ ಶಿಲ್ಪ ಇದಾಗಿದ್ದು, ತನ್ನ ವೈಶಿಷ್ಟ್ಯತೆಗಳಿಂದ ಹೆಚ್ಚು ಆಕರ್ಷಿತವಾಗಿದೆ.

೪.೩. ಬಿಡಿ ಶಿಲ್ಪಗಳು

ಹಂಪಿ ಪರಿಸರದಲ್ಲಿ ಇತರೆ ಶಿಲ್ಪಗಳ ಜೊತೆಗೆ ಹಲವು ಪ್ರಾಣಿಗಳ ಬಿಡಿ ಶಿಲ್ಪಗಳು ಕಂಡುಬಂದಿವೆ. ಈಗಾಗಲೇ ಮೇಲೆ ವಿಶ್ಲೇಷಿಸಿದ ಕಥಾನಕ ಶಿಲ್ಪಗಳಲ್ಲಿನ ಪ್ರಾಣಿಗಳನ್ನು ಅಲ್ಲಿಯೇ ವಿವರಿಸಲಾಗಿದ್ದು, ಉಳಿದ ಪ್ರಾಣಿಗಳ ಬಿಡಿ ಶಿಲ್ಪಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. ಇಲ್ಲಿ ಬಿಡಿ ಶಿಲ್ಪಗಳನ್ನು ಪ್ರಾಣಿ ಮತ್ತು ಪಕ್ಷಿಗಳ ಬಿಡಿ ಶಿಲ್ಪಗಳೆಂದು ಎರಡು ಭಾಗಗಳಾಗಿ ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ.

ಪ್ರಾಣಿಗಳ ಬಿಡಿ ಶಿಲ್ಪಗಳು :

ಆನೆ :

ಆನೆಯು ಇಂದ್ರನ ವಾಹನವಾಗಿದ್ದು ದೈತ್ಯಾಕಾರದ ಪ್ರಾಣಿಯಾಗಿದೆ. ಇದು ಬಲಶಾಲಿ, ಗಂಭೀರತೆ, ಪ್ರತಿಷ್ಠೆ ಹಾಗೂ ಗೌರವಗಳ ಸಂಕೇತ. ಆನೆಗಳಲ್ಲಿ ಆಫ್ರಿಕಾ ಹಾಗೂ ಏಷ್ಯಾ ಆನೆಗಳೆಂದು ಎರಡು ರೀತಿಯಾಗಿ ವರ್ಗೀಕರಿಸಬಹುದು. ಹಂಪಿ ಪರಿಸರದಲ್ಲಿ ಏಷ್ಯಾದ ಆನೆಗಳು ಮಾತ್ರ ಕಂಡುಬಂದಿದ್ದು ಅವು ಎಲಿಪಾನ್‌ಟಿಡೆ (*Elephantidae*) ಕುಟುಂಬಕ್ಕೆ ಸೇರಿದವುಗಳಾಗಿವೆ. ಎಲಿಫಾಸ್ ಮ್ಯಾಕ್ಸಿಮಸ್ (*Eliphas maximus*) ಎಂಬುದು ಇದರ ವೈಜ್ಞಾನಿಕ ಹೆಸರು.[೯೨] ಹಂಪಿ ಪರಿಸರದಲ್ಲಿನ ಕಥಾನಕ ಶಿಲ್ಪಗಳಲ್ಲಿ ಆನೆ ಹೆಚ್ಚಾಗಿ ಕೆತ್ತಲ್ಪಟ್ಟಿದ್ದು ಇದರ ಬಿಡಿ ಶಿಲ್ಪಗಳು ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತವೆ. ಅಂತಹ ಬಿಡಿ ಶಿಲ್ಪಗಳಲ್ಲಿ ಆನೆಗಳು ಮನ್ನಡೆಯುತ್ತಿರುವಂತೆ, ಆಹಾರ ಸೇವನೆ ಮಾಡುತ್ತಿರುವಂತೆ, ಕಂಬಕ್ಕೆ ಕಟ್ಟಿಹಾಕಿರುವಂತಹ ಹಲವು ಶಿಲ್ಪಗಳು ಕಂಡುಬರುತ್ತವೆ.



ಆನೆ ಶಿಲ್ಪ



ಗಜಶಾಲೆ, ಹಂಪಿ

ವಿಜಯನಗರ ಕಾಲದಲ್ಲಿ ಆನೆಗಳನ್ನು ಯುದ್ಧ, ದೇವಾಲಯಗಳ ಉತ್ಸವ, ರಾಜ ಪರಿವಾರದವರ ಉತ್ಸವ, ಬೇಟೆ ಮುಂತಾದ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದರೆಂಬುದು ಇಲ್ಲಿ ಕಂಡುಬಂದಿರುವ ಶಿಲ್ಪಗಳಿಂದ ಅರಿಯಬಹುದಾಗಿದೆ. ಹಂಪಿಯಲ್ಲಿ ಈಗಿರುವ ಗಜಶಾಲೆಯ ಕಟ್ಟಡವನ್ನು ಆನೆಯ ಸಾಲೆಯೆಂದು ಒಪ್ಪಿಕೊಂಡರೂ ಸಹ ಅಲ್ಲಿರುವ ಸ್ಥಳಾವಕಾಶವು ಕೇವಲ ರಾಜಪರಿವಾರದವರಿಗೆ





ಮೀಸಲಾಗಿದ್ದ ಹನ್ನೊಂದು ಆನೆಗಳಿಗೆ ಮಾತ್ರ ಇರುವುದನ್ನು ಕಾಣಬಹುದಾಗಿದೆ. ಆದರೆ ಉಳಿದ ಅಗಾಧ ಸಂಖ್ಯೆಯ ಸಾಮಾನ್ಯ ಆನೆಗಳಿಗಾಗಿ ಬೇರೊಂದು ಆನೆಯ ಸಾಲೆಯನ್ನು ನಿರ್ಮಿಸಿರಲೇಬೇಕು. ಈ ದಿಸೆಯಲ್ಲಿ ಒಂದು ಶಿಲಾಶಾಸನವು[೧೯೩] ಅಂತಹ ಒಂದು ಆನೆಯ ಸಾಲೆಯನ್ನು ಉಲ್ಲೇಖಿಸುತ್ತದೆ. ಆನೆ ಸಾಲೆಯ ಬಳಿಯ ನರಸಿಂಹ ದೇವರಿಗೆ ದಾನ ಕೊಟ್ಟದ್ದನ್ನು ಇದು ಉಲ್ಲೇಖಿಸುತ್ತದೆ. ಈ ಶಾಸನವು ಹಂಪಿಯಲ್ಲಿನ ಪ್ರಸ್ತುತ ಟೂರಿಸ್ಟ್ ಕ್ಯಾಂಟೀನ್ ಕಟ್ಟಡದ ಹಿಂಭಾಗದಲ್ಲಿ ಸಿಕ್ಕಿದೆ. ಕಟ್ಟಡದ ಆವರಣದ ದಕ್ಷಿಣ ದಿಕ್ಕಿನಲ್ಲಿ ಸ್ವಲ್ಪ ಭಾಗದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಉತ್ಖನನ ಕೆಲಸವನ್ನು ಮಾಡಿದ್ದು ಆನೆಯ ಅಸ್ಥಿಪಂಜರ, ಆನೆಯ ಸರಪಳಿ, ಗೋದಳಿಗಳು, ನೀರಿನ ತೊಟ್ಟಿಗಳು, ಮಾವುತರ ಅಸ್ಥಿಪಂಜರಗಳು, ರಂಧ್ರಗಳಿರುವ ಕಲ್ಲಿನ ಕಂಬಗಳು ಮುಂತಾದ ಅವಶೇಷಗಳು ಇಲ್ಲಿ ಕಂಡುಬಂದಿದ್ದು ವರದಿಯಾಗಿದೆ.[೧೯೪]

ಮೇಲಿನ ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಗಮನಿಸಿದಾಗ ಮತ್ತು ಶಿಲಾಶಾಸನದಲ್ಲಿ ಉಲ್ಲೇಖಗೊಂಡ ವಿಷಯ, ಉತ್ಖನನ ಮಾಡಿದ ಸ್ಥಳದಲ್ಲಿ ಕಂಡುಬಂದಿರುವ ಅವಶೇಷಗಳು, ವಿಶಾಲವಾದ ಆವರಣ ಅದಕ್ಕೆ ಒಂದು ಭಾಗದಲ್ಲಿ ಮಾತ್ರವಿರುವ ಬಾಗಿಲು ಮುಂತಾದ ಅಂಶಗಳಿಂದ ಪ್ರಸ್ತುತ ಕಟ್ಟಡವು ಆನೆ ಸಾಲೆಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೇ ಆವರಣದಲ್ಲಿ ಉಳಿದ ಭಾಗವನ್ನು ಪೂರ್ಣವಾಗಿ ಉತ್ಖನನ ಮಾಡಿದಲ್ಲಿ ಆನೆಯ ಸಾಲೆಗೆ ಬೇಕಾದ ಇನ್ನೂ ಹೆಚ್ಚಿನ ಮಹತ್ವವುಳ್ಳ ಅವಶೇಷಗಳು ದೊರೆತು ವಿಜಯನಗರದ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಬಹುದಾಗಿದೆ. ಈ ಕುರಿತು ಟಿ.ಎಮ್.ಮಂಜುನಾಥಯ್ಯ ನವರ ಲೇಖನದಲ್ಲಿಯೂ ಸಹ ಈ ಆವರಣವನ್ನೇ ಆನೆಯ ಸಾಲೆಯೆಂದು ಅಭಿಪ್ರಾಯಪಟ್ಟಿರುತ್ತಾರೆ.[೧೯೫] ಆನೆಗೆ ಸಂಬಂಧಿಸಿದಂತೆ ಹಂಪಿ ಪರಿಸರದಲ್ಲಿ ಆನೆಗೊಂದಿ ಎಂದು ಸ್ಥಳನಾಮವಿದ್ದು ವಿಜಯನಗರ ಸಾಮ್ರಾಜ್ಯದ ಪ್ರಾರಂಭದ ದಿನಗಳಲ್ಲಿ ಆನೆಗೊಂದಿಯೇ ರಾಜಧಾನಿಯಾಗಿದ್ದು ಅರಸರು ತಮ್ಮ ಸೈನ್ಯದ ಆನೆಗಳನ್ನು ಇಲ್ಲಿ ನೆಲೆನಿಲ್ಲಿಸಿದ್ದರಿಂದ ಈ ಸ್ಥಳವು ಆನೆಗೊಂದಿಯೆಂದು ಪ್ರಸದ್ಧವಾಯಿತೆಂದು ತಿಳಿದುಬರುತ್ತದೆ.[೧೯೬] ಇದಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಇಂದಿಗೂ ಅಲ್ಲಿ ಆನೆಸಾಲು ಎಂಬ ಹೆಸರಿನ ಸ್ಮಾರಕವಿದ್ದು ಆನೆಗಳು ಇಲ್ಲಿ ನೆಲೆಸಿದ್ದವೆಂಬುದಕ್ಕೆ ಪುಷ್ಟಿ ನೀಡುತ್ತದೆ.

ಕುದುರೆ : ಕುದುರೆಯು ಕುಬೇರ, ಸೂರ್ಯ ಮತ್ತು ಕಲ್ಕಿಯ ವಾಹನ. ಹಂಪಿ ಪರಿಸರದ ಶಿಲ್ಪಗಳಲ್ಲಿ ದೇಶಿಯ ಕುದುರೆಗಳ ಜೊತೆಗೆ ಅರಬ್ ತಳಿಯ ಕುದುರೆಗಳು ಸಹ ಕಂಡುಬಂದಿರುತ್ತವೆ. ಅರಬ್ ತಳಿ ಕುದುರೆಯ ಗೊರಸುಗಳ ಮಧ್ಯೆ ಮತ್ತು ಬೆನ್ನಿನ ಭಾಗದಲ್ಲಿ ವಿಶೇಷ ಮೂಳೆಯೊಂದು ಬೆಳೆಯುವುದರಿಂದ ಇವು ದೇಶಿ ಕುದುರೆಗಳಿಗಿಂತ ಅತ್ಯಂತ ವೇಗವಾಗಿ ಓಡಬಲ್ಲವು. ಈ ಕಾರಣದಿಂದ ವಿಜಯನಗರದ ಅರಸರು ಅರಬ್ ಅಶ್ವಗಳನ್ನು ಹೆಚ್ಚಾಗಿ ಖರೀದಿಸಿ ತಮ್ಮ ಅಶ್ವಪಡೆಯನ್ನು ಬಲಪಡಿಸಿಕೊಳ್ಳುತ್ತಿದ್ದರೆಂಬುದು ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ.

ಹಂಪಿ ಪರಿಸರದಲ್ಲಿ ಕುದುರೆಯ ಬಿಡಿ ಶಿಲ್ಪಗಳು ವಿರಳವಾಗಿದ್ದು ಮಹಾನವಮಿ ದಿಬ್ಬ, ವಿರೂಪಾಕ್ಷ, ಅಚ್ಯುತರಾಯ, ವರಾಹ ಹಾಗೂ ವಿಠಲ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ.

ಈ ಶಿಲ್ಪಗಳಲ್ಲಿನ ಅಶ್ವದ ದೇಹ ಲಕ್ಷಣಗಳ ಮತ್ತು ಅವುಗಳನ್ನು ಹಿಡಿದಿರುವ ರಾಹುತರ ಉಡುಪುಗಳ ಆಧಾರದ ಮೇಲೆ ಅವುಗಳನ್ನು ದೇಶಿ ಮತ್ತು ವಿದೇಶಿ ತಳಿಗಳೆಂದು ಗುರುತಿಸಲಾಗಿದೆ. ಅರಬ್ ಕುದುರೆಯು ಈಕ್ವಿಡೆ (*Equidae*) ಕುಟುಂಬಕ್ಕೆ ಸೇರಿದ್ದು ಈಕ್ವಲಸ್ ಪೆರುಸ್ ಕೆಬಲಸ್ (*Equualus perus cebulus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ. ದೇಶಿಯ ಕುದುರೆಯು ಸಹ ಇದೇ ಕುಟುಂಬಕ್ಕೆ ಸೇರಿದ್ದು ಈಕ್ವಲಸ್ ಕೆಬಲಸ್ (*Equues cebulus*) ಎಂಬುದು ಇದರ ವೈಜ್ಞಾನಿಕ ಹೆಸರು.[೧೯೭]

ರಾಜ್ಯ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮೈಸೂರು ಇವರು ಹಂಪಿ ಪರಿಸರದ NMQ-22A ಎಂಬ ಸ್ಥಳದಲ್ಲಿ ಉತ್ಖನನ ಮಾಡಿದ್ದು ಇಲ್ಲಿ ಕುದುರೆಯ ಅಪೂರ್ಣ ಅಸ್ಥಿಪಂಜರ ದೊರೆತ್ತಿದ್ದು ಹಿಂದಿನ ಎರಡು ಕಾಲುಗಳ ಭಾಗಗಳು ಮಾತ್ರ ಸಿಕ್ಕಿದ್ದು ಉಳಿದ ಭಾಗಗಳು ದೊರೆತ್ತಿಲ್ಲದಿರುವುದರಿಂದ ಇದು ಯಾವ ತಳಿಯದ್ದೆಂದು ಖಚಿತಪಡಿಸಲು ಸಾಧ್ಯವಿಲ್ಲ.[೧೯೮] ಕುದುರೆಗಳನ್ನು ಕಟ್ಟಿಹಾಕಲು ಬಂಡೆಗಳನ್ನು ಕೊರೆದು ಮಾಡಿರುವ ರಂಧ್ರದಂತ ವ್ಯವಸ್ಥೆಯನ್ನು ಹಂಪಿಯ ಹಲವು ಕಡೆ ಕಾಣಬಹುದು. ಹಾಗಾಗಿ ವಿಜಯನಗರ ಕಾಲದ ಸೈನ್ಯದಲ್ಲಿ ಕುದುರೆಗಳ ಪಾತ್ರ ಪ್ರಮುಖವಾಗಿದ್ದು ಅಧಿಕ ಸಂಖ್ಯೆಯಲ್ಲಿದವೆಂಬುದು ಸ್ಪಷ್ಟವಾಗುತ್ತದೆ.



ಕುದುರೆಯ ಶಿಲ್ಪ, ಹಜಾರರಾಮ ದೇವಾಲಯ



ಕುದುರೆಗಳನ್ನು ಕಟ್ಟಲು ಮಾಡಿರುವ ವ್ಯವಸ್ಥೆ ಗಜಶಾಲೆಯ ಪಕ್ಕದ ಗುಡ್ಡದಲ್ಲಿ

ಒಂಟೆ : ಹಂಪಿ ಪರಿಸರದಲ್ಲಿ ಒಂಟೆಯ ಶಿಲ್ಪಗಳು ಮಹಾನವಮಿ ದಿಬ್ಬ ಮತ್ತು ಹಜಾರರಾಮ ದೇವಾಲಯದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಈ ಶಿಲ್ಪದಲ್ಲಿ ಒಂಟೆಯ ಮೇಲೆ ಕುಳಿತ ವ್ಯಕ್ತಿ ಸಂಗೀತ ವಾದ್ಯಗಳನ್ನು ನುಡಿಸಿಕೊಂಡು ಮುನ್ನಡೆಯುತ್ತಿರುವಂತೆ ತೋರಲಾಗಿದೆ. ಇಂತಹ ಶಿಲ್ಪಗಳು ವಿಜಯನಗರ ಕಾಲದ ನವರಾತ್ರಿ ಉತ್ಸವದ ಮೆರವಣಿಗೆಯ ಸನ್ನಿವೇಶವನ್ನು ತಿಳಿಸುವ ಪ್ರಾಕ್ತನ ಆಧಾರಗಳಾಗಿವೆ. ಶಿಲ್ಪಗಳಲ್ಲಿನ ಒಂಟೆಯ ದೇಹ ಲಕ್ಷಣಗಳ ಆಧಾರದ ಮೇಲೆ ಇವು ಆರ್ಟಿಯೋಡಾಕ್ಟೈಲ (*Artiodactyla*) ಗಣದ, ಕ್ಯಾಮಲಿಡೇ (*Camalidae*) ಕುಟುಂಬಕ್ಕೆ ಸೇರಿದವುಗಳೆಂದು ಗುರುತಿಸಲಾಗಿದ್ದು ಕ್ಯಾಮಲಸ್ ಡ್ರಾಮಿಡೇರಿಯಸ್ (*Camalus dramiderius*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೧೯೯]







ಒಂಟೆ
ಗಣ : ಆರ್ಟಿಯೋಡಾಕ್ಟೈಲ
ಕುಟುಂಬ : ಕ್ಯಾಮಲಿಡೆ



ಒಂಟೆಯ ಶಿಲ್ಪ, ಮಹಾನವಮಿ ದಿಬ್ಬ, ಹಂಪಿ

ಜಿರಾಫೆ

ಹಂಪಿ ಪರಿಸರದಲ್ಲಿ ಜಿರಾಫೆಯ ಏಕೈಕ ಶಿಲ್ಪವೊಂದು ವಿಠಲ ದೇವಾಲಯದ ಪಶ್ಚಿಮ ಪ್ರಾಕಾರ ಮಂಟಪದ ಅಧಿಷ್ಠಾನದಲ್ಲಿ ಕೆತ್ತಲ್ಪಟ್ಟಿದೆ. ಶಿಲ್ಪದಲ್ಲಿ ಇದರ ಎತ್ತರ, ಉದ್ದನೆಯ ಕತ್ತು, ನೀಳ ಕಾಲುಗಳು ಇತರೆ ದೇಹ ಲಕ್ಷಣಗಳಿಂದ ಇದನ್ನು ಜಿರಾಫೆಯೆಂದು ಗುರುತಿಸಲಾಗಿದೆ. ಇದು ಆರ್ಟಿಯೋಡಾಕ್ಟೈಲ (*Artiodactyla*) ಗಣದ ಜಿರಾಫಿಡೆ (*Jirafidae*) ಕುಟುಂಬಕ್ಕೆ ಸೇರಿದ್ದು ಜಿರಾಫ ಕ್ಯಾಮೆಲೊಪರ್ಡಾಲಿಸ್ (*Jiraffa camelopardalis*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೦೦]



ಜಿರಾಫೆ
ಗಣ : ಆರ್ಟಿಯೋಡಾಕ್ಟೈಲ
ಕುಟುಂಬ : ಜಿರಾಫಿಡೆ



ಜಿರಾಫೆಯ ಏಕೈಕ ಶಿಲ್ಪ, ವಿಜಯವಿಠಲ ದೇವಾಲಯ

ಕಾಡೆಮ್ಮೆ/ಕಾಡುಕೋಣ:

ಕಾಡುಕೋಣಗಳಲ್ಲಿ ಪ್ರಮುಖವಾಗಿ ಎರಡು ಜಾತಿಗಳಿವೆ. ಬೈಸನ್ ಬೈಸನ್ (*Baisan baisan*)






ಎಂಬುದು ಅಮೇರಿಕ ಮತ್ತು ಯುರೋಪಿನ ಕಾಡುಕೋಣ. ಬಾಸ್ ಗೌರಸ್ (*Bas gowras*) ಎಂಬುದು ಭಾರತದಲ್ಲಿ ವಾಸಿಸುವ ಕಾಡುಕೋಣವಾಗಿದೆ. ಇದನ್ನು ಕರ್ನಾಟಕದಲ್ಲಿ ಕಾಟಿ ಎಂದೂ ಕರೆಯುತ್ತಾರೆ.[೨೦೧]

ಹಂಪಿ ಪರಿಸರದಲ್ಲಿ ಇವುಗಳ ಬಿಡಿ ಶಿಲ್ಪಗಳು ಅಚ್ಯುತರಾಯ, ವಿಠಲ, ಮಾಲ್ಯವಂತ ರಘುನಾಥ ಮತ್ತು ವಿರೂಪಾಕ್ಷ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬಂದಿವೆ. ಶಿಲ್ಪಗಳಲ್ಲಿ ಇವುಗಳ ದೇಹ ಲಕ್ಷಣಗಳ ಆಧಾರದ ಮೇಲೆ ಇವುಗಳನ್ನು ಕಾಡೆಮ್ಮೆ ಅಥವಾ ಕಾಡುಕೋಣಗಳೆಂದು ಗುರುತಿಸಲಾಗಿದೆ. ಅಚ್ಯುತರಾಯ ದೇವಾಲಯದಲ್ಲಿನ ಶಿಲ್ಪಗಳಲ್ಲಿ ಹುಲಿಯು ಕಾಡುಕೋಣದ ಮೇಲೆ ದಾಳಿ ಮಾಡಿದ್ದು ಅದರಿಂದ ತಪ್ಪಿಸಿಕೊಳ್ಳಲಾಗದೆ ಅದು ಕೆಳಗೆ ಬಿದ್ದಿರುವಂತೆ ತೋರಿಸಲಾಗಿದೆ. ಮಾಲ್ಯವಂತ ರಘುನಾಥ ದೇವಾಲಯದ ಶಿಲ್ಪದಲ್ಲಿ ಕಾಡೆಮ್ಮೆಯೊಂದು ತನ್ನ ಮರಿಯನ್ನು ನಾಲಿಗೆಯಿಂದ ನೆಕ್ಕುತ್ತಿರುವಂತೆ ಕೆತ್ತಲಾಗಿದೆ. ಹಂಪಿ ಪರಿಸರದ ಕಡೇಬಾಗಿಲು ಉತ್ಖನನದಲ್ಲಿ ಕಾಡುಕೋಣ ಅಥವಾ ನೀರೆಮ್ಮೆಯ ಮೂಳೆಗಳು ದೊರಕಿದ್ದು ಗಮನಾರ್ಹವಾಗಿದೆ.[೨೦೨]



ಕಾಡುಕೋಣ
ಗಣ : ಆರ್ಟಿಯೋಡಾಕ್ಟೈಲ
ಕುಟುಂಬ : ಬೋವಿಡೆ



ಕಾಡುಕೋಣದ ಶಿಲ್ಪ, ಸಭಾಮಂಟಪದ ಅಧಿಷ್ಠಾನ, ವಿಜಯವಿಠಲ ದೇವಾಲಯ, ಹಂಪಿ

ಚಿಪ್ಪು ಹಂದಿ (*Pangolin*):

ಇದು ಸಸ್ತನಿ ವರ್ಗಕ್ಕೆ ಸೇರಿದ ಪ್ರಾಣಿಯಾಗಿದ್ದು ತನ್ನ ದೇಹವು ಗಟ್ಟಿಯಾದ ಚಿಪ್ಪುಗಳಂತ ಹೊದಿಕೆಯನ್ನು ಹೊಂದಿದೆ. ಇದು ಶತ್ರುಗಳಿಂದ ಅಪಾಯ ಎದುರಾದಾಗ ದುಂಡಾಕಾರವಾಗಿ ಸುತ್ತಿಕೊಂಡು ರಕ್ಷಿಸಿಕೊಳ್ಳುತ್ತದೆ. ಇಂತಹದೊಂದು ಪ್ರಾಣಿಯ ಏಕೈಕ ಶಿಲ್ಪವು ಮಹಾನವಮಿ ದಿಬ್ಬದ ಪಶ್ಚಿಮ ದಿಕ್ಕಿನ ಮೊದಲನೆ ಹಂತದಲ್ಲಿ ಕಂಡುಬರುತ್ತದೆ. ಶಿಲ್ಪದಲ್ಲಿನ ಅದರ ದೇಹ ಲಕ್ಷಣಗಳ ಆಧಾರದ ಮೇಲೆ ಅದು ಚಿಪ್ಪು ಹಂದಿಯೆಂದು ಗುರುತಿಸಲಾಗಿದೆ. ಇದು ಪೋಲಿಡಾಟ (*Polidata*) ಗಣದ ಮಾನಿಡೆ (*Manidae*) ಕುಟುಂಬಕ್ಕೆ ಸೇರಿದ್ದು ಮಾನಿಸ್ ಕ್ರಾಸಿಕೋಡಟ (*Manis krasikodeta*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೦೩] ಇದಕ್ಕೆ ಇರುವೆಗಳನ್ನು ಭಕ್ಷಿಸುವ ಪ್ರಾಣಿಯೆಂತಲೂ ಕರೆಯಲಾಗುತ್ತದೆ. ಹಂಪಿಯು ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು ಈ ರೀತಿಯ ಪ್ರಾಣಿಗಳ ಇರುವಿಕೆಯನ್ನು ಇಂತಹ ಶಿಲ್ಪಗಳು ವ್ಯಕ್ತಪಡಿಸುತ್ತವೆ. ಈಗಲೂ ಈ ಪರಿಸರದಲ್ಲಿ ಇವು ಕಂಡು ಕಣ್ಮರೆಯಾಗುತ್ತಿರುವುದನ್ನು ಕಾಣಬಹುದು.



ಚಿಪ್ಪು ಹಂದಿ
ಗಣ : ಪೋಲಿಡಾಟಿಡೆ
ಕುಟುಂಬ : ಮಾನಿಡೆ




ಚಿಪ್ಪು ಹಂದಿಯ ಶಿಲ್ಪ, ಪಶ್ಚಿಮ ಬದಿ, ಮಹಾನವಮಿ ದಿಬ್ಬ

ಮುಂಗುಸಿ

ಇದು ಸಸ್ತನಿ ವರ್ಗಕ್ಕೆ ಸೇರಿದ ಪ್ರಾಣಿಯಾಗಿದ್ದು ಬಯಲು ಪ್ರದೇಶದ ಕುರುಚಲು ಕಾಡುಗಳಲ್ಲಿ ಮತ್ತು ಕೃಷಿ ಭೂಮಿಯ ಪಕ್ಕದಲ್ಲಿ ವಾಸಿಸುತ್ತವೆ. ಈ ಪ್ರಾಣಿಯ ಶಿಲ್ಪಗಳು ವಿಠಲ ದೇವಾಲಯದ ಕಲ್ಯಾಣ ಮಂಟಪದ ಅಧಿಷ್ಠಾನದಲ್ಲಿ ಮತ್ತು ತಿಮ್ಮಲಾಪುರದ ಶಿವ ದೇವಾಲಯದ ಮುಖಮಂಟಪದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಶಿಲ್ಪದಲ್ಲಿನ ಪ್ರಾಣಿಗಳ ದೇಹ ಲಕ್ಷಣಗಳ ಆಧಾರದ ಮೇಲೆ ಇವುಗಳನ್ನು ಮುಂಗುಸಿ ಎಂದು ಗುರುತಿಸಲಾಗಿದ್ದು ಇವು ಕಾರ್ನಿವೋರ (*Carnivora*) ಗಣದ ಕೈನಿಡೆ (*Kainidae*) ಕುಟುಂಬಕ್ಕೆ ಸೇರಿದ್ದಾಗಿವೆ. ಹರ್ಪೆಸ್ಟಿಸ್ ಎಡ್‌ವರ್ಡ್ಸಿ (*Herpestes edwqrdsi*) ಎಂಬುದು ಇದರ ವೈಜ್ಞಾನಿಕ ಹೆಸರು.[೨೦೪] ಹಂಪಿಯು ಕುರುಚಲು ಪ್ರದೇಶವಾಗಿದ್ದು ಈ ರೀತಿಯ ಪ್ರಾಣಿಗಳು ವಾಸಿಸಲು ಯೋಗ್ಯ ಸ್ಥಳವಾಗಿತ್ತೆಂಬುದು ಇಂತಹ ಶಿಲ್ಪಗಳಿಂದ ತಿಳಿಯಬಹುದು. ಇಂದಿಗೂ ಈ ಪ್ರಾಣಿಗಳು ಇಲ್ಲಿ ಹೆಚ್ಚಾಗಿ ಕಂಡುಬರುವುದನ್ನು ಕಾಣಬಹುದು.



ಮುಂಗುಸಿ
ಗಣ : ಕಾರ್ನಿವೋರ
ಕುಟುಂಬ : ಕೈನಿಡೆ



ಮುಂಗುಸಿ ಶಿಲ್ಪ, ಕಲ್ಯಾಣ ಮಂಟಪದ ಅಧಿಷ್ಠಾನ, ವಿಜಯವಿಠಲ ದೇವಾಲಯ, ಹಂಪಿ

ಕರಡಿ

ಸಸ್ತನಿ ವರ್ಗಕ್ಕೆ ಸೇರಿದ ಕರಡಿಯು ಸ್ವಾಭಾವಿಕವಾಗಿ ಶಾಂತ ಪ್ರಾಣಿಯಾದರೂ ತನ್ನ ಮರಿಗಳ ರಕ್ಷಣೆ ಮತ್ತು ಆಹಾರಕ್ಕಾಗಿ ಇಕ್ಕಟ್ಟಿಗೆ ಸಿಲುಕಿದಾಗ ಅಪಾಯಕಾರಿಯಾಗಿ ಹೋರಾಡಬಲ್ಲದು. ಕರಡಿಗಳಲ್ಲಿ ಪ್ರಮುಖವಾಗಿ ಹಿಮ ಕರಡಿ ಮತ್ತು ಕಪ್ಪು ಕರಡಿಗಳನ್ನು ಕಾಣಬಹುದು. ಕರಡಿಗೆ ಸಂಬಂಧಿಸಿದಂತೆ ಹಂಪಿ ಪರಿಸರದ ಮಹಾನವಮಿ ದಿಬ್ಬದಲ್ಲಿ ಎರಡು, ವಿಠಲ ದೇವಾಲಯದಲ್ಲಿ ಒಂದರಂತೆ ಒಟ್ಟು ಮೂರು ಶಿಲ್ಪಗಳು ಮಾತ್ರ ಕಂಡುಬಂದಿದ್ದು ವಿರಳವೆಂದೇ ಹೇಳಬಹುದು. ಆದರೆ ಹಂಪಿ ಪರಿಸರದಲ್ಲಿ ಬೆಟ್ಟಗುಡ್ಡಗಳಿರುವುದರಿಂದ ಕರಡಿಯ ವಾಸಕ್ಕೆ ಯೊಗ್ಯವಾಗಿದ್ದು ಇಂದಿಗೂ ಈ ಪ್ರದೇಶದಲ್ಲಿ ಕರಡಿಗಳು ಸಾಕಷ್ಟಿದ್ದು ಕರಡಿ ಧಾಮವಿರುವುದು ಗಮನಾರ್ಹ. ಹಂಪಿಯ ಶಿಲ್ಪಗಳಲ್ಲಿನ ಪ್ರಾಣಿಯ ದೇಹ ಲಕ್ಷಣಗಳ ಆಧಾರದ ಮೇಲೆ ಇದನ್ನು ಕರಡಿಯೆಂದು ಗುರುತಿಸಲಾಗಿದೆ. ಇದು ಕಾರ್ನಿವೋರ (*Carnivora*) ಗಣದ, ಅರ್ಸಿಡೆ (*Arcidae*) ಕುಟುಂಬಕ್ಕೆ ಸೇರಿದ್ದು, ಮೆಲರ್ಸಸ್ ಅರ್ಸಿನಸ್ (*Melarsus arcinus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೦೫]



ಕರಡಿ
ಗಣ : ಕಾರ್ನಿವೋರ
ಕುಟುಂಬ : ಆರ್ಸಿಡೆ



ಕರಡಿಯ ಶಿಲ್ಪ, ಪಶ್ಚಿಮ ಬದಿ, ಮಹಾನವಮಿ ದಿಬ್ಬ, ಹಂಪಿ

ನಂದಿ

ನಂದಿಯು ಶಿವನ ವಾಹನವಾಗಿದ್ದು ಹಂಪಿ ಪರಿಸರದಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇಲ್ಲಿನ ಪ್ರತಿಯೊಂದು ಶೈವ ದೇವಾಲಯದ ಮುಂದೆ ನಂದಿಯನ್ನು ಎದುರಾಗಿ ಪ್ರತಿಷ್ಠಾಪಿಸಿರುವುದನ್ನು ನೋಡಬಹುದು. ವಿರೂಪಾಕ್ಷ ದೇವಾಲಯದಲ್ಲಿ ಸಾಕಷ್ಟು ನಂದಿ ಶಿಲ್ಪಗಳಿದ್ದರೂ ದ್ವಾರಗೋಪುರದ ಬಳಿಯಿರುವ ಮೂರು ತಲೆಯ ನಂದಿಯು ಗಮನಾರ್ಹವಾಗಿದೆ. ದೇವಾಲಯದ ಪಕ್ಕದಲ್ಲಿರುವ ತುಂಗಭದ್ರ ನದಿಯ ಮಧ್ಯಭಾಗದ ಬಂಡೆಗಳಲ್ಲಿ ಸಹ ನಂದಿಯ ಶಿಲ್ಪಗಳನ್ನು ಬಿಡಿಸಿದ್ದು ಅವು ನದಿಯ ಪ್ರವಾಹದ ಮಟ್ಟವನ್ನು ಸೂಚಿಸುತ್ತವೆ ಎಂಬುದಾಗಿ ಸ್ಥಳೀಯ ಮೌಖಿಕ ಆಕರಗಳಿಂದ ತಿಳಿದುಬರುತ್ತದೆ. ಹೀಗೆ ನದಿಯ ಪ್ರವಾಹದ ಪಾತ್ರವನ್ನು ತಿಳಿಸುವ ಸಂಕೇತಗಳಾಗಿ ಈ ನಂದಿ ಶಿಲ್ಪಗಳು ಪ್ರಾಮುಖ್ಯತೆಯನ್ನು



ಪಡೆದುಕೊಂಡಿವೆ. ಹಂಪಿ ಪರಿಸರದ ಶಿಲ್ಪಗಳಲ್ಲಿನ ಬಹುತೇಕ ನಂದಿಗಳು ಅವುಗಳ ದೇಹ ಲಕ್ಷಣಗಳ ಆಧಾರದ ಮೇಲೆ ಅವು ಅಮೃತ್‌ಮಹಲ್ ಮತ್ತು ಹಳ್ಳಿಕಾರ್ ತಳಿಗೆ ಸೇರಿದವುಗಳೆಂದು ಗುರುತಿಸಲಾಗಿದೆ. ಹಂಪಿ ಪರಿಸರದ ಕಡೇಬಾಗಿಲು ಉತ್ಖನನದಲ್ಲಿ ದನಗಳ ಮೂಳೆಗಳು ದೊರಕಿದ್ದು ಅವುಗಳ ವಿಶ್ಲೇಷಣೆಯು ಅನೇಕ ಹೊಸ ಸಂಗತಿಗಳನ್ನು ಹೊರಹಾಕಿವೆ. ಅವುಗಳಲ್ಲಿ ಪ್ರಮುಖವಾಗಿ ಎತ್ತುಗಳನ್ನು ಉಳುಮೆ ಹಾಗೂ ಹಸುಗಳನ್ನು ಹಾಲಿಗಾಗಿ ಬಳಸಿಕೊಂಡಿರುವುದು ಗಮನಾರ್ಹ. ಇದರಿಂದಾಗಿ ಈ ಪರಿಸರದಲ್ಲಿ ಕೃಷಿ, ಪಶುಸಂಗೋಪನೆ ಹಾಗೂ ಅದಕ್ಕೆ ಸಂಬಂಧಿಸಿದ ದನಗಾಹಿ ಆರ್ಥಿಕ ವ್ಯವಸ್ಥೆಯು ಇದ್ದಿತು ಎಂಬ ಇತ್ಯಾದಿ ಅಂಶಗಳು ತಿಳಿದುಬರುತ್ತವೆ.[೨೦೬]

ಕುರಿ ಅಥವಾ ಟಗರು


ಟಗರು ಸಸ್ತನಿ ವರ್ಗಕ್ಕೆ ಸೇರಿದ ಪ್ರಾಣಿಯಾಗಿದ್ದು ಅಗ್ನಿ ದೇವನ ವಾಹನ. ಇದು ಸ್ವಭಾವತಃ ಕಾದಾಡುವ ಪ್ರಾಣಿ. ಇವುಗಳನ್ನು ಬಳಸಿಕೊಂಡು ಹಿಂದಿನಿಂದ ಇಂದಿನವರೆಗೆ ಮನರಂಜನೆ ಪಡೆಯುತ್ತಿರುವುದು ನೋಡಬಹುದು. ಹಾಗಾಗಿ ಟಗರುಗಳ ಕಾದಾಟ ಮನರಂಜನೆಯ ಒಂದು ಭಾಗವಾಗಿ ರೂಢಿಯಲ್ಲಿದೆ. ಇಂತಹ ಕಾದಾಟದ ಒಂದು ಶಿಲ್ಪ ಮತ್ತು ಒಂಟಿ ಟಗರಿನ ಶಿಲ್ಪಗಳು ವಿಠಲ ದೇವಾಲಯದ ಮುಖಮಂಟಪದ ಅಧಿಷ್ಠಾನದಲ್ಲಿ ಕಂಡುಬರುತ್ತದೆ. ಈ ಶಿಲ್ಪದಲ್ಲಿನ ಟಗರುಗಳು ಆರ್ಟಿಯೋಡಾಕ್ಟೈಲಾ (*Artiodactyla*) ಗಣದ ಬೋವಿಡೆ (*Bovidae*) ಕುಟುಂಬಕ್ಕೆ ಸೇರಿದವುಗಳಾಗಿದ್ದು ಓವಿಸ್ ಅರಿಸ್ (*Ovis aris*) ಎಂಬುದು ಇದರ ವೈಜ್ಞಾನಿಕ ಹೆಸರು.[೨೦೭] ಹಂಪಿ ಪರಿಸರದ ಕಡೇಬಾಗಿಲು ಉತ್ಖನನದಲ್ಲಿ ಕುರಿ, ಮೇಕೆ ಮುಂತಾದ ಪ್ರಾಣಿಗಳ ಮೂಳೆಗಳು ದೊರಕಿದ್ದು ಇವುಗಳನ್ನು ಪಳಗಿಸಿ ಸಾಕು ಪ್ರಾಣಿಗಳನ್ನಾಗಿಸಿಕೊಂಡಿರುವುದು ತಿಳಿದುಬಂದಿದೆ. ಇಲ್ಲಿ ದೊರೆತಿರುವ ಕುರಿಯ ಮೂಳೆಗಳ ಅಧ್ಯಯನದಿಂದ ಇದು ಓವಿಸ್ ಅರಿಸ್ (*Ovis aris*) ತಳಿಯದೆಂದು ಧೃಡಪಟ್ಟಿರುವುದು ತಿಳಿಯುತ್ತದೆ.[೨೦೮]

ನಾಯಿ

ನಾಯಿ ಭೈರವನ ವಾಹನ. ಮಾನವನ ಸಾಕುಪ್ರಾಣಿಗಳ ವರ್ಗದಲ್ಲಿ ನಾಯಿಗೆ ಆದ್ಯತೆಯ ಸ್ಥಾನ ಸಲ್ಲುತ್ತದೆ. ಅತಿ ಪ್ರಾಚೀನ ಕಾಲದಿಂದಲೂ ನಾಯಿ ವಿಶ್ವಾಸಕ್ಕೆ, ಕೃತಜ್ಞತೆಗೆ ಸಂಕೇತವಾಗಿದೆ.



ಮುಧೋಳ ನಾಯಿ
ಗಣ : ಕಾರ್ನಿವೋರ
ಕುಟುಂಬ : ಕ್ಯಾನಿಡೆ



ಮುಧೋಳ ನಾಯಿಯ ಶಿಲ್ಪ, ಮಹಾನವಮಿ ದಿಬ್ಬ, ಹಂಪಿ





ನಾಯಿಯು ಸುಮಾರು ೧೫,೦೦೦ ವರ್ಷಗಳ ಹಿಂದೆ ಬೂದು ತೋಳಗಳ ವಂಶಾವಳಿಯಿಂದ ಬಂದಿದ್ದೆಂದು ತಿಳಿಯುತ್ತದೆ.[೨೦೯] ನಾಯಿಯು ಕಾರ್ನಿವೋರ (*Cornivora*) ಗಣದ ಕ್ಯಾನಿಡೆ (*Canidae*) ಕುಟುಂಬಕ್ಕೆ ಸೇರಿದ್ದು ಕ್ಯಾನಿಸ್‌ಲುಪುಸ್ ಫ್ಯಾಮಿಲಿರೀಸ್ (*Canislupus familiries*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೧೦] ಹಂಪಿಯ ಮಹಾನವಮಿ ದಿಬ್ಬದಲ್ಲಿನ ಬೇಟೆ ಶಿಲ್ಪಗಳಲ್ಲಿ ಮತ್ತು ಭೈರವನ ಶಿಲ್ಪಗಳಲ್ಲಿ ನಾಯಿಯನ್ನು ತೋರಿಸಲಾಗಿದೆ. ಪ್ರಸ್ತುತ ಶಿಲ್ಪಗಳಲ್ಲಿನ ನಾಯಿಯ ದೇಹ ಲಕ್ಷಣಗಳ ಆಧಾರದ ಮೇಲೆ ಇವು ಬೇಟೆ ನಾಯಿಗಳಾದ ಮುಧೋಳ ನಾಯಿಗಳೆಂದು ಗುರುತಿಸಲಾಗಿದೆ. ಹಂಪಿ ಪರಿಸರದ ಕಡೇಬಾಗಿಲು ಉತ್ಖನನದಲ್ಲಿ ಕುರಿ, ಮೇಕೆ ಮುಂತಾದ ಸಾಕು ಪ್ರಾಣಿಗಳ ಜೊತೆಗೆ ನಾಯಿಯ ಮೂಳೆಗಳು ಸಹ ದೊರಕಿವೆ. ಇಲ್ಲಿ ಸಾಕು ಪ್ರಾಣಿಗಳನ್ನು ಶವಕುಣಿಗಳಲ್ಲಿ ಹೂತಿರುವುದು ಕಂಡುಬಂದಿದೆ.[೨೧೧] ಇದರಿಂದಾಗಿ ಸಾಕು ಪ್ರಾಣಿಗಳಿಗೂ ಮತ್ತು ಅಂದಿನ ಮಾನವರಿಗೂ ಇರುವ ಅವಿನಾಭಾವ ಸಂಬಂಧವನ್ನು ಅರಿಯಲು ಸಾಧ್ಯವಾಗುತ್ತದೆ.

ಚಿಂಪಾಂಜಿ

ಸಸ್ತನಿಗಳ ಒಂದು ಮುಖ್ಯ ಗಣ ಪ್ರೈಮೇಟಾ. ಗೊರಿಲ್ಲಗಳು, ಚಿಂಪಾಂಜಿಗಳು ಮತ್ತು ಮಂಗಗಳು ಈ ಗಣದಲ್ಲಿ ಬರುತ್ತವೆ. ಈ ಗಣದ ಅತ್ಯಂತ ಪ್ರಮುಖ ಉದಾಹರಣೆ ಮಾನವ. ಇವುಗಳಲ್ಲಿ ಮನುಷ್ಯನಿಗೆ ಅತ್ಯಂತ ಸಮೀಪದ ಬಂಧುಗಳೆಂದರೆ ಗೊರಿಲ್ಲ ಮತ್ತು ಚಿಂಪಾಂಜಿಗಳು. ಕಣ್ಣುಗಳ ಹಿಂಭಾಗಕ್ಕೆ ಚಾಚಿಕೊಂಡಿರುವ ತಲೆಬುರುಡೆ, ಉದ್ದವಾದ ಕೈಗಳು, ಕೈ ಬೆರಳುಗಳಲ್ಲಿ ಹೆಬ್ಬೆರಳು ಉಳಿದೆಲ್ಲಾ ಬೆರಳುಗಳನ್ನು ಎದುರಿಸುವಂತೆ ಸುಲಭ ಚಲನೆ ಹೊಂದಿವೆ. ಇವು ಚಿಂಪಾಂಜಿಗಳ ಪ್ರಮುಖ ಲಕ್ಷಣಗಳಾಗಿವೆ.[೨೧೨] ಈ ರೀತಿಯ ಲಕ್ಷಣಗಳನ್ನು ಹೊಂದಿರುವ ಪ್ರಾಣಿಯ ಶಿಲ್ಪವೊಂದು ವಿಠಲ ದೇವಾಲಯದ ಪ್ರಾಕಾರ ಸಾಲು ಮಂಟಪದ ಕಂಬದಲ್ಲಿ ಕಂಡುಬಂದಿದ್ದು, ಈ ದೇಹ ಲಕ್ಷಣಗಳ ಆಧಾರದ ಮೇಲೆ ಇದನ್ನು ಚಿಂಪಾಂಜಿ ಎಂದು ಗುರುತಿಸಲಾಗಿದೆ. ಇದು ಪ್ರೈಮೇಟಾ (*Praimets*) ಗಣದ, ಹೋವೊನಿಡೆ (*Homonidae*) ಕುಟುಂಬಕ್ಕೆ ಸೇರಿದ್ದು ಪ್ಯಾನ್ ಟ್ರೊಗ್ಲೊಡೈಟ್ಸ್ (*Pyantroglodaites*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೧೩]



ಚಿಂಪಾಂಜಿ
ಗಣ : ಪ್ರಮೈಟಾ
ಕುಟುಂಬ : ಹೋಮೊನಿಡೆ



ಚಿಂಪಾಂಜಿ ಶಿಲ್ಪ, ಪ್ರಾಕಾರ ಸಾಲುಮಂಟಪ,
ವಿಜಯವಿಠಲ ದೇವಾಲಯ

ಮೊಸಳೆ

ಮೊಸಳೆ ಅಥವಾ ಮಕರವು ಸರೀಸೃಪಗಳ ವರ್ಗಕ್ಕೆ ಸೇರಿದ್ದು ಗಂಗಾದೇವಿಯ ಮತ್ತು ವರುಣ ದೇವನ ವಾಹನ. ಇದು ಜಲಚರ ಪ್ರಾಣಿಗಳ ರಾಜನೆಂದು ಬಣ್ಣಿಸಲ್ಪಡುವ ಜಲವಾಸಿಯಾಗಿದ್ದು ತನ್ನ ವಿಶಿಷ್ಟ ಅಂಗ ರಚನೆಗೆ ಹೆಸರುವಾಸಿ.



ಮೊಸಳೆ
ಗಣ : ಕ್ರೊಕೋಡೆಲಿಯ
ಕುಟುಂಬ : ಕ್ರೊಕೋಡೆಲಿಡೆ



ಮೊಸಳೆಯ ಶಿಲ್ಪ, ಪ್ರಾಕಾರಗೋಡೆಯ ಭಿತ್ತಿ, ಮಾಲ್ಯವಂತ ರಘುನಾಥ ದೇವಾಲಯ

ಹಂಪಿ ಪರಿಸರದಲ್ಲಿ ಪ್ರಮುಖವಾಗಿ ಮಾಲ್ಯವಂತ ರಘುನಾಥ ದೇವಾಲಯದ ಪ್ರಾಕಾರ ಗೋಡೆಯಲ್ಲಿ, ಅಚ್ಯುತರಾಯ ದೇವಾಲಯದ ಕಂಬದಲ್ಲಿ, ವಿಠಲ ದೇವಾಲಯದ ಪ್ರಾಕಾರ ಮಂಟಪದ ಅಧಿಷ್ಠಾನದಲ್ಲಿ ಹಾಗೂ ಕೃಷ್ಣ ಬಜಾರಿನ ಪುಷ್ಕರಣಿಯಲ್ಲಿ ಮೊಸಳೆಯ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಪುಷ್ಕರಣಿಯಲ್ಲಿನ ಶಿಲ್ಪದಲ್ಲಿ ಮೊಸಳೆಯು ಮೀನನ್ನು ತಿನ್ನಲು ಮುಂದಾದಂತೆ ತೋರಿಸಲಾಗಿದೆ. ಈ ಶಿಲ್ಪಗಳಲ್ಲಿನ ಮೊಸಳೆಯ ದೇಹ ಲಕ್ಷಣಗಳ ಆಧಾರದ ಮೇಲೆ ಇವು ಕ್ರೊಕೊಡೀಲಿಯ (*Crocodilia*) ಗಣದ ಕ್ರೊಕೊಡಿಲಿಡೆ (*Crocodilidae*) ಕುಟುಂಬಕ್ಕೆ ಸೇರಿದ್ದು ಕ್ರೊಕೊಡೈಲಸ್ ಪಾಲುಸ್ಟ್ರಿಸ್ (*Crocodilus palustius*) ಎಂಬುದು ಇವುಗಳ ವೈಜ್ಞಾನಿಕ ಹೆಸರಾಗಿದೆ.[೨೧೪] ವಿಠಲ ದೇವಾಲಯದಲ್ಲಿನ ಈ ಮೊಸಳೆಯ ಶಿಲ್ಪಗಳನ್ನು ಬಹುಶಃ ಪಕ್ಕದ ನದಿಯಲ್ಲಿ ಮೊಸಳೆಗಳಿವೆ ಎಂಬುದನ್ನು ಜನಸಾಮಾನ್ಯರಿಗೆ ಎಚ್ಚರಿಸುವ ಉದ್ದೇಶದಿಂದ ಶಿಲ್ಪಿಯಾದವನು ಬಿಡಿಸಿರಬಹುದೆಂದು ಅಭಿಪ್ರಾಯಪಡಲಾಗಿದೆ.

ಮೀನುಗಳು

ಸಂಪೂರ್ಣ ಜಲವಾಸಿಗಳಾದ ಮೀನುಗಳು ಕಶೇರುಕ ವರ್ಗಕ್ಕೆ ಸೇರಿದ್ದು ಶೀತರಕ್ತ ಪ್ರಾಣಿಗಳಾಗಿವೆ. ಇದು ಮತ್ಸ್ಯೇಂದ್ರನಾಥನ ವಾಹನ. ಹಂಪಿ ಪರಿಸರದಲ್ಲಿ ನೀರಿರುವ ಸ್ಥಳವನ್ನು ಸೂಚಿಸುವ ಸಂಕೇತವಾಗಿ ಮೀನನ್ನು ತೋರಿಸಲಾಗಿದೆ. ಹಾಗೆಯೇ ಜೋಡಿ ಮೀನುಗಳು ಶುಭದ ಸಂಕೇತ. ಜೈನ ಸಂಪ್ರದಾಯದ ಅಷ್ಟಮಂಗಳದಲ್ಲಿ ಜೋಡಿ ಮೀನುಗಳನ್ನು ತೋರಿಸುವ ಪರಿಪಾಠವಿದೆ. ಹೀಗೆ ಹಂಪಿ ಪರಿಸರದ ಹಲವು ಸ್ಮಾರಕಗಳಲ್ಲಿ ಮೀನಿನ ಶಿಲ್ಪಗಳನ್ನು ಕೆತ್ತಲಾಗಿದೆ. ಆದರೆ ಮಾಲ್ಯವಂತ ರಘುನಾಥ ದೇವಾಲಯದ ಪ್ರಾಕಾರ ಗೋಡೆಯಲ್ಲಿ ಸಿಹಿ ನೀರು ಮತ್ತು ಉಪ್ಪು ನೀರಿನಲ್ಲಿ ವಾಸಿಸುವ ಹಲವು ತಳಿಗಳ ಮೀನುಗಳನ್ನು

ತೋರಿಸಿರುವುದು ವಿಶೇಷವಾಗಿದೆ. ಇಲ್ಲಿನ ಶಿಲ್ಪಗಳಲ್ಲಿನ ಮೀನುಗಳ ದೇಹ ಲಕ್ಷಣಗಳ ಆಧಾರದ ಮೇಲೆ ಅವು ಯಾವ ತಳಿಗೆ ಸೇರಿದವುಗಳೆಂದು ಗುರುತಿಸಲಾಗಿದೆ. ಪ್ರಮುಖವಾಗಿ ಇಲ್ಲಿ ಕ್ಲೂಪಿಯಿಫಾರ್ಮಿಸ್ ಗಣದ ಕ್ಲೂಪಿಯಿಡೆ ಕುಟುಂಬಕ್ಕೆ ಸೇರಿದ ಪಾಲಾಸ ಅಥವಾ ಪಾಟಿಯ ಮೀನು (ಹಿಲ್ಸ ಇಲಿಷ–*Hilsa ilisa*), ಸಿಪ್ರಿನಿಫಾರ್ಮಿಸ್ ಗಣದ ಸಿಪ್ರಿನಿಡೆ ಕುಟುಂಬಕ್ಕೆ ಸೇರಿದ ಗೆಂಡೆ ಮೀನು ಅಥವಾ ಕರ್ನಾಟಕದ ಕಾರ್ಪ (ಪುಂಟಿಯಸ್ ಕರ್ನಾಟಿಕಸ್–*Puntius karnaticus*), ಕಲ್ಲಂಗಡಿ ಬಾರ್ಸ್ (ಪುಂಟಿಯಸ್ ಫೇಸಿಯೇಟಸ್–*Puntius feciatus*), ಕಾಟ್ಲಾ ಮೀನು (ಕಾಟ್ಲಾ ಕಾಟ್ಲಾ–*Katla katla)*, ಕಾವೇರಿ ಬಿಳಿ ಕಾರ್ಪ ಮೀನು (ಸರ್ಹಿನಸ್ ಸಿರ್ಹೊನಸ್–*Sarhinus sirhonus)*, ಕುರ್ರಿ ಮೀನು (ಗೊನೊಪ್ರೋಕ್ಟೊಪ್ಟೆರಸ್ ಕೊಲುಸ್–*Gonoproctopterus kolus)*, ಮ್ರಿಗಾಲ ಮೀನು (ಸರ್ಹಿನಸ್ ಮ್ರಿಗಾಲ–*Sarhinus mrigala)*, ಹಳದಿ ಮಶೀರ್ ಮೀನು (ಟಾರ್ ಕುದ್ರಿ–*Tar kudri)* ಗಳು ಕಂಡುಬರುತ್ತವೆ. ಹಾಗೆಯೇ ಸೈಲೂರಿಡಿಫಾರ್ಮಿಸ್ (*Cyluridiformes*) ಗಣದ ಸೈಲೂರಿಡೆ (*Cyluridae*) ಕುಟುಂಬದ ಭಾರತದ ಬೆಣ್ಣೆ ಮರ್ಜಾಲ ಮೀನು (ಓಂಪೋಕ್ ಬೈಮ್ಯಾಕುಲೇಟಸ್–*Omphok baimaculetus)*, ಪರ್ಸಿಫಾರ್ಮಿಸ್ ಗಣದ ನಾಂಡಿಡೆ ಕುಟುಂಬದ ಬಣ್ಣದ ನಾಂಡುಸ್ ಮೀನು (ನಾಂಡುಸ್ ನಾಂಡುಸ್–*Nandus nandus*), ಇದೇ ಗಣದ ಸಿಕ್ಲಿಡೆ (*Syclidae*) ಕುಟುಂಬದ ಕರಿ ಮೀನು (ಎಟ್ರೊಪ್ಲಸ್ ಸರತೆನ್ಸಿಸ್–*Etroplus saratencies*), ಲೋಫಿಫಾರ್ಮಿಸ್ (*Lofiformes*) ಗಣದ ಲೋಫಿಡೆ (*Lofidae*) ಕುಟುಂಬದ ಗಾಳದ ಮೀನು (ಆಂಟಿನ್ನೇರಿಯಸ್ ಕಮ್ಮೆರ್ಸೋನಿ–*Antianerius kammarsoni*), ಟೆಟ್ರೊಡಾಂಟಿಫಾರ್ಮಿಸ್ (*Tetrodantiformes*) ಗಣದ ಟೆಟ್ರೊಡಾಂಟಿಡೆ (*Tetrodantidae*) ಕುಟುಂಬದ ಉಂಡೆ ಮೀನು(ಟೆಟ್ರೂಡಾನ್ ಕುಲ್‌ಕುಟಿಯು–*Tetrudan kulkutia*)ಗಳ ಇತರೆ ತಳಿಗಳು ಪ್ರಮುಖವಾಗಿ ಕಂಡುಬಂದಿರುತ್ತವೆ.[೨೧೫] ಇದರಿಂದಾಗಿ ಈ ಶಿಲ್ಪಗಳನ್ನು ಬಿಡಿಸಿದ ಶಿಲ್ಪಿಗೆ ಈ ಮೇಲಿನ ಎಲ್ಲಾ ತಳಿಗಳ ಪರಿಚಯವಿತ್ತೆಂಬುದು ತಿಳಿದುಬರುತ್ತದೆ. ಹಂಪಿ ಪರಿಸರದ ಕಡೇಬಾಗಿಲು ಉತ್ಖನನದಲ್ಲಿ ಮೀನಿನ ಮೂಳೆಗಳು ದೊರೆತ್ತಿರುವುದು ಗಮನಾರ್ಹ.

ಕಪ್ಪೆ

ಜೀವ ವಿಕಾಸದಲ್ಲಿ ಜಲ ತೊರೆದು ನೆಲ ಏರಿದ ಪ್ರಥಮ ಜೀವಿ ಕಪ್ಪೆ. ಇದು ಉಭಯವಾಸಿ ವರ್ಗಕ್ಕೆ ಸೇರಿದ್ದು ಹಂಪಿ ಪರಿಸರದ ವಿಠಲ ಮತ್ತು ಮಾಲ್ಯವಂತ ರಘುನಾಥ ದೇವಾಲಯಗಳಲ್ಲಿ ಒಂದೊಂದರಂತೆ ಎರಡು ಶಿಲ್ಪಗಳು ಮಾತ್ರ ಕಂಡುಬಂದಿವೆ. ವಿಠಲ ದೇವಾಲಯದ ಶಿಲ್ಪದಲ್ಲಿನ ಕಪ್ಪೆಯ ದೇಹ ಲಕ್ಷಣಗಳ ಆಧಾರದ ಮೇಲೆ ಇದು ಅನೂರ *(Anura)* ಗಣದ, ರಾನಿಡೆ *(Ranidae)* ಕುಟುಂಬಕ್ಕೆ ಸೇರಿದ ಗೂಳಿ ಕಪ್ಪೆಯೆಂದು ಗುರುತಿಸಲಾಗಿದ್ದು ರಾನ ಟೈಗರಿನ *(Rana taigarina)* ಎಂಬುದು ಇದರ ವೈಜ್ಞಾನಿಕ ಹೆಸರು. ಅದೇ ರೀತಿ ಮಾಲ್ಯವಂತ ರಘುನಾಥ ದೇವಾಲಯದ ಪ್ರಾಕಾರ ಗೋಡೆಯಲ್ಲಿ ಕಾಳಿಂಗ ಸರ್ಪವೊಂದು ಕಪ್ಪೆಯನ್ನು ತಿನ್ನಲು ಮುಂದಾಗಿದೆ. ಇಂತಹದೇ ಶಿಲ್ಪ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ತಾಡಪತ್ರಿಯ ಚಿಂತಲ ವೆಂಕಟರಮಣ ದೇವಾಲಯದ ಪ್ರಾಕಾರ ಗೋಡೆಯ ಹೊರಭಾಗದಲ್ಲಿ ಕಂಡುಬರುತ್ತದೆ. ಈ ಕಪ್ಪೆಗಳ ದೇಹ ಲಕ್ಷಣಗಳ ಆಧಾರದ ಮೇಲೆ ಇವು ಅನೂರ *(Anura)* ಗಣದ, ಬ್ಯೂಫೊನಿಡೆ *(Buiponidae)* ಕುಟುಂಬಕ್ಕೆ ಸೇರಿದ ನೆಲಗಪ್ಪೆಯೆಂದು

ಗುರುತಿಸಲಾಗಿದೆ. ಬುಪೋ ಮೆಲನೊಸ್ಟಿಕ್ಟಸ್ *(Bupo melanostictus)* ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೧೬]

ಏಡಿ

ಏಡಿಗಳು ಸಂಧಿಪದಿಗಳಲ್ಲಿ ಕಠಿಣಚರ್ಮಗಳು ಎಂಬ ಗುಂಪಿಗೆ ಸೇರುತ್ತವೆ. ಇದಕ್ಕೆ ಕಾರಣ ಅವುಗಳ ದೇಹವನ್ನಾವರಿಸಿರುವ ಕೈಟಿನ್ ಎಂಬ ರಾಸಾಯನಿಕದಿಂದಾದ ಕವಚ.[೨೧೭] ಹಾಗೆಯೇ ಒಂದು ಜೊತೆ ಕೊಂಡಿಗಳನ್ನು ಹೊಂದಿದ್ದು ಕಾಲುಗಳ ಕೀಲುಗಳ ಜೋಡಣೆಯಿಂದ ಇವು ಒಂದೇ ಕಡೆಗೆ ಚಲಿಸುತ್ತವೆ. ಹಂಪಿಯ ವಿಠಲ ದೇವಾಲಯದ ಉತ್ತರ ದಿಕ್ಕಿನ ಪ್ರಾಕಾರ ಮಂಟಪದ ಕಂಬವೊಂದರಲ್ಲಿ ಏಡಿಯ ಶಿಲ್ಪವನ್ನು ಕೆತ್ತಲಾಗಿದೆ. ಇತ್ತೀಚೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯವರು ಹಂಪಿಯ ಕೆಲವು ಕಡೆ ಜೀರ್ಣೋದ್ಧಾರ ಕಾರ್ಯ ಕೈಗೊಂಡಿದ್ದು ಮುಖ್ಯವಾಗಿ ಶ್ರೀವಿರೂಪಾಕ್ಷ ದೇವಾಲಯ ಆವರಣದ ಆಗ್ನೇಯ ದಿಕ್ಕಿನಲ್ಲಿ ಪತ್ತೆಯಾಗಿರುವ ಪುಷ್ಕರಣೆಯಲ್ಲಿ ಹಾಗೂ ದೇವಾಲಯ ಪಕ್ಕದ ನದಿತೀರದಲ್ಲಿ ಇತ್ತೀಚೆಗೆ ಸಂರಕ್ಷಣೆಗೊಂಡ ಕೋಟೆಯ ಭಿತ್ತಿಯಲ್ಲಿ ಒಂದೊಂದರಂತೆ ಏಡಿ ಶಿಲ್ಪಗಳು ಕಂಡುಬಂದಿವೆ. ಹಂಪಿ ಪರಿಸರದಲ್ಲಿ ಒಟ್ಟು ಮೂರು ಶಿಲ್ಪಗಳು ಕಂಡುಬಂದಿದ್ದು ಅಪರೂಪದ ಶಿಲ್ಪಗಳಾಗಿ ಗಮನಾರ್ಹವಾಗಿದೆ.



ಏಡಿ
ಕಠಿಣ ಚರ್ಮಿಗಳ ವರ್ಗ



ಏಡಿಯ ಶಿಲ್ಪ, ಪ್ರಾಕಾರ ಮಂಟಪ,
ವಿಜಯವಿಠಲ ದೇವಾಲಯ, ಹಂಪಿ

ಜೇಡರಹುಳು

ಚೇಳುಗಳ ಜಾತಿಗೆ ಸೇರಿದ ಸಂಧಿಪದಿ ಪ್ರಾಣಿಗಳಾದ ಜೇಡಗಳು ನೆಲದ ಮೇಲೆ ಯಾವುದೇ ವಸ್ತುವನ್ನು ಆಧರಿಸಿ ತಮ್ಮ ಕಲಾತ್ಮಕ ಬಲೆಗಳನ್ನು ರಚಿಸಬಲ್ಲವು. ಇವು ಅಂಟಾರ್ಟಿಕಾವನ್ನು ಹೊರತುಪಡಿಸಿ ಪ್ರತಿ ಖಂಡದಲ್ಲೂ ವಿಶ್ವದಾದ್ಯಂತ ಕಂಡುಬರುತ್ತವೆ. ಹಂಪಿ ಪರಿಸರದಲ್ಲಿ ವಿರೂಪಾಕ್ಷ ದೇವಾಲಯದ ಅಂತರಾಳದ ದಕ್ಷಿಣ ಬದಿಯ ಹೊರಭಾಗದ ಭಿತ್ತಿಯಲ್ಲಿ ಮತ್ತು ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯದ ನವರಂಗದ ಕಂಬವೊಂದರಲ್ಲಿ ಜೇಡರಹುಳು ಲಿಂಗಕ್ಕೆ ಆಶ್ರಯ



ನೀಡಿರುವಂತೆ ತೋರಲಾಗಿರುವ ಎರಡು ಶಿಲ್ಪಗಳು ಮಾತ್ರ ಕಂಡುಬರುತ್ತವೆ. ಈ ಶಿಲ್ಪಗಳಲ್ಲಿನ ಜೇಡರಹುಳು ಆರ್ನಿಡೇ *(Arnidae)* ಗಣದ, ಅಗಲೇನಿಡೆ *(Agalenidae)* ಕುಟುಂಬಕ್ಕೆ ಸೇರಿದ ಮನೆಯ ಜೇಡರಹುಳು ಎಂದು ಗುರುತಿಸಲಾಗಿದ್ದು ಟೆಗನೇರಿಯ ಡೊಮೆಸ್ಟಿಕ *(Teganeria domestica)* ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೧೮]

ಪಕ್ಷಿಗಳ ಬಿಡಿ ಶಿಲ್ಪಗಳು: ಹಂಪಿ ಪರಿಸರದ ಶಿಲ್ಪಗಳಲ್ಲಿ ಹಲವು ಪಕ್ಷಿಗಳ ಬಿಡಿ ಶಿಲ್ಪಗಳನ್ನು ಕಂಡರಿಸಲಾಗಿದ್ದು ಪ್ರಮುಖವಾದವುಗಳನ್ನು ಇಲ್ಲಿ ವಿವರಿಸಲಾಗಿದೆ.

ನವಿಲು

ನವಿಲು ಕಾರ್ತಿಕೇಯನ ಮತ್ತು ಬ್ರಹ್ಮನ ವಾಹನ. ಇದು ತನ್ನ ವಿಶಿಷ್ಟ ಕೂಗು ಮತ್ತು ನರ್ತನಕ್ಕೆ ಹೆಸರುವಾಸಿಯಾಗಿದ್ದು ನಮ್ಮ ದೇಶದ ರಾಷ್ಟ್ರೀಯ ಪಕ್ಷಿಯಾಗಿ ಮಹತ್ವವನ್ನು ಪಡೆದುಕೊಂಡಿದೆ. ಹಂಪಿ ಪರಿಸರದಲ್ಲಿ ನವಿಲಿನ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿದ್ದು ದೇವಾಲಯಗಳ ಕಂಬಗಳಲ್ಲಿ ಹೆಚ್ಚಾಗಿ ಕಂಡರಿಸಲ್ಪಟ್ಟಿವೆ. ಕೆಲವು ಶಿಲ್ಪಗಳಲ್ಲಿ ನವಿಲುಗಳು ಬಾಯಲ್ಲಿ ಹಾವನ್ನು ಹಿಡಿದಿದ್ದರೆ ಮತ್ತೆ ಕೆಲವು ಹೂಬಳ್ಳಿಯನ್ನು ಹಿಡಿದಿರುವಂತೆ ತೋರಲಾಗಿದೆ. ಶಿಲ್ಪಿಯಾದವನು ಇವುಗಳನ್ನು ದೇವಾಲಯದ ಅಲಂಕರಣೆ ದೃಷ್ಟಿಯಿಂದ ಅಥವಾ ಈ ಪರಿಸರದಲ್ಲಿ ಅಧಿಕ ಸಂಖ್ಯೆಯಲ್ಲಿ ನವಿಲುಗಳಿವೆ ಎಂಬುದನ್ನು ತಿಳಿಸುವ ಉದ್ದೇಶದಿಂದ ಬಿಡಿಸಿರಬಹುದು. ಹಂಪಿ ಪರಿಸರದ ಶಿಲ್ಪಗಳಲ್ಲಿ ಗಂಡು ಮತ್ತು ಹೆಣ್ಣು ನವಿಲಿನ ಶಿಲ್ಪಗಳನ್ನು ಕಂಡರಿಸಲಾಗಿದ್ದು ಇವು ಗ್ಯಾಲಿಫಾರ್ಮಿಸ್ *(Galliparmis)* ಗಣದ, ಪ್ಯಾಸಿಯಾನಿಡೆ *(Pasianidae)* ಕುಟುಂಬಕ್ಕೆ ಸೆರಿದ ಭಾರತದ ನವಿಲುಗಳೆಂದು ಗುರುತಿಸಲಾಗಿದ್ದು ಪಾವೊಕ್ರಸ್ಟೇಟಸ್ *(Pavokrastetus)* ಎಂಬುದು ಇದರ ವೈಜ್ಞಾನಿಕ ಹೆಸರು.[೨೧೯]

ಹಂಸ

ಹಂಸವು ಬ್ರಹ್ಮ ಮತ್ತು ಸರಸ್ವತಿಯ ವಾಹನವಾಗಿದ್ದು ರಕ್ಷಣೆ, ಸಂತೋಷ, ಅದೃಷ್ಟ ಮತ್ತು ಶುದ್ಧತೆಯ ಸಂಕೇತವಾಗಿದೆ. ಹಂಪಿ ಪರಿಸರದ ವಿರೂಪಾಕ್ಷ, ವಿಠಲ, ಕೃಷ್ಣ, ಅಚ್ಯುತರಾಯ ದೇವಾಲಯಗಳು ಮತ್ತು ಕುದುರೆಗೊಂಬೆ ಮಂಟಪ, ಗೆಜ್ಜಲ ಮಂಟಪ ಮುಂತಾದ ಇತರೆ ಸ್ಮಾರಕಗಳ ಅಧಿಷ್ಠಾನ, ಕಂಬ, ಭಿತ್ತಿ ಮತ್ತು ದ್ವಾರಗೋಪುರಗಳ ಅಲಂಕಾರ ಪಟ್ಟಿಕೆಗಳಲ್ಲಿ ಹಂಸಗಳನ್ನು ಪ್ರಮುಖವಾಗಿ ಕಂಡರಿಸಲಾಗಿದೆ. ಶಿಲ್ಪಗಳಲ್ಲಿನ ಹಂಸಗಳು ಅನ್ಸಾರಿಫಾರ್ಮಿಸ್ *(Ansariformes)* ಗಣದ, ಅನ್ಟಿಡೆ *(Antidae)* ಕುಟುಂಬಕ್ಕೆ ಸೇರಿದ್ದು ಸೈಗ್ನಸ್ ಸೈಗ್ನಸ್ *(Saignus saignus)* ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೨೦]

ಗಿಳಿ


ಗಿಳಿಯು ಮನ್ಮಥನ ವಾಹನ. ಗಿಳಿಗಳಲ್ಲಿ ೮೨ ವರ್ಗಗಳಿದ್ದು ೩೮೩ ತಳಿಗಳ ಪಕ್ಷಿಗಳಿವೆ. ಇವುಗಳು ಉಷ್ಣವಲಯದ ಎಲ್ಲಾ ಪ್ರದೇಶಗಳಲ್ಲಿ ವಾಸಿಸುತ್ತವೆ. ಬಲವಾದ ಬಾಗಿದ ಕೊಕ್ಕು, ನೇರ ನಿಲುವು, ಬಲಶಾಲಿ ಕಾಲುಗಳು ಗಿಳಿಯ ವಿಶೇಷ ಲಕ್ಷಣಗಳಾಗಿವೆ. ಹಂಪಿಯ ವಿಠಲ, ವಿರೂಪಾಕ್ಷ,



ನವಿಲು
ಗಣ : ಗ್ಯಾಲಿಫಾರ್ಮಿಸ್
ಕುಟುಂಬ : ಫಸಿಯಾನಿಡೆ




ನವಿಲಿನ ಶಿಲ್ಪ, ನೂರು ಕಂಬಗಳ ಮಂಟಪ,
ಅಚ್ಯುತರಾಯ ದೇವಾಲಯ, ಹಂಪಿ




ಹಂಸ
ಗಣ : ಅನ್ಸಾರಿಫಾರ್ಮಿಸ್
ಕುಟುಂಬ : ಅನ್ಟಿಡೆ



ಹಂಸ ಶಿಲ್ಪ, ನೂರು ಕಂಬಗಳ ಮಂಟಪ,
ಅಚ್ಯುತರಾಯ ದೇವಾಲಯ



ಗಿಳಿ
ಗಣ : ಸಿಟ್ಟಾಸಿಫಾರ್ಮಿಸ್
ಕುಟುಂಬ : ಸಿಟ್ಟಾಕೊಯಿಡಿಯಾ



ಗಿಳಿ ಶಿಲ್ಪ, ನೂರು ಕಂಬಗಳ ಮಂಟಪ,
ಅಚ್ಯುತರಾಯ ದೇವಾಲಯ









ಅಚ್ಯುತರಾಯ, ಕೃಷ್ಣ ಬಜಾರಿನ ಸಾಲುಮಂಟಪದ ಕಂಬದಲ್ಲಿ, ನೆಲಸ್ತರ ಶಿವ ದೇವಾಲಯದ ಕಲ್ಯಾಣಮಂಟಪದ ಕಂಬದಲ್ಲಿ ಮತ್ತು ಮಹಾನವಮಿ ದಿಬ್ಬ ಹಾಗೂ ಕಮಲಾಪುರದ ನಗರೇಶ್ವರ ದೇವಾಲಯ, ತಿಮ್ಮಲಾಪುರದ ವೇಣುಗೋಪಾಲ ದೇವಾಲಯ ಮುಂತಾದ ಪ್ರಮುಖ ಸ್ಮಾರಕಗಳಲ್ಲಿ ಗಿಳಿಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಶಿಲ್ಪಿಯು ಕೆಲವು ಕಡೆ ಗಿಳಿಗಳು ಲೈಂಗಿಕ ಕ್ರಿಯೆಯಲ್ಲಿ ತೋಡಗಿರುವಂತೆ ತೋರಿಸಿದ್ದಾನೆ. ಈ ಶಿಲ್ಪಗಳಲ್ಲಿನ ಗಿಳಿಗಳು ಸಿಟ್ಟಾಸಿಫಾರ್ಮಿಸ್ *(Sittasiformes)* ಗಣದ, ಸಿಟ್ಟಾಕೊಯಿಡಿಯಾ *(Sittacoiedea)* ಕುಟುಂಬಕ್ಕೆ ಸೇರಿದ ದೊಡ್ಡ ಗಿಳಿಗಳೆಂದು ಗುರುತಿಸಲಾಗಿದೆ. ಸಿಟ್ಟಕ್ಯುಲ ಯುಪಟ್ರಿಯ *(Sittacula upatria)* ಎಂಬುದು ಇದರ ವೈಜ್ಞಾನಿಕ ಹೆಸರು.[೨೨೧]

ಸಣ್ಣ ರಾಜಹಂಸ

ಇದು ಕೊಕ್ಕರೆ ಜಾತಿಗೆ ಸೇರಿದ ಪಕ್ಷಿಯಾಗಿದ್ದು ಕೆರೆ, ಸರೋವರದ ಹಿನ್ನೀರು ಮುಂತಾದ ಕಡೆ ಇದರ ವಾಸ. ಇದು ಅಲೆಮಾರಿ ಪಕ್ಷಿಯಾಗಿದ್ದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತದೆ. ಬಾಗಿದ ದಪ್ಪ ಕೊಕ್ಕು, ಉದ್ದನೆಯ ಕತ್ತು ಮತ್ತು ಕಾಲುಗಳು, ದೊಡ್ಡ ಎದೆ ಈ ಪಕ್ಷಿಯ ಪ್ರಮುಖ ಲಕ್ಷಣಗಳಾಗಿವೆ. ಈ ರೀತಿಯ ಲಕ್ಷಣಗಳನ್ನು ಹೊಂದಿರುವ ಶಿಲ್ಪವೊಂದು ವಿಠಲ ದೇವಾಲಯದ ಹೋರಭಾಗದ ಪ್ರಾಕಾರ ಸಾಲು ಮಂಟಪದ ಕಂಬದಲ್ಲಿ ಕಂಡುಬರುತ್ತದೆ. ಈ ಹಿನ್ನೆಯಲ್ಲಿ ಇದನ್ನು ಸಣ್ಣ ರಾಜಹಂಸ ಎಂದು ಗುರುತಿಸಲಾಗಿದೆ. ಇದು ಫಿನಿಕೊಪ್ಟೊಫಾರ್ಮಿಸ್ *(Finikoptoformes)* ಗಣದ, ಫಿನಿಕೋಪ್ಟೋರಿಡೆ *(Finikoptoridae)* ಕುಟುಂಬಕ್ಕೆ ಸೇರಿದ್ದು ಪೋನಿಕೊಂನೆಯಸ್ ಮೈನರ್ *(Fonikonies mainar)* ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೨೨] ಹಂಪಿ ಪರಿಸರದಲ್ಲಿ ರಾಜಹಂಸ ಪಕ್ಷಿಯ ಏಕೈಕ ಶಿಲ್ಪ ಇದಾಗಿದೆ.



. ಸಣ್ಣ ರಾಜಹಂಸ
ಗಣ : ಫಿನಿಕೊಪ್ಟೊಫಾರ್ಮಿಸ್
ಕುಟುಂಬ : ಫಿನಿಕೊಪ್ಟೋರಿಡೆ



ಸಣ್ಣ ರಾಜಹಂಸ ಶಿಲ್ಪ, ಪ್ರಾಕಾರ ಮಂಟಪ,
ವಿಜಯವಿಠಲ ದೇವಾಲಯ, ಹಂಪಿ

ನೀರು ಕಾಗೆ

ನೀರು ಕಾಗೆಯು ಪಕ್ಷಿ ವರ್ಗಕ್ಕೆ ಸೇರಿದ್ದು ಹಂಪಿಯ ಅಚ್ಯುತರಾಯ ದೇವಾಲಯದ ಮುಖಮಂಟಪ ಕಂಬದಲ್ಲಿ ಕಂಡುಬರುತ್ತದೆ. ಶಿಲ್ಪದಲ್ಲಿನ ಪಕ್ಷಿಯ ದೇಹ ಲಕ್ಷಣಗಳ ಆಧಾರದ ಮೇಲೆ

ಅದನ್ನು ನಿರು ಕಾಗೆ ಎಂದು ಗುರುತಿಸಲಾಗಿದೆ. ಇದು ಸೂಲಿಫಾರ್ಮಿಸ್ *(Suliformes)* ಗಣದ ಕಾರ್ಮೊರಂಟ್ *(Karmorant)* ಕುಟುಂಬಕ್ಕೆ ಸೇರಿದ್ದು ಫೆಲಾಕ್ರೊಕೊರಾಕ್ಸ್ ಪ್ಯೂಸಿಕೊಲಿಸ್ *(Phelacrocoracks pusikolies)* ಎಂಬುದು ಇದರ ವೈಜ್ಞಾನಿಕ ಹೆಸರು.[೨೨೩]



ನೀರು ಕಾಗೆ
ಗಣ : ಸೂಲಿಫಾರ್ಮಿಸ್
ಕುಟುಂಬ : ಕಾರ್ಮೊರಂಟ್



ನೀರು ಕಾಗೆಯ ಶಿಲ್ಪ, ಮುಖಮಂಟಪದ ಕಂಬ,
ಅಚ್ಯುತರಾಯ ದೇವಾಲಯ, ಹಂಪಿ

ಕಂದು ಸೀಮೆ ಕಾಗೆ

ಇದು ಪಕ್ಷಿ ವರ್ಗಕ್ಕೆ ಸೇರಿದ್ದು ಜಲಸಸ್ಯವಿರುವ ನಾಳ, ಕೊಳ, ಕೆರೆ ಕಟ್ಟೆಗಳು ಇರುವಲ್ಲಿ ವಾಸವಿರುತ್ತದೆ. ಈ ಪಕ್ಷಿಯ ಶಿಲ್ಪವು ಹಂಪಿಯ ಅಚ್ಯುತರಾಯ ದೇವಾಲಯದ ಉತ್ತರದ ಪ್ರವೇಶ ದ್ವಾರದ ಪಟ್ಟಿಯಲ್ಲಿ ಕಂಡರಿಸಲ್ಪಟ್ಟ ಏಕೈಕ ಶಿಲ್ಪವಾಗಿದೆ. ಈ ಪಕ್ಷಿಯ ದೇಹ ಲಕ್ಷಣಗಳ ಆಧಾರದ ಮೇಲೆ ಇದನ್ನು ಕಂದು ಸೀಮೆ ಕಾಗೆಯೆಂದು ಗುರುತಿಸಲಾಗಿದ್ದು ಇದು ಗ್ರೂಯಿಫಾರ್ಮಿಸ್ *(Gruieformes)* ಗಣದ, ರ್‍ಯಾಲಿಡೆ *(Raylidae)* ಕುಟುಂಬಕ್ಕೆ ಸೇರಿದ್ದಾಗಿದೆ. ಅಮ್ರೊರಿನಿಸ್ ಅಕೂಲ *(Amrories akoola)* ಎಂಬುದು ಇದರ ವೈಜ್ಞಾನಿಕ ಹೆಸರು.[೨೨೪]



ಕಂದು ಸೀಮೆ ಕಾಗೆ
ಗಣ : ಗ್ರೂಯಿಫಾರ್ಮಿಸ್
ಕುಟುಂಬ : ರ್‍ಯಾಲಿಡೆ



ಕಂದು ಸೀಮೆ ಕಾಗೆ ಶಿಲ್ಪ, ಉತ್ತರದ ಪ್ರವೇಶ
ದ್ವಾರ, ಅಚ್ಯುತರಾಯ ದೇವಾಲಯ, ಹಂಪಿ







ಚುಕ್ಕೆ ಕೊಕ್ಕು ಬಾತು

ಇದು ಪಕ್ಷಿ ವರ್ಗಕ್ಕೆ ಸೇರಿದ್ದು ಇವುಗಳನ್ನು ಕೆರೆ ಸರೋವರ ಕೊಳ ಇತ್ಯಾದಿಗಳಲ್ಲಿ ಕಾಣಬಹುದು. ಇದು ಹಂಪಿಯ ಅಚ್ಯುತರಾಯ ದೇವಾಲಯದ ಮುಖಮಂಟಪದ ಕಂಬವೊಂದರಲ್ಲಿ ಕಂಡುಬರುವ ಏಕೈಕ ಶಿಲ್ಪವಾಗಿದೆ. ಶಿಲ್ಪದಲ್ಲಿನ ಪಕ್ಷಿಯ ದೇಹ ಲಕ್ಷಣಗಳ ಆಧಾರದ ಮೇಲೆ ಇದು ಅನ್ಸೂರಿಫಾರ್ಮಿಸ್ *(Ansuriformes)* ಗಣದ, *(Antidae)* ಅನ್ಟಿಡೆ ಕುಟುಂಬಕ್ಕೆ ಸೇರಿದ್ದು ಅನಾಸ್ ಪೊಸಿಲೊರ್ಹಿಂಕ *(Anas Fosilorinca)* ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೨೫] ಅದೇ ರೀತಿ ಮಾಲ್ಯವಂತ ರಘುನಾಥ ದೇವಾಲಯದ ಕಲ್ಯಾಣಮಂಟಪದ ಕಂಬವೊಂದರಲ್ಲಿ ಮತ್ತು ಜಂಬುನಾಥನಹಳ್ಳಿಯ ಜಂಬುನಾಥೇಶ್ವರ ದೇವಾಲಯದ ಕಂಬದಲ್ಲಿ ಇದೇ ಕುಟುಂಬಕ್ಕೆ ಸೇರಿದ ಮರಬಾತುವಿನ ಶಿಲ್ಪ ಕಂಡುಬಂದಿದ್ದು ಡೆಂಡ್ರೊಸಿಗ್ನಾ ಜವಾನಿಕ *(Dendrosigna javanika)* ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೨೬] ಬಾತುಗಳು ಸ್ವಾತಂತ್ರ್ಯ, ಸಂತೋಷ, ನಮ್ರತೆ ಮತ್ತು ಹೊಂದಾಣಿಕೆಯ ಸಂಕೇತಗಳಾಗಿವೆ. ಈ ಹಿನ್ನೆಲೆಯಲ್ಲಿ ಮತ್ತು ಅಲಂಕರಣೆ ಹಿನ್ನೆಲೆಯಲ್ಲಿ ಇಲ್ಲಿನ ಸ್ಮಾರಕಗಳಲ್ಲಿ ಈ ಶಿಲ್ಪಗಳನ್ನು ಕೆತ್ತಿರುವ ಸಾಧ್ಯತೆಗಳಿವೆ.



ಚುಕ್ಕೆ ಕೊಕ್ಕು ಬಾತು
ಗಣ : ಅನ್ಸೂರಿಫಾರ್ಮಿಸ್
ಕುಟುಂಬ : ಅನ್ಟಿಡೆ



ಮುಖಮಂಟಪದ ಕಂಬ, ಅಚ್ಯುತರಾಯ ದೇವಾಲಯ, ಹಂಪಿ

ಪಾರಿವಾಳ

ಪಾರಿವಾಳವು ಮನುಷ್ಯನ ಜೊತೆಗೆ ಬದುಕುವ ಪಕ್ಷಿಯಾಗಿದ್ದು ಸಾಮಾನ್ಯವಾಗಿ ಹಾಳು ಬಿದ್ದ ಮನೆ, ದೇವಾಲಯಗಳು, ಎತ್ತರದ ಬಂಡೆಗಳು, ಹಳ್ಳಿಗಾಡು, ಪಟ್ಟಣ ಮುಂತಾದ ಕಡೆ ವಾಸ ಮಾಡುತ್ತದೆ. ಹಂಪಿ ಪರಿಸರದಲ್ಲಿ ಪಾರಿವಾಳದ ಶಿಲ್ಪಗಳು ಮಹಾನವಮಿ ದಿಬ್ಬ, ಅಚ್ಯುತರಾಯ ದೇವಾಲಯದ ಮುಖಮಂಟಪ ಮತ್ತು ನೂರು ಕಂಬಗಳ ಮಂಟಪದಲ್ಲಿ ಹಾಗೂ ತಿಮ್ಮಲಾಪುರದ ಶಿವ ದೇವಾಲಯದ ಮುಖಮಂಟಪದ ಕಂಬದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಶಿಲ್ಪಗಳಲ್ಲಿನ ಪಕ್ಷಿಯ ದೇಹ ಲಕ್ಷಣಗಳ ಆಧಾರದ ಮೇಲೆ ಇವು ಪಕ್ಷಿ ವರ್ಗದ ಕೊಲೋಬಿಫಾರ್ಮಿಸ್ *(Kolobiformes)* ಗಣದ ಕೊಲಂಬಿಡೆ *(Kolambidae)* ಕುಟುಂಬಕ್ಕೆ ಸೇರಿದವುಗಳೆಂದು ಗುರುತಿಸಲಾಗಿದ್ದು ಕೋಲಂಬ ಲಿವಿಯಾ *(Kolamba*

livia) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೨೭] ಪಾರಿವಾಳಗಳನ್ನು ಪ್ರೀತಿ, ಶಾಂತಿ ಮತ್ತು ಸಂದೇಶದ ಸಂಕೇತಗಳಾಗಿದ್ದರಿಂದ ಇಲ್ಲಿ ಅವುಗಳ ಶಿಲ್ಪಗಳನ್ನು ಕಂಡರಿಸಿರಬಹುದು.



ಪಾರಿವಾಳ
ಗಣ : ಕೊಲಂಬಿಫಾರ್ಮಿಸ್
ಕುಟುಂಬ : ಕೊಲಂಬಿಡೆ



ಮುಖಮಂಟಪದ ಕಂಬ,
ಅಚ್ಯುತರಾಯ ದೇವಾಲಯ, ಹಂಪಿ

ಬೂದು ಕೊಕ್ಕರೆ

ಪಕ್ಷಿ ವರ್ಗಕ್ಕೆ ಸೇರಿದ ಕೊಕ್ಕರೆಯು ಉದ್ದ ಕಾಲಿನ ಪಕ್ಷಿ. ಇದು ಸಾಮಾನ್ಯವಾಗಿ ಜವುಗು ಪ್ರದೇಶ, ಕೆರೆ, ಆಳವಿಲ್ಲದೆ ನಿಧಾನವಾಗಿ ಹರಿಯುವ ನದಿಗಳಲ್ಲಿ ವಾಸ ಮಾಡುತ್ತದೆ. ಚೂಪು ಮತ್ತು ಮೊನಚಾದ ಕೊಕ್ಕನ್ನು ಹೊಂದಿದ್ದು ಹುಳು, ಮೀನು, ಕಪ್ಪೆ ಇತ್ಯಾದಿಗಳು ಇದರ ಪ್ರಮುಖ ಆಹಾರವಾಗಿದೆ. ಈ ಕೊಕ್ಕರೆಯ ಶಿಲ್ಪಗಳು ಪ್ರಮುಖವಾಗಿ ಹಂಪಿಯ ಅಚ್ಯುತರಾಯ ದೇವಾಲಯದ ನೂರು ಕಂಬಗಳ ಮಂಟಪದಲ್ಲಿ ಎರಡು, ಕೃಷ್ಣ ದೇವಾಲಯದ ಪ್ರಕಾರಗೋಡೆಯ ಹೊರಭಾಗದಲ್ಲಿ ಹಾಗೂ ಗಜಶಾಲೆ ಮುಂಭಾಗದ ಕೋಟೆ ಗೋಡೆಯಲ್ಲಿ ಒಂದೊಂದರಂತೆ ಒಟ್ಟು ನಾಲ್ಕು ಶಿಲ್ಪಗಳು ಮಾತ್ರ ಕಂಡುಬಂದಿರುತ್ತವೆ. ಕೃಷ್ಣ ಮತ್ತು ಅಚ್ಯುತರಾಯ ದೇವಾಲಯದ ಒಂದು ಶಿಲ್ಪದಲ್ಲಿನ ಪಕ್ಷಿಯ ದೇಹ ಲಕ್ಷಣಗಳ ಆಧಾರದ ಮೇಲೆ ಇವು ಪ್ಯಾಲಿಕಾನಿಫಾರ್ಮಿಸ್ *(Phalikaniformes)* ಗಣದ, ಆರ್ಡಿಡೆ *(Adridae)* ಕುಟುಂಬಕ್ಕೆ ಸೇರಿದ ಬೂದು ಕೊಕ್ಕರೆ ಎಂದು ಗುರುತಿಸಲಾಗಿದ್ದು ಆರ್ಡಿಯಾ ಸಿನೇರಿಯಾ (*Adridia sineria)* ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೨೮] ಗಜಶಾಲೆ ಮುಂಭಾಗದ ಕೋಟೆ ಗೋಡೆಯಲ್ಲಿನ ಕೊಕ್ಕರೆಯ ದೇಹ ಲಕ್ಷಣಗಳ ಆಧಾರದ ಮೇಲೆ ಇದು ತೆರೆದ ಕೊಕ್ಕಿನ ಕೊಕ್ಕರೆ (*Openbilled stork*) ಎಂದು ಗುರುತಿಸಲಾಗಿದೆ. ಇದು ಸಿಕೊನಿಫಾರ್ಮಿಸ್ (*Sikoniformes*) ಗಣದ ಸಿಕೊನಿಡೆ *(Sikonidae)* ಕುಟುಂಬಕ್ಕೆ ಸೇರಿದ್ದು ಅನಸ್ಟೊಮಸ್ ಓಸಿಯೇಟಸ್ (*Anastomus osiatus)* ಎಂಬುದು ಇದರ ವೈಜ್ಞಾನಿಕ ಹೆಸರು.[೨೨೯] ಅಚ್ಯುತರಾಯ ದೇವಾಲಯದಲ್ಲಿನ ಮತ್ತೊಂದು ಶಿಲ್ಪದಲ್ಲಿನ ಪಕ್ಷಿಯ ದೇಹ ಲಕ್ಷಣಗಳ ಆಧಾರದ ಮೇಲೆ ಇದು ಬಂಡೆ ಬಕ (*Reef heron*) ಎಂದು ಗುರುತಿಸಲಾಗಿದ್ದು, ಇಗ್ರಿಟ್ಟಾ ಗುಲಾರಿಸ್ (*Igritta gullaries)* ಎಂಬುದು ಇದರ ವೈಜ್ಞಾನಿಕ ಹೆಸರು.[೨೩೦]

ಬೆಳ್ಳಕ್ಕಿ

ಇದು ಕೊಕ್ಕರೆ ಜಾತಿಗೆ ಸೇರಿದ ಸಣ್ಣ ಪಕ್ಷಿಯಾಗಿದೆ. ಇದು ಸಾಮಾನ್ಯವಾಗಿ ನೀರಿರುವ ಭತ್ತದ





ಗದ್ದೆ, ಕೊಳ, ನದಿತೀರಗಳಲ್ಲಿ ವಾಸ ಮಾಡುತ್ತದೆ. ಈ ಪಕ್ಷಿಯ ಬಿಡಿ ಶಿಲ್ಪ ಕೃಷ್ಣ ದೇವಾಲಯದ ಪ್ರಾಕಾರ ಗೋಡೆಯ ಹೊರಭಾಗದಲ್ಲಿ ಕಂಡುಬರುತ್ತದೆ. ಇದರ ದೇಹ ಲಕ್ಷಣಗಳ ಆಧಾರದ ಮೇಲೆ ಇದು ಪಕ್ಷಿ ವರ್ಗದ ಪ್ಯಾಲೆನಿಫಾರ್ಮಿಸ್ (*Pyaleniformes*) ಗಣದ ಆರ್ಡಿಡೆ (*Ardridae*) ಕುಟುಂಬಕ್ಕೆ ಸೇರಿದ ಬೆಳ್ಳಕ್ಕಿ ಎಂದು ಗುರುತಿಸಲಾಗಿದ್ದು ಇಗ್ರೆಟ್ಟ ಗಾರ್ಜೆಟ್ಟೆ (*Egretta garjette*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೬೧]



ತೆರೆದ ಕೊಕ್ಕಿನ ಕೊಕ್ಕರೆ
ಗಣ : ಸಿಕೊನಿಫಾರ್ಮಿಸ್
ಕುಟುಂಬ : ಸಿಕೊನಿಡೆ



ತೆರೆದ ಕೊಕ್ಕಿನ ಕೊಕ್ಕರೆಯ ಶಿಲ್ಪ,
ಗಜಶಾಲೆ ಮುಂಭಾಗದ ಕೋಟೆ ಗೋಡೆ



ಬಂಡೆ ಬಕ
ಗಣ : ಪ್ಯಾಲಿಕಾನಿಫಾರ್ಮಿಸ್
ಕುಟುಂಬ : ಆರ್ಡಿಡೆ



ಬಂಡೆ ಬಕದ ಶಿಲ್ಪ, ನೂರು ಕಂಬಗಳ ಮಂಟಪ,
ಅಚ್ಯುತರಾಯ ದೇವಾಲಯ



ಬೆಳ್ಳಕ್ಕಿ
ಗಣ : ಪ್ಯಾಲಿಕಾನಿಫಾರ್ಮಿಸ್
ಕುಟುಂಬ : ಆರ್ಡಿಡೆ



ಬೆಳ್ಳಕ್ಕಿ ಶಿಲ್ಪ, ಪ್ರಾಕಾರ ಗೋಡೆಯ ಚಿತ್ರ,
ಕೃಷ್ಣದೇವಾಲಯ, ಹಂಪಿ













ಕೋಳಿ (ಹುಂಜ)

ಕೋಳಿಯು ಸಹ ಪಕ್ಷಿ ವರ್ಗಕ್ಕೆ ಸೇರಿದ್ದು ಸಾಮಾನ್ಯವಾಗಿ ಇದು ಕಾಡು, ತೋಟ ಮತ್ತು ಮನೆಯ ಸುತ್ತಮುತ್ತಲೂ ವಾಸ ಮಾಡುತ್ತದೆ. ಇಂತಹ ಕೋಳಿಯ ಶಿಲ್ಪವು ವಿಠಲ ದೇವಾಲಯ ಹೊರಭಾಗದ ಸಾಲುಮಂಟಪಗಳ ಕಂಬದಲ್ಲಿ ಕೆತ್ತಲ್ಪಟ್ಟಿದೆ. ಈ ಶಿಲ್ಪದಲ್ಲಿನ ಕೋಳಿಯ ನೆತ್ತಿಯ ಮೇಲೆ ಜುಟ್ಟು ಮತ್ತು ಕತ್ತಿಯಂತಹ ಬಾಲವಿರುವುದರಿಂದ ಇದು ಹುಂಜ ಎಂದು ಗುರುತಿಸಲಾಗಿದೆ. ಇದು ಗ್ಯಾಲಿಫಾರ್ಮಿಸ್ (*Galiformes*) ಗಣದ ಪ್ಯಾಸಿಯಾನಿಡೆ (*Phasianidae*) ಕುಟುಂಬಕ್ಕೆ ಸೇರಿದ್ದು ಗ್ಯಾಲಸ್ ಗ್ಯಾಲಸ್ ಡೊಮೆಸ್ಟಿಕಸ್ (*Galus galus domestica*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ. ಇಂತಹ ಕೋಳಿಯ ಕೆಲವು ಮೂಳೆಗಳು ಹಂಪಿಯ NMQ-22A ನ ಉತ್ಖನನದಲ್ಲಿ ದೊರಕಿದ್ದು ವರದಿಯಾಗಿರುವುದು ಗಮನಾರ್ಹ ಸಂಗತಿಯಾಗಿದೆ.[೨೩೨] ವಿಠಲ ದೇವಾಲಯದ ಪ್ರಾಕಾರ ಮಂಟಪದ ಕಂಬದಲ್ಲಿ ಮೀನನ್ನು ಕಾಲಿನಿಂದ ಹಿಡಿದಿರುವ ಪಕ್ಷಿಯ ಶಿಲ್ಪವನ್ನು ಕೆತ್ತಲಾಗಿದ್ದು ಇದರ ದೇಹ ಲಕ್ಷಣಗಳ ಆಧಾರದ ಮೇಲೆ ಇದನ್ನು ಹದ್ದು ಜಾತಿಗೆ ಸೇರಿದ ಜವುಗು ಡೇಗೆ ಎಂದು ಗುರುತಿಸಲಾಗಿದೆ. ಇದು ಅಸ್ಸಿಪಿಟ್ರಿಫಾರ್ಮಿಸ್ (*Assipitriformes*) ಗಣದ ಅಸ್ಸಿಪಿಟ್ರಿಡೆ (*Assipitridae*) ಕುಟುಂಬಕ್ಕೆ ಸೇರಿದ್ದು ಸರ್ಕಸ್ ಆರುಗಿನೋಸಸ್ (*Sarkus Aruginosus*) ಎಂಬುದು ಇದರ ವೈಜ್ಞಾನಿಕ ಹೆಸರಾಗಿದೆ.[೨೩೩]



ಕೋಳಿ (ಹುಂಜ)
ಗಣ : ಗ್ಯಾಲಿಫಾರ್ಮಿಸ್
ಕುಟುಂಬ : ಪಾಸಿಯಾನಿಡೆ



ಹೊರಭಾಗದ ಸಾಲು ಮಂಟಪದ ಕಂಬ,
ವಿಜಯವಿಠಲ ದೇವಾಲಯ, ಹಂಪಿ



ಜವುಗು ಡೇಗೆ
ಗಣ : ಅಸ್ಸಿಪಿಟ್ರಿಫಾರ್ಮಿಸ್
ಕುಟುಂಬ : ಅಸ್ಸಿಪಿಟ್ರಿಡೆ



ಪ್ರಾಕಾರ ಮಂಟಪದ ಕಂಬ,
ವಿಜಯವಿಠಲ ದೇವಾಲಯ, ಹಂಪಿ





ಹೀಗೆ ಹಂಪಿ ಪರಿಸರದಲ್ಲಿ ಇನ್ನೂ ಮುಂತಾದ ಪ್ರಾಣಿಗಳ ಬಿಡಿ ಶಿಲ್ಪಗಳು ಕಂಡುಬಂದಿದ್ದು ಪ್ರಮುಖವಾದವುಗಳನ್ನು ಈ ಮೇಲಿನಂತೆ ವಿವರಿಸಲಾಗಿದೆ.

ಒಟ್ಟಾರೆ ಈ ಪ್ರಾಣಿ ಶಿಲ್ಪಗಳ ಅಧ್ಯಯನದಿಂದ ಪ್ರಾಣಿ ಮತ್ತು ಪಕ್ಷಿಗಳಲ್ಲಿ ಕೆಲವು ದೇವರ ವಾಹನಗಳಾಗಿ, ರಾಜ್ಯಲಾಂಛನಗಳಾಗಿ, ವಿಷಯವನ್ನು ತಿಳಿಸುವ ಸಂಕೇತಗಳಾಗಿ, ಸ್ಮಾರಕಗಳ ಅಲಂಕಾರಿಕ ಮಾಧ್ಯಮಗಳಾಗಿ ಈ ಪ್ರಾಣಿ ಶಿಲ್ಪಗಳನ್ನು ಕೆತ್ತಿರುವುದು ಹಾಗೂ ಶಿಲ್ಪಿಯಾದವನಿಗೆ ಹಲವು ಪ್ರಾಣಿಗಳಲ್ಲಿನ ವಿವಿಧ ತಳಿಗಳ ಬಗ್ಗೆ ಜ್ಞಾನವಿತ್ತೆಂಬುದನ್ನು ತಿಳಿಯಬಹುದು.

ಕೊನೆ ಟಿಪ್ಪಣಿಗಳು

೦೧. ಗೋಪಾಲಕೃಷ್ಣಶಾಸ್ತ್ರಿ ಸಿ. ೨೦೦೨, "ದಶಾವತಾರ ಉಪನ್ಯಾಸಗಳು", ಪು.೧೧

೦೨. Gopinatha Rao T.A., 1985, *Elements of Hindu Iconography, Vol. II,* pp. 82-88.

೦೩. Ibid, p.15

೦೪. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., ೨೦೦೬, "ಪ್ರಾಣಿ, ಪಕ್ಷಿ ಸಂಪುಟ", ಪು.೪೩.

೦೫. Gopinatha Rao T.A., 1985, *Op cit,* pp.120-127

೦೬. ವಿಜಯನಗರ ಅಧ್ಯಯನ ಸಂ.೧೯ ರಲ್ಲಿ ಡಾ. ಸಿ.ಎಸ್. ವಾಸುದೇವನ್ ಅವರ ಹಂಪಿ ಪರಿಸರದ ಕೂರ್ಮಾವತಾರ ಶಿಲ್ಪಗಳು ಎಂಬ ಲೇಖನದಲ್ಲಿ ವಿಷ್ಣುವಿನ ಕೂರ್ಮವತಾರದ ಶಿಲ್ಪಗಳನ್ನು ಮೃಗರೂಪದ ಕೂರ್ಮ ಮತ್ತು ನರಮೃಗ ರೂಪದ ಕೂರ್ಮ ಎಂಬುದಾಗಿ ವಿಂಗಡಿಸಿಕೊಂಡಿರುತ್ತಾರೆ. ಅದರಂತೆ ಈ ಮತ್ಸ್ಯಾವತಾರ ಶಿಲ್ಪಗಳನ್ನು ವಿಂಗಡಿಸಿಕೊಳ್ಳಲಾಗಿದೆ.

೦೭. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೪೦.

೦೮. ಅದೇ, ಪು. ೪೧-೪೫.

೦೯. ಅದೇ, ಪು. ೫೧.

೧೦. ಅದೇ, ಪು. ೫೦-೫೫.

೧೧. Gopinatha Rao T.A., 1985, *Op cit,* pp.127-128.

೧೨. ಕೌಸಲ್ಯಬಾಯಿ ಎನ್., ೨೦೧೪, "ಅಷ್ಟಾದಶ ಪುರಾಣನಿಧಿ", ಪು. ೩೪೨-೩೫೪.

೧೩. ವಾಸುದೇವನ್ ಸಿ.ಎಸ್., ೨೦೧೪, "ಹಂಪಿ ಪರಿಸರದ ಕೂರ್ಮಾವತಾರ ಶಿಲ್ಪಗಳು", ವಿಜಯನಗರ ಅಧ್ಯಯನ. ಸಂ.೧೯, ಪು.೧೫೨-೧೬೦.

೧೪. *https://en.wikipedia.org/wiki/kurmanathaswamy temple srikurmam.*

೧೫. *https://en.wikipedia.org/wiki/list of turtles families.*

೧೬. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೮೫.

೧೭. *https://en.wikipedia.org/wiki/list of turtles families.*

೧೮. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೮೫–೮೬.

೧೯. ವಾಸುದೇವನ್ ಸಿ.ಎಸ್., 'ಪೂರ್ವೋಕ್ತ', ಪು. ೧೫೨–೧೬೦.

೨೦. ಗೋಪಾಲಕೃಷ್ಣಶಾಸ್ತ್ರಿ ಸಿ., 'ಪೂರ್ವೋಕ್ತ', ಪು. ೩೦–೩೮.

೨೧. Gopinatha Rao T.A., *Op cit,* pp.120-124.

೨೨. ವಾಸುದೇವನ್ ಸಿ.ಎಸ್., ೨೦೧೪, "ಹಂಪಿ ಪರಿಸರದ ವರಾಹ ಶಿಲ್ಪಗಳು", ವಿಜಯನಗರ ಅಧ್ಯಯನ ಸಂ.೧೮, ಪು. ೧೨೬–೧೩೨.

೨೩. Sinha D.K, *A Share Image at Archaeological Mussium, Hampi, Journal of Indian History*, Vol.53, Part.3, pp.353-359.

೨೪. *https://en.wikipedia.org/wiki/wild boar subspecies.*

೨೫. ಕನ್ನಡ ವಿಷಯ ವಿಶ್ವಕೋಶ, 'ಇತಿಹಾಸ ಮತ್ತು ಪುರಾತತ್ವ', ೨೦೦೯, ಪು. ೩೩೪.

೨೬. *https://en.wikipedia.org/wiki/varaha temples in India.*

೨೭. *https://en.wikipedia.org/wiki /Narasimhavatara.*

೨೮.. ರಾಮಕೃಷ್ಣಶಾಸ್ತ್ರಿ ಪಿ., ೨೦೦೯, "ಭಾಗವತದ ಕಥೆಗಳು", ಪು. ೨೯–೩೨.

೨೯. *https://en.wikipedia.org/wiki/indian lion.*

೩೦. ಗೋಪಕೃಷ್ಣಶಾಸ್ತ್ರಿ ಸಿ., 'ಪೂರ್ವೋಕ್ತ', ಪು. ೩೯–೫೧

೩೧. ಅದೇ, ಪು. ೧೨೮–೧೩೨

೩೨. ಅದೇ, ಪು. ೮೮–೧೦೨.

೩೩. ಕೌಸಲ್ಯಬಾಯಿ ಎನ್., 'ಪೂರ್ವೋಕ್ತ', ಪು. ೪೪೦–೪೫೬.

೩೪. ಪಂಕಜ ಎ., ೧೯೯೮, "ಭಾಗವತಾಮೃತ", ಪು. ೧೩೦–೧೫೮.

೩೫. ರಾಮಕೃಷ್ಣಶಾಸ್ತ್ರಿ ಪಿ., 'ಪೂರ್ವೋಕ್ತ', ಪು. ೨೧೮–೨೨೩.

೩೬. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೧೧೧–೧೧೨.

೩೭. *https://en.wikipedia.org/wiki/stork.*

೩೮. ಪಂಡಿತ ವಿ. ಸುಬ್ರಹ್ಮಣ್ಯಶಾಸ್ತ್ರಿ., ೨೦೦೮, "ಸಂಪೂರ್ಣ ರಾಮಾಯಣ", ಪು. ೨೪೩–೩೦೯.

೩೯. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೨೬೬.

೪೦. https://en.wikipedia.org/wiki/indian eagle.

೪೧. ಪದ್ಮಜಾ ದೇಸಾಯಿ, ೨೦೧೩, "ಹಂಪಿ ವಿಠಲ ದೇವಾಲಯದ ಆವರಣದಲ್ಲಿರುವ ಅಪರೂಪದ ಅಷ್ಟದಿಕ್ಪಾಲಕರ ಶಿಲ್ಪಗಳು", ಇತಿಹಾಸ ದರ್ಶನ, ಸಂ.೨೮., ಪು. ೧೫೯-೧೬೧.

೪೨. David Burnie, 2003, *Animal Enoyclopedia,* p.282.

೪೩. https://en.wikipedia.org/wiki/sheep.

೪೪. ಜ್ಞಾನಾನಂದ ಜಿ., "ಶ್ರೀ ಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರ", ಸಂ.೨, ಪು. ೮೫-೮೭.

೪೫. David Burnie, *Op cit,* p. 296.

೪೬. ಜ್ಞಾನಾನಂದ ಜಿ., "ಶ್ರೀಕಾಶ್ಯಪಶಿಲ್ಪಶಾಸ್ತ್ರಂ", ಪು. ೬೫-೬೭.

೪೭. ಜ್ಞಾನಾನಂದ ಜಿ., "ಶ್ರೀಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರಂ", ಪು. ೪೭೪.

೪೮. ಜ್ಞಾನಾನಂದ ಜಿ., "ಶ್ರೀಕಾಶ್ಯಪಶಿಲ್ಪಶಾಸ್ತ್ರಂ", ಪು. ೬೯.

೪೯. ಪದ್ಮಜಾ ದೇಸಾಯಿ., 'ಪೂರ್ವೋಕ್ತ', ಪು. ೧೫೯-೧೬೧.

೫೦. ಜ್ಞಾನಾನಂದ ಜಿ., 'ಪೂರ್ವೋಕ್ತ', ಪು. ೮೭೭.

೫೧. David Burnie, *Op cit,* p. 301.

೫೨. ಪದ್ಮಜಾ ದೇಸಾಯಿ., 'ಪೂರ್ವೋಕ್ತ', ಪು. ೧೫೯-೧೬೧.

೫೩. ಜ್ಞಾನಾನಂದ ಜಿ., 'ಪೂರ್ವೋಕ್ತ', ಪು. ೮೮೫-೮೮೮.

೫೪. https://en.wikipedia.org/wiki/horse.

೫೫. ಜ್ಞಾನಾನಂದ ಜಿ., 'ಪೂರ್ವೋಕ್ತ', ಪು. ೮೯೩.

೫೬. Gopinatha Rao T.A., *Op cit,* pp. 528-530.

೫೭. https://en.wikipedia.org/wiki/amritmahal.

೫೮. ಪಂಕಜ ಎ., 'ಪೂರ್ವೋಕ್ತ', ಪು. ೮೦-೮೫.

೫೯. ರಾಮಕೃಷ್ಣಶಾಸ್ತ್ರಿ ಪಿ. 'ಪೂರ್ವೋಕ್ತ', ಪು. ೮೮-೯೧.

೬೦. Suresh K.M., 1998, *Sculptural Art of Hampi,* pp.119-120.೬೧. Anna L. Dallapiccola, Anila Verghese, 1998, *Sculpture At Vijayanagara,* p.26

೬೨. Suresh K.M., 1998, *Op cit,* pp.119-120.

೬೩. *Ibid,* p. 119.

೬೪. ಕನ್ನಡ ವಿಷಯ ವಿಶ್ವಕೋಶ, 'ಇತಿಹಾಸ ಮತ್ತು ಪುರಾತತ್ವ', ೨೦೦೯, ಪು. ೩೩೨-೩೩೪.

೬೫. *https://en. Wikipedia.org./wiki/purushamruga.*

೬೬. Syamacharya V. (Ed), *The Karnataka Mahabharata by Kumaravyasa Mahakavi.* Vol.3 Sabhaparva Sandhi 7th, pp.120-131.

೬೭. ಹೇಮಾವತಿ ಶಿ. ಮೆಣಸಗಿ. 'ಹಂಪಿಯ ಶಿಲ್ಪಗಳಲ್ಲಿ ಮಹಾಭಾರತ ಉಲ್ಲೇಖಿತ ಪುರುಷಮೃಗ ಶಿಲ್ಪ', ಇತಿಹಾಸ ದರ್ಶನ. ಸಂ.೩೦ ಪು. ೨೦೫-೨೦೭.

೬೮. Anna L. Dallapiccolla, John M. Fritz, Georage Michell and Rajashekara S., 1992, *The Ramachandra Temple at Vijayanagara,* pp.101-125.

೬೯. Hanumatha Rao D., 2004, *Lepakshi Temple A Cultural and Architectural Study,* p.198.

೭೦. *http://www.Sphinxofindia.rajadeekshithan.com.*

೭೧. Suresh K.M., 1998, *Op cit.* p.48.

೭೨. ಜ್ಞಾನಾನಂದ ಜಿ. 'ಪೂರ್ವೋಕ್ತ', ಪು. ೫೨೨-೫೨೩.

೭೩. Gopinath Rao T.A.,1985, *Op.cit.* p.151.

೭೪. Sambasiva Sastri K. (Ed), *Shilparatna of Sri Kumara,* part II, chapter 22. pp.101-102.

೭೫. ಮೆಣಸಿಗಿ ಹೇಮಾವತಿ ಶಿವಾನಂದ., ೨೦೧೬, ಹಂಪಿ ಪರಿಸರದ ಶೈವಶಿಲ್ಪಗಳು, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ ಪು. ೧೭೭.

೭೬. Shivarudraswamy S.N., 1996, *Vijayanagara Temples in Karnataka,* p.150.

೭೭. ಸುರೇಶ್ ಕೆ.ಎಂ., ೨೦೦೪, "ತಿಮ್ಮಲಾಪುರದ ಗಜಸಂಹಾರ ಉಬ್ಬುಶಿಲ್ಪ", ವಿಜಯನಗರ ಅಧ್ಯಯನ ಸಂ.೯. ಪು. ೫೨.

೭೮. Suresh K.M., 1998, *Op.cit.* p-49.

೭೯. Hanumantha Rao D., 2004, *Op.cit.* p-44.

೮೦. Anna L. Dallapiccola, Anila Verghese., 1998, *Sculpture at Vijayanagara,* p.35.

೮೧. Suresh. K.M., 2011, *Vijayanagara Sculptures at Hampi,* p. 41.

೮೨. ಸುರೇಶ್ ಕೆ.ಎಂ., 'ಪೂರ್ವೋಕ್ತ', ಪು. ೫೧-೫೩

೮೩. Shivarudraswamy S.N., 1996, *Op.cit.* p.150.

೮೪. ಪಂಡರಿನಾಥಾಚಾರ್ಯ ಗಲಗಲಿ (ಅನು)., "ಶ್ರೀಶಿವಮಹಾಪುರಾಣ", ಭಾಗ-೧, ಪು. ೩೪೩-೩೪೪ ಹಾಗೂ *www.19 Avataras of Shiva.*

೮೫. *http://en.wikipedia.org/wiki/kinnara.*

೮೬. ಶ್ರೀಗುರು ಓಂ ಸಿದ್ಧಲಿಂಗೇಶ್ವರ ಸ್ವಾಮಿಗಳು., "ಶ್ರೀ ಪಂಪಾಮಹಾತ್ಮೆ", ಪು. ೭೪-೭೫.

೮೭. ಧನುಂಜಯ ಸಿ., ೨೦೧೫, "ಶ್ರೀ ಕಾಳಹಸ್ತಿ ದೇವಾಲಯದ ಐತಿಹ್ಯವನ್ನು ತಿಳಿಸುವ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿನ ಪ್ರಾಣಿಶಿಲ್ಪಗಳು", ಇತಿಹಾಸ ದರ್ಶನ ಸಂ.೩೦. ಪು. ೨೦೩-೨೦೪.

೮೮. ಅಯ್ಯಾಳಿ ಯರಿಸ್ವಾಮಿ., ೨೦೧೦, ಹಂಪಿ ಪರಿಸರದ ಐತಿಹ್ಯಗಳು: ಚಾರಿತ್ರಿಕ ವಿಶ್ಲೇಷಣೆ ಕನ್ನಡ ವಿ.ವಿ.ಗೆ ಸಲ್ಲಿಸಿದ ಅಪ್ರಕಟಿತ ಎಂ.ಫಿಲ್. ಪ್ರಬಂಧ, ಪು. ೬೪-೬೫

೮೯. Anila Verghese., 1995, *Religious Traditions At Vijayananagara,* pp.5, & 113.

೯೦. Anna L. Dallapiccola, Anila verghese., 1998, *Op cit.* p.79.

೯೧. ಮಂಜುನಾಥಯ್ಯ ಟಿ.ಎಂ.(ಲೇ), "ವಿಜಯನಗರಪಟ್ಟಣದಲ್ಲಿ ನಾಥ ಸಂಪ್ರದಾಯ", ವಿಜಯನಗರ ಅಧ್ಯಯನ, ಸಂ.೭. ಪು. ೧೯೮-೨೦೫.

೯೨. ಸಿದ್ದರಗಿರಿ ಒ.ಎಲ್. ಚಂದ್ರೇಗೌಡ. (ಲೇ), "ಮತ್ಸೇಂದ್ರನಾಥ ಅವಲೋಕಿತೇಶ್ವರ ಮಂಜುನಾಥ ಇವರುಗಳ ಸಮನ್ವಯ ಹಾಗೂ ಕಾಲಮಾನ ಸಮೀಕ್ಷೆ", ಇತಿಹಾಸ ದರ್ಶನ. ಸಂ.೩೦. ಪು. ೨೮೮-೨೯೩.

೯೩. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೪೨.

೯೪. http://en.wikipedia.org/wiki/species of fishes.

೯೫. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೪೧.

೯೬. ರಹಮತ್ ತರೀಕೆರೆಯವರು ಕರ್ನಾಟಕದ ನಾಥಪಂಥ ಎಂಬ ಕೃತಿಯಲ್ಲಿ ಹಂಪಿ ಪ್ರದೇಶದ ಶಿಲ್ಪಗಳಲ್ಲಿ ಮತ್ಸ್ಯ ಮತ್ತು ಚೇಳನ್ನು ವಾಹನಗಳಾಗಿ ಹೊಂದಿರುವವರು ಮಚ್ಚೇಂದ್ರನಾಥ ಹಾಗೂ ಭೈರವನಾಥ ಎಂದು ಗುರುತಿಸಿರುತ್ತಾರೆ. ಪು. ೫೭-೬೪.

೯೭. Anna L. Dallapiccola, Anila Verghese., 1998, *Op cit.* p.79.

೯೮. http://en.wikipedia.org/wiki/scorpion.

೯೯. ಮಂಜುನಾಥಯ್ಯ ಟಿ.ಎಂ.(ಲೇ), 'ಪೂರ್ವೋಕ್ತ', ಪು. ೨೦೩.

೧೦೦. Deveraja D.V. Channabasappa s. Patil., *"Vijayanagara progress of Research 1984-87",* pp. 68-69.

೧೦೧. ಭಟಸೂರಿ ಕೆ.ಜಿ., "ಗುಂಡೂರಿನ ಶಾಸನಗಳು", ಇತಿಹಾಸ ದರ್ಶನ, ಸಂ.೧೪ ಪು. ೫೨-೫೩ ಮತ್ತು ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. ೨, ಗಂಗಾವತಿ ನಂ.೯೯, ೧೦೦.

೧೦೨. Deveraja D.V, Channabasappa S. Patil., *Vijayangara Progress of Research 1983-84* p.31.

೧೦೩. *Ibid,* pp. 45-46

೧೦೪. ರಾಮಚಂದ್ರರಾವ್ ಎಸ್.ಕೆ., "ಮೂರ್ತಿಶಿಲ್ಪದ ನೆಲೆ, ಹಿನ್ನೆಲೆ", ಪು. ೨೦-೨೧.

೧೦೫. The Ramalingappa Temple at Tadpadri Anantapur district, Andhra Pradesh is

connected with the story of the svayambu Linga which found because a cow used to come everyday to the spot and give its milk as an offering to the Linga. N. Ramesan, Temple Legends of Andhra Pradesh p.47 as already Noted. A similar story is told about the Mallikarjuna Temple at Srisailam.

೧೦೬. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೧೧೦-೧೧೨.

೧೦೭. ಅದೇ, ಪು. ೭೭-೭೮.

೧೦೮. ಧನುಂಜಯ ಸಿ., ೨೦೧೫, 'ಪೂರ್ವೋಕ್ತ', ಪು. ೨೦೩-೨೦೪.

೧೦೯. ಶ್ರೀಶೈಲ ಮನಗುತ್ತಿ., ೨೦೧೬, "ಹಂಪಿ ವಿರೂಪಾಕ್ಷ ದೇವಾಲಯದಲ್ಲಿರುವ ಪ್ರಾಣಿಭಕ್ತಿ ಶಿಲ್ಪಗಳು", ಇತಿಹಾಸ ದರ್ಶನ ಸಂ.೩೧, ಪು. ೨೮೭-೨೮೮.

೧೧೦. Anna L. Dallapicolla, Anila Verghese ಅವರ *Scupture At Vijayanagara Iconog raphy and Style* ಎಂಬ ಕೃತಿಯಲ್ಲಿ ಹಂಪಿ ಪರಿಸರದಲ್ಲಿನ ದೈವಭಕ್ತ ಪ್ರಾಣಿಶಿಲ್ಪಗಳು ಉಲ್ಲೇಖವಾಗಿರುತ್ತವೆ. ಪು.೧೦೨-೧೦೪.

೧೧೧. ಪರಮೇಶ್ವರಪ್ಪ ಟಿ. (ಸಂ), ೧೯೯೬, "ಹಂಪಿ ಪರಂಪರೆ". ಪು. ೫೧.

೧೧೨. Shamashastry R., 1923., *Malnad Chips,* QJMS, Vol.13, p.760.

೧೧೩. ಇ.ಸಿ. ಸಂ.೧೧, ಮೊಳಕಾಲ್ಮೂರು, ೩೨ ಮತ್ತು ಸೋಮಶೇಖರ್ ಎಸ್.ವೈ., "ಜಟಂಗಿ ರಾಮೇಶ್ವರ ಸಾಂಸ್ಕೃತಿಕ ದರ್ಶನ", ಪು. ೭೩.

೧೧೪. ಇ.ಸಿ. (ಪರಿಷ್ಕೃತ) ಸಂ.೧೦, ಗೌರಿಬಿದನೂರು ೫೩.

೧೧೫. ಇ.ಸಿ. ಗುಂಡ್ಲುಪೇಟೆ ೭೪.

೧೧೬. ರಾಧಾಕೃಷ್ಣಮೂರ್ತಿ, ೧೯೯೬, "ವಿಜಯನಗರ ಸಂಸ್ಕೃತಿಯ ಆಕರಗ್ರಂಥ ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ", ಇತಿಹಾಸ ದರ್ಶನ. ಸಂ.೧೧, ಪು. ೬೧.

೧೧೭. ಕಲಬುರ್ಗಿ ಎಂ.ಎಂ. (ಸಂ), ೧೯೯೮, "ಮಾನಸೋಲ್ಲಾಸ", ಸಂ.೨, ಪು. ೪೮೧.

೧೧೮. Kotraiah. C.T.M. (Ed), 2003, *Vijayanagara Research Project, King, Court, and Capital*, p. 80.

೧೧೯. *Ibid,* p. 80

೧೨೦. ತಳವಾರ ಎನ್.ಎಮ್., ೨೦೦೨, "ನಂಜುಂಡ ಕವಿಯ ರಾಮನಾಥ ಚರಿತ್ರೆ ಸಾಂಸ್ಕೃತಿಕ ಅಧ್ಯಯನ", ಪು. ೨೨೬-೨೫೯.

೧೨೧. ಹಿರೇಮಠ ಆರ್.ಸಿ.(ಸಂ), ೧೯೭೯, "ಕನಕದಾಸರ ಮೋಹನ ತರಂಗಿಣಿ", ಪು. ೨೫೯-೨೭೬ ಮತ್ತು Kotraiah C.T.M. (Ed), *2003, Vijayanagara Research Project, "King, Court, and Capital"* pp. 82-83.

೧೨೨. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೮, "ವಿಜಯನಗರ ಕಾಲದ ಸಂಸ್ಕೃತಿ ಬೇಟೆ, ಪಶುಪಾಲನೆ ಮತ್ತು ಕೃಷಿ", ಪು. ೫೬-೧೩೮.

೧೨೩. ವಿರೂಪಾಕ್ಷಿ ಪೂಜಾರಹಳ್ಳಿ, ೧೯೯೯, "ವಿಜಯನಗರ ವಾಸ್ತುಶಿಲ್ಪದಲ್ಲಿ ಬೇಟೆಯ ಚಿತ್ರಣ", ಇತಿಹಾಸ ದರ್ಶನ, ಸಂ.೧೪, ಪು. ೧೬೭.

೧೨೪. ವಿವೇಕ ರೈ. ಬಿ.ಎ.(ಸಂ), ೨೦೦೫, "ಪ್ರವಾಸಿ ಕಂಡ ವಿಜಯನಗರ", ಪು. ೪೭.

೧೨೫. Nagaraja Rao. M.S., 1979, *'Kiratarjuniyam in Indian Art',* p.50.

೧೨೬. Hanumantha Rao D., 2004, *Op cit.* p.60.

೧೨೭. Suresh K.M., 1998, *op cit.* p.47.

೧೨೮. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೨೭೩.

೧೨೯. *http://en.wikipedia.org/wiki/mudhol/hound.*

೧೩೦. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೨೬೬.

೧೩೧. *http://en.wikipedia.org/wiki/mudhol/hanuman langur.*

೧೩೨. ಕಲಬುರ್ಗಿ ಎಂ.ಎಂ. (ಸಂ), ಸಂ.೨, 'ಪೂರ್ವೋಕ್ತ', ಪು. ೫೫೮.

೧೩೩. ಶಶಿಕಲಾ ರಾ. ಇಂಜನಿ. (ಲೇ), ೨೦೧೪, "ಹಂಪಿಯ ಮಹಾನವಮಿ ದಿಬ್ಬದ ಬೇಟೆಗಾರ್ತಿಯರ ಶಿಲ್ಪಗಳು", ಇತಿಹಾಸ ದರ್ಶನ, ಸಂ.೨೯, ಪು. ೧೬೬-೧೬೮.

೧೩೪. ಕಲಬುರ್ಗಿ ಎಂ.ಎಂ.(ಸಂ), ಸಂ.೨, 'ಪೂರ್ವೋಕ್ತ', ಪು.೫೪೧-೫೪೪.

೧೩೫. David Burnie, *Op cit,* p. 269.

೧೩೬. ಕಲಬುರ್ಗಿ ಎಂ.ಎಂ. (ಸಂ), ಸಂ.೨, 'ಪೂರ್ವೋಕ್ತ', ಪು. ೫೩೫-೫೩೬.

೧೩೭. ಅದೇ, ಪು. ೫೫೬.

೧೩೮. ಷಡಕ್ಷರಯ್ಯ ರು.ಮ. (ಲೇ), ೨೦೦೪, ವಿಜಯನಗರ ಮತ್ತು ವಿಜಯನಗರೋತ್ತರ ಕಾಲದ ಕಮಲಾಪುರದ ವಸ್ತುಸಂಗ್ರಹಾಲಯದ ವೀರ ಮತ್ತು ಮಹಾಸತಿಯರ ಶಿಲ್ಪಕಲೆ, ವಿಜಯನಗರ ಅಧ್ಯಯನ, ಸಂ.೯, ಪು. ೩೧೯-೩೩೦

೧೩೯. *http://en.wikipedia.org/wiki/Tiger.*

೧೪೦. *http://en.wikipedia.org/wiki/lion.*

೧೪೧. ವಿವೇಕ ರೈ. ಬಿ.ಎ. (ಸಂ), 'ಪೂರ್ವೋಕ್ತ', ಪು. ೧೬.

೧೪೨. ಹರೀಶ್ ಆರ್. ಭಟ್, ಪ್ರಮೋದ್ ಸುಬ್ಬಾರಾವ್, ೨೦೦೬, "ಪಕ್ಷಿ ಪ್ರಪಂಚ", ಪು. ೧೦೪.

೧೪೩. ಅದೇ, ಪು. ೯೭.

೧೪೪. *South Indian Inscriptions, Vol.IX, pt.II* No. 447, p.457.

೧೪೫. ವಿರೂಪಾಕ್ಷಿ ಪೂಜಾರಹಳ್ಳಿ., ೨೦೦೮, "ವಿಜಯನಗರ ಕಾಲದ ಸಂಸ್ಕೃತಿ ಬೇಟೆ, ಪಶುಪಾಲನೆ ಮತ್ತು ಕೃಷಿ", ಪು. ೧೧೯.

೧೪೬. ನರಸಿಂಹಾಚಾರ್ ಡಿ.ಎಲ್.(ಸಂ), ೧೯೮೬, "ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ", ಪು. ೨-೧೪

೧೪೭. ಅರವಿಂದ ಮಾಲಗತ್ತಿ., "ಜನಪದ ಆಟಗಳು", ಪು. ೨೬೧.

೧೪೮. ನಾಗೇಗೌಡ ಎಚ್.ಎಲ್., ೧೯೭೫, "ಪ್ರವಾಸಿ ಕಂಡ ಇಂಡಿಯಾ", ಸಂ.೫ ಪು.೧೯೫.

೧೪೯. ಅದೇ, ಸಂ.೧, ಪು. ೧೨೫.

೧೫೦. ಅದೇ, ಸಂ.೩, ಪು. ೧೫೩.

೧೫೧. ಕಲಬುರ್ಗಿ ಎಂ.ಎಂ. (ಸಂ), ಸಂ.೨, 'ಪೂರ್ವೋಕ್ತ', ಪು. ೪೩೧-೪೫೮.

೧೫೨. ಅದೇ ಪು. ೪೫೭.

೧೫೩. ತಳವಾರ ಎನ್.ಎಮ್., 'ಪೂರ್ವೋಕ್ತ', ಪು. ೨೫೩.

೧೫೪. ಕಲಬುರ್ಗಿ ಎಂ.ಎಂ.(ಸಂ), ಸಂ.೨, 'ಪೂರ್ವೋಕ್ತ', ಪು. ೫೧೬-೫೧೮.

೧೫೫. ಶಿವಾನಂದ ವಿರಕ್ತಮಠ, "ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ", ಪು. ೧೦೮.

೧೫೬. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೨೬೨.

೧೫೭. David Burnie., *Op cit,* p.303.

೧೫೮. ವಿವೇಕ ರೈ. ಬಿ.ಎ., 'ಪೂರ್ವೋಕ್ತ', ಪು. ೨೨.

೧೫೯. ಕಲಬುರ್ಗಿ ಎಂ.ಎಂ., ಸಂ.೨, 'ಪೂರ್ವೋಕ್ತ', ಪು. ೪೫೫-೪೫೬

೧೬೦. Salethore B.A., 1934, *"Social and Political Life in the Vijayangara Empire", Vol.1.* pp.290-291

೧೬೧. ವಿವೇಕ ರೈ ಬಿ.ಎ., 'ಪೂರ್ವೋಕ್ತ', ಪು. ೭೬-೭೭.

೧೬೨. ಜಗದೀಶ (ಲೇ), ೨೦೦೮, "ಮಹಾನವಮಿ ವೀಕ್ಷಣಾ ವೇದಿಕೆ ಮತ್ತು ಪಥಸಂಚಲನೆಯ ಉಬ್ಬು ಶಿಲ್ಪಗಳು-ಹೊಸ ಆಕರ", ವಿಜಯನಗರ ಅಧ್ಯಯನ, ಸಂ.೧೩, ಪು. ೧೫೪-೧೫೬.

೧೬೩. Anna L. Dallapicola, John M. Fritz, George Michel and Rajashekar S., 1992, '*Op cit',* pp.83-84

೧೬೪. Anna L. Dallapicola, Anila Veraghese., 1998, *'Op cit'*, p.92

೧೬೫. ಕಲಬುರ್ಗಿ ಎಂ.ಎಂ., ಸಂ.೨, 'ಪೂರ್ವೋಕ್ತ', ಪು. ೪೩೧-೪೭೫.

೧೬೬. ವಿವೇಕ ರೈ ಬಿ.ಎ. 'ಪೂರ್ವೋಕ್ತ', ಪು. ೭೦-೭೧.

೧೬೭. ಅದೇ, ಪು. ೧೩೨.

೧೬೮. ಅದೇ, ಪು. ೧೯೫.

೧೬೯. ಅದೇ, ಪು. ೧೮೦.

೧೭೦. http://en.wikipedia.org/wiki/arabian horse skeletal analysis.

೧೭೧. ವಿವೇಕ ರೈ ಬಿ.ಎ. 'ಪೂರ್ವೋಕ್ತ', ಪು. ೧೭.

೧೭೨. ಅದೇ, ಪು.೪೧.

೧೭೩. David Burnie., *Op cit,* pp. 282-283.

೧೭೪. ಕಲಬುರ್ಗಿ ಎಂ.ಎಂ., 'ಪೂರ್ವೋಕ್ತ', ಪು. ೪೫೯–೪೬೬.

೧೭೫. ಮಂಜುನಾಥನ್. ಜಿ.ಜಿ. (ಸಂ), ೧೯೮೭, "ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ", ಪು.೫೫.

೧೭೬. Shanmugam P. and Srinivasan (Eds), 2006, *"Recent Advances in Vijayangara Studies"*, pp.198-208

೧೭೭. ನಾಗರಾಜಪ್ಪ ಎಸ್., ೨೦೧೬, "ಹಂಪಿ ಪರಿಸರದ ಲೌಕಿಕ ಶಿಲ್ಪಗಳು", ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಅಪ್ರಕಟಿತ ಮಹಾಪ್ರಬಂಧ, ಪು. ೧೮೬–೧೮೭.

೧೭೮. ತಾಪಿ ಧರ್ಮರಾವ್, ೨೦೧೨, "ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ", ಪು.೭೮–೭೯.

೧೭೯. ಗೋಪಾಲಕೃಷ್ಣಶಾಸ್ತ್ರಿ ಸಿ., ೨೦೦೨, "ದಶಾವತಾರದ ಉಪನ್ಯಾಸಗಳು", ಪು.೨೭ ಹಾಗೂ ಶೈಲಜಾ ಬಿ.ಎಸ್., ೧೯೯೫, "ಗ್ರಹಣ" ಪು. ೨.

೧೮೦. ಜ್ಞಾನಾನಂದ ಜಿ., ೨೦೦೦, "ಶ್ರೀಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರಂ", ಸಂ.೨, ಪು.೮೩೦.

೧೮೧. ಶೈಲಜಾ ಬಿ.ಎಸ್., 'ಪೂರ್ವೋಕ್ತ', ಪು. ೨ ೩.

೧೮೨. ಅಡ್ಯನಡ್ಕ ಕೃಷ್ಣಭಟ್., ೧೯೯೫, "ಗ್ರಹಣ", ಪು.೫.

೧೮೩. ದುರ್ಗೋಜಿರಾವ್ ಎಸ್.ಎಸ್., ೨೦೦೨, "ಆಧುನಿಕ ಖಗೋಳ ವಿಜ್ಞಾನ", ಪು. ೧೬೦

೧೮೪. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೧೧೦.

೧೮೫. David Burnie., *Op cit,* p. 250.

೧೮೬. ದೇವರಾಜ್ ಸರ್ಕಾರ್ ಹಾ.ಬಾ., ಮಧ್ಯಸ್ಥ ಎನ್.ಎ., ಷಣ್ಮುಖಮ್ಮ ಎಸ್.ಎಚ್., 'ಪೂರ್ವೋಕ್ತ', ಪು. ೪೭–೬೨.

೧೮೭. ಪರಮಶಿವಮೂರ್ತಿ ಡಿ.ವಿ. (ಸಂ), ೨೦೧೦, "ಕೃಷ್ಣದೇವರಾಯನ ಶಾಸನಗಳು", ಸಂ.೧. ಪು. ೩೦.

೧೮೮. ಧನುಂಜಯ ಸಿ., ೨೦೧೬, "ಹಂಪಿಯ ಶಿಲ್ಪಗಳಲ್ಲಿ ಗ್ರಹಣದ ಶಿಲ್ಪಗಳು", ಇತಿಹಾಸ ದರ್ಶನ, ಸಂ. ೩೧, ಪು. ೨೩೪–೨೩೬.

೧೮೯. http://en.wikipedia.org/wiki/Antelope.

೧೯೦. ದೇವರಾಜ ಸರ್ಕಾರ್ ಹಾ. ಬ, ಮಧ್ಯಸ್ಥ ಎ. ಎ, ಷಣ್ಮುಖಮ್ಮ ಎಚ್.ಎಚ್., ಪೂರ್ವೋಕ್ತ, ಪು. ೬೫

.೧೯೧. http://en.wikipedia.org/wiki/Monkey.

೧೯೨. David Burnie., *Op Cit,* pp. 282-283.

೧೯೩. Nagaraja Rao M.S (Ed)., 1985, *"Vijayanagara Progress of Research 1983-84",* p. 34, Ins.No. 29.

೧೯೪. Devaraj D.V. And Channabasappa. S. Patil (Ed)., 1996, *"Vijayanagara Progress of Research 1988 - 91",* pp. 9-11.

೧೯೫. ಮಂಜುನಾಥಯ್ಯ ಟಿ.ಎಮ್. (ಲೇ), ೨೦೦೦, "ವಿಜಯನಗರಪಟ್ಟಣದಲ್ಲಿಯ ಆನೆಯ ಸಾಲೆ", ವಿಜಯನಗರ ಅಧ್ಯಯನ ಸಂ.೫, ಪು. ೩೭–೪೩.

೧೯೬. ಸ್ವಾಮಿ ಲ.ನ. (ಲೇ)., ೨೦೧೦, "ಆನೆಗೊಂದಿ ಒಂದು ಪರಿಚಯ", ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೪೪೨-೪೪೬.

೧೯೭. *https://en.wikipedia.org/Horses*.

೧೯೮. Vasudevan C.S., 2014, *"Report on The Excavation at Hampi 1991-2010"*, p.17

೧೯೯. *https://en.wikipedia.org/Camel*.

೨೦೦. David Burnie., *Op Cit*, pp. 294-295.

೨೦೧. ದೇವರಾಜ ಸರ್ಕಾರ್ ಹಾ. ಬ, ಮಧ್ಯಸ್ಥ ಎ. ಎ, ಷಣ್ಮುಖಮ್ಮ ಎಚ್.ಎಚ್., ಪೂರ್ವೋಕ್ತ, ಪು. ೨೦೮.

೨೦೨. ವಾಸುದೇವನ್ ಸಿ.ಎಸ್.(ಲೇ), ೨೦೧೦, "ಕಡೇಬಾಗಿಲು – ಪ್ರಾಗಿತಿಹಾಸ ಕಾಲದ ನೆಲೆ" ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೨೦-೨೨

೨೦೩. *https://en.wikipedia.org/wiki/Pangolin*.

೨೦೪. ದೇವರಾಜ ಸರ್ಕಾರ್ ಹಾ. ಬ, ಮಧ್ಯಸ್ಥ ಎ. ಎ, ಷಣ್ಮುಖಮ್ಮ ಎಚ್.ಎಚ್., ಪೂರ್ವೋಕ್ತ, ಪು. ೨೪೫.

೨೦೫. *David Burnie., Op Cit, pp. 268-269.*

೨೦೬. ವಾಸುದೇವನ್ ಸಿ.ಎಸ್.(ಲೇ), ೨೦೧೦, ಪೂರ್ವೋಕ್ತ, ಪು. ೨೦-೨೨.

೨೦೭. *https://en.wikipedia.org/wiki/Sheep*.

೨೦೮. Vasudevan C.S., 2014, *Op Cit*, p. 18.

೨೦೯. *Ibid.*

೨೧೦. *https://en.wikipedia.org/wiki/Dog*.

೨೧೧. ವಾಸುದೇವನ್ ಸಿ.ಎಸ್.(ಲೇ), ಪೂರ್ವೋಕ್ತ, ಪು. ೨೦-೨೨.

೨೧೨. ಸುಮಂಗಳ ಎಸ್. ಮುಮ್ಮಿಗಟ್ಟಿ., ೨೦೧೨, "ಪ್ರಾಣಿಗಳು", ಪು. ೭೨-೭೩.

೨೧೩. *https://en.wikipedia.org/wiki/ Chimpanzee.*

೨೧೪. David Burnie., *Op Cit*, pp. 144-145.

೨೧೫. ದೇವರಾಜ ಸರ್ಕಾರ್ ಹಾ. ಬ, ಮಧ್ಯಸ್ಥ ಎ. ಎ, ಷಣ್ಮುಖಮ್ಮ ಎಚ್.ಎಚ್., ಪೂರ್ವೋಕ್ತ, ಪು. ೩೬-೬೨.

೨೧೬. ಅದೇ, ಪು. ೬೩-೬೭.

೨೧೭. ಬಾಲಕೃಷ್ಣ ಟಿ.ಎ., ೨೦೧೧, ಪ್ರಾಣಿಶಾಸ್ತ್ರ, ಪು. ೭೨.

೨೧೮. *https://en.wikipedia.org/wiki/Spider*.

೨೧೯. *https://en.wikipedia.org/wiki/Peafowl*

೨೨೦. *https://en.wikipedia.org/wiki/Swan*.

೨೨೧. ದೇವರಾಜ ಸರ್ಕಾರ್ ಹಾ. ಬ, ಮಧ್ಯಸ್ಥ ಎ. ಎ, ಷಣ್ಮುಖಮ್ಮ ಎಚ್.ಎಚ್., ಪೂರ್ವೋಕ್ತ, ಪು. ೧೫೪-೧೫೬.

೨೨೨. https://en.wikipedia.org/wiki/Lesser *Flamingo.*

೨೨೩. *https://en.wikipedia.org/wiki/Shag.*

೨೨೪. ದೇವರಾಜ ಸರ್ಕಾರ್ ಹಾ. ಬ, ಮಧ್ಯಸ್ಥ ಎ. ಎ, ಷಣ್ಮುಖಮ್ಮ ಎಚ್.ಎಚ್., ಪೂರ್ವೋಕ್ತ, ಪು. ೧೪೦.

೨೨೫. David Burnie., *Op Cit,* pp. 171-173.

೨೨೬. ದೇವರಾಜ ಸರ್ಕಾರ್ ಹಾ. ಬ, ಮಧ್ಯಸ್ಥ ಎ. ಎ, ಷಣ್ಮುಖಮ್ಮ ಎಚ್.ಎಚ್., ಪೂರ್ವೋಕ್ತ, ಪು. ೧೨೯.

೨೨೭. https://en.wikipedia.org/wiki/Rock *Dove.*

೨೨೮. https://en.wikipedia.org/wiki/Grey *Heron.*

೨೨೯. ದೇವರಾಜ ಸರ್ಕಾರ್ ಹಾ. ಬ, ಮಧ್ಯಸ್ಥ ಎ. ಎ, ಷಣ್ಮುಖಮ್ಮ ಎಚ್.ಎಚ್., ಪೂರ್ವೋಕ್ತ, ಪು. ೧೨೬.

೨೩೦. ಅದೇ, ಪು. ೧೨೫.

೨೩೧. https://en.wikipedia.org/wiki/ *Little Egret.*

೨೩೨. Vasudevan C.S., *2014, Op Cit, p. 18.*

೨೩೩. https://en.wikipedia.org/wiki/ *Marsh Harrier.*

❑❑❑

ಅಧ್ಯಾಯ : ಐದು

ಕಾಲ್ಪನಿಕ ಪ್ರಾಣಿಶಿಲ್ಪಗಳು

೫.೧. ಪ್ರಾಣಿ – ಪ್ರಾಣಿಗಳ ಸಂಯುಕ್ತ ಶಿಲ್ಪಗಳು

೫.೨. ಪ್ರಾಣಿ – ಪಕ್ಷಿಗಳ ಸಂಯುಕ್ತ ಶಿಲ್ಪಗಳು

ಅಧ್ಯಾಯ

೫ ಕಾಲ್ಪನಿಕ ಪ್ರಾಣಿ ಶಿಲ್ಪಗಳು

ಹಂಪಿ ಪರಿಸರದ ಸ್ಮಾರಕಗಳಲ್ಲಿ ಧಾರ್ಮಿಕ ಮತ್ತು ಧಾರ್ಮಿಕೇತರ ಪ್ರಾಣಿ ಶಿಲ್ಪಗಳು ಕೆತ್ತಲ್ಪಟ್ಟಿರುವಂತೆಯೇ ಹಲವು ಕಾಲ್ಪನಿಕ ಪ್ರಾಣಿ ಶಿಲ್ಪಗಳು ಸಹ ಕೆತ್ತಲ್ಪಟ್ಟಿವೆ.

ಕಾಲ್ಪನಿಕ ಎಂಬ ಹೆಸರೇ ಸೂಚಿಸುವಂತೆ ವಾಸ್ತವಿಕತೆಗೆ ಪರ್ಯಾಯವಾದ ಕಲ್ಪನಾ ಸಾಮರ್ಥ್ಯ ಅಥವಾ ಯೋಚನಾ ಶಕ್ತಿಯಿಂದ ಹೊಳೆದ ಪ್ರತಿಬಿಂಬಗಳೇ ಕಾಲ್ಪನಿಕ ರೂಪಗಳು. ಶಿಲ್ಪಿಗಳು ತಮ್ಮ ಇಂತಹ ಪ್ರತಿಬಿಂಬಗಳನ್ನು ಶಿಲ್ಪದ ಮಾಧ್ಯಮದಲ್ಲಿ ವ್ಯಕ್ತಪಡಿಸಿದ್ದು ಅವುಗಳನ್ನು ಸಾಮಾನ್ಯವಾಗಿ ಕಾಲ್ಪನಿಕ ಶಿಲ್ಪಗಳೆಂದು ಕರೆಯಲಾಗುತ್ತದೆ.


ಹಂಪಿ ಪರಿಸರದ ಕಾಲ್ಪನಿಕ ಪ್ರಾಣಿ ಶಿಲ್ಪಗಳನ್ನು ಅಧ್ಯಯನ ದೃಷ್ಟಿಯಿಂದ ಪ್ರಾಣಿ–ಪ್ರಾಣಿಗಳ ಸಂಯುಕ್ತ ಶಿಲ್ಪಗಳು ಹಾಗೂ ಪ್ರಾಣಿ–ಪಕ್ಷಿಗಳ ಸಂಯುಕ್ತ ಶಿಲ್ಪಗಳೆಂದು ಎರಡು ರೀತಿಯಾಗಿ ವರ್ಗೀಕರಿಸಿಕೊಳ್ಳಲಾಗಿದೆ.

೫.೧. ಪ್ರಾಣಿ–ಪ್ರಾಣಿಗಳ ಸಂಯುಕ್ತ ಶಿಲ್ಪಗಳು

ಯಾಳಿ:

ಯಾಳಿಯು ಅನೇಕ ಹಿಂದೂ ದೇವಸ್ಥಾನಗಳಲ್ಲಿ ಕಂಡುಬರುವ ಒಂದು ಪೌರಾಣಿಕ ಜೀವಿಯಾಗಿದ್ದು ಸಂಸ್ಕೃತದಲ್ಲಿ ಇದನ್ನು ವ್ಯಾಳ ಎಂತಲೂ ಕರೆಯುತ್ತಾರೆ. ಸಾಮಾನ್ಯವಾಗಿ ಇದನ್ನು ಸಿಂಹದ ದೇಹ, ಮೊಸಳೆಯ ಬಾಯಿ ಮತ್ತು ಆನೆಯ ಸೊಂಡಿಲು ಮಿಶ್ರಿತ ರೀತಿಯ ಆಕಾರದಲ್ಲಿ ಚಿತ್ರಿಸಲಾಗಿರುತ್ತದೆ. ಯಾಳಿಯು ಭಾರತೀಯ ಕಲೆಯಲ್ಲಿ ಒಂದು ವಿಶಿಷ್ಟ ಲಕ್ಷಣವಾಗಿದ್ದು ದಕ್ಷಿಣ ಭಾರತೀಯ ಶಿಲ್ಪಗಳಲ್ಲಿ ೧೬ನೇ ಶತಮಾನದಲ್ಲಿ ವ್ಯಾಪಕವಾಗಿ ಬಳಸಲಾಗಿದೆ.[೧] ಯಾಳಿಯು ದೇವಸ್ಥಾನಗಳಲ್ಲಿ ಕಂಡುಬರುವ ಪ್ರಮುಖ ಕಾಲ್ಪನಿಕ ಪ್ರಾಣಿ ಶಿಲ್ಪವಾಗಿದ್ದು ಇದರ ಉಬ್ಬಿದ ಕಣ್ಣುಗಳು, ಮೊಲದ ಕಿವಿಗಳು, ಮೊಸಳೆಯ ದವಡೆ ಹಲ್ಲುಗಳು, ಆನೆಯ ದಂತ ಮತ್ತು ಸೊಂಡಿಲು ಮುಂತಾದ ಲಕ್ಷಣಗಳ ಸಮ್ಮಿಶ್ರವಾಗಿದೆ. ಇದು ತನ್ನ ಹಿಂಗಾಲಿನ ಕಾಲುಗಳ ಮೇಲೆ ಏಕರೂಪವಾಗಿ ನಿಲ್ಲುತ್ತದೆ.

ಕೆಲವು ಶಿಲ್ಪಗಳಲ್ಲಿ ಈ ರೀತಿಯಾಗಿ ಆನೆಯ ಮೇಲೆ ನಿಂತಿರುತ್ತದೆ. ಇದನ್ನು ಗಜವ್ಯಾಳಿ ಎಂದು ಕರೆಯಲಾಗುತ್ತದೆ. ಯಾಳಿಗಳನ್ನು ಸಿಂಹ, ಹುಲಿ ಮತ್ತು ಆನೆಗಳಿಗಿಂತ ಶಕ್ತಿಶಾಲಿ ಪ್ರಾಣಿಯೆಂದು ನಂಬುತ್ತಾರೆ. ಇವುಗಳಲ್ಲಿ ಸುಮಾರು ೧೬ ಬಗೆಯ ಯಾಳಿಗಳಿವೆ ಎಂದು ಅಪರಾಜಿತಪೃಚ್ಛಾ ಗ್ರಂಥದಲ್ಲಿ ಉಲ್ಲೇಖವಾಗಿರುವುದು ತಿಳಿದುಬರುತ್ತದೆ.[೨] ಹಂಪಿ ಪರಿಸರದ ಕಂಬಗಳಲ್ಲಿನ ಕೆಲವು ಯಾಳಿಗಳು ಕುಳಿತಂತೆ, ನಿಂತುಕೊಂಡಂತೆ, ಮತ್ತೆ ಕೆಲವು ಆನೆಯ ಮೇಲೆ ನಿಂತಂತೆ ಹಾಗೂ ಅವುಗಳ ಬಾಯಿಯಿಂದ ಹೂಬಳ್ಳಿಯೊಂದು ಹೊರಬಂದಂತೆ ತೋರಿಸಲಾಗಿರುತ್ತದೆ.




ಯಾಳಿ ಶಿಲ್ಪ,
ವಿಜಯವಿಠಲ ದೇವಾಲಯ, ಹಂಪಿ

ಹಂಪಿ ಪರಿಸರದ ಕಾಲ್ಪನಿಕ ಶಿಲ್ಪಗಳಲ್ಲಿ ಯಾಳಿಗಳೇ ಅಧಿಕ ಸಂಖ್ಯೆಯಲ್ಲಿ ಕಂಡುಬಂದಿದ್ದು, ಸಾಮಾನ್ಯವಾಗಿ ಬಹುತೇಕ ಹಂಪಿಯ ದೇವಾಲಯಗಳ ಮುಖಮಂಟಪ, ಕಲ್ಯಾಣ ಮಂಟಪ, ಕಂಬಗಳು ಹಾಗೂ ಪ್ರವೇಶದ್ವಾರದ ಪಟ್ಟಿಗಳಲ್ಲಿ ಅಲಂಕಾರದ ದೃಷ್ಟಿಯಿಂದ ಕಂಡರಿಸಲಾಗಿರುತ್ತದೆ.

ಮಕರ

ಮಕರ ಒಂದು ಕಾಲ್ಪನಿಕ ಪ್ರಾಣಿಯಾಗಿದ್ದು ಮುಂಭಾಗದಲ್ಲಿ ಜಿಂಕೆ, ಮೊಸಳೆ, ಆನೆಯ ಭಾಗಗಳು ಮತ್ತು ಹಿಂಭಾಗದಲ್ಲಿ ಅರ್ಧ ಜಲಚರ ಪ್ರಾಣಿಯಾದ ಮೀನು ಅಥವಾ ನೀರು ನಾಯಿಯ ಭಾಗಗಳನ್ನು ಹೊಂದಿರುವಂತೆ ಕಂಡರಿಸಲಾಗಿರುತ್ತದೆ. ಆದರೂ ಕೆಲವೊಮ್ಮೆ ನವಿಲು ಅಥವಾ ಹೂವಿನ ತೋರಣವನ್ನು ಚಿತ್ರಿಸಲಾಗಿರುತ್ತದೆ.[೩]



ಮಕರ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

ಮಕರವನ್ನು ಹೆಬ್ಬಾಗಿಲು ಮತ್ತು ಹೊಸ್ತಿಲುಗಳ ರಕ್ಷಕನೆಂದು ಪರಿಗಣಿಸುವುದರ ಜೊತೆಗೆ ಸಿಂಹಾಸನ, ಅರಮನೆ, ಮತ್ತು ದೇವಾಲಯಗಳ ರಕ್ಷಕನೆಂದು ಸಹ ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮತ್ತು ದೇವಾಲಯದ ಅಲಂಕರಣೆ ಹಿನ್ನೆಲೆಯಲ್ಲಿ ಶಿಲ್ಪಿ ಹಂಪಿ ಪರಿಸರದ ಬಹುತೇಕ ದೇವಾಲಯಗಳಲ್ಲಿ






ಈ ಮಕರದ ಕಾಲ್ಪನಿಕ ಶಿಲ್ಪಗಳನ್ನು ಕೆತ್ತಿರಬಹುದು. ಮಕರದ ಮುಂಭಾಗದಲ್ಲಿ ಮೊಸಳೆ ಮತ್ತು ಆನೆಯ ಭಾಗಗಳು ಹಾಗೂ ಹಿಂಭಾಗದಲ್ಲಿ ಮೀನಿನ ಭಾಗವಿರುವ ಶಿಲ್ಪಗಳು ಹಂಪಿ ಪರಿಸರದಲ್ಲಿ ವಿಠಲ ದೇವಾಲಯದ ದಕ್ಷಿಣ ಬದಿಯ ಪ್ರಾಕಾರ ಗೋಡೆಯ ಒಳಭಾಗದಲ್ಲಿ, ಪಟ್ಟಾಭಿರಾಮ ದೇವಾಲಯದ ಪೂರ್ವಕ್ಕಿರುವ ಪ್ರವೇಶದ್ವಾರದ ಭಿತ್ತಿಯಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಇದೇ ರೀತಿಯ ಶಿಲ್ಪ ಆಂಧ್ರಪ್ರದೇಶದ ಚಿಂತಲ ವೆಂಕಟರಮಣಸ್ವಾಮಿ ದೇವಾಲಯದ ಮುಖಮಂಟಪದ ಮೇಲ್ಚಾವಣಿಯಲ್ಲಿ ಕಂಡುಬರುತ್ತದೆ. ಕೆಲವು ಮಕರ ಶಿಲ್ಪಗಳ ಹಿಂಭಾಗದಲ್ಲಿ ಪಕ್ಷಿ ದೇಹ ಅಥವಾ ಹೂವಿನ ತೋರಣ ಹೊಂದಿರುವ ಶಿಲ್ಪಗಳು ಸಹ ಹಂಪಿಯ ಹಜಾರರಾಮ, ಚಂಡಿಕೇಶ್ವರ, ಮಲಪನಗುಡಿಯ ಮಲ್ಲಿಕಾರ್ಜುನ ಮತ್ತು ತಿಮ್ಮಲಾಪುರದ ವೇಣುಗೋಪಾಲ ದೇವಾಲಯ ಹಾಗೂ ಆಂದ್ರಪ್ರದೇಶದ ಚಿಂತಲ ವೆಂಕಟರಮಣಸ್ವಾಮಿ ದೇವಾಲಯದ ಅಧಿಷ್ಠಾನದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ವಿಜಯನಗರ ಕಾಲಾವಧಿಯಲ್ಲಿ ಈ ಮಕರ ಶಿಲ್ಪವನ್ನು ಪ್ರವೇಶದ್ವಾರದ ಅಲಂಕರಣೆಯ ವಸ್ತುವಾಗಿ ಬಳಸಿರುವುದು ತಿಳಿದುಬರುತ್ತದೆ.[೪]

ನಂದಿ ಮತ್ತು ಆನೆಗೆ ಒಂದೇ ತಲೆಯಿರುವ ಸಂಯುಕ್ತ ಶಿಲ್ಪ:

ನಂದಿ ಮತ್ತು ಆನೆಗೆ ಒಂದೇ ತಲೆಯನ್ನು ಸಂಯುಕ್ತಗೊಳಿಸಿರುವ ಈ ಕಾಲ್ಪನಿಕ ಶಿಲ್ಪದಲ್ಲಿ ನಂದಿಯು ಮೇಲೆ ನೋಡುತ್ತಿರುವಂತೆ ಮತ್ತು ಆನೆಯು ಕೆಳಗೆ ನೋಡುತ್ತಿರುವಂತೆ ಕೆತ್ತಲ್ಪಟ್ಟಿದೆ. ಇದೇ ರೀತಿಯ ಲಕ್ಷಣಗಳನ್ನು ಹೊಂದಿರುವ ಶಿಲ್ಪಗಳು ಚೋಳರ ಕಾಲದ ದೇವಾಲಯಗಳಲ್ಲೂ ಕಂಡುಬಂದಿರುತ್ತವೆ.[೫] ಈ ರೀತಿಯ ಶಿಲ್ಪಗಳು ಹಂಪಿ ಪರಿಸರದ ವಿರೂಪಾಕ್ಷ, ಅಚ್ಯುತರಾಯ, ವಿಠಲ, ಪಟ್ಟಾಭಿರಾಮ, ಮಾಲ್ಯವಂತ ರಘುನಾಥ, ಹಜಾರರಾಮ ದೇವಾಲಯ, ಗಾಯಿತ್ರಿ ಪೀಠ ಹಾಗೂ ಜಂಬುನಾಥನಹಳ್ಳಿಯ ಜಂಬುನಾಥೇಶ್ವರ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬಂದಿರುತ್ತವೆ. ಈ ಶಿಲ್ಪಗಳಿಂದ ಶಿಲ್ಪಿಯ ಸೃಜಲಶೀಲತೆ ಮತ್ತು ಅವನ ಕಲ್ಪನಾ ಸಾಮರ್ಥ್ಯವನ್ನು ತಿಳಿಯಬಹುದು. ಆದರೂ ಇವುಗಳನ್ನು ದೇವಾಲಯದ ಅಲಂಕರಣೆಯ ದೃಷ್ಟಿಯಿಂದ ಕೆತ್ತಲ್ಪಟ್ಟಿರುವುದು ಗಮನಾರ್ಹ ಸಂಗತಿ.



ಸಂಯುಕ್ತ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

ಕೋತಿಯ ಎರಡು ತಲೆಗಳಿಂದ ನಾಲ್ಕು ದೇಹಗಳನ್ನು ಸಂಯುಕ್ತಗೊಳಿಸಿರುವ ಶಿಲ್ಪ



ಕೋತಿಗಳ ಸಂಯುಕ್ತ ಶಿಲ್ಪ, ವಿಜಯವಿಠಲ ದೇವಾಲಯ, ಹಂಪಿ

ಈ ಶಿಲ್ಪಗಳು ಸಹ ದೇವಾಲಯದ ಅಲಂಕರಣೆಗಾಗಿ ಕೆತ್ತಲ್ಪಟ್ಟಿರುವ ಕಾಲ್ಪನಿಕ ಶಿಲ್ಪಗಳಾಗಿವೆ. ಈ ಶಿಲ್ಪಗಳಲ್ಲಿ ನಾಲ್ಕು ಕೋತಿಗಳು (ಮುಸಿಯ) ತನ್ನ ಒಂದು ಕಾಲನ್ನು ಚಾಚಿಕೊಂಡು ಚೌಕಕಾರವಾಗಿ ಕುಳಿತಂತೆ ಚಿತ್ರಿಸಲಾಗಿದೆ. ಈ ನಾಲ್ಕು ದೇಹಗಳಿಗೆ ಎರಡು ತಲೆಗಳ ಮೂಲಕ ಸಂಯುಕ್ತಗೊಳಿಸಿರುವುದು ಆ ಶಿಲ್ಪಿಯ ಚಾಣಾಕ್ಷತನದ ಕೈಚಳಕ ಎಂದರೆ ತಪ್ಪಾಗಲಾರದು. ಈ ರೀತಿಯ ಶಿಲ್ಪಗಳು ಹಂಪಿಯ ಅಚ್ಯುತರಾಯ, ವಿಠಲ ಮತ್ತು ಮಾಲ್ಯವಂತ ರಘುನಾಥ ದೇವಾಲಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ.

೫.೨ ಪ್ರಾಣಿ-ಪಕ್ಷಿಗಳ ಸಂಯುಕ್ತ ಶಿಲ್ಪಗಳು

ನವಿಲಿನ ದೇಹಕ್ಕೆ ಸಿಂಹ ಮುಖವಿರುವ ಸಂಯುಕ್ತ ಶಿಲ್ಪ:



ಶ್ರೀವಿರೂಪಾಕ್ಷ ದೇವಾಲಯ, ಹಂಪಿ

ನವಿಲಿನ ದೇಹಕ್ಕೆ ಸಿಂಹದ ಮುಖವನ್ನು ಜೋಡಣೆ ಮಾಡಿದಂತೆ ಬಿಡಿಸಿರುವ ಶಿಲ್ಪಗಳನ್ನು ಕಾಲ್ಪನಿಕ ಶಿಲ್ಪಗಳೆಂದು ಗುರುತಿಸಿದ್ದು, ಇಂತಹ ಶಿಲ್ಪಗಳು ಹಂಪಿ ಪರಿಸರದ ಅಚ್ಯುತರಾಯ, ವಿರೂಪಾಕ್ಷ, ವಿಠಲ, ಹಜಾರ, ಮಾಲ್ಯವಂತ ರಘುನಾಥ, ಪಟ್ಟಾಭಿರಾಮ ದೇವಾಲಯ, ಮಲಪನಗುಡಿಯ ಮಲ್ಲಿಕಾರ್ಜುನ, ಜಂಬುನಾಥನಹಳ್ಳಿಯ ಜಂಬುನಾಥೇಶ್ವರ ಮತ್ತು ತಿಮ್ಮಲಾಪುರದ ವೇಣುಗೋಪಾಲಸ್ವಾಮಿ ದೇವಾಲಯ ಇನ್ನೂ ಮುಂತಾದ ಸ್ಮಾರಕಗಳಲ್ಲಿನ ಕಂಬಗಳಲ್ಲಿ ಮತ್ತು ದ್ವಾರ ಪಟ್ಟಿಕೆಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಹಂಪಿಯ ಬಹುತೇಕ ಈ ರೀತಿಯ ಶಿಲ್ಪಗಳಲ್ಲಿ ಸಿಂಹದ ಮುಖವು ಎದುರುಗಡೆಗೆ ನೇರವಾಗಿ ನೋಡುತ್ತಿರುವಂತೆ ಮತ್ತು ಅದರ ಹಲ್ಲುಗಳು ಬಾಯಿಯಿಂದ ಹೊರಬಂದಿದ್ದು ಉದ್ದವಾಗಿರುವಂತೆ ಹಾಗೂ ನವಿಲಿನ ಬಲಗಾಲು ಮೇಲಕ್ಕೆ ಎತ್ತಿಕೊಂಡು ಮುನ್ನೆಡೆಯುತ್ತಿರುವಂತೆ, ಇದರ ಪುಕ್ಕಗಳು ಅಥವಾ ಬಾಲದ ಗರಿಗಳು ಉದ್ದವಾಗಿರುವಂತೆಯೂ ತೋರಿಸಲಾಗಿದೆ.

ಸಿಂಹದ ದೇಹಕ್ಕೆ ಮೊಸಳೆಯ ಮುಖವಿರುವ ಸಂಯುಕ್ತ ಶಿಲ್ಪ

ಸಿಂಹದ ದೇಹಕ್ಕೆ ಮೊಸಳೆಯ ಮುಖವನ್ನು ಜೋಡಿಸಿದಂತೆ ಕೆತ್ತಲಾಗಿರುವ ಶಿಲ್ಪಗಳನ್ನು ಕಾಲ್ಪನಿಕ





ಶಿಲ್ಪಗಳೆಂದು ಕರೆಯಲಾಗಿದೆ. ಹಂಪಿಯ ವಿಠಲ ಮತ್ತು ಅಚ್ಯುತರಾಯ ದೇವಾಲಯಗಳಲ್ಲಿ ಮಾತ್ರ ಇವು ಪ್ರಮುಖವಾಗಿ ಕಂಡುಬಂದಿರುತ್ತವೆ. ಇಲ್ಲಿನ ಶಿಲ್ಪಗಳಲ್ಲಿ ಮೊಸಳೆಯ ಮುಖವು ಸಿಂಹದ ಬಾಲವನ್ನು ನೋಡುತ್ತಿರುವಂತೆ ತೋರಿಸಲಾಗಿದೆ. ಇದು ಸಹ ಶಿಲ್ಪಿಯ ಯೋಚನಾ ಶಕ್ತಿಯ ಪ್ರತಿಬಿಂಬದ ರೂಪವಾಗಿದೆ.



ಸಂಯುಕ್ತ ಶಿಲ್ಪ ಅಚ್ಯುತರಾಯ ದೇವಾಲಯ, ಹಂಪಿ




ಸಂಯುಕ್ತ ಶಿಲ್ಪ, ಹಜಾರರಾಮ ದೇವಾಲಯ, ಹಂಪಿ

ಅರ್ಧದೇಹ ಪಕ್ಷಿ, ಅರ್ಧದೇಹ ಕುದುರೆಯ ಸಂಯುಕ್ತ ಶಿಲ್ಪ:

ಪಕ್ಷಿಯ ಅರ್ಧ ದೇಹ ಮತ್ತು ಕುದುರೆಯ ಅರ್ಧ ದೇಹವನ್ನು ಬಳಸಿಕೊಂಡು ಕೆತ್ತಲಾಗಿರುವ ಈ ಶಿಲ್ಪಗಳನ್ನು ಕಾಲ್ಪನಿಕ ಶಿಲ್ಪಗಳೆಂದು ಪರಿಗಣಿಸಲಾಗಿದೆ. ಇಂತಹ ಶಿಲ್ಪಗಳಲ್ಲಿ ಪಕ್ಷಿ(ನವಿಲು)ಯ ಕಾಲುಗಳನ್ನು ಒಳಗೊಂಡಂತೆ ಹಿಂದಿನ ದೇಹ ಭಾಗ ಮತ್ತು ಕುದುರೆಯ ಮುಂದಿನ ಕಾಲುಗಳನ್ನು ಒಳಗೊಂಡಂತೆ ಅದರ ಮುಖಭಾಗವನ್ನು ಹೊಂದಿರುವಂತೆ ತೋರಿಸಲಾಗಿದೆ. ಹಂಪಿಯ ಹಜಾರರಾಮಸ್ವಾಮಿ ದೇವಾಲಯದ ಕಲ್ಯಾಣ ಮಂಟಪದ ಕಂಬದಲ್ಲಿ, ಮಾಲ್ಯವಂತ ರಘುನಾಥ ದೇವಾಲಯದ ಕಲ್ಯಾಣ ಮಂಟಪದ ಕಂಬದಲ್ಲಿ, ಮತ್ತು ಆನೆಗೊಂದಿಯ ರಂಗನಾಥಸ್ವಾಮಿ ದೇವಾಲಯದ ಕಲ್ಯಾಣ ಮಂಟಪದ ಕಂಬದಲ್ಲಿ ತಲಾ ಒಂದೊಂದರಂತೆ ಒಟ್ಟು ಮೂರು ಶಿಲ್ಪಗಳು ಕಂಡುಬಂದಿರುತ್ತವೆ. ಇದೇ ರೀತಿಯ ಶಿಲ್ಪವು ಆಂಧ್ರಪ್ರದೇಶದ ತಾಡಪತ್ರಿಯ ಚಿಂತಲ ವೆಂಕಟರಮಣಸ್ವಾಮಿ ದೇವಾಲಯದ ಮುಖಮಂಟಪದಲ್ಲಿ ಕಂಡುಬರುತ್ತದೆ. ಈ ಎಲ್ಲಾ ಶಿಲ್ಪಗಳಲ್ಲಿ ಕುದುರೆಗೆ ಲಗಾಮನ್ನು ತೋರಿಸಿದ್ದು ತನ್ನ ಎರಡು ಕಾಲುಗಳನ್ನು ಎತ್ತಿ ಜಿಗಿಯುತ್ತಿರುವಂತೆ ಕಂಡರಿಸಲಾಗಿದೆ.

ನವಿಲಿನ ಒಂದೇ ದೇಹಕ್ಕೆ ಎರಡು ತಲೆಗಳಿರುವ ಸಂಯುಕ್ತ ಶಿಲ್ಪ


ನವಿಲಿಗೆ ಹಿಂದೆ ಮುಂದೆ ಎರಡೂ ಕಡೆ ತಲೆಗಳಿರುವಂತೆ ಬಿಡಿಸಲ್ಪಟ್ಟಿರುವ ಶಿಲ್ಪಗಳು ಸಹ ಕಾಲ್ಪನಿಕ ಶಿಲ್ಪಗಳಾಗಿವೆ. ಇಂತಹ ಒಂದು ಶಿಲ್ಪವನ್ನು



ಹಂಪಿಯ ಅಚ್ಯುತರಾಯ ದೇವಾಲಯದ ಪ್ರಾಕಾರ ಮಂಟಪದ ಸಾಲು ಕಂಬದಲ್ಲಿ ಕಂಡರಿಸಲಾಗಿದೆ. ಈ ಶಿಲ್ಪದಲ್ಲಿ ನವಿಲಿನ ಬಾಲದ ಬದಲಿಗೆ ಅದರ ಮತ್ತೊಂದು ತಲೆಯನ್ನೇ ಬಿಡಿಸಿರುವುದು ವಿಶೇಷವಾಗಿದ್ದು ಶಿಲ್ಪಿಯ ಅಂತರಾಳದ ಮನೋಭಾವನೆಯ ಪ್ರತೀಕವೇ ಇಂತಹ ಶಿಲ್ಪಗಳ ಉಗಮಕ್ಕೆ ಕಾರಣ ಎನ್ನಬಹುದು. ಹಂಪಿ ಪರಿಸರದಲ್ಲಿ ಈ ರೀತಿಯ ಏಕೈಕ ಶಿಲ್ಪ ಇದಾಗಿದೆ.

ಗಂಡಭೇರುಂಡ

ಗಂಡಭೇರುಂಡವು ಎರಡು ತಲೆಗಳನ್ನು ಹೊಂದಿರುವ ಭಯಾನಕ ಕಾಲ್ಪನಿಕ ಪಕ್ಷಿಯಾಗಿದೆ. ಇದು ಅಪಾರ ಶಕ್ತಿಯ ಸಂಕೇತವಾಗಿದ್ದು ಕರ್ನಾಟಕ ರಾಜ್ಯ ಸರ್ಕಾರದ ಅಧಿಕೃತ ಲಾಂಛನವಾಗಿ ಬಳಸಲಾಗುತ್ತಿದೆ. ಗಂಡಭೇರುಂಡ ಪಕ್ಷಿಯು ಗರುಡ ಪಕ್ಷಿಯನ್ನು ಹೋಲುತ್ತದೆಯಾದರೂ ಬಾಲವು ನವಿಲಿನ ಬಾಲವನ್ನು ಹೋಲುತ್ತದೆ. ಈ ರೀತಿಯ ಶಿಲ್ಪಗಳು ಹಂಪಿಯ ಅಚ್ಯುತರಾಯ ದೇವಾಲಯದ ನೂರು ಕಂಬಗಳ ಮಂಟಪದಲ್ಲಿ ಹಾಗೂ ಕಮಲಾಪುರ ನಗರೇಶ್ವರ ದೇವಾಲಯದ ಪ್ರವೇಶ ದ್ವಾರ ಎಡ ಮತ್ತು ಬಲ ಭಾಗದ ಪ್ರಕಾರ ಗೋಡೆಯ ಭಿತ್ತಿಯಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಅಚ್ಯುತರಾಯ ದೇವಾಲಯದಲ್ಲಿನ ಶಿಲ್ಪವು ಪ್ರಸ್ತುತ ರಾಜ್ಯ ಸರ್ಕಾರದ ಅಥವಾ ಪೋಲಿಸ್ ಇಲಾಖೆಯ ಲಾಂಛನದಲ್ಲಿರುವಂತೆ ಕೆತ್ತಲ್ಪಟ್ಟಿದೆ. ಆದರೆ ಕಮಲಾಪುರದ ನಗರೇಶ್ವರ ದೇವಾಲಯದಲ್ಲಿನ ಗಂಡಭೇರುಂಡ



ಗಂಡಭೇರುಂಡ, ನಗರೇಶ್ವರ ದೇವಾಲಯ, ಕಮಲಾಪುರ



ಗಂಡಭೇರುಂಡ,
ಅಚ್ಯುತರಾಯ ದೇವಾಲಯ, ಹಂಪಿ

ಶಿಲ್ಪಗಳಲ್ಲಿ ಎರಡು ಕೊಕ್ಕುಗಳಲ್ಲಿ ಮತ್ತು ಎರಡು ಕಾಲುಗಳಲ್ಲಿ ಒಂದೊಂದರಂತೆ ನಾಲ್ಕು ಆನೆಗಳನ್ನು ಹಿಡಿದು ಹಾರುತ್ತಿರುವಂತೆ ಕೆತ್ತಲಾಗಿದೆ. ಇದೇ ರೀತಿಯ ಶಿಲ್ಪ ಆಂಧ್ರದ ತಾಡಪತ್ರಿಯ ಬುಗ್ಗ ರಾಮಲಿಂಗೇಶ್ವರ ದೇವಾಲಯದ ಪ್ರವೇಶ ದ್ವಾರದ ಪಟ್ಟಿಕೆಯಲ್ಲಿ ಕಂಡುಬರುತ್ತದೆ. ಇಲ್ಲಿ ಪಕ್ಷಿಯು ತನ್ನ ಕಾಲುಗಳಲ್ಲಿ ಆನೆಗಳನ್ನು ಹಿಡಿಯದೇ ಕುಳಿತಂತೆ ತೋರಿಸಿರುವುದು ಈ ಶಿಲ್ಪದ ಭಿನ್ನತೆಯಾಗಿದೆ. ಹಾಗೆಯೇ ವಿಜಯನಗರ ಅರಸರು ತಮ್ಮ ನಾಣ್ಯಗಳಲ್ಲೂ ಈ ಪಕ್ಷಿಯನ್ನು ಮುದ್ರಿಸಿದ್ದು ಅದರ ಮಹತ್ವವನ್ನು ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಬೃಹತ್ ಗಾತ್ರದ ಆನೆಗಳನ್ನು ಹಿಡಿದು ಎತ್ತಬಲ್ಲ ಈ ಪಕ್ಷಿಗಳು ಅತ್ಯಂತ ಶಕ್ತಿಶಾಲಿ ಎಂಬುದನ್ನು ಶಿಲ್ಪಗಳಲ್ಲಿ ತೋರಿಸುವಲ್ಲಿ ಶಿಲ್ಪಿ ಯಶಸ್ವಿಯಾಗಿದ್ದಾನೆ.

ಹಂಪಿ ಪರಿಸರದಲ್ಲಿ ಹೀಗೆ ಇನ್ನೂ ಹಲವು ಕಾಲ್ಪನಿಕ ಶಿಲ್ಪಗಳನ್ನು ಕಂಡರಿಸಿದ್ದು ಪ್ರಮುಖವಾದವುಗಳನ್ನು ಈ ಮೇಲಿನಂತೆ ವಿವರಿಸಲಾಗಿದೆ. ಈ ಎಲ್ಲಾ ಶಿಲ್ಪಗಳು ಶಿಲ್ಪಿಯ ಸೃಜನಶೀಲತೆ ಅಥವಾ ಕಲ್ಪನೆಯ ಪ್ರತಿಬಿಂಬವಾದರೂ ದೇವಾಲಯದ ಅಲಂಕರಣೆಯ ಉದ್ದೇಶದಿಂದ ಇಂತಹ ಶಿಲ್ಪಗಳನ್ನು ಕೆತ್ತಲಾಗಿದೆ ಎಂಬುದು ತಿಳಿದುಬರುತ್ತದೆ.

ಕೊನೆ ಟಿಪ್ಪಣಿಗಳು

೧. Anna L. Dallapiccola, Anila Verghese., 1998, *"Sculpture at Vijayanagara: Iconography and Style"*, p. 105.

೨. Krishnamurthy K., 1985, *"Mythical Animals in Indian Art"*, p. 04.

೩. *https://en. Wikipedia.org/wiki/makara.*

೪. Anna L. Dallapiccola, Anila Verghese., 1998, *Op Cit,* p.106.

೫. Adinarayana M., 2001, *"Decorative Arts of South Indian Temples"*, p. 81

❑❑❑

अ ಧ್ಯಾಯ : ಆರು

ಸಮಾರೋಪ

ಅಧ್ಯಾಯ

೭

ಸಮಾರೋಪ

ಹಂಪಿಯು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಒಂದು ಐತಿಹಾಸಿಕ ಕೇಂದ್ರವಾಗಿದ್ದು ತುಂಗಭದ್ರಾ ನದಿ ದಂಡೆಯ ಮೇಲಿದೆ. ವಿಜಯನಗರ ಸ್ಥಾಪನೆಯ ಮುಂಚಿನಿಂದಲೂ ಪಂಪಾಕ್ಷೇತ್ರ, ಪಂಪಾತೀರ್ಥ, ಭಾಸ್ಕರಕ್ಷೇತ್ರ, ವಿರೂಪಾಕ್ಷ ಮಹಾಕ್ಷೇತ್ರ ಮತ್ತು ಕಿಷ್ಕಿಂದೆ ಮೊದಲಾದ ನಾಮಗಳಿಂದ ಪ್ರಸಿದ್ಧಿ ಹೊಂದಿ ಜನಸಾಮಾನ್ಯರಲ್ಲಿ ಆಳವಾಗಿ ಬೇರೂರಿದೆ. ವಿಜಯನಗರ ಸ್ಥಾಪನೆಯಿಂದ ದಕ್ಷಿಣ ಭಾರತದ ಅಂದಿನ ಮಹಾನಗರಗಳಲ್ಲಿ ಹಂಪಿ ಒಂದೆನಿಸಿತು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದು ದೇಶ – ವಿದೇಶಗಳಲ್ಲಿ ಕೀರ್ತಿ ಗಳಿಸಿತು. ಇದರ ಉಚ್ಛ್ರಾಯದ ವೈಭವವನ್ನು ಅನೇಕ ವಿದೇಶಿ ಪ್ರವಾಸಿಗರು, ರಾಯಭಾರಿಗಳು ಹಾಗೂ ಚರಿತ್ರೆಗಾರರು ಮುಕ್ತ ಮನಸ್ಸಿನಿಂದ ವರ್ಣಿಸಿದ್ದಾರೆ. ಇಂಥ ಸಾಮ್ರಾಜ್ಯದ ಅವನತಿಯ ನಂತರ ಇದು ಹಾಳು ಹಂಪಿ ಎಂದು ಕರೆಸಿಕೊಂಡು, ಇಂದು ವಿಶ್ವಪರಂಪರೆಯ ತಾಣಗಳಲ್ಲೊಂದಾಗಿ ಸಹಸ್ರಾರು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವವನ್ನು ಪಡೆದಿರುವ ಹಂಪಿಯ ಪ್ರದೇಶವು ಇತಿಹಾಸದ ಪುಟಗಳಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. 'ವಿಜಯನಗರದಂತ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ' ಎಂಬ ವಿದೇಶಿ ಪ್ರವಾಸಿಗ ಅಬ್ದುಲ್ ರಜಾಕ್‌ನ ವರ್ಣನೆಗೆ ಇಂದಿಗೂ ಹಂಪಿಯಲ್ಲಿನ ಹಲವು ಸ್ಮಾರಕಗಳು ಹಾಗೂ ಅಳಿದುಳಿದ ಅವಶೇಷಗಳು ಮೂಕ ಸಾಕ್ಷಿಗಳಾಗಿವೆ. ಭೌಗೋಳಿಕವಾಗಿ ಹಲವು ಬೆಟ್ಟ–ಗುಡ್ಡಗಳಿಂದ ಆವೃತ್ತವಾದ ಹಂಪಿಯು ಪವಿತ್ರ ಕ್ಷೇತ್ರವೆಂದು ತಮ್ಮ ರಾಜಧಾನಿಯಾಗಿ ಮಾಡಿಕೊಂಡ ವಿಜಯನಗರ ಅರಸರು ಹಲವು ದೇವಾಲಯಗಳನ್ನು, ಮಂಟಪಗಳನ್ನು ನಿರ್ಮಿಸಿ ಅದರ ಪಾವಿತ್ರತೆ ಮತ್ತು ಮಹತ್ವವನ್ನು ಹೆಚ್ಚಿಸಿದರು. ಇವರು ನಿರ್ಮಿಸಿದ ಇಂತಹ ಸ್ಮಾರಕಗಳು ಅವರದೇ ಆದ ಕಲೆ ಮತ್ತು ವಾಸ್ತುಶಿಲ್ಪದ ರೂಪಗಳಾಗಿದ್ದು, ಇಂದು ಸಂಶೋಧನ ಕ್ಷೇತ್ರದ ಅಧ್ಯಯನಕಾರರಿಗೆ ಇದು ಬಗೆದಷ್ಟು ಹೊಸ ಹೊಸ ವಿಷಯಗಳನ್ನು ಹೊರಹಾಕುವ ಗಣಿಯಾಗಿದೆ. ಇಲ್ಲಿಯ ನಿಸರ್ಗ ನಿರ್ಮಿತ ಕಲ್ಲುಬಂಡೆಗಳನ್ನು ಬಳಸಿ ನಿರ್ಮಾಣಗೊಂಡ ಸ್ಮಾರಕಗಳು ಇಂದು ಅಧ್ಯಯನಕಾರರಿಗೆ ಮುಖ್ಯ ವಿಷಯವಸ್ತುವಾಗಿದ್ದು, ಈಗಾಗಲೇ ಈ ಕ್ಷೇತ್ರದ ಕುರಿತು ಹಲವು ಅಧ್ಯಯನಗಳು ಆಗಿವೆ ಮತ್ತು ಇನ್ನೂ ಹಲವು ಅಧ್ಯಯನಗಳು ನಡೆಯುತ್ತಲೇ ಇವೆ. ಪ್ರಸ್ತುತ ಅಧ್ಯಯನವು ಹಂಪಿ ಕ್ಷೇತ್ರವನ್ನು

ಕುರಿತಾಗಿದ್ದು 'ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ' ಎಂಬ ಶೀರ್ಷಿಕೆಯಡಿಯಲ್ಲಿ ವಿಷಯವನ್ನು ವಿಶ್ಲೇಷಿಸಲಾಗಿದೆ. ಅಂದರೆ ಹಂಪಿ ಪರಿಸರದಲ್ಲಿರುವ ಎಲ್ಲಾ ಸ್ಮಾರಕಗಳಲ್ಲಿ ಕಂಡರಿಸಲ್ಪಟ್ಟ ಪ್ರಾಣಿ ಶಿಲ್ಪಗಳ ಕುರಿತು ಸಮಗ್ರ ಅಧ್ಯಯನ ಕೈಗೊಂಡು ಪೂರ್ಣಗೊಳಿಸಲಾಗಿದೆ. ಪ್ರಸ್ತುತ ಅಧ್ಯಾಯವು ಸಮಾರೋಪವಾಗಿದ್ದು ನಮ್ಮ ಸಂಶೋಧನೆಯ ಸಂಕ್ಷಿಪ್ತ ರೂಪವಾಗಿದೆ. ಇದರಲ್ಲಿ ಆಯಾ ಅಧ್ಯಾಯದ ಪ್ರಮುಖ ವಿಷಯಗಳನ್ನು ಅಧ್ಯಾಯವಾರು ಸಂಕ್ಷಿಪ್ತವಾಗಿ ವಿವರಿಸಿ ಕೊನೆಯಲ್ಲಿ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತಾವನೆ, ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ ಇವೇ ಮೊದಲಾದ ಉಪ ಶೀರ್ಷಿಕೆಗಳಡಿಯಲ್ಲಿ ವಿವರಿಸಲ್ಪಟ್ಟಿದೆ. ಪ್ರಸ್ತಾವನೆಯಲ್ಲಿ ಶಿಲ್ಪ ಎಂಬ ಪದದ ಅರ್ಥ, ಶಿಲ್ಪದ ಪ್ರಕಾರಗಳು ಮತ್ತು ಅವುಗಳ ಮಹತ್ವವನ್ನು ತಿಳಿಸಲಾಗಿದೆ. ಹಾಗೂ ಶಿಲ್ಪದ ಪ್ರಾಚೀನತೆಯನ್ನು ಹರಪ್ಪ ನಾಗರೀಕತೆಯಿಂದ ಆರಂಭವಾಗಿ ಇತಿಹಾಸ ಕಾಲದ ವಿವಿಧ ಅರಸು ಮನೆತನಗಳಲ್ಲಿ ಬೆಳೆದು ಬಂದುದನ್ನು ಹಾಗೂ ವಿಜಯನಗರ ಕಾಲದವರೆಗೆ ಮುಂದುವರೆದ ಬಗೆಯನ್ನು ಹೇಳಲಾಗಿದೆ. ಪ್ರಸ್ತುತ ಅಧ್ಯಯನವು ವಿಜಯನಗರದ ರಾಜಧಾನಿಯಾಗಿ ಮೆರೆದ ಹಂಪಿಯ ಕುರಿತಾಗಿದ್ದು, ವಿಜಯನಗರ ಸಾಮ್ರಾಜ್ಯದ ಅನೇಕ ಅರಸರು ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಹಾಗೂ ಚಿತ್ರಕಲೆಗೆ ನೀಡಿದ ಪ್ರೋತ್ಸಾಹ ಮತ್ತು ಕೊಡುಗೆಗಳನ್ನು ತಿಳಿಸಲಾಗಿದೆ. ಹಾಗೆಯೇ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯಲ್ಲಿ ಹಂಪಿ ಪರಿಸರದಲ್ಲಿನ ಶಿಲ್ಪಗಳ ಕುರಿತು ನಡೆದ ಅಧ್ಯಯನಗಳನ್ನು ಸಮೀಕ್ಷೆ ಮಾಡಲಾಗಿದೆ. ಹಾಗೂ ಅವುಗಳಲ್ಲಿನ ಮಿತಿಗಳನ್ನು, ಕೊರತೆಗಳನ್ನು ಹೇಳಿದ್ದು ಮತ್ತು ಪ್ರಾಣಿ ಶಿಲ್ಪಗಳ ಸಮಗ್ರ ಅಧ್ಯಯನದ ಕೊರತೆಯನ್ನು ನೀಗಿಸಲು ಪ್ರಸ್ತುತ ಅಧ್ಯಯನದ ಶೀರ್ಷಿಕೆಯನ್ನು ಆಯ್ದುಕೊಂಡಿದ್ದರ ಕುರಿತು ಹೇಳಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಇಟ್ಟುಕೊಂಡ ಪ್ರಮುಖ ಉದ್ದೇಶದಂತೆ ಹಂಪಿ ಪರಿಸರದ ಸ್ಮಾರಕಗಳಲ್ಲಿ ಕಂಡುಬರುವ ಪ್ರಾಣಿಸಂಕುಲದ ಶಿಲ್ಪಗಳನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಅಂದರೆ ಇಲ್ಲಿನ ಲೌಕಿಕ ಮತ್ತು ಅಲೌಕಿಕ ಶಿಲ್ಪಗಳ ಜೊತೆಯಲ್ಲಿ ಪ್ರಾಣಿ ಶಿಲ್ಪಗಳನ್ನು ಅಧಿಕ ಸಂಖ್ಯೆಯಲ್ಲಿ ಕೆತ್ತಲಾಗಿದ್ದು, ಅವುಗಳ ಮಹತ್ವವನ್ನು ತಿಳಿಸುವುದರ ಜೊತೆಗೆ ಶಿಲ್ಪಗಳಲ್ಲಿನ ಪ್ರಾಣಿಗಳ ತಳಿಗಳನ್ನು ಗುರುತಿಸಲಾಗಿದೆ. ಹಾಗೆಯೇ ಪ್ರಾಣಿಗಳೊಂದಿಗೆ ಕೆಲವು ಸ್ಮಾರಕಗಳ ಸಂಬಂಧವನ್ನು ಮತ್ತು ಹಂಪಿ ಪರಿಸರದ ಉತ್ಖನನಗಳಲ್ಲಿ ಬೆಳಕಿಗೆ ಬಂದಿರುವ ಪ್ರಾಣಿಗಳ ಅವಶೇಷಗಳನ್ನು ವಿಶ್ಲೇಷಿಸಲಾಗಿ ಅವು ಯಾವ ಪ್ರಾಣಿಯದು, ಅದರ ವಿಶೇಷತೆಯೇನು ಎಂಬುದನ್ನು ತಿಳಿಸಲಾಗಿದೆ. ಈ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಹಂಪಿ ವಿಶ್ವಪರಂಪರೆ ತಾಣ ಎಂದು ಘೋಷಿಸಿರುವ ೨೪೨.೯ ಚ.ಕಿ.ಮೀ. ಪ್ರದೇಶವನ್ನು ಆವರಿಸಿದ ಒಟ್ಟು ೨೯ ಹಳ್ಳಿಗಳನ್ನು ಒಳಗೊಂಡಿರುವ ನಿರ್ದಿಷ್ಟ ಪ್ರದೇಶದ ವ್ಯಾಪ್ತಿಯನ್ನು ಆಯ್ದುಕೊಂಡು ಈ ಗ್ರಾಮಗಳಲ್ಲಿ ಕಂಡುಬರುವ ಇತಿಹಾಸ ಆರಂಭಕಾಲದಿಂದ ವಿಜಯನಗರದವರೆಗಿನ ಕಾಲದ ವ್ಯಾಪ್ತಿಯ ದೇವಾಲಯ, ಮಂಟಪಗಳಲ್ಲಿರುವ ಪ್ರಾಣಿ ಶಿಲ್ಪಗಳ ಛಾಯಾಚಿತ್ರಗಳನ್ನು ಕ್ಷೇತ್ರಕಾರ್ಯ ಕೈಗೊಳ್ಳುವುದರ ಮೂಲಕ ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಂಪಿ ಪರಿಸರದಲ್ಲಿ ಬಹುತೇಕ ಪ್ರಾಣಿ ಶಿಲ್ಪಗಳು ಕಣಶಿಲೆಯಿಂದ ರಚಿತಗೊಂಡಿದ್ದು ಅವುಗಳಿಗೆ ಹೆಚ್ಚು ಆದ್ಯತೆ ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಭೌಗೋಳಿಕ, ಪ್ರಾಗಿತಿಹಾಸ, ಪೌರಾಣಿಕ ಮತ್ತು ಸಾಮ್ರಾಜ್ಯದ ಚಾರಿತ್ರಿಕತೆ ಹಾಗೂ ಪ್ರಾಣಿಶಿಲ್ಪಗಳ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಲಾಗಿದೆ. ಹಂಪಿಯ ಭೌಗೋಳಿಕತೆಯಲ್ಲಿ ಈ ಪರಿಸರದ ಗಡಿ ಪ್ರದೇಶಗಳು, ಅಲ್ಲಿನ ಬೆಟ್ಟ-ಗುಡ್ಡಗಳು, ಮಣ್ಣು, ಶಿಲೆ, ಖನಿಜ, ಸಸ್ಯಗಳು, ನದಿ ಮತ್ತು ಕೆರೆಗಳು ಹಾಗೂ ಪ್ರಾಣಿಸಂಪತ್ತು ಮುಂತಾದವುಗಳ ವಿವರಣೆಯನ್ನು ತಿಳಿಸಲಾಗಿದೆ. ಪ್ರಾಗಿತಿಹಾಸದ ವಿವರಣೆಯಿಂದ ಹಳೇ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ ಹಾಗೂ ಬೃಹತ್ ಶಿಲಾಯುಗದ ಸಂಸ್ಕೃತಿ ಬೆಳೆದುಬಂದಿರುವುದು ತಿಳಿದುಬರುತ್ತದೆ. ಹಂಪಿ ಪರಿಸರದ ನವಶಿಲಾಯುಗದ ಚಿತ್ರಕಲೆಯಿಂದ ಮತ್ತು ಹಂಪಿ ಪರಿಸರದ ಉತ್ಖನನಗಳ ಪ್ರಾಣಿಗಳ ಅವಶೇಷಗಳ ಅಧ್ಯಯನದಿಂದ ಈ ಪ್ರದೇಶವು ಪಶುಪಾಲಕ ಸಂಸ್ಕೃತಿಯದ್ದಾಗಿತ್ತು ಎಂಬುದು ತಿಳಿದುಬರುತ್ತದೆ. ಪೌರಾಣಿಕ ಹಿನ್ನೆಲೆಯಲ್ಲಿ ಹಂಪಿಯು ಪಂಪಾಕ್ಷೇತ್ರವೆಂದು ಹೆಸರಾಗಿದ್ದು, ಪಂಪೆಯು ವಿರೂಪಾಕ್ಷನನ್ನು ವರಿಸಿ ಪಂಪಾ ವಿರೂಪಾಕ್ಷನಾಗಿ ಹಂಪಿಯ ಆಧಿದೈವಗಳಾದರು. ಹಾಗೂ ಹಂಪಿಯು ರಾಮಾಯಣದ ಕಿಷ್ಕಿಂದೆ ಅಂದರೆ ಆಂಜನೇಯನ ಕ್ಷೇತ್ರವೂ ಆಗಿತ್ತೆಂದು ತಿಳಿದುಬರುತ್ತದೆ. ಇದು ಇತಿಹಾಸ ಕಾಲದಲ್ಲಿ ಕ್ರಿ.ಶ ೧-೨ನೇ ಶತಮಾನ ಬೌದ್ಧರ ನೆಲೆಯಾಗಿತ್ತೆಂದು ಇಲ್ಲಿಯ ಉತ್ಖನನದಲ್ಲಿ ದೊರೆತ ಬ್ರಾಹ್ಮಿ ಲಿಪಿಯ ಶಾಸನ ಹಾಗೂ ಅವಶೇಷಗಳಿಂದ ತಿಳಿದುಬರುತ್ತದೆ. ಬಾದಾಮಿ ಚಲುಕ್ಯರ ಶಾಸನಗಳಲ್ಲಿ ಹಂಪಿಯು ಉಲ್ಲೇಖಗೊಂಡಿದೆ. ಹಾಗೆಯೇ ಇಲ್ಲಿ ರಾಷ್ಟ್ರಕೂಟರ ಕೆಲವು ರಚನೆಗಳು ಕಂಡುಬಂದಿದ್ದು ನಂತರದಲ್ಲಿ ಹಂಪಿ ಕಲ್ಯಾಣ ಚಲುಕ್ಯರು, ನೊಳಂಬರು, ಸಿಂಧರು, ಹೊಯ್ಸಳರು ಮುಂತಾದವರ ಆಳ್ವಿಕೆಗೆ ಒಳಪಟ್ಟಿತ್ತೆಂಬುದು ಹೇಳಲಾಗಿದೆ. ನಂತರದಲ್ಲಿ ಇಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ನಾಲ್ಕು ರಾಜ ಮನೆತನಗಳು ಆಳ್ವಿಕೆ ಮಾಡಿರುವುದನ್ನು ಹಾಗೂ ಪ್ರಾಣಿಶಿಲ್ಪಗಳ ಚಾರಿತ್ರಿಕ ಹಿನ್ನೆಲೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪ್ರಾಣಿಗಳ ಪರಿಚಯ ಮಾಡಿಕೊಡಲಾಗಿದೆ. ಅಂದರೆ ಇಲ್ಲಿ ಪ್ರಾಣಿಗಳ ಉಗಮ, ವಿಕಾಸವನ್ನು ತಿಳಿಸುವುದರ ಜೊತೆಗೆ ಒಟ್ಟಾರೆ ಪ್ರಾಣಿ ಸಾಮ್ರಾಜ್ಯವನ್ನು ಅಕಶೇರುಕಗಳು (ಬೆನ್ನೆಲುಬು ಇಲ್ಲದಿರುವ) ಮತ್ತು ಕಶೇರುಕಗಳು (ಬೆನ್ನೆಲುಬು ಇರುವ) ಎಂದು ಎರಡು ವರ್ಗಗಳಾಗಿ ವಿಂಗಡಿಸಿ, ಇವುಗಳಲ್ಲಿ ಬರುವ ಎಲ್ಲಾ ಪ್ರಾಣಿ ಪಕ್ಷಿಗಳ ವರ್ಗ, ಕುಟುಂಬ, ಜಾತಿ, ಅವುಗಳ ವೈಜ್ಞಾನಿಕ ಹೆಸರು, ಸಾಮಾನ್ಯ ಹೆಸರು ಮತ್ತು ಅವುಗಳ ಗುಣಲಕ್ಷಣಗಳು ಹೀಗೆ ಅವುಗಳ ಸಂಕ್ಷಿಪ್ತ ಪರಿಚಯವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಹಂಪಿ ಪರಿಸರದ ಪ್ರಾಣಿ ಶಿಲ್ಪಗಳ ವಿಶ್ಲೇಷಣೆ ಎಂಬುದು ನಾಲ್ಕನೆಯ ಮತ್ತು ಪ್ರಮುಖ ಅಧ್ಯಾಯವಾಗಿದ್ದು ಇದು ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನು ಅವಲಂಭಿಸಿದೆ. ಹಂಪಿ ಪರಿಸರದ ಸ್ಮಾರಕಗಳಲ್ಲಿನ ಶಿಲ್ಪಗಳನ್ನು ಧಾರ್ಮಿಕ ಶಿಲ್ಪಗಳಲ್ಲಿ ಪ್ರಾಣಿ ಶಿಲ್ಪಗಳು, ಧಾರ್ಮಿಕೇತರ ಶಿಲ್ಪಗಳಲ್ಲಿ ಪ್ರಾಣಿ ಶಿಲ್ಪಗಳು ಹಾಗೂ ಪ್ರಾಣಿಗಳ ಬಿಡಿ ಶಿಲ್ಪಗಳೆಂದು ವಿಂಗಡಿಸಿಕೊಂಡು ಅವುಗಳ ಪಾತ್ರ, ಮಹತ್ವವನ್ನು ವಿಶ್ಲೇಷಿಸಲಾಗಿದೆ. ಜೊತೆಗೆ ಶಿಲ್ಪಗಳಲ್ಲಿನ ಪ್ರಾಣಿಗಳ ದೇಹ ಲಕ್ಷಣಗಳ ಆಧಾರದ ಮೇಲೆ ಅವುಗಳ ತಳಿಗಳನ್ನು ಗುರುತಿಸಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ವಿಶ್ಲೇಷಿಸಿದ ಪ್ರಾಣಿ ಶಿಲ್ಪಗಳ ಪ್ರಮುಖ ಅಂಶಗಳನ್ನು ಸಂಕ್ಷಿಪ್ತಗೊಳಿಸಿ ಈ ಕೆಳಗೆ ನೀಡಲಾಗಿದೆ.

* ದಶಾವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ ಮತ್ತು ಕಲ್ಕಿ ಅವತಾರಗಳು ಪ್ರಮುಖವಾಗಿದ್ದು ಇಂತಹ ಅವತಾರಗಳಲ್ಲಿ ಪ್ರಾಣಿಗಳ ಬಳಕೆಯಾಗಿರುವುದು ಹಾಗೂ ಅವುಗಳ ಪಾತ್ರ ಮತ್ತು ಮಹತ್ವವನ್ನು ಇಲ್ಲಿನ ಶಿಲ್ಪಗಳು ಸ್ಪಷ್ಟಪಡಿಸುತ್ತವೆ. ಪ್ರಮುಖವಾಗಿ ಮತ್ಸ್ಯಾವತಾರದ ಮತ್ತು ಕೂರ್ಮಾವತಾರದ ಶಿಲ್ಪಗಳಲ್ಲಿನ ವಿಷ್ಣುವಿನ ದೇಹದ ಕೆಳಭಾಗದ ಪ್ರಾಣಿಯ ರೂಪವು ವಿವಿಧ ತಳಿಯದ್ದಾಗಿರುವುದನ್ನು ಶಿಲ್ಪಗಳ ಅಧ್ಯಯನದಿಂದ ಗುರುತಿಸಲಾಗಿದೆ.

* ಭಾಗವತಕ್ಕೆ ಸಂಬಂಧಿಸಿದ ಹಾಗೂ ರಾಮಾಯಣಕ್ಕೆ ಸಂಬಂಧಿಸಿದ ಕೆಲವು ನಿರೂಪಣಾತ್ಮಕ ಶಿಲ್ಪಗಳಲ್ಲಿ ಪ್ರಾಣಿ–ಪಕ್ಷಿಗಳು ಬಳಕೆಯಾಗಿರುವುದು ಮತ್ತು ಅವುಗಳ ಪಾತ್ರ, ಮಹತ್ವವನ್ನು ವಿವರಿಸುವುದರ ಜೊತೆಗೆ ಶಿಲ್ಪಗಳಲ್ಲಿನ ಪ್ರಾಣಿ–ಪಕ್ಷಿಗಳ ದೇಹ ಲಕ್ಷಣಗಳ ಆಧಾರದ ಮೇಲೆ ಅವುಗಳ ತಳಿಗಳನ್ನು ಗುರುತಿಸಲಾಗಿದೆ.

* ಸುರ ಮತ್ತು ಅಸುರರ ಅವತಾರದ ರೂಪಕಗಳಾಗಿ ಪ್ರಾಣಿಗಳ ಪಾತ್ರ ಪ್ರಮುಖವಾಗಿದ್ದು, ಅಂತಹವುಗಳನ್ನು ಇಲ್ಲಿಯ ಸ್ಮಾರಕಗಳಲ್ಲಿ ಗುರುತಿಸಿ ಅವುಗಳ ಮಹತ್ವವನ್ನು ವಿವರಿಸಲಾಗಿದೆ.

* ಶಿಲ್ಪಗಳಲ್ಲಿನ ಕೆಲವು ಪ್ರಾಣಿಗಳು ಧಾರ್ಮಿಕ ಐತಿಹ್ಯವನ್ನು ತಿಳಿಸುವ ವಸ್ತುಗಳಾಗಿ, ಕೆಲವು ನಾಥಮುನಿಗಳ ವಾಹನಗಳಾಗಿ ಮತ್ತೆ ಕೆಲವು ಪ್ರಾಣಿಗಳು ದೈವಭಕ್ತವಾಗಿ ದೇವರನ್ನು ಆರಾಧಿಸುತ್ತಿರುವಂತ ಶಿಲ್ಪಗಳನ್ನು ಗುರುತಿಸಿದ್ದು ಅವುಗಳ ಪಾತ್ರ ಮತ್ತು ಮಹತ್ವವನ್ನು ವಿವರಿಸಲಾಗಿದೆ. ಜೊತೆಗೆ ಆ ಪ್ರಾಣಿಗಳ ಜಾತಿಯನ್ನು ಗುರುತಿಸಿ ಅವುಗಳ ವರ್ಗ, ಕುಟುಂಬ ಮತ್ತು ಅವುಗಳ ವೈಜ್ಞಾನಿಕ ಹೆಸರುಗಳನ್ನು ತಿಳಿಸಲಾಗಿದೆ.

* ಧಾರ್ಮಿಕೇತರ ಪ್ರಾಣಿ ಶಿಲ್ಪಗಳಲ್ಲಿ ಕಥಾನಕ ಮತ್ತು ಬಿಡಿ ಶಿಲ್ಪಗಳೆಂದು ವಿಂಗಡಿಸಿ ಅಧ್ಯಯನ ಮಾಡಲಾಗಿದೆ. ಹಂಪಿ ಪರಿಸರದ ಪ್ರಾಣಿ ಬೇಟೆಯ ಶಿಲ್ಪಗಳಲ್ಲಿ ಜಿಂಕೆ, ಹಂದಿ, ಹುಲಿ, ಆನೆ, ಸಿಂಹ ಮತ್ತು ಪಕ್ಷಿಬೇಟೆಯ ಶಿಲ್ಪಗಳೆಂದು ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ. ಮಾನಸೋಲ್ಲಾಸ ಕೃತಿಯು ಬೇಟೆಯಲ್ಲಿ ಅನುಸರಿಸುತ್ತಿದ್ದ ತಂತ್ರಗಳನ್ನು ಮತ್ತು ಬೇಟೆಯ ವಿವಿಧ ಪ್ರಕಾರಗಳನ್ನು ಉಲ್ಲೇಖಿಸುತ್ತದೆ. ಈ ತಂತ್ರಗಳನ್ನು ಮತ್ತು ಬೇಟೆಯ ವಿವಿಧ ಪ್ರಕಾರಗಳನ್ನು ಹಂಪಿ ಪರಿಸರದಲ್ಲಿನ ಬೇಟೆಯ ಶಿಲ್ಪಗಳಿಗೆ ಅನ್ವಯಿಸಿ ಕೆಲವು ಬೇಟೆಯ ಪ್ರಕಾರದ ಶಿಲ್ಪಗಳನ್ನು ಗುರುತಿಸಲಾಗಿದೆ. ಜೊತೆಗೆ ಶಿಲ್ಪಗಳಲ್ಲಿನ ಪ್ರಾಣಿಗಳ ದೇಹ ಲಕ್ಷಣಗಳ ಆಧಾರದ ಮೇಲೆ ಅವುಗಳ ವರ್ಗ, ಕುಟುಂಬ, ತಳಿಗಳನ್ನು ಮತ್ತು ಅವುಗಳ ವೈಜ್ಞಾನಿಕ ಹೆಸರುಗಳನ್ನು ತಿಳಿಸಲಾಗಿದೆ.

* ವಿಜಯನಗರ ಕಾಲದ ಹಂಪಿಯಲ್ಲಿ ನಡೆಯುತ್ತಿದ್ದ ಜಾತ್ರೆ, ಉತ್ಸವ ಇತರೆ ಸಮಾರಂಭಗಳಲ್ಲಿ ಹಲವು ರೀತಿಯ ಮನರಂಜನೆಗಳು ನಡೆಯುತ್ತಿದ್ದು ವಿದೇಶಿ ಬರವಣಿಗೆಗಳು ಮತ್ತು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖವಾಗಿವೆ. ಇಂತಹ ಮನರಂಜನೆ ಕಾರ್ಯದಲ್ಲಿ ಕೆಲವು ಪ್ರಾಣಿಗಳು ಬಳಕೆಯಾಗಿದ್ದು ಸಾಹಿತ್ಯ ಕೃತಿಗಳಲ್ಲಿನ ವಿವಿಧ ರೀತಿಯ ಮನರಂಜನೆ ವಿವರಣೆಯನ್ನು ಹಂಪಿ ಪರಿಸರದ ಶಿಲ್ಪಗಳಿಗೆ ಅನ್ವಯಿಸಿ ಕೆಲವು ಪ್ರಾಣಿಗಳ ಮನರಂಜನೆ ಶಿಲ್ಪಗಳನ್ನು ಗುರುತಿಸಿ ಅವುಗಳನ್ನು ವಿವರಿಸಲಾಗಿದೆ.

* ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಗಳನ್ನು ಪಳಗಿಸುತ್ತಿರುವ ಹಲವು ಶಿಲ್ಪಗಳು ಕಂಡುಬಂದಿವೆ. ಅವುಗಳಲ್ಲಿ ಮುಖ್ಯವಾಗಿ ಹಂಪಿ ಪರಿಸರದ ಆನೆಯ ಶಿಲ್ಪಗಳನ್ನು ವಿವರವಾಗಿ ವಿಶ್ಲೇಷಿಸಿದ್ದು ಕೆಲವು ಸಾಹಿತ್ಯ ಕೃತಿಗಳಾದ ಮಾನಸೋಲ್ಲಾಸ, ಶಿವತತ್ವ ರತ್ನಾಕರ ಮತ್ತು ವಿದೇಶಿ ಪ್ರವಾಸಿಗನಾದ ಅಬ್ದುಲ್ ರಜಾಕ್‌ನ ಪ್ರವಾಸಿ ಕಥನದಲ್ಲಿ ಉಲ್ಲೇಖಿಸಿರುವ ಆನೆಗಳನ್ನು ಹಿಡಿಯುವ ವಿಧಾನ ಮತ್ತು ಪಳಗಿಸುವ ಪದ್ಧತಿಗಳನ್ನು ಹಂಪಿ ಪರಿಸರದ ಶಿಲ್ಪಗಳಿಗೆ ಅನ್ವಯಿಸಿ ಗುರುತಿಸಿ ವಿವರಿಸಲಾಗಿದೆ. ಹಾಗೆಯೇ ಕುದುರೆಗಳನ್ನು ಪಳಗಿಸುತ್ತಿರುವ ಹಲವು ಶಿಲ್ಪಗಳು ಹಂಪಿಯ ಶಿಲ್ಪಗಳಲ್ಲಿ ಕಂಡುಬಂದಿದ್ದು ಅವುಗಳನ್ನು ಸಹ ವಿವರಿಸಲಾಗಿದೆ.

* ವಿಜಯನಗರ ಕಾಲದ ಹಂಪಿಯಲ್ಲಿನ ವ್ಯಾಪಾರವು ದೇಶ ವಿದೇಶಗಳವರೆಗೂ ಹಬ್ಬಿತ್ತೆಂಬುದು ಸಾಹಿತ್ಯ ಆಧಾರಗಳಿಂದ ತಿಳಿಯುತ್ತದೆ. ಅಂತಹ ವ್ಯಾಪಾರಿಗಳು ಹಂಪಿಗೆ ಬಂದು ವ್ಯಾಪಾರ ಮಾಡಬೇಕಾದರೆ ಅವರ ವ್ಯಾಪಾರದ ಒಂದು ವಸ್ತುವನ್ನು ಸ್ಥಳೀಯ ರಾಜರಿಗೆ ಕೊಟ್ಟು ವ್ಯಾಪಾರ ಮಾಡಲು ಅಪ್ಪಣೆ ಪಡೆಯಬೇಕಾಗಿತ್ತೆಂಬ ವಿಷಯವು ಪ್ರವಾಸಿ ಕಥನಗಳಿಂದ ತಿಳಿಯುತ್ತದೆ. ಇಂತಹ ವಿವರಣೆಯನ್ನು ಹೋಲುವ ಹಲವು ಶಿಲ್ಪಗಳನ್ನು ಹಂಪಿ ಪರಿಸರದಲ್ಲಿ ಗುರುತಿಸಿ ವಿವರಿಸಲಾಗಿದೆ.

* ಹಂಪಿ ಪರಿಸರದಲ್ಲಿನ ಅಶ್ವ ಪರೀಕ್ಷೆಯ ಶಿಲ್ಪಗಳು, ಯುದ್ಧದಲ್ಲಿ ನಿರತವಾಗಿರುವ ಪ್ರಾಣಿ ಶಿಲ್ಪಗಳು, ಪ್ರಾಣಿಗಳ ಮಿಥುನ ಶಿಲ್ಪಗಳು, ಖಗೋಳ ಜ್ಞಾನವನ್ನು ತಿಳಿಸುವ ಪ್ರಾಣಿಶಿಲ್ಪಗಳು ಹಾಗೂ ಹಂಪಿ ಪರಿಸರದ ಏಕೈಕ ಶಿಲ್ಪಗಳಾದ ಜಿಂಕೆ ಪ್ರಸವ ಶಿಲ್ಪ ಮತ್ತು ಐದು ಘಟನೆಗಳನ್ನು ತಿಳಿಸುವ ವಿಶಿಷ್ಟ ಪ್ರಾಣಿ ಶಿಲ್ಪಗಳನ್ನು ಗುರುತಿಸಿ ವಿವರಿಸಲಾಗಿದೆ. ಹಾಗೆಯೇ ಹಂಪಿ ಪರಿಸರದಲ್ಲಿ ಸಾಕಷ್ಟು ಬಿಡಿ ಶಿಲ್ಪಗಳಿದ್ದು ಅವುಗಳ ಪಾತ್ರ ಮತ್ತು ಮಹತ್ವಗಳನ್ನು ವಿವರಿಸುವುದರ ಜೊತೆಗೆ ಹಂಪಿ ಪರಿಸರದ ಉತ್ಖನನಗಳಲ್ಲಿ ಕಂಡುಬಂದಿರುವ ಪ್ರಾಣಿಗಳ ಅವಶೇಷಗಳನ್ನು ನನ್ನ ಅಧ್ಯಯನದ ಅಗತ್ಯತೆಗೆ ಅನುಗುಣವಾಗಿ ಬಳಸಿಕೊಂಡು ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯ ಕಾಲ್ಪನಿಕ ಪ್ರಾಣಿ ಶಿಲ್ಪಗಳು ಎಂಬುದಾಗಿದ್ದು, ಇದರಲ್ಲಿ ಹಂಪಿ ಪರಿಸರದ ಸ್ಮಾರಕಗಳಲ್ಲಿ ಕಂಡುಬರುವ ಕಾಲ್ಪನಿಕ ಶಿಲ್ಪಗಳನ್ನು ಪ್ರಾಣಿ ಮತ್ತು ಪಕ್ಷಿಗಳ ಕಾಲ್ಪನಿಕ ಶಿಲ್ಪಗಳೆಂದು ವಿಂಗಡಿಸಿ ಶಿಲ್ಪಗಳಲ್ಲಿ ಅವುಗಳನ್ನು ಗುರುತಿಸಿ ವಿವರಿಸಲಾಗಿದೆ. ಹಾಗೆಯೇ ದೇವಾಲಯಗಳಲ್ಲಿ ಈ ಶಿಲ್ಪಗಳ ರಚನೆಯ ಉದ್ದೇಶ, ಸ್ಥಳ ನಿರ್ದೇಶನ ಮುಂತಾದ ವಿವರಣೆಗಳನ್ನು ನೀಡಲಾಗಿದೆ.

ಫಲಿತಗಳು

* ಹಂಪಿ ಪರಿಸರದ ಶಿಲ್ಪಗಳಲ್ಲಿ ಸುಮಾರು ೩೪ಕ್ಕೂ ಅಧಿಕ ವಿವಿಧ ಬಗೆಯ ಪ್ರಾಣಿ ಶಿಲ್ಪಗಳು ಹಾಗೂ ೯ ಕ್ಕೂ ಅಧಿಕ ಪಕ್ಷಿ ಶಿಲ್ಪಗಳಿರುವುದನ್ನು ಗುರುತಿಸಲಾಗಿದೆ. ಬಹುತೇಕ ಪ್ರಾಣಿ ಶಿಲ್ಪಗಳು ದೇವಾಲಯ ಹಾಗೂ ಸ್ಮಾರಕ ಅಥವಾ ಮಂಟಪಗಳ ಅಧಿಷ್ಠಾನ, ಕಂಬಗಳು, ಭಿತ್ತಿ, ಕಪೋತ ಮತ್ತು ದ್ವಾರಗೋಪುರಗಳಲ್ಲಿ ಪ್ರಮುಖವಾಗಿ ಕಂಡುಬರುತ್ತವೆ.

* ಹಂಪಿ ಪರಿಸರದಲ್ಲಿ ಒಟ್ಟು ೫೧ ಮತ್ಸ್ಯಾವತಾರ ಶಿಲ್ಪಗಳನ್ನು ಗುರುತಿಸಲಾಗಿದೆ. ಹಾಗೂ ಈ ಮತ್ಸ್ಯಾವತಾರ ಶಿಲ್ಪಗಳಲ್ಲಿನ ಮೃಗ ರೂಪವಾದ ಮೀನಿನ ದೇಹ ಲಕ್ಷಣಗಳ ಆಧಾರದ ಮೇಲೆ ಅವು ಸಿಪ್ರಿನಿಫಾರ್ಮಿಸ್ *(Sipriniformes)* ಗಣದ ಸಿಪ್ರಿನಿಡೆ *(Siprinidae)* ಕುಟುಂಬಕ್ಕೆ ಸೇರಿದ ತಳಿಗಳಾದ ಕರ್ನಾಟಕದ ಕಾರ್ಪ್, ಗೆಂಡೆ ಮೀನು, ಕಾಟ್ಲಾ ಮೀನು ಹಾಗೂ ಸೈಲೂರಿಫಾರ್ಮಿಸ್ *(Siluriformes)* ಗಣದ, ಸೈಲೂರಿಡೆ *(Siluridae)* ಕುಟುಂಬಕ್ಕೆ ಸೇರಿದ ಬೆಣ್ಣೆ ಮಾರ್ಜಾಲ ಮೀನು ಹಾಗೂ ಕ್ಲೂಪಿಯಫಾರ್ಮಿಸ್ *(Clupieformes)* ಗಣದ, ಕ್ಲೂಪಿಯಿಡೆ *(Clupiedae)* ಕುಟುಂಬ, ಪರ್ಸಿಫಾರ್ಮೀಸ್ *(Perciformes)* ಗಣದ, ಸಿಕ್ಲೀಡೆ *(Sicledae)* ಮತ್ತು ನಾಂದಿಡೆ *(Nandidae)* ಕುಟುಂಬ, ಲೋಫಿಫಾರ್ಮಿಸ್ *(Loffiformes)* ಗಣದ, ಲೋಫಿಡೆ *(Loffidae)* ಕುಟುಂಬ, ಟೆಟ್ರೋಡಾನ್ಟಿಫಾರ್ಮಿಸ್ *(Tetrodantiformes)* ಗಣದ, ಟೆಟ್ರೋಡಾನ್ಟಿಡೆ *(Tetrodantidae)* ಕುಟುಂಬಗಳ ವಿವಿಧ ತಳಿಗಳ ಮೀನುಗಳನ್ನು ಈ ಶಿಲ್ಪಗಳ ಅಧ್ಯಯನದಿಂದ ಗುರುತಿಸಲಾಗಿದೆ.

* ಹಂಪಿ ಪರಿಸರದಲ್ಲಿ ಒಟ್ಟು ೧೧೪ ಕೂರ್ಮಾವತಾರ ಶಿಲ್ಪಗಳಿರುವುದನ್ನು ಗುರುತಿಸಲಾಗಿದೆ. ಹಾಗೂ ಈ ಕೂರ್ಮಾವತಾರ ಶಿಲ್ಪಗಳಲ್ಲಿನ ಮೃಗ ರೂಪವಾದ ಆಮೆಯ ದೇಹ ಲಕ್ಷಣಗಳ ಆಧಾರದ ಮೇಲೆ ಅವು ಕಿಲೋನಿಯ *(Khilonia)* ಗಣದ ಕೀಲೋನಿಡೆ *(Khilonidae)* ಕುಟುಂಬಕ್ಕೆ ಸೇರಿದ ತಳಿಯಾದ ಕಡಲಾಮೆ ಹಾಗೂ ಇದೇ ಗಣದ ಟೆಸ್ಟುಡಿನಿಡೆ *(Testudinidae)* ಕುಟುಂಬಕ್ಕೆ ಸೇರಿದ ತಳಿಗಳಾದ ಕಾಡು ಆಮೆ/ತಾರಾ ಆಮೆ, ಬೆಟ್ಟದ ಆಮೆ, ಕಲ್ಲಾಮೆಗಳೆಂದು ಗುರುತಿಸಲಾಗಿದೆ. ಹಾಗೆಯೇ ವಿಷ್ಣುವಿನ ಅವತಾರಗಳಲ್ಲಿ ಕೂರ್ಮಾವತಾರವು ಹಂಪಿಯಲ್ಲಿ ಹೆಚ್ಚು ಪ್ರಭಾವಿತವಾಗಿತ್ತು ಎಂಬುದು ಮತ್ತು ನಂತರದ ಸ್ಥಾನ ಮತ್ಸ್ಯಾವತಾರ ಪಡೆದಿತ್ತೆಂಬುದು ಇಲ್ಲಿ ಅಧಿಕ ಸಂಖ್ಯೆಗಳಲ್ಲಿ ಕಂಡುಬಂದಿರುವ ಶಿಲ್ಪಗಳಿಂದ ದೃಢಪಡುತ್ತದೆ.

* ವಿಷ್ಣುವಿನ ದಶಾವತಾರದ ಸಮೂಹ ಶಿಲ್ಪಗಳು ಹಂಪಿಯ ಚಕ್ರತೀರ್ಥದ ಬಳಿ, ಗಜಶಾಲೆಯ ಹಿಂಭಾಗದ ಗುಡ್ಡದಲ್ಲಿ, ಅಚ್ಯುತರಾಯ ದೇವಾಲಯದ ಉತ್ತರದ ಪ್ರವೇಶ ದ್ವಾರದಲ್ಲಿ, ವಿರೂಪಾಕ್ಷ ದೇವಾಲಯದ ಮುಖಮಂಟಪದ ಮೇಲ್ಚಾವಣೆಯಲ್ಲಿ ಮತ್ತು ವಿಠಲ ದೇವಾಲಯದ ಕಲ್ಯಾಣ ಮಂಟಪದಲ್ಲಿ, ಕೃಷ್ಣ ದೇವಾಲಯದ ಪೂರ್ವದ ಪ್ರವೇಶದ್ವಾರಗೋಪುರದ ಲತಾಸುರಳಿಯಲ್ಲಿ ಹೀಗೆ ಹಂಪಿಯ ಆರು ಕಡೆಯಿರುವುದನ್ನು ಈ ಶಿಲ್ಪಗಳ ಅಧ್ಯಯನದಿಂದ ಗುರುತಿಸಲಾಗಿದೆ.

* ಅಚ್ಯುತರಾಯ ದೇವಾಲಯದ ನೂರು ಕಂಬಗಳ ಮಂಟಪದ ಒಂದು ಕಂಬದಲ್ಲಿ ಮೀನಿನ ಮೇಲೆ ಆಮೆ ನಿಂತಿರುವ ಶಿಲ್ಪವನ್ನು ದಶಾವತಾರ ಕ್ರಮಣಿಕೆಯ ಶಿಲ್ಪವೆಂದು ಗುರುತಿಸಲಾಗಿದೆ. ಇಲ್ಲಿ ಮತ್ಸ್ಯಾವತಾರದ ನಂತರ ಕೂರ್ಮಾವತಾರ ಎಂಬುದನ್ನು ತಿಳಿಸುವ ಉದ್ದೇಶದಿಂದ ಶಿಲ್ಪಿ ಈ ರೀತಿಯಾಗಿ ಕೆತ್ತಿರಬಹುದು. ಇದು ಹಂಪಿ ಪರಿಸರದಲ್ಲಿಯೇ ಈ ರೀತಿಯ ಏಕೈಕ ಶಿಲ್ಪವೆಂಬುದು ಗಮನಾರ್ಹ

* ಹಂಪಿ ಪರಿಸರದ ವೆಂಕಟಾಪುರದ ಗುಡ್ಡದಲ್ಲಿನ ಮತ್ಸ್ಯಾವತಾರ ಶಿಲ್ಪ ಹಾಗೂ ಗಂಗಾವತಿ ತಾಲೂಕಿನ ಕೃಷ್ಣಾಪುರ ಗ್ರಾಮದ ವ್ಯಾಪ್ತಿಯಲ್ಲಿನ ವೃಷಭಾವತಾರದ ಪ್ರಾಣಿಶಿಲ್ಪಗಳು ದೈವತ್ವವನ್ನು ಪಡೆದು, ಪ್ರತ್ಯೇಕ ಆಲಯಗಳೊಂದಿಗೆ ಪೂಜೆಗೊಳಟ್ಟಿರುವುದನ್ನು ಗುರುತಿಸಲಾಗಿದೆ.

* ಹಂಪಿ ಪರಿಸರದಲ್ಲಿ ಭಾಗವತಕ್ಕೆ ಸಂಬಂಧಿಸಿದ ವತ್ಸಾಸುರ, ಭಕಾಸುರ ಮತ್ತು ಕಾಳಿಂಗಮರ್ಧನ ಶಿಲ್ಪಗಳನ್ನು ಗುರುತಿಸಿ ಅಧ್ಯಯನ ಮಾಡಲಾಗಿ ಆ ಪ್ರಾಣಿಗಳ ಮಹತ್ವವನ್ನು ವಿವರಿಸಲಾಗಿದೆ. ಹಾಗೂ ಕಾಳಿಂಗಮರ್ಧನ ಶಿಲ್ಪಗಳು ಇಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬಂದಿರುವುದನ್ನು ಗುರುತಿಸಲಾಗಿದೆ.

* ಅಷ್ಟದಿಕ್ಪಾಲಕರ ಶಿಲ್ಪಗಳು ಹಂಪಿಯ ವಿರೂಪಾಕ್ಷ, ವಿಠಲ ಮತ್ತು ಕಮಲಾಪುರ ಪ್ರವಾಸಿ ಮಂದಿರದ ಮುಂಭಾಗದಲ್ಲಿ ಹೀಗೆ ಮೂರು ಕಡೆ ಗುರುತಿಸಲಾಗಿದ್ದು ಇವುಗಳಲ್ಲಿ ಕೆಲವು ಶಿಲ್ಪಪಠ್ಯಗಳಂತೆ ರಚಿತಗೊಂಡಿದರೆ ಮತ್ತೆ ಕೆಲವು ಶಿಲ್ಪಗಳಲ್ಲಿ ಶಿಲ್ಪಿಯ ಸ್ವಂತಿಕೆಯನ್ನು ಕಾಣಬಹುದು. ಈ ಶಿಲ್ಪಗಳಲ್ಲಿ ದಿಕ್ಪಾಲಕರ ವಾಹನಗಳಾಗಿ ಪ್ರಾಣಿಗಳು ಮಹತ್ವವನ್ನು ಪಡೆದಿವೆ.

* ಹಂಪಿ ಪರಿಸರದ ಶಿಲ್ಪಗಳಲ್ಲಿ ಶ್ರೀಕಾಳಹಸ್ತಿ ದೇವಾಲಯದ ಐತಿಹ್ಯವನ್ನು ವಿವರಿಸುವ ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿ ಕಂಡುಬಂದಿರುವುದರಿಂದ ಈ ಐತಿಹ್ಯವು ಇಲ್ಲಿ ಹೆಚ್ಚು ಪ್ರಚಲಿತದಲ್ಲಿತ್ತೆಂಬುದು ಹಾಗೂ ಶ್ರೀಕಾಳಹಸ್ತಿ ದೇವಾಲಯವು ಹೊಂದಿದ್ದ ಮಹತ್ವವನ್ನೇ ಇಲ್ಲಿನ ದೇವಾಲಯಗಳು ಹೊಂದಿದವು ಎಂಬುದನ್ನು ಶಿಲ್ಪಿ ಈ ರೀತಿಯ ಶಿಲ್ಪಗಳಿಂದ ವ್ಯಕ್ತಪಡಿಸಿದ್ದಾನೆ ಎಂದು ತಿಳಿದುಬರುತ್ತದೆ.

* ಹಂಪಿ ಪರಿಸರದ ನಾಥಮುನಿಗಳ ಶಿಲ್ಪಗಳಲ್ಲಿ ವೃಚ್ಚಿಕೇಂದ್ರನಾಥ ಶಿಲ್ಪಗಳನ್ನು, ಗ್ರಹಣದ ಶಿಲ್ಪಗಳನ್ನು, ಪ್ರಾಣಿ ಬೇಟೆಗಳಲ್ಲಿ ಪಕ್ಷಿಯ ಬೇಟೆ ಶಿಲ್ಪಗಳನ್ನು ಹಾಗೂ ಪ್ರಾಣಿಗಳ ಬಿಡಿ ಶಿಲ್ಪಗಳಲ್ಲಿ ಚಿಪ್ಪು ಹಂದಿ, ಕಾಡುಕೋಣ, ಮುಂಗುಸಿ, ಚಿಂಪಾಂಜಿ, ಜೇಡರಹುಳು, ಕಪ್ಪೆ ಮತ್ತು ಪಕ್ಷಿಗಳ ಶಿಲ್ಪಗಳಲ್ಲಿ ಸಣ್ಣ ರಾಜಹಂಸ, ನೀರುಕಾಗೆ, ಕಂದು ಸೀಮೆ ಕಾಗೆ, ಚುಕ್ಕೆ ಕೊಕ್ಕು ಬಾತು, ಪಾರಿವಾಳ, ಬೂದು ಕೊಕ್ಕರೆ, ಬೆಳ್ಳಕ್ಕಿ, ಕೋಳಿ ಶಿಲ್ಪಗಳನ್ನು ಮೊದಲ ಬಾರಿಗೆ ಗುರುತಿಸಲಾಗಿದೆ.

* ಮಾನಸೊಲ್ಲಾಸ ಕೃತಿಯಲ್ಲಿನ ಬೇಟೆಯ ಮಾಹಿತಿಯನ್ನು ಹಂಪಿ ಪರಿಸರದ ಶಿಲ್ಪಗಳಿಗೆ ಅನ್ವಯಿಸಿ ಅಶ್ವಜಾ, ಕಾಮಜಾ, ಚಾರಜಾ, ಪಾನಿಯಾ ಮೃಗಜಾ, ಮೃಗಯಾ ವಿನೋದ ಮುಂತಾದ ಬೇಟೆಯ ಪ್ರಕಾರಗಳನ್ನು ಗುರುತಿಸಲಾಗಿದೆ.

* ರಾಜರು ವಿನೋದಕ್ಕಾಗಿ ಹಾಗೂ ಜನಸಾಮಾನ್ಯರು ತಮ್ಮ ಜೀವನ ನಿರ್ವಹಣೆಗಾಗಿ ಬೇಟೆಯಾಡುತ್ತಿದ್ದರು ಎಂಬುದನ್ನು ಹಂಪಿ ಪರಿಸರದ ಬೇಟೆ ಶಿಲ್ಪಗಳ ಅಧ್ಯಯನದಿಂದ ಗುರುತಿಸಲಾಗಿದೆ.

* ಸಂಗೀತಗಾರರ ನಾದಗಳಿಗೆ ತಕ್ಕಂತೆ ಆನೆಗಳು ನೃತ್ಯ ಮಾಡುತ್ತಿರುವ ಹಂಪಿ ಪರಿಸರದ ಏಕೈಕ ಶಿಲ್ಪವನ್ನು ಮಹಾನವಮಿ ದಿಬ್ಬದ ದಕ್ಷಿಣ ದಿಕ್ಕಿನ ಎರಡನೇ ಹಂತದಲ್ಲಿ ಗುರುತಿಸಲಾಗಿದೆ. ಈ ಶಿಲ್ಪದಲ್ಲಿ ಇಬ್ಬರು ಸ್ತ್ರೀಯರು ಇವುಗಳ ಪಕ್ಕದಲ್ಲಿ ನೃತ್ಯ ಮಾಡುತ್ತಿರುವುದರಿಂದ ಇದು ಮನರಂಜನೆಯ ಶಿಲ್ಪವಾಗಿರುವ ಸಾಧ್ಯತೆಯಿದೆ.

* ಹಂಪಿ ಪರಿಸರದ ಕೆಲವು ಸ್ಮಾರಕಗಳೊಂದಿಗೆ ಪ್ರಾಣಿಗಳಿಗಿರುವ ಸಂಬಂಧವನ್ನು ಗುರುತಿಸಿ ವಿಶ್ಲೇಷಿಸಲಾಗಿದೆ. ಉದಾ: ಗಜಶಾಲೆ ಈ ಕಟ್ಟಡದಲ್ಲಿ ಕೇವಲ ಹನ್ನೊಂದು ಆನೆಗಳಿಗೆ ಮಾತ್ರ

ಪ್ರತ್ಯೇಕ ಕೊಠಡಿಗಳಿರುವುದರಿಂದ ಈ ಕಟ್ಟಡವು ಬಹುಶಃ ರಾಜಪ್ರಮುಖ ಆನೆಗಳ ವಾಸಕ್ಕಾಗಿ ನಿರ್ಮಿಸಿದ ಕಟ್ಟಡವಾಗಿರಬಹುದು. ಹಾಗೆಯೇ ಗಜಶಾಲೆಯ ಮುಂಭಾಗದಲ್ಲಿನ ಪ್ರಸ್ತುತ ಟೂರಿಸ್ಟ್ ಕ್ಯಾಂಟೀನ್ ಇರುವ ವಿಶಾಲ ಆವರಣ ಹಾಗೂ ಅಲ್ಲಿನ ಉತ್ಖನನದಲ್ಲಿ ಕಂಡುಬಂದಿರುವ ಆನೆಯ ಮತ್ತು ಅದಕ್ಕೆ ಸಂಬಂಧಿಸಿದ ಇತರೆ ಅವಶೇಷಗಳ ಆಧಾರದ ಮೇಲೆ ಇದು ಹಂಪಿಯ ಇತರೆ ಆನೆಗಳ ವಾಸದ ನೆಲೆಯಾಗಿದ್ದಿರಬಹುದೆಂದು ಗುರುತಿಸಲಾಗಿದೆ.

* ಮಾನಸೊಲ್ಲಾಸ ಕೃತಿಯು ಗಜಾರೋಹಣ ಮತ್ತು ಅವರೋಹಣ ಕುರಿತ ವಿವರಣೆಯನ್ನು ಹೊಂದಿದ್ದು. ಈ ವಿವರಣೆಗೆ ಹಂಪಿಯ ಶಿಲ್ಪಗಳನ್ನು ಅನ್ವಯಿಸಿ ಅಧ್ಯಯನ ಮಾಡಿದ್ದು ಅಂತಹ ಕೆಲವು ಶಿಲ್ಪಗಳನ್ನು ವಿಠಲ ದೇವಾಲಯ ಮತ್ತು ಇದರ ಪಕ್ಕದ ಹಳೆಯ ಶಿವಾಲಯದ ಪ್ರಾಕಾರ ಮಂಟಪದ ಅಧಿಷ್ಠಾನದಲ್ಲಿ ಗುರುತಿಸಲಾಗಿದೆ. ಹಾಗೆಯೇ ಹಂಪಿ ಪರಿಸರದಲ್ಲಿ ಗಜಾರೋಹಣ ಮತ್ತು ಅವರೋಹಣಕ್ಕೆ ಸಂಬಂಧಿಸಿದ ಎರಡು ಕಟ್ಟಡಗಳನ್ನು ಗುರುತಿಸಲಾಗಿದೆ.

* ಹಂಪಿ ಪರಿಸರದ ಶಿಲ್ಪಗಳಲ್ಲಿ ಸ್ಥಳೀಯ ಕುದುರೆಗಳ ಜೊತೆಗೆ ಅರಬ್ ತಳಿಯ ಸುಮಾರು ೧೦೦ಕ್ಕೂ ಅಧಿಕ ಕುದುರೆಯ ಶಿಲ್ಪಗಳಿರುವುದನ್ನು ಗುರುತಿಸಲಾಗಿದೆ. ಹಾಗೆಯೇ ಅಪರೂಪದ ಅಶ್ವ ಪರೀಕ್ಷೆಯ ಶಿಲ್ಪಗಳ ಪಟ್ಟಿಗೆ ಮತ್ತೊಂದು ಹೊಸ ಶಿಲ್ಪವನ್ನು ಗುರುತಿಸಿ ಸೇರಿಸಲಾಗಿದೆ.

* ಹಂಪಿಯ ದೇವಾಲಯಗಳಲ್ಲಿ ಪ್ರಾಣಿ ಶಿಲ್ಪಗಳನ್ನು ಕಂಡರಿಸಲು ನಿರ್ದಿಷ್ಟವಾದ ಸ್ಥಳ ನಿರ್ದೇಶನಗಳು ಮತ್ತು ಸಂಕೇತಗಳು ಇವೆಯೇ? ಎಂಬ ಪ್ರಶ್ನೆಗೆ ಹೌದು ಎಂಬ ಉತ್ತರವನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಯಿತು. ಉದಾ: ಹಂಪಿಯಲ್ಲಿನ ಎಲ್ಲಾ ಗ್ರಹಣದ ಶಿಲ್ಪಗಳು ನಿರ್ದಿಷ್ಟವಾಗಿ ದೇವಾಲಯಗಳ ಪ್ರವೇಶ ದ್ವಾರಗೋಪುರ ಮೇಲ್ಛಾವಣೆಯಲ್ಲಿಯೇ ಕೆತ್ತಲ್ಪಟ್ಟಿರುವುದು. ನೀರಿರುವ ಸ್ಥಳದ ಸಂಕೇತವಾಗಿ ಮೀನನ್ನು ತೋರಿಸಿರುವುದು ಹೀಗೆ ಕೆಲವು ಪ್ರಾಣಿ ಶಿಲ್ಪಗಳನ್ನು ಸಂಕೇತಗಳ ಹಿನ್ನೆಲೆಯಲ್ಲಿ ಕೆತ್ತಿರುವುದನ್ನು ಗುರುತಿಸಲಾಗಿದೆ.

* ಸಾಮಾನ್ಯವಾಗಿ ಜಾತ್ರೆ, ಉತ್ಸವಗಳಲ್ಲಿ ಆನೆ, ಕುದುರೆ, ಒಂಟೆಗಳ ಮೆರವಣಿಗೆಯನ್ನು ಕಾಣಬಹುದು. ಆದರೆ ಹಂಪಿಯ ಶಿಲ್ಪಗಳಲ್ಲಿ ಈ ಪ್ರಾಣಿಗಳ ಜೊತೆಯಲ್ಲಿಯೇ ಗೂಳಿಯು ಮೆರವಣಿಗೆಯಲ್ಲಿ ಭಾಗವಹಿಸಿರುವ ಹಂಪಿ ಪರಿಸರದ ಏಕೈಕ ಶಿಲ್ಪವನ್ನು ಮಹಾನವಮಿ ದಿಬ್ಬದ ಪಶ್ಚಿಮ ದಿಕ್ಕಿನ ಮೊದಲನೆ ಹಂತದಲ್ಲಿ ಗುರುತಿಸಲಾಗಿದೆ. ಈ ಶಿಲ್ಪದಲ್ಲಿ ಗೂಳಿಯ ಮೇಲೆ ವಾದ್ಯವನ್ನಿಟ್ಟುಕೊಂಡು ನುಡಿಸುತ್ತಾ ಹೋಗುತ್ತಿರುವುದು ಗಮನಾರ್ಹ.

* ಹಂಪಿ ಪರಿಸರದ ಕಾಲ್ಪನಿಕ ಶಿಲ್ಪಗಳನ್ನು ಅಲಂಕರಣೆಯ ದೃಷ್ಟಿಯಿಂದ ಕೆತ್ತಲಾಗಿದ್ದರೂ ಕೆಲವು ಕಾಲ್ಪನಿಕ ಶಿಲ್ಪಗಳನ್ನು ಸ್ಥಳ ನಿರ್ದೇಶನ ಮತ್ತು ಸಂಕೇತದ ಹಿನ್ನೆಲೆಯಲ್ಲಿ ಬಿಡಿಸಿರುವುದನ್ನು ಗುರುತಿಸಲಾಗಿದೆ. ಉದಾ: ಯಾಳಿ. ಇದು ರಕ್ಷಕದ ಸಂಕೇತವೆಂದು ತಿಳಿದುಬರುತ್ತದೆ. ದೇವಾಲಯಗಳ ದ್ವಾರಗಳಲ್ಲಿ, ಮಂಟಪಗಳ ಅಂಚಿನಲ್ಲಿ ಕೆತ್ತಲ್ಪಟ್ಟಿದ್ದು ಇದು ದೇವಾಲಯದ ರಕ್ಷಕ ಶಿಲ್ಪವಾಗಿರುವುದರಿಂದ ಶಿಲ್ಪಿ ಈ ಸ್ಥಳಗಳಲ್ಲಿಯೇ ಅಧಿಕವಾಗಿ ಕೆತ್ತಿರಬಹುದಾದ ಸಾಧ್ಯತೆಯಿದೆ.

* ಹಂಪಿಯ ಶಿಲ್ಪಗಳನ್ನು ಕಂಡಿರಿಸಿದ ಶಿಲ್ಪಿಗಳು ಸಾಹಿತಿಗಳಾಗಿ, ವಿದ್ವಾಂಸರಾಗಿ, ಖಗೋಳಜ್ಞಾನಿಗಳಾಗಿ, ಪ್ರಾಣಿತಜ್ಞರಾಗಿ ಹೀಗೆ ಇತರೆ ಬಹುಮುಖ ಪ್ರತಿಭೆಗಳಾಗಿದ್ದರೆಂಬುದು ಪ್ರಸ್ತುತ ಶಿಲ್ಪಗಳ ಅಧ್ಯಯನದಿಂದ ತಿಳಿದುಬರುತ್ತದೆ.

* ಒಟ್ಟಾರೆ ನಮ್ಮ ಪೂರ್ವಜರು ಪ್ರಾಣಿಗಳನ್ನು ಸಾಕಿ ಪ್ರೀತಿಸಿ ಪೂಜಿಸಿದುದು, ಜನಸಾಮಾನ್ಯರಿಗೆ ಅವುಗಳ ಮಹತ್ವ ತಿಳಿಯಲೆಂದು ಅವಕ್ಕೆ ದೈವತ್ವ ಕೊಟ್ಟಿರುವುದು ಹಾಗೂ ದೈವೀವಾಹನಗಳಾಗಿರುವುದು, ಪ್ರಾಣಿ ರೂಪದಲ್ಲಿ ದೇವರ ಅವತಾರಗಳಾಗಿರುವುದು, ವಿವಿಧ ಸಾಮ್ರಾಜ್ಯಗಳ ರಾಜಲಾಂಛನಗಳಾಗಿರುವುದು, ಐತಿಹ್ಯ ಮತ್ತು ಕಥೆಗಳಲ್ಲಿ ಪಶು-ಪಕ್ಷಿಗಳಿಗೆ ಅಗ್ರಸ್ಥಾನ ಕೊಟ್ಟಿರುವುದು ಹೀಗೆ ಇನ್ನು ಮುಂತಾದ ಮಹತ್ವದ ವಿಷಯಗಳು ಹಂಪಿ ಪರಿಸರದ ಶಿಲ್ಪಗಳಲ್ಲಿ ಪ್ರಾಣಿಸಂಕುಲ ಎಂಬ ಪ್ರಸ್ತುತ ಅಧ್ಯಯನದಿಂದ ತಿಳಿದುಬರುತ್ತವೆ.

❑❑❑

ಅನುಬಂಧಗಳು

೦೧. ಗ್ರಂಥಋಣ

೦೨. ಜೀವ ವರ್ಗೀಕರಣ ಕೋಷ್ಟಕಗಳು

೦೩. ನಕ್ಷೆಗಳು

ಗ್ರಂಥಋಣ

ಪ್ರಾಥಮಿಕ ಆಕರಗಳು

ಕನ್ನಡ ಆಕರಗಳು

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೧, "ಬಳ್ಳಾರಿ ಜಿಲ್ಲೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೮.

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೩, "ಹಂಪಿ ಶಾಸನಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦.

ಕನ್ನಡ ವಿಷಯ ವಿಶ್ವಕೋಶ, "ಇತಿಹಾಸ ಮತ್ತು ಪುರಾತತ್ವ", ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೯.

ದೇವರಾಜ ಸರ್ಕಾರ್ ಹಾ.ಬ, ಮಧ್ಯಸ್ಥ ಎನ್.ಎ, ಷಣ್ಮುಖಮ್ಮ ಎಚ್.ಎಚ್., "ಕರ್ನಾಟಕ ರಾಜ್ಯಕೋಶ-೨, ಪ್ರಾಣಿ-ಪಕ್ಷಿ ಸಂಪುಟ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಪರಮಶಿವಮೂರ್ತಿ ಡಿ.ವಿ. (ಸಂ), "ಪ್ರೌಢದೇವರಾಯನ ಶಾಸನಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಪರಮಶಿವಮೂರ್ತಿ ಡಿ.ವಿ. (ಸಂ), "ಕೃಷ್ಣದೇವರಾಯನ ಶಾಸನಗಳು", ಸಂಪುಟ.೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಪಂಕಜ ಎ., "ಭಾಗವತಾಮೃತ", ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, ೧೯೯೮.

ಪಂಚಮುಖಿ ಆರ್. ಎಸ್. (ಸಂ), "ವಿರೂಪಾಕ್ಷ ವಸಂತೋತ್ಸವ ಚಂಪೂ", ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡ, ೧೯೫೩.

ಪಂಡಿತ ವಿ. ಸುಬ್ರಮಣ್ಯ ಶಾಸ್ತ್ರಿ., "ಸಂಪೂರ್ಣ ರಾಮಾಯಣ", ನವಭಾರತ ಪಬ್ಲಿಕೇಶನ್, ಬೆಂಗಳೂರು, ೨೦೦೮.

ಬಸಪ್ಪ ಎಸ್. (ಸಂ), “ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ”, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೦.

ಮಲ್ಲೇಪುರಂ ಜಿ. ವೆಂಕಟೇಶ್ (ಸಂ)., “ಶಿವತತ್ವ ರತ್ನಾಕರ” ಸಂಪುಟಗಳು ೧–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಮಂಜುನಾಥನ್ ಜಿ.ಜಿ. (ಸಂ), “ಅಭಿನವ ವಿರಚಿತ ಅಶ್ವಶಾಸ್ತ್ರ”, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೭.

ಮಂಜುನಾಥನ್ ಜಿ.ಜಿ. (ಸಂ), “ಗೋವಿಂದಕವಿ ವಿರಚಿತ ನಂದಿಮಾಹಾತ್ಮ್ಯಂ”, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೧.

ರಾಮಕೃಷ್ಣ ಶಾಸ್ತ್ರಿ ಪಿ., “ಭಾಗವತದ ಕಥೆಗಳು”, ಸಾಧನಾ ಪ್ರಕಾಶನ, ಬೆಂಗಳೂರು, ೨೦೦೯.

ಶ್ರೀಮತಿ ಎಚ್.ಎಸ್. (ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–೫, “ಜೀವಜಗತ್ತು”, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಇಂಗ್ಲೀಷ್ ಆಕರಗಳು

Annual Reports on Indian Epigraphy, 1887-2001.

Annual Reports of The Archaeological Survey of India.

Annual Reports of The Mysore Archaeologicsl Department.

Bellary District Gazetteer, 1972.

Devaraj D.V, Patil C.S., *"Vijayanagara Progress of Research 1984-1987"*, Directorate of Archaeology and Museum, Mysore, 1991.

Devaraj D.V, Patil C.S., "V*ijayanagara Progress of Research 1987-1988"*, Directorate of Archaeology and Museum, Mysore, 1991.

Devaraj D.V, Patil C.S., *"Vijayanagara Progress of Research 1988-1991"*, Directorate of Archaeology and Museum, Mysore, 1996.

David Burnie., *"The Concise Animal Encyclopedia"*, Kingfisher Publication, London, 2003.

Gopal B.R. (Ed), *"Vijayanagara Inscriptions", Vol-3,* Directorate of Archaeology and Museum, Mysore, 1985.

"Indian Archaeology- A Review, 1963 to 2004-05" (An Annual Publication of Archaeology), Archaeological Survey of India, New Delhi.

Nagaraj Rao M.S.(Ed), *"Vijayanagara Progress of Research 1979-1983"*, Directorate of Archaeology and Museum, Mysore, 1983.

Nagaraj Rao M.S.(Ed), *"Vijayanagara Progress of Research 1983-1984"*, Directorate of Archaeology and Museum, Mysore, 1985.

Robert W. Hegner., *"Invertebrate Zoology"*, The Macmillan Company, Newyork, 1836.

South Indian Inscriptions, Volumes 1 to 34.

Vasudevan C.S., *"Report on The Excavation at Hampi 1991-2010", Vol.1 and 2*, Directorate of Archaeology and Museum, Mysore, 2015.

ಅಪ್ರಕಟಿತ ಎಂ.ಫಿಲ್ ಮತ್ತು ಪಿಹೆಚ್.ಡಿ. ಪ್ರಬಂಧಗಳು

ಎಂ.ಫಿಲ್. ಪ್ರಬಂಧಗಳು

ಅಯ್ಯಾಳಿ ಯರಿಸ್ವಾಮಿ., "ಹಂಪಿ ಪರಿಸರದ ಐತಿಹ್ಯಗಳು: ಚಾರಿತ್ರಿಕ ವಿಶ್ಲೇಷಣೆ", ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦.

ನಾಝಿಯಾ ಖಾಜಿ., "ಹಂಪಿ ಪರಿಸರದಲ್ಲಿ ಕಂಡುಬರುವ ವಿಜಯನಗರ ಕಾಲದ ಇಂಡೋ–ಇಸ್ಲಾಮಿಕ್ ಶೈಲಿಯ ಸ್ಮಾರಕಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಮಠದ ಬಸವರಾಜಯ್ಯ., "ವಿಜಯನಗರ ಕಾಲದ ಸಮಾಜ: ಕೆಲವು ಅನಿಷ್ಟ ಪದ್ಧತಿಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫.

ಮಧು ಎಂ.ಎನ್., "ಹೊಸಪೇಟೆ: ಚಾರಿತ್ರಿಕ ಅಧ್ಯಯನ", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಶಾರದಾ ಪಾಟೀಲ., "ಹಂಪಿಯ ವಿರೂಪಾಕ್ಷ ಸಾಂಸ್ಕೃತಿಕ ಅಧ್ಯಯನ", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಶಿವಲೀಲಾ ಕೆ., "ಕಮಲಾಪುರ ಶಾಸನಗಳು ಮತ್ತು ದೇವಾಲಯಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಸಿದ್ದನಗೌಡ ಜಿ.ಬಿ., "ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಪಿಹೆಚ್.ಡಿ. ಪ್ರಬಂಧಗಳು

ನಾಗರಾಜಪ್ಪ ಎಸ್., "ಹಂಪಿ ಪರಿಸರದ ಲೌಕಿಕ ಶಿಲ್ಪಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭.

ಪದ್ಮಜಾ ದೇಸಾಯಿ., "ಹಂಪಿ ಪರಿಸರದ ವೈಷ್ಣವ ಶಿಲ್ಪಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬

ಮಂಜುಳಾ ಆಚಾರಿ., "ಕಾಳಾಮುಖ ಪರಂಪರೆ ಮತ್ತು ಮೂರು ಜಾವಿಪೀಠ ಸಾಂಸ್ಕೃತಿಕ ಅಧ್ಯಯನ (ಶಾಸನಗಳನ್ನು ಅನುಲಕ್ಷಿಸಿ)", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

ಮಹೇಶ ಕೆ., "ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ವೀರೇಶ ಎನ್. ಎಸ್., "ಶಾಸನ ಮತ್ತು ಕನ್ನಡ ಸಾಹಿತ್ಯ ಕೃತಿಗಳಲ್ಲಿ ಹಂಪಿ ಪರಿಸರದ ವೀರಶೈವ ಧರ್ಮ", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ಅನುಷಂಗಿಕ ಆಕರಗಳು

ಕನ್ನಡ ಗ್ರಂಥಗಳು

ಅಣ್ಣಿಗೇರಿ ಎಂ.ಎಂ., "ಪಟ್ಟದಕಲ್ಲಿನ ಶಿಲ್ಪ ವೈಭವ", ಭವಾನಿ ಪ್ರಕಾಶನ, ಧಾರವಾಡ, ೧೯೮೭.

ಅಪರ್ಣ ಕೂ.ಸ., "ಸಂಗಮರ ಕಾಲದ ದೇವಾಲಯಗಳು", ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮.

ಕರ್ನಾಟಕ ಪರಂಪರೆ, ಸಂ.೧, "ಪ್ರಾಗಿತಿಹಾಸಿಕ ಕಾಲದಿಂದ ವಿಜಯನಗರ ಸಾಮ್ರಾಜ್ಯ ಕಾಲದವರೆಗೆ", ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

ಕತ್ರೆ ಶಕುಂತಲ, ರಾಜಾಸಾಬ್ ಎ.ಎಚ್. (ಸಂ), "ಜೀವಶಾಸ್ತ್ರ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫.

ಕಮಲ ವಿ., "ಜೀವ ವರ್ಗೀಕರಣ", ಕನ್ನಡ ಮಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

ಕಲಬುರ್ಗಿ ಎಂ. ಎಂ. (ಸಂ), "ಮಾನಸೋಲ್ಲಾಸ", ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೯೮.

ಕೃಷ್ಣಾನಂದ ಕಾಮತ., ""ಪ್ರಾಣಿ ಪರಿಸರ", ಮನೋಹರ ಗ್ರಂಥಮಾಲಾ, ಧಾರವಾಡ, ೧೯೭೯.

ಕೌಸಲ್ಯಾ ಬಾಯಿ ಎನ್., "ಅಷ್ಟಾದಶ ಮರಾಣ", ಶ್ರೀ ನಿಧಿ ಪಬ್ಲಿಕೇಶನ್ ಬೆಂಗಳೂರು, ೨೦೧೪.

ಗೋಪಾಲಕೃಷ್ಣ ಶಾಸ್ತ್ರಿ ಸಿ., "ದಶಾವತಾರ ಉಪನ್ಯಾಸಗಳು", ಕನ್ನಡ ಪ್ರಪಂಚ ಪ್ರಕಾಶನ, ಮತ್ತೂರು, ೨೦೦೭.

ಜ್ಞಾನಾನಂದ ಜಿ. (ಸಂ), "ಶ್ರೀಕಾಶ್ಯಪ ಶಿಲ್ಪಶಾಸ್ತ್ರ (ಉತ್ತರಾರ್ಧ)", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೧೯೯೭.

ಜ್ಞಾನಾನಂದ ಜಿ. (ಸಂ), "ಶ್ರೀಕಾಶ್ಯಪ ಶಿಲ್ಪಶಾಸ್ತ್ರ (ಉತ್ತರಾರ್ಧ)", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೪.

ಜಯದಯಾಲ ಗೋಯಂದಕಾ., "ರಾಮಾಯಣದ ಕೆಲವು ಆದರ್ಶ ಪಾತ್ರಗಳು", ಗೀತಾ ಪ್ರೆಸ್, ಗೋರಕ್‌ಪುರ, ೨೦೧೨.

ಕರುಗುಂಡ ಟಿ. ಪಂಕಜಾಕ್ಷ., "ಶಿಲ್ಪ ಸೌಂದರ್ಯ", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮.

ಕರುಣಾ ವಿಜಯೇಂದ್ರ, "ಕಲ್ಯಾಣ ಚಾಲುಕ್ಯ ಶಿಲ್ಪಕಲೆ", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮.

ಕರುಣಾ ವಿಜಯೇಂದ್ರ, "ಕರ್ನಾಟಕ ದೇವಾಲಯಗಳಲ್ಲಿ ರಂಗಭೋಗ (ನೃತ್ಯ)", ಕರ್ನಾಟಕ ಕುಲಕರ್ಣಿ ಆರ್. ಹೆಚ್., "ಆದಿ ಕದಂಬ ಶಿಲ್ಪಕಲೆ", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮.

ಕೊಟ್ರಯ್ಯ ಸಿ.ಟಿ.ಎಂ., "ಹಂಪಿ ಶಿಲಾಯುಗ ಸಂಸ್ಕೃತಿ: ಕ್ರಿಸ್ತಶತಾಬ್ದಿ ಆರಂಭ ಶಾಸನಗಳಲ್ಲಿ", ಶ್ರೀ ಶರಣರ ಸುವಾಸಿನಿ ಬಳಗ, ಹೊಸಪೇಟೆ, ೧೯೯೭.

ಗುರುಮೂರ್ತಿ ಪೆಂಡಕೂರ. (ಅನು), "ನೆಲಟೂರಿ ವೆಂಕಟರಮಣಯ್ಯ (ತೆಲುಗು ಮೂಲ), ವಿಜಯನಗರ ಚರಿತ್ರೆ", ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೧೯೯೬.

ಗುರುರಾಜಾಚಾರ್ ಎಸ್. (ಅನು), ರಾವ್ ಎಸ್.ಆರ್. (ಆಂಗ್ಲಮೂಲ), "ಲೋಥಾಲ್ ಮತ್ತು ಸಿಂಧೂ ನಾಗರೀಕತೆ", ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೬.

ಗೋಪಾಲ್‌ರಾವ್ ಎಚ್.ಎಸ್., "ರಾಷ್ಟ್ರಕೂಟ ಶಿಲ್ಪಕಲೆ", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮.

ಚನ್ನಬಸಪ್ಪ ಎಸ್.ಪಾಟೀಲ್., "ಕರ್ನಾಟಕದ ಶಿಲ್ಪಗಳಲ್ಲಿ ಪಂಚತಂತ್ರ", ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೭೯.

ಚಿದಾನಂದಮೂರ್ತಿ ಎಂ., "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ", ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯.

ಚೂಡಾಮಣಿ ನಂದಗೋಪಾಲ್., "ಶಿಲೆ-ಕಲೆ, ಕರ್ನಾಟಕದ ನೃತ್ಯ ಶಿಲ್ಪಗಳ ಸಾಂಸ್ಕೃತಿಕ ಅಧ್ಯಯನ", ಸುಂದರ ಪ್ರಕಾಶನ, ಬೆಂಗಳೂರು, ೨೦೦೭.

ಚೆಲುವರಾಜು., "ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಜ್ಞಾನಾನಂದ ಜಿ., "ಶಿಲ್ಪಾದರ್ಶ", ಸಂ.೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಜ್ಞಾನಾನಂದ ಜಿ., "ಶಿಲ್ಪಾದರ್ಶ", ಸಂ..೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಜ್ಞಾನಾನಂದ ಜಿ., "ಪಾರಂಪರಿಕ ಶಿಲ್ಪ ನಿನ್ನೆ-ನಾಳೆ", ಸಂಸ್ಕೃತಿ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು, ೨೦೦೫.

ಜ್ಞಾನಾನಂದ ಜಿ., "ಕನ್ನಡ ಮಹಾಭಾರತಗಳಲ್ಲಿ ಶಿಲ್ಪ ಮತ್ತು ಶಿಲ್ಪಿ", ಸಂಸ್ಕೃತಿ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು, ೨೦೦೫.

ಜ್ಞಾನಾನಂದ ಜಿ. (ಸಂ), "ಶ್ರೀಬ್ರಾಹ್ಮೀಯ ಚಿತ್ರಕರ್ಮಶಾಸ್ತ್ರಂ", ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ, ಜ್ಞಾನಬಂಡಾರ, ಕೆ.ಜಿ.ಎಫ್. ೨೦೦೦.

ತಳವಾರ ಎನ್. ಎಮ್., "ನಂಜುಂಡ ಕವಿಯ ರಾಮನಾಥಚರಿತೆ ಸಾಂಸ್ಕೃತಿಕ ಅಧ್ಯಯನ", ತಿಪ್ಪೇಸ್ವಾಮಿ ಪಿ.ಆರ್. "ಶಿಲ್ಪಕಲಾ ಪ್ರಪಂಚ", ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪.

ದೀಕ್ಷಿತ್ ಜಿ.ಎಸ್. (ಸಂ), "ಸಂಗಮರ ಕಾಲದ ವಿಜಯನಗರ: ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ", ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೧.

ದೇವರಕೊಂಡಾರೆಡ್ಡಿ (ಸಂ)., "ಗಂಗ ಶಿಲ್ಪಕಲೆ", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮.

ದೇವರಕೊಂಡಾರೆಡ್ಡಿ (ಸಂ)., "ಹಂಪಿ ಸಂಪುಟ: ಕಲೆ, ಕ್ರೀಡೆ ಮತ್ತು ಕೌಶಲ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ದೇಸಾಯಿ ಪಿ.ಬಿ., "ವಿಜಯನಗರ ಸಾಮ್ರಾಜ್ಯ", ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮.

ನರಸಿಂಹನ್ ಅ.ಲ., "ವಿಜಯನಗರ ಶಿಲ್ಪಕಲೆ", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮.

ನರಸಿಂಹಮೂರ್ತಿ ಎ.ವಿ., "ವಿಜಯನಗರ ನಾಣ್ಯ ಸಂಪತ್ತು", ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೬.

ನಾಯ್ಡು ಜಿ.ವಿ.ಬಿ. (ಅನು), "ಸಾಮಾನ್ಯ ಪಕ್ಷಿಗಳು", ನ್ಯಾಷನಲ್ ಬುಕ್ ಟ್ರಸ್ಟ್, ಹೊಸ ದೆಹಲಿ, ೨೦೦೪.

ನಾರಾಯಣಸ್ವಾಮಿ ಎಂ., "ಜಾನುವಾರು", ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

ನಿರುಪಮಾ (ಅನು), "ಶ್ರೀ ಕೃಷ್ಣದೇವರಾಯನ ಅಮುಕ್ತಮಾಲ್ಯದ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಮಶಿವಮೂರ್ತಿ ಡಿ.ವಿ, ವಾಸುದೇವ ಬಡಿಗೇರ, ವಿರೂಪಾಕ್ಷ ಪೂಜಾರಹಳ್ಳಿ (ಸಂ)., "ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಪರಮಶಿವಮೂರ್ತಿ ಡಿ.ವಿ., "ಕನ್ನಡ ಶಾಸನ ಶಿಲ್ಪ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಪುರುಷೋತ್ತಮ ಬಿಳಿಮಲೆ, ಚೆಲುವರಾಜು., "ಹಂಪಿ ಜಾನಪದ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಪರಮೇಶ್ವರಪ್ಪ ಟಿ. (ಸಂ), "ಹಂಪಿ ಪರಂಪರೆ", ಶ್ರೀವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ೧೯೯೬.

ಪ್ರಭಾಕರ್ ಎಂ.ಎನ್., "ದೇವಾಲಯ ವಾಸ್ತು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಬಸಪ್ಪ ಸಿ.ಎಚ್., "ಗಜಗಾಮಿನಿ", ವನಸುಮ ಪ್ರಕಾಶನ, ಬೆಂಗಳೂರು, ೨೦೦೫.

ಬಾಲಕೃಷ್ಣ ಟಿ.ಎ., "ಪ್ರಾಣಿಶಾಸ್ತ್ರ", ಸ್ವಪ್ನ ಬುಕ್ ಹೌಸ್ ಪ್ರೈ.ಲಿ, ಬೆಂಗಳೂರು, ೨೦೧೧.

ಮರಿಶಾಮಾಚಾರ್ ಎನ್., "ಭಾರತೀಯ ಶಿಲ್ಪಕಲೆ", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೦.

ಮಂಜುನಾಥ ಬೇವಿನಕಟ್ಟಿ. (ಸಂ), "ವಿಜಯನಗರ ಸಾಂಸ್ಕೃತಿಕ ಆಯಾಮಗಳು", ಶ್ರೀ ವಿದ್ಯಾವಿಜಯ ನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ೧೯೯೭.

ಮಹದೇವ ಸಿ., "ವಿಜಯನಗರ ಗಾರೆ ಶಿಲ್ಪ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಮೊಗಳ್ಳಿ ಗಣೇಶ್., "ಹಂಪಿ ಜೀವಜಾಲ ಜಾನಪದ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ರಹಮತ್ ತರೀಕೆರೆ., "ಕರ್ನಾಟಕದ ನಾಥಪಂಥ", ಅಭಿನವ ಪ್ರಕಾಶನ, ಬೆಂಗಳೂರು, ೨೦೧೩.

ರಾಮಚಂದ್ರರಾವ್ ಎಸ್.ಕೆ., "ಮೂರ್ತಿಶಿಲ್ಪ: ನೆಲೆ-ಹಿನ್ನೆಲೆ", ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.

ಲಕ್ಷ್ಮಣ ತೆಲಗಾವಿ (ಸಂ)., "ಜೀರ್ಣ ವಿಜಯನಗರ ದರ್ಶನಂ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ವಸಂತಲಕ್ಷ್ಮಿ ಕೆ., "ಕರ್ನಾಟಕದ ಶೈವ ಶಿಲ್ಪಗಳು", ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮.

ವಸಂತಲಕ್ಷ್ಮಿ ಕೆ., "ಹೊಯ್ಸಳ ಶಿಲ್ಪಕಲೆ", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೦೮.

ವಸುಂಧರಾ ಫಿಲಿಯೋಜಾ., "ಅಳಿದುಳಿದ ಹಂಪಿ", ಸ್ಥಾನಿಕಂ ಪ್ರಕಾಶನ, ಮೈಸೂರು, ೨೦೧೧.

ವಾಸುದೇವ ಬಡಿಗೇರ., "ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ", ಭಾಗ.೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ವಿನೋದಾ ಪಾಟೀಲ್., "ಶಿಲ್ಪಗಳಲ್ಲಿ ಶಿವಭಕ್ತರು", ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩.

ವಿರೂಪಾಕ್ಷಿ ಪೂಜಾರಹಳ್ಳಿ., "ವಿಜಯನಗರ ಕಾಲದ ಸಂಸ್ಕೃತಿ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ವಿವೇಕ ರೈ ಬಿ.ಎ. (ಸಂ), "ಪ್ರವಾಸಿ ಕಂಡ ವಿಜಯನಗರ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ವೆಂಕಟಾಚಲಶಾಸ್ತ್ರಿ ಟಿ.ವಿ. (ಸಂ), "ಗಜಶಾಸ್ತ್ರ ಶಬ್ದಕೋಶ", ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ,
ವೇಣುಗೋಪಾಲ್, ಶೈಲಜಾ (ಅನು), "ಪುರಾಣ ಮತ್ತು ವಾಸ್ತವ", ಚಿಂತನ ಪುಸ್ತಕ, ಬೆಂಗಳೂರು, ೨೦೧೩.

ಶರಣಬಸಪ್ಪ ಕೊಲ್ಕಾರ., "ಶಿಲಾಯುಗದ ಗವಿಚಿತ್ರಗಳು", ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ, ೨೦೧೦.

ಶರಣಬಸಪ್ಪ ಕೊಲ್ಕಾರ., "ವಿಜಯನಗರ ಸಾಮ್ರಾಜ್ಯದ ಮಾತೃಸ್ಥಾನ ಆನೆಗೊಂದಿ", ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ, ೨೦೧೩.

ಶಿವರಾಮ ಕಾರಂತ., "ಕಲಾ ಪ್ರಪಂಚ", ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.

ಶಿವರಾಮ ಕಾರಂತ., "ಕರ್ನಾಟಕದಲ್ಲಿ ಶಿಲ್ಪ", ಐಬಿಹೆಚ್ ಪ್ರಕಾಶನ, ಬೆಂಗಳೂರು, ೧೯೮೩.

ಶಿವರುದ್ರಸ್ವಾಮಿ ಎನ್.ಎಸ್., "ತಿಮ್ಮಾಪುರ ಅಗ್ರಹಾರ", ಪೌರಸ್ತ್ಯ ಪ್ರಕಾಶನ, ಮೈಸೂರು, ೨೦೦೫.

ಶೀಲಾಕಾಂತ ಪತ್ತಾರ., "ಕರ್ನಾಟಕ ಸಂಪ್ರದಾಯ ಶಿಲ್ಪಕಲೆ", ಕರ್ನಾಟಕ ಲಲಿತಾಕಲಾ ಅಕಾಡೆಮಿ, ಬೆಂಗಳೂರು, ೧೯೯೫.

ಶೀಲಾಕಾಂತ ಪತ್ತಾರ., "ಬಾದಾಮಿ ಚಾಲುಕ್ಯರ ದೇವಾಲಯಗಳ ಅಲಂಕಾರ ಶಿಲ್ಪಗಳು", ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು, ೨೦೧೩.

ಶ್ರೀನಿವಾಸ ಎಲ್., "ಹಂಪಿ ಪರಿಸರದ ಆದಿಮಾನವನ ನೆಲೆಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಶೈಲೇಶ್ ಹೊಳ್ಳ ಕೆ.ಎನ್., "ಕಾಮಧೇನು", ಸಂಪುಟ. ೨ ಮತ್ತು ೩, ಲೋಟಸ್ ಪ್ರಿಂಟರ್ಸ್ ಪ್ರೈ.ಲಿ, ಬೆಂಗಳೂರು, ೨೦೧೦.

ಸುಮಂಗಳ ಎಸ್.ಮುಮ್ಮಿಗಟ್ಟಿ, "ಪ್ರಾಣಿಗಳು", ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೬.

ಸುರೇಶ ವಿ. ಕುಲಕರ್ಣಿ., "ಸಸ್ತನಿಗಳು", ಜಡಭರತ ಪ್ರಕಾಶನ, ಧಾರವಾಡ, ೨೦೦೪.

ಸತೀಶ ಕೆ., "ವಿಜಯನಗರ ಕಾಲದ ಶೈವ ದೇವಾಲಯಗಳು", ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

ಸದಾನಂದ ಕನವಳ್ಳಿ (ಅನು), "ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ", ರಾಬರ್ಟ್ ಸಿವೆಲ್ (ಮೂಲ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಸಿದ್ಧಲಿಂಗೇಶ್ವರ ಸ್ವಾಮಿಗಳು (ಸಂ)., "ಶ್ರೀ ಪಂಪಾಮಹಾತ್ಮೆ", ಶ್ರೀ ಗುರು ವೃಷಭಾಶ್ರಮ, ಹೊಳಗುಂದಿ, ೧೯೮೩.

ಸುರೇಶ್ ಕೆ.ಎಂ, ವಾಸುದೇವ ಬಡಿಗೇರ, ಸೋಮಶೇಖರ ಎಸ್.ವೈ, ಕೊಟ್ರೇಶ್ ಎಂ., "ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಸುರೇಶ್ ಕೆ.ಎಂ, ವಾಸುದೇವ ಬಡಿಗೇರ, ಸೋಮಶೇಖರ ಎಸ್.ವೈ, ಕೊಟ್ರೇಶ್ ಎಂ., "ಕರ್ನಾಟಕ ದೇವಾಲಯ ಕೋಶ ಕೊಪ್ಪಳ ಜಿಲ್ಲೆ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಗುಲಬರ್ಗಾ, ೨೦೧೧.

೨೦೧೧.ಅಭಿರುಚಿ ಪ್ರಕಾಶನ, ಮೈಸೂರು, ೨೦೦೨.

ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮.

ಮೆಣಸಿಗಿ ಹೇಮಾವತಿ ಶಿವಾನಂದ., "ಹಂಪಿ ಪರಿಸರದ ಶೈವಶಿಲ್ಪಗಳು", ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬.

ಸೋಮಶೇಖರ್ ಎಸ್.ವೈ., "ಹಂಪಿಯ ಬಜಾರುಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಸೋಮಶೇಖರ್ ಎಸ್.ವೈ., "ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ", ಸಂಚಿಕೆ ಪ್ರಕಾಶನ, ಚಿತ್ರದುರ್ಗ, ೨೦೦೯.

ಸೋಮಶೇಖರ್ ಎಸ್.ವೈ., "ಕರ್ನಾಟಕದ ಬಿರುದಾವಳಿಗಳು", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

ಹರೀಶ್ ಆರ್. ಭಟ್, ಪ್ರಮೋದ್ ಸುಬ್ಬರಾವ್., "ಪಕ್ಷಿ ಪ್ರಪಂಚ", ಅಸಿಮಾ ಪ್ರತಿಷ್ಠಾನ, ಬೆಂಗಳೂರು, ೨೦೦೬.

ಹೆಬ್ಬಾಲೆ ಕೆ. ನಾಗೇಶ್., "ಹಂಪಿ ಸಂಸ್ಕೃತಿ ಮತ್ತು ಮುಕ್ತ ಪರಿಸರ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಇಂಗ್ಲೀಷ್ ಗ್ರಂಥಗಳು

Agarwal P.R., *Studies in Indian Art*, Banaras Hindu University, Varanasi, 1965.

Ananda Kumaraswamy., *Introduction to the Indian Art*, The Theosophical Society, Adyar, 1956.

Ananda Kumarswamy., *Fundamentals of Indian Art,* The Historical Research Society, Jaipura, 1985.

Anila Verghese., *Religious Traditions at Vijayanagara,* Manohor Publisher, New Delhi, 1995.

Anila Verghese., *Archaeology, Art and Religion, New Perspective on Vijayanagara,* Oxford University Press, New Delhi, 2001.

Anila Verghese., *Hampi Monumental Legacy,* Oxford University Press, New Delhi, 2002.

Anila Verghese, Anna Dallapiccola (Ed)., *South India Under Vijayanagara: Art and Archaeology,* Oxford University Press, New Delhi, 2011.

Anna L. Dallapiccola, John M. Fritz, George Michel, Rajashekhar S., *The Ramachandra Temple at Vijayanagara,* Manohar Publishers and Distributers, New Delhi, 1992.

Anna L. Dallapiccola, Anila Verghese., *Sculpture At Vijayanagara Iconography and Style,* Manohar American Institute of Indian Studies, New Delhi, 1998.

Anna L. Dallapiccola., *The Great Platform at Vijayanagara,* Manohar Publishers And Distibuters, New Delhi, 2010.

Banerjea J.N., *Religion in art and Archaeology,* Luknow University, Luknow, 1968.

Channabasappa S. Patil., *Temples of Raichur and Bellary Districts,* Karnataka, 1000-1324 A.D, Directorate of Archaeology and Museums, Mysore, 1993.

Channabasappa S. Patil., *Narrative Panels from Kadur,* Directorate of Archaeology and Museums, Mysore, 1993.

Davalikar M.K., *Shatavahana Art,* Sharada Publishing House, New Delhi, 2004.

George Michel., *Vijayanagara Courtly Style,* Manohar Publisher, new Delhi, 1992.

George Michel, Phillip B. Wagoner., *Vijayanagar, Vol. I&II,* Manohar Publisher, New Delhi, 2001.

Gopinatha Rao T.A., *Elements of Hindu Iconography, Vol.II,* Motilal Banarasidas Publishers, New Delhi, 1993.

Hanumantha Rao., *Lepaksi Temple: A Cultural And Architectural Study,* Bharatiya Kala Prskashan, Delhi, 2004.

Heras H., *Aravidu Dynasty of Vijayanagar,* B.G.Poul & Co.Publishers, Madras, 1927.

John M. Fritz, George Michel, Arni C., (Ed), *New Light on Hampi: Recent researches At Vijayanagara,* Marg Publications, Bambay, 2001,

John M. Fritz., *Hampi: A Story in Stone,* Eminence Designs Pvt. Ltd, Mumbai, 2009.

Krishnamurthy Iyangar., *Sources of Vijayanagara History,* Madras University , Madras, 1919.

Longharts., *Hampi Ruins,* Asian Educational Service, New Delhi, 2001.

Madhaw P.Patil., *Courtly Life Under the Vijayanagara Rulers,* B.R.Publishing Corparation, New Delhi, 1999.

Mahalingam T.V., *Studies in South Indian Temple Complex,* Karnataka University, Dharwar, 1970.

Natalie Tobert, Graham Reed (illustrations)., *Anegondi Architectural Ethnography of A Royal Village,* Manohar American Institute of Indian Studies, New Delhi, 2000.

Nirmala Kumari., *Social Life As of Reflected in the Sculptures and Paintings of Later Vijayanagara Period (1500-1630 A.D) With Special Reference to Andhra,* T. R Publications, Madras, 1995.

Prathiba Prakash., *Terracotta animal Pigars in Ganga-Yamuna Valli,* Agam Kala Prakashan, Delhi, 1985.

Rajashekara S., *Masterpieces of Vijayanagara Art,* Taraporevala Sons And Co.Pvt.Ltd, Bombay, 1983.

Ramachandra Rao S.K., *The Icons and Images in Indian Temples,* IBH Prakashana, Bangalore, 1981.

Reddeppa K., *Material Culture Depicted in Vijayanagara Temples,* Bharatiya Kala Prakashan, Delhi, 2000.

Saletore R.N., *Vijayanagara Art,* Sundeep Prakashan, Delhi, 1982.

Saletore R.N., *Social and Political Life in the Vijayanagara Empire (1346-1646), Vol.II,* B.G. Poul and Co.Publication, Madras, 1934.

Setter S., *Hampi,* Bangalore, 1990.

Shivarudraswamy S.N., *Vijayanagara Temples in Karnataka,* Directorate of Archaeology and Museums, Mysore, 2001.

Shivarammurthi C., *Birds And Animals in Indian Sculptures,* National Museum, New Delhi, 1974.

Shivarammurthi C., *Indian Sculptures,* Allied Publishers, New Delhi, 1961.

Soundar Rajan K.V., *The Art of the South India (Tamil Nadu and Kerala),* Delhi, 1978.

Srinivasan P.R., *The Indian Temple Art and Architecture,* Prasaranga, University of Mysore, Mysore, 1982.

Suresh K.M., *Temples of Hampi,* Bharatiya kala Prakashana, New Delhi, 2003.

Suresh K.M., *Sculptural Art of Hampi,* Directorate of Archaeology And Museums, Mysore, 2003.

Suresh K.M. (Ed), *Archaeology of Hampi-Vijayanagara,* Bharatiya Kala Prakashana, New Delhi, 2008.

Suresh K.M., *Vijayanagara Sculptures At Hampi*, Bharatiya Kala Prakashana, New Delhi, 2011.

Sundara A. (Ed), *Archaeology of Karnataka,* Directorate of Archaeology And Museums, Mysore, 1990.

Venkataramayya G., *Narrative Art of South Indian Temples (Srisailam),* Bharatiya Kala Prakashana, Delhi, 2004.

ನಿಯತಕಾಲಿಕೆಗಳು

ಇತಿಹಾಸ ದರ್ಪಣ ಸಂಚಿಕೆಗಳು, ಬೆಂಗಳೂರು.

ಇತಿಹಾಸ ದರ್ಶನ ಸಂಪುಟಗಳು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಚರಿತ್ರೆ ಅಧ್ಯಯನ ಸಂಚಿಕೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಜಯನಗರ ಅಧ್ಯಯನ ಸಂಪುಟಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಶಾಸನ ಅಧ್ಯಯನ ಸಂಚಿಕೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

Journal of The Asiatic Society of Bomby (New Series), The Asiatic Society of Bombay, Bombay.

Kala, The Journal of the Indian Art History Congress, Guwahati.

Procedings of the Art History, Indian Art History Congress, Guwahati.

Procedings of the Indian History Congress, Indian History Congress, Delhi.

Puratatva, Indian Archaeological Society, New Delhi.

Quarterly Journal of the Mythic Society, Bangalore.

❑❑❑

ಜೀವ ವರ್ಗೀಕರಣ ಕೊಷ್ಟಕಗಳು

ಮೀನುಗಳ ವರ್ಗೀಕರಣ ಕೋಷ್ಟಕ

ವರ್ಗೀಕರಣ ಮತ್ತು ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಕನ್ನಡದ ಹೆಸರು	ಗಮನಾರ್ಹ ಅಂಶಗಳು
ಗಣ: ಲ್ಯಾಮಿನಿಫಾರ್ಮಿಸ್ ಕುಟುಂಬ: ಓರೆಕ್ಟೋಲೋಬಿಡೆ ೧. ಕೈಲೋನಿಲ್ಲಿಯಂ ಇಂಡಿಕಮ್ ೨. ಸ್ಟೀಗೋಸ್ಟೋಮ ಫ್ಯಾಸಿಯೇಟಸ್	ಭಾರತದ ಬೆಕ್ಕು ಶಾರ್ಕು ಕಿರುಶಾರ್ಕು	ಕುನ್ನಿಸೋರ	ಬೆನ್ನಿನ ಮೇಲೆ ಮೂರು ಡರ್ಮಲ್ ಏಣುಗಳಿವೆ. ಚಿಕ್ಕ ಮೀನುಗಳು ಇದರ ಆಹಾರ. ಬಾಲದಲ್ಲಿ ಈಜುರೆಕ್ಕೆ ಇರುವುದಿಲ್ಲ.
ಕುಟುಂಬ: ರೈನಿಯೋಡಾಂಟಿಡೆ ೩. ಡೊನೋಡಾನ್ ಡಾಂಟಸ್	ತಿಮಿಶಾರ್ಕು		ಶಾರ್ಕುಗಳಲ್ಲಿಯೇ ಅತ್ಯಂತ ದೊಡ್ಡದು. ಇದು ೫ ಮೀಟರ್ ಉದ್ದ ಬೆಳೆಯುತ್ತದೆ. ಇದರಿಂದ ಅತ್ಯಧಿಕ ಲೀವರ್ ಎಣ್ಣೆ ದೊರೆಯುತ್ತದೆ.
ಕುಟುಂಬ: ಓಡಾಂಟಾಸ್ಪಿಡೆ ೪. ಯುಗೋನಪಾಡಸ್ ಟಾರಸ್	ನೀಲದಾದಿ, ಮರಳಹುಲಿ	ಕ್ಟೋಂಡೆಚಿ	ಇದರಿಂದ ಉತ್ಪತ್ತಿಯಾಗುವ ಲೀವರ್ ಎಣ್ಣೆಗೆ ಮತ್ತು ಇದರ ಈಜುರೆಕ್ಕೆಗಳಿಗೆ ಬೇಡಿಕೆ ಹೆಚ್ಚು.
ಕುಟುಂಬ: ಸಾರ್ಕ್ಯಾಲ್ಹಿನಿಡೆ ೫. ಸಾರ್ಕ್ಯಾಪ್ಯೆನಸ್ ಬ್ರೆವಿಪಿನ್ನ ೬. ಸಾ.ದುಸ್ಸುಮಿಯರಿ ೭. ಸಾ. ಲಿಂಬಾಟಸ್ ೮. ಸಾ.ಮೆರಿನಾಪ್ಯೆರಸ್ ೯. ಸಾ. ಸೋರ್ಹ	ಚರಕ ಮೀನು ಬಿಳಿ ಚೌಕುಳಿ ಶಾರ್ಕು ಕಪ್ಪುರೆಕ್ಕೆ ಶಾರ್ಕು ಕಪ್ಪುರೆಕ್ಕೆ ಹವಳ ಶಾರ್ಕು ಸೋರ್ಹ ಶಾರ್ಕು	ಶಿರ್ವ ತಾರಾವಟ್ ಕಾಕ್ಸೆ ನೀಕಾಪ್ಲೆ ತಾಂಟಿ ಶಿರಟ್	ಕಪ್ಪುತುದಿಯ ಈಜುರೆಕ್ಕೆಯ ಶಾರ್ಕು.ಇದು ನರಭಕ್ಷಕವಾಗಿದ್ದು ಒಳ್ಳೆಯ ಗುಣಮಟ್ಟದ ಲೀವರ್ ಎಣ್ಣೆ ದೊರಕುತ್ತದೆ.
ಕುಟುಂಬ: ಸ್ಫೆರ್ನಿಡೆ (ಸುತ್ತಿಗೆ ತಲೆಯ ಶಾರ್ಕುಗಳು) ೧೦. ಸ್ಫೈರ್ನ ಬ್ಲೋಕ್	ಬಾಣ ತಲೆಯ ಸುತ್ತಿಗೆ ತಲೆಶಾರ್ಕು	ಕ್ಟಾನ್ ಮೂತಿ ಕೆಬಿಕಟ್ಟಿ	ಎ ಅನ್ನಾಂಗ ಲೀವರ್ ಎಣ್ಣೆಗೆ ಹೆಸರುವಾಸಿ.
ಗಣ: ರಾಜಿಫಾರ್ಮೀಸ್ ಕುಟುಂಬ: ಪ್ರಿಸ್ಟಿಡೆ (ಗರಗಸ ಮೀನು ಅಥವಾ ಸ್ಕೇಟ್ ಮತ್ತು ರೇಗಳು) ೧೧.ಅನೋಕ್ಸಿಪ್ರಿಸ್ಟಿಸ್ ಕಸ್ಪಡೇಟಸ್	ಚೂಪು ಗರಗಸ ಮೀನು	ಗರಗಸ ಮೀನು	ರುಚಿಯಾದ ಮಾಂಸ ಮತ್ತು ಲೀವರ್ ಎಣ್ಣೆ ದೊರೆಯುತ್ತದೆ.
ಕುಟುಂಬ: ದೆಸಿಯಾಟಿಡೀ ೧೨. ದೇಸ್ಯಾಟಿಸ್ ಬ್ಲೀಕರಿ ೧೩. ದೇ. ಸೆಫೆನ್ ೧೪. ದೇ.ಉವರಾರಿಕ ೧೫. ದೇ.ಜುಗಿ ೧೬. ಜುಮ್ನಾರ ಜಪಾನಿಕ ೧೭. ಜು. ಮೈಕ್ರುರ	ಚಾಟಿ ಕುಣುಕು ಕೊಳಕು ಕುಣುಕು ಜೇನು ಕೊಟ್ಟರೇ ಬಳಚಿ ಅಂಚು ಕುಣುಕುರೇ ಉದ್ದ ಬಾಲದ ಕುಣುಕುರೇ ಮೊಟುಬಾಲದ ಚಿಟ್ಟೆ ರೇ	ಸೊರಕೆ ಕಠಾರಿ ಕೊಣಕ ಹುಲಿ ತೊರಕೆ ತೊರಕೆ ಚಿಟ್ಟೆ ಮೀನು	ಅಪಾಯಕಾರಿ ವರ್ತನೆಗೆ ಹೆಸರಾದವು.

ಗಣ: ಟಾರ್ಪೆ ಡಿನಿಫಾರ್ಮಿಸ್ (ವಿದ್ಯುತ್ ರೇ ಗಳು) **ಕುಟುಂಬ:** ಟಾರ್ಪೆಡಿನಿಡೆ ೧೮. ನಾರ್ಕೆ ಡಿಪ್ಸಿರೀಜಿಯ	ಜೋಮು ಹಿಡಿಸುವ ಮೀನು	ವಿದ್ಯುತ್ ಮೀನು	ರೇ ಮೀನುಗಳಂತ್ತಿದ್ದು ವಿದ್ಯುತ್ ಉತ್ಪಾದನಾಂಗಗಳಿವೆ
ಗಣ: ಕ್ಲೂಪಿಯಿಫಾರ್ಮಿಸ್ **ಕುಟುಂಬ:** ಕ್ಲೂಡಿಯಿಡೆ (ಸಾರ್ಡಿನ್, ಶಾಡ್ ಮೀನುಗಳು) ೧೯. ದುಸ್ಸುಮಿಯಿರಿಯ ಅಕ್ಯುಟ ೨೦. ಎಸ್ಕು ಲೋಸ ತೊರಾಸಿಕ ೨೧. ಸಾಡೀನೆಲ್ಲ ಲಾಂಗಿಸೆಪ್ಸೆ	ಕಾಮನಬಿಲ್ಲು ಸಾರ್ಡಿನ್ ಬಿಳಿ ಸಾರ್ಡಿನ್ ಇಂಡಿಯಾದ ಎಣ್ಣೆ ಸಾರ್ಡಿನ್	ಮನ್ನೇತಿ ಬಾಲಂಜಿರ್ ಬೈಗೆ	ರುಚಿಯಾದ ಮಾಂಸಕ್ಕೆ ಹೆಸರುವಾಸಿ
ಕುಟುಂಬ: ಇಂಗ್ರೇಯುಲಿಡೆ (ಆಂಕೊವಿಗಳು) ೨೨. ಕೊಯಿಲಿಯಂ ದುಸುಮಿಯರಿ ೨೩.ಸ್ಟೊಲೆಪೋರಸ್ ಕಾಮ್ಮರ್ ಸೋನಿ	ಬಂಗಾರ ಚುಕ್ಕೆ ಅಂಕೋಟೆ ಕಾಮ್ಮರಸನ್ ಆಂಕೊವಿ	ಮೊನಾಂಗು ಕೊಲ್ಲ	ಇದಕ್ಕೆ ಗುದ ಮತ್ತು ಬಾಲವೇ ಈಜುರಕ್ಕೆಗಳಾಗಿವೆ.
ಕುಟುಂಬ: ಕೈರೋಸೆಂಟ್ರಡೆ (ತೋಳ ಹೆರ್ರಿಂಗ್‌ಗಳು) ೨೪. ಕೈರೋಸೆಂಟ್ರಸ್ ದೊರಾಬ್	ದೊರಾಬೆತ್ತೊ ಹೆರ್ರಿಂಗ್	ಬಾಳೆ, ಕಡಲು ಬೀಳೆ	ಇದು ಮಾಂಸಹಾರಿ ಮೀನು
ಕುಟುಂಬ: ಆಲ್ಬುಲಿಡೆ (ಮೂಳೆ ಮೀನುಗಳು) ೨೫. ಅಲ್ಬುಲ ವಲ್ಪಿಸ್	ಮೂಳೆ ಮೀನು	ಬಾಳೆ, ಕಡಲು ಬೀಳೆ	ತಿನ್ನಬಹುದಾದರೂ ಮೂಳೆ ಜಾಸ್ತಿ
ಗಣ: ಆಸ್ಟಿಯೋಗ್ಲ್ಯಾಸ್ಸಿ ಫಾರಿಸ್ **ಕುಟುಂಬ:** ನೋಬಾಫೈಲಿಡೆ (ಫೆದರ್ ಬ್ಯಾಕ್‌ಗಳು) ೨೬) ನೋಟಾಪ್ಟೆರಸ	ಫಿದರ್‌ಬ್ಯಾಕ್	ಚಪ್ಪಲಿ ಮೀನು	ದೇಹದ ಆಕಾರ ಮತ್ತು ಗಾತ್ರದಲ್ಲಿ ಅಪಾರ ವೈವಿಧ್ಯ ತೋರುತ್ತವೆ.
ಗಣ: ಗೋನೋರ್ಹಿಂಕಿಫಾರ್ಮಿಸ್ **ಕುಟುಂಬ:** ಚೌನಿಡೆ (ಹಾಲು ಮೀನು) ೨೭) ಚನಾಸ್ ಚನಾಸ್	ಹಾಲುಮೀನು	ಹೂಮೀನು	ಒಣಗಿಸಿ ಸಾರು ಮಾಡುತ್ತಾರೆ.
ಗಣ: ಮಿಕ್ಟೊಫಿಲ್ ಫಾರ್ಮಿಸ್ **ಕುಟುಂಬ:** ಸೈನೋಡಿಡೆ ೨೮) ಸಾರಿಡ ಟಂಬಿರ್	ದೊಡ್ಡ ಹಲ್ಲಿಮೀನು	ಅರಾಣಿ ಮೀನು	ಹಲ್ಲಿಯಂತೆ ಕಾಣುತ್ತದೆ ಮತ್ತು ವರ್ಶಿಸುತ್ತದೆ.
ಗಣ: ಅಂಗುಲ್ಲಿಫಾರ್ಮಿಸ್ (ಹಾವು ಮೀನುಗಳು) **ಕುಟುಂಬ:** ಆಂಗುಲ್ಲಿಡೆ ೨೯)ಅಂಗುಯಿಲ್ಲ ಬೈಕೊಲಾರ	ಮಚ್ಚೆಸ ಈಜುರೆಕ್ಕೆ ಹಾವು ಮೀನು	ಹಾವು ಮೀನು ಮಲಗ	

೩೦) ಆ. ಬೆಂಗಾಲೈಸಿಸ್	ಉದ್ದ ಈಜುರೆಕ್ಕೆ ಹಾವು ಮೀನು	ಹೆಮ್ಮಲಗೆ ಮೀನು	ಮೊಟ್ಟೆ ಇಡಲು ಸಿಹಿನೀರಿನಿಂದ ಕಡಲಿಗೆ ವಲಸೆ ಹೋಗುತ್ತದೆ. ಇದರ ಮಾಂಸಕ್ಕೆ ಮೂಲವ್ಯಾದಿ ಗುಣಪಡಿಸುವ ಶಕ್ತಿಯಿದೆ.
ಕುಟುಂಬ: ಮುರೀನೆಸೋಸಿಡೆ (ಪೈಕ್ ಕಾಂಗರ್ಸ್)			
೩೧)ಮುರೀನೆ ಸಾಕ್ಸಬಾಗಿಯೋ	ಸಾಮಾನ್ಯ ಪೈಕ್		
೩೨) ಮು. ಸಿನೆರಿಯುಸ್	ಬಾಕು ಹಲ್ಲು ಪೈಕ್ ಕಾಂಗರ್	ಹಾವು ಮೀನು	ಹಾವು ಮೀನು ಆಕಾರ. ಆಕ್ರಮಣಕಾರಿ ಮೀನುಗಳು
ಗಣ: ಸಿಪ್ರಿನಿಫಾರ್ಮಿಸ್ ಕುಟುಂಬ: ಸಿಪ್ರಿನಿಡೆ (ಕಾರ್ಪಗಳು)			
೩೩) ಕೇಲ ಆಟಪಾತ	ರೆಕ್ಕೆರಾಸ್ಟೋರ	ಕೊಳೆಮೀನು	ಲಾರ್ವ ಭಕ್ಷಕಗಳು. ಹಿಂಸ್ರ ಮೀನುಗಳು. ಪೋಷಣೆಯಲ್ಲಿ ಪ್ರಮುಖ. ಮುಂಗಾರಿನಲ್ಲಿ ಮೊಟ್ಟೆ ಇಡತ್ತವೆ.
೩೪) ಸಾಲ್ಮೋಸ್ಟೋಮ್ ಅಸಿನೇನಸ್		ಚಿಟ್ಟೆಮೀನು	
೩೫) ಸಾ. ಬೂಪ್ಸಿಸ್		ಸೂಳೆ ಮೀನು	
೩೬) ಸಾ. ಹೊರಾಯಿ		ಜೊಳೆಮೀನು	
೩೭)ಡಾನಿಯೊ ಇಕ್ವಿಪಿನೇಟಸ್	ದೈತ್ಯಡಾನಿಯೊ	ಅರಿಶಿಣ ಪಟ್ಟ	
೩೮) ರಾಸ್ಟೋರ ದಾನಿಕೋನಿಯಸ್	ಸಾಮಾನ್ಯ ರಾಸ್ಟೋರ	ಸಾಸ್ಲುಪಕ್ಕೆ	
೩೯) ರಾ. ಸ್ಟೋರ			
೪೦) ಆಂಬ್ಲಿಫೆರಿಂಗೊಡಾನ್ ಮೆಲೆಟ್ಟೆನ	ಎಚ್ಚರಿಕೆ ಮೊಳ	ಇಲಿಯೊಂಬು	
೪೧) ಆ. ಮೈಕ್ರೊಲಿಪಿಸ್			
೪೨) ಆ. ಮೋಲ	ಮೋಲ	ಇನಾಪು ಪಕ್ಕೆ	
೪೩) ಬುರಿಲಿಯಸ್ ಬೆಂಪಿಲಿಸಿಸ್		ಅಗಸಗಿತ್ತಿ ಮೀನು ಬಿಳಿಚೆ	
೪೪) ಬು. ವರ್ಗ		ಗೈರೆಕ್ಯಲಾಣಿ ಮೀನು	
೪೫) ಬು. ಕೆನರೆನ್ಸಿಸ್			
೪೬) ಬು. ಗುಬೆನಿಸಿಸ್			
೪೭) ಪುಂಟಿಯಸ್ ಚೋಳ	ಹಸಿರುಬಾರ್ಬ್	ದಡ್ವಕರ್ಸ್ಪಕ್ಕೆ ಪಕ್ಕೆಜಬ್ಬು	
೪೮) ಪುಂ. ಮೈಕ್ರೊಪೊಗಾನ್		ಬೆಟ್ಟ ಕೌರಾಲು	
೪೯) ಪುಂ.ಫಿಲಮೆಂಟೋಸಸ್	ಮೀಸೆ ಬಾರ್ಬಕಡುಕೆಂಪು	ಕಸ್ಮ, ಗೊಗ್ಗರಕೆ	
೫೦) ಪುಂ. ಆಂಫಿಬಿಯಸ್	ಪಟ್ಟಿಬಾರ್ಬ	ಪಕ್ಕೆ ಮೀನು	
೫೧) ಪುಂ. ಕರ್ನಾಟಕಸ್	ಕರ್ನಾಟಕದ ಕಾರ್ಪು	ಕೊರಚಮೀನು, ಗೆಂಡೆ ಮೀನು, ಗುಡ್‌ಪಕ್ಕೆ ಮೀನು ಮೊಟ್ಟೆ ಇಡುತ್ತದೆ.	ಕೃಷಿ ಯೋಗ್ಯ, ಮಧ್ಯಮ ಗಾತ್ರದಿಂದ ದೊಡ್ಡ ಮೀನು, ಮುಂಗಾರಿನಲ್ಲಿ ಮಚ್ಚಾಲು ಮೀನು

೫೨) ಪುಂ. ಸುಮುಕ್	ಬುಚನನ ಕಾರ್ಪು	ಕೊರಚಮೀನು, ಕುರುವಾಯಿ	
೫೩) ಪುಂ. ಪುಲ್‌ಕೆಲ್ಲಿಸ್	ಭಾರತದ ಹುಲ್ಲು ಕಾರ್ಪು	ಬಿಳಿ ಹರಗಿ ಮೀನು	
೫೪) ಪುಂ. ಜೆರ್ಡೋನಿ	ತುಂಗಭದ್ರ ಕಾರ್ಪು, ಜೆರ್ಡೋನಿ ಕಾರ್ಪು	ಹರಗಿ ಮೀನು	
೫೫) ಸಿಪ್ರಿನಸ್ ಕಾರ್ಪಿಯಾ ಸ್ಪಕುಲಾರಿಸ್	ಕನ್ನಡ ಕಾರ್ಪು, ಸಾಮಾನ್ಯಕಾರ್ಪು	ಸಾಮಾನ್ಯಕಾರ್ಪು ಪರೆಮೀನು	
೫೬) ಸಿ.ಕಾ. ಕಮ್ಯೂನಿಸ್	ಹುರುಪೆ ಕಾರ್ಪು, ಸಾಮಾನ್ಯ ಕಾರ್ಪು	ಕನ್ನಡಿ ಮೀನು	
೫೭) ಸಿ.ಕಾ. ನೊಡುಸ್	ತೊಗಲು ಕಾರ್ಪು	ಬತ್ತಲೆ ಮೀನು	
೫೮)ಕರಾನ್ಸಿಯಸ್ ಔರೇಟಸ್	ಬಂಗಾರ ಮೀನು	ಬಂಗಾರದ ಮೀನು	ಜಲತೊಟ್ಟಿಯ ಜನಪ್ರಿಯ ಮೀನು
೫೯) ಹೈಪೋತಾಲ್ಮಿಕ್ತಿಸ್ ಮಾಲಿಟ್ರಿಕ್ಸ್	ಬೆಳ್ಳಿ ಕಾರ್ಪು	ಬೆಳ್ಳಿಮೀನು	ಸಣ್ಣಗಾತ್ರದ ಮೀನು(೧೨ ಕೆ.ಜಿ) ಕೃಷಿಯೋಗ್ಯ ಮೀನು, ಚೀನಾದ ಮೂಲ ನಿವಾಸಿ, ಮುಂಗಾರಿನಲ್ಲಿ ತತ್ತಿ ಇಡುವ ಸಸ್ಯಹಾರಿ
೬೦) ಲೇ. ನೈಗ್ರಿಸೆನ್ಸ್		ಕುರಿಮೀನು	ಮಧ್ಯಮಗಾತ್ರ ಕೃಷಿಯೋಗ್ಯ.
೬೧) ಲೇ. ರೋಹಿತ	ರೋಹು	ರೋಹುಮೀನು	ದೊಡ್ಡಗಾತ್ರ ಕೃಷಿಯೋಗ್ಯ
೬೨) ತೋರ್ ಕುದ್ರಿಂ	ಕುದ್ರಿಮಶೀರ್	ಬಿಳಿಮೀನು	ದೊಡ್ಡಗಾತ್ರ ಕೃಷಿಯೋಗ್ಯ
೬೩) ಸೆರ್ರಿನಸ್ ಮೃಗಾಲ	ಮಿಗ್ರಾಲ	ಮಿಗ್ರಾಲ ಮೀನು	ದೊಡ್ಡಗಾತ್ರ ಕೃಷಿಯೋಗ್ಯ
೬೪) ಕಾಟ್ಲಕಾಟ್ಲ	ಕಾಟ್ಲ	ಕಾಟ್ಲಮೀನು ದೊಡ್ಡಗೆಂಡೆ ಮೀನು	ದೊಡ್ಡಗಾತ್ರ (೧೮ ಕೆ.ಜಿ) ಕೃಷಿ ಯೋಗ್ಯ ಮೀನು
೬೫) ಟನೋಫ್ಯಾರಿಂಗೊಡಾನ್ ಇಡೆಲ್ಲ	ಹುಲ್ಲು ಕಾರ್ಪು	ಹುಲ್ಲು ಕಾರ್ಪು ಹುಲ್ಲುಮೀನು	ದೊಡ್ಡಗಾತ್ರ ಜಲಕಳೆ ಕಳೆಯಲು ಬಳಸಲಾಗುತ್ತದೆ.
೬೬) ಗೆರ್ರ ಗೊಬಿಲ್ಯ ಸ್ಪೆನೊರಿಂಕಸ್		ಕಲ್ಲು ಕೊರೆವ ಕುರಿ ಕುರಿ	ಸಣ್ಣ ಸಸ್ಯಾಹಾರಿ
ಗಣ: ಕೊಬಿಟಿಡೆ			
೬೭) ನೋಮಕೈಲಸ್ ಭೀಮಚಾರಿ		ಮುರಂಗಿ ಮೀನು ಕಲ್ಮುರ ಮೀನು ಹುಣಸೆ ಮೀನು	ಸಣ್ಣ ಸಸ್ಯಾಹಾರಿ ಮೀನುಗಳು
೬೮) ನೋ. ಪುಲ್‌ಕೆಲ್ಲಸ್		ಕಲ್ಲುಮುಳ್ಳು ಮೀನು ಮುರಂಗಿಮೀನು	ಸಣ್ಣ ಸಸ್ಯಾಹಾರಿ ಮೀನುಗಳು
೬೯) ನೋ. ಡೆನಿಸೋನಿ		ಕಲ್ಲುಮುಳ್ಳು ಮೀನು ಹುಣಸೆ ಮೀನು	ಸಣ್ಣ ಸಸ್ಯಾಹಾರಿ ಮೀನುಗಳು
ಗಣ: ಸೈಲೂರಿ ಫಾರ್ಮಿಸ್ (ಕ್ಯಾಟ್ ಫಿಶ್) ಕುಟುಂಬ: ಬಾಗ್ರಿಡೆ			
೭೦) ಮಿಸ್ಟಸ್ ಮೋನಿಗ್ನಸ್		ಗಿರ್ಲು ಮೀನು	ಮುಂಗಾರಿನಲ್ಲಿ ಮೊಟ್ಟೆ ಇಡುವ ಸಸ್ಯಹಾರಿ ಮೀನು
೭೧) ಮಿ. ವಿಟ್ಟೇಟಸ್	ಕುಬ್ಜ ಕ್ಯಾಟಫಿಶ್	ಚಿಟ್ಟುಗಿರ್ಲು	ಮುಂಗಾರಿನಲ್ಲಿ ಮೊಟ್ಟೆ ಇಡುವ ಸಸ್ಯಹಾರಿ ಮೀನು

೨೨) ಮಿ. ಮಲಬಾರಿಕಸ್	ಕುಬ್ಜ ಕ್ಯಾಟಫಿಶ್	ಕೆಲಾಟಿ, ಜೆಲ್ಲ, ಗಿರ್ಲು ಮೀನು	ಮುಂಗಾರಿನಲ್ಲಿ ಮೊಟ್ಟೆ ಇಡುವ ಸಸ್ಯಹಾರಿ ಮೀನು
ಕುಟುಂಬ: ಸೈಲೂರಿಡೆ (ಹಾಳೆ ಮೀನು) ೨೩) ಓಂಪಾಕ್ ಬೈಮ್ಯಾಕುಲೇಟಸ್	ಬೆಣ್ಣೆ ಕ್ಯಾಟಫಿಶ್	ಗುಳ್ಳೆ ಮೀನು	ಮುಂಗಾರಿನಲ್ಲಿ ಮೊಟ್ಟೆ ಇಡುವ ಸಣ್ಣ ಮೀನು.
೨೪) ವೆಲ್ಲಾಗೊ ಅಟ್ಟ	ಸಿಹಿ ನೀರು ಶಾರ್ಕು	ಬಾಳೆ ಮೀನು ವಿಟಂ. ಜಾಟೆ	ದೊಡ್ಡ ಮೀನು(೨೦೨೫ ಕೆ.ಜಿ) ಇತರ ಮೀನು ತಿನ್ನುವ ಮೀನು
೨೫) ಕ್ಲೇರಿಯಸ್ ಬೆಟ್ರಾಕಸ್	ಮಗುರ್	ಅಣ್ಣೆ ಮೀನು ಮಾರ್ವೆ ಮುರುಗೋಡು	ಗಾಳಿ ಉಸಿರಾಡುವ ಮೀನು
ಕುಟುಂಬ: ಪ್ಲಾಬೋಸಿಡೆ (ಬೆಕ್ಕು ಮತ್ತು ಹಾವು ಮೀನುಗಳು) ೨೬)ಪ್ಲೊಟೊಸಸ್ ಅನೀಟಸ್	ಪಟ್ಟೆ ಸಿಡಿ	ಶಿಂಗಾಲ	ಮುಖ್ಯವಾಗಿ ಕಡಲ ಮೀನು ಅಳವೆಗಳಲ್ಲಿಯೂ ಕಂಡುಬರುತ್ತದೆ.
೨೭) ಪ್ಲೊ. ಕೇನಿಯಸ್	ಕೋರೆ ಸೀಡಿ	ವಾಲ್‌ಶಿಂಗಿ	ಮುಖ್ಯವಾಗಿ ಕಡಲ ಮೀನು ಅಳವೆಗಳಲ್ಲಿಯೂ ಕಂಡುಬರುತ್ತದೆ.
ಕುಟುಂಬ:ಆರಿಡೀಟಾಕಿಸೂರಿಡೆ (ಕಡಲು ಕ್ಯಾಟ್‌ಫಿಶ್) ೨೮) ಆರಿಸ್ ತಲಾಸ್ಸಿನಸ್ ೨೯) ಆ. ಸಬ್ರೋಸ್ಟ್ರೇಟಸ್	ದೈತ್ಯಕ್ಯಾಟಫಿಶ್, ಕಡಲು ಕ್ಯಾಟ್‌ಫಿಶ್ ಮೋಟುಮೂಗು ಕ್ಯಾಟ್ ಫಿಶ್, ಕಡಲ ಫಿಶ್	ಕೊಗ್ಗಿಶೆಡ್ಡೆ, ಮೊಗರು ಶೆಡ್ಡೆ	ಇವುಗಳ ಗರಗಸ ಅಂಚಿನ ಮುಳ್ಳುಗಳ ಇರಿತ ಅತೀವ ನೋವುಂಟು ಮಾಡ ಬಹುದಾದುದ ರಿಂದ ತೀರಾ ಅಪಾಯಕಾರಿ. ವಿಷಗ್ರಂಥಿಗಳಿಲ್ಲ. ಆದರೆ ಅದರ ಮೈಮೇಲಿನ ಶ್ಲೇಷ್ಮಕ್ಕೆ ವಿಷಗುಣ ವಿದೆ. ಹಿಡಿದ ತಕ್ಷಣ ಶುದ್ಧ ಮೀನು ತಿನ್ನಲು ಯೋಗ್ಯ.
೩೦) ಆ. ಸಿಲೇಟಸ್	ಕೊರೆವ ಮಾರ್ಜಾಲ ಕಡಲ ಮೀನು	ಶೆಡೆ, ತೆಡೆ	ಇದರ ವಾಯಕೋಶವನ್ನು ಇಡಿನ್‌ಗ್ಲಾಸ್ ಮೀನಂಟು ವಜ್ರ ತಯಾರಿಸಲು ಬಳಸುತ್ತಾರೆ.
ಕುಟುಂಬ: ಬೆಲೊನಿಡೆ (ಗ್ರಾಕ್‌ಮೀನು,ಸೂಜಿಮೀನು) ೩೧) ಸ್ಟ್ರಾಂಗೈಲೂರ ಸ್ಟ್ರಾಂಗೈಲೂರ	ದುಂಡುಬಾಲದ ಸೂಜಿ ಮೀನು	ಕೊಕ್ಕರೆ ಮೀನು	ಉದ್ದವಾದ ಮೇಲು ಮತ್ತು ಕೆಳಗಿನ ದವಡೆಗಳಿಂದ ಕೊಕ್ಕು ನಿರ್ಮಾಣವಾಗಿದೆ. ಇವುಗಳ ಮೂಳೆಗಳ ಮೂಳೆಗಳು

೮೦) ಸ್ಟ್ರಾಂ ಲೈಯೂರ ೮೩) ಟೈಲೊಸಾರಸ್ ಕ್ರೋಕೊಡೈಲಸ್ ೮೪) ಕ್ಸನೆಂಟೋಡಾನ್ ಕಾನುಲ	ಚೌಕ ಬಾಲದ ಮೀನು ದೈತ್ಯಲಾಂಗ್ ಲ್ಯಾಮ್ ಸಹಿನೀರಿನ ಗಾರ್ ಮೀನು, ಸೂಜಿಮೀನು		ಮತ್ತು ಕೆಲಮೊಮ್ಮೆ ಮಾಂಸ ಹಸಿರುಬಣ್ಣ, ಆದರೆ ತಿನ್ನಬಹುದು.
ಗಣ: ಸಿಂಗ್ನಾತಿಫಾರ್ಮಿಸ್ ಕುಟುಂಬ: ಫಿಸ್ತುಲೇರಿಡೆ ೮೫)ಫಿಸ್ತುಲೇರಿಯ ವಿಲ್ಲೋಸ್	ಒರಟು ಕೊಳಲು ಮೀನು		ನೀಳವಾದ, ಚಪ್ಪಟೆ ಮಾಂಸದ ದೇಹ, ಬಾಲದ ಮಧ್ಯಭಾಗ ತಂತುವಿನಂತಿದೆ.
ಕುಟುಂಬ: ಸಿಂಗ್ನಾತಿಡೆ ೮೬) ಹಿಪ್ಪೊ ಕ್ಯಾಂಪಸ್ ಕೂಡ	ಕಡಲಕುದುರೆ	ಕುದುರೆಮೀನು	ಗಂಡು ಮೊಟ್ಟೆ ಮರಿಗಳನ್ನು ಉದರ ಭಾಗದಲ್ಲಿರುವ ಸಂತಾನ ಸಂಚಿ ಯಲ್ಲಿಟ್ಟಿ ಕೊಳ್ಳುತ್ತದೆ.
ಗಣ: ಸಿಫ್ರಿನೊಡಾಂಬಿ ಫಾರ್ಮಿಸ್ ಕುಟುಂಬ: ಸಿಫ್ರಿನೋಡಾಂಬಿಡೇ ೮೭) ಅಪ್ಲೋಕೈಲಸ್ ಲಿನಿಯೇಟಸ್ ೮೮) ಅ. ಮೆಲಸಿಗ್ಮ	 ಅಳವೆ ಮೀನು	ಮೂಗುಮಲ್ಲಿ ಮೀನು	ಸೊಳ್ಳೆಲಾರ್ವ ತಿನ್ನುವ ಸಣ್ಣ ಮೀನು. ಆದ್ದರಿಂದ ಮಲೇರಿಯಾ ನಿಯಂತ್ರಣಕ್ಕೆ ಪ್ರಯೋಜಕ ಇದು ಜಲತೊಟ್ಟಿ ಮೀನು ಹೌದು.
ಗಣ: ಪ್ರೊಸಿಲಿಡೆ ೮೯) ಗ್ಯಾಂಬೂಸಿಯ ಅಫಿನಸ್ ೯೦) ಲೆಬಿಸ್ಟಿಸ್ ರೆವಿಕ್ಯುಲೇಟಡ್	ಟಾಪ್ ಮಿನ್ನೋ	ಗೆಂಬೂಸಿಯ ಮೀನು ಹೆಚ್ಚಿಗೆ ಮೀನು	ಸೊಳ್ಳೆಲಾರ್ವ ತಿನ್ನುವ ಸಣ್ಣ ಮೀನು. ಆದ್ದರಿಂದ ಮಲೇರಿಯಾ ನಿಯಂತ್ರಣಕ್ಕೆ ಪ್ರಯೋಜಕ ಇದು ಜಲ ತೊಟ್ಟಿ ಮೀನು ಹೌದು.
ಗಣ: ಬೆರಿಸಿಫಾರ್ಮಿಸ್ (ಸೈನಿಕ್ ಮೀನು, ನುಣುಚು ತಲೆಗಳು) ಕುಟುಂಬ: ಹೊಲೊಸೆಂಟ್ರಿಡೆ ೯೧) ಅಡಿಯೊರಿಕ್ಸ್ ರೂಬರ್	ಸೈನಿಕ ಮೀನು		ವರ್ಣ ಭರಿತ ಮುಳ್ಳು ಈಜು ರೆಕ್ಕೆಗಳಿಂ ಕೂಡಿರುತ್ತವೆ.
ಗಣ: ಸ್ಕೂರ್ಪೆನಿಫಾರ್ಮಿಸ್ (ಓಣಿ ಕೆನ್ನ ಮೀನು) ಕುಟುಂಬ: ಪ್ಲಾಟಿಸಿಫಾಲಿಡೆ (ಚಪ್ಪಟೆ ತಲೆ ಮೀನು) ೯೨) ಪ್ಲಾಟಸಿಫಾಲಸ್ ಇಂಡಿಕಸ್ ತಲೆಮೀನು	ಭಾರತದ ಚಪ್ಪಟೆ	ಬೆಲ್ಲಾಟ್	ನೀಳವಾದ, ಎರುಳೆಯಾಕಾರದ ದೇಹ, ಚಪ್ಪಟೆಯಾದ ತಲೆ, ಏಣುಗಳು ಮತ್ತು ಮುಳ್ಳುಗಳಿವೆ.

೯೩) ಪ್ಲಾ. ಕ್ರೋಕೊಡೈಲಸ್	ಚುಕ್ಕಿಮೀನು		ನೀಳವಾದ, ಎರುಳೆಯಾಕಾರದ ದೇಹ, ಚಪ್ಪಟೆಯಾದ ತಲೆ, ಏಣುಗಳು ಮತ್ತು ಮುಳ್ಳುಗಳಿವೆ.
ಗಣ: ಚೆನ್ನಿಫಾರ್ಮಿಸ್ (ಹಾವು ತಲೆ ಮೀನು) ಕುಟುಂಬ: ಚೆನ್ನಿಡೆ (ಮುರೈಲ್‌ಗಳು) ೯೪) ಚೆನ್ನ ಪಂಕ್ಟೇಟಸ್ ೯೫) ಜೆ. ಓರಿಯಾಂಟಾಲಿಸ್ ೯೬) ಜೆ. ಮೈಕ್ರೋಫೆಲ್ಬಿಸ್ ೯೭) ಜೆ. ಸ್ಟ್ರೋಯೆಟ್‌ಸ್ ೯೮) ಜೆ. ಮಾರಲಿಯಾಸ್	ಕೊರವಿ ಮುರ್ರಲ್ ಹಸಿರು ಹಾವು ತಲೆ ಪಟ್ಟೆ ಹಾವು ತಲೆ ಸಾಮಾನ್ಯ ಮುರ್ರೆಲ್ ದೊಡ್ಡ ಮುರ್ರೆಲ್ ದೈತ್ಯಹಾವು ತಲೆ	ಕೊರ್ವ, ಮಟ್ಟ ಕೊರವ, ಮಟ್ಟ ಕೊರಜ, ಕುಚ್ಚೆ, ಹುಲಿಕುಟ್ಟಿ ಕುಚ್ಚಲು ಮೀನು ಹೂವಿನ ಮೀನು ಗೂಬೆ ಮೀನು	ತಿನ್ನಬಹುದಾದ ಹಾವುತಲೆಯ ಮೀನುಗಳು
ಗಣ: ಪರ್ಸಿಫಾರ್ಮಿನ್ ಕುಟುಂಬ: ಸೆಂಟ್ರೋಪೊಮಿಡೆ (ಕಡಲು ಪರ್ಚಗಳು) ೯೯) ಲೇಟಿಸ್ ಕ್ಯಾಲ್ಸಿರಿಫರ್ ಮಿನುಂಟು ತಯಾರಿಸಲು	ದೈತ್ಯಪರ್ಚ, ಬಟ್ಕಗುರಿ, ನಾಯರ್ ಮೀನು	ಕೆಂಬೇರಿ ಮುಡದ ಮೀನು ಕೌಜುರ್ ಮೀನು	ಹಿನ್ನಿರಿನ ಜೌಗುನೀರುಗಳಲ್ಲಿ ಜಲಕೃಷಿಗೆ ಬಳಸುವ ಮೀನು. ಇದರ ಪಿತ್ತಕೋಶವನ್ನು ವಜ್ರ (ಐಸಿಂಗ್ಲಾಸ್) ಬಳಸುತ್ತಾರೆ.
ಕುಟುಂಬ: ಅಂಬಾಸ್ಸಿಡೆ (ಗಾಜು ಮೀನು) ೧೦೦) ಅಂಬಾಸ್ಸಿಸ್ ಜಿಮ್ನೋಸಿಫಾಲಸ್	ಬೆತ್ತಲೆ ತಲೆಗಾಜು	ಅಟ್ಟಿ, ತರಿ	ಹೊಳಪು ಅಥವಾ ಬೆಳ್ಳಿ ಬಿಳುಪು ಬಣ್ಣದ ಪ್ರಕಾಶಕ ಪಾರದರ್ಶಕ ದೇಹದ ಮೀನುಗಳು.
ಕುಟುಂಬ: ಸೆರ್ರಾನಿಡೆ (ಕಡಲು ಬಾಸ್‌ಗಳು ಮತ್ತು ಗ್ರೂಪರ್‌ಗಳು) ೧೦೧) ಎಡಿಸಿಫೆಲಸ್ ಕ್ಲೊರೊಸ್ಟಿಗ್ಮ	ಕಂದು ಗುರುತು ದಿಬ್ಬ ಕೌಡ್, ಮಲಬಾರ್ ರೀಮಡ್ ಗ್ರೀಸಿ ಗ್ರೂಪರ್	ಮೂರು ಮೀನು	ತಿನ್ನಬಹುದಾದ ದೊಡ್ಡಗಾತ್ರದ ಮಾಂಸಾಹಾರಿ ಮೀನುಗಳು ಅಂಡಜಗಳು, ಸ್ತ್ರೀ ಜನನೇಂದ್ರಿಯಗಳು ಮೊದಲು ಪಕ್ವವಾದ ಅಥವಾ ಏಕಕಾಲದಲ್ಲಿ ಎರಡೂ ಅಂಗಳು ಪಕ್ವವಾಗುವ ದ್ವಿಲಿಂಗಿ ಮೀನುಗಳು
ಕುಟುಂಬ: ಟೆರಪೊನಿಡೀ (ಗ್ರಂಟರ್ ಮೀನು) ೧೦೨) ಟೆರಪಾನ್‌ಜರ್ಬೂವ	ಜರ್ಬಸ್ ಟೆರಪಾನ್	ಗೋರೆ	ಒಳ್ಳೆ ಕಡಲ ಜಲತೊಟ್ಟಿ ಸಾಕು ಮೀನು

೧೦೩) ಟಿ. ಪುಟ	ಅರೆಚಂದ್ರ ಪರ್ಚ, ಸಣ್ಣ ಹುರುಪೆಗಳ ಪಟ್ಟಿ ಗ್ರಂಟರ್, ಕೀಚಲು ಪರ್ಚ		ಒಳ್ಳೆ ಕಡಲ ಜಲತೊಟ್ಟಿ ಸಾಕು ಮೀನು
ಕುಟುಂಬ: ಸಿಲ್ಲಗಿನಿಡೆ (ವೈಟಿಂಗ್‌ಗಳು)			
೧೦೪) ಸಿಲ್ಲಾಗೋ ಸಿಹಾಮ	ಭಾರತದ ವೈಟಿಂಗ್ ಬೆಳ್ಳಿ ಸಿಲ್ಲಾಗೊ ಮರಳು ವೈಟಿಂಗ್ ಮಹಿಳಾ ಮೀನು	ಕಂಪಿಗೆ ನಗಾಟಿ	ನಯ ಮತ್ತು ನೀಳವಾದ ತೆಳುದೇಹ, ಮಾಂಸ ರುಚಿ ಯಾಗಿದ್ದು ಸ್ಥಳೀಯ ಮಾರುಕಟ್ಟೆಯಲ್ಲಿ ಅಪಾರ ಬೇಡಿಕೆ ಉಂಟು.
೧೦೫) ಸಿ. ವಿನ್‌ಸಾಂಟಿ	ಮರಳು ವೈಟಿಂಗ್	ಕಂಡಿಗೆ	
ಕುಟುಂಬ: ಕ್ಯಾರಾಂಗಿಡೆ (ಜಾಕ್‌ಗಳು ಮತ್ತು ರಾಜ ಮೀನುಗಳು)			
೧೦೬) ಅಲೆಕ್ಟಿಸ್ ಇಂಡಿಕಸ್	ಟ್ರಾವೆಲ್ಲಿ ಭಾರತದ ನೂಲು ಮೀನು		ವಾಣಿಜ್ಯ ದೃಷ್ಟಿಯಿಂದ ಪ್ರಮುಖವಾದ ಮಾಂಸಹಾರಿ ಮೀನುಗಳು
೧೦೭) ಕೆರಾಂಕ್ಸ್ ಸೆರಾಂಗಸ್	ಕರಿಬಾಲ ಟ್ರವೆಲ್ಲಿ	ಬೊಂಕೆ, ಕಡೈ	ವಾಣಿಜ್ಯ ದೃಷ್ಟಿಯಿಂದ ಪ್ರಮುಖವಾದ ಮಾಂಸಹಾರಿ ಮೀನುಗಳು
೧೦೮) ಕೆ. ಮೆಲನ್‌ಸಿಂಗ್	ನೀಲರೆಕ್ಕೆ ಜೌಕ್	ಬೊಂಕೆ	
೧೦೯) ಮೆದಲೆಪಿಸ್ ಕಾರ್ಡಿಲ	ಗಟ್ಟಿಬಾಲದ ಸ್ಕಾಡ್	ಗೊಂಡ್ಲು, ಗೊಂಕೆ	
೧೧೦) ಸ್ಕಾಂಬೆಸ್ಕಾಯಿಡಿಸ್ ಕಮ್ಮರ್ ಸೋನಿಯಸ್	ದಲಾಂಗ್ ರಾಣಿಮೀನು	ಪಳಾಯಿಮೀನು	
೧೧೧) ಸೆಲಾರ್ ಕ್ರುಮಾನೊಪ್ತಾಲ್ಮಸ್	ದೊಡ್ಡಕಣ್ಣು ಸ್ಕಾಡ್ ಮುಳುಗಣ್ಣು ಮೀನು	ಪೈರೈ, ಕೊದಂಡೆ, ಬೊಂಜೆ, ವಡ್ಡೆ, ಕೊಡುಮೈ	
೧೧೨) ಸೆರಿಯೊಲಿನ್ ನೈಗ್ರೋಪ್ಯಾಸಿಯೇಟ್	ಕಪ್ಪುಪಟ್ಟಿ, ಟ್ರವೆಲ್ಲಿ	ಮೊರ್ವಾಸ್	
೧೧೩) ಟ್ರಾಕಿನೋಟಸ್ ಬ್ಲಾಕಿ	ಬಾನುಮೂಗು ಪಾಂಪೆನೊ	ಮೊರ್ವಾಸ್	
೧೧೪) ಟ್ರಾ. ಬೈಲ್ಲಾನೈ	ಬೈಲಿಯೇನರ್ ಡಾರ್ಟ್	ಕೊದಂಡೆ	
ಕುಟುಂಬ: ಅಪೊಲೋಕ್ಟಿಡೆ			
೧೧೫) ಅಪೊಲೆಕ್ಟಸ್ ನೈಗರ್	ಕಪ್ಪು ಪಾಂಫ್ರೆಟ್ಸ್	ತೊಂಡ್ರಟ್ಟಿ ಕರಿಮಂಜು	ಸ್ಥಳೀಯ ಮಾರುಕಟ್ಟೆಯಲ್ಲಿ ದುಬಾರಿ ಬೆಲೆಯುಳ್ಳ ತಿನ್ನ ಬಹುದಾದ ಒಳ್ಳೆಯ ಮೀನು.

ಕುಟುಂಬ:ಲೆತ್ರಿನಿಡೆ (ಹಂದಿಮುಖ ಹಳದಿ ಮೀನು)			
೧೧೬) ಲೆತ್ರಿನಸ್ ಸಿನೆರಿಯಸ್	ಲಗಾಮು ಹಂದಿ ಮೂತಿ ಮೀನು		ಸಾಮಾನ್ಯ ತಿನ್ನುವ ಮೀನು ಇವುಗಳ ದೇಹವು ಪ್ರಕಾಶಕ
೧೧೭) ಲೆ. ಗೆಬುಲೋಸಸ್	ತಾರಾ ಮೀನು		ವರ್ಣದವು.
ಕುಟುಂಬ: ಸ್ಪೇರಿಡೆ (ಕಡಲು ಹಳದಿ ಮೀನು, ಪೋರ್ಗಿಸ್)			
೧೧೮) ಅಕ್ಯಾಂತೊಪಗ್ರಸ್ ಬೆರ್ಡ್	ಪಿಕನಿಕ್, ಹಳದಿಮೀನು ಕಪ್ಪುಮೀನು	ಅಶಿಕ್	ಪ್ರಕಾಶಕ ಬಣ್ಣ, ಉತ್ತಮ ಆಹಾರದ ಮೀನು, ಆಕಾರ ದಲ್ಲಿ ಎಳೆಮೀನು ವಯಸ್ಕ ಮೀನಿಗಿಂತ ತುಂಬಾ ಭಿನ್ನ.
ಕುಟುಂಬ: ಸಿಯೀನಿಡೆ (ಗೊಣಗು ಮೀನುಗಳು)			
೧೧೯) ಡ್ಯಾಸೀನ್ ಆಲ್ಬಿಡ್	ಬೋಡುದಾಡೆ ಗೊಣಗ		ಅಮೂಲ್ಯ ಆಹಾರದ ಮೀನು.
೧೨೦)ಜೇನಿಯಸ್ ಅನುಯಸ್	ಮಸಿಗೊಣಗ	ಕಲ್ಲೂರ	ಇದರ ಜಠರ ಮೀನಜ್ರ ತಯಾರಿಕೆ ಯಲ್ಲಿ
೧೨೧)ನಿಚಿಯ ಮ್ಯಾಕುಲೇಟ			ಬಳಸುತ್ತಾರೆ. ದ್ರಾಕ್ಷಾರದ
೧೨೨) ಆಟೋಲಿಪಿಸ್ ರೊಬರ್	ಹುಲಿಹಲ್ಲು ಗೊಣಗ	ಕುಡ್ಡಾಲಿ	ಮತ್ತು ಬೀರ ತಯಾರಿಸುವಲ್ಲಿ ಇದು ಬಳಕೆಯಾಗುತ್ತದೆ.
೧೨೩) ಪ್ರೊಟೊನಿಬಿಯ ಡಯಾಕಾಂತಸ್ ಪರ್ಯಾಯ	ಪಟ್ಟಿ ಗೊಣಗ	ಬಲ್ದೆಗೋಲಿ	ಪೆಪ್ಪರಮೆಂಟ ತಯಾರಿಕೆ ಇದೊಂದು ಜಿಲಾಟಿನ್ ವಸ್ತು ಕೆಲವು ಸಿಮೆಂಟಿಂಗ್ ತಯಾರಿಕೆಯಲ್ಲಿಯೂ ಬಳಕೆಯಾಗುತ್ತದೆ.
ಕುಟುಂಬ: ಮುಲ್ಲಿಡೆ (ಆಡು ಮೀನು)			
೧೨೪) ಉಪಿನ್ಯೂಸ್ ಸಲ್ ಪೊರಿಯಸ್	ಹಳದಿ ಆಡು ಮೀನು	ಪುಜ್ಜವಿಲ್ಲಕೇರಿ	ಸವಿ ಮತ್ತು ರುಚಿಯಾದ ಮಾಂಸ
೧೨೫) ಉ. ವಿಟ್ಟೇಟಸ್	ಹಳದಿ ಪಟ್ಟಿ ಆಡು ಮೀನು	ಪುಜ್ಜವಿಲ್ಲಕೇರಿ ಕಲ್ಲುಗೊರ	ಹಾಗೂ ಉತ್ಕೃಷ್ಟ ಬಣ್ಣಕ್ಕೆ ಹೆಸರಾದವು.
೧೨೬) ಗ್ಲಾಸೋಗೋಬಿಯಾಸ್	ಯೂರಿಸ್		
ಕುಟುಂಬ: ಮುಗಿಲ್ಲಿಡೆ (ಮುಲ್ಲೆಟ್‌ಗಳು)			
೧೨೭) ಲಿಜ ಪಾರ್ಸ್ರಿಯ	ಬಂಗಾರ ಗುರುತು ಮುಲ್ಲೇಟ	ಮಾಲು	ಪ್ರಮುಖ ಆಹಾರ ಮೀನು. ಕಡಲು ಮತ್ತು ಜಲ ಕೃಷಿ ಯೋಗ್ಯ.
ಕುಟುಂಬ: ಸ್ಫೈರೇನಿಡೆ (ಬರ್ರಕೂಡಾಸ್) (ಪಿಶಾಚಿ ಮೀನು)			
೧೨೮) ಸ್ಫೈರೀನ ಜೆಲ್ಲೊ	ಪಟ್ಟಿ ಪಿಶಾಚಿ ಮೀನು,	ಕಂಡ್ಯೆ, ಕನಕ	ಉಗ್ರ ಮಾಂಸಹಾರಿಯಾಗಿದ್ದು

	ದೈತ್ಯ ಕಡಲು ಪೈಕ್	ಓಬನ್ ಟಾಲ್	ಈಜಿನ ವೇಗ ಹೆಚ್ಚು ಇದರ ಮಾಂಸ ನವಿರಾಗಿದ್ದು ತಿನ್ನಲು ಯೋಗ್ಯ.
ಕುಟುಂಬ: ನಾಂಡಿಡೆ (ಮಣ್ಣು ಮೀಟುಗ)			
೧೨೯) ಪ್ರಿಸ್ಟೋಲೆಪಿಸ್	ಬಾಚಣಿಗೆ ಮೀನು ಮಲಾಬಾರಿಕ ಚಿಕ್ಕಟ್ಟಿಗೆ ಮೀನು		ಇತರೆ ಮೀನುಗಳನ್ನು ತಿನ್ನುತ್ತದೆ. ಜೀವನದ ಆಸೆ ಹೆಚ್ಚು
೧೩೦) ಬಾಡಿಸ್ ಬಾಡಿಸ್			
೧೩೧) ನಂದುಸ್ ನಂದುಸ್			
ಕುಟುಂಬ: ಸಿಕಿಲಿಡೆ			
೧೩೨) ಟಿಲಾಪಿಯ ಮೊಸಾಂಬಿಕೆ	ಟಿಲಾಪಿಯ	ಸರ್ಕಾರಿ ಮೀನು ಟಿಲಾಪಿಯ ಮೀನು	ಹೇರಳ ಮೊಟ್ಟೆ ಇಡುತ್ತವೆ. ಆದರೆ ಕಾರ್ಪುಗಳನ್ನು ಸಾಕಲಾಗದು,
ಏಕೆಂದರೆ			ಇದು ಕಾರ್ಪಮರಿಗಳನ್ನು ಭಕ್ಷಿಸುತ್ತದೆ.
೧೩೩) ಎಟ್ರೋಪ್ಲಸ್ ಮ್ಯಾಕುಲೇಟಸ್	ಚುಕ್ಕೆ ಎಟ್ರೋಪ್ಲಸ್	ಮಟಕ್	ತಿನ್ನಬಹುದಾದ ಒಳ್ಳೆಯ ಮೀನು ಸಿಹಿ ನೀರಿಗೆ ಬಹು ಸುಲಭವಾಗಿ ಹೊಂದಿ ಕೊಳ್ಳುತ್ತದೆ.
೧೩೪) ಎ. ಸೂರಟೆನ್ಸಿಸ್	ಕಿತ್ತಳೆ ಕಾಮಿಡೀ ಪಟ್ಟೆ ಎಟ್ರೋಪ್ಲಸ್ ಮುತ್ತು ಕಲೆ	ಕಗಲಾಸಿ, ಕಲೆದಿಯ ಕಲ್ಸೆ, ಈರಿ ಮೀನು, ಎಟ್ರೋಪ್ಲಸ್ ಮೀನು	
೧೩೫) ಎ. ಕೆನೆರೆನ್ಸಿಕ್			
ಕುಟುಂಬ: ಟ್ರೈಕಿಯುರಿಡೆ (ಲಾಡಿ ಮೀನು)			
೧೩೬) ಯುಪ್ಲಿರೊಗ್ರಾಮಸ್ ಮ್ಯೂಬಿಕಸ್	ಬೂದುಲಾದ ಮೀನು	ಹಂಬ್ಲೆ	ಆಹಾರದ ದೃಷ್ಟಿಯಿಂದ ಮುಖ್ಯವಲ್ಲ.
೧೩೭)ಟ್ರೈಕೆಯುರಸ್ ಲೆಪ್ಪುರಸೆ	ದೊಡ್ಡತಲೆ ಲಾಡಿಮೀನು		ಉಪ್ಪು ಬೆರೆಸಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ಮೀನು ತಿನಿಸಿಗೆ ಮತ್ತು ಪ್ರೋಟೀನಿಗೆ ಆಧಾರ
ಕುಟುಂಬ: ಸ್ಕಾಂಬ್ರಿಡೆ (ಮ್ಯಾಕರೆಲ್‌ಗಳು ಮತ್ತು ಟ್ಯೂನಗಳು)			
೧೩೮) ಆಕ್ಸಿಸ್ ತಜಾರ್ಡ್	ಫ್ರೀಗೇಟ್ ಟ್ಯೂನ್ ಫ್ರೀಗೇಟ್		ಅಳಿವೆ ಮತ್ತು ಕರಾವಳಿ ನೀರಿನ ತಿನ್ನಬಹುದಾದ ಮೀನು
೧೩೯) ಯೋಪಿಮಸ್ ಆಫೀಸ್‌ನ	ಮೂಡಣದ ಪುಟ್ಟಮನ್ನಿ ಮ್ಯಾಕರೆಲ್ ಟ್ಯುನ, ಪುಟ್ಟಟ್ಯೂನ್	ಗಾದಾರ್, ಕೀಡಲ್, ಕಲ್ಲಡೆ, ಸುರಿ ಮೀನು.	
೧೪೦) ರಾಸ್ಟ್ರೆಲ್ಲಿಗರ್ ಕನಗುರ್ಟ	ಭಾರತದ ಮ್ಯಾಕರೆಲ್	ತೆಲ ಬ್ಯಾಂಗಡೆ	ಅಕ್ಟೋಬರ್ ಡಿಸೆಂಬರ್ ತಿಂಗಳು ಗಳಲ್ಲಿ, ಹೇರಳವಾಗಿ ದೊರಕುವ ತೇಲು ಮತ್ತು ಒಟ್ಟಲು ಆಹಾರ ಮೀನು
೧೪೧) ಸ್ಕೊಂಬೆರೋಮಾರಸ್ ಕಾಮ್ಮರ್ಸನ್	ಸೀರ್‌ಮೀನು ಕಿರಿಪಟ್ಟಿ	ಬವನ್, ಅರ್ಕಲೈ ಬಾರಿ ಮೀನು	ದೊಡ್ಡಗಾತ್ರದ (೪೫ಕೆಜಿ.) ಮತ್ತು ರುಚಿಯಾದ ಕಡಲ ಮೀನು.

೧೪೨) ಸ್ಕೊ. ಗುಟ್ಟಾಟಸ್ ೧೪೩)ತುನ್ನುಪ್ ಬಾಂಗೋಲ್	ಸೀರ್ ಮೀನು ಉದ್ದ ಬಾಲ ಟ್ಯೂನ, ನೀಲಿರೆಕ್ಕೆ ಟ್ಯೂನ.	ಖಲ್‌ಕುಲ್ ಅಂಕುಲಿಬ್ನಾವರ್ ಬಾರಿಮೀನು ಗಿತಾಲ್	ಮೂಲಂಗಿ ಆಕಾರದ ದೇಹ, ಉದರದ ಮೇಲೆ ತಿಳಿ ಅಡ್ಡ ಗುರುತುಗಳಿವೆ.
ಕುಟುಂಬ: ಇಸ್ಟಿಯೋಪೊರಿಡೆ (ಕೊಕ್ಕು, ಈಟಿ, ಮಾರ್ಲಿನ್ ಮತ್ತು ಹಡಗುಪಟ ಮೀನು) ೧೪೪) ಇಸ್ಟ್ರಿಯೊಪೊರಸ ಪ್ಲಾಟಿಟೈರಸ್	ಫಿಸಿಫಿಕ್‌ನಾವೆ ಮೀನು ಭಾರತದ ನಾವೆ ಮೀನು, ಬಾಳೆನಾವೇ ಮೀನು, ಕತ್ತಿ ಮೀನು	ಹಾಯಿ ಮೀನು	ಕಡಲಾಂತರ ವಲಸೆಗಾಮಿ ಬೃಹದ್‌ಗಾತ್ರದ, ವೇಗ ಈಜಿನ ತಿನ್ನಬಹುದಾದ ಮೀನು. ಇದರ ಲಿವರ್ ಆಯಿಲ್‌ನಲ್ಲಿ ಕೆ. ಅನ್ನಾಂಗ ಸಮೃದ್ಧವಾಗಿದೆ.
ಕುಟುಂಬ: ಸ್ಟ್ರೋಮಿಡೆ (ಪ್ರೋಮ್ ಫ್ರೆಟ್‌ಗಳು) ೧೪೫) ಪಾಂಪಸ್ ಆರ್ಜೆಂಟಿಯಾಸ್	ಬೆಳ್ಳಿ, ಬೂದು ಬಿಳಿ ಪಾಂಫ್ರೆಟ್	ಬಿಳಿಮೀನು ತೊರಿಟ್ರೆಟ್ಟ	ಆಹಾರವಾಗಿ ಸೇವಿಸಬಹುದಾದ ಅತ್ಯುತ್ತಮ ಮೀನು. ತೆಟ್ಟೆ ಮತ್ತು ಆಳ ನೀರುಗಳಲ್ಲಿಯೂ ಕಂಡು ಬರುತ್ತವೆ. ಸ್ಥಳೀಯ ಮಾರುಕಟ್ಟೆ ಯಲ್ಲಿ ದುಬಾರಿ ಬೆಲೆ ಬಾಳುತ್ತದೆ.
ಕುಟುಂಬ: ಗೋಬಿಡೆ ೧೪೬) ಸ್ಟೆನೋಗೊಬಿಯನ್ ಮಲಬಾರಿಕಪ್ ೧೪೭) ಗ್ಲಾಸ್ಸೊಗೋಬಿಯಸ್ ಗಿಯುರಿಸ್	ಮಲಬಾರಗೋಬಿ ಪಟ್ಟೆಕಣ್ಣಿನ ಗೋಬಿ	ಮಾಟ, ಕರಸೆ ಬಂಗಿಸಿದ್ದ ಮೀನು, ಕೊರನ, ಮಲಲೆ, ನೆತ್ತಿ ಕಣ್ಣುಬಂಗಿ ಮೂಲ	ಸೊಂಟದ ಈಜುರೆಕ್ಕೆಗಳು ಕೂಡಿಫಲಕವಾದ ಉದ್ದ ಮೀನು, ಈ ಫಲಕ ಕಲ್ಲು ಬಂಡೆಗಳಿಗೆ ಅಂಟಿ ಕೊಳ್ಳಲು ನೆರವಾಗುತ್ತದೆ.
ಕುಟುಂಬ: ಅನಬಾಂಟಿಡೆ ೧೪೮) ಅನಬಾಸ್ ಟೆಸ್ಟೋಡಿನಿಯಸ್ಸ್	ಹತ್ತುವ ಪರ್ಚ	ಹತ್ತೊ ಮೀನು	ಬಾಲವನ್ನು ಮತ್ತು ಜೋಡಿ ಈಜು ರೆಕ್ಕೆಗಳನ್ನು ಅಕ್ಕಪಕ್ಕಗಳಿಗೆ ಅಲ್ಲಾಡಿಸುವುದರ ಮೂಲಕ

			ಒಣ ನೆಲವನ್ನು ಈ ಮೀನು ದಾಟಬಹುದು. ತನ್ನ ಅನುಷಂಗಿಕ ಶ್ವಾಸಾಂಗಗಳ ಮೂಲಕ ವಾಯುಮಂಡಲದ ಗಾಳಿಯನ್ನು ನುಂಗಬಲ್ಲದು.
ಕುಟುಂಬ: ಬೆಲೋನಿಡೆ ೧೪೯) ಮ್ಯಾಕ್ರೊಪೋಡಸ್ ಕ್ಯುಪಾನಸ್	ಪಾಮಿರನಾರು ಮೀನು ಸಗ್ಗದ ಮೀನು	ಚಂಪರಕ ಟಬುಟ್ಟಿ ಕುಂಬಳ ಮೀನು	ಉದ್ದ ಚತುರಶ್ರವಾದ ತಟ್ಟಿದ ದೇಹ ದೊಡ್ಡ ಕಣ್ಣುಗಳು ಮತ್ತು ಒಂದುಬೆನ್ನಿನ ಈಜುರೆಕ್ಕೆಯಿದೆ.
ಕುಟುಂಬ: ಸ್ಕಾರ್ಪೆನಿಡೆ ೧೫೦) ಟೆರೊಯಿಸ್ ವೊಲಿಟಾನ್ಸ್	ರೆಕ್ಕೆಯಿರುವ ಚೆಂಕಿಮೀನು		ವರ್ಣರಂಜಿತ ಆದರೆ ತಿನ್ನಲಾರದ ಮೀನು
ಗಣ: ಡ್ಯಾಕ್ಟೈಲೊಪ್ಟೆರಿಫಾರ್ಮಿಸಿ **ಕುಟುಂಬ:** ಡ್ಯಾಕ್ಟೈಲೊಪ್ಟೆಂಡೆ (ಹಾರುವ ಗುರ್ನಾರ್ಡಗಳು) ೧೫೧) ಡ್ಯಾಕ್ಟೈಲೊಪ್ಟಿದ ಓರಿಯಂಟಾಲಿಸ್	ಹಾರುವ ಗುರ್ನಾರ್ಡ		ಗಟ್ಟಿಮುಟ್ಟಾದ ಮೂಳೆ ಗಳಿಗಿರುವ ದೇಹ ಮೂಳೆ ಕವಚ ಆವರಿಸಿದ ತಲೆ ತಳದಲ್ಲಿ ಆಹಾರ ಹುಡುಕುವ ಭುಜದ ಈಜುರೆಕ್ಕೆ ಬಳಸಿ ಜಿಗಿಯಬಲ್ಲ ಜಾರಬಲ್ಲ ಮೀನು.
ಕುಟುಂಬ: ಟ್ರೈಕ್ಯಾಂತಿಡೆ (ತ್ರಿಪಾದಿ ಮೀನು) ೧೫೨) ಟ್ರೈಕ್ಯಾಂತಸ್ ಬ್ರಿವಿರೊಸ್ಟ್ರಿಸ್ ೩೦೫)ಟ್ರೈ.ಬಿಯಾಸುಲಿಯೇಟಸ್	ಮೊಟು ಮೂಗಿನ ತ್ರಿಪಾದಿ ಮೀನು ಟೊಳ್ಳು ಮೂತಿಯ ತ್ರಿಪಾದಿ ಮೀನು	ಕುದುರೆ ಮೀನು ಕುದುರೆ ಮೀನು	ಮುಳ್ಳು ಹುರುಪೆಗಳುಳ್ಳ ಚಪ್ಪಟೆಯಾದ ದೇಹವಿದೆ.
ಕುಟುಂಬ: ಆಸ್ಟ್ರೇಸಿಯೊಂಟಿಡೆ (ಪೆಟ್ಟಿಗೆ ಮೀನು, ಆಕಳು ಮೀನು) ೧೫೩) ಲ್ಯಾಕ್ಟೋರಿಯ ಕಾರ್ನುಟ ೧೫೪) ಆಸ್ಟ್ರೇಸಿಯಾನ್ ಲೆಂಟಿಗಿನೋಸ	ಉದ್ದ ಕೊಂಬಿನ ಆಕಳು ಮೀನು ಚೆಬ್ಬು ಪಿಟ್ಟಿಗೆ ಮೀನು	ಕುದ್ರೆ ಮೀನು ತೊಂಡ ಮೀನು	ಆರು ಮೂಲೆಯ ಫಲಕಗಳು ಅಂಚಿನಲ್ಲಿ ಕೂಡಿ ಒಂದು ಗಟ್ಟಿ ಪಟ್ಟಿಯ ದೇಹ. ಮೂಲೆ ಫಲಕಗಳಾವರಿತ ಕ್ಯಾರಪೇಸ್ ದೇಹವನ್ನು ಸುತ್ತುವರಿದಿದೆ. ಇದರ ಮೇಲೆ ಸಣ್ಣಕೆಂಪು ಗುರುತುಗಳಿವೆ.
ಕುಟುಂಬ: ಡಯೋಬಾಂಟಿಡೆ (ಮುಳ್ಳುಹಂದಿ ಮೀನು) ೧೫೫) ಡಯೋಡಾನ್ ಹಿಸ್ಟ್ರಿಕ್ಸ್	ಮಚ್ಚೆ ಮುಳ್ಳು ಹಂದಿ ಮೀನು	ಮುಳ್ಳು ಮೀನು	ದೇಹದ ಮೇಲೆಗಳಿದ್ದು, ಕೆಲವೊಮ್ಮೆ ಇವು ಚಲಿಸ ಬಹುದು. ಇದು ಗೋಳಾಕಾರವಾಗಿ ಊದಬಹುದು.

ಕುಟುಂಬ: ಟೆಟ್ರ ಒಡಾಂಬಿಡೆ (ಗೋಳಮೀನು) ೧೫೬)ಟೆಟ್ರಡಾನ್ ಕುಕ್ಯುಟಿಯ ೧೫೭) ಆರೊಪ್ರಾಸ್ ಲಿಯೋಪಾರ್ಡಸ್	ಕಣ್ಣು ಭರಿತ ಊದು ಮೀನು, ಪಟ್ಟಿ ಚಿರತೆ ಊದು ಮೀನು		ಬೃಹತ್ ಗಾತ್ರದ, ಪ್ರತಿ ದವಡೆ ಯಲ್ಲಿಯೂ ಎರಡು ದೊಡ್ಡ ಫಲಕಗಳಿರುವ ಮೀನುಗಳು
ಗಣ: ಬೆಟ್ರಕೊಡಿಫಾರ್ಮಿಸ್ **ಕುಟುಂಬ: ಬೆಟ್ರಕಾಯಿಡೆ** (ಕಪ್ಪೆ ಮೀನು) ೧೫೮) ಬೆಟ್ರಕಸ ಗ್ರುನ್ನಿಯನ್ಸ್	ಕಪ್ಪೆ ಮೀನು		ಅಗಲವಾದ ಚಪ್ಪಟೆ ತಲೆ, ಉದ್ದವಾದ ಮತ್ತು ದಪ್ಪ ದೇಹ.
ಗಣ: ಲೋಫಿಫಾರ್ಮಿಸ್ **ಕುಟುಂಬ: ಲೋಫಿಡೆ** (ಸನ್ಯಾಸಿ ಮೀನು) ೧೫೯) ಲೋಪಿಯಾಡಿಸ್ ಲುಗುಬ್ರಿಸ್	ಸನ್ಯಾಸಿ ಮೀನು		ತಟ್ಟಿದ ತಲೆ ಮತ್ತು ದೊಡ್ಡ ಬಾಯಿ ಉಳ್ಳ ದೊಡ್ಡಮೀನು. ಕಣಭರಿತ ಸಡಿಲ ಚರ್ಮವಿದೆ.
ಕುಟುಂಬ: ಆಂಟೆನ್ನೇರಿಡೆ (ಗಾಳದ ಮೀನು) ೧೬೦) ಆಂಟನ್ನೇರಿಯಸ್ ಕಮ್ಮನ್‌ಸೋನಿ	ಕಪ್ಪುಗಾಳ ಮೀನು		ವಿಕಾರದ ದೇಹ

ಉಭಯವಾಸಿಗಳ ವರ್ಗೀಕರಣ ಕೋಷ್ಟಕ

ವರ್ಗೀಕರಣ ಮತ್ತು ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
ಗಣ: ಅನೂರ ೧. ಕುಟುಂಬ: ಬ್ಯೂಪೊನಿಡೆ (ನೆಲಗಪ್ಪೆ ಜಾತಿಗಳು) *ಅನ್‌ಸೋನಿಯ ಓಗ್ನೇಟ *ಬ್ಯೂಪೊ ಬ್ರಿವಿರೋಸ್ಟ್ರಿಸ್ *ಬ್ಯೂ ಫರ್‌ಗುಸೋನಿ *ಹೋಲೋಲಿಯಸ್ *ಮೆಲನೊಸ್ಟಿಕ್ಟಸ್ *ಮೈಕ್ರೂಂಟಿ ಪೆನಮ್ *ಬ್ಯೂ ಪೆರೈಟೀಲಿಸ್ *ಬ್ಯೂ ಸೊಮ್ಯಾಟಿಕಸ್	ನೆಲಗಪ್ಪೆಗಳು	* ಆಸ್ಟ್ರೇಲಿಯಾ ಖಂಡ ವಿನಹ ಉಳಿದೆಲ್ಲಾ ಖಂಡಗಳಲ್ಲಿಯೂ ಕಂಡು ಬರುತ್ತವೆ. * ಗಾತ್ರ ೩ ರಿಂದ ೪ ಸೆಂ. ಉದ್ದ ೨೫–೪೦ ಗ್ರಾಂ ತೂಕ * ಹುಳುಗಳು, ಶಂಭುಕಗಳು, ಕೀಟಗಳು ಮುಖ್ಯ ಆಹಾರ * ಮಳೆಗಾಲದಲ್ಲಿ ಮೊಟ್ಟೆ ಇಡುತ್ತವೆ. * ನೆಲಗಪ್ಪೆಯನ್ನು ಹಿಡಿದಾಗ ಅವು ಮೂತ್ರ ವಿಸರ್ಜಿಸುವ ಮತ್ತು ದುರ್ಗಂಧ ಹೊಲಸು ಸ್ರಾವಿಕೆಯನ್ನು ಮಾಡಿ ತನ್ನನ್ನು ರಕ್ಷಿಸಿಕೊಳ್ಳುವ ಪ್ರವೃತ್ತಿ ತೋರುತ್ತವೆ.
೨. ಕುಟುಂಬ: ಮೈಕ್ರೋಹೈಲಿಡೆ *ಕತೌಲ ಪುಲ್‌ಕ್ರ *ಮೈಕ್ರೋಹೈಲ ಓರ್ನೇಟ *ಮೈ ರೂಬ್ರ *ರಾಮನೆಲ್ಲ ಮೈನರ್ *ರಾ. ಮೇರ್ ಮರೇಟ *ರಾ. ಟ್ರೈಯಾಂಗುಲೇರಿಸ್ *ರಾ. ವೆರಿಗೇಟ *ಯುಪೆರೊಡಾನ್ ಗ್ಲೋಬುಲೋಸಸ್ *ಯು. ಸಿಸ್ಟೊಮ	ಹಾರುವ ಕಪ್ಪೆಗಳು	*ಪಶ್ಚಿಮ ಘಟ್ಟದ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. * ಕೀಟಾಹಾರಿಗಳಾಗಿದ್ದು, ೧ ರಿಂದ ೨ ಸೆಂ.ಮೀ. ಗಾತ್ರವನ್ನು ಹೊಂದಿರುತ್ತವೆ. * ದೇಹದ ಬಣ್ಣ ಹಸಿರಾಗಿದ್ದು, ಆಕಾರದಲ್ಲಿ ಸಣ್ಣವು. * ಬೆರಳುಗಳು ಉದ್ದವಾಗಿದ್ದು, ಬೆರಳುಗಳ ತುದಿಯ ಮೂಳೆಗಳು ಮುಗಳಂತಿದ್ದು ಮರಗಳ ಜೀನಕ್ಕೆ ಹೊಂದಿಕೊಂಡಿವೆ.
೩. ಕುಟುಂಬ: ರಾನಿಡೆ *ಮೈಕ್ರಿಕ್ಯಾಲಸ್ ಸಾಕ್ಸಿಕೋಲ *ನಾನ್ನೊಬಟ್ರಾಕಸ್ ಕೆಂಪೋಲೆಯೆನ್ಸಿಸ್ *ನಿಕ್ಟೈಬಟ್ರಾಕಸ್ ಸಿಲ್ವಟಿಕಸ್ *ರಾನ ಆರಾಂಟಿಕ *ರಾನ ಬೆಡ್ಡೊಮಿ *ರಾನ ಕುರ್ಟಿಪೆಸ್ *ರಾನ ಸೆಯನೊಪ್ಲಿಕ್ಟಿಸ್ *ರಾನ ಹೆಕ್ಸಡ್ಯಾಕ್ಟೈಲ *ರಾನ ಇಂಟ್ ಮೀಡಿಯಸ್ *ರಾನ ಕೇರಲೆನ್ಸಿಸ್ *ರಾನ ಲೈತೀ	ಜಿಗಿ ಕಪ್ಪೆ, ಹಸಿರು ಕಪ್ಪೆ ಗೂಳಿ ಕಪ್ಪೆ	* ಸಿಹಿನೀರು, ಕೆರೆಕಟ್ಟೆ, ಹಳ್ಳಿ–ಕೊಳ್ಳ ಹೊಳೆ, ನದಿಗಳಂತಹ ತೇವಭರಿತ ಪ್ರದೇಶಗಳಲ್ಲಿ ಇವು ವಾಸಿಸುತ್ತವೆ. * ಇವು ೧೦೦ ರಿಂದ ೧೪೦ ಗ್ರಾಂ ತೂಕವಿದ್ದು, ೬–೮ ಸೆಂ.ಮೀ. ಉದ್ದವಿರುತ್ತವೆ. * ಕೀಟಾಹಾರಿ, ಜೀವಂತವಿರುವ ಚಲಿಸುವ ಆಹಾರ ಜೀವಿಗಳನ್ನು ಮಾತ್ರ ಹಿಡಿದು ನುಂಗುತ್ತವೆ. * ಮಳೆಗಾಲದ ಆರಂಭಕಾಲ ಇವುಗಳ ಸಂತಾನೋತ್ಪತ್ತಿ ಸಮಯ.

*ರಾನ ಮಲಬಾರಿಕ *ರಾನ ಟೈಗರಿನ *ಟೊಮಾಪ್ಟರನ್ನ ಬ್ರೆವಿಸೆಪ್ಸ *ಟೊ. ದೊಬ್ಸೊನೀ *ಟೊ. ಲ್ಯೂಕೊರ್ಹಿಂಕಸ್		
೪. ಕುಟುಂಬ: ರ್ಹ್ಯಾಕೊಪೋರಿಡೆ *ಫಿಲಾಟಸ್ ಕೇರಿಯಸ್ *ಫಿ. ಕ್ರೆರ್ನಿ *ಫಿ. ಎಲಿಗನ್ಸ್ *ಫಿ. ಫೆಮೊರಾಲಿಸ್ *ಫಿ. ಹೆಸ್ಸೆನೆನ್ಸಿಸ್ *ಫಿ. ಕೊಟ್ಟಿಗೆಹಾರೆನ್ಸಿಸ್ *ಫಿ. ಲಾಂಗಿಯೊರಸ್ *ಫಿ. ಮೆಲನೆನ್ಸಿಸ್ *ಫಿ. ಮಾಂಟನಸ್ *ಫಿ. ನಾರಿಯೆನ್ಸಿಸ್ *ಫಿ. ಸ್ವಾಮಿಯನಸ್ *ಫಿ. ಟೆಂಪೊರಾಲಿಸ್ *ಪಾಲಿಪೇಡಸ್ ಮ್ಯಾಕುಲೇಟಸ್ *ಪಾ. ಕ್ರೂಡಿಗರ್ *ರ್ಹಾಕೊಪೋರಸ್ ಮಲಬಾರಿಕಸ್	ಮರಗಪ್ಪೆಗಳು	* ಪಶ್ಚಿಮಘಟ್ಟದ ಮರಗಿಡಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. * ೨ ರಿಂದ ೩ ಸೆಂ.ಮೀ. ಉದ್ದವಿದ್ದು, ೧೦–೧೨ ಗ್ರಾಂ ತೂಕವಿರುತ್ತವೆ. * ಇವು ಮುಖ್ಯವಾಗಿ ಕೀಟಾಹಾರಿಗಳು * ಕಾಲು ಬೆರಳುಗಳು ಉದ್ದವಾಗಿದ್ದು ಬೆರಳುಗಳ ನಡುವೆ ಜಾಲಪಾದ ಬೆಳೆದಿದೆ. * ಹಸಿರು ಅಥವಾ ಕಂದು ಬಣ್ಣದ ದೇಹ. * ಇದು ಮರದಿಂದ ಕೆಳಗಿಳಿಯುವಾಗ ಸುಮಾರು ೩೦ ಅಡಿಗಳಿಗೂ ಹೆಚ್ಚು ದೂರವನ್ನು ಕ್ರಮಿಸಬಲ್ಲದು.
ಗಣ: ಅಪೋಡ ಕುಟುಂಬ: ಇಕ್ತಿಯಾಫಿಡೆ *ಇಕ್ತಿಯೋಫಿಸ್ ಗ್ಲೂಟಿನೊಸಸ್ *ಇ. ಯೂನೋಕೋರಸ್ *ಇ. ಬೆಡ್ಡೋಮಿ[೫೦]	ಇತ್ತಲೆ ಮಂಡಲ	* ಇವು ಸಂಪೂರ್ಣ ಬಿಲವಾಸಿಗಳಾಗಿದ್ದು, ಪಶ್ಚಿಮಘಟ್ಟದ ಪ್ರದೇಶದಲ್ಲಿ ಕಂಡು ಬರುವುದು ವಿಶೇಷ. * ೮ ರಿಂದ ೧೨ ಅಂಗುಲ ಉದ್ದ, ಕೆಲವೇ ಗ್ರಾಂಗಳ ತೂಕವಿರುತ್ತದೆ. * ಮಣ್ಣಿನಲ್ಲಿ ವಾಸಿಸುವ ಸಣ್ಣ ಪುಟ್ಟ ಹುಳ ಹುಪ್ಪಡಿಗಳು ಇವುಗಳ ಅಹಾರ. * ತೆಳುವಾದ ಉದ್ದನೆಯ ಹುಳುವಿನಂತ ದೇಹ.

ಸರಿಸೃಪಗಳ ವರ್ಗೀಕರಣ ಕೋಷ್ಟಕ

ವರ್ಗೀಕರಣ ಮತ್ತು ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
ಗಣ: ಕ್ರೊಕೊಡೀಲಿಯ ಕುಟುಂಬ: ಕ್ರೊಕೊಡೀಲಿಡೆ *ಕ್ರೊಕೊಡೈಲಸ್ ಪಾಲುಸ್ಟ್ರಿಸ್	ಮಗ್ಗರ್, ಜೌಗು ಮೊಸಳೆ, ಗರಿಯಾಲ ಮೊಸಳೆ, ಕೈಮನ್ ಮೊಸಳೆ, ಆಲಿಗೇಟರ್ ಮೊಸಳೆ[೫೩]	* ನದಿ, ಕೆರೆ, ಇತರೆ ನೀರಿನ ಜಲಾಶಯಗಳು ಇದರ ವಾಸಸ್ಥಾನ. * ನಾಲ್ಕು ಮೀಟ್ ಉದ್ದ, ೧.೬ಮೀ ದಪ್ಪ ಮತ್ತು ಸುತ್ತಳತೆಯಿದ್ದು ಸುಮಾರು ೨೦೦ ಕೆ.ಜಿ. ತೂಕವಿರುತ್ತದೆ. * ಎಲ್ಲಾ ಜಲಚರಿ ಪ್ರಾಣಿಗಳನ್ನು ಬೇಟೆಯಾಡುತ್ತವೆ. ಹೆಚ್ಚಾಗಿ ಮತ್ಸ್ಯಾಹಾರಿ. * ಜನವರಿಯಿಂದ ಮಾರ್ಚನವರೆಗೆ ಸಂಭೋಗ ನಡೆಯುತ್ತದೆ. * ಒಂದು ಸಾರಿಗೆ ೩–೪೦ ಮೊಟ್ಟೆಗಳನ್ನು ಇಡುತ್ತದೆ. * ೬೦ ದಿನಗಳ ಕಾವಿನ ನಂತರ ಮರಿಗಳು ಹೊರಬರುತ್ತವೆ.
ಗಣ: ಲ್ಯಾಸ್ಕರ್‌ಟೀಲಿಯ ಕುಟುಂಬ: ಅಗಾಮಿಡೀ *ಸೆಮ್ಮೊಫಿಲಸ್ ಡಾರ್ಸ್ಸಾಲಿಸ್	ಕಲ್ಲು ಹಲ್ಲಿ	* ಪ್ರಧಾನವಾಗಿ ಕಲ್ಲು ಬಂಡೆಗಳಲ್ಲಿ ವಾಸ. * ೧೫–೨೫ ಸೆಂ.ಮೀ. ಉದ್ದವಿದ್ದು, ಇದರಲ್ಲಿ ಬಾಲವೇ ಅರ್ಧಕ್ಕಿಂತ ಹೆಚ್ಚು ಉದ್ದ ಇರುತ್ತದೆ. ಇದು ಕೀಟಾಹಾರಿ.
ಕುಟುಂಬ: ವೈರಾನಿಡೆ *ವೆರಾನಸ್ ಬೆಂಗಾಲೆನ್ಸಿಸ್	ಉಡ	* ಬೆಟ್ಟಗುಡ್ಡ, ಬಯಲು ಸೀಮೆಗಳಲ್ಲಿ ವಾಸ. * ಇದು ಮಾಂಸಾಹಾರಿಯಾಗಿದ್ದು, ಕೀಟ, ಜೇಡ, ಚೇಳು ಇತ್ಯಾದಿ ಇದರ ಆಹಾರ * ಇದು ಬೇಸಿಗೆ ಕಾಲದಲ್ಲಿ ಮೊಟ್ಟೆಯಿಡುತ್ತದೆ. * ಇದರ ಚರ್ಮ, ಮಾಂಸ, ಮೊಟ್ಟೆಗಳಿಗೆ ಅಪಾರ ಬೇಡಿಕೆಯಿದೆ. ಇದರ ಕೊಬ್ಬಿಗೆ ಔಷದ ಗುಣವಿದೆಯೆಂದು ನಂಬುತ್ತಾರೆ.
ಕುಟುಂಬ: ಕೆಮಿಲಿಯಾನಿಡೆ *ಕೆಮಿಲಿಯಾನ್ ಜಿಲಾನಿಕಸ್	ಊಸರವಳ್ಳಿ/ ಗೋಸುಂಬಿ	* ಕಾಡಿನ ಮರಗಿಡಗಳು, ಬೇಲಿ ಪೊಟರುಗಳಲ್ಲಿ ವಾಸ ಮಾಡುತ್ತವೆ. * ಸುಮಾರು ೩೭.೫ ಸೆಂ.ಮಿ. ಉದ್ದ * ಹೆಚ್ಚಾಗಿ ಕೀಟಾಹಾರಿಗಳು * ದೇಹ ಚಪ್ಪಟೆಯಾಗಿದ್ದು ಬಣ್ಣವನ್ನು ಬದಲಿಸುವ ಗುಣ ಹೊಂದಿದೆ.
ಕುಟುಂಬ: ಗೆಕ್ಕೋನಿಡೆ *ಡೆಮಿಡ್ಯಾಕ್ಟೆಲಸ್ ಬ್ರೂಕಿ *ಹೆ. ಫ್ರೆಟನಸ್ *ಹೆ. ಟ್ರೈಡ್ರುಸ್ *ಹೆ. ಸಿಮೊಪ್ಸಿಸ್	ಗೌಳಿ, ಹಲ್ಲಿ ಹಲ್ಲಿ	* ಮನುಷ್ಯ ವಸತಿಗಳ ಪಕ್ಕದಲ್ಲಿ ವಾಸ. * ಸುಮಾರು ೧೦ ಸೆಂ.ಮೀ. ಉದ್ದ * ಎಪ್ರಿಲ್–ಆಗಸ್ಟ್ ತಿಂಗಳಲ್ಲಿ ಸಂತಾನೋತ್ಪತ್ತಿ. * ಬಂಡೆಗಳ ನಡುವೆ ವಾಸ * ಗುಡ್ಡಗಳಲ್ಲಿ ವಾಸ
ಕುಟುಂಬ: ಅಗಾಟಮಿಡೆ *ಕೆಲೊಟಿಸ್ ವರ್ಸಿಕೊಲರ್	ಓತಿ/ಓತಿಕೇತ ಹೆಂಟೆಗೊದ್ದ	* ಭಾರತದಾತ್ಯಂತ ಬೇಲಿ, ಪೊದರುಗಳಲ್ಲಿ ಕಂಡುಬರುತ್ತದೆ.

		* ಒಂದು ಗಂಡಿನ ಗರಿಷ್ಠ ಉದ್ದ ೪೯ ಸೆಂ.ಮೀ. ಹೆಣ್ಣು ಓತಿಗಳು ಗಂಡಿಗಿಂತ ಚಿಕ್ಕವು * ಇದು ಕೀಟಾಹಾರಿ * ಕಂದು ಅಥವಾ ಮರಳು ಕಂದು ಬಣ್ಣ. ಕೆಲವೊಮ್ಮೆ ಅಲ್ಲಲ್ಲಿ ಚುಕ್ಕೆ ಮತ್ತು ಪಟ್ಟಿಗಳಿರುತ್ತವೆ.
*ಕೆಲೊಟಸ್ ಕೆಲೊಟಸ್	ದಕ್ಷಿಣದ ಹಸಿರು ಓತಿ	* ಇದು ಸಹ ಶಾಖಾವಾಸಿ
* ಕೆಲೊಟಸ್ ಜಿರ್ದೋನಿ		* ಇದರ ಬೆನ್ನು ಭಾಗ ಹಸಿರು * ಎತ್ತರವಾದ ಮರಗಳಲ್ಲಿ ವಾಸ
ಕುಟುಂಬ: ಡ್ರಾಕೋನಿಡೆ *ಡ್ರಾಕೋ ಡುಸ್ಸುಮಿಯಂ	ಹಾರುವ ಹಲ್ಲಿ	* ಪಶ್ಚಿಮಘಟ್ಟದ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಕಂಡು ಬರುತ್ತದೆ. * ಅಡಿಕೆ, ತೆಂಗು ತೋಟಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. * ೨೩ ಸೆಂ.ಮೀ ಉದ್ದ, ಗಂಡು ಹಾರುವ ಹಲ್ಲಿ ಹೆಣ್ಣಿಗಿಂತ ಚಿಕ್ಕದು. * ಇರುವೆ ಮತ್ತು ಗೊದ್ದಗಳು, ವಿಶೇಷವಾಗಿ ಕೆಂಪಿರುವೆ ಇದರ ಆಹಾರ
ಕುಟುಂಬ: ಕೆಮಿಲಿಯಾನಿಡೆ *ಕೆಮಿಲಿಯಾನ್ ಜಿಲಾನಿಕಸ	ಊಸರವಳ್ಳಿ / ಗೋಸುಂಬೆ	* ಕಾಡಿನ ಮರಗಿಡಗಳು, ಬೇಲಿ ಪೊದರುಗಳಲ್ಲಿ ವಾಸ ಮಾಡುತ್ತವೆ. * ಸುಮಾರು ೩೭.೫ ಸೆಂ.ಮೀ. ಉದ್ದ * ಹೆಚ್ಚಾಗಿ ಕೀಟಾಹಾರಿಗಳು * ದೇಹ ಚಪ್ಪಟೆಯಾಗಿದ್ದು, ಬಣ್ಣವನ್ನು ಬದಲಿಸುವ ಗುಣ ಹೊಂದಿದೆ.
ಗಣ: ಕಿಲೋನಿಯ (ಆಮೆಗಳು) ಕುಟುಂಬ: ದರ್ಮೊಕೈಲಿಡೆ *ಡರ್ಮೊಕೆಲಿಸ್ ಕೋರಿಯೇಸಿಯ	ಈಶ್ವರ ಆಮೆ / ತೊಗಲುಬೆನ್ನು ಕಡಲಾಮೆ	* ಪಶ್ಚಿಮ ಕರಾವಳಿಯ ಕಡಲತೀರದಲ್ಲಿ ಕಂಡುಬರುತ್ತದೆ. * ೨೫೬.೫ ಸೆಂ.ಮೀ. ಉದ್ದ, ೯೧೬ ಕೆ.ಜಿ. ತೂಗೂವ ಒಂದು ಆಮೆ ದೊರಕಿದ ದಾಖಲೆಯಿದೆ. * ಏಡಿ, ಮೀನು ಮತ್ತು ಕಡಲ ಚುರುಕಿಗಳನ್ನು ಆಹಾರವಾಗಿ ತಿನ್ನುತ್ತದೆ. * ಒಮ್ಮೆಗೆ ೯೦–೧೩೦ ಮೊಟ್ಟೆಗಳನ್ನಿಡುತ್ತವೆ.
ಕುಟುಂಬ: ಕಿಲೋನಿಡೆ *ಕಿಲೋನಿಯ ಮೈದಾಸ್	ಹಸಿರು ಆಮೆ	* ಕರಾವಳಿ ಉದ್ದಕ್ಕೂ ಕಂಡುಬರುತ್ತವೆ. * ಪ್ರಬುದ್ಧ ಆಮೆಯ ಚಿಪಪ್ಪು ೩.೩ ಅಡಿ ಉದ್ದ ಬೆಳೆಯುತ್ತದೆ. ಸುಮಾರು ೧೫೫ಕೆ.ಜಿ. ಇರುತ್ತದೆ.

* ಲೆಪಿಡೋಕೇಲಿಸ್ ಆಲಿವೇಸಿಯ	ಆಲಿವ್ ರಿಡ್ಲಿ ಕಡಲಾಮೆ	* ಇದು ಸಸ್ಯಾಹಾರಿ * ಇದು ವಿಷ್ಣುವಿನ ಅವತಾರವೆಂದು ಕೆಲವು ಹಿಂದುಗಳು ಪೂಜಿಸುತ್ತಾರೆ. ಮತ್ತು ಇದರ ಮಾಂಸ ತಿನ್ನುವುದಿಲ್ಲ.
ಕುಟುಂಬ: ಟೆಸ್ಟುಡಿನಿಡೆ		
*ಜಿಯೊಕಿಲೋನ್ ಎಲಿಗನ್ಸ್	ಕಾಡು ಆಮೆ / ಭಾರತದ ತಾರಾ ಆಮೆ	* ಒಣನೆಲ, ಹುಲ್ಲು ಕುರುಚಲು ಗಿಡಗಳು ಬೆಳೆಯುವ ಶುಷ್ಕ ಪರಿಸರದಲ್ಲಿ ವಾಸ. * ಇದು ೨೭ ಸೆಂ.ಮೀ.ಉದ್ದ ಇರುತ್ತದೆ. ಹೆಣ್ಣು ಆಮೆಗಳು ಗಂಡು ಆಮೆಗಳಿಗಿಂತ ದೊಡ್ಡವು. * ಸಸ್ಯಾಹಾರ ಮತ್ತು ಮಾಂಸಾಹಾರ ಗಳೆರಡನ್ನೂ ತಿನ್ನುವ ಸರ್ವ ಭಕ್ಷಕ. * ಈ ಆಮೆಯ ಚಿಪ್ಪು ಕಪ್ಪು ಮತ್ತು ಗುಮ್ಮಟಾಕಾರದವಾಗಿದೆ. * ಒಮ್ಮೆ ೩–೬ ಮೊಟ್ಟೆಗಳನ್ನಿಡುತ್ತವೆ.
*ಇಂಡೊಟೆಸ್ಟುಡೋ ಫಾರಸ್ಟೆನಿ	ಬೆಟ್ಟ ಆಮೆ, ಕಾಡು ಆಮೆ, ಗುಡ್ಡದ ಆಮೆ, ಕಲ್ಲಾಮೆ	* ನಿತ್ಯ ಹರಿದ್ವರ್ಣ ಮತ್ತು ಅರೆನಿತ್ಯ ಹರಿದ್ವರ್ಣದ ಕಾಡುಗಳು ಇಲ್ಲಿ ಹರಿಯುವ ನದಿಗಳ ದಂಡೆಯ ಉದ್ದಕ್ಕೂ ಕಲ್ಲು ಪೊಟರೆಗಳಲ್ಲಿ ಕಾಡುಗಳಲ್ಲಿ ವಾಸಿಸುತ್ತವೆ. * ೩೩.೧ ಸೆಂ.ಮೀ. ಉದ್ದ ಬೆಳೆಯುತ್ತದೆ. * ಸಸ್ಯಾಹಾರಿ ಮತ್ತು ತಗ್ಗಿದ ಆಮೆ ಚಿಪ್ಪು * ಒಂದು ಸಾರಿಗೆ ೧–೩ ಮೊಟ್ಟೆಗಳನ್ನು ಇಡುತ್ತದೆ.
ಕುಟುಂಬ: ಟ್ರಿಯೋನಿಕ್ಕಿಡೆ		
*ಟ್ರಿಯೊನಿಕ್ಸ್ ಲೈತಿ	ಮೃದುಚಿಪ್ಪು ಆಮೆ ಅಡಕೆ ಆಮೆಬಾಗ್ಲ ಆಮೆ	* ನದಿ, ಜಲಾಶಯ, ಕೆರೆಕೊಳಗಳಲ್ಲಿ ವಾಸ * ಇದರ ಚಿಪ್ಪು ೬೩.೫ ಸೆಂ.ಮೀ. ಉದ್ದ * ಮೀನು, ಶಂಖದ ಹುಳು, ಏಡಿ, ಕಪ್ಪೆಚಿಪ್ಪಿನ ಹುಳು ಮುಂತಾದ ಇದರ ಆಹಾರ * ಇದರ ಚಿಪ್ಪು ಚಪ್ಪಟೆ ಮತ್ತು ಅಂಡಾಕಾರವಾಗಿದ್ದು, ಮೃದುವಾಗಿದೆ. * ಒಂದು ಸಾರಿಗೆ ೧೦ ಮೊಟ್ಟೆಗಳಿಡುತ್ತವೆ.
*ಲಿಸ್ಸಿಮಿಸ್ ಪಂಕ್ಟೇಟ	ಬಿಳಿ ಆಮೆ ಬೋಳು ಆಮೆ	* ಪಶ್ಚಿಮ ಘಟ್ಟದ ನದಿಗಳ ಜಲಾನಯನ ಪ್ರದೇಶ, ಕೆರೆಕೊಳಗಳಲ್ಲಿ ಕಂಡುಬರುತ್ತವೆ. * ಇದರ ಚಿಪ್ಪು ೨೭.೫ ಸೆಂ.ಮೀ. ಉದ್ದ ೪.೫ ಕೆ.ಜಿ. ತೂಕ * ಕಪ್ಪೆ, ಮೀನು, ಕೀಟ ಮುಂತಾದವು ಇದರ ಆಹಾರ * ಇದನ್ನು ಧರ್ಮಕಾರ್ಯಕ್ಕೆ ಬಳಸುತ್ತಾರೆ. ಮತ್ತು ಇದರ ಮಾಂಸಕ್ಕೆ ಔಷಧ ಗುಣವಿದೆ.
ಕುಟುಂಬ: ಬಟಾಗುರಿಡೆ		
*ಜಿಯಮಿಡ ಸೆಲ್ವ್ಯಾಟಿಕ	ಕೊಚ್ಚಿನ್ ಕಾಡು	* ಹೆಚ್ಚು ತೇವವಿಲ್ಲದ ಕಾಡುಗಳಲ್ಲಿ ಕಂಡುಬರುತ್ತವೆ.

	ಬೆತ್ತ ಆಮೆ, ಬಂಡೆ ಆಮೆ, ಬೆಟ್ಟದ ಆಮೆ	ಸಂಪೂರ್ಣ ನೆಲವಾಸಿ * ೧೩ ಸೆಂ. ಮೀ. ಉದ್ದ ಬೆಳೆಯುತ್ತವೆ. * ಶಂಖದಹುಳು, ಕೀಟ, ಎಲೆ, ಮುಂತಾದವು ಇದರ ಆಹಾರ * ಹೆಣ್ಣು ಆಮೆ ಗಂಡಿಗಿಂತ ದೊಡ್ಡದು.
*ಮೆಲನೊಕೀಲಿಸ್ ಟ್ರೇಜುಗ	ಕೆರೆ ಆಮೆ / ನೀರು ಆಮೆ	* ಹರಿಯುವ ನದಿ ಅಥವಾ ನಿಂತ ನೀರಿನಲ್ಲಿ ಕಂಡುಬರುತ್ತವೆ. * ೩೮.೩ ಸೆಂ.ಮೀ ಉದ್ದ ಬೆಳೆಯುತ್ತದೆ. * ಇದು ಸಾಮಾನ್ಯವಾಗಿ ಸಸ್ಯಹಾರಿಯಾದರೂ ಸರ್ವಭಕ್ತ * ಇದಕ್ಕೆ ಉದ್ದವಾದ ಚಿಪ್ಪು ಇದೆ.
ಗಣ: ಒಫಿಡಿಯ ಕುಟುಂಬ: ಬೊಯಿಡೆ *ಪೈತಾನ್ ಮೆಲೂರಸ್	ಹೆಬ್ಬಾವು	* ಸಾಮಾನ್ಯವಾಗಿ ಕಲ್ಲು ಬಂಡಗಳ ನಡುವೆ ಕಾಡಿನ ಪೊದೆ, ನೀರಿನ ಆಸರೆಗಳಲ್ಲಿ ಕಂಡುಬರುತ್ತವೆ. * ಸುಮಾರು ೩ ರಿಂದ ೭ ಮೀ ಉದ್ದ. ೧೧೨ ಕೆ.ಜಿ. ತೂಕ * ಪಕ್ಷಿಗಳು, ಸರಿಸೃಪ, ಸಸ್ತನಿಗಳು ಇದರ ಆಹಾರ * ೨೨ ವರ್ಷಗಳವರೆಗೆ ಬದುಕುತ್ತವೆ.
ಕುಟುಂಬ: ಲೈಕೊಡಾಂಟಿಡೆ *ಲೈಕೊಡಾನ್ ಆಲಿಕಸ್	ಸಾಮಾನ್ಯ ತೋಳ ಹಾವು	* ಕಾಡು ಮತ್ತು ಬಯಲು ಸೀಮೆಗಳಲ್ಲಿ ಕಂಡುಬರುತ್ತವೆ. * ೨ ರಿಂದ ೩ ಅಡಿ ಉದ್ದ ಗೌಳಿ, ಹಲ್ಲಿ ಹಾವುರಾಣಿ ಇದರ ಆಹಾರ.
ಕುಟುಂಬ: ನೇಟ್ರಿಸಿಡೆ *ಮ್ಯಾಕ್ರೋಪಿಸ್ತೋಡಾನ್ ಪ್ಲಂಬಿಕೊಲಾರ್	ಹಸಿರು ನಾಗ	* ವಾಯ್ಯುವ ಭಾರತ ಮತ್ತು ಗಂಗಾನದಿಯ ಪರಿಸರವನ್ನು ಬಿಟ್ಟು ಭಾರತದಲ್ಲಿ ಎಲ್ಲೆಡೆ ದೊರಕುತ್ತದೆ. * ೫೫ ರಿಂದ ೬೦ ಸೆಂ.ಮೀ. ಉದ್ದ * ಹಲ್ಲಿ, ನೆಲಗಪ್ಪೆಗಳು ಇದರ ಆಹಾರ * ಕತ್ತನ್ನು ಹೆಡೆಯಂತೆ ಹಿಗ್ಗಿಸುವುದರಿಂದ ಇದಕ್ಕೆ ಹಸಿರುನಾಗ ಎಂಬ ಹೆಸರು ಬಂದಿದೆ.
*ಅಟ್ರೆಟಿಯಮ್ ಸ್ಕೈಸ್ಟೋಸಮ್	ಆಲಿವ್ ಅಡಿಗಟ್ಟು ನೀರು ಹಾವು	* ನೀರಿನ ಬಳಿ ಇದರ ವಾಸ
*ಕ್ಸಿನೊಕ್ರೋಪಿಸ್ ಪಿಸ್ಕೇಟರ್	ಚೌಕುಳಿ ಅಡಿಗಟ್ಟು ನೀರು ಹಾವು	* ಹೊಳೆ–ಹಳ್ಳ, ಕೆರೆಕಟ್ಟೆಗಳಲ್ಲಿ ವಾಸ * ೧.೭೫ ರಿಂದ ೨ ಮೀ. ಉದ್ದ * ಗೊದಮೊಟ್ಟೆ, ಮೀನು ಕಪ್ಪೆಗಳು ಇದರ ಆಹಾರ

*ಆಂಫಿಸ್ಮ ಸ್ಟೊಲೇಟ *ಇಲಾಫ್ಜೆ ರೇಡಿಯೇಟ	ಪಟ್ಟಿ ನೌತಲ ಹಾವು ಕಾಪರ ಹೆಡ್	–"– –"–
ಕುಟುಂಬ: ಕೊಲುಬ್ರಿಡೆ *ಇಲಾಫೆ ಹೆಲೆನ	 ಟ್ರಿಂಕೆಟ್ ಹಾವು	 * ಪಶ್ಚಿಮಘಟ್ಟ ಮತ್ತು ಬಯಲು ಪ್ರದೇಶಗಳಲ್ಲಿ ಕಂಡುಬರುತ್ತವೆ. * ೪ ರಿಂದ ೫ ಅಡಿ ಉದ್ದ * ಹಲ್ಲಿ, ಹಾವುರಾಶಿ, ಹಕ್ಕಿ ಮತ್ತು ಹಕ್ಕಿಗಳ ಮೊಟ್ಟೆಗಳು ಇದರ ಆಹಾರ
*ಟಿಯಾಸ್ ಮ್ಯೂಕೋಸಸ್	ಸಾಮಾನ್ಯ ಮೂಷಕ ಭಕ್ಷಕ ಹಾವು	* ಬಯಲು ಸೀಮೆಯ ಹಾವು * ೫ ರಿಂದ ೬ ಅಡಿ ಉದ್ದ * ಕಪ್ಪೆ, ಹಲ್ಲಿ, ಹಾವು ಇದರ ಆಹಾರ * ತಿಳಿಹಳದಿ ಬಣ್ಣದ ಹಾವು
*ಅರ್ಜಿರೊಜಿನ ಫ್ಯಾಸಿಯೊಲೇಟಸ್	ಪಟ್ಟಿ ಹಾವು	
*ಡೆಂಡ್ರಲೆಫಿನ್ ಟ್ರಸ್ಟಿನ್	ಕಂಚು ಬೆನ್ನು ಮರ ಹಾವು	* ಮುಳ್ಳು ಮರಗಳಲ್ಲಿ ಇದರ ವಾಸ * ೧ಮೀ. ಉದ್ದವಿದ್ದು, ಹಲ್ಲಿ ಕಪ್ಪೆಗಳು ಇದರ ಆಹಾರ * ಇದರ ದೇಹ ಕೆಡಕೆಂಪು ಕಂದು ಬಣ್ಣ
*ಕ್ರೈಸೊಪಿಲಿಯ ಆರ್ನೇಟ	ಹಾರುವ ಹಾವು	* ದಟ್ಟ ಕಾಡುಗಳ ದೊಡ್ಡ ಮರಗಳಲ್ಲಿ ಹೆಚ್ಚು ವಾಸ * ಸುಮಾರು ೧ ರಿಂದ ೧.೭೫ ಮೀ. ಉದ್ದ * ಕಪ್ಪೆ, ಗೌಳಿ, ಹಲ್ಲಿಗಳು ಇದರ ಆಹಾರ ತೆಳುದೇಹ, ವರ್ಣರಂಜಿತ ಹಾವು
*ಕ್ರೈಸೊಫಿಲಿಯ ಒರ್ನೇಟಸ್	ಹಾರುವ ಹಾವು ಬಂಗಾರ ಮರಹಾವು(ಮಿಡಿ ನಾಗರ)	* ಗುಡ್ಡಗಾಡುಗಳಲ್ಲಿ ಕಂಡುಬರುತ್ತದೆ. * ಸರಾಸರಿ ೧ ರಿಂದ ೧.೭೫ ಮೀ. ಉದ್ದ
*ಅಹೀಟುಲ್ಲ ನಸುಟಸ್	ಸಾಮಾನ್ಯ ಪಚ್ಚೆಬಳ್ಳಿ /ಚಾಟಿ ಹಾವು	* ಗಂಗಾನದಿ ಪ್ರದೇಶ ಬಿಟ್ಟು ಭಾರತದ ಮಿಕ್ಕೆಲ್ಲ ಪ್ರದೇಶಗಳಲ್ಲಿ ಕಂಡುಬರುತ್ತದೆ. * ಸುಮಾರು ೧ ರಿಂದ ೨ ಮೀ. ಉದ್ದ * ಹಲ್ಲಿಗಳು, ಕಪ್ಪೆಗಳು, ಇಲಿಗಳು ಇದರ ಮುಖ್ಯ ಆಹಾರ.
*ಕ್ಸೆನೊಕ್ರೋಪಿಸ್ ಪಿಸ್ಕೇಟರ್		* ತೆಳುವಾದ ದೇಹದಿಂದಾಗಿ ಇದಕ್ಕೆ ಬಿಳಿ/ ಚಾಟಿ ಹಾವುಗಳೆಂದು ಕರೆಯುತ್ತಾರೆ.
ಕುಟುಂಬ: ಹೋಮಲೊಪ್ಸಿಡೆ *ಬಾಯಿಗ ಟ್ರೈಗೊನೇಟ	 ಸಾಮಾನ್ಯ ಮರ್ಜಾಲ ಹಾವು	 * ಬಯಲು ಪ್ರದೇಶ ಹಾವು * ಸರಾಸರಿ ೨ ರಿಂದ ೪ ಅಡಿ ಉದ್ದ * ಹಲ್ಲಿಗಳೂ ಗೌಳಿಗಳು, ಓತಿಗಳು ಇದರ ಮುಖ್ಯ ಆಹಾರ. * ಗಾತ್ರದಲ್ಲಿ ಸಣ್ಣ ಹಾವು, ಹಳದಿ ಕಂದು ಮೈಬಣ್ಣ.

*ಬಂಗಾರಸ್ ಫ್ಯಾಸಿಯೇಟಸ್	ಪಟ್ಟೆಕಲ್ಲು ಹಾವು	-"-
ಕುಟುಂಬ: ಇಲಾಫಿಡೆ *ಬಂಗಾರಸ್ ಸಿರುಳಿಯಸ್	ಕಟ್ಟು ಹಾವು	* ಮೈದಾನ ಪ್ರದೇಶವಾಸಿ * ೧ ರಿಂದ ೨ ಮೀ. ಉದ್ದ * ಇತರೆ ಹಾವುಗಳು, ಹಲ್ಲಿ, ಇಲಿಗಳು, ಹೆಗ್ಗಣ ಮತ್ತು ಕಪ್ಪೆಗಳು ಇದರ ಆಹಾರ * ಇದರ ಮೈಬಣ್ಣ ಕಡುನೀಲು ಅಥವಾ ನೀಲಿಬೂದು * ಇದು ವಿಷಜಂತು
*ಎನ್‌ಹೈಡ್ರಿನ ಸ್ಕೈಸ್ಟೋಸ	ಕೊಕ್ಕೆ ನಾಸಿಕ ಕಡಲ ಹಾವು	* ಕರಾವಳಿ ಪ್ರದೇಶದಲ್ಲಿ ವಾಸ * ಸುಮಾರು ೬೦ ಸೆಂ.ಮೀ. ಉದ್ದ * ಇದು ಸಂಪೂರ್ಣ ಮೀನು ತಿನ್ನುವ ಹಾವು * ಇದರ ಮೈಬಣ್ಣ ಸಂಪೂರ್ಣ ಬೂದು. * ಇದರ ವಿಷ ನಾಗರ ಹಾವಿನ ವಿಷಕ್ಕಿಂತ ೪-೫ ಪಟ್ಟು ಹೆಚ್ಚು ಅಪಾಯಕಾರಿ. * ಇವು ಉಭಯಚರಿಗಳು
*ಕಾಲ್ಲೋಫಿಸ್ ಮೆಲುನುರಸ್	ತೆಳು ಹವಳದ ಹಾವು	* ಕಡಲ ತೀರದ ಕುರುಚುಲು ಕಾಡಿನಲ್ಲಿ ಕಂಡು ಬರುತ್ತದೆ. *ಸರಾಸರಿ ೨೫ ರಿಂದ ೩೫ ಸೆಂ.ಮೀ. ಉದ್ದ * ಹುಳು ಹುಪ್ಪಡಿ, ಮಳೆಹುಳು, ಓತಿ, ಕಪ್ಪೆ ಇದರ ಆಹಾರ.
*ನಾಜ ನಾಜ	ನಾಗರ ಹಾವು	* ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಈ ಹಾವು ಕಂಡು ಬರುತ್ತದೆ. * ಸುಮಾರು ೩ ರಿಂದ ೪ ಅಡಿ ಉದ್ದ * ಇಲಿ, ಕಪ್ಪೆ, ಓತಿ, ಮೀನು, ಪಕ್ಷಿಯ ಮೊಟ್ಟೆಗಳು ಇದರ ಸ್ವಾಭಾವಿಕ ಆಹಾರ * ಪ್ರಸಿದ್ಧವಾದ ಹೆಡೆ ಇರುವುದು * ವಿಷದ ಹಾವು * ಹಿಂದೂಗಳು ನಾಗರಹಾವನ್ನು ದೇವರೆಂದು ಪೂಜಿಸುತ್ತಾರೆ.
*ಒಫಿಯೋಫೇಗಸ್ ಹನ್ನ	ಕಾಳಿಂಗ ಸರ್ಪ/ ರಾಜನಾಗರ ಹಾವು	* ಕರ್ನಾಟಕದ ಪಶ್ಚಿಮ ಘಟ್ಟಗಳ ದಟ್ಟ ಕಾಡುಗಳಿಗೆ ಸೀಮಿತವಾದ ಹಾವು * ಇದು ಸುಮಾರು ೧೦ ರಿಂದ ೧೮ ಅಡಿಗಳಷ್ಟು ಉದ್ದ. ೧೨ ಕೆ.ಜಿ. ತೂಕ. * ಇತರೆ ಹಾವುಗಳು, ಇಲಿ, ಹೆಗ್ಗಣ, ಮೊಲ, ಉಡ, ಹಲ್ಲಿ, ಪಕ್ಷಿಗಳು, ಮತ್ತು ಪಕ್ಷಿಗಳ ಮೊಟ್ಟೆಗಳು ಇದರ ಆಹಾರ * ಹಾವು ವಾಸಿಸುವ ಪರಿಸರ ಸನ್ನಿವೇಶ-ಗಳಿಗನುಗುಣವಾಗಿ ಅದರ ದೇಹದ ಬಣ್ಣ

		ಹಸಿರು, ಕಂದು, ಅರಿಶಿಣ,ಕಪ್ಪು ಮುಂತಾಗಿ ಇರುತ್ತದೆ. * ವಿಷದ ಹಾವುಗಳಲ್ಲಿಯೇ ಅತ್ಯಂತ ವಿಷದ ಹಾವು ಇದು.
ಕುಟುಂಬ: ವೈಪರಿಡೀ *ವೈಪೆರ ರಸ್ಸೆಲ್ಲಿ	ಮಂಡಲದ ಹಾವು	* ಬಯಲು ಸೀಮೆ ಮತ್ತು ಗುಡ್ಡಗಾಡುಗಳಲ್ಲಿ ವಾಸ * ಇಲಿ, ಓತಿ, ಹಲ್ಲಿಗಳು ಮತ್ತು ಏಡಿ, ಚೇಳು ಮತ್ತಿತ್ತರ ಸಂದಿಪಧಿಗಳು ಇದರ ಆಹಾರ * ಸರಾಸರಿ ೧.೫ ಮೀ ಉದ್ದ. * ಮೈಬಣ್ಣ ಕಪ್ಪು ಮಚ್ಚೆಗಳಿಂದ ಕೂಡಿದ ಕಂದು ಬಣ್ಣ * ತಲೆ ತ್ರಿಕೋನ ಆಕಾರವಾಗಿದೆ. * ಇದು ವಿಷ ಜಂತು
*ಎಕಿಸ್ ಕ್ಯಾರಿನೇಟಸ್ *ಟ್ರೈಮೆರಿಸುರಸ್ ಗ್ರಾಮಿನಿಯಸ್	ಕಲ್ಲು ಹಾವು ಬಿದಿರು ಕುಳಿ ಮಂಡಲ	

ಸಸ್ತನಿಗಳ ವರ್ಗೀಕರಣ ಕೋಷ್ಟಕ

ವರ್ಗೀಕರಣ ಮತ್ತು ಶಾಸ್ತ್ರೀಯ ನಾಮ	ಸಾಮಾನ್ಯ ಹೆಸರು	ಗಮನಾರ್ಹ ಅಂಶಗಳು
ಗಣ: ಇನ್‌ಸೆಕ್ಟಿವೋರ (ಕೀಟಾಹಾರಿಗಳು)		
೧) ಪ್ಯಾರೆಕಿನಸ್ ನ್ಯುಡಿವೆಂಟ್ರಸ್	ಮುಳ್ಳಿಲಿ	* ದಕ್ಷಿಣ ಭಾರತದ ಬಯಲು ಸೀಮೆಗಳಲ್ಲಿ ವಾಸ * ಇದು ಸರ್ವಭಕ್ಷಕ * ಅಪಾಯ ಎದುರಾದಾಗ ಚೆಂಡಿನಂತೆ ಸುತ್ತಿಕೊಂಡು ರಕ್ಷಿಸಿಕೊಳ್ಳುತ್ತದೆ.
೨) ಕ್ರೊಸಿಡುರ ಸೆರುಲಿಯಾಸ್	ಸಿಂಡು ಮೂಗಿಲಿ (ಚುಂಡಿಲಿ)	–"–
೩) ಸಂಕಸ್ ಮುರಿನಸ್	ಮೂಗಿಲಿ	* ಕೀಟಾಹರಿಯಾಗಿದ್ದು ೧೫ ಸೆಂ.ಮೀ ಉದ್ದವಾಗಿರುತ್ತದೆ.
೪) ಟುಪೇಯ ಇಲ್ಲಿಯೋಟಿ	ಮರ ಮೂಗಿಲಿ, ಮೂಗಿಲ್,ಆನತನ್	* ಮುಖ್ಯವಾಗಿ ಭೂವಾಸಿಗಳು ರಕ್ಷಣೆಗಾಗಿ ಮರಗಳನ್ನು ಏರುತ್ತವೆ. * ಹಣ್ಣುಗಳು ಮತ್ತು ಕೀಟಗಳು ಇದರ ಆಹಾರ.
ಗಣ: ಫಾಲಿಡೋಟ ಕುಟುಂಬ: ಮ್ಯಾನಿಡೀ		
೫) ಮೇನಿಸ್ ಕ್ರ್ಯಾಸಿಕಾಡೇಟ	ಚಿಪ್ಪು ಹಂದಿ	* ಬಯಲುಸೀಮೆ ಮತ್ತು ಕಣಿವೆಗಳ ಕೆಳಗೆ ವಾಸಿಸುತ್ತವೆ. * ಇರುವೆ ಗೆದ್ದಲು ಇವುಗಳ ಆಹಾರ. * ದೇಹದ ಮೇಲ್ಭಾಗ ಚಿಪ್ಪಿನ ಹೊದಿಕೆ ಇದೆ. * ಇದು ನಿಶಾಚಾರಿಯಾಗಿದ್ದು, ಉದ್ರೇಕ ಗೊಂಡಾಗ ಬುಸುಗುಟ್ಟುವಂತಹ ಶಬ್ದ ಮಾಡುತ್ತದೆ.
ಗಣ: ಪ್ರೈಮೇಟ್ಸ್ (ಮನುಷ್ಯನೂ ಸೇರಿದಂತೆ ಕಾಡುಪಾಪ ಮಂಗಗಳು, ವಾನರಗಳು)		
ಕುಟುಂಬ: ಕೈರೋಮ್ಯೈನಿ ೬) ಲೋರಿಸ್ ಟಾರ್ಡಿಗ್ರೇಡಸ್ ೭) ಲೋ.ಬಾ.ಲಿಡಕೇರಿಯಾನ್ಸನ್ ೮) ಲೋ. ಬಾ. ಮಲಬಾರಿಕಸ್	ಕಾಡುಪಾಪ	* ಬಿದಿರು ಮೆಳೆ, ಮರಗಳಲ್ಲಿ ವಾಸ. * ಇದು ಸರ್ವಭಕ್ಷವಾಗಿದ್ದು,ದೇಹ ೨೦–೨೫ ಸೆಂ.ಮೀ. ಉದ್ದ, ೨೮೦–೩೪೦ ಗ್ರಾಂ ತೂಕವಿರುತ್ತದೆ.
ಕುಟುಂಬ: ಸರ್ಕೋಪಿತೆಸಿಡೀ ೯) ಮಕಾಕ ರೇಡಿಯೇಟ	ಕಪಿ ಅಥವಾ ಬಾನೆಟ್ ಮಣಕ	* ಇದು ದಕ್ಷಿಣ ಭಾರತಕ್ಕೆ ಸೀಮಿತವಾದ ಪ್ರಾಣಿ. * ಮರವಾಸಿಗಳು ಮತ್ತು ಗುಂಪು ಜೀವಿಗಳು * ಹಣ್ಣು ಹಂಪಲು, ಎಲೆ, ಕಾಂಡ, ಹುಳು ಹುಪ್ಪಟೆ, ಜೇಡ, ಹಕ್ಕಿಯ ಮೊಟ್ಟೆಗಳು ಇದರ

		ಆಹಾರ.
೧೦) ಪ್ರೆಸ್‌ಬೈಟಸ್ ಎನ್‌ಟೆಲ್ಲಸ್	ಸಾಮಾನ್ಯ ಲಾಂಗೂರ್ ಅಥವಾ ಹನುಮಾನ್ ಕಪಿ/ ಮುಸುವ	* ಮರುಭೂಮಿ ಹೊರತುಪಡಿಸಿ ಮಿಕ್ಕೆಲ್ಲ ಕಡೆ ಇವು ಹೇರಳವಾಗಿವೆ. * ಸಂಪೂರ್ಣ ಸಸ್ಯಹಾರಿಗಳು * ಕುಳಿತ ಭಂಗಿಯಲ್ಲಿ ೨ ರಿಂದ ೨.೫ ಅಡಿ ಎತ್ತರ ೯–೧೬ ಕೆ.ಜಿ. ತೂಕವಿರುತ್ತವೆ.
೧೧) ಮಕಾಕ ಸೈಲಿನಸ್	ಸಿಂಗಳೀಕ/ಸಿಂಹ ಬಾಲದ ಮಂಗ	* ಕರ್ನಾಟಕದ ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಕಂಡುಬರುತ್ತವೆ. * ೬–೮ ಕೆ.ಜಿ. ತೂಕವಿದ್ದು, ಹೆಣ್ಣು ಗಂಡಿಗಿಂತ ಚಿಕ್ಕದು. * ಇವು ಸರ್ವಭಕ್ಷಕ * ಕುತ್ತಿಗೆಯ ಸುತ್ತಲೂ ಒರಟಾದ ಕೂದಲು ಬೆಳೆದಿದ್ದು ಸಿಂಹದ ಆಯಾಲದಂತಿವೆ.
ಗಣ: ರೊಡೆನ್ಸಿಯ ಕುಟುಂಬ: ಸೈಯುರಿಡೀ ೧೨) ರಟುಫ ಇಂಡಿಕಾ	ಶೇಶ ಅಳಿಲು/ ಭಾರತದ ದೈತ್ಯ ಅಳಿಲು	* ದಟ್ಟ ಕಾಡುಗಳ ಮರಗಳಲ್ಲಿ ವಾಸ * ೩೫–೪೦ ಸೆಂ.ಮೀ. ಉದ್ದ * ಸಸ್ಯಾಹಾರಿಗಳು ಕೆಲವೊಮ್ಮೆ ಕೀಟಗಳು ಮತ್ತು ಪಕ್ಷಿಗಳ ಮೊಟ್ಟೆಗಳನ್ನು ತಿನ್ನುತ್ತವೆ.
೧೩) ಪುನಂಬುಲಸ್ ಪಾಮೇರಮ್ ಮತ್ತು ಪು. ಪೆನ್ನಾಂಟಿ	ಮೂರು ಮತ್ತು ಐದು ಪಟ್ಟಿಯ ತಾಳೆ ಅಳಿಲು	* ಭಾರತದ ಎಲ್ಲಾ ಕಡೆ ಮರಗಿಡಗಳಲ್ಲಿ ಕಂಡುಬರುತ್ತವೆ. * ೧೨.೫ – ೧೫ ಸೆಂ.ಮೀ. ಉದ್ದ * ಸಸ್ಯಾಹಾರಿಯಾದರೂ ಕೆಲವೊಮ್ಮೆ ಕೀಟ ಮತ್ತು ಹಕ್ಕಿಯ ಮೊಟ್ಟೆಗಳನ್ನು ತಿನ್ನುತ್ತವೆ. * ಇದಕ್ಕೆ ರಾಮಾಯಣದ ಹಿನ್ನೆಲೆ ಇದೆ
೧೪) ಪೆಟಾರಿಸ್ಟ ಪೆಟಾರಿಸ್ಟ ಫಿಲಿಪೆನ್ನಿಸ್	ದೊಡ್ಡ ಕಂದು ಹಾರುವ ಅಳಿಲುಗಳು	* ಕಾಡುಗಳಲ್ಲಿ ಹೆಚ್ಚಾಗಿ ವಾಸ * ೧–೧.೫ ಅಡಿ ಉದ್ದವಿರುತ್ತದೆ. * ಸರ್ವ ಭಕ್ಷಕ
ಕುಟುಂಬ: ಹಿಸ್ಟ್ರೀಸಿಡೀ ೧೫) ಹಿಸ್ಟ್ರಿಕ್ ಇಂಡಿಕಾ ೧೬) ಹಿ. ಲ್ಯುಕುರ ೧೭) ಹಿ. ಬೆಂಗಾಲೆನ್ಸಿಸ್	ಮುಳ್ಳುಹಂದಿ	* ಹಿಸ್ಟ್ರಿಕ್ಸ್ ಇಂಡಿಕಾ ಆಫ್ರಿಕಾ ಮತ್ತು ಏಷ್ಯಾದಲ್ಲಿ ಕಂಡು ಬರುತ್ತವೆ. * ಹಿಸ್ಟ್ರಿಕ್ಸ್ ಲ್ಯುಕರ್ ಮತ್ತು ಹಿಸ್ಟ್ರಿಕ್ಸ್ ಬೆಂಗಾಲೆನ್ಸಿಗಳು ಭಾರತದಲ್ಲಿ ಕಂಡುಬರುತ್ತವೆ. * ದೇಹದ ಉದ್ದ ೬೦–೮೦ ಸೆಂ.ಮೀ. ೧೨–೨೨ಕೆ.ಜಿ. ತೂಕವಿರುತ್ತವೆ. * ಸಸ್ಯಾಹಾರಿಗಳು ಕೆಲವೊಮ್ಮೆ ಸತ್ತಪ್ರಾಣಿಯನ್ನು ತಿನ್ನುತ್ತವೆ.

		* ದೊಡ್ಡದೇಹ. ಮೋಟುಕಾಲುಗಳು ಇದರೆ ಮೈಮೇಲೆ ಚೂಪಾದ ಮುಳ್ಳುಗಳಿವೆ.
ಗಣ: ಲ್ಯಾಗೊಮಾರ್ಫ (ಮೊಲಗಳು) ಕುಟುಂಬ: ಲೆಪೊರಿಡೀ ೧೮) ಒರಿಕ್ಟೊಲ್ಯಾಗಸ್ ಕ್ಯುನಿಕ್ಯುಲಸ್	ಮೊಲ	* ಇವು ಪ್ರಪಂಚಾದ್ಯಂತ ದೊರಕುತ್ತವೆ. * ಇವು ಸಂಘಜೀವಿ. * ೪೦–೫೦ ಸೆಂ.ಮೀ. ಉದ್ದ ೧.೮ – ೨.೩ಕೆ.ಜಿ. ತೂಕ * ಸಂಪೂರ್ಣ ಸಸ್ಯಾಹಾರಿ * ತುಂಬಾ ಚಟುವಟಿಕೆಯ ಪ್ರಾಣಿ
೧೯) ಲೀಪಸ್ ನೈಗ್ರಿಕೋಲಿಸ್	ಕಂದು ಮೊಲ/ ಕಪ್ಪು ಕತ್ತಿನ ಕಂದು ಮೊಲ	* ಇವು ಪ್ರಪಂಚಾದ್ಯಂತ ದೊರಕುತ್ತವೆ. * ಇವು ಸಂಘಜೀವಿ. * ೪೦–೫೦ ಸೆಂ.ಮೀ.ಉದ್ದ ೧.೮–೨.೩ ಕೆ.ಜಿ. ತೂಕ * ಸಂಪೂರ್ಣ ಸಸ್ಯಾಹಾರಿ * ತುಂಬಾ ಚಟುವಟಿಕೆಯ ಪ್ರಾಣಿ
ಗಣ: ಸಿಟೇಷಿಯ (ಮೀನಿನಂತಿರುವ ಸಸ್ತನಿಗಳು) ಉದಾ: ತಿಮಿಂಗಿಲ ಮತ್ತು ಡಾಲ್ಫಿನ್ ೨೦) ಡಾಲ್ಫಿನಸ್ ಡೆಲ್ಫಿಸ್	ಸಾಮಾನ್ಯ ಡಾಲ್ಫಿನ್	* ಸಮುದ್ದರದ ಕಡಲ ತೀರದಲ್ಲಿ ಕಂಡುಬರುತ್ತವೆ. * ೮ ಅಡಿ ಉದ್ದ ೫ ಕೆ.ಜಿ. ತೂಕ * ಮೀನುಗಳು ಇದರ ಆಹಾರ * ದೇಹವು ತೆಳುವಾಗಿದ್ದು ಉದ್ದನೆಯ ಕೊಕ್ಕು ಬೆಳೆದಿದೆ.
ಗಣ: ಸೈರಿನೀಯ ೨೧) ಡ್ಯುಗಾಂಗ್ ಡ್ಯುಗಾಂಗ್	ಕಡಲಾಕಳು	* ಸಮುದ್ರ ತೀರದಲ್ಲಿ ಆಳವಿಲ್ಲದ ನೀರಿನಲ್ಲಿ ವಿಶೇಷವಾಗಿ ಇರುತ್ತವೆ. * ೧೦ ಅಡಿಗಳಷ್ಟು ಉದ್ದವಾಗಿದ್ದು, ಸಸ್ಯಾಹಾರಿ * ಜಡಸ್ವಭಾವದ ಸಾಧುಪ್ರಾಣಿ
ಗಣ: ಕಾರ್ನಿವೋರ (ಮಾಂಸಾಹಾರಿಗಳು) ಕುಟುಂಬ: ಅರ್ಸಿಡೀ ೨೨) ಮೆಲರ್ಸಸ್ ಆರ್ಸಿನಸ್	ಕರಡಿ	* ಕರ್ನಾಟಕವೂ ಸೇರಿದಂತೆ ಭಾರತದ ಅರಣ್ಯ ಪ್ರದೇಶದ ಬಂಡೆಕಲ್ಲುಗಳ ಗವಿಗಳಲ್ಲಿ ವಾಸ * ೪ ರಿಂದ ೫ ಅಡಿ ಉದ್ದ. ೩ ಅಡಿ ಎತ್ತರ * ಗೆದ್ದಲು ಹುಳು ಮತ್ತು ಜೇನು ಇದರ ಇಷ್ಟವಾದ ಆಹಾರ. ವಿವಿಧ ರೀತಿಯ ಹಣ್ಣು, ದಾನ್ಯಗಳನ್ನು ತಿನ್ನುತ್ತದೆ. ಕೆಲವೊಮ್ಮೆ ಮಾಂಸವನ್ನು, ಕೀಟಗಳನ್ನು ತಿನ್ನುತ್ತದೆ.

ಕುಟುಂಬ: ಕ್ಯಾನಿಡೀ ೨೩) ಕೇನಿಸ್ ಆರಿಯಸ್	ಗುಳ್ಳೆ ನರಿ, ಕುನ್ನಿನರಿ, ಶೃಗಾಲ	* ಬಯಲು ಸೀಮೆಗಳಲ್ಲಿ ಕಂಡುಬರುತ್ತದೆ. * ೨–೨.೫ ಅಡಿ ಉದ್ದ ೧ ಅಡಿ ಎತ್ತರ * ಬೇಟೆಯಾಡಿ ಬಿಟ್ಟ ಮಾಂಸವನ್ನು ತಿನ್ನುತ್ತವೆ. * ಕಪ್ಪುಮಿಶ್ರಿತ ಬಿಳಿ ಮೈಬಣ್ಣ * ನಿಶಾಚಾರಿಗಳು
ಕುಟುಂಬ: ಕೈನಿಡೀ ೨೪) ಕ್ಯೂಅನ್ ಆಲ್ಪಿನಸ್	ಕಾಡುನಾಯಿ, ಬೇಟೆನಾಯಿ, ಸೀಳುನಾಯಿ.	* ದಟ್ಟವಾದ ಕಾಡುಗಳಲ್ಲಿ ಗುಹೆಗಳಲ್ಲಿ ವಾಸಿಸುತ್ತವೆ. * ೨–೩ ಅಡಿ ಉದ್ದ, ೧.೫ ಅಡಿ ಎತ್ತರ * ಜಿಂಕೆ, ಕಾಡುಹಂದಿ, ಕಾಡೆಮ್ಮೆ ಮುಂತಾದವುಗಳನ್ನು ಗುಂಪಿನಲ್ಲಿ ಬೇಟೆಯಾಡಿ ತಿನ್ನುತ್ತವೆ.
೨೫) ಹರ್ಪೆಸ್ಟಿಸ್ ಎಡ್‌ವರ್ಡ್ಸಿ	ಮುಂಗುಸಿ (ಕೀರಿ)	* ಕರ್ನಾಟಕವು ಸೇರಿದಂತೆ ಭಾರತದ ಎಲ್ಲಾ ಕಡೆ ಕಂಡುಬರುತ್ತವೆ. * ಇವು ೩ ಅಡಿ ಉದ್ದವಿದ್ದು, ಗಂಡುಗಳು ಹೆಣ್ಣಿನವುಗಳಿಗಿಂತ ದೊಡ್ಡವು * ಸರ್ವಭಕ್ಷಕಗಳು, ಇದರ ಮೈಬಣ್ಣ ಬೂದು
೨೬ ಹರ್ಪೆಸ್ಟಿಸ್ ವಿಟ್ಟಿಕೋಲಿಸ್	ಪಟ್ಟೆಕತ್ತಿನ ಮುಂಗುಸಿ	* ದೊಡ್ಡದಾದ ಮುಂಗುಸಿ ಮತ್ತು ಕುತ್ತಿಗೆಯ ಎರಡೂ ಬದಿಗಳಲ್ಲಿ ಕಪ್ಪು ಪಟ್ಟಿಗಳು ಕಿವಿಯ ಹಿಂಭಾಗದಿಂದ ಭುಜದವರೆಗೆ ಹರಡಿವೆ.
ಕುಟುಂಬ: ಫೀಲಿಡೀ ೨೭) ಫಿಲೀಸ್ ಕಾಸ್	ಕಾಡುಬೆಕ್ಕು	* ದೊಡ್ಡದಾದ ಮುಂಗುಸಿ ಮತ್ತು ಕುತ್ತಿಗೆಯ ಎರಡೂ ಬದಿಗಳಲ್ಲಿ ಕಪ್ಪು ಪಟ್ಟಿಗಳು ಕಿವಿಯ ಹಿಂಭಾಗದಿಂದ ಭುಜದವರೆಗೆ ಹರಡಿವೆ.
೨೮) ಪ್ಯಾಂಥೆರ ಪಾರ್ಡಸ್	ಭಾರತದ ಸಾಮಾನ್ಯ ಚಿರತೆ	* ಭಾರತದ ಎಲ್ಲಾ ಕಡೆ ಬಯಲು ಪ್ರದೇಶಗಳಲ್ಲಿ ಕಂಡುಬರುತ್ತದೆ. * ಇದು ೧.೫ ಅಡಿಯಿಂದ ೨ ಅಡಿ ಉದ್ದವಿದ್ದು ಮಾಂಸಾಹಾರಿಯಾಗಿದೆ. * ಇದು ನಿಶಾಚರಿ * ಭಾರತದ ಹುಲ್ಲುಗಾವಲು, ಕುರುಚಲು ಅರಣ್ಯ ಮತ್ತು ಬಯಲು ಪ್ರದೇಶ, ಬೆಟ್ಟ ಗುಡ್ಡಗಳಲ್ಲಿ ಕಂಡುಬರುತ್ತವೆ. * ಗಂಡು ಚಿರತೆಯ ಪೂರ್ಣ ಉದ್ದ ೭ ಅಡಿ ಎತ್ತರ ೨.೫ ಅಡಿ * ಇವು ಮಾಂಸಾಹಾರಿಗಳು

೨೯) ಪ್ರಿಯೋನೈಲೂರಸ್ ವಿವೆರಿನಸ್	ಮೀನುಗಾರ ಬೆಕ್ಕು	* ಕರಾವಳಿ ಪ್ರದೇಶದಲ್ಲಿ ವಾಸಿಸುತ್ತದೆ. * ಇದು ಸುಮಾರು ೩ ರಿಂದ ೩.೫ ಅಡಿ ಉದ್ದ * ಮೀನು, ಏಡಿ, ಸಣ್ಣ ಹಕ್ಕಿಗಳು ಮತ್ತು ಮೃದ್ವಂಗಿಗಳು ಇದರ ಆಹಾರ.
೩೦) ಪ್ರಿಯೊನೈಲೂರಸ್ ರುಬಿಜಿನೊಸಸ್	ತುಕ್ಕು ಚುಕ್ಕೆಗಳ ಬೆಕ್ಕು	* ದಕ್ಷಿಣ ಭಾರತದ ಹುಲ್ಲುಗಾವಲು ಮತ್ತು ಒಣಹವೆಯ ಕುರುಚಲು ಕಾಡುಗಳಲ್ಲಿ ಕಂಡುಬರುತ್ತದೆ. * ಇದು ಸುಮಾರು ೧.೫ ಅಡಿ ಉದ್ದವಿದ್ದು ಮಾಂಸಾಹಾರಿಯಾಗಿದೆ. * ಕೆಂಪು-ಬೂದು ಇದರ ಮೈಬಣ್ಣ
೩೧) ಪ್ರಿಯೊನೈಲೂರಸ್ ಬೆಂಗಾಲೆನ್ಸಿಸ್	ಚಿರತೆ ಬೆಕ್ಕು	* ದಕ್ಷಿಣ ಭಾರತದ ಹುಲ್ಲುಗಾವಲು ಮತ್ತು ಒಣಹವೆಯ ಕುರುಚಲು ಕಾಡುಗಳಲ್ಲಿ ಕಂಡುಬರುತ್ತದೆ. * ಇದು ಸುಮಾರು ೧.೫ ಅಡಿ ಉದ್ದವಿದ್ದು ಮಾಂಸಾಹಾರಿಯಾಗಿದೆ. * ಕೆಂಪು-ಬೂದು ಇದರ ಮೈಬಣ್ಣ
೩೨) ಪ್ಯಾಂಥೆರ ಟ್ರೈಗ್ರಿಸ್	ಹುಲಿ	* ಹುಲಿಯು ಫಿಲಿಡೀ ಕುಟುಂಬದಲ್ಲಿಯೇ ಅತ್ಯಂತ ದೊಡ್ಡಗಾತ್ರದ ಪ್ರಾಣಿ * ಏಷ್ಯಾ ಖಂಡಕ್ಕೆ ಮಾತ್ರ ಸೀಮಿತ * ಇದರ ಉದ್ದ ೮-೯ ಅಡಿ ೩-೩.೫ ಅಡಿ ಎತ್ತರ * ಇದು ಮಾಂಸಾಹಾರಿ * ಹುಲಿಯ ಭಾರತದ ರಾಷ್ಟ್ರೀಯ ಪ್ರಾಣಿ
ಕುಟುಂಬ: ಮಸ್ಟೆಲಿಡೀ ೩೩) ಲುಟ್ರ ಲುಟ್ರ	ನೀರುನಾಯಿ	* ದಕ್ಷಿಣ ಭಾರತದ ನದಿಗಳು ಮತ್ತು ಜಲಾಶಯಗಳಲ್ಲಿ ಕಂಡುಬರುತ್ತವೆ. * ಇದು ಜಲವಾಗಿ ಸಸ್ತನಿಗಲಾಗಿದ್ದು, ಮಾಂಸಾಹಾರಿಗಳಾಗಿವೆ. * ಇದು ಸುಮಾರು ೨.೨೫ ಅಡಿ ಉದ್ದ
೩೪) ಮಾರ್ಟಿಸ್ ಗ್ವಾಲ್‌ಕೆನ್ನಿ	ಹಳದಿ ಕಂಠದ ಮುರ್ರನಾಯಿ	* ಬೆಟ್ಟಗುಡ್ಡ, ಕಾಡಿಗೆ ಸೀಮಿತ * ಹೂವೂ, ಹಣ್ಣು ಮತ್ತು ಸಣ್ಣಪುಟ್ಟ ಪ್ರಾಣಿಗಳು ಇದರ ಆಹಾರ.
ಕುಟುಂಬ: ವಿವೆರಿಡೀ ೩೫) ಪ್ಯಾರಡಕ್ಸೂರಸ್ ಹರ್ಮಾಫ್ರೊಡೈಟಸ್	ತಾಳೆಬೆಕು, ಮರಬೆಕ್ಕು,	* ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದ ಬಯಲು ಸೀಮೆಗಳಲ್ಲಿ

		ಮಂಚನಬೆಕ್ಕು ಕಂಡು ಬರುತ್ತದೆ. ಇದು ಮರವಾಸಿ * ೨ ಅಡಿ ಉದ್ದವಿದ್ದು, ಮನೆಯ ಬೆಕ್ಕುಗಳಿಗಿಂತ ದೊಡ್ಡದು. * ಇದು ಸರ್ವಭಕ್ಷಕವಾಗಿದ್ದು ನಿಶಾಚರಿಯಾಗಿದೆ.
ಕುಟುಂಬ: ಹೈಯನಿಡೀ ೩೬) ಹಾಯನ ಹಾಯನ	ಕತ್ತೆಕಿರುಬ	* ಇದು ದಕ್ಷಿಣ ಭಾರತದ ಎಲ್ಲೆಡೆಯೂ ಕಂಡುಬರುತ್ತದೆ. * ಸುಮಾರು ೩-೪ ಅಡಿ ಉದ್ದ * ಇದು ಮಾಂಸಾಹಾರಿಯಾಗಿದ್ದು ಸತ್ತಪ್ರಾಣಿಗಳು ಇದರ ಆಹಾರ.
ಗಣ: ಪ್ರೊಬಾಸಿಡಿಯ ೩೭) ಎಲಿಫಾಸ್ ಮ್ಯಾಕ್ಸಿಮಸ್	ಭಾರತದ ಆನೆ	* ಜೀವಂತ ಭೂಚರ ಪ್ರಾಣಿಗಳಲ್ಲಿಯೇ ಇದು ಅತಿ ದೊಡ್ಡದು * ಸುಮಾರು ೯-೧೦ ಅಡಿ ಎತ್ತರ * ಸಂಪೂರ್ಣ ಸಸ್ಯಹಾರಿಯಾಗಿದ್ದು ಸಂಘ ಜೀವಿಗಳಾಗಿವೆ. * ಆನೆಗಳಲ್ಲಿ ಆಫ್ರಿಕಾದ ಆನೆ ಮತ್ತು ಏಷ್ಯಾದ ಆನೆ ಎಂದು ಎರಡು ಪ್ರಭೇದಗಳಿವೆ.
ಗಣ: ಪೆರಿಸ್ಸೊಡ್ಯಾಕ್ಟೈಲ ಕುಟುಂಬ: ಈಕ್ವಿಡೀ ೩೮) ಈಕ್ವಸ್ ಅಸಿನಸ್ ೩೯) ಈಕ್ವೈಸ್ ಕೆಬಲಸ್	ಕತ್ತೆ ಸಾಕಿದ ಕುದುರೆ	* ಇದು ಮೂಲತಃ ಈಶಾನ್ಯ ಆಫ್ರಿಕಾದ ನಿವಾಸಿ * ಕುದುರೆಗಿಂತ ಚಿಕ್ಕದು ಮತ್ತು ಸಸ್ಯಾಹಾರಿ * ಸರಕು-ಸಾಮಾಗ್ರಿಗಳನ್ನು ಹೊರಲು ಮಾತ್ರ ಬಳಸುತ್ತಾರೆ. ಇದು ಕಷ್ಟ ಸಹಿಷ್ಣು * ಉತ್ತರ ಮಧ್ಯ ಏಷ್ಯಾದಿಂದ ಬಂದುದ್ದು. * ಇದು ಸಸ್ಯಾಹಾರಿ. * ಹಲವು ವಿಧದಲಿ ಮನುಷ್ಯನಿಗೆ ಉಪಯುಕ್ತವಾದ ಪ್ರಾಣಿ.
ಗಣ: ಆರ್ಟಿಯೊಡ್ಯಾಕ್ಟೈಲ ಕುಟುಂಬ: ಟ್ರಾಗುಲಿಡೀ ೪೦) ಟ್ರಾಗುಲಸ್ ಮೆಮಿನ	ಭಾರತದ ಚೆವ ರೋಷಿಯನ್, ಮೌಸ್ ಡೀಯರ್	* ಕರ್ನಾಟಕದ ಕಾಡುಗಳಲ್ಲಿ ಕಂಡುಬರುತ್ತವೆ. * ಇವು ಸುಮಾರು ೪೫ ಸೆಂ.ಮೀ. ಉದ್ದ ೩೦ಸೆಂ.ಮೀ. ಎತ್ತರವಿರುತ್ತವೆ. * ಸಸ್ಯಾಹಾರಿಗಳಾಗಿದ್ದು ಚಿಕ್ಕ ಜಿಂಕೆಗಳೆಂದು ಕರೆಯುತ್ತಾರೆ. * ಇವು ನಾಚಿಕೆ ಮತ್ತು ಸಾಧು ಸ್ವಭಾವದ ಪ್ರಾಣಿ.

ಕುಟುಂಬ: ಬೋವಿಡೀ		
೪೧) ಕ್ಯಾಪ್ರ ಹಿರ್ಕಸ್	ಆಡು (ಮೇಕೆ)	* ಇದು ಭಾರತದ ನಿವಾಸಿಯಲ್ಲ ಮೂಲತಃ ಇದರ ತೌರುಮನೆ ನೈಋತ್ಯ ಏಷ್ಯಾ * ಇದನ್ನು ಪಳಗಿಸಿದ್ದು ಇಂದು ಸಾಕು ಪ್ರಾಣಿಯಾಗಿದೆ.
೪೨) ಓವಿಸ್ ಅರೈಯಿಸ್	ಕಾಡುಕುರಿ	* ಬಹುಪಾಲು ಸಾಕುಕುರಿಗಳು * ಮಂದಬುದ್ಧಿಗೆ ಹೆಸರಾದ ಪ್ರಾಣಿ
೪೩) ಓವಿಸ್ ಅಮ್ಮಾನ್ ೪೪) ಓವಿಸ್ ಕೆನಡೆನ್‌ಸೀವ ೪೫) ಬೇಸೆಲೆಫಸ್	ನೀಲ್ಗಾಯ್ ಅಥವಾ ನೀಲಿಗೂಳಿ ಟ್ರ್ಯಾಗೊಕೆಮಿಲಸ್	* ಇವು ಸಾಮಾನ್ಯವಾಗಿ ಹುಲ್ಲುಗಾವಲು ಕುರುಚಲು ಅರಣ್ಯ ಪ್ರದೇಶದಲ್ಲಿ ಕಂಡುಬರುತ್ತವೆ. * ಇದು ಸಾಮಾನ್ಯವಾಗಿ ೪-೫ ಅಡಿ ಎತ್ತರ ಬೆಳೆಯುತ್ತವೆ. * ಸಸ್ಯಾಹಾರಿ ಮತ್ತು ಸಂಘಜೀವಿ
೪೬) ಆಂಟಿಲೋಪ್ ಸರ್ವಿಕ್ಯಾಪ್ರ	ಕೃಷ್ಣಮೃಗ ಅಥವಾ ಭಾರತದ ಚಿಗರಿ (ಸಾರಂಗ)	* ಭಾರತದ ಎಲ್ಲಾ ಬಯಲು ಪ್ರದೇಶಗಳಲಿ ಕಂಡುಬರುತ್ತದೆ. * ೪-೪.೫ ಅಡಿ ಉದ್ದವಿದ್ದು ಸಸ್ಯಾಹಾರಿ ಯಾಗಿದೆ. * ಚಿಗರೆಯಲ್ಲಿಯೇ ಇದು ಸುಂದರ ಮತ್ತು ಭಾರತದ ಏಕೈಕ ಪ್ರತಿನಿಧಿ. ಹಾಗೆಯೇ ವೇಗವಾಗಿ ಓಡುವ ಪ್ರಾಣಿ
೪೭) ಟಿವ್ರಾಸೀರಸ್ ಕ್ವಾರ್ಡಿಕಾರ್ನಿಸ್	ಚೌಸಿಂಗ ಅಥವಾ ನಾಲ್ಕು ಕೊಂಬಿನ ಚಿಗರಿ	* ವಿಪುಲ ಹುಲ್ಲು ಬೆಳೆದ ಮೈದಾನ, ಎರಿಳಿತದ ಗುಡ್ಡಗಾಡಿನ ಪ್ರದೇಶಗಳು ಇವುಗಳ ವಾಸಸ್ಥಾನ * ಕೆಂಪು ಕಂದು ಇದರ ಮೈಬಣ್ಣ * ಎರಡು ಜೊತೆ ಕೊಂಬುಗಳಿವೆ. * ಹುಲ್ಲು ಮತ್ತು ಚಿಗುರು ಇವುಗಳ ಆಹಾರ
೪೮) ಗಸೆಲ ಗಸೆಲ ಬೆನ್ನಟ್ಟಿ	ಚಿಂಕಾರ ಅಥವಾ ಭಾರತದ ಗಸೆಲ	* ಭಾರತದಲ್ಲಿನ ಎತ್ತರವಿಲ್ಲದ ಗುಡ್ಡ ಮತ್ತು ಮೈದಾನಗಳಲ್ಲಿ ಇದರ ವಾಸ. * ಸಸ್ಯಾಹಾರಿಯಾಗಿದ್ದು ನಾಚಿಕೆ ಸ್ವಾಭವದವು * ಅತ್ಯಂತ ವೇಗವಾಗಿ ಓಡಬಲ್ಲ ಕಾಡುಪ್ರಾಣಿ
೪೯) ಹೆಮಿಟ್ರ್ಯಾಗಸ್ ಹೈಲೊಕ್ರಿಯಸ್	ನೀಲಗಿರಿ ಟಾಹರ್	* ನೀಲಗಿರಿ, ಅಣ್ಣಾಮಲೈ, ಪಶ್ಚಿಮಘಟ್ಟದಲ್ಲಿ ಮರಗಳು ಬೆಳೆದ ತಪ್ಪಲು ಪ್ರದೇಶದ ಇಳಿಜಾರು ವಾಸಿಸುತ್ತವೆ. * ೧ ಮೀಟರ್ ಎತ್ತರ ೧.೧ಮೀ. ಉದ್ದ * ಸಸ್ಯಾಹಾರಿ * ಗಂಡಾಂತರದಲ್ಲಿರುವ ಪ್ರಾಣಿಗಳು
೫೦) ಬುಬಾಲಸ್ ಬುಬಾಲಸ್	ಕಾಡೆಮ್ಮೆ, ಕಾಡುಕೋಣ	* ಭಾರತದ ಪಶ್ಚಿಮ ಘಟ್ಟಗಳ ಕಾಡು ಪ್ರದೇಶದಲ್ಲಿ ವಾಸಿಸುತ್ತವೆ. * ೮-೯ ಅಡಿ ಉದ್ದ, ೬ ಅಡಿ ಎತ್ತರ


೫೧) ಬಾಸ್ ಗೌರಸ್	ಕಾಟಿ (ಕಾಡುಕೋಣ) ಅಥವಾ ಗೌರ್	* ಸಸ್ಯಾಹಾರಿ * ಭಾರತದ ವಾಸಿ. ಕರ್ನಾಟಕದಲ್ಲಿ ಕಾಟಿ ಎಂದು ಕರೆಯುತ್ತಾರೆ. * ೧೦-೧೩ ಅಡಿ ಉದ್ದ ೬.೫ ಅಡಿ ಎತ್ತರದ ದೊಡ್ಡಗಾತ್ರದ ಪ್ರಾಣಿ * ಸಸ್ಯಾಹಾರಿ.
ಕುಟುಂಬ: ಸರ್ವೀಡಿ ೫೨) ಆಕ್ಸಿನ್ ಆಕ್ಸಿಸ್	ಚಿತಾಲ್/ಸಾರಂಗ ಜಿಂಕೆ ಚುಕ್ಕೆ ಜಿಂಕೆ	* ಕಾರ್ನಾಟಕದ ಹುಲ್ಲುಗಾವಲು ಕಾಡುಗಳಲ್ಲಿ ವಾಸ. * ೩-೫ ಅಡಿ ಉದ್ದ ೩ ಅಡಿ ಎತ್ತರ * ಸಸ್ಯಾಹಾರಿ.
೫೩) ಸರ್ವಸ್ ಯೂನಿಕೊಲರ್	ಸಾಂಬಾರ್(ಕಡವೆ)	* ಕಾಡುಬೆಟ್ಟಗುಡ್ಡಗಳಲ್ಲಿ ವಾಸ. * ಭಾರತದ ಜಿಂಕೆಗಳಲ್ಲಿ ಇದು ದೊಡ್ಡದು. * ಸಸ್ಯಾಹಾರಿ ಮತ್ತು ಧೈರ್ಯಶಾಲಿಗಳು * ಇವುಗಳ ಕೊಂಬುಗಳನ್ನು ಮನೆಗಳಲ್ಲಿ ಅಲಂಕಾರಕ್ಕಾಗಿ ಇಡುವುದು ಸಾಮಾನ್ಯ.
೫೪) ಮಂಟಿಯಾಕಸ್ ಮಂಟ್‌ಜ್ಯಾಕೆ	ಬಗಳು ಜಿಂಕೆ ಏಣುಮುಖದ ಜಿಂಕೆ	* ಕಾಡುಬೆಟ್ಟಗುಡ್ಡಗಳಲ್ಲಿ ವಾಸ. * ಭಾರತದ ಜಿಂಕೆಗಳಲ್ಲಿ ಇದು ದೊಡ್ಡದು. * ಸಸ್ಯಾಹಾರಿ ಮತ್ತು ಧೈರ್ಯಶಾಲಿಗಳು * ಇವುಗಳ ಕೊಂಬುಗಳನ್ನು ಮನೆಗಳಲ್ಲಿ ಅಲಂಕಾರಕ್ಕಾಗಿ ಇಡುವುದು ಸಾಮಾನ್ಯ.
ಕುಟುಂಬ: ಸೂಯಿಡೀ ೫೫) ಸಸ್‌ಸ್ಕ್ರಾಫ್ ಕ್ರಿಸ್ಟೇಟಸ್	ಕಾಡುಹಂದಿ	* ಭಾರತದ ಎಲ್ಲೆಡೆಯೂ ಕಂಡುಬರುತ್ತದೆ. * ಸರ್ವಭಕ್ಷಕಗಳಾಗಿದ್ದು ಸಂಘಜೀವಿಗಳಾಗಿವೆ.

(*ಕೃಪೆ :* ಈ ಮೇಲಿನ ಕೋಷ್ಟಕಗಳನ್ನು ಕರ್ನಾಟಕ ರಾಜ್ಯಕೋಶ – ೨, ಪ್ರಾಣಿ–ಪಕ್ಷಿ ಸಂಪುಟ, ಜೀವಜಗತ್ತು ಹಾಗೂ ಜೀವ ವರ್ಗೀಕರಣ ಎಂಬ ಕೃತಿಗಳಿಂದ ಪಡೆಯಲಾಗಿದೆ.)

❑❑❑

ಕರ್ನಾಟಕ ಭೂಪಟ




ಹಂಪಿ ವಿಶ್ವಪರಂಪರಾ ಪ್ರದೇಶದ ಭೂಪಟ
ಗಂಗಾವತಿ ತಾಲ್ಲೂಕು
ಕೊಪ್ಪಳ ಜಿಲ್ಲೆ
ದರ್ಶಕ ಸೂಚಿ
— ಗ್ರಾಮಗಳ ಗಡಿರೇಖೆ
ಗ್ರಾಮಸೂಚಿ
ತುಂಗಾಬದ್ರಾ ನದಿ
...........ಜಿಲ್ಲಾ ಗಡಿರೇಖೆ
N
W
E
S
ಹೊಸಪೇಟೆ ತಾಲ್ಲೂಕು
ಬಳ್ಳಾರಿ ಜಿಲ್ಲೆ
ಹೊಸಪೇಟೆ ತಾಲ್ಲೂಕು
ಬಳ್ಳಾರಿ ಜಿಲ್ಲೆ
1. ಹಂಪಿ
2. ಕೃಷ್ಣಾಪುರ
3. ಕಡ್ಡಿರಾಂಪುರ
4. ಕಮಲಾಪುರ
5. ವೆಂಕಟಾಪುರ
6. ನಿಂಬಾಪುರ
7. ಬುಕ್ಕಸಾಗರ
8. ಮಲಪನಗುಡಿ
9. ಕೊಂಡನಾಯಕನಹಳ್ಳಿ
10. ನಾಗೇನಹಳ್ಳಿ
11. ಗುಡಿ ಓಬಳಾಪುರ
12. ಕಾಲಘಟ್ಟ
13. ಡಾಣಾಪುರ
14. ಸಿಂಗನಾಯಕನಹಳ್ಳಿ
15. ವಿರುಪಾಪುರ ಗಡ್ಡಿ
16. ಆನೆಗುಂದಿ
17. ರಾಮದುರ್ಗ
18. ಸಿಂಗನಗೊಂಡ
19. ಕೃಷ್ಣಾಪುರ
20. ಬಸವನದುರ್ಗ
21. ಮಲ್ಲಾಪುರ
22. ರಾಂಪೂರ
23. ಚಿಕ್ಕ ರಾಂಪುರ
24. ಹನಮನಹಳ್ಳಿ
25. ಅಂಜನಹಳ್ಳಿ
26. ಲಕ್ಷ್ಮೀಪುರ
27. ರಂಗಾಪುರ
28. ಸಣಾಪುರ
29. ತಿರುಮಲಪುರ
ಅಳತೆಗೆ ಅನುಗುಣವಾಗಿಲ್ಲ



ಅಧ್ಯಯನ ವಿಭಾಗ